# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 16-07-2012 ರಂದು ನಡೆದ ಸಭೆಯ ನಡವಳಿಗಳು.**

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಶ್ರೀ.ಎಸ್.ವೆಂಕಟೇಶ್ ಬಾಬು | ಅಧ್ಯಕ್ಷರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಡಾ॥ಎಂ.ಎಸ್.ಶಿವಪ್ರಸಾದ್ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಶ್ರೀ.ಜಿ.ಮಂಜುನಾಥ್ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ) |
| ಶ್ರೀ.ಎಂ.ಇ.ಪಿಳ್ಳಪ್ಪ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಯಲಹಂಕ) |
| ಶ್ರೀಮತಿ.ರೂಪಾದೇವಿ | ಸದಸ್ಯರು | ಅಧೀಕ್ಷಕ ಅಭಿಯಂತರರು (ದಕ್ಷಿಣ) |
| ಶ್ರೀಮತಿ.ಶ್ರೀವಿದ್ಯಾ ಎನ್. | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಪರಿಸರಕೋಶ) |
| ಶ್ರೀಮತಿ.ದೇವಿಕಾ ರಾಣಿ ಶ್ರೀಧರ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಬನಶಂಕರಿ) |
| ಶ್ರೀಮತಿ.ಫೌಜಿಯ ಬೇಗಂ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| ಶ್ರೀ.ಸಿ.ಎಸ್.ರಾಧಾಕೃಷ್ಣ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

## 1. ವಿಷಯದ ಸಂಖ್ಯೆ: ಸಾಆಸ್ಥಾಸ/06/2012-13:

ಸಂಖ್ಯೆ: ಮುಅ/ಪಕೋ/ಪಿಆರ್/ /2011-12, ದಿನಾಂಕ: 17-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರು ಸರ್ವೆ ನಂ.155 ರ ಉತ್ತರ ಭಾಗದಲ್ಲಿ ಪಾಲಿಕೆ ವತಿಯಿಂದ ನಿರ್ವಹಿಸುತ್ತಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ 2007 ರಿಂದ ಪ್ರತಿದಿನ ಸುಮಾರು 700-800 ಮೆ.ಟನ್ ಘನತ್ಯಾಜ್ಯವನ್ನು ಸರಬರಾಜು ಮಾಡಲಾಗುತ್ತಿದ್ದು, ಈ ಪೈಕಿ ಸುಮಾರು 300-350 ಮೆ.ಟನ್ ಘನತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಮೆ॥ ಟೆರ್ರಾಫರ್ಮ ಸಂಸ್ಥೆಗೆ 2009 ರಿಂದ ರವಾನಿಸಲಾಗುತ್ತಿದೆ. ಉಳಿಕೆ ಘನತ್ಯಾಜ್ಯವನ್ನು ಲ್ಯಾಂಡ್‌ಫಿಲ್ ನಿರ್ಮಿಸಿ ವಿಲೇವಾರಿ ಮಾಡಲಾಗುತ್ತಿದೆ.

ತ್ಯಾಜ್ಯ ವಿಲೇವಾರಿಯಿಂದ ಹಾಲಿ ಲ್ಯಾಂಡ್‌ಫಿಲ್‌ಗಳು ಭೂ ಮಟ್ಟದವರೆಗೆ ಮತ್ತು ಭೂ ಮಟ್ಟದಿಂದ ಸುಮಾರು 15ಮೀ ಎತ್ತರದವರೆಗೆ ತುಂಬಿರುತ್ತವೆ. ಈ ಲ್ಯಾಂಡ್‌ಫಿಲ್‌ಗಳ ಸಾಮರ್ಥ್ಯ ಮುಗಿಯುತ್ತಾ ಬಂದಿದ್ದು, ಇನ್ನು ಸುಮಾರು ಒಂದು ತಿಂಗಳು ಮಾತ್ರ ತ್ಯಾಜ್ಯ ವಿಲೇವಾರಿ ಮಾಡಬಹುದಾಗಿರುತ್ತದೆ.

ಹಾಲಿ ಲ್ಯಾಂಡ್‌ಫಿಲ್‌ಗಳು ಭರ್ತಿಯಾಗುತ್ತಿರುವ ಹಿನ್ನಲೆಯಲ್ಲಿ ಈಗಾಗಲೇ ಒಂದು ಹೊಸ ಲ್ಯಾಂಡ್‌ಫಿಲ್‌ನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಸುಮಾರು ಮೂರು ತಿಂಗಳು ಮಾತ್ರ ತ್ಯಾಜ್ಯ ವಿಲೇವಾರಿ ಮಾಡಬಹುದಾಗಿದೆ.

ಮಂಡೂರು ಸರ್ವೆ ನಂ.155 ರ ಉತ್ತರ ಭಾಗದ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಪ್ರತಿದಿನ 1000 ಮೆ.ಟನ್ ತ್ಯಾಜ್ಯ ಸಂಸ್ಕರಿಸಲು ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಸಂಸ್ಥೆಯವರೊಂದಿಗೆ ಪಾಲಿಕೆಯು ಒಪ್ಪಂದ ಮಾಡಿಕೊಂಡು 02 ವರ್ಷ ಕಳೆದರೂ ಸದರಿ ಸಂಸ್ಥೆಯು ಘಟಕವನ್ನು ಪ್ರಾರಂಭಿಸಿರುವುದಿಲ್ಲ.

ಮಂಡೂರು ಸರ್ವೆ ನಂ.155 ರ ದಕ್ಷಿಣ ಭಾಗದ ಮೆ॥ ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ಸಂಸ್ಥೆಯು 1000 ಮೆಟ್ರಿಕ್ ಟನ್ ಘನತ್ಯಾಜ್ಯದಿಂದ 8 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆಗೆ ಪಾಲಿಕೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಸದರಿ ವಿದ್ಯುತ್ ಉತ್ಪಾದನಾ ಘಟಕ ಇನ್ನು ಪೂರ್ಣಗೊಂಡು ಕಾರ್ಯಾರಂಭವಾಗದೇ ಇರುವುದರಿಂದ, ಪ್ರಸ್ತುತ ಪ್ರತಿದಿನ ಸುಮಾರು 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಗೊಬ್ಬರ ತಯಾರಿಸಿ ಉಳಿಕೆ ತ್ಯಾಜ್ಯವನ್ನು ವಿಲೇ ಮಾಡುತ್ತಿರುತ್ತಾರೆ.

ಪ್ರಸುತ ಸುಮಾರು 5 ಎಕರೆ ಪ್ರದೇಶದಲ್ಲಿ ಹಾಲಿ ಇರುವ ಲ್ಯಾಂಡ್‌ಫಿಲ್‌ಗಳಲ್ಲಿ ಪ್ರತಿದಿನ ಅಂದಾಜು 600 ರಿಂದ 700 ಮೆ.ಟನ್ ಘನತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು ಜಾಗದ ಕೊರತೆಯಿಂದ ತ್ಯಾಜ್ಯ ವಿಲೇವಾರಿಯು ಕಷ್ಟಕರವಾಗಿರುತ್ತದೆ.

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮುಂದುವರೆದು ಮಹದೇವಪುರ ವಲಯದ ಘನತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದ್ದ ಚೀಮಸಂದ್ರ ಘನತ್ಯಾಜ್ಯ ವಿಲೇವಾರಿ ಘಟಕವು ಪೂರ್ಣ ತುಂಬಿ ಹೋಗಿರುತ್ತದೆ. ಹಾಗೂ ಸದರಿ ವಿಲೇವಾರಿ ಘಟಕದಲ್ಲಿ ದಿನಾಂಕ: 24-02-2012 ರಂದು ಬೆಂಕಿ ಆಕಸ್ಮಿಕ ಉಂಟಾಗಿ ಸಂಪೂರ್ಣ ಸುಟ್ಟು ಹೋಗಿ ವಾಯುಮಾಲಿನ್ಯ ಉಂಟಾಗಿರುತ್ತದೆ.

ಇದರಿಂದಾಗಿ ಸ್ಥಳೀಯರು ಪ್ರತಿಭಟಿಸಿ ಘನತ್ಯಾಜ್ಯ ಸಾಗಾಣಿಕೆ ವಾಹನ ಚಾಲಕರ ಮೇಲೆ ಹಲ್ಲೆ ನಡೆಸಿ, ವಾಹನಗಳಿಗೆ ಬೆಂಕಿ ಹಚ್ಚಲು ಮುಂದಾಗಿರುತ್ತಾರೆ. ಚೀಮಸಂದ್ರ ಲ್ಯಾಂಡ್‌ಫಿಲ್ ತುಂಬಿರುವ ಹಿನ್ನೆಲೆಯಲ್ಲಿ ಸದರಿ ಘಟಕದಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ರದ್ದುಪಡಿಸಿ ಪತ್ರ ನೀಡಿರುತ್ತಾರೆ.

ಸದರಿ ಚೀಮಸಂದ್ರ ಸಂಸ್ಕರಣಾ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಪ್ರತಿದಿನ ಸಾಗಾಣಿಕೆಯಾಗುತ್ತಿದ್ದ ಸುಮಾರು 400 ಮೆ.ಟನ್ ಘನತ್ಯಾಜ್ಯವನ್ನು ಮಂಡೂರು ಉತ್ತರಭಾಗದ ಘಟಕದಲ್ಲಿ ಸ್ವೀಕರಿಸಿ ವಿಲೇವಾರಿ ಮಾಡಲು ಜಂಟಿ ಆಯುಕ್ತರು, ಮಹದೇವಪುರ ರವರು ಕೋರಿರುತ್ತಾರೆ.

ಮಂಡೂರು ಉತ್ತರಭಾಗದ ಘನತ್ಯಾಜ್ಯ ವಿಲೇವಾರಿ ಘಟಕದ ಲ್ಯಾಂಡ್‌ಫಿಲ್‌ಗಳು ಈಗಾಗಲೇ ತುಂಬಿದ್ದು ಹಾಲಿ ಪ್ರತಿದಿನ ಸರಬರಾಜು ಆಗುತ್ತಿರುವ ಸುಮಾರು 1000 ಮೆ.ಟನ್ ಘನತ್ಯಾಜ್ಯವನ್ನು ವಿಲೇವಾರಿ ಮಾಡುವುದು ಕಷ್ಟಕರವಾಗಿದ್ದು, ಹೆಚ್ಚಿನ ಘನತ್ಯಾಜ್ಯ ವಿಲೇವಾರಿಗೆ ಹೊಸ ಲ್ಯಾಂಡ್‌ಫಿಲ್ ನಿರ್ಮಿಸುವುದು ಅವಶ್ಯಕವಾಗಿರುತ್ತದೆ.

ಆದುದರಿಂದ ಸದರಿ ಉದ್ದೇಶಿತ ನೂತನ ಲ್ಯಾಂಡ್‌ಫಿಲ್‌ಅನ್ನು ನಿರ್ಮಿಸಲು ಸೂಕ್ತ ಅನುವುಗಳೊಂದಿಗೆ ಲೋಕೋಪಯೋಗಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆ, ಬೆಂಗಳೂರು ವೃತ್ತದ 2011-12ನೇ ಸಾಲಿನ ದರಪಟ್ಟಿಯನ್ನು ಆಧರಿಸಿ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.198.00 ಲಕ್ಷಗಳಾಗಿರುತ್ತದೆ.

ಮುಂದುವರೆದು ಮಂಡೂರು ಉತ್ತರಭಾಗದಲ್ಲಿ ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆಗೆ ದಿನಾಂಕ: 31-08-2009 ರಂದು ಪಾಲಿಕೆ ವತಿಯಿಂದ ಕರಾರು ಮಾಡಿಕೊಳ್ಳಲಾಗಿದ್ದು, 25 ಎಕರೆ ಪ್ರದೇಶವನ್ನು 30 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ಸದರಿ ಸಂಸ್ಥೆಗೆ ನೀಡಬೇಕಾಗಿರುತ್ತದೆ.

ಅದರಂತೆ ಸದರಿ ಸಂಸ್ಥೆಗಾಗಿ 25 ಎಕರೆ ಪ್ರದೇಶವನ್ನು ಮೀಸಲಿರಿಸಲಾಗಿರುತ್ತದೆ ಆದರೆ **ಕರಾರಿನ ಅವಧಿ ಪೂರ್ಣಗೊಂಡಿದ್ದರೂ, ಸದರಿ ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಘಟಕ ಸ್ಥಾಪನೆಗೆ ಯಾವುದೇ ಕ್ರಮಕೈಗೊಳ್ಳದೇ ಪತ್ರವ್ಯವಹಾರದಲ್ಲೇ ಕಾಲಹರಣ ಮಾಡುತ್ತಿರುತ್ತಾರೆ.** ಸದರಿ ಸಂಸ್ಥೆಯ ಕರಾರನ್ನು ರದ್ದುಗೊಳಿಸಲು ಈಗಾಗಲೇ ನೋಟೀಸ್ ನೀಡಲಾಗಿದೆ. ಆದುದರಿಂದ ಉದ್ದೇಶಿತ ನೂತನ ಲ್ಯಾಂಡ್‌ಫಿಲ್‌ಅನ್ನು ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ನಿಗದಿಪಡಿಸಿರುವ 25 ಎಕರೆ ಪೈಕಿ **5 ಎಕರೆ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ**.

ಆದುದರಿಂದ ಮೇಲಿನ ಕಾಮಗಾರಿಯ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಿದೆ.

1. ಸದರಿ ಕಾಮಗಾರಿಗೆ ಅವಶ್ಯವಿರುವ ರೂ.198.00 ಲಕ್ಷಗಳ ಅನುದಾನವನ್ನು ಪಿ0968, Maintenance of landfill/Waste dumping yards ಅಡಿಯಲ್ಲಿ ಒದಗಿಸಿ ಅನುಮೋದನೆ ನೀಡಲು.
2. ತುರ್ತಿನ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ಕೋರಿ

ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 17-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ಮಂಡೂರು ಉತ್ತರಭಾಗದ ಘನತ್ಯಾಜ್ಯ ವಿಲೇವಾರಿ ಘಟಕದ ಲ್ಯಾಂಡ್‌ಫಿಲ್‌ಗಳು ಈಗಾಗಲೇ ತುಂಬಿದ್ದು ಹಾಲಿ ಪ್ರತಿದಿನ ಸರಬರಾಜು ಆಗುತ್ತಿರುವ ಸುಮಾರು 1000 ಮೆ.ಟನ್ ಘನತ್ಯಾಜ್ಯವನ್ನು ವಿಲೇವಾರಿ ಮಾಡುವುದು ಕಷ್ಟಕರವಾಗಿದ್ದು, ಹೆಚ್ಚಿನ ಘನತ್ಯಾಜ್ಯ ವಿಲೇವಾರಿಗೆ ಹೊಸ ಲ್ಯಾಂಡ್‌ಫಿಲ್ ನಿರ್ಮಿಸುವುದು ಅವಶ್ಯಕವಾಗಿದ್ದು, 5 ಎಕರೆ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ.

ಆದುದರಿಂದ, ಸದರಿ ಉದ್ದೇಶಿತ ನೂತನ ಲ್ಯಾಂಡ್‌ಫಿಲ್‌ಅನ್ನು ನಿರ್ಮಿಸಲು ಲೋಕೋಪಯೋಗಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆ, ಬೆಂಗಳೂರು ವೃತ್ತದ 2011-12ನೇ ಸಾಲಿನ ದರಪಟ್ಟಿಯಂತೆ ಸದರಿ ಕಾಮಗಾರಿಗೆ ಅಂದಾಜು ಮೊತ್ತ ರೂ.198.00 ಲಕ್ಷಗಳನ್ನು ಆಧರಿಸಿ ತಯಾರಿಸಲಾಗಿದ್ದು, ಪಿ0968, Maintenance of Landfill/Waste dumping Yards ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ನೀಡುವ ಸಂಬಂಧ ಟಿಪ್ಪಣಿಯನ್ನು ಸಮಿತಿಗೆ ಸಲ್ಲಿಸಲಾಗಿತ್ತು. ಈ

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಧ್ಯೆ ದಿನಾಂಕ: 06-07-2012 ರಂದು ಮಾನ್ಯ ಆಯುಕ್ತರು ಸದರಿ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗದಿ ಪಡಿಸಿ ಕಾಮಗಾರಿ ಪ್ರಾರಂಭಿಸಲು ಕನಿಷ್ಠ 03 ತಿಂಗಳ ಕಾಲಾವಧಿ ಬೇಕಾಗಿರುತ್ತದೆ. ಈಗಾಗಲೇ ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಗಿತಗೊಳಿಸಿ ಸ್ಥಳಾಂತರಿಸುವಂತೆ ಸ್ಥಳೀಯರು ದಿನಾಂಕ: 26-06-2012 ರಿಂದ ಪ್ರತಿಭಟನೆ ವ್ಯಕ್ತಪಡಿಸಿದ್ದು, ಪ್ರತಿ ದಿನ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ವಿಲೇವಾರಿ ಮಾಡುವುದು ದೊಡ್ಡ ಸಮಸ್ಯೆಯಾಗಿರುತ್ತದೆ.

ಬೊಮ್ಮನಹಳ್ಳಿ ವಲಯದ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದ್ದ ಅಂಜನಾಪುರ ಕಲ್ಲುಗಣಿ ಸಹ ತುಂಬಿದ್ದು, ಈ ತ್ಯಾಜ್ಯವನ್ನು ರಾಜರಾಜೇಶ್ವರಿನಗರ ವಲಯದ ಸುಬ್ಬರಾಯನಪಾಳ್ಯ ಘಟಕದಲ್ಲಿ ವಿಲೇವಾರಿ ಮಾಡಲಾಗುತ್ತಿದ್ದು, ಈ ಘಟಕವು ಸಹ ಬಹುತೇಕ ತುಂಬಿದ್ದು ಒತ್ತಡ ಹೆಚ್ಚಾಗಿರುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ ಮಂಡೂರು ಉತ್ತರ ಭಾಗದ ಪಾಲಿಕೆಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಲ್ಯಾಂಡ್‌ಫಿಲ್ ಅನ್ನು ತುರ್ತಾಗಿ ನಿರ್ಮಿಸುವ ಅನಿವಾರ್ಯತೆ ಉಂಟಾಗಿರುತ್ತದೆ. ಆದುದರಿಂದ, ಮಂಡೂರು ಉತ್ತರ ಭಾಗದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಲ್ಯಾಂಡ್‌ಫಿಲ್ ಅನ್ನು ಟೆಂಡರ್‌ಗೆ ಬದಲು ನೇರವಾಗಿ ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕೊಡಲು ಅನುಮೋದನೆ ನೀಡುವ ಸಂಬಂಧ ಮುಖ್ಯ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರ ಶಿಫಾರಸ್ಸಿನ ವರದಿಯನ್ನು ಆಧಾರಸಿ ಮಾನ್ಯ ಆಯುಕ್ತರು ದಿನಾಂಕ: 06-07-2012 ರಂದು ಸಲ್ಲಿಸಿರುವ ಪ್ರಸ್ತಾವನೆಗೆ ಅನುಮತಿ ನೀಡಲು ಸಮಿತಿಯು ತೀರ್ಮಾನಿಸಿತು.

## 2. ವಿಷಯದ ಸಂಖ್ಯೆ: ಸಾಆಸ್ಥಾಸ/07/2012-13:

ಸಂಖ್ಯೆ ಆ/ಪಿಎಸಾರ್/ /2012-13, ದಿನಾಂಕ: 18-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು MSW 2000 rules ದಂತೆ ರೀತಿಯಲ್ಲಿ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಮಾನವ ಹಕ್ಕು ಆಯೋಗವು ಇಂಥಹ ಯೋಜನೆಗಳ ಅನುಷ್ಠಾನದ ಬಗ್ಗೆ ನಿರಂತರವಾಗಿ (ಉಸ್ತುವಾರಿ) ಮಾನಿಟರಿಂಗ್ ಮಾಡುತ್ತಿದೆ.

ಹಾಗೂ ಈ ಬಗ್ಗೆ ಕಾಲಕಾಲಕ್ಕೆ ಸದರಿ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಾಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಆಧುನಿಕ ತಂತ್ರಜ್ಞಾನಗಳನ್ನು ಪೌರ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಲು ಅಳವಡಿಸಿಕೊಳ್ಳಲಾಗಿದೆ. ಈ ಪೈಕಿ ಹಸಿ ತ್ಯಾಜ್ಯದಿಂದ ಬಾಬಾ ಆಟಾಮಿಕ್ ರಿಸರ್ಚ್ ಸೆಂಟರ್ ರವರ ತಂತ್ರಜ್ಞಾನ ಬಳಸಿಕೊಂಡು ಜೈವಿಕ ಅನಿಲ ಉತ್ಪಾದಿಸುವ ಘಟಕವು ಒಂದಾಗಿರುತ್ತದೆ.

ಸದರಿ ಘಟಕವನ್ನು ಮೊದಲನೆ ಹಂತವಾಗಿ ಪಾಲಿಕೆ ವ್ಯಾಪ್ತಿಯ ವಿವಿಧ 16 ವಾರ್ಡ್‌ಗಳಲ್ಲಿ ಸ್ಥಾಪಿಸಲು ಉದ್ದೇಶಿಸಿ, ಘನ ಸರ್ಕಾರದ ಅನುಮೋದನೆ ಪಡೆದು, ಬಾಬಾ ಆಟಾಮಿಕ್ ರಿಸರ್ಚ್ ಸೆಂಟರ್‌ರವರಿಂದ ಅನುಮೋದಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಯಿತು.

ಪಾಲಿಕೆ ವ್ಯಾಪ್ತಿಯ ವಿವಿಧ 16 ವಾರ್ಡ್‌ಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಜೈವಿಕ ಅನಿಲ ಉತ್ಪಾದಿಸುವ ಘಟಕದ ಸ್ಥಳದ ವಿವರ ಈ ಕೆಳಕಂಡಂತಿದೆ

| | |
|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ |
| 2 | ವಾರ್ಡ್ ನಂ.139, ಚಾಮರಾಜಪೇಟೆ, ಎಸ್.ಕೆ.ಆರ್. ಮಾರ್ಕೆಟ್ |
| 3 | ವಾರ್ಡ್ ನಂ.67, ನಾಗಪುರ, ನಾಗಪುರ |
| 4 | ವಾರ್ಡ್ ನಂ.94, ಗಾಂಧಿನಗರ, ಗಾಂಧಿನಗರ |
| 5 | ವಾರ್ಡ್ ನಂ.72, ಆರ್.ಆರ್.ನಗರ, ಬಿಳೆಕಲ್ಲು |
| 6 | ವಾರ್ಡ್ ನಂ.168, 3ನೇ ಬ್ಲಾಕ್, 4ನೇ ಮೇನ್, ಪಟ್ಟಾಭಿರಾಮನಗರ, ಜಯನಗರ |
| 7 | ವಾರ್ಡ್ ನಂ175, ನ್ಯಾನಪ್ಪನ ಬಂಡೆ, ದೇವರಚಿಕ್ಕನಹಳ್ಳಿ (ಬೊಮ್ಮನಹಳ್ಳಿ) |
| 8 | ವಾರ್ಡ್ 4ನೇ ಮುಖ್ಯ ರಸ್ತೆ, ಜಯನಗರ ಬುಲ್ಲೇವಾರ್ಡ್ |
| 9 | ವಾರ್ಡ್ ನಂ.151, 3ನೇ ಬ್ಲಾಕ್, ಕೋರಮಂಗಲ |
| 10 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು |
| 11 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | |
|---|---|
| 12 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್.ರಸ್ತೆ |
| 13 | ವಾರ್ಡ್ ನಂ.82, ಗರುಡಚಾರ್ ಪಾಳ್ಯ, ಕಾವೇರಿ ನಗರ |
| 14 | ವಾರ್ಡ್ ನಂ.55, ಕೆ.ಆರ್.ಪುರಂ ಮಾರ್ಕೆಟ್, ದೇವಸಂದ್ರ |
| 15 | ವಾರ್ಡ್ ನಂ.01, ಕೆಂಪೇಗೌಡ, ಕೆಂಚೆನಹಳ್ಳಿ |
| 16 | ವಾರ್ಡ್ ನಂ.11, ಕುವೆಂಪುನಗರ |

ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಮೊತ್ತವನ್ನು 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಭರಿಸಲಾಗಿದೆ.

## ಆಹ್ವಾನಿಸಲಾದ ಟೆಂಡರ್ ವಿವರ ಕೆಳಕಂಡಂತಿರುತ್ತದೆ

**ಮೊದಲನೇ ಟೆಂಡರ್ ಕರೆಯ ವಿವರ:**

ದಿನಾಂಕ: 08-04-2011 ರಂದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಾಲ್ ಮೂಲಕ ಟೆಂಡರ್ ಆಹ್ವಾನಿಸಲಾಯಿತು. ವಿಪ್ರೋ ಸಂಸ್ಥೆರವರು ಆಹ್ವಾನಿಸಲಾದ 16 ಟೆಂಡರ್‌ಗಳ ಪೈಕಿ 09 ಜಾಗಗಳಿಗೆ ಮಾತ್ರ ಬಿಡ್ ಸಲ್ಲಿಸಿದ್ದರು ಉಳಿದ 07 ಜಾಗಗಳಿಗೆ ಯಾವುದೇ ಬಿಡ್ ಸ್ವೀಕರಣೆಯಾಗಿರುವುದಿಲ್ಲ.

ಸದರಿ ಟೆಂಡರ್‌ಗೆ ಸರಿಯಾದ response ಇಲ್ಲದೇ ಇರುವುದನ್ನು ಗಮನಿಸಿ ಮರು ಟೆಂಡರ್ ಆಹ್ವಾನಿಸಲು ತೀರ್ಮಾನಿಸಲಾಯಿತು.

**ಎರಡನೇ ಟೆಂಡರ್ ಕರೆಯ ವಿವರ:**

ದಿನಾಂಕ: 28-04-2011 ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮರುಟೆಂಡರ್ ಆಹ್ವಾನಿಸಲಾಯಿತು. ಸದರಿ ಟೆಂಡರ್‌ನಲ್ಲಿ ಮೆ॥ಅಶೋಕ ಬಯೋಗ್ರೀನ್ ಪ್ರೈ. ಲಿ. ಎಂಬ ಸಂಸ್ಥೆರವರು ಮಾತ್ರ 16 ಜಾಗಗಳಿಗೆ ಏಕ ಮಾತ್ರ ಬಿಡ್ ಸಲ್ಲಿಕೆಯಾಗಿತ್ತು.

ಆದರೆ ಶ್ರೀ.ರಾಘವೇಂದ್ರ ಎಂಬುವರು ಉಚ್ಚ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಬಾಬಾ ಅಟಾಮಿಕ್ ರಿಸರ್ಚ್ ಸೆಂಟರ್ ತಂತ್ರಜ್ಞಾನಕ್ಕೆ ಮಾತ್ರ ಅವಕಾಶ ನೀಡಿರುವುದನ್ನು ಪ್ರಶ್ನಿಸಿದ್ದರು, ಈ ಬಗ್ಗೆ ಉಚ್ಚ ನ್ಯಾಯಾಲಯವು ಟೆಂಡರ್ ಪ್ರಕ್ರಿಯೆಗೆ 03 ತಿಂಗಳ ತಡೆಯಾಜ್ಞೆ ನೀಡಿತ್ತು, ಕಾರಣ ಸದರಿ ಟೆಂಡರ್‌ನ್ನು ರದ್ದುಗೊಳಿಸಿ, ಜೈವಿಕ ಅನಿಲ ಉತ್ಪಾದಿಸುವ ಘಟಕ ಅಳವಡಿಸಲು ಇತರೆ ತಂತ್ರಜ್ಞಾನಕ್ಕೂ ಅವಕಾಶ ನೀಡುವುದಾಗಿ ಉಚ್ಚ ನ್ಯಾಯಾಲಯಕ್ಕೆ ಪ್ರಮಾಣವನ್ನು ಸಲ್ಲಿಸಿದ್ದರ ಮೇರೆಗೆ ನ್ಯಾಯಾಲಯವು ತಡೆಯಾಜ್ಞೆಯನ್ನು ತೆರವುಗೊಳಿಸಿತು.

**ಮೂರನೇ ಟೆಂಡರ್ ಕರೆಯ ವಿವರ:** (ಹಾಲಿ ಆಹ್ವಾನಿಸಲಾಗಿರುವ ಟೆಂಡರ್)

ತದನಂತರ ದಿನಾಂಕ: 28-10-2011 ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ 3ನೇ ಬಾರಿಗೆ ಮರುಟೆಂಡರ್ ಆಹ್ವಾನಿಸಲಾಯಿತು.

ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ ಬಿಡ್ಡುದಾರರ ವಿವರ ಈ ಕೆಳಕಂಡಂತಿದೆ.

1. M/s.Mailhem Engineers Pvt. Ltd.,
2. M/s.Ashoka Biogreen Pvt. Ltd.,
3. M/s.UEM India Ltd.,

ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್ಡುದಾರರ ಪೈಕಿ M/s.Ashoka Biogreen Pvt. Ltd., ರವರು ಟೆಂಡರ್ ಆಹ್ವಾನಿಸಲಾದ 16 ವಾರ್ಡ್‌ಗಳಿಗೂ ಬಯೋ-ಮಿಥನೈಷನ್ ಘಟಕ ಅಳವಡಿಸಲು ಬಿಡ್‌ನ್ನು ಸಲ್ಲಿಸಿರುತ್ತಾರೆ.

M/s.UEM India Ltd., ಸಂಸ್ಥೆರವರು ಈ ಕೆಳಕಂಡ 05 ವಾರ್ಡ್‌ಗಳಲ್ಲಿ ಮಾತ್ರ ಬಯೋ-ಮಿಥನೈಷನ್ ಘಟಕ ಅಳವಡಿಸಲು ಬಿಡ್‌ನ್ನು ಸಲ್ಲಿಸಿರುತ್ತಾರೆ.

ವಿವರ ಈ ಕೆಳಕಂಡಂತಿದೆ:

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | |
|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ |
| 2 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು |
| 3 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ |
| 4 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್. ರಸ್ತೆ |
| 5 | ವಾರ್ಡ್ ನಂ.82, ಗರುಡಚಾರ್ ಪಾಳ್ಯ, ಕಾವೇರಿ ನಗರ |

M/s.Mailhem Engineers Pvt. Ltd., ಸಂಸ್ಥೆರವರು ಈ ಕೆಳಕಂಡ 04 ವಾರ್ಡ್‌ಗಳಲ್ಲಿ ಮಾತ್ರ ಬಯೋ-ಮಿಥನೈಷನ್ ಘಟಕ ಅಳವಡಿಸಲು ಬಿಡ್‌ನ್ನು ಸಲ್ಲಿಸಿರುತ್ತಾರೆ.

ವಿವರ ಈ ಕೆಳಕಂಡಂತಿದೆ:

| | |
|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ |
| 2 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು |
| 3 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ |
| 4 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್. ರಸ್ತೆ |

ಮುಂದುವರೆದು ಉದ್ದೇಶಿತ ಜೈವಿಕ ಅನಿಲ ಘಟಕಗಳ ಸ್ಥಾಪನೆಗಾಗಿ ಕರೆದಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಬಿಡ್ಡುದಾರರ ಅರ್ಹತೆ, ಡಿ.ಪಿ.ಆರ್. ನ ಪರಿಶೀಲನೆ, ಘಟಕದ Techonology ಅಧ್ಯಯನ, ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸ್ಥಳ ಪರಿಶೀಲನೆ ಮುಂತಾದವುಗಳ ಸಮಗ್ರ ಅಧ್ಯಯನ ಮಾಡಲು ಮತ್ತು ಘಟಕಗಳ ಕಾರ್ಯಕ್ಷಮತೆ ಮತ್ತು ಒಪ್ಪುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಕೆಳಗಿನಂತೆ ತಾಂತ್ರಿಕ ಸಮಿತಿ (Technical Committee) ರಚಿಸಲಾಗಿತ್ತು.

| | | |
|---|---|---|
| 1. | ಮುಖ್ಯ ಅಭಿಯಂತರರು, ಪರಿಸರಕೋಶ | ಅಧ್ಯಕ್ಷರು |
| 2. | ಡಾ॥ಎಸ್.ಪಿ.ಕಾಳೆ, ಕೋಚೆರ್‌ಮನ್ ಬಾರ್ಕ್ | ಸದಸ್ಯರು |
| 3. | ಡಾ॥ ಚಾಣಕ್ಯ, ಪ್ರೊಫೆಸರ್, ಇಂಡಿಯನ್ ಇನ್ಸಟ್ಯೂಟ್ ಆಫ್ ಸೈನ್ಸ್, ಬೆಂಗಳೂರು | ಸದಸ್ಯರು |
| 4. | ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ | ಸದಸ್ಯರು |
| 5. | ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಸದಸ್ಯರು |
| 6. | ಕಾರ್ಯಪಾಲಕ ಅಭಿಯಂತರರು-2, ಘನತ್ಯಾಜ್ಯ ನಿರ್ವಹಣೆ | ಸದಸ್ಯರು |

ಸದರಿ ಸಮಿತಿಯು ದಿನಾಂಕ: 16-01-2012 ಮತ್ತು ದಿನಾಂಕ: 21-02-2012 ರಂದು ಸಭೆ ಸೇರಿ ಈ ಕೆಳಗಿನಂತೆ ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ.

ಬಿಡ್ಡುದಾರರಾದ M/s.Ashoka Biogreen Pvt. Ltd., ಮತ್ತು M/s.Mailhem Engineers Pvt. Ltd., ರವರು ಬಹುತೇಕ ತಾಂತ್ರಿಕ ವಿವರಗಳನ್ನು ಸಲ್ಲಿಸಿದ್ದು, ಹಾಗೂ M/s.Ashoka Biogreen Pvt. Ltd., ಮತ್ತು M/s.Mailhem Engineers Pvt. Ltd., ಸಂಸ್ಥೆರವರು ಶ್ರೀ.ಚಾಣಕ್ಯ ಪ್ರೊಫೆಸರ್, ಇಂಡಿಯನ್ ಇನ್ಸಟ್ಯೂಟ್ ಆಫ್ ಸೈನ್ಸ್, ಬೆಂಗಳೂರು, ರವರು ಕೋರುವ ತಾಂತ್ರಿಕ ವಿವರಗಳನ್ನು ಪೂರೈಸುವ ಷರತ್ತಿಗೆ ಒಳಪಡಿಸಿ ಸದರಿ ಸಂಸ್ಥೆಗಳ ತಾಂತ್ರಿಕ ಬಿಡ್‌ನ್ನು ಅರ್ಹಗೊಳಿಸಿ, ಆರ್ಥಿಕ್ ಬಿಡ್ ತೆರೆಯಲು ಹಾಗೂ M/s.UEM India Ltd., ರವರು ಸಲ್ಲಿಸಿರುವ ತಾಂತ್ರಿಕ ವಿವರಗಳನ್ನು ಪರಿಶೀಲಿಸಲಾಗಿ ಸದರಿ ಸಂಸ್ಥೆರವರು ಜೈವಿಕ ಅನಿಲ ಉತ್ಪಾದಿಸುವ ಘಟಕ ನಿರ್ಮಿಸುವಲ್ಲಿ ಪರಿಣಿತಿ ಹೊಂದಿಲ್ಲದ ಕಾರಣ M/s.UEM India Ltd., ಸಂಸ್ಥೆಯನ್ನು ತಾಂತ್ರಿಕ ಬಿಡ್‌ನಲ್ಲಿ ಅನರ್ಹಗೊಳಿಸಲು ತಾಂತ್ರಿಕ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು ದಿನಾಂಕ: 07-03-2012 ರಂದು ಈ ಕೆಳಕಂಡ ಬಿಡ್ಡುದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಯಿತು.

1. M/s.Ashoka Biogreen Pvt. Ltd.,
2. M/s.Mailhem Engineers Pvt. Ltd.,

1. ಬಿಡ್ಡುದಾರರಾದ ಮೆ॥ ಅಶೋಕ ಬಯೋಗ್ರಿನ್ ಪ್ರೈವೇಟ್ ಲಿಮಿಟೆಡ್ ರವರು ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು (ಪ್ರತಿ ಘಟಕಕ್ಕೆ) ರೂ.85.30 ಲಕ್ಷ ಘಟಕ ನಿರ್ಮಾಣ ಮಾಡಲು + ರೂ.25.48 ಲಕ್ಷ 03 ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ = ಒಟ್ಟು ರೂ.110.78 ಲಕ್ಷ ನಮೂದಿಸಿರುತ್ತಾರೆ.

S. Vardhan Bl

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

2. ಬಿಡ್ಡುದಾರರಾದ M/s.Mailhem Engineers Pvt. Ltd., ರವರು ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು (ಪ್ರತಿ ಘಟಕಕ್ಕೆ) ರೂ.90.00 + ರೂ.27.00 ಲಕ್ಷ ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ = ಒಟ್ಟು ರೂ.117.00 ಲಕ್ಷ ನಮೂದಿಸಿರುತ್ತಾರೆ.

ಸದರಿ ಬಿಡ್ಡುದಾರರನ್ನು ದರ ಸಂಧಾನಕ್ಕಾಗಿ ದಿನಾಂಕ: 13-03-2012 ರಂದು ಆಹ್ವಾನಿಸಲಾಯಿತು.

ದಿನಾಂಕ: 15-03-2012 ರಂದು ಬಿಡ್ಡುದಾರರಾದ ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ಜೈವಿಕ ಅನಿಲ ಉತ್ಪಾದಿಸುವ ನಂತರ ದೊರೆಯುವ Slurry ಅನ್ನು ಸದರಿ ಸಂಸ್ಥೆರವರಿಗೆ ನೀಡಿದ ಪಕ್ಷದಲ್ಲಿ ಜೈವಿಕ ಅನಿಲ ಘಟಕ ಅಳವಡಿಸಲು ವೆಚ್ಚವಾಗುವ ಮೂಲ ಬಂಡವಾಳದಲ್ಲಿ ಶೇ.10 ರಷ್ಟು ರಿಯಾಯಿತಿ ನೀಡುವುದಾಗಿ ತಿಳಿಸಿರುತ್ತಾರೆ. ಅದರಂತೆ ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ರವರು ನಮೂದಿಸಿರುವ ಟೆಂಡರ್ ದರದಲ್ಲಿ ಶೇ.10 ರಷ್ಟು ರಿಯಾಯಿತಿಯನ್ನು ಕಡಿತಗೊಳಿಸಿದ ನಂತರ ಈ ಕೆಳಗಿನಂತೆ ಟೆಂಡರ್ ದರವಿರುತ್ತದೆ.

| | |
|---|---|
| ಘಟಕ ಸ್ಥಾಪಿಸಲು ನಮೂದಿಸಿರುವ ಮೂಲ ಬಂಡವಾಳ ಮೊತ್ತ | ರೂ.85.30 ಲಕ್ಷ |
| ಶೇ.10 ರಷ್ಟು ರಿಯಾಯಿತಿ (-) | ರೂ.8.53 ಲಕ್ಷ |
| ಒಟ್ಟು | ರೂ.76.77 ಲಕ್ಷ |
| ಮೂರು ವರ್ಷದ ವಾರ್ಷಿಕ ನಿರ್ವಹಣೆಗಾಗಿ ನಮೂದಿಸಿರುವ ಮೊತ್ತ | ರೂ.25.48 ಲಕ್ಷ |
| ಒಟ್ಟು ಮೊತ್ತ | ರೂ.102.25 ಲಕ್ಷ |

ಸದರಿ ಸಂಸ್ಥೆರವರು ಜೈವಿಕ ಅನಿಲ ಉತ್ಪಾದಿಸುವ ಘಟಕದಲ್ಲಿ ತ್ಯಾಜ್ಯವನ್ನು ಅನಿಲ ಉತ್ಪಾದನಾ ಸ್ಥಾವರದಲ್ಲಿ ವಿಲೇವಾರಿ ಮಾನವ ಸಹಾಯಕ ಬದಲಾಗಿ ಯಂತ್ರ ಅಳವಡಿಸಲು (ಯಾವುದೇ ಹೆಚ್ಚುವರಿ ಶುಲ್ಕವಿಲ್ಲದೆ) ಒಪ್ಪಿರುತ್ತಾರೆ.

M/s.Mailhem Engineers Pvt. Ltd., ರವರು ದರ ಸಂಧಾನದ ನಂತರ ಜೈವಿಕ ಅನಿಲ ಉತ್ಪಾದಿಸುವ ಘಟಕಕ್ಕೆ ರೂ.79.00 ಲಕ್ಷಗಳನ್ನು ಹಾಗೂ ಮೂರು ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ ರೂ.23.24 ಲಕ್ಷಗಳನ್ನು ನಮೂದಿಸಿದ್ದು, ದರ ಸಂಧಾನದ ನಂತರ ಒಟ್ಟು ದರವು ಈ ಕೆಳಕಂಡಂತಿರುತ್ತದೆ.

| | |
|---|---|
| ಘಟಕ ಸ್ಥಾಪಿಸಲು ನಮೂದಿಸಿರುವ ಮೂಲ ಬಂಡವಾಳ ಮೊತ್ತ | ರೂ.79.00 ಲಕ್ಷ |
| ಮೂರು ವರ್ಷದ ವಾರ್ಷಿಕ ನಿರ್ವಹಣೆಗಾಗಿ ನಮೂದಿಸಿರುವ ಮೊತ್ತ | ರೂ.23.24 ಲಕ್ಷ |
| ಒಟ್ಟು ಮೊತ್ತ | ರೂ.102.24 ಲಕ್ಷ |

ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ರವರು ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವ ದರದಂತೆ ಈ ಕೆಳಕಂಡ ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ ವೆಚ್ಚವಾಗುವ ಮೊತ್ತವು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಾರ್ಡ್ ಮತ್ತು ಸ್ಥಳದ ಹೆಸರು | ನಮೂದಿಸಿರುವ ಮೊತ್ತ |
|---|---|---|
| 1 | ವಾರ್ಡ್ ನಂ.139, ಚಾಮರಾಜಪೇಟೆ, ಎಸ್.ಕೆ.ಆರ್. ಮಾರ್ಕೆಟ್ | ರೂ.102.25 ಲಕ್ಷ |
| 2 | ವಾರ್ಡ್ ನಂ.67, ನಾಗಪುರ, ನಾಗಪುರ | ರೂ.102.25 ಲಕ್ಷ |
| 3 | ವಾರ್ಡ್ ನಂ.72, ಆರ್.ಆರ್.ನಗರ, ಬಿಳೆಕಲ್ಲು | ರೂ.102.25 ಲಕ್ಷ |
| 4 | ವಾರ್ಡ್ ನಂ.168, 3ನೇ ಬ್ಲಾಕ್, 4ನೇ ಮೇನ್, ಪಟ್ಟಾಭಿರಾಮನಗರ, ಜಯನಗರ | ರೂ.102.25 ಲಕ್ಷ |
| 5 | ವಾರ್ಡ್ ನ.175, ನ್ಯಾನಪ್ಪನ ಬಂಡೆ, ದೇವರಚಿಕ್ಕನಹಳ್ಳಿ (ಬೊಮ್ಮನಹಳ್ಳಿ) | ರೂ.102.25 ಲಕ್ಷ |
| 6 | ವಾರ್ಡ್ 4ನೇ ಮುಖ್ಯ ರಸ್ತೆ, ಜಯನಗರ, ಬುಲ್ಲೇವಾರ್ಡ್ | ರೂ.102.25 ಲಕ್ಷ |
| 7 | ವಾರ್ಡ್ ನಂ.151, 3ನೇ ಬ್ಲಾಕ್, ಕೋರಮಂಗಲ | ರೂ.102.25 ಲಕ್ಷ |
| 8 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು | ರೂ.102.25 ಲಕ್ಷ |
| 9 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್. ರಸ್ತೆ | ರೂ.102.25 ಲಕ್ಷ |
| 10 | ವಾರ್ಡ್ ನಂ.82, ಗರುಡಚಾರ್ ಪಾಳ್ಯ, ಕಾವೇರಿ ನಗರ | ರೂ.102.25 ಲಕ್ಷ |
| 11 | ವಾರ್ಡ್ ನ.55, ಕೆ.ಆರ್.ಪುರಂ ಮಾರ್ಕೆಟ್, ದೇವಸಂದ್ರ | ರೂ.102.25 ಲಕ್ಷ |
| 12 | ವಾರ್ಡ್ ನಂ.01, ಕೆಂಪೇಗೌಡ, ಕೆಂಚೆನಹಳ್ಳಿ | ರೂ.102.25 ಲಕ್ಷ |

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

M/s.Mailhem Engineers Pvt. Ltd., ರವರು ದರ ಸಂಧಾನದ ನಮೂದಿಸಿರುವ ಈ ಪರಿಷ್ಕೃತ ದರದಂತೆ ಈ ಕೆಳಕಂಡ ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ ವೆಚ್ಚವಾಗುವ ಮೊತ್ತವು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಾರ್ಡ್ ಮತ್ತು ಸ್ಥಳದ ಹೆಸರು | ನಮೂದಿಸಿರುವ ಮೊತ್ತ |
|---|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ | ರೂ.102.24 ಲಕ್ಷ |
| 2 | ವಾರ್ಡ್ ನಂ.94, ಗಾಂಧಿನಗರ, ಗಾಂಧಿನಗರ | ರೂ.102.24 ಲಕ್ಷ |
| 3 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ | ರೂ.102.24 ಲಕ್ಷ |
| 4 | ವಾರ್ಡ್ ನಂ.11, ಕುವೆಂಪುನಗರ | ರೂ.102.24 ಲಕ್ಷ |

ಆದಕಾರಣ ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ರವರು 12 ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವ ಪರಿಷ್ಕೃತ ದರದಂತೆ ಹಾಗೂ M/s.Mailhem Engineers Pvt. Ltd., ರವರು ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವ ಪರಿಷ್ಕೃತ ದರದಂತೆ 04 ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಸ್ಥಳದ ಲಭ್ಯತೆಗನುಗುಣವಾಗಿ ಸ್ಥಳ ಬದಲಾವಣೆ ಮಾಡಿಕೊಂಡು ಸ್ಥಾಪಿಸಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 18-05-2012ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು MSW 2000 rules ನಂತೆ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿದ್ದು ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಮಾನವ ಹಕ್ಕು ಆಯೋಗವು ಇಂತಹ ಯೋಜನೆಗಳ ಅನುಷ್ಠಾನದ ಬಗ್ಗೆ ನಿರಂತರವಾಗಿ (ಉಸ್ತುವಾರಿ) ಮಾನಿಟರಿಂಗ್ ಮಾಡುತ್ತಿದೆ.

ಸದರಿ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಾಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ಪೈಕಿ ಹಸಿ ತ್ಯಾಜ್ಯದಿಂದ ಬಾಬಾ ಅಟಾಮಿಕ್ ರಿಸರ್ಚ್ ಸೆಂಟರ್ ರವರ ತಂತ್ರಜ್ಞಾನ ಬಳಸಿಕೊಂಡು ಜೈವಿಕ ಅನಿಲ ಉತ್ಪಾದಿಸುವ ಘಟಕವು ಒಂದಾಗಿರುತ್ತದೆ. ಈಗಾಗಲೇ ಸರ್ಕಾರದಿಂದ ಅನುಮೋದನೆ ಪಡೆದು ಪಾಲಿಕೆ ವ್ಯಾಪ್ತಿಯ ವಿವಿಧ 16 ವಾರ್ಡ್‌ಗಳಲ್ಲಿ ಸ್ಥಾಪಿಸಲು ಟೆಂಡರ್ ಕರೆಯಲಾಗಿದ್ದು, M/s.Ashoka Biogreen Pvt. Ltd., ಮತ್ತು M/s.Maihem Engineers Pvt. Ltd., ರವರು ಅರ್ಹರಾಗಿದ್ದು, 16 ಸ್ಥಳಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಸಮಿತಿಯು ತೀರ್ಮಾನಿಸಿತು.

## 3. ವಿಷಯದ ಸಂಖ್ಯೆ: ಸಾಆಸ್ಥಾಸ/11/2012-13:

ಸಂಖ್ಯೆ: ಅ.ಆ.(ಯೋ)/ಪಿಆರ್/1563/2012-13, ದಿನಾಂಕ: 22-05-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 03-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಸ್ಥರೊಂದಿಗೆ ಮಾನ್ಯ ಆಯುಕ್ತರ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ, ಹಾಗೂ ದಿನಾಂಕ: 05-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಆಯುಕ್ತರು ಭೇಟಿ ನೀಡಿದಾಗ ಸ್ಥಳೀಯರು ಮಂಡಿಸಿದ ಬೇಡಿಕೆಯಂತೆ, ಯಲಹಂಕ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ.ಎಸ್.ಆರ್.ವಿಶ್ವನಾಥ್ ರವರೊಂದಿಗೆ ಚರ್ಚಿಸಿ ಮಾವಳ್ಳಿಪುರ ಘಟಕದ ಸುತ್ತಲಿನ ಹಳ್ಳಿಗಳಲ್ಲಿ ಅಭಿವೃದ್ಧಿ ಕೈಗೊಳ್ಳಲು ರೂಪಿಸಿದ ರೂ.400.00 ಲಕ್ಷಗಳ ಯೋಜನೆಯಲ್ಲಿ ಈ ಕಾಮಗಾರಿಯು ರೂ.68.00 ಲಕ್ಷಗಳೊಂದಿಗೆ ಸೇರಿರುತ್ತದೆ.

ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ ಪಿ2200 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಅಂದಾಜು ಮೊತ್ತ ರೂ.68.00 ಲಕ್ಷಗಳನ್ನು ಒದಗಿಸಿ ಕಾಮಗಾರಿ ಸಂಖ್ಯೆ:310-11-000042 ಅನ್ನು ನೀಡಲಾಗಿದ್ದು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ಸಾಆಸ್ಥಾಸ/26/2011-12, ದಿನಾಂಕ: 05-09-2011 ರಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ.

S. Venkatesh B.L.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮುಂದುವರೆದು ಮುಖ್ಯ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರ ಕಛೇರಿ ಸಂಖ್ಯೆ: CE/SWM/AS/27/2011-12, ದಿನಾಂಕ: 03-10-2011 ರಲ್ಲಿ ಆಡಳಿತಾತ್ಮಕ ಮಂಜೂರಾತಿ ಮತ್ತು ಸಂಖ್ಯೆ: CE/SWM/TS/27/2011-12, ದಿನಾಂಕ: 03-10-2011 ರಲ್ಲಿ ತಾಂತ್ರಿಕ ಮಂಜೂರಾತಿಯನ್ನು ರೂ.68.00 ಲಕ್ಷಗಳ ಮೊತ್ತಕ್ಕೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಮುಖ್ಯ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರು ಅನುಮೋದನೆ ನೀಡಿರುತ್ತಾರೆ.

ಅದರಂತೆ, ದಿನಾಂಕ: 22-10-2011 ರಂದು ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಪ್ರಥಮ ಬಾರಿಗೆ ಆಹ್ವಾನಿಸಲಾಗಿದ್ದು ದಿನಾಂಕ: 25-10-2011 ರಂದು ವಿಜಯ ಕರ್ನಾಟಕ ದಿನಪತ್ರಿಕೆ ಮತ್ತು ಡೆಕ್ಕನ್ ಹೆರಾಲ್ಡ್ ಆಂಗ್ಲ ಪತ್ರಿಕೆಗಳಲ್ಲಿ ಪ್ರಕಟಣೆಯಾಗಿರುತ್ತದೆ.

ಸದರಿ **ಪ್ರಥಮ ಕರೆಯ** ತಾಂತ್ರಿಕ ಬಿಡ್ಡನ್ನು ತೆರೆದು ಪರಿಶೀಲಿಸಲಾಗಿ, ಏಕೈಕ ಗುತ್ತಿಗೆದಾರರು ಭಾಗವಹಿಸಿದ ಕಾರಣ **ಪ್ರಥಮ ಕರೆಯ** ಟೆಂಡರ್ ಅನ್ನು ರದ್ದುಪಡಿಸಲಾಗಿರುತ್ತದೆ. **ಎರಡನೆಯ ಕರೆಯ** ಟೆಂಡರ್ ಆಹ್ವಾನವನ್ನು ದಿನಾಂಕ: 12-12-2011 ರಲ್ಲಿ ನೀಡಲಾಗಿದ್ದು, ದಿನಾಂಕ: 14-12-2011 ರಂದು, ಪ್ರಜಾವಾಣಿ ಕನ್ನಡ ದಿನಪತ್ರಿಕೆ ಮತ್ತು ದಿ ಹಿಂದೂ ಆಂಗ್ಲ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ.

**ಎರಡನೆಯ ಕರೆಯ** ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕ ಬಿಡ್ಡನ್ನು ಪರಿಶೀಲಿಸಿ, ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರು ಅನುಮತಿ ನೀಡಿರುವಂತೆ ಆರ್ಥಿಕ ಬಿಡ್ಡನ್ನು ತೆರೆಯಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಗುತ್ತಿಗೆದಾರರು ಮತ್ತು ನಮೂದಿಸಿರುವ ವಿವರಗಳು ಕೆಳಗಿನಂತಿರುತ್ತವೆ.

ಮೇಲಿನ ಕಾಮಗಾರಿಯ ಆರ್ಥಿಕ ಬಿಡ್ ಅನ್ನು ದಿನಾಂಕ: 06-02-2012 ರಂದು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ವೆಬ್ ಸೈಟ್‌ನಲ್ಲಿ ತೆರೆಯಲಾಗಿದ್ದು, ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| ಕಾಮಗಾರಿಯ ಅಂದಾಜು ಮೊತ್ತ | - | ರೂ.68,00,000.00 |
| ಭದ್ರತಾ ಠೇವಣಿ ಮೊತ್ತ | - | ರೂ.1,36,000.00 |
| ಟೆಂಡರ್‌ಗಿಟ್ಟ ಮೊತ್ತ | - | ರೂ.67,80,789.00 |

**ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ 2 (ಇಬ್ಬರು) ಗುತ್ತಿಗೆದಾರರು ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು, ಅವರುಗಳು ನಮೂದಿಸಿರುವ ದರಗಳು ಕೆಳಗಿನಂತಿರುತ್ತವೆ.

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಮೊತ್ತ ಮತ್ತು ಮಂಜೂರಾದ ಅಂದಾಜು ಪಟ್ಟಿಗೆ ಹೋಲಿಸಿದಾಗ ಶೇಕಡವಾರು ಹೆಚ್ಚು / ಕಡಿಮೆ | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಮೊತ್ತ ಮತ್ತು 2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡವಾರು ಹೆಚ್ಚು/ಕಡಿಮೆ |
|---|---|---|---|
| 1 | ಶ್ರೀ.ಆರ್.ಸಿ.ಬಸವರಾಜ<br>1ನೇ ದರ್ಜೆ ಗುತ್ತಿಗೆದಾರರು | **ರೂ.80,08,491.00**<br>**ಶೇ.18.11 ರಷ್ಟು ಹೆಚ್ಚು** | **ರೂ.80,08,491.00**<br>**ಶೇ.7.69 ರಷ್ಟು ಹೆಚ್ಚು** |
| 2 | ಶ್ರೀ.ಜಿ.ಓ.ವಿಜಯನಗೌಡ<br>1ನೇ ದರ್ಜೆ ಗುತ್ತಿಗೆದಾರರು | ರೂ.85,32,176.00<br>ಶೇ.25.83 ರಷ್ಟು ಹೆಚ್ಚು | ರೂ.85,32,176.00<br>ಶೇ.14.74 ರಷ್ಟು ಹೆಚ್ಚು |

ಮೇಲಿನ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಲಾಗಿ 1ನೇ ದರ್ಜೆ ಗುತ್ತಿಗೆದಾರರಾದ **ಶ್ರೀ.ಆರ್.ಸಿ.ಬಸವರಾಜ ರವರು** ನಮೂದಿಸಿರುವ ದರಗಳ ಮೊತ್ತವು ರೂ.80,08,491.00 ಆಗಿದ್ದು, ಅನುಮೋದಿತ ಅಂದಾಜು ಪಟ್ಟಿ ದರಗಳ ಮೊತ್ತ ರೂ.67,80,789.00 ಗಳಿಗೆ ಹೋಲಿಸಿದಾಗ **ಶೇ.18.11** ರಷ್ಟು **ಹೆಚ್ಚಾಗಿರುತ್ತದೆ** ಹಾಗೂ 2011-12ನೇ ಸಾಲಿನ ದರಪಟ್ಟಿಯ ಮೊತ್ತ ರೂ.74,63,307.00 ಕ್ಕೆ ಹೋಲಿಸಿದಾಗ **ಶೇ.7.69** ರಷ್ಟು **ಹೆಚ್ಚಾಗಿರುತ್ತದೆ.**

ಮೇಲಿನಂತೆ ಸದರಿ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ಪೈಕಿ **ಶ್ರೀ.ಆರ್.ಸಿ.ಬಸವರಾಜ**, 1ನೇ ದರ್ಜೆ ಗುತ್ತಿಗೆದಾರರು ಕಡಿಮೆ ದರಗಳನ್ನು ನಮೂದಿಸಿರುವ ಎಲ್-1 ಗುತ್ತಿಗೆದಾರರಾಗಿರುತ್ತಾರೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಇಬ್ಬರು ಗುತ್ತಿಗೆದಾರರ ಪೈಕಿ ಎಲ್-1 ಗುತ್ತಿಗೆದಾರರು ನಮೂದಿಸಿದ್ದ ಮೊತ್ತ ರೂ.80,08,491/- ಗಳು 2011-12 ನೇ ಸಾಲಿನ ಹೊಸ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇ.7.69 ರಷ್ಟು ಹೆಚ್ಚಾಗಿದ್ದು, ದರ ಸಂಧಾನ ಮಾಡಲು ಸೂಚಿಸಲಾಗಿತ್ತು.

ಅದರಂತೆ, ಕಾರ್ಯಪಾಲಕ ಅಭಿಯಂತರರು ಎಲ್-1 ಗುತ್ತಿಗೆದಾರರನ್ನು ದರ ಸಂಧಾನಕ್ಕೆ ಆಹ್ವಾನಿಸಿದ್ದು, ಸದರಿ ಗುತ್ತಿಗೆದಾರರು ಹಿಂದೆ ನಮೂದಿಸಿದ್ದ ಶೇ.7.69 ಹೆಚ್ಚುವರಿ ದರಗಳನ್ನು ಶೇ.7.40 ಹೆಚ್ಚುವರಿಗೆ ಕಡಿಮೆಗೊಳಿಸಿರುತ್ತಾರೆ.

ದರ ಸಂಧಾನದ ನಂತರ, ಸದರಿ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರಾದ ಶ್ರೀ.ಆರ್.ಸಿ.ಬಸವರಾಜು ರವರು ನಮೂದಿಸಿರುವ ಮೊತ್ತವು ರೂ.79,86,592/- ಗಳಾಗಿದ್ದು, ಪ್ರತಿ ಸ್ಪರ್ಧಿ ಗುತ್ತಿಗೆದಾರರಾದ ಶ್ರೀ.ಜಿ.ಓ.ವಿಜಯನಗೌಡ ರವರು ನಮೂದಿಸಿರುವ ಮೊತ್ತ ರೂ.85,32,176/- ಗಳಿಗಿಂತ ಕಡಿಮೆ ಇದ್ದು ಅರ್ಹ ಗುತ್ತಿಗೆದಾರರಾಗಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಸದರಿ ಇ-ಪ್ರೊಕ್ಯೂರ್‌ಮೆಂಟ್ ಅಡಿಯ ದ್ವಿಲಕೋಟೆ ಪದ್ಧತಿಯ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಅರ್ಹಗುತ್ತಿಗೆದಾರರಾದ **ಶ್ರೀ.ಆರ್.ಸಿ.ಬಸವರಾಜುರವರು** ನಮೂದಿಸಿ ದರ ಸಂಧಾನದಲ್ಲಿ ಕಡಿಮೆಗೊಳಿಸಿರುವ **ಮೊತ್ತ ರೂ.79,86,592/- ಗಳು** 2011-12ನೇ ಸಾಲಿನ ಲೋಕೋಪಯೋಗಿ ದರಪಟ್ಟಿಗೆ ಹೋಲಿಸಿದಲ್ಲಿ ಶೇ.7.40 ರಷ್ಟು ಹೆಚ್ಚು ದರಗಳ **ಟೆಂಡರ್ ಅನ್ನು ಅನುಮೋದಿಸಲು** ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

## ನಿರ್ಣಯ:

ದಿನಾಂಕ: 22-05-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 03-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಸ್ಥರೊಂದಿಗೆ ಆಯುಕ್ತರ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ, ಹಾಗೂ ದಿನಾಂಕ: 05-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಆಯುಕ್ತರು ಭೇಟಿ ನೀಡಿದಾಗ ಸ್ಥಳೀಯರು ಮಂಡಿಸಿದ ಬೇಡಿಕೆಯಂತೆ, ಯಲಹಂಕ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ.ಎಸ್.ಆರ್.ವಿಶ್ವನಾಥ್ ರವರೊಂದಿಗೆ ಚರ್ಚಿಸಿ ಮಾವಳ್ಳಿಪುರ ಘಟಕದ ಸುತ್ತಲಿನ ಹಳ್ಳಿಗಳಲ್ಲಿ ಅಭಿವೃದ್ಧಿ ಕೈಗೊಳ್ಳಲು ರೂಪಿಸಿದ ರೂ.400.00 ಲಕ್ಷಗಳ ಯೋಜನೆಯಲ್ಲಿ ಈ ಕಾಮಗಾರಿಯು ರೂ.68.00 ಲಕ್ಷಗಳೊಂದಿಗೆ ಸೇರಿರುತ್ತದೆ.

ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ ಪಿ2200 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಅಂದಾಜು ಮೊತ್ತ ರೂ.68.00 ಲಕ್ಷಗಳನ್ನು ಒದಗಿಸಿ ಕಾಮಗಾರಿ ಸಂಖ್ಯೆ:310-11-000042 ಅನ್ನು ನೀಡಿ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರಾದ ಶ್ರೀ.ಆರ್.ಸಿ.ಬಸವರಾಜು ರವರು ನಮೂದಿಸಿರುವ ಮೊತ್ತವು ರೂ.80,08,491/- ಗಳಾಗಿದ್ದು, ಪ್ರತಿ ಸ್ಪರ್ಧಿ ಗುತ್ತಿಗೆದಾರರಾದ ಶ್ರೀ.ಜಿ.ಓ.ವಿಜಯನಗೌಡ ರವರು ನಮೂದಿಸಿರುವ ಮೊತ್ತ ರೂ.85,32,176/- ಗಳಿಗಿಂತ ಕಡಿಮೆ ಇದ್ದು ಅರ್ಹ ಗುತ್ತಿಗೆದಾರರಾಗಿದ್ದು, ಇವರು ದರ ಸಂಧಾನದಲ್ಲಿ ಕಡಿಮೆಗೊಳಿಸಿರುವ ಮೊತ್ತ ರೂ.79,86,592/- ಗಳು 2011-12ನೇ ಸಾಲಿನ ಲೋಕೋಪಯೋಗಿ ದರಪಟ್ಟಿಗೆ ಹೋಲಿಸಿದಲ್ಲಿ ಶೇ.7.40 ರಷ್ಟು ಹೆಚ್ಚು ದರಗಳಾಗಿರುತ್ತವೆ. ಆದುದರಿಂದ, ಸದರಿ ಟೆಂಡರ್‌ಗೆ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.

## 04. ವಿಷಯದ ಸಂಖ್ಯೆ: ಸಾಆಸ್ಥಾಸ/14/2012-13:

ಆಯುಕ್ತರು ರವರ ದಿನಾಂಕ: 18-06-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ||ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ರೂ.230.00 ಕೋಟಿಗಳ ಬಂಡವಾಳದೊಂದಿಗೆ ಸ್ಥಾಪಿಸಲು ಆಸಕ್ತಿ ಹೊಂದಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರದ "State high level committee" ಮುಂದೆ ಅನುಮೋದನೆಗಾಗಿ ಸಲ್ಲಿಸಿದ್ದರು, ಈ ಮೇರೆಗೆ ಘನ ಸರ್ಕಾರವು ಮೆ||ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರ ಪ್ರಸ್ತಾವನೆಗೆ ದಿನಾಂಕ: 16-12-2011 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ "State high level committee" ಯಲ್ಲಿ ಅನುಮೋದನೆ ಸಂಖ್ಯೆ: G.O. No.C1263SPI, 2011 ರಂತೆ ಅನುಮೋದನೆ ನೀಡಿ, ಸದರಿ ಸಂಸ್ಥೆಗೆ ವಿದ್ಯುತ್ ಘಟಕ ಸ್ಥಾಪಿಸಲು ಅವಶ್ಯಕವಿರುವ 25 ಎಕರೆಗಳ ಜಾಗವನ್ನು ಹಾಗೂ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಒದಗಿಸಲು ಕ್ರಮವಹಿಸುವಂತೆ ಪಾಲಿಕೆಗೆ ತಿಳಿಸಲಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅದರಂತೆ ಪಾಲಿಕೆಯ ಬಗ್ಗನದೊಡ್ಡಿ ಗ್ರಾಮದಲ್ಲಿ ಲಭ್ಯವಿರುವ 25 ಎಕರೆ ಪ್ರದೇಶವನ್ನು ಸದರಿ ಸಂಸ್ಥೆಗೆ ಒದಗಿಸಲು ಸ್ಥಳ ಪರಿಶೀಲನೆ ಮಾಡಲಾಗಿ, ಸದರಿ ಜಾಗವು ಬನ್ನೇರುಘಟ್ಟ ಕಾಡಿನ ಗಡಿಯಂಚಿನಲ್ಲಿದ್ದು, ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಯಾದಲ್ಲಿ ಕಾಡು ಪ್ರಾಣಿಗಳ ಓಡಾಟಕ್ಕೆ ತೊಂದರೆಯಾಗುವುದನ್ನು ಮನಗಂಡು ಮತ್ತು ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ದಂತೆ ಕಾಡಿಗೆ ಹೊಂದಿಕೊಂಡಿರುವ ಜಾಗವನ್ನು ಘನತ್ಯಾಜ್ಯ ವಿಲೇವಾರಿಗೆ ಬಳಸಲು ಬಾರದಿರುವುದರಿಂದ ಬಗ್ಗನದೊಡ್ಡಿಯ ಪಾಲಿಕೆ ಜಾಗವನ್ನು ಸದರಿ ವಿದ್ಯುತ್ ಯೋಜನೆಗೆ ಒದಗಿಸಲಾಗಿರುವುದಿಲ್ಲ.

ಮುಂದುವರೆದು ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ದಿನಾಂಕ: 25-05-2012 ರಲ್ಲಿ ಪಾಲಿಕೆಗೆ ಸಲ್ಲಿಸಿರುವ ಪತ್ರದಲ್ಲಿ, ಸದರಿ ವಿದ್ಯುತ್ ಯೋಜನೆಗೆ ಅವಶ್ಯವಿರುವ ಭೂಮಿಯನ್ನು ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಸರ್ವೆ ನಂ.30, 31, 32 ಮತ್ತು 33 ರಲ್ಲಿ ಹೊಂದಿರುವುದಾಗಿ ತಿಳಿಸಿ, ಕೆಳಗಿನಂತೆ ಕೋರಿರುತ್ತಾರೆ.

1. ವಿದ್ಯುತ್ ಯೋಜನೆಯನ್ನು ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರ ಬೆಂಗಳೂರಿನಿಂದ ಸುಮಾರು 46 ಕಿ.ಮೀ. ದೂರದಲ್ಲಿರುವ ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಸರ್ವೆ ನಂ.30, 31, 32 ಮತ್ತು 33 ಜಾಗದಲ್ಲಿ ಸ್ಥಾಪಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
2. ವಿದ್ಯುತ್ ಘಟಕ ಸ್ಥಾಪನೆಯಾದಲ್ಲಿ ಸದ್ಯಕ್ಕೆ ಟಿಪ್ಪಿಂಗ್ ಫೀ ನೀಡುವ ಅವಶ್ಯಕತೆ ಇಲ್ಲವೆಂದು ಮತ್ತು ಘಟಕದ ಕಾರ್ಯಕ್ಷಮತೆಯನ್ನು ಆಧರಿಸಿ ಮುಂದಿನ ದಿನಗಳಲ್ಲಿ ಪಾಲಿಕೆಯ ಕೌನ್ಸಿಲ್ ಅಥವಾ ಆಯುಕ್ತರು ಸೂಕ್ತ ತೀರ್ಮಾನ ಕೈಗೊಂಡು ನಿಗದಿಪಡಿಸಬಹುದೆಂದು ತಿಳಿಸಿರುತ್ತಾರೆ.
3. ವಿದ್ಯುತ್ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ 30 ತಿಂಗಳ ಅವಧಿಗೆ ಅಥವಾ ಘಟಕ ಪೂರ್ಣಗೊಳ್ಳುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ರೂ.20.00 ಕೋಟಿಗಳ Performance guarantee ಯನ್ನು ಪಾಲಿಕೆಗೆ ನೀಡುವುದಾಗಿ ತಿಳಿಸಿರುತ್ತಾರೆ.
4. ಸದರಿ ವಿದ್ಯುತ್ ಘಟಕ ಸ್ಥಾಪನೆಗೆ ಅವಶ್ಯಕವಿರುವ ಎಲ್ಲಾ ಶಾಸನಬದ್ಧ ಅನುಮೋದನೆಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ತಾವೇ ಪಡೆಯುವುದಾಗಿ ತಿಳಿಸಿರುತ್ತಾರೆ.
5. ಶಾಸನಬದ್ಧ ಅನುಮೋದನೆಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ಪಡೆದ ನಂತರದ 27 ತಿಂಗಳುಗಳೊಳಗೆ ಉದ್ದೇಶಿತ ವಿದ್ಯುತ್ ಘಟಕ ಯೋಜನೆಯನ್ನು ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 198 ವಾರ್ಡ್‌ಗಳನ್ನು ಹೊಂದಿದ್ದು, ಸುಮಾರು 80 ಲಕ್ಷ ಜನಸಂಖ್ಯೆ ಹಾಗೂ ಸುಮಾರು 20 ಲಕ್ಷ ವಸತಿಗಳನ್ನು ಹೊಂದಿರುತ್ತದೆ. ಇದಲ್ಲದೆ ಪ್ರತಿದಿನ ಬೆಂಗಳೂರು ಮಹಾನಗರಕ್ಕೆ ಬಂದುಹೋಗುವವರ ಜನಸಂಖ್ಯೆಯು (Floating population) ಸಹ ಲಕ್ಷಗಳಲ್ಲಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿದಿನ ಸುಮಾರು 3000 ದಿಂದ 3500 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ನಗರವು ಬೆಳೆಯುತ್ತಿರುವ ವೇಗವನ್ನು ಗಮನಿಸಿದ್ದಲ್ಲಿ ಘನತ್ಯಾಜ್ಯದ ಉತ್ಪಾದನೆ ಶೀಘ್ರವಾಗಿ ಪ್ರತಿದಿನ ಸುಮಾರು 5000 ಮೆಟ್ರಿಕ್ ಟನ್ ತಲುಪುವ ಸಾಧ್ಯತೆಯಿರುತ್ತದೆ. ಈ ರೀತಿಯಾಗಿ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000ರಂತೆ ಸಮರ್ಪಕವಾಗಿ ಸಂಸ್ಕರಿಸಿ, ಮರುಬಳಕೆ ವಸ್ತುಗಳನ್ನು ಬೇರ್ಪಡಿಸಿ ಅಂತಿಮ ಉಳಿಕೆಯನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಜವಾಬ್ದಾರಿಯು ಪಾಲಿಕೆಯದಾಗಿರುತ್ತದೆ.

ಹಾಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ಸಂಸ್ಕರಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕೇವಲ ಮೂರು ತ್ಯಾಜ್ಯ ಘಟಕಗಳಿದ್ದು ಹಲವಾರು ಕಾರಣಗಳಿಂದ ಸದರಿ ಘಟಕಗಳು ಪೂರ್ಣ ಸಾಮರ್ಥ್ಯಕ್ಕೆ ಅನುಗುಣವಾಗಿ ತ್ಯಾಜ್ಯ ಸಂಸ್ಕರಿಸಲು ಸಾಧ್ಯವಾಗುತ್ತಿಲ್ಲ ಇದರಿಂದ ಪಾಲಿಕೆಯು ಸಾರ್ವಜನಿಕರಿಂದ ಮತ್ತು ಮಾಧ್ಯಮಗಳಿಂದ ಟೀಕೆಗೆ ಗುರಿಯಾಗುತ್ತಿದೆ.

ಈ ಮಧ್ಯೆ ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ಉದ್ಯೋಗಮಿತ್ರ ವ್ಯವಸ್ಥಾಪಕ ನಿರ್ದೇಶಕರವರು ತಮ್ಮ ಪತ್ರದ ಸಂಖ್ಯೆ: KUM/SHLCC/E4/197/11-12 ದಿನಾಂಕ: 25-05-2012 ರಲ್ಲಿ ಸದರಿ ಯೋಜನೆಗೆ ಅವಶ್ಯವಿರುವ ಜಾಗ ಹಾಗೂ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯ ಒದಗಿಸಿ ಸದರಿ ಸಂಸ್ಥೆಯು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಸಹಕಾರ ನೀಡಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಸಂಸ್ಥೆಯು ದಿನಾಂಕ: 07-06-2012ರಲ್ಲಿ ಕರ್ನಾಟಕ ಸರ್ಕಾರ ಆಯೋಜಿಸಿದ್ದ Global investors meet (Gim) ನಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಒಡಂಬಡಿಕೆ ಕೂಡ ಮಾಡಿಕೊಂಡಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಸದರಿ ಯೋಜನೆಗೆ ಅವಶ್ಯವಿರುವ ಜಾಗವನ್ನು ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ತಾವೇ ಹೊಂದಿರುವುದರಿಂದ, ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸದರಿ ಸಂಸ್ಥೆಗೆ ಪಾಲಿಕೆ ವತಿಯಿಂದ ಸರಬರಾಜು ಮಾಡಲು

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಒಪ್ಪಿಗೆ ನೀಡಬೇಕಾಗಿರುತ್ತದೆ. ಸದರಿ ಘಟಕ ಕಾರ್ಯಾರಂಭಗೊಂಡ ನಂತರ, ಘಟಕದ ಕಾರ್ಯ ಕ್ಷಮತೆ ಆಧರಿಸಿ, ತಜ್ಞರ ಸಮಿತಿ ರಚಿಸಿ ಟಿಪ್ಪಿಂಗ್ ಫೀ ದರವನ್ನು ನಿಗದಿಗೊಳಿಸಲು ಸೂಕ್ತ ತೀರ್ಮಾನ ತೆಗೆದುಕೊಳ್ಳಬಹುದಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಈ ಕೆಳಗಿನಂತೆ ಅನುಮೋದನೆ ಕೋರಿ ಮಂಡಿಸಿದೆ.

1. ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರಿಗೆ ನೇರವಾಗಿ ಯಾವುದೇ ಟೆಂಡರ್ ಇಲ್ಲದೇ 1000 ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಹಾಗೂ
2. ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಗ್ರಾಮದ ಸರ್ವೆ ನಂ.30, 31, 32 ಮತ್ತು 33 ರಲ್ಲಿ ಸ್ಥಾಪಿಸುವ ಜಾಗಕ್ಕೆ ಪಾಲಿಕೆಯಿಂದ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡಿ ಒದಗಿಸಲು.

ಪ್ರಸ್ತಾವನೆಯನ್ನು ಅನಮೋದನೆಗಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 18-06-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ರೂ.230.00 ಕೋಟಿಗಳ ಬಂಡವಾಳದೊಂದಿಗೆ ಸ್ಥಾಪಿಸಲು ಆಸಕ್ತಿ ಹೊಂದಿದ್ದು, ಸದರಿ ಪ್ರಸ್ತಾವನೆಯನ್ನು ಘನ ಸರ್ಕಾರವು ದಿನಾಂಕ: 16-12-2011 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ "State high level committee" ಯಲ್ಲಿ ಅನುಮೋದನೆ ಸಂಖ್ಯೆ: G.O. No.C1263SPI, 2011 ರಂತೆ ಅನುಮೋದನೆ ನೀಡಿ, ಸದರಿ ಸಂಸ್ಥೆಗೆ ವಿದ್ಯುತ್ ಘಟಕ ಸ್ಥಾಪಿಸಲು ಅವಶ್ಯಕವಿರುವ 25 ಎಕರೆಗಳ ಜಾಗವನ್ನು ಹಾಗೂ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಒದಗಿಸಲು ಕ್ರಮವಹಿಸುವಂತೆ ಪಾಲಿಕೆಗೆ ತಿಳಿಸಲಾಗಿರುತ್ತದೆ. ಮುಂದುವರೆದಂತೆ, ದಿನಾಂಕ: 07-06-2012ರಲ್ಲಿ ಕರ್ನಾಟಕ ಸರ್ಕಾರ ಆಯೋಜಿಸಿದ್ದ Global investors meet (Gim) ನಲ್ಲಿ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಒಡಂಬಡಿಕೆ ಕೂಡ ಮಾಡಿಕೊಂಡಿರುತ್ತಾರೆ.

ಆದುದರಿಂದ, ಮೆ॥ಸತಾರೆಂ ಎಂಟರ್ ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರಿಗೆ ನೇರವಾಗಿ ಯಾವುದೇ ಟೆಂಡರ್ ಇಲ್ಲದೇ 1000 ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಹಾಗೂ ಮಾಗಡಿ ತಾಲ್ಲೂಕು ಗುಡೇಮಾರನಹಳ್ಳಿ ಗ್ರಾಮದ ಸರ್ವೆ ನಂ.30, 31, 32 ಮತ್ತು 33 ರಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದ ಜಾಗಕ್ಕೆ ಪಾಲಿಕೆಯಿಂದ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡುವ ಸಂಬಂಧ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.

## 05. ವಿಷಯದ ಸಂಖ್ಯೆ: ಸಾಆಸ್ಥಾಸ/15/2012-13:

ಸಂಖ್ಯೆ: ಸಿಇ(ಎಸ್.ಡಬ್ಲ್ಯೂ.ಎಂ.)ಪಿಆರ್/1202/12-13, ದಿನಾಂಕ: 16-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ, ಎಸ್.ಬಿಂಗಿಪುರ ಗ್ರಾಮದ ಸರ್ವೆ ನಂ.(179) ರಲ್ಲಿ 20.06 ಎಕರೆ ವಿಸ್ತೀರ್ಣದ ಜಮೀನನ್ನು, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿ ಆದೇಶದ ಸಂಖ್ಯೆ: ಎಲ್.ಎನ್.ಡಿ.(ಎ)ಸಿ.ಆರ್.122/02-03, ದಿನಾಂಕ: 13-09-2005ರ ನಗರ ಸಭೆ ಬೊಮ್ಮನಹಳ್ಳಿಗೆ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಂಜೂರು ಮಾಡಲಾಗಿದ್ದು, ಈಗ ಬೊಮ್ಮನಹಳ್ಳಿ ನಗರ ಸಭೆಯು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿರುವುದರಿಂದ, ಈ ಪ್ರದೇಶವನ್ನು ಘನ ತ್ಯಾಜ್ಯ ವಿಭಾಗದಿಂದ ವಿಲೇವಾರಿಗೆ ಮತ್ತು ನೆಲಭರ್ತಿ ಜಾಗಕ್ಕೆ ಅಗತ್ಯ ಕ್ರಮ ವಹಿಸಲು ಹಸ್ತಾಂತರಿಸಲಾಗಿದ್ದು, ಸದರಿ ಪ್ರದೇಶವನ್ನು ಡಂಪಿಂಗ್ ಯಾರ್ಡಾಗಿ ನಿರ್ವಹಿಸಬೇಕೆಂದು ಮಾನ್ಯ ಆಯುಕ್ತರು ಸೂಚಿಸಿದ್ದ ಮೇರೆಗೆ, ಸದರಿ ಜಾಗವನ್ನು ಪರಿಶೀಲಿಸಲಾಗಿ, ಜಾಗವು ಕಲ್ಲುಗಣಿಗಳಿಂದ ಕೂಡಿದ್ದರಿಂದ, ಸದರಿ ಸ್ಥಳವನ್ನು ಅನುಪಯುಕ್ತ ಹಾಗೂ Silt ಭರ್ತಿ ಮಾಡಲು ಸೂಕ್ತವಾದ ಸ್ಥಳವಾದ್ದರಿಂದ ದಕ್ಷಿಣ ವಲಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಬರುವ ಅನುಪಯುಕ್ತ/Silt ಅನ್ನು ತುಂಬಲು ಅನುಕೂಲವಾಗುತ್ತದೆ. ಆದ್ದರಿಂದ ಆಯುಕ್ತರೊಂದಿಗೆ ಚರ್ಚಿಸಿ Dumping Yard ಮಾಡಲು ನಿರ್ಣಯಿಸಲಾಗಿರುತ್ತದೆ.

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಸ್ಥಳವನ್ನು ಪರಿಶೀಲನೆ ಮಾಡಲಾಗಿ ಈಗಾಗಲೇ ನಿರ್ಮಿಸಲಾದ ಕಾಂಪೌಂಡ್ ಗೋಡೆಯನ್ನು ಸ್ಥಳೀಯ ದುಷ್ಕರ್ಮಿಗಳು ಹಾಳು ಮಾಡಿರುತ್ತಾರೆ ತತ್ಸಬಂದವಾಗಿ ಹಲವಾರು ಕಡೆ ಕಾಂಪೌಂಡ್ ಮತ್ತು ಅಡಿಪಾಯವನ್ನು ಅಲ್ಲಲ್ಲಿ ಹಾಳು ಮಾಡಿರುವುದು ಸ್ಥಳ ಪರಿಶೀಲನೆ ಸಮಯದಲ್ಲಿ ಕಂಡುಬಂದಿರುತ್ತದೆ.

ಮಾನ್ಯ ಆಯುಕ್ತರು ಮತ್ತು ಅಪರ ಆಯುಕ್ತರು (ಯೋಜನೆ) ರವರು ಕ್ರಮವಾಗಿ ಕಂಡಿಕೆ-(42) ಮತ್ತು (43) ರಲ್ಲಿ ಜಾಬ್ ಸಂಖ್ಯೆ ನೀಡಲು ಅನುಮತಿ ನೀಡಿರುತ್ತಾರೆ, ಅದರಂತೆ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದ್ದು ಜಾಬ್ ಸಂಖ್ಯೆ: 310-12-000008 ಆಗಿರುತ್ತದೆ. ಈಗಾಗಲೇ ರೂ.66.98 ಲಕ್ಷಗಳಿಗೆ ಪಿ.ಡಬ್ಲ್ಯೂ.ಡಿ. ಇಲಾಖೆಯ ದರಪಟ್ಟಿಯ ದರಗಳನ್ವಯ ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

ಸದರಿ ಕಾಮಗಾರಿಯನ್ನು 2012-13ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಹಾಗೂ ಮುಖ್ಯವಾಗಿ ದಕ್ಷಿಣ ವಲಯಕ್ಕೆ ಸಂಬಂಧಿಸಿದ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಬೃಹತ್ ನೀರುಗಾಲುವೆಯಲ್ಲಿ ಬರುವ Silt ಅನ್ನು ಹಾಕಲು ಸ್ಥಳ ಇಲ್ಲದೆ ಇರುವುದರಿಂದ ಎಸ್.ಬಿಂಗಿಪುರದ 20.06 ಎಕರೆ ವಿಸ್ತೀರ್ಣದ ಪ್ರದೇಶವನ್ನು ಡಂಪಿಂಗ್ ಯಾರ್ಡ್ ಆಗಿ ನಿರ್ವಹಿಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 16-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯ ವ್ಯಾಪ್ತಿಗೆ ಬರುವ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಇರುವ ಬೃಹತ್ ನೀರುಗಾಲುವೆಯಲ್ಲಿ ಬರುವ Silt ಅನ್ನು ಹಾಕಲು ಸ್ಥಳ ಇಲ್ಲದೆ ಇರುವುದರಿಂದ ಎಸ್.ಬಿಂಗಿಪುರದ 20.06 ಎಕರೆ ವಿಸ್ತೀರ್ಣದ ಪ್ರದೇಶವನ್ನು ಡಂಪಿಂಗ್ ಯಾರ್ಡ್ ಆಗಿ ನಿರ್ವಹಿಸುವುದು ಅವಶ್ಯವಾಗಿರುತ್ತದೆ. ಈ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ 2012-13ನೇ ಸಾಲಿನ 13ನೇ ಹಣಕಾಸು ಯೋಜನೆಯಡಿಯಲ್ಲಿ ರೂ.66.98 ಲಕ್ಷಗಳಿಗೆ ಜಾಬ್ ಸಂಖ್ಯೆ: 310-12-000008 ನೀಡಲಾಗಿರುತ್ತದೆ. ಆದುದರಿಂದ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.**

## 06. ವಿಷಯದ ಸಂಖ್ಯೆ: ಸಾಆಸ್ಥಾಸ/16/2012-13:

ಸಂಖ್ಯೆ: ಅ.ಆ.(ಯೋ)/ಪಿ.ಆರ್./2425/2012-13, ದಿನಾಂಕ: 12-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಿಲೇವಾರಿ ಘಟಕಗಳಾದ ಮಂಡೂರು ಉತ್ತರ ಭಾಗ ಹಾಗೂ ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದ ಘಟಕಗಳು ಬಹುತೇಕ ತುಂಬಿದ್ದು ಇಲ್ಲಿನ ಘನ ತ್ಯಾಜ್ಯವನ್ನು ದೊಡ್ಡಬಳ್ಳಾಪುರ ತಾಲ್ಲೂಕು, ಗುಂಡ್ಲಹಳ್ಳಿ ಬಳಿ ಇರುವ ಮೆ॥ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಸಂಸ್ಕರಿಸಲು ಸದರಿ ಸಂಸ್ಥೆಯೊಂದಿಗೆ ಕರಾರು ಮಾಡಿಕೊಳ್ಳಲಾಗಿದ್ದು, ಅದರಂತೆ ಮಂಡೂರು ಹಾಗೂ ರಾಜರಾಜೇಶ್ವರಿ ಘಟಕಗಳಿಂದ 10 ಗಾಡಿಗಳ ಸುಮಾರು 20 ಮೆಟ್ರಿಕ್ ಟನ್ ಪ್ರಮಾಣದ (ಲಾರಿ ತೂಕ ಸೇರಿ ಒಟ್ಟು ಸುಮಾರು 32 ಮೆ.ಟನ್) ಲಾರಿಗಳ ಮುಖಾಂತರ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡಲಾಗುತ್ತಿದೆ. ಪ್ರಸ್ತುತ ದಿನನಿತ್ಯ ಸುಮಾರು 30 ಲಾರಿಗಳ ಮುಖಾಂತರ ಘನ ತ್ಯಾಜ್ಯವನ್ನು ಮೆ॥ ಟೆರ್ರಾ ಫರ್ಮಾ ಸಂಸ್ಥೆಗೆ ಸಾಗಣಿ ಮಾಡಲಾಗುತ್ತಿದೆ.

ಮುಂದುವರೆದು ಬೆಂಗಳೂರು ನಗರದ ಘನ ತ್ಯಾಜ್ಯವನ್ನು ಸಾಗಾಣಿಕೆ ಮಾಡಲು 2011-12ನೇ ಸಾಲಿಗೆ ಟೆಂಡರ್‌ನ್ನು ಕರೆಯಲಾಗಿದ್ದು ಪ್ರಕ್ರಿಯೆಯಲ್ಲಿರುತ್ತದೆ. ಈ ಟೆಂಡರ್‌ನಲ್ಲಿ ಬೆಂಗಳೂರು ನಗರದ ಹಲವು ಭಾಗಗಳ ತ್ಯಾಜ್ಯವನ್ನು ಕಾಂಪಾಕ್ಟರ್‌ಗಳ ಮುಖಾಂತರ ನೇರವಾಗಿ ಮೆ॥ ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಸಾಗಾಣಿಕೆ ಮಾಡಲಾಗುವುದು. ಆಗ ಸದರಿ ಸಂಸ್ಥೆಗೆ ಘನ ತ್ಯಾಜ್ಯ ಸಾಗಾಣಿಕೆ ಮಾಡುವ ವಾಹನಗಳ ಸಂಖ್ಯೆ ಇನ್ನೂ ಹೆಚ್ಚಾಗಬಹುದು.

ಕೆ.ಎಸ್. ರಸ್ತೆಯಿಂದ ಹಾಲಪ್ಪನಹಳ್ಳಿವರೆಗೆ ಒಟ್ಟು 10.20 ಕಿ.ಮೀ. ಉದ್ದದ ರಸ್ತೆಯನ್ನು 2002 ರಲ್ಲಿ ಪಂಚಾಯತ್ ರಾಜ್ ಇಲಾಖಾ ವತಿಯಿಂದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿ.ಎಂ.ಜಿ.ಎಸ್.ವೈ.) ಅಡಿಯಲ್ಲಿ ನಿರ್ಮಿಸಲಾಗಿದ್ದು, ಇದರ ಗುತ್ತಿಗೆದಾರರ ನಿರ್ವಹಣೆ 05 ವರ್ಷಗಳ ಅವಧಿಯು 2007 ಕ್ಕೆ ಮುಕ್ತಾಯಗೊಂಡಿರುತ್ತದೆ. ಮೆ॥ ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಮೇಲಿನ ರಸ್ತೆಯ ಸರಪಳಿ 0.00 ಕಿ.ಮೀ. ನಿಂದ 4.40 ಕಿ.ಮೀ. ವರೆಗಿನ ಭಾಗದಲ್ಲಿ ಹಾದು ಹೋಗಬೇಕಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೆ॥ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ದೊಡ್ಡಬಳ್ಳಾಪುರ – ದಾಬಸ್‌ಪೇಟೆ ರಸ್ತೆಯಿಂದ ಒಟ್ಟು ಸುಮಾರು 6.50 ಕಿ.ಮೀ. ದೂರದಲ್ಲಿರುತ್ತದೆ. ಈ ಪೈಕಿ ಸರಪಳಿ 0.00 ಕಿ.ಮೀ. ನಿಂದ 4.40 ಕಿ.ಮೀ. ಮತ್ತು ಸರಪಳಿ: 4.90 ಕಿ.ಮೀ. ನಿಂದ 6.50 ಕಿ.ಮೀ. ವರೆಗಿನ ಭಾಗಗಳನ್ನು ಅಭಿವೃದ್ಧಿಪಡಿಸಬೇಕಾಗಿರುತ್ತದೆ.

ಉಲ್ಲೇಖದ ಸರಪಳಿ 3.30 ಕಿ.ಮೀ.ನಿಂದ 4.40 ಕಿ.ಮೀ. ವರೆಗಿನ ರಸ್ತೆಯ ಭಾಗವು ಕರೆಕಲ್ ಪಾಳ್ಯ ಗ್ರಾಮದ ವ್ಯಾಪ್ತಿಯಲ್ಲಿದ್ದು ಈ ಭಾಗದ ರಸ್ತೆಯಲ್ಲಿ ಆಳವಾದ ಗುಂಡಿಗಳು ಬಿದ್ದಿದ್ದು ರಸ್ತೆಯು ಸಂಪೂರ್ಣ ಹಾಳಾಗಿರುತ್ತದೆ. ಈ ಭಾಗದಲ್ಲಿ ಘನತ್ಯಾಜ್ಯ ವಾಹನಗಳ ಓಡಾಟದಿಂದಾಗಿ ರಸ್ತೆಯಲ್ಲಿ ಕೆಸರು ತುಂಬಿದ್ದು ಗ್ರಾಮಸ್ಥರಿಗೆ ಹಾಗೂ ಶಾಲಾ ಮಕ್ಕಳಿಗೆ ಬಹಳ ತೊಂದರೆಯಾಗಿದ್ದು, ಈ ಭಾಗದ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು ಅವಶ್ಯಕವಾಗಿರುತ್ತದೆ. ಹಾಗೂ ಈ ಗ್ರಾಮಸ್ಥರೂ ಸಹ ಈ ಭಾಗದ ರಸ್ತೆಯ ಅಭಿವೃದ್ಧಿಯನ್ನು ಆದ್ಯತೆ ಮೇಲೆ ಕೈಗೊಳ್ಳಲು ಕೋರಿರುತ್ತಾರೆ.

ಮೇಲಿನ ಹಿನ್ನೆಲೆಯಲ್ಲಿ ಕೆ.ಎಸ್. ರಸ್ತೆಯಿಂದ ಹಾಲಪ್ಪನಹಳ್ಳಿ ರಸ್ತೆಯ ಸರಪಳಿ 3.30 ಕಿ.ಮೀ. – 4.40 ಕಿ.ಮೀ. ವರೆಗಿನ ಕರೆಕಲ್ ಪಾಳ್ಯದ ಗ್ರಾಮ ಪರಿಮಿತಿಯ ರಸ್ತೆಯನ್ನು ಘನತ್ಯಾಜ್ಯ ವಸ್ತುಗಳ ಸಾಗಾಣಿಕೆ ವಾಹನಗಳ ಸುಗಮ ಓಡಾಟ ಮತ್ತು ಸ್ಥಳೀಯ ಗ್ರಾಮಸ್ಥರ ಅನುಕೂಲಕ್ಕಾಗಿ ಅಭಿವೃದ್ಧಿ ಪಡಿಸಲು ಯೋಜಿಸಿ 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆ ಬೆಂಗಳೂರು ವೃತ್ತ ದರಪಟ್ಟಿಯನ್ನು ಆದರಿಸಿ ಅಂದಾಜು ಮೊತ್ತ ರೂ.72.00 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ.

ಮೇಲಿನ ಮೆ॥ ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಹೋಗುವ ಸರಪಳಿ 0.00-3.30 ಕಿ.ಮೀ. ವರೆಗಿನ ಹಾಗೂ ಸರಪಳಿ 4.90-6.50 ಕಿ.ಮೀ. ವರೆಗಿನ ರಸ್ತೆಯನ್ನು ಸಹ ಘನತ್ಯಾಜ್ಯ ಸಾಗಾಣಿಕೆ ವಾಹನಗಳ ಸುಗಮ ಓಡಾಟಕ್ಕಾಗಿ ಅಭಿವೃದ್ಧಿ ಪಡಿಸಬೇಕಾಗಿರುತ್ತದೆ.

ಮುಂದುವರೆದು ಸದರಿ ರಸ್ತೆಯು ಗ್ರಾಮೀಣ ರಸ್ತೆಯಾಗಿದ್ದು, ದೊಡ್ಡಬಳ್ಳಾಪುರ ತಾಲ್ಲೂಕು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಸದರಿ ಇಲಾಖೆಯಿಂದ ಉಲ್ಲೇಖಿತ ರಸ್ತೆಯ ಅಭಿವೃದ್ಧಿ ಮತ್ತು ನಿರ್ವಹಣೆಗೆ ಯೋಜನೆಗಳೇನಾದರೂ ರೂಪಿಸಿರುವ ಬಗ್ಗೆ ಮಾಹಿತಿ ಕೋರಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನಂದರಾವ್ ವೃತ್ತ, ಬೆಂಗಳೂರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ದೊಡ್ಡಬಳ್ಳಾಪುರ ರವರಿಗೆ ಪತ್ರ ಬರೆಯಲಾಗಿದ್ದು, ಸದರಿಯವರು ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ ವತಿಯಿಂದ ಯಾವುದೇ ಯೋಜನೆಯನ್ನು ರೂಪಿಸಿಲ್ಲವೆಂದು ಮತ್ತು ಪಾಲಿಕೆ ವತಿಯಿಂದ ಸದರಿ ರಸ್ತೆ ಅಭಿವೃದ್ಧಿಪಡಿಸಲು ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾರೆ (ಪತ್ರವನ್ನು ಕಡತದಲ್ಲಿ ಲಗತ್ತಿಸಿದೆ).

ಸದರಿ ಕಾಮಗಾರಿಗೆ ಕಂಡಿಕೆ (14) ರಲ್ಲಿ ಮಾನ್ಯ ಆಯುಕ್ತರು ಅನುಮೋದನೆ ನೀಡಿದ್ದು, ಕಂಡಿಕೆ (31) ರಲ್ಲಿ ಲೆಕ್ಕಶೀರ್ಷಿಕೆ ಪಿ0935 "ಅಪ್ರೋಚ್ ರಸ್ತೆಗಳ ನಿರ್ಮಾಣ" ಅಡಿಯಲ್ಲಿ ರೂ.72.00 ಲಕ್ಷಗಳ ಅನುದಾನ ಒದಗಿಸಿ ಕಾಮಗಾರಿ ಸಂಕೇತ ನೀಡಲಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕೆಳಗಿನಂತೆ ಅನುಮೋದನೆ ಕೋರಲಾಗಿದೆ.

1. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು.
2. ಸದರಿ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರನ್ನು ನಿಗಧಿಪಡಿಸಲು.

ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 12-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ವಿಲೇವಾರಿ ಘಟಕಗಳಾದ ಮಂಡೂರು ಉತ್ತರ ಭಾಗ ಹಾಗೂ ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದ ಘಟಕಗಳು ಬಹುತೇಕ ತುಂಬಿದ್ದು ಇಲ್ಲಿನ ಘನ ತ್ಯಾಜ್ಯವನ್ನು ದೊಡ್ಡಬಳ್ಳಾಪುರ ತಾಲ್ಲೂಕು, ಗುಂಡ್ಲಹಳ್ಳಿ ಬಳಿ ಇರುವ ಮೆ॥ ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಸಂಸ್ಕರಿಸಲು 10 ಗಾಲಿಗಳ ಸುಮಾರು 20 ಮೆಟ್ರಿಕ್ ಟನ್ ಪ್ರಮಾಣದ (ಲಾರಿ ತೂಕ ಸೇರಿ ಒಟ್ಟು ಸುಮಾರು 32 ಮೆ.ಟನ್) ಲಾರಿಗಳ ಮುಖಾಂತರ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡಲಾಗುತ್ತಿದೆ. ಪ್ರಸ್ತುತ ದಿನನಿತ್ಯ ಸುಮಾರು 30 ಲಾರಿಗಳ ಮುಖಾಂತರ ಘನ ತ್ಯಾಜ್ಯವನ್ನು ಮೆ॥ ಟೆರ್ರಾ ಫರ್ಮಾ ಸಂಸ್ಥೆಗೆ ಸಾಗಣೆ ಮಾಡಲಾಗುತ್ತಿದೆ.**

S. Venkatesh Babu

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

ಸದರಿ ಸಂಸ್ಥೆಯು ದೊಡ್ಡಬಳ್ಳಾಪುರ – ದಾಬಸ್‌ಪೇಟೆ ರಸ್ತೆಯಿಂದ ಒಟ್ಟು ಸುಮಾರು 6.50 ಕಿ.ಮೀ. ದೂರದಲ್ಲಿರುತ್ತದೆ. ಈ ಸಂಸ್ಥೆಯು ಕರೆಕಲ್ ಪಾಳ್ಯ ಗ್ರಾಮದ ವ್ಯಾಪ್ತಿಯಲ್ಲಿದ್ದು ಘನತ್ಯಾಜ್ಯ ವಾಹನಗಳ ಓಡಾಟದಿಂದ ರಸ್ತೆಯಲ್ಲಿ ಆಳವಾದ ಗುಂಡಿಗಳು ಬಿದ್ದಿದ್ದು ಕೆಸರು ತುಂಬಿರುವುದರಿಂದ ಗ್ರಾಮಸ್ಥರಿಗೆ ಹಾಗೂ ಶಾಲಾ ಮಕ್ಕಳಿಗೆ ಬಹಳ ತೊಂದರೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರಪಳಿ 0.00 ಕಿ.ಮೀ. ನಿಂದ 4.40 ಕಿ.ಮೀ. ಮತ್ತು ಸರಪಳಿ: 4.90 ಕಿ.ಮೀ. ನಿಂದ 6.50 ಕಿ.ಮೀ. ವರೆಗಿನ ಭಾಗಗಳನ್ನು ಅಭಿವೃದ್ಧಿಪಡಿಸಬೇಕಾಗಿರುತ್ತದೆ.

ಈ ಮಧ್ಯೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಮಾವಳ್ಳಿಪುರ ಸಂಸ್ಕರಣಾ ಘಟಕವನ್ನು ಸ್ಥಗಿತಗೊಳಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ ಎಲ್ಲಾ ಕಾಂಪ್ಯಾಕ್ಟರ್ ವಾಹನಗಳನ್ನು ಮೆ॥ ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಘಟಕಕ್ಕೆ ಸಾಗಿಸಲು ಮಾನ್ಯ ಆಯುಕ್ತರು ಸೂಚಿಸಿರುತ್ತಾರೆ. ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಟೆಂಡರ್ ಕರೆದು ಕೈಗೊಳ್ಳಲು ಕಾಲಾವಕಾಶ ಬೇಕಾಗಿರುವುದರಿಂದ ಹಾಗೂ ಪರಿಸ್ಥಿತಿಯ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಟೆಂಡರ್ ಬದಲಿಗೆ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ಕೈಗೊಳ್ಳಲು ಮುಖ್ಯ ಅಭಿಯಂತರರು (ಪರಿಸರಕೋಶ) ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಆದುದರಿಂದ, ಸದರಿ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ0935 "ಅಪ್ರೋಚ್ ರಸ್ತೆಗಳ ನಿರ್ಮಾಣ" ಅಡಿಯಲ್ಲಿ ರೂ.72.00 ಲಕ್ಷಗಳ ಅನುದಾನ ಒದಗಿಸಿ ಕಾಮಗಾರಿ ಸಂಕೇತ ನೀಡಿರುವುದರಿಂದ ಸದರಿ ರಸ್ತೆಯ ಅಭಿವೃದ್ಧಿ ಅವಶ್ಯಕವಾಗಿರುವುದಾಗಿ ಮುಖ್ಯ ಅಭಿಯಂತರರು (ಪರಿಸರಕೋಶ) ರವರು ತಿಳಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ/69 ವೆಚ್ಚ 12/11, ದಿನಾಂಕ: 10-03-2011 ರಂತೆ ಕೆ.ಟಿ.ಪಿ.ಪಿ. ಕಾಯ್ದೆ 1999 ರ ಕಲಂ 4 (ಜಿ) ಅನ್ವಯ ಈ ಸಂಸ್ಥೆಗೆ ವಿನಾಯಿತಿ ನೀಡಿರುವುದರಿಂದ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.

## 07. ವಿಷಯದ ಸಂಖ್ಯೆ: ಸಾಆಸ್ಥಾಸ/17/2012-13:

ಸಂಖ್ಯೆ: ಇಇ/ಜಿಜಿ/ಇ-ಪ್ರೊಕ್/ಟಿ15/ಎಸ್9/11-12, ದಿನಾಂಕ: 22-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Solid Waste Management Services ಗೆ ದಿನಾಂಕ: 23-09-2011 ರಂದು 2ನೇ ಬಾರಿ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ: ಎಸ್-9ಗೆ ಏಕಮಾತ್ರ ಬಿಡ್ ನಮೂದಿಸಲಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 30-11-2011 ರಂದು ತೆರೆಯಲಾಗಿ ಅನುಮೋದನೆ ಪಡೆದು ಆರ್ಥಿಕ ಬಿಡ್‌ಗಳನ್ನು ದಿನಾಂಕ: 09-12-2011 ರಂದು ತೆರೆಯಲಾಗಿ ಶ್ರೀ.ಎಂ.ಶಿವಕುಮಾರ್ ರವರು ಪ್ರತಿ ಮಾಹೆ ರೂ.24,16,788/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ: 12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.23,44,285/- ಗಳಿಗೆ ಒಪ್ಪಿರುತ್ತಾರೆ. ಈ ಕೆಳಕಂಡ ಅಂಶಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಅವಗಾಹನೆಗಾಗಿ ಸಲ್ಲಿಸಿದೆ.

1. ಟೆಂಡರ್ ಪ್ರಕಟಣೆಯಲ್ಲಿ ಕರಾರಿನ ಅವಧಿಯನ್ನು 2 ವರ್ಷಗಳೆಂದು ಪರಿಗಣಿಸಲಾಗಿದೆ. ಕೆ.ಎಂ.ಸಿ. ಕಾಯ್ದೆ 1976ರ ಕಲಂ-176 ರಂತೆ ಮಾನ್ಯ ಆಯುಕ್ತರು ಎರಡು ವರ್ಷಗಳ ಕಾಲಾವಧಿಗೆ ಮೀರದಂತೆ ವಹಿಸಿಕೊಟ್ಟಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸ್ಥಾಯಿ ಸಮಿತಿಯ ಮುಂದೆ 15 ದಿನಗಳೊಳಗಾಗಿ ಅವಗಾಹನೆಗಾಗಿ ತರಬೇಕಾಗಿರುತ್ತದೆ.
2. ಎಸ್-9 ಟೆಂಡರ್ ಮೊತ್ತವು ಎರಡು ವರ್ಷಗಳಿಗೆ ರೂ.5,62,62,840/- ಗಳಾಗಿರುತ್ತದೆ. ಆದರೆ, ದಿನಾಂಕ: 25-01-2010ರ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳಂತೆ ಟೆಂಡರ್ ಮುಖಾಂತರ ವಹಿಸುವ ಕಾಮಗಾರಿಗಳ ಮೊತ್ತವು ರೂ.5.00 ಕೋಟಿಗಳಿಗೆ ಮೀರಿದರೆ ಸಂಬಂಧಪಟ್ಟ, ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆದು, ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಹಾಗೂ ಪಾಲಿಕೆಯ ಶಿಫಾರಸ್ಸಿನೊಂದಿಗೆ, ಘನ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಆದರೆ, ಈ ಮಧ್ಯೆ ಶ್ರೀ.ಎಂ.ಶಿವಕುಮಾರ್, ಗುತ್ತಿಗೆದಾರರು ದಿನಾಂಕ: 29-04-2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ ಎಸ್-9 ಪ್ಯಾಕೇಜ್‌ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ/ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ. ಕಂಡಿಕೆ 64-ಎ ರಲ್ಲಿ ಪಾಲಿಕೆ ಉಪ ಕಾನೂನು ಅಧಿಕಾರಿ ದಿನಾಂಕ: 23-07-2011 ರ ಟೆಂಡರ್ ಪ್ರಕ್ರಿಯೆಗಳ ಬಗ್ಗೆ ಪ್ಯಾಕೇಜ್-ಎಸ್-9 ಗೆ ಕಾರ್ಯಾದೇಶ ನೀಡುವ ಬಗ್ಗೆ ಮಾನ್ಯ ಆಯುಕ್ತರವರ ಆದೇಶ ಕೋರಬಹುದಾಗಿದೆಯೆಂದು ಅಭಿಪ್ರಾಯಿಸುತ್ತಾ, ನಿಯಮಾನುಸಾರ ಕ್ರಮ ತೆಗೆದುಕೊಳ್ಳಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

S. Vasudeva Bhat

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
.ಬೆಂಗಳೂರು

ದಿನಾಂಕ: 12-03-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ: ಸಾಆಸ್ಥಾಸ/50/2011-12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ W.P. No.90-121/2012 C/w W.P. No.2/2012 and W.P. No.29-58/2012 and W.P. No.59-89/2012 ರ ಪ್ರಕರಣಗಳಲ್ಲಿ (ಎಸ್-7 ಮತ್ತು ಎಸ್-9 ಪ್ಯಾಕೇಜ್‌ಗಳನ್ನು ಹೊರತು ಪಡಿಸಿ ಉಳಿದ 89 ಪ್ಯಾಕೇಜ್‌ಗಳಿಗೆ ಸಂಬಂಧಿಸಿದಂತೆ) ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ದಿನಾಂಕ: 25-05-2012 ರ ಟಿಪ್ಪಣಿಯಂತೆ ಈ ಎಸ್-7 ಮತ್ತು ಎಸ್-9 ರ ಪ್ರಕರಣಗಳಿಗೆ ನ್ಯಾಯಾಲಯದ ಯಾವುದೇ ತಡೆಯಾಜ್ಞೆ ಇರುವುದಿಲ್ಲ (ಟೆಂಡರ್ ನಂ.15). ಹಾಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಕಡತವನ್ನು ಕಾರ್ಯಾದೇಶ ನೀಡುವ ಬಗ್ಗೆ ಮಂಡಿಸಿ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದೆಂದು ಮಾನ್ಯ ಕಾನೂನು ಕೋಶದ ಮುಖ್ಯಸ್ಥರು ಹಾಗೂ ಉಪ ಕಾನೂನು ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಗುತ್ತಿಗೆದಾರರಾದ ಶ್ರೀ.ಎಂ.ಶಿವಕುಮಾರ್ ರವರು ಪ್ರಮಾಣ ಪತ್ರವನ್ನು ಸಲ್ಲಿಸಿ ಸದರಿ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವುದನ್ನು ಪರಿಗಣಿಸಲು ಹಾಗೂ ಪ್ರಕರಣವು ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇರುವ ಕಾರಣ, ಕಾನೂನುರನ್ವಯ ಕ್ರಮ ಕೈಗೊಳ್ಳಲು ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ಟೆಂಡರ್‌ನ್ನು ಅನುಮೋದಿಸಲು ಆರೋಗ್ಯ ಸ್ಥಾಯಿ ಸಮಿತಿ, ಪಾಲಿಕೆಯ ಸಭೆ ಹಾಗೂ ಘನ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 22-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಘನ ತ್ಯಾಜ್ಯ ವಸ್ತು ವಿಲೇವಾರಿ ಮಾಡುವ ಸಂಬಂಧ ದಿನಾಂಕ: 23-09-2011 ರಂದು 2ನೇ ಬಾರಿ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದ್ದು, ಪ್ಯಾಕೇಜ್ ಸಂಖ್ಯೆ: ಎಸ್-9 ಗೆ ಶ್ರೀ.ಎಂ.ಶಿವಕುಮಾರ್ ಏಕಮಾತ್ರ ಬಿಡ್ ನಮೂದಿಸಿದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 30-11-2011 ರಂದು ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕ: 09-12-2011 ರಂದು ತೆರೆಯಲಾಗಿ ಶ್ರೀ.ಎಂ.ಶಿವಕುಮಾರ್ ರವರು ಪ್ರತಿ ಮಾಹೆ ರೂ.24,16,788/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ: 12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಲಾಗಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.23,44,285/- ಗಳಿಗೆ ಒಪ್ಪಿರುತ್ತಾರೆ.

ದಿನಾಂಕ: 12-03-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ: ಸಾಆಸ್ಥಾಸ/50/2011-12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ **W.P. No.90-121/2012 C/w W.P. No.2/2012** and **W.P. No.29-58/2012** and **W.P. No.59-89/2012** ರ ಪ್ರಕರಣಗಳಲ್ಲಿ ಮಧ್ಯಂತರ ಆದೇಶ/ತಡೆಯಾಜ್ಞೆ ನೀಡಲಾಗಿರುವುದರಿಂದ ಘನ ಉಚ್ಚ ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ಆದರೆ, ಈ ಮಧ್ಯೆ ಶ್ರೀ.ಎಂ.ಶಿವಕುಮಾರ್, ಗುತ್ತಿಗೆದಾರರು ದಿನಾಂಕ: 29-04-2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ ಎಸ್-9 ಪ್ಯಾಕೇಜ್‌ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ/ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ.

ದಿನಾಂಕ: 25-05-2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ಒಟ್ಟಾರೆ 91 ಪ್ಯಾಕೇಜ್‌ಗಳ ಪೈಕಿ ಉಳಿದಂತೆ 89 ಪ್ಯಾಕೇಜ್‌ಗಳಿಗೆ ಮಾತ್ರ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸದರಿ 89 ಪ್ಯಾಕೇಜ್‌ಗಳಿಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದು ಕಂಡು ಬರುತ್ತದೆ ಹಾಗೂ ನ್ಯಾಯಾಲಯಗಳ ಇತ್ತೀಚಿನ ಆದೇಶಗಳಂತೆ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆ. ಸದರಿ ಟೆಂಡರ್‌ನ ಗುತ್ತಿಗೆದಾರರು ಪ್ರಮಾಣಪತ್ರ ಸಲ್ಲಿಸಿ ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್-9 ಗಳಿಗೆ ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಮಾನ್ಯ ಆಯುಕ್ತರು ರವರ ಆದೇಶ ಕೋರಿ ಮುಂದಿನ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿದೆಂದು ಅಭಿಪ್ರಾಯ ನೀಡಿರುತ್ತಾರೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಆದುದರಿಂದ, ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್ 9 ಗೆ ಸಂಬಂಧಿಸಿದಂತೆ ದಿನಾಂಕ: 25-05-2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ನ್ಯಾಯಾಲಯದ ಇತ್ತೀಚಿನ ಆದೇಶದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆಂದು ಅಭಿಪ್ರಾಯ ನೀಡಿರುವ ಮೇರೆಗೆ ಶ್ರೀ.ಎಂ.ಶಿವಕುಮಾರ್, ಗುತ್ತಿಗೆದಾರರು ಪ್ಯಾಕೇಜ್ ನಂ.ಎಸ್-9 ಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಿ, ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.

## ೦8. ವಿಷಯದ ಸಂಖ್ಯೆ: ಸಾಆಸ್ಥಾಸ/18/2012-13:

ಸಂಖ್ಯೆ: ಇಇ/ಚಿಜಿ/ಇ-ಪ್ರೊಕ್/ಟಿ15/ಎಸ್9/11-12, ದಿನಾಂಕ: 22-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Solid Waste Management Services ಗೆ ದಿನಾಂಕ: 23-09-2011 ರಂದು 2ನೇ ಬಾರಿ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ ಎಸ್-7 ಗೆ ಏಕಮಾತ್ರ ಬಿಡ್ ನಮೂದಿಸಲಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 30-11-2011 ರಂದು ತೆರೆಯಲಾಗಿ ಅನುಮೋದನೆ ಪಡೆದು ಆರ್ಥಿಕ ಬಿಡ್‌ಗಳನ್ನು ದಿನಾಂಕ: 09-12-2011 ರಂದು ತೆರೆಯಲಾಗಿ ಶ್ರೀ.ಎಂ.ಎನ್.ಶ್ರೀರಾಮುಲು ರವರು ಪ್ರತಿ ಮಾಹೆ ರೂ.27,68,513/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ: 12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.26,85,457/- ಗಳಿಗೆ ಒಪ್ಪಿರುತ್ತಾರೆ. ಈ ಕೆಳಕಂಡ ಅಂಶಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಅವಗಾಹನೆಗಾಗಿ ಸಲ್ಲಿಸಿದೆ.

1. ಟೆಂಡರ್ ಪ್ರಕಟಣೆಯಲ್ಲಿ ಕರಾರಿನ ಅವಧಿಯನ್ನು 2 ವರ್ಷಗಳೆಂದು ಪರಿಗಣಿಸಲಾಗಿದೆ. ಕೆ.ಎಂ.ಸಿ. ಕಾಯ್ದೆ 1976ರ ಕಲಂ-176 ರಂತೆ ಮಾನ್ಯ ಆಯುಕ್ತರು ಎರಡು ವರ್ಷಗಳ ಕಾಲಾವಧಿಗೆ ಮೀರದಂತೆ ವಹಿಸಿಕೊಟ್ಟಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸ್ಥಾಯಿ ಸಮಿತಿಯ ಮುಂದೆ 15 ದಿನಗಳೊಳಗಾಗಿ ಅವಗಾಹನೆಗಾಗಿ ತರಬೇಕಾಗಿರುತ್ತದೆ.
2. ಎಸ್-7 ಟೆಂಡರ್ ಮೊತ್ತವು ಎರಡು ವರ್ಷಗಳಿಗೆ ರೂ.6,44,50,968/- ಗಳಾಗಿರುತ್ತದೆ. ಆದರೆ, ದಿನಾಂಕ: 25-01-2010ರ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳಂತೆ ಟೆಂಡರ್ ಮುಖಾಂತರ ವಹಿಸುವ ಕಾಮಗಾರಿಗಳ ಮೊತ್ತವು ರೂ.5.00 ಕೋಟಿಗಳಿಗೆ ಮೀರಿದರೆ ಸಂಬಂಧಪಟ್ಟ, ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆದು, ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಹಾಗೂ ಪಾಲಿಕೆಯ ಶಿಫಾರಸ್ಸಿನೊಂದಿಗೆ, ಘನ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಆದರೆ, ಈ ಮಧ್ಯೆ ಶ್ರೀ.ಎಂ.ಎನ್.ಶ್ರೀರಾಮುಲು, ಗುತ್ತಿಗೆದಾರರು ದಿನಾಂಕ: 29-04-2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ ಎಸ್-7 ಪ್ಯಾಕೇಜ್‌ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ/ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ. ಕಂಡಿಕೆ 63-ಎ ರಲ್ಲಿ ಪಾಲಿಕೆ ಉಪ ಕಾನೂನು ಅಧಿಕಾರಿ ದಿನಾಂಕ: 23-07-2011 ರ ಟೆಂಡರ್ ಪ್ರಕ್ರಿಯೆಗಳ ಬಗ್ಗೆ ಪ್ಯಾಕೇಜ್-ಎಸ್-7 ಗೆ ಕಾರ್ಯಾದೇಶ ನೀಡುವ ಬಗ್ಗೆ ಮಾನ್ಯ ಆಯುಕ್ತರವರ ಆದೇಶ ಕೋರಬಹುದಾಗಿದೆಯೆಂದು ಅಭಿಪ್ರಾಯಿಸುತ್ತಾ, ನಿಯಮಾನುಸಾರ ಕ್ರಮ ತೆಗೆದುಕೊಳ್ಳಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ದಿನಾಂಕ: 12-03-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ: ಸಾಆಸ್ಥಾಸ/51/2011-12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ W.P. No.90-121/2012 C/w W.P. No.2/2012 and W.P. No.29-58/2012 and W.P. No.59-89/2012 ರ ಪ್ರಕರಣಗಳಲ್ಲಿ (ಎಸ್-7 ಮತ್ತು ಎಸ್-9 ಪ್ಯಾಕೇಜ್‌ಗಳನ್ನು ಹೊರತು ಪಡಿಸಿ ಉಳಿದ 89 ಪ್ಯಾಕೇಜ್‌ಗಳಿಗೆ ಸಂಬಂಧಿಸಿದಂತೆ) ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ದಿನಾಂಕ: 25-05-2012 ರ ಟಿಪ್ಪಣಿಯಂತೆ ಈ ಎಸ್-7 ಮತ್ತು ಎಸ್-9 ರ ಪ್ರಕರಣಗಳಿಗೆ ನ್ಯಾಯಾಲಯದ ಯಾವುದೇ ತಡೆಯಾಜ್ಞೆ ಇರುವುದಿಲ್ಲ (ಟೆಂಡರ್ ನಂ.15). ಹಾಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಕಡತವನ್ನು ಕಾರ್ಯಾದೇಶ ನೀಡುವ ಬಗ್ಗೆ ಮಂಡಿಸಿ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದೆಂದು ಮಾನ್ಯ ಕಾನೂನು ಕೋಶದ ಮುಖ್ಯಸ್ಥರು ಹಾಗೂ ಉಪ ಕಾನೂನು ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಗುತ್ತಿಗೆದಾರರಾದ ಶ್ರೀ.ಎಂ.ಎನ್.ಶ್ರೀರಾಮುಲು ರವರು ಪ್ರಮಾಣ ಪತ್ರವನ್ನು ಸಲ್ಲಿಸಿ ಸದರಿ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವುದನ್ನು ಪರಿಗಣಿಸಲು ಹಾಗೂ ಪ್ರಕರಣವು ಇನ್ನೂ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇರುವ ಕಾರಣ, ಕಾನೂನುರನ್ವಯ ಕ್ರಮ ಕೈಗೊಳ್ಳಲು ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ಟೆಂಡರ್‌ನ್ನು ಅನುಮೋದಿಸಲು ಆರೋಗ್ಯ ಸ್ಥಾಯಿ ಸಮಿತಿ, ಪಾಲಿಕೆಯ ಸಭೆ ಹಾಗೂ ಘನ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

## ನಿರ್ಣಯ:

ದಿನಾಂಕ: 22-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಘನ ತ್ಯಾಜ್ಯ ವಸ್ತು ವಿಲೇವಾರಿ ಮಾಡುವ ಸಂಬಂಧ ದಿನಾಂಕ: 23-09-2011 ರಂದು 2ನೇ ಬಾರಿ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದ್ದು, ಪ್ಯಾಕೇಜ್ ಸಂಖ್ಯೆ: ಎಸ್-7 ಗೆ ಶ್ರೀ.ಎಂ.ಎನ್.ಶ್ರೀರಾಮುಲು ಏಕಮಾತ್ರ ಬಿಡ್ ನಮೂದಿಸಿದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 30-11-2011 ರಂದು ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕ: 09-12-2011 ರಂದು ತೆರೆಯಲಾಗಿ ಶ್ರೀ.ಎಂ.ಎನ್.ಶ್ರೀರಾಮುಲು ರವರು ಪ್ರತಿ ಮಾಹೆ ರೂ.27,68,513/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ: 12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಲಾಗಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.26,85,457/- ಗಳಿಗೆ ಒಪ್ಪಿರುತ್ತಾರೆ.

ದಿನಾಂಕ: 12-03-2012 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಡವಳಿ ವಿಷಯದ ಸಂಖ್ಯೆ: ಸಾಆಸ್ಥಾಸ/51/2011-12 ರಲ್ಲಿ ನಿರ್ಣಯಿಸಿದಂತೆ ಘನ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ **W.P. No.90-121/2012 C/w W.P. No.2/2012 and W.P. No.29-58/2012 and W.P. No.59-89/2012** ರ ಪ್ರಕರಣಗಳಲ್ಲಿ ಮಧ್ಯಂತರ ಆದೇಶ/ತಡೆಯಾಜ್ಞೆ ನೀಡಲಾಗಿರುವುದರಿಂದ ಘನ ಉಚ್ಛ ನ್ಯಾಯಾಲಯದ ತೀರ್ಪಿನ ನಂತರ ಮರು ಮಂಡಿಸಲು ತೀರ್ಮಾನಿಸಲಾಗಿದೆ.

ಆದರೆ, ಈ ಮಧ್ಯೆ ಶ್ರೀ.ಎಂ.ಎನ್.ಶ್ರೀರಾಮುಲು, ಗುತ್ತಿಗೆದಾರರು ದಿನಾಂಕ: 29-04-2012 ರಂದು ಮಾನ್ಯ ಆಯುಕ್ತರವರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ ಎಸ್-7 ಪ್ಯಾಕೇಜ್‌ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದಿಲ್ಲವೆಂದು ಪ್ರಮಾಣೀಕರಿಸಿ ಕಾರ್ಯಾದೇಶ ನೀಡಲು ಕೋರಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿನ ಆದೇಶದಂತೆ ಕಾರ್ಯಾದೇಶವನ್ನು ಹಿಂಪಡೆಯುವ/ರದ್ದುಗೊಳಿಸುವ ಷರತ್ತನ್ನು ಒಪ್ಪಿಕೊಂಡಿರುತ್ತಾರೆ.

ದಿನಾಂಕ: 25-05-2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ಒಟ್ಟಾರೆ 91 ಪ್ಯಾಕೇಜ್‌ಗಳ ಪೈಕಿ ಉಳಿದಂತೆ 89 ಪ್ಯಾಕೇಜ್‌ಗಳಿಗೆ ಮಾತ್ರ ಹೊಸದಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸದರಿ 89 ಪ್ಯಾಕೇಜ್‌ಗಳಿಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದು ಕಂಡು ಬರುತ್ತದೆ ಹಾಗೂ ನ್ಯಾಯಾಲಯಗಳ ಇತ್ತೀಚಿನ ಆದೇಶಗಳಂತೆ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆ. ಸದರಿ ಟೆಂಡರ್‌ನ ಗುತ್ತಿಗೆದಾರರು ಪ್ರಮಾಣಪತ್ರ ಸಲ್ಲಿಸಿ ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್-7 ಗಳಿಗೆ ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಮಾನ್ಯ ಆಯುಕ್ತರು ರವರ ಆದೇಶ ಕೋರಿ ಮುಂದಿನ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದುದರಿಂದ, ಟೆಂಡರ್ ನಂ.15, ಪ್ಯಾಕೇಜ್ ನಂ.ಎಸ್-7 ಗೆ ಸಂಬಂಧಿಸಿದಂತೆ ದಿನಾಂಕ: 25-05-2012 ರಂದು ಉಪ ಕಾನೂನು ಅಧಿಕಾರಿ ಹಾಗೂ ಕಾನೂನು ಕೋಶದ ಮುಖ್ಯಸ್ಥರು ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಿಂದ ಯಾವುದೇ ತಡೆಯಾಜ್ಞೆ ಇರುವುದು ಕಂಡು ಬಂದಿರುವುದಿಲ್ಲ. ನ್ಯಾಯಾಲಯದ ಇತ್ತೀಚಿನ ಆದೇಶದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ಸೂಚಿಸಿ ಯಾವುದೇ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಮಾನ್ಯ ನ್ಯಾಯಾಲಯಕ್ಕೆ ಮಾಹಿತಿಗಳನ್ನು ಸಲ್ಲಿಸುವಂತೆ ಆದೇಶಿಸಿರುವುದು ಕಂಡು ಬರುತ್ತದೆಂದು ಅಭಿಪ್ರಾಯ ನೀಡಿರುವ ಮೇರೆಗೆ ಶ್ರೀ.ಎಂ.ಎನ್.ಶ್ರೀರಾಮುಲು, ಗುತ್ತಿಗೆದಾರರು ಪ್ಯಾಕೇಜ್ ನಂ.ಎಸ್-7 ಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಿ, ಕಾರ್ಯಾದೇಶ ನೀಡಲು ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ಆದೇಶಗಳಿಗೆ ಬದ್ಧರಾಗಿರುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.

S. Venkatesh Bl

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

## ೦೨. ವಿಷಯದ ಸಂಖ್ಯೆ: ಸಾಆಸ್ಥಾಸ/19/2012-13:

ಸಂಖ್ಯೆ: ಅಆ(ಯೋ)/ಪಿಆರ್/3461/2012-13, ದಿನಾಂಕ: 22-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಭಾರತದ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಮತ್ತು ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ರಂತೆ ಘನತ್ಯಾಜ್ಯವನ್ನು ಸಂಸ್ಕರಿಸಿ ವೈಜ್ಞಾನಿಕವಾಗಿ ಮತ್ತು ಸುರಕ್ಷಿತವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಲಿಮಿಟೆಡ್ ರವರೊಡನೆ ಘನತ್ಯಾಜ್ಯ ಸಂಸ್ಕರಿಸಲು ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದ ಪ್ರಕಾರ ಪಾಲಿಕೆಯು ಪ್ರತಿದಿನ 1000 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸದರಿ ಸಂಸ್ಥೆಗೆ ಸರಬರಾಜು ಮಾಡಬೇಕಾಗಿರುತ್ತದೆ. ಜುಲೈ-2008ರಲ್ಲಿ ಸದರಿ ಘಟಕಕ್ಕೆ ಘನತ್ಯಾಜ್ಯ ಸರಬರಾಜನ್ನು ಗುತ್ತಿಗೆದಾರರು ಹಾಗೂ ಪಾಲಿಕೆ ವಾಹನಗಳ ಮೂಲಕ ಪ್ರಾರಂಭಿಸಲಾಯಿತು. ಆದರೆ ಸುಮಾರು ಒಂದು ತಿಂಗಳ ನಂತರ ಘನತ್ಯಾಜ್ಯ ವಸ್ತುಗಳನ್ನು ಸಾಗಾಣಿಕೆ ಮಾಡುವ ವಾಹನ ಮತ್ತು ಸಿಬ್ಬಂದಿಯ ಮೇಲೆ ಸ್ಥಳೀಯರು ಹಲ್ಲೆ ನಡೆಸಿ, ಅಡ್ಡಿ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿ, ಘನತ್ಯಾಜ್ಯ ಸೇವಾ ಗುತ್ತಿಗೆದಾರರು ಘನತ್ಯಾಜ್ಯ ಸರಬರಾಜನ್ನು ಸ್ಥಗಿತಗೊಳಿಸಿದರು, ಈ ಸಮಸ್ಯೆಯನ್ನು ಬಗೆಹರಿಸಲು ಪೋಲಿಸರ ನೆರವನ್ನು ಪಡೆದರೂ ಸಹ ಘನತ್ಯಾಜ್ಯ ಸರಬರಾಜನ್ನು ಮುಂದುವರೆಸಲು ಸಾಧ್ಯವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಮಂಡೂರು ಸರ್ವೆ ನಂ.155 ರ ಉತ್ತರಭಾಗದಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ನ್ನು ನಿರ್ಮಿಸಿ, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಿ ಹೀಗೆ ಶೇಖರಣೆಯಾದ ಘನತ್ಯಾಜ್ಯವನ್ನು 10 ಗಾಲಿಗಳ ಟ್ರಕ್‌ಗಳ ಮುಖಾಂತರ ರಾತ್ರಿ ವೇಳೆಯಲ್ಲಿ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು ಯೋಜನೆ ರೂಪಿಸಲಾಯಿತು.

10 ಗಾಲಿ ಟ್ರಕ್ಕುಗಳ ಸಾಗಾಣಿಕೆ ಸಾಮರ್ಥ್ಯ ಹೆಚ್ಚಾಗಿರುವುದರಿಂದ, ಟ್ರಕ್ಕುಗಳನ್ನು ಟಾರ್ಪಾಲ್‌ನಿಂದ ಮುಚ್ಚಿ ರಾತ್ರಿ ವೇಳೆಯಲ್ಲಿ ಘನತ್ಯಾಜ್ಯ ಸಾಗಿಸುವುದರಿಂದ, ಟೆರ್ರಾಫರ್ಮಗೆ ಹೋಗುವ ಟ್ರಕ್ಕುಗಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗುತ್ತದೆ. ಹಾಗೂ ಸಾರ್ವಜನಿಕರಿಗೂ ಯಾವುದೇ ತೊಂದರೆಯಾಗದ ಹಾಗೆ ಆಗುತ್ತದೆ. ಈ ರೀತಿ ಘನತ್ಯಾಜ್ಯವನ್ನು 10 ಗಾಲಿ ಟ್ರಕ್ಕುಗಳ ಮುಖಾಂತರ ಮೆ॥ಟೆರ್ರಾಫರ್ಮಾ ಸಂಸ್ಥೆಗೆ ಸಾಗಿಸಲು ಆಹ್ವಾನಿಸಲಾಗಿದ್ದ 2011-12ನೇ ಸಾಲಿನ ಟೆಂಡರ್ ಮುಕ್ತಾಯಗೊಂಡಿರುತ್ತದೆ.

2012-13ನೇ ಸಾಲಿಗೆ ಘನತ್ಯಾಜ್ಯ ಸಾಗಾಣಿಕೆಗಾಗಿ ಟೆಂಡರ್ ಆಹ್ವಾನಿಸುವ ಸಲುವಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಸಭೆಯ ವಿಷಯ ಸಂ.ಸಾಆಸ್ಥಾಸ/9/11-12, ದಿನಾಂಕ: 11-07-2011 ರಲ್ಲಿ ಹಾಗೂ ಪಾಲಿಕೆ ಸಭೆಯ ವಿಷಯ ಸಂ.34(153)2011-12, ದಿನಾಂಕ: 07-06-2011 ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ಅದರಂತೆ, ಪೂರ್ವ ವಲಯದಿಂದ ಮೆ॥ಟೆರ್ರಾಫರ್ಮಾ ಸಂಸ್ಥೆಗೆ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡುವ ಕಾಮಗಾರಿಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯ ಅಲ್ಪಾವಧಿ ಟೆಂಡರ್ ಅನ್ನು ಅಧಿಸೂಚನೆ ಸಂ.EE-2(SWM)/Tend/01/12-13, ದಿನಾಂಕ: 27-04-2012 ರಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿರುತ್ತವೆ.

1. ಅಂದಾಜು ಮೊತ್ತ ರೂ.236,44,000.00.
2. ಆಡಳಿತಾತ್ಮಕ ಅನುಮೋದನೆ ಸಂಖ್ಯೆ: ಮು.ಅ/ಘ.ತ್ಯಾ.ನಿ./ಆ.ಅ./33/2012-13, ದಿನಾಂಕ: 20-04-2012.
3. ತಾಂತ್ರಿಕ ಮಂಜೂರಾತಿ ಸಂಖ್ಯೆ: ಮು.ಅ./ಘ.ತ್ಯಾ.ನಿ./ತಾಂ.ಮಂ/30/2012-13, ದಿನಾಂಕ: 20-04-2012.
4. ಇ.ಎಂ.ಡಿ. ಮೊತ್ತ ರೂ.3,60,000.00.
5. ಪ್ರಕಟಣೆ ದಿನಾಂಕ: 27-04-2012.
6. ಟೆಂಡರ್ ದಾಖಲೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಪಡೆಯಬಹುದಾದ ದಿನಾಂಕ: 30-04-2012 ಸಂಜೆ: 4.00 ಗಂಟೆಯಿಂದ.
7. ಬಿಡ್ಡುದಾರರು Pre bid queries ಅನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಾಖಲಿಸಲು ಕೊನೆಯ ದಿನಾಂಕ: 10-05-2012 ಸಾಯಂಕಾಲ 4.00 ಗಂಟೆವರೆಗೆ.
8. ಬಿಡ್ಡುದಾರರ Pre bid queries ಗೆ ಉತ್ತರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಾಖಲಿಸಿದ ದಿನಾಂಕ: 15-05-2012.
9. ಟೆಂಡರ್ ಅನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಾಖಲಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕ: 30-05-2012 ಸಾಯಂಕಾಲ: 4.00 ಗಂಟೆವರೆಗೆ.

ಮೇಲೆ ವಿವರಿಸಿರುವಂತೆ ಸದರಿ ಟೆಂಡರ್‌ಅನ್ನು ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆಯಲ್ಲಿ ಮತ್ತು ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನ ಪತ್ರಿಕೆಯಲ್ಲಿ ದಿನಾಂಕ: 28-04-2012 ರಂದು ಪ್ರಕಟ ಪಡಿಸಲಾಗಿರುತ್ತದೆ. ಕಡತದಲ್ಲಿ ಲಗತ್ತಿಸಿರುವಂತೆ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಮತ್ತು ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಕ್ರಮವಹಿಸಲಾಗಿರುತ್ತದೆ.

S. Vasanth B.L.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಕಾಮಗಾರಿಯ ಅಲ್ಪಾವಧಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ: 02-06-2012 ರಲ್ಲಿ ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಕೆಳಗಿನ ಇಬ್ಬರು ಬಿಡ್ಡುದಾರರು ಭಾಗವಹಿಸಿರುತ್ತಾರೆ.

1. ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್.
2. ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್.

ಮೇಲಿನ ಇಬ್ಬರು ಬಿಡ್ಡುದಾರರು ಟೆಂಡರ್‌ಗೆ ನಿಗದಿಪಡಿಸಿರುವ ಅರ್ಹತಾ ನಿಬಂಧನೆಗಳಿಗೆ ಸಂಬಂಧಿಸಿದಂತೆ, ಒದಗಿಸಿರುವ ಮಾಹಿತಿ, ದಾಖಲಾತಿಗಳು ಇತ್ಯಾದಿಗಳನ್ನು ಪರಿಶೀಲಿಸಲಾಗಿದ್ದು, ಈ ಕೆಳಗಿನ ಅಂಶಗಳು ಕಂಡು ಬಂದಿರುತ್ತವೆ.

1. <u>ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರ ಬಿಡ್ಡಿನ ತಾಂತ್ರಿಕ ಮೌಲ್ಯಮಾಪನ:</u>

ಸದರಿ ಸಂಸ್ಥೆಯು ನಿಗದಿತ ಇ.ಎಂ.ಡಿ. ಸಲ್ಲಿಸಿದ್ದು, ವಿಳಾಸ ಇತ್ಯಾದಿಗಳ ವಿವರಗಳನ್ನು ಕ್ರಮಬದ್ಧವಾಗಿ ಒದಗಿಸಿರುತ್ತಾರೆ.

<u>ಮುಖ್ಯ ಷರತ್ತುಗಳಾದ:</u>

(ಎ) 2009-10, 2010-11 ಮತ್ತು 2011-12ರಲ್ಲಿ ಪ್ರತಿ ವರ್ಷ ಕನಿಷ್ಠ 80000 ಮೆಟ್ರಿಕ್ ಟನ್ ಘನತ್ಯಾಜ್ಯ ಸಾಗಾಣಿಕೆಯನ್ನು ನಿರ್ವಹಿಸಿರುವುದಾಗಿ, Chartered Account ರವರಿಂದ ದೃಢೀಕರಣವನ್ನು ಪಡೆದು ಲಗತ್ತಿಸಿರುತ್ತಾರೆ.

(ಬಿ) ಘನತ್ಯಾಜ್ಯ ಸಾಗಾಣಿಕೆ ಕ್ಷೇತ್ರದಲ್ಲಿ ಅನುಭವ ವಿರುವ ಬಗ್ಗೆ Chartered Account ರವರಿಂದ ದೃಢೀಕರಣವನ್ನು ಪಡೆದು ಲಗತ್ತಿಸಿರುತ್ತಾರೆ. ಆದರೆ ಯಾವುದೇ Employer ರವರಿಂದ ಮೇಲಿನಂತೆ ಘನತ್ಯಾಜ್ಯ ಸಾಗಾಣಿಕೆ ಮಾಡಿರುವ ಬಗ್ಗೆ ಹಾಗೂ ಅನುಭವದ ಬಗ್ಗೆ ದೃಢೀಕರಣ ಪಡೆದಿರುವುದಿಲ್ಲ.

(ಸಿ) ಸದರಿ ಘನತ್ಯಾಜ್ಯ ಸಾಗಾಣಿಕೆಗೆ ಅವಶ್ಯಕವಾಗಿರುವ Hydraulic excavator, Front end loader ಮತ್ತು 10 Wheeler Trucks ಹೊಂದಿರುವ ಬಗ್ಗೆ, Hydraulic excavator ಮಾತ್ರ ಸದರಿ ಸಂಸ್ಥೆ ಹೆಸರಿನಲ್ಲಿದ್ದು ಉಳಿಕೆ Front end loader ಮತ್ತು 10 ಗಾಲಿಗಳ ಟ್ರಕ್‌ಗಳು ಕಂಪೆನಿ ಅಥವಾ ಮಾಲೀಕರ ಹೆಸರಿನಲ್ಲಿರುವುದಿಲ್ಲ.

2. <u>ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರ ಬಿಡ್ಡಿನ ತಾಂತ್ರಿಕ ಮೌಲ್ಯಮಾಪನ:</u>

ಸದರಿ ಸಂಸ್ಥೆಯು ನಿಗದಿತ ಇ.ಎಂ.ಡಿ. ಸಲ್ಲಿಸಿದ್ದು, ವಿಳಾಸ ಇತ್ಯಾದಿಗಳ ವಿವರಗಳನ್ನು ಕ್ರಮಬದ್ಧವಾಗಿ ಒದಗಿಸಿರುತ್ತಾರೆ.

<u>ಮುಖ್ಯ ಷರತ್ತುಗಳಾದ:</u>

(ಎ) 2009-10, 2010-11 ಮತ್ತು 2011-12ನ ಮೂರು ವರ್ಷದ ಅವಧಿಯಲ್ಲಿ ಒಟ್ಟು 4,07,664 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು 10 Wheeler Trucks ಮೂಲಕ ಸಾಗಾಣಿಕೆ ಮಾಡಲಾಗಿದ್ದು, ಈ ಬಗ್ಗೆ Employer ರವರಿಂದ ದೃಢೀಕರಣ ಪತ್ರ ಪಡೆದು ಲಗತ್ತಿಸಿರುತ್ತಾರೆ.

(ಬಿ) ಘನತ್ಯಾಜ್ಯ ಸಾಗಾಣಿಕೆ ಕ್ಷೇತ್ರದಲ್ಲಿ ಅನುಭವ ವಿರುವ ಬಗ್ಗೆ ದೃಢೀಕರಣವನ್ನು ಸಂಬಂಧಿಸಿದ Employer ರವರಿಂದ ಪಡೆದಿರುತ್ತಾರೆ.

(ಸಿ) ಸದರಿ ಘನತ್ಯಾಜ್ಯ ಸಾಗಾಣಿಕೆಗೆ ಅವಶ್ಯಕವಾಗಿರುವ Hydraulic excavator, Front end loader ಮತ್ತು 10 Wheeler Trucks ಅನ್ನು ಹೊಂದಿರುವ ಬಗ್ಗೆ ಅವಶ್ಯ ದಾಖಲೆಗಳನ್ನು ಲಗತ್ತಿಸಿರುತ್ತಾರೆ. ಸದರಿ ಸಂಸ್ಥೆಯವರು 2 Hydraulic excavator, 1 Front end loader ಮತ್ತು 20 ಸಂಖ್ಯೆ 10 Wheeler Trucks ಅನ್ನು ಹೊಂದಿರುತ್ತಾರೆ. ಈ ವಾಹನಗಳಲ್ಲಿ ಈ ಹಿಂದಿನ 2009-10, 2010-11 & 2011-12 ರಲ್ಲಿ ಘನತ್ಯಾಜ್ಯ ಸಾಗಾಣಿಕೆಯನ್ನು ಸಮರ್ಪಕವಾಗಿ ನಿರ್ವಹಿಸಿರುತ್ತಾರೆ.

ಮೇಲಿನ ದಾಖಲೆಗಳನ್ನು ಪರಿಶೀಲಿಸಿ ತುಲನೆ ಮಾಡಿದಾಗ ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು 2009-10, 2010-11 & 2011-12 ರಲ್ಲಿ ಪ್ರತಿ ವರ್ಷ 80000 ಮೆಟ್ರಿಕ್ ಟನ್ ಘನತ್ಯಾಜ್ಯ ಸಾಗಾಣಿಕೆ ಮಾಡಿರುವ ಬಗ್ಗೆ

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸೂಕ್ತ ದಾಖಲೆಗಳು ಒದಗಿಸಿಲ್ಲವಾದ್ದರಿಂದ ಮತ್ತು ಸದರಿ ಸಂಸ್ಥೆಯು ಸ್ವಂತ 10 Wheeler Trucks ಹೊಂದಿರುವುದಿಲ್ಲವಾದ್ದರಿಂದ ಟೆಂಡರ್‌ಗೆ ಅವಶ್ಯವಾಗಿರುವ ಮುಖ್ಯ ಷರತ್ತುಗಳನ್ನು ಪೂರೈಸುವಲ್ಲಿ ವಿಫಲರಾಗಿರುವುದು ಕಂಡು ಬಂದಿರುತ್ತದೆ.

ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು 2009-10, 2010-11 & 2011-12ರ ಅವಧಿಯಲ್ಲಿ ಒಟ್ಟು 4,07,664 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಮರ್ಪಕವಾಗಿ ಸಾಗಾಣಿಕೆ ಮಾಡಿರುವ ಅನುಭವ ಹೊಂದಿದ್ದು, ಸದರಿ ಸಂಸ್ಥೆಯಲ್ಲಿ 20 ಸಂಖ್ಯೆ 10 Wheeler Trucks ಗಳನ್ನು ಸ್ವತಃ ಹೊಂದಿರುವ ಮತ್ತು ಇತರೆ ಷರತ್ತುಗಳನ್ನು ಪೂರೈಸಿರುವುದರಿಂದ ಇವರು ಟೆಂಡರ್‌ನ ಷರತ್ತುಗಳನ್ನು ಪೂರೈಸಿರುತ್ತಾರೆ.

ಮೇಲಿನ ಹಿನ್ನೆಲೆಯಲ್ಲಿ ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡಿನಲ್ಲಿ ವಿಫಲರಾಗಿರುತ್ತಾರೆ ಮತ್ತು ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಷರತ್ತುಗಳನ್ನು ಪೂರೈಸಿ ತಾಂತ್ರಿಕ ಬಿಡ್ಡು ಪೂರೈಸುವಲ್ಲಿ ಸಫಲರಾಗಿರುತ್ತಾರೆ.

ಆದುದರಿಂದ, ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಆರ್ಥಿಕ ಬಿಡ್ಡನ್ನು ತಿರಸ್ಕರಿಸಲು ಮತ್ತು ತಾಂತ್ರಿಕ ಷರತ್ತುಗಳನ್ನು ಪೂರೈಸಿರುವ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರ ಆರ್ಥಿಕ ಬಿಡ್ಡನ್ನು ಮಾತ್ರ ತೆರೆಯಲು ತೀರ್ಮಾನಿಸಿ, ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರ ಆರ್ಥಿಕ ಬಿಡ್ಡನ್ನು ದಿನಾಂಕ: 05-06-2012 ರಂದು ತೆರೆಯಲಾಗಿರುತ್ತದೆ.

ಸದರಿ ಆರ್ಥಿಕ ಬಿಡ್ಡಿನ ದರಗಳನ್ನು ಮಂಜೂರಾದ ಅಂದಾಜು ಪಟ್ಟಿಗೆ ಹೋಲಿಸಿರುವ ತುಲನಾತ್ಮಕ ಪಟ್ಟಿಯ ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| 1 | ಮಂಜೂರಾದ ಅಂದಾಜು ಪಟ್ಟಿಯಂತೆ ಮೊತ್ತ | ರೂ.236,23,634.00 |
| 2 | ಬಿಡ್ಡುದಾರರು ನಮೂದಿಸಿರುವ ಮೊತ್ತ | ರೂ.270,98,952.00 |
| 3 | ಬಿಡ್ಡುದಾರರು ನಮೂದಿಸಿರುವ ದರವನ್ನು ಮಂಜೂರಾದ ಅಂದಾಜು ಪಟ್ಟಿ ಮೊತ್ತಕ್ಕೆ ಹೋಲಿಸಿದ್ದಲ್ಲಿ ಶೇಕಡವಾರು ಹೆಚ್ಚು / ಕಡಿಮೆ | **ಶೇ.14.71 ಹೆಚ್ಚು** |

ಮೇಲಿನ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಲಾಗಿ ಬಿಡ್ಡುದಾರರಾದ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ನಮೂದಿಸಿರುವ ದರಗಳ ಮೊತ್ತವು ರೂ.270,98,952.00 ಆಗಿದ್ದು, ಅನುಮೋದಿತ ಅಂದಾಜು ಪಟ್ಟಿ ದರಗಳ ಮೊತ್ತ ರೂ.236,23,634.00 ಗಳಿಗೆ ಹೋಲಿಸಿದಾಗ ಶೇ.14.71 ರಷ್ಟು ಹೆಚ್ಚಾಗಿರುತ್ತದೆ.

ದರಗಳು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ದಿನಾಂಕ: 06-06-2012 ರಲ್ಲಿ ಆಹ್ವಾನಿಸಲಾಗಿದ್ದ ದರ ಸಂಧಾನಕ್ಕೆ ಸ್ಪಂದಿಸಿ, ಸದರಿ ಬಿಡ್ಡುದಾರರಾದ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ಈ ಹಿಂದೆ ನಮೂದಿಸಿದ್ದ ದರಗಳನ್ನು ಕಡಿಮೆ ಮಾಡಿ ದಿನಾಂಕ: 11-06-2012 ರಲ್ಲಿ ದರಸಂಧಾನ ಪತ್ರ ನೀಡಿದ್ದು, ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| 1 | ಮಂಜೂರಾದ ಅಂದಾಜು ಪಟ್ಟಿಯಂತೆ ಮೊತ್ತ (2011-12ನೇ ಸಾಲಿನ ದರಪಟ್ಟಿ ಆಧಾರಿತ) | ರೂ.236,23,634.00 |
| 2 | ಬಿಡ್ಡುದಾರರು ಈ ಹಿಂದೆ ನಮೂದಿಸಿದ್ದ ಮೊತ್ತ ಮತ್ತು ಶೇಕಡ ಹೆಚ್ಚು / ಕಡಿಮೆ | ರೂ.270,98,952.00 |
| 3 | **ದರ ಸಂಧಾನದ ನಂತರ** ಕಡಿಮೆಗೊಳಿಸಿರುವ ಮೊತ್ತ ಮತ್ತು ಶೇಕಡ ಹೆಚ್ಚು / ಕಡಿಮೆ | **ರೂ.263,32,060.00**<br>**ಶೇ.11.46 ಹೆಚ್ಚು** |

ಆದುದರಿಂದ **ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್** ಬಿಡ್ಡುದಾರರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.263,32,060.00 (ಎರಡು ಕೋಟಿ ಅರವತ್ತುಮೂರು ಲಕ್ಷದ ಮೂವತ್ತೆರಡು ಸಾವಿರದ ಅರವತ್ತು ರೂಪಾಯಿಗಳು ಮಾತ್ರ) ಗಳ, ಮಂಜೂರಾದ ಅಂದಾಜುಪಟ್ಟಿಗೆ ಹೋಲಿಸಿದಲ್ಲಿ **ಶೇ.11.46 ರಷ್ಟು ಹೆಚ್ಚಾಗಿರುವ** ದರಗಳ ಟೆಂಡರ್‌ಅನ್ನು ಅನುಮೋದಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

S. Vasanth Bala

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

**ನಿರ್ಣಯ:**

ದಿನಾಂಕ: 22-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಭಾರತದ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಮತ್ತು ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ರಂತೆ ಘನತ್ಯಾಜ್ಯವನ್ನು ಸಂಸ್ಕರಿಸಿ ವೈಜ್ಞಾನಿಕವಾಗಿ ಮತ್ತು ಸುರಕ್ಷಿತವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಲಿಮಿಟೆಡ್ ರವರೊಡನೆ ಘನತ್ಯಾಜ್ಯ ಸಂಸ್ಕರಿಸಲು ಒಪ್ಪಂದ ಮಾಡಿಕೊಂಡಿದೆ. ಘನತ್ಯಾಜ್ಯವನ್ನು 10 ಗಾಲಿಗಳ ಟ್ರಕ್‌ಗಳ ಮುಖಾಂತರ ರಾತ್ರಿ ವೇಳೆಯಲ್ಲಿ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು ಯೋಜನೆ ರೂಪಿಸಲಾಯಿತು. ಅದರಂತೆ, ಪೂರ್ವ ವಲಯದಿಂದ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡುವ ಕಾಮಗಾರಿಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯ ಅಲ್ಪಾವಧಿ ಟೆಂಡರ್ ಅನ್ನು ಅಧಿಸೂಚನೆ ಸಂ.EE-2(SWM)/Tend/01/12-13, ದಿನಾಂಕ: 27-04-2012 ರಲ್ಲಿ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ಅಲ್ಪಾವಧಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ: 02-06-2012 ರಲ್ಲಿ ತೆರೆಯಲಾಗಿದ್ದು, ಈ ಟೆಂಡರ್‌ನಲ್ಲಿ (1) ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ಭಾಗವಹಿಸಿರುತ್ತಾರೆ.

ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡಿನಲ್ಲಿ ವಿಫಲರಾಗಿರುತ್ತಾರೆ ಮತ್ತು ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಷರತ್ತುಗಳನ್ನು ಪೂರೈಸಿ ತಾಂತ್ರಿಕ ಬಿಡ್ಡು ಪೂರೈಸುವಲ್ಲಿ ಸಫಲರಾಗಿರುತ್ತಾರೆ. ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಲಾಗಿ ಬಿಡ್ಡುದಾರರಾದ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ನಮೂದಿಸಿರುವ ದರಗಳ ಮೊತ್ತವು ರೂ.270,98,952.00 ಆಗಿದ್ದು, ಅನುಮೋದಿತ ಅಂದಾಜು ಪಟ್ಟಿ ದರಗಳ ಮೊತ್ತ ರೂ.236,23,634.00 ಗಳಿಗೆ ಹೋಲಿಸಿದಾಗ ಶೇ.14.71 ರಷ್ಟು ಹೆಚ್ಚಾಗಿದ್ದು, ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.263,32,060.00 (ಎರಡು ಕೋಟಿ ಅರವತ್ತುಮೂರು ಲಕ್ಷದ ಮೂವತ್ತೆರೆಡು ಸಾವಿರದ ಅರವತ್ತು ರೂಪಾಯಿಗಳು ಮಾತ್ರ) ಗಳ, ಮಂಜೂರಾದ ಅಂದಾಜುಪಟ್ಟಿಗೆ ಹೋಲಿಸಿದಲ್ಲಿ ಶೇ.11.46 ರಷ್ಟು ಹೆಚ್ಚಾಗಿರುತ್ತದೆ. ಆದುದರಿಂದ, ಸದರಿ ಟೆಂಡರ್‌ಗೆ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.

## 10. ವಿಷಯದ ಸಂಖ್ಯೆ: ಸಾಆಸ್ಥಾಸ/20/2012-13:

ಸಂಖ್ಯೆ: ಅಆ(ಯೋ)/ಪಿಆರ್/3462/2012-13, ದಿನಾಂಕ: 22-06-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಭಾರತದ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಮತ್ತು ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ರಂತೆ ಘನತ್ಯಾಜ್ಯವನ್ನು ಸಂಸ್ಕರಿಸಿ ವೈಜ್ಞಾನಿಕವಾಗಿ ಮತ್ತು ಸುರಕ್ಷಿತವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಲಿಮಿಟೆಡ್ ರವರೊಡನೆ ಘನತ್ಯಾಜ್ಯ ಸಂಸ್ಕರಿಸಲು ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದ ಪ್ರಕಾರ ಪಾಲಿಕೆಯು ಪ್ರತಿದಿನ 1000 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸದರಿ ಸಂಸ್ಥೆಗೆ ಸರಬರಾಜು ಮಾಡಬೇಕಾಗಿರುತ್ತದೆ. ಜುಲೈ-2008ರಲ್ಲಿ ಸದರಿ ಘಟಕಕ್ಕೆ ಘನತ್ಯಾಜ್ಯ ಸರಬರಾಜನ್ನು ಗುತ್ತಿಗೆದಾರರು ಹಾಗೂ ಪಾಲಿಕೆ ವಾಹನಗಳ ಮೂಲಕ ಪ್ರಾರಂಭಿಸಲಾಯಿತು. ಆದರೆ ಸುಮಾರು ಒಂದು ತಿಂಗಳ ನಂತರ ಘನತ್ಯಾಜ್ಯ ವಸ್ತುಗಳನ್ನು ಸಾಗಾಣಿಕೆ ಮಾಡುವ ವಾಹನ ಮತ್ತು ಸಿಬ್ಬಂದಿಯ ಮೇಲೆ ಸ್ಥಳೀಯರು ಹಲ್ಲೆ ನಡೆಸಿ, ಅಡ್ಡಿ ಉಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿ, ಘನತ್ಯಾಜ್ಯ ಸೇವಾ ಗುತ್ತಿಗೆದಾರರು ಘನತ್ಯಾಜ್ಯ ಸರಬರಾಜನ್ನು ಸ್ಥಗಿತಗೊಳಿಸಿದರು, ಈ ಸಮಸ್ಯೆಯನ್ನು ಬಗೆಹರಿಸಲು ಪೋಲೀಸರ ನೆರವನ್ನು ಪಡೆದರೂ ಸಹ ಘನತ್ಯಾಜ್ಯ ಸರಬರಾಜನ್ನು ಮುಂದುವರೆಸಲು ಸಾಧ್ಯವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದ ಸರ್ವೆ ನಂ.143 ರಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ನ್ನು ನಿರ್ಮಿಸಿ, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಿ ಹೀಗೆ ಶೇಖರಣೆಯಾದ ಘನತ್ಯಾಜ್ಯವನ್ನು 10 ಗಾಲಿಗಳ ಟ್ರಕ್‌ಗಳ ಮುಖಾಂತರ ರಾತ್ರಿ ವೇಳೆಯಲ್ಲಿ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು ಯೋಜನೆ ರೂಪಿಸಲಾಯಿತು.

10 ಗಾಲಿ ಟ್ರಕ್ಕುಗಳ ಸಾಗಾಣಿಕೆ ಸಾಮರ್ಥ್ಯ ಹೆಚ್ಚಾಗಿರುವುದರಿಂದ, ಟ್ರಕ್ಕುಗಳನ್ನು ಟಾರ್ಪಾಲ್‌ನಿಂದ ಮುಚ್ಚಿ ರಾತ್ರಿ ವೇಳೆಯಲ್ಲಿ ಘನತ್ಯಾಜ್ಯ ಸಾಗಿಸುವುದರಿಂದ, ಟೆರ್ರಾಫರ್ಮಗೆ ಹೋಗುವ ಟ್ರಕ್ಕುಗಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗುತ್ತದೆ. ಹಾಗೂ ಸಾರ್ವಜನಿಕರಿಗೂ ಯಾವುದೇ ತೊಂದರೆಯಾಗದ ಹಾಗೆ ಆಗುತ್ತದೆ. ಈ ರೀತಿ ಘನತ್ಯಾಜ್ಯವನ್ನು 10 ಗಾಲಿ ಟ್ರಕ್ಕುಗಳ ಮುಖಾಂತರ ಮೆ॥ಟೆರ್ರಾಫರ್ಮಾ ಸಂಸ್ಥೆಗೆ ಸಾಗಿಸಲು ಆಹ್ವಾನಿಸಲಾಗಿದ್ದ 2011-12ನೇ ಸಾಲಿನ ಟೆಂಡರ್ ಮುಕ್ತಾಯಗೊಂಡಿರುತ್ತದೆ.

2012-13ನೇ ಸಾಲಿಗೆ ಘನತ್ಯಾಜ್ಯ ಸಾಗಾಣಿಕೆಗಾಗಿ ಟೆಂಡರ್ ಆಹ್ವಾನಿಸುವ ಸಲುವಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಸಭೆಯ ವಿಷಯ ಸಂ.ಸಾಆಸ್ಥಾಸ/9/11-12, ದಿನಾಂಕ: 11-07-2011 ರಲ್ಲಿ ಹಾಗೂ ಪಾಲಿಕೆ ಸಭೆಯ ವಿಷಯ ಸಂ.34(153)2011-12, ದಿನಾಂಕ: 07-06-2011 ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

S. [signature]

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

ಅದರಂತೆ, ಪಶ್ಚಿಮ ವಲಯದಿಂದ ಮೆ॥ಟೆರ್ರಾಫರ್ಮಾ ಸಂಸ್ಥೆಗೆ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡುವ ಕಾಮಗಾರಿಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಾಲ್‌ನಲ್ಲಿ ದ್ವಿಲಕೋಟೆ ಪದ್ಧತಿಯ ಅಲ್ಪಾವಧಿ ಟೆಂಡರ್ ಅನ್ನು ಅಧಿಸೂಚನೆ ಸಂ.EE-2(SWM)/Tend/01/12-13, ದಿನಾಂಕ: 27-04-2012 ರಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿರುತ್ತವೆ.

1. ಅಂದಾಜು ಮೊತ್ತ ರೂ.299,55,000.00.
2. ಆಡಳಿತಾತ್ಮಕ ಅನುಮೋದನೆ ಸಂಖ್ಯೆ: ಮು.ಅ/ಘ.ತ್ಯಾ.ನಿ./ಆ.ಅ./34/2012-13, ದಿನಾಂಕ: 20-04-2012.
3. ತಾಂತ್ರಿಕ ಮಂಜೂರಾತಿ ಸಂಖ್ಯೆ: ಮು.ಅ./ಘ.ತ್ಯಾ.ನಿ./ತಾಂ.ಮಂ/31/2012-13, ದಿನಾಂಕ: 20-04-2012.
4. ಇ.ಎಂ.ಡಿ. ಮೊತ್ತ ರೂ.4,50,000.00.
5. ಪ್ರಕಟಣೆ ದಿನಾಂಕ: 27-04-2012.
6. ಟೆಂಡರ್ ದಾಖಲೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಾಲ್‌ನಿಂದ ಪಡೆಯಬಹುದಾದ ದಿನಾಂಕ: 30-04-2012 ಸಂಜೆ: 4.00 ಗಂಟೆಯಿಂದ.
7. ಬಿಡ್ಡುದಾರರು Pre bid queries ಅನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಾಲ್‌ನಲ್ಲಿ ದಾಖಲಿಸಲು ಕೊನೆಯ ದಿನಾಂಕ: 10-05-2012 ಸಾಯಂಕಾಲ 4.00 ಗಂಟೆವರೆಗೆ.
8. ಬಿಡ್ಡುದಾರರ Pre bid queries ಗೆ ಉತ್ತರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಾಲ್‌ನಲ್ಲಿ ದಾಖಲಿಸಿದ ದಿನಾಂಕ: 15-05-2012.
9. ಟೆಂಡರ್ ಅನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಾಲ್‌ನಲ್ಲಿ ದಾಖಲಿಸಲು ನಿಗದಿಪಡಿಸಿದ್ದ ಕೊನೆಯ ದಿನಾಂಕ: 30-05-2012 ಸಾಯಂಕಾಲ: 4.00 ಗಂಟೆವರೆಗೆ.

ಮೇಲೆ ವಿವರಿಸಿರುವಂತೆ ಸದರಿ ಟೆಂಡರ್‌ಅನ್ನು ವಿಜಯ ಕರ್ನಾಟಕ ಕನ್ನಡ ದಿನ ಪತ್ರಿಕೆಯಲ್ಲಿ ಮತ್ತು ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನ ಪತ್ರಿಕೆಯಲ್ಲಿ ದಿನಾಂಕ: 28-04-2012 ರಂದು ಪ್ರಕಟ ಪಡಿಸಲಾಗಿರುತ್ತದೆ. ಕಡತದಲ್ಲಿ ಲಗತ್ತಿಸಿರುವಂತೆ ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಮತ್ತು ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಕ್ರಮವಹಿಸಲಾಗಿರುತ್ತದೆ.

ಸದರಿ ಕಾಮಗಾರಿಯ ಅಲ್ಪಾವಧಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ: 02-06-2012 ರಲ್ಲಿ ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಕೆಳಗಿನ ಇಬ್ಬರು ಬಿಡ್ಡುದಾರರು ಭಾಗವಹಿಸಿರುತ್ತಾರೆ.

1. ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್.
2. ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್.

ಮೇಲಿನ ಇಬ್ಬರು ಬಿಡ್ಡುದಾರರು ಟೆಂಡರ್‌ಗೆ ನಿಗದಿಪಡಿಸಿರುವ ಅರ್ಹತಾ ನಿಬಂಧನೆಗಳಿಗೆ ಸಂಬಂಧಿಸಿದಂತೆ, ಒದಗಿಸಿರುವ ಮಾಹಿತಿ, ದಾಖಲಾತಿಗಳು ಇತ್ಯಾದಿಗಳನ್ನು ಪರಿಶೀಲಿಸಲಾಗಿದ್ದು, ಈ ಕೆಳಗಿನ ಅಂಶಗಳು ಕಂಡು ಬಂದಿರುತ್ತವೆ.

1. <u>ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರ ಬಿಡ್ಡಿನ ತಾಂತ್ರಿಕ ಮೌಲ್ಯಮಾಪನ:</u>

ಸದರಿ ಸಂಸ್ಥೆಯು ನಿಗದಿತ ಇ.ಎಂ.ಡಿ. ಸಲ್ಲಿಸಿದ್ದು, ವಿಳಾಸ ಇತ್ಯಾದಿಗಳ ವಿವರಗಳನ್ನು ಕ್ರಮಬದ್ಧವಾಗಿ ಒದಗಿಸಿರುತ್ತಾರೆ.

<u>ಮುಖ್ಯ ಷರತ್ತುಗಳಾದ:</u>

(ಎ) 2009-10, 2010-11 ಮತ್ತು 2011-12ರಲ್ಲಿ ಪ್ರತಿ ವರ್ಷ ಕನಿಷ್ಠ 80000 ಮೆಟ್ರಿಕ್ ಟನ್ ಘನತ್ಯಾಜ್ಯ ಸಾಗಾಣಿಕೆಯನ್ನು ನಿರ್ವಹಿಸಿರುವುದಾಗಿ, Chartered Account ರವರಿಂದ ದೃಢೀಕರಣವನ್ನು ಪಡೆದು ಲಗತ್ತಿಸಿರುತ್ತಾರೆ.

(ಬಿ) ಘನತ್ಯಾಜ್ಯ ಸಾಗಾಣಿಕೆ ಕ್ಷೇತ್ರದಲ್ಲಿ ಅನುಭವ ವಿರುವ ಬಗ್ಗೆ Chartered Account ರವರಿಂದ ದೃಢೀಕರಣವನ್ನು ಪಡೆದು ಲಗತ್ತಿಸಿರುತ್ತಾರೆ. ಆದರೆ ಯಾವುದೇ Employer ರವರಿಂದ ಮೇಲಿನಂತೆ ಘನತ್ಯಾಜ್ಯ ಸಾಗಾಣಿಕೆ ಮಾಡಿರುವ ಬಗ್ಗೆ ಹಾಗೂ ಅನುಭವದ ಬಗ್ಗೆ ದೃಢೀಕರಣ ಪಡೆದಿರುವುದಿಲ್ಲ.

(ಸಿ) ಸದರಿ ಘನತ್ಯಾಜ್ಯ ಸಾಗಾಣಿಕೆಗೆ ಅವಶ್ಯಕವಾಗಿರುವ Hydraulic excavator, Front end loader ಮತ್ತು 10 Wheeler Trucks ಹೊಂದಿರುವ ಬಗ್ಗೆ, Hydraulic excavator ಮಾತ್ರ

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಸಂಸ್ಥೆ ಹೆಸರಿನಲ್ಲಿದ್ದು ಉಳಿಕೆ Front end loader ಮತ್ತು 10 ಗಾಲಿಗಳ ಟ್ರಕ್‌ಗಳು ಕಂಪೆನಿ ಅಥವಾ ಮಾಲೀಕರ ಹೆಸರಿನಲ್ಲಿರುವುದಿಲ್ಲ.

2. ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರ ಬಿಡ್ಡಿನ ತಾಂತ್ರಿಕ ಮೌಲ್ಯಮಾಪನ:

ಸದರಿ ಸಂಸ್ಥೆಯು ನಿಗದಿತ ಇ.ಎಂ.ಡಿ. ಸಲ್ಲಿಸಿದ್ದು, ವಿಳಾಸ ಇತ್ಯಾದಿಗಳ ವಿವರಗಳನ್ನು ಕ್ರಮಬದ್ಧವಾಗಿ ಒದಗಿಸಿರುತ್ತಾರೆ.

ಮುಖ್ಯ ಷರತ್ತುಗಳಾದ:

(ಎ) 2009-10, 2010-11 ಮತ್ತು 2011-12ನ ಮೂರು ವರ್ಷದ ಅವಧಿಯಲ್ಲಿ ಒಟ್ಟು 4,07,664 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು 10 Wheeler Trucks ಮೂಲಕ ಸಾಗಾಣಿಕೆ ಮಾಡಲಾಗಿದ್ದು, ಈ ಬಗ್ಗೆ Employer ರವರಿಂದ ದೃಢೀಕರಣ ಪತ್ರ ಪಡೆದು ಲಗತ್ತಿಸಿರುತ್ತಾರೆ.

(ಬಿ) ಘನತ್ಯಾಜ್ಯ ಸಾಗಾಣಿಕೆ ಕ್ಷೇತ್ರದಲ್ಲಿ ಅನುಭವ ವಿರುವ ಬಗ್ಗೆ ದೃಢೀಕರಣವನ್ನು ಸಂಬಂಧಿಸಿದ Employer ರವರಿಂದ ಪಡೆದಿರುತ್ತಾರೆ.

(ಸಿ) ಸದರಿ ಘನತ್ಯಾಜ್ಯ ಸಾಗಾಣಿಕೆಗೆ ಅವಶ್ಯಕವಾಗಿರುವ Hydraulic excavator, Front end loader ಮತ್ತು 10 Wheeler Trucks ಅನ್ನು ಹೊಂದಿರುವ ಬಗ್ಗೆ ಅವಶ್ಯ ದಾಖಲೆಗಳನ್ನು ಲಗತ್ತಿಸಿರುತ್ತಾರೆ. ಸದರಿ ಸಂಸ್ಥೆಯವರು 2 Hydraulic excavator, 1 Front end loader ಮತ್ತು 20 ಸಂಖ್ಯೆ 10 Wheeler Trucks ಅನ್ನು ಹೊಂದಿರುತ್ತಾರೆ. ಈ ವಾಹನಗಳಲ್ಲಿ ಈ ಹಿಂದಿನ 2009-10, 2010-11 & 2011-12 ರಲ್ಲಿ ಘನತ್ಯಾಜ್ಯ ಸಾಗಾಣಿಕೆಯನ್ನು ಸಮರ್ಪಕವಾಗಿ ನಿರ್ವಹಿಸಿರುತ್ತಾರೆ.

ಮೇಲಿನ ದಾಖಲೆಗಳನ್ನು ಪರಿಶೀಲಿಸಿ ತುಲನೆ ಮಾಡಿದಾಗ ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು 2009-10, 2010-11 & 2011-12 ರಲ್ಲಿ ಪ್ರತಿ ವರ್ಷ 80000 ಮೆಟ್ರಿಕ್ ಟನ್ ಘನತ್ಯಾಜ್ಯ ಸಾಗಾಣಿಕೆ ಮಾಡಿರುವ ಬಗ್ಗೆ ಸೂಕ್ತ ದಾಖಲೆಗಳು ಒದಗಿಸಿಲ್ಲವಾದ್ದರಿಂದ ಮತ್ತು ಸದರಿ ಸಂಸ್ಥೆಯು ಸ್ವಂತ 10 Wheeler Trucks ಹೊಂದಿರುವುದಿಲ್ಲವಾದ್ದರಿಂದ ಟೆಂಡರ್‌ಗೆ ಅವಶ್ಯವಾಗಿರುವ ಮುಖ್ಯ ಷರತ್ತುಗಳನ್ನು ಪೂರೈಸುವಲ್ಲಿ ವಿಫಲರಾಗಿರುವುದು ಕಂಡು ಬಂದಿರುತ್ತದೆ.

ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು 2009-10, 2010-11 & 2011-12ರ ಅವಧಿಯಲ್ಲಿ ಒಟ್ಟು 4,07,664 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಮರ್ಪಕವಾಗಿ ಸಾಗಾಣಿಕೆ ಮಾಡಿರುವ ಅನುಭವ ಹೊಂದಿದ್ದು, ಸದರಿ ಸಂಸ್ಥೆಯಲ್ಲಿ 20 ಸಂಖ್ಯೆ 10 Wheeler Trucks ಗಳನ್ನು ಸ್ವತಃ ಹೊಂದಿರುವ ಮತ್ತು ಇತರೆ ಷರತ್ತುಗಳನ್ನು ಪೂರೈಸಿರುವುದರಿಂದ ಇವರು ಟೆಂಡರ್‌ನ ಷರತ್ತುಗಳನ್ನು ಪೂರೈಸಿರುತ್ತಾರೆ.

ಮೇಲಿನ ಹಿನ್ನೆಲೆಯಲ್ಲಿ ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡಿನಲ್ಲಿ ವಿಫಲರಾಗಿರುತ್ತಾರೆ ಮತ್ತು ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಷರತ್ತುಗಳನ್ನು ಪೂರೈಸಿ ತಾಂತ್ರಿಕ ಬಿಡ್ಡು ಪೂರೈಸುವಲ್ಲಿ ಸಫಲರಾಗಿರುತ್ತಾರೆ.

ಆದುದರಿಂದ, ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಆರ್ಥಿಕ ಬಿಡ್ಡನ್ನು ತಿರಸ್ಕರಿಸಲು ಮತ್ತು ತಾಂತ್ರಿಕ ಷರತ್ತುಗಳನ್ನು ಪೂರೈಸಿರುವ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರ ಆರ್ಥಿಕ ಬಿಡ್ಡನ್ನು ಮಾತ್ರ ತೆರೆಯಲು ತೀರ್ಮಾನಿಸಿ, ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರ ಆರ್ಥಿಕ ಬಿಡ್ಡನ್ನು ದಿನಾಂಕ: 05-06-2012 ರಂದು ತೆರೆಯಲಾಗಿರುತ್ತದೆ.

ಸದರಿ ಆರ್ಥಿಕ ಬಿಡ್ಡಿನ ದರಗಳನ್ನು ಮಂಜೂರಾದ ಅಂದಾಜು ಪಟ್ಟಿಗೆ ಹೋಲಿಸಿರುವ ತುಲನಾತ್ಮಕ ಪಟ್ಟಿಯ ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| 1 | ಮಂಜೂರಾದ ಅಂದಾಜು ಪಟ್ಟಿಯಂತೆ ಮೊತ್ತ | ರೂ.299,28,447.00 |
| 2 | ಬಿಡ್ಡುದಾರರು ನಮೂದಿಸಿರುವ ಮೊತ್ತ | ರೂ.343,31,305.00 |
| 3 | ಬಿಡ್ಡುದಾರರು ನಮೂದಿಸಿರುವ ದರವನ್ನು ಮಂಜೂರಾದ ಅಂದಾಜು ಪಟ್ಟಿ ಮೊತ್ತಕ್ಕೆ ಹೋಲಿಸಿದ್ದಲ್ಲಿ ಶೇಕಡವಾರು ಹೆಚ್ಚು / ಕಡಿಮೆ | ಶೇ.14.71 ಹೆಚ್ಚು |

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲಿನ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಲಾಗಿ ಬಿಡ್ಡುದಾರರಾದ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ನಮೂದಿಸಿರುವ ದರಗಳ ಮೊತ್ತವು ರೂ.343,31,305.00 ಆಗಿದ್ದು, ಅನುಮೋದಿತ ಅಂದಾಜು ಪಟ್ಟಿ ದರಗಳ ಮೊತ್ತ ರೂ.299,28,447.00 ಗಳಿಗೆ ಹೋಲಿಸಿದಾಗ ಶೇ.14.71 ರಷ್ಟು ಹೆಚ್ಚಾಗಿರುತ್ತದೆ.

ದರಗಳು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ದಿನಾಂಕ: 06-06-2012 ರಲ್ಲಿ ಆಹ್ವಾನಿಸಲಾಗಿದ್ದ ದರ ಸಂಧಾನಕ್ಕೆ ಸ್ಪಂದಿಸಿ, ಸದರಿ ಬಿಡ್ಡುದಾರರಾದ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ಈ ಹಿಂದೆ ನಮೂದಿಸಿದ್ದ ದರಗಳನ್ನು ಕಡಿಮೆ ಮಾಡಿ ದಿನಾಂಕ: 11-06-2012 ರಲ್ಲಿ ದರಸಂಧಾನ ಪತ್ರ ನೀಡಿದ್ದು, ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| 1 | ಮಂಜೂರಾದ ಅಂದಾಜು ಪಟ್ಟಿಯಂತೆ ಮೊತ್ತ (2011-12ನೇ ಸಾಲಿನ ದರಪಟ್ಟಿ ಆಧಾರಿತ) | ರೂ.299,28,447.00 |
| 2 | ಬಿಡ್ಡುದಾರರು ಈ ಹಿಂದೆ ನಮೂದಿಸಿದ್ದ ಮೊತ್ತ ಮತ್ತು ಶೇಕಡ ಹೆಚ್ಚು / ಕಡಿಮೆ | ರೂ.343,31,305.00<br>ಶೇ.14.71 ಹೆಚ್ಚು |
| 3 | **ದರ ಸಂಧಾನದ ನಂತರ ಕಡಿಮೆಗೊಳಿಸಿರುವ ಮೊತ್ತ ಮತ್ತು ಶೇಕಡ ಹೆಚ್ಚು / ಕಡಿಮೆ** | **ರೂ.333,58,404.00<br>ಶೇ.11.46 ಹೆಚ್ಚು** |

ಆದುದರಿಂದ **ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್** ಬಿಡ್ಡುದಾರರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತ **ರೂ.333,58,404.00** (ಮೂರು ಕೋಟಿ ಮೂವತ್ತಮೂರು ಲಕ್ಷದ ಐವತ್ತೆಂಟು ಸಾವಿರದ ನಾಲ್ಕುನೂರ ನಾಲ್ಕು ರೂಗಳು) ಮಂಜೂರಾದ ಅಂದಾಜುಪಟ್ಟಿಗೆ ಹೋಲಿಸಿದಲ್ಲಿ **ಶೇ.11.46 ರಷ್ಟು ಹೆಚ್ಚಾಗಿರುವ** ದರಗಳ ಟೆಂಡರ್‌ಅನ್ನು ಅನುಮೋದಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 22.06.2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಭಾರತದ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಮತ್ತು ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ರಂತೆ ಘನತ್ಯಾಜ್ಯವನ್ನು ಸಂಸ್ಕರಿಸಿ ವೈಜ್ಞಾನಿಕವಾಗಿ ಮತ್ತು ಸುರಕ್ಷಿತವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಬಳಿಯ ಮೆ॥ಟೆರ್ರಾಫರ್ಮಾ ಬಯೋಟೆಕ್ನಾಲಜೀಸ್ ಲಿಮಿಟೆಡ್ ರವರೊಡನೆ ಘನತ್ಯಾಜ್ಯ ಸಂಸ್ಕರಿಸಲು ಒಪ್ಪಂದ ಮಾಡಿಕೊಂಡಿದೆ. ಘನತ್ಯಾಜ್ಯವನ್ನು 10 ಗಾಲಿಗಳ ಟ್ರಕ್‌ಗಳ ಮುಖಾಂತರ ರಾತ್ರಿ ವೇಳೆಯಲ್ಲಿ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು ಯೋಜನೆ ರೂಪಿಸಲಾಯಿತು. ಅದರಂತೆ, ಪೂರ್ವ ವಲಯದಿಂದ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡುವ ಕಾಮಗಾರಿಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯ ಅಲ್ಪಾವಧಿ ಟೆಂಡರ್ ಅನ್ನು ಅಧಿಸೂಚನೆ ಸಂ.EE-2(SWM)/Tend/01/12-13, ದಿನಾಂಕ: 27.04.2012 ರಲ್ಲಿ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ಅಲ್ಪಾವಧಿ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ: 02.06.2012 ರಲ್ಲಿ ತೆರೆಯಲಾಗಿದ್ದು, ಈ ಟೆಂಡರ್‌ನಲ್ಲಿ (1) ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು (2) ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ಭಾಗವಹಿಸಿರುತ್ತಾರೆ.

ಮೆ॥ಟೆರ್ರಾಫರ್ಮ್ ಬಯೋಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಸದರಿ ಟೆಂಡರ್‌ನ ತಾಂತ್ರಿಕ ಬಿಡ್ಡಿನಲ್ಲಿ ವಿಫಲರಾಗಿರುತ್ತಾರೆ ಮತ್ತು ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಷರತ್ತುಗಳನ್ನು ಪೂರೈಸಿ ತಾಂತ್ರಿಕ ಬಿಡ್ಡು ಪೂರೈಸುವಲ್ಲಿ ಸಫಲರಾಗಿರುತ್ತಾರೆ. ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಲಾಗಿ ಬಿಡ್ಡುದಾರರಾದ ಮೆ॥ಮಾತಾ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ರವರು ನಮೂದಿಸಿರುವ ದರಗಳ ಮೊತ್ತವು ರೂ.343,31,305.00 ಆಗಿದ್ದು, ಅನುಮೋದಿತ ಅಂದಾಜು ಪಟ್ಟಿ ದರಗಳ ಮೊತ್ತ ರೂ.299,28,447.00 ಗಳಿಗೆ ಹೋಲಿಸಿದಾಗ ಶೇ.14.71 ರಷ್ಟು ಹೆಚ್ಚಾಗಿದ್ದು, ದರ ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.333,58,404.00 (ಮೂರು ಕೋಟಿ ಮೂವತ್ತಮೂರು ಲಕ್ಷದ ಐವತ್ತೆಂಟು ಸಾವಿರದ ನಾಲ್ಕುನೂರ ನಾಲ್ಕು ರೂಪಾಯಿಗಳು ಮಾತ್ರ) ಗಳ, ಮಂಜೂರಾದ ಅಂದಾಜುಪಟ್ಟಿಗೆ ಹೋಲಿಸಿದಲ್ಲಿ ಶೇ.11.46 ರಷ್ಟು ಹೆಚ್ಚಾಗಿರುತ್ತದೆ. ಆದುದರಿಂದ, ಸದರಿ ಟೆಂಡರ್‌ಗೆ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.

**11. ವಿಷಯದ ಸಂಖ್ಯೆ: ಸಾಆಸ್ಥಾಸ/21/2012-13:**

ಸಂಖ್ಯೆ: ಆ/ಪಿಎಸ್‌ಆರ್(G)/3365/2012-13, ದಿನಾಂಕ: 26-06-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರು ಸರ್ವೆ ನಂ.155 ರಲ್ಲಿ ಬಿಓಓಟಿ ಆಧಾರದ ಮೇರೆಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಯೋಜನೆಯ ಘಟಕ ಸ್ಥಾಪಿಸಲು ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯೊಂದಿಗೆ ಕರಾರು ಒಪ್ಪಂದವನ್ನು ದಿನಾಂಕ: 31-08-2009 ರಲ್ಲಿ ಮಾಡಿಕೊಳ್ಳಲಾಗಿರುತ್ತದೆ.

ಹಾಗೂ ಒಪ್ಪಿಗೆ ಪತ್ರ (Letter of Acceptence) ಪಡೆದ 450 ದಿವಸಗಳೊಗಾಗಿ ಕರಾರು ಒಪ್ಪಂದ ಅನ್ವಯ ಘಟಕ ಕಾರ್ಯಾರಂಭ ಮಾಡಬೇಕಾಗಿರುತ್ತದೆ. ಒಪ್ಪಿಗೆ ಪತ್ರವನ್ನು ದಿನಾಂಕ: 13-07-2009 ರಂದು ನೀಡಲಾಗಿದ್ದು, ಒಪ್ಪಿಗೆ ಪತ್ರ ನೀಡಿ ಇಂದಿಗೆ 2 ವರ್ಷ – 07 ತಿಂಗಳು ಕಳೆದರೂ ಸದರಿ ಸಂಸ್ಥೆರವರು ಘಟಕ ಪ್ರಾರಂಭಿಸುವುದಿಲ್ಲ ಘಟಕ ಪ್ರಾರಂಭಿಸಲು ಅಗತ್ಯವಾದ ದಾಖಲೆಗಳನ್ನೇ ಸಲ್ಲಿಸಿರುವುದಿಲ್ಲ.

ಈ ಬಗ್ಗೆ ಸದರಿ ಸಂಸ್ಥೆಗೆ ಹಲವಾರು ನೋಟೀಸ್‌ಗಳನ್ನು ನೀಡಲಾಗಿರುತ್ತದೆ. ಘಟಕ ಪ್ರಾರಂಭಿಸಲು ಅಗತ್ಯವಾದ 25 ಎಕರೆ ಪ್ರದೇಶವನ್ನು ದಿನಾಂಕ: 17-05-2010 ರಂದು ಲೀಸ್ ಆಧಾರದ ಮೇರೆಗೆ ನೊಂದಾಯಿಸಿ ಸದರಿ ಸಂಸ್ಥೆಗೆ ಹಸ್ತಾಂತರಿಸಲಾಗಿರುತ್ತದೆ.

ಮುಂದುವರೆದು ಸರ್ವೆ ನಂ.155 ರ ಮಂಡೂರು ಉತ್ತರ ಭಾಗದಲ್ಲಿನ ಸದರಿ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ: 21-09-2011 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರೊಂದಿಗೆ ನಡೆದ ಸಭೆಯಲ್ಲಿ ಘಟಕ ಪ್ರಾರಂಭಿಸಲು ಹಸ್ತಾಂತರಿಸಿರುವ ಪ್ರದೇಶದಲ್ಲಿ ಪಾಲಿಕೆಯು ಘನತ್ಯಾಜ್ಯ ವಿಲೇವಾರಿ ಮಾಡಿದ್ದು, ಇದರಿಂದ ಕಾಂಪೌಂಡ್ ಗೋಡೆ ನಿರ್ಮಿಸಲು ಅಡಚಣೆಯಾಗಿದೆ ಎಂದು ತಿಳಿಸಿದ್ದರು.

ಅದರಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಸಂಸ್ಥೆಯು ಸೂಚಿಸುವ ಭಾಗದಲ್ಲಿ ಯೋಜನೆಯ ಕಾರ್ಯಾರಂಭಕ್ಕೆ ಅನುವಾಗುವಂತೆ ಅಲ್ಲಿ ಸುರಿಯಲಾಗಿರುವ ಘನತ್ಯಾಜ್ಯ ವಸ್ತುಗಳನ್ನು ತೆರವುಗೊಳಿಸಿ ಕನಿಷ್ಠ 5 ಎಕರೆ ಜಾಗವನ್ನು ಸಂಸ್ಥೆಗೆ ನೀಡುವಂತೆ ಸೂಚಿಸಿದ್ದರು, ಈ ಮೇರೆಗೆ ಕಾಂಪೌಂಡ್ ಗೋಡೆ ನಿರ್ಮಿಸಲು ಹಾಗೂ ಯೋಜನೆಯ ಕಾರ್ಯಾರಂಭಕ್ಕೆ ಅನುವಾಗುವಂತೆ 15 ಎಕರೆ ಜಾಗದಲ್ಲಿ ತ್ಯಾಜ್ಯವನ್ನು ತೆರವುಗೊಳಿಸಲಾಗಿರುತ್ತದೆ.

ಮುಂದುವರೆದು ದಿನಾಂಕ: 10-10-2011 ರಂದು ಸದರಿ ಸಂಸ್ಥೆರವರು ಪತ್ರ ಸಲ್ಲಿಸಿ ಅಪರ ಮುಖ್ಯ ಕಾರ್ಯದರ್ಶಿರವರೊಂದಿಗೆ ನಡೆದ ಸಭೆಯ ನಡವಳಿಯಂತೆ ತ್ಯಾಜ್ಯವನ್ನು ತೆರವುಗೊಳಿಸಿರುವ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿ ಅವಶ್ಯಕ ಜಾಗ ತೆರವುಗೊಳಿಸಿದರೆ "ನಿರ್ಮಾಣ ಕಾರ್ಯವನ್ನು" ಕೂಡಲೇ ಪ್ರಾರಂಭಿಸುವುದಾಗಿ ತಿಳಿಸಿದ್ದರು.

ಜಾಗವನ್ನು ತೆರವುಗೊಳಿಸಿರುವ ಬಗ್ಗೆ ತಿಳಿಸಿ ಹಾಗೂ ಮಂಡೂರು ಗ್ರಾಮ ಪಂಚಾಯ್ತಿಯಿಂದ ನಿರಾಕ್ಷೇಪಣೆ ಪತ್ರ ಪಡೆಯುವ ಸಂಬಂಧ ಇರುವ ಸಮಸ್ಯೆಗಳನ್ನು ಬಗೆಹರಿಸಲು ದಿನಾಂಕ: 19-10-2011 ರಂದು ಮಂಡೂರು ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಹಾಜರಾಗುವಂತೆ ತಿಳಿಸಲಾಗಿತ್ತು.

ಆದರೆ, ಸದರಿ ಸಂಸ್ಥೆಯ ಸಿಬ್ಬಂದಿಯವರು ಹಾಜರಾಗಿರುವುದಿಲ್ಲ ಹಾಗೂ ಅವಶ್ಯವಿರುವ ಜಾಗವನ್ನು ತೆರವುಗೊಳಿಸಿ ಸುಮಾರು 2 ತಿಂಗಳಾದರು ಸಹ ಇದುವರೆಗೂ ಕಾಂಪೌಂಡ್ ಗೋಡೆ ನಿರ್ಮಿಸುವ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ.

ನಿರ್ಮಾಣ ಚಟುವಟಿಕೆ ಪ್ರಾರಂಭಿಸಲು ಅನುವಾಗುವಂತೆ 15 ಎಕರೆ ಪ್ರದೇಶದಲ್ಲಿ ತ್ಯಾಜ್ಯವನ್ನು ತೆರವುಗೊಳಿಸಿದ್ದರೂ ಸಹ, ನಿರ್ಮಾಣ ಚಟುವಟಿಕೆ ಪ್ರಾರಂಭಿಸದೇ ಕರಾರನ್ನು ನವೀಕರಿಸಿದ ನಂತರವಷ್ಟೇ ನಿರ್ಮಾಣ ಕಾರ್ಯ ಪ್ರಾರಂಭಿಸುವುದಾಗಿ ಷರತ್ತು ವಿಧಿಸಿ ದಿನಾಂಕ: 11-01-2012 ರ ಪತ್ರದಲ್ಲಿ ತಿಳಿಸಿರುತ್ತಾರೆ.

ಹಾಗೂ ದಿನಾಂಕ: 01-02-2012 ರಂದು ಮಾನ್ಯ ಆಯುಕ್ತರಿಗೆ ಪತ್ರ ಸಲ್ಲಿಸಿ, ಘಟಕ ಪ್ರಾರಂಭಿಸುವ ಸಂಬಂಧ ಈಗಾಗಲೇ ಕಾಂಪೌಂಡ್ ಗೋಡೆ ನಿರ್ಮಾಣ ಹಾಗೂ Site office ನಿರ್ಮಾಣ ಕಾರ್ಯಪ್ರಗತಿಯಲ್ಲಿರುವುದಾಗಿ ತಿಳಿಸಿ, ಮಾನ್ಯ ಆಯುಕ್ತರಿಗೆ ಸುಳ್ಳು ಮಾಹಿತಿ ನೀಡಿರುತ್ತಾರೆ. ಸದರಿ ಸಂಸ್ಥೆಗೆ 25 ಎಕರೆ ಬೆಲೆಬಾಳುವ ಜಮೀನನ್ನು ಲೀಸ್ ಆಧಾರದ ಮೇರೆಗೆ ಹಸ್ತಾಂತರಿಸಿದ್ದು, ಸದರಿ ಸ್ಥಳವನ್ನು ಸೂಕ್ತ ರೀತಿಯಲ್ಲೇ ಬಳಸಲು ಸಾಧ್ಯವಾಗದೇ ಇರುವುದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟುಮಾಡಿರುತ್ತಾರೆ.

ಹಾಗೂ ದಿನಾಂಕ: 16-11-2011 ರಂದು ಮಾನ್ಯ ಆಯುಕ್ತರೊಂದಿಗೆ ನಡೆದ ಸಭೆಯಲ್ಲಿ ಘಟಕದಿಂದ ಯಾವುದೇ ಹಾನಿ ಉಂಟಾಗದಿರುವ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯ್ತಿ ಸದಸ್ಯರುಗಳಿಗೆ ಈಗಾಗಲೇ ಸದರಿ ಸಂಸ್ಥೆರವರು ಸೋಲಾಪುರದಲ್ಲಿ ಸ್ಥಾಪಿಸಿರುವ ಘಟಕಕ್ಕೆ ಕರೆದೊಯ್ದು, ಮನವರಿಕೆ ಮಾಡಿ ಪಂಚಾಯ್ತಿಯಿಂದ ನಿರಾಕ್ಷೇಪಣೆ ಪತ್ರ ಪಡೆಯಲು ಸೂಚಿಸಲಾಗಿತ್ತು.

ಸದರಿ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ.ಬಿ.ವಿ.ರಾಜುರವರಿಗೆ ಮಂಡೂರು ಗ್ರಾಮ ಪಂಚಾಯ್ತಿ ಸದಸ್ಯರನ್ನು ಪರಿಚಯ ಮಾಡಿಕೊಟ್ಟು ಘಟಕ ಸ್ಥಾಪನೆಯಿಂದ ಪರಿಸರಕ್ಕಾಗಲಿ, ಆರೋಗ್ಯಕ್ಕಾಗಲಿ ಯಾವುದೇ ಹಾನಿ ಉಂಟಾಗದಿರುವ ಬಗ್ಗೆ ಗ್ರಾಮ ಪಂಚಾಯ್ತಿ ಸದಸ್ಯರುಗಳಿಗೆ ಮನವರಿಕೆ ಮಾಡಿಕೊಟ್ಟು ಘಟಕ ಸ್ಥಾಪಿಸಲು ನಿರಾಕ್ಷೇಪಣೆ ಮಾತ್ರ ಪಡೆದುಕೊಳ್ಳಲು ತಿಳಿಸಲಾಗಿತ್ತು. ಆದರೆ ಸದರಿ ಸಂಸ್ಥೆರವರು ಈ ಬಗ್ಗೆ ಯಾವುದೇ ಕ್ರಮವಹಿಸಿರುವುದಿಲ್ಲ.

ಇದೇ ರೀತಿ ಸದರಿ ಸಂಸ್ಥೆರವರು ಘಟಕ ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ತೋರದೇ ಕೇವಲ ಪತ್ರ ವ್ಯವಹಾರ ಮಾಡುವಲ್ಲಿ ಹಾಗೂ ಪಾಲಿಕೆಯ ಮೇಲೆ ವೃಥಾ ಆರೋಪ ಹೊರಿಸುವಲ್ಲಿ ಕಾಲಹರಣ ಮಾಡುತ್ತಿರುತ್ತಾರೆ.

S. Venkatesh BL

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

ಈ ಕಾರಣಗಳ ನಿಮಿತ್ತ ದಿನಾಂಕ: 16-02-2012 ರಂದು ಸದರಿ ಸಂಸ್ಥೆಗೆ ಅಂತಿಮ ನೋಟೀಸ್ ನೀಡಲಾಗಿತ್ತು, ಆದರೆ ಸದರಿ ಸಂಸ್ಥೆರವರು ಈ ದಿನಾಂಕದವರೆಗೂ ಘಟಕ ಪ್ರಾರಂಭಿಸಲು ಯಾವುದೇ ಕ್ರಮ ವಹಿಸಿರುವುದಿಲ್ಲ.

ಹಾಗೂ ದಿನಾಂಕ: 17-12-2011 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ರವರ ಅಧ್ಯಕ್ಷತೆಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನದ ಬಗ್ಗೆ ನಡೆದ ಸಭೆಯಲ್ಲಿ, ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಹಲವಾರು ಕಾರಣಗಳಿಂದ ತ್ಯಾಜ್ಯ ಸಂಸ್ಕರಣಾ ಘಟಕ ಕಾರ್ಯಾರಂಭ ಮಾಡದೇ ಇರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿ, ಸದರಿ ಸಂಸ್ಥೆಯು ಎರಡೂವರೆ ತಿಂಗಳೊಳಗಾಗಿ ತ್ಯಾಜ್ಯ ಸಂಸ್ಕರಣೆ ಕಾರ್ಯವನ್ನು ಪ್ರಾರಂಭಿಸದಿದ್ದಲ್ಲಿ, ಸದರಿ ಸಂಸ್ಥೆಯೊಂದಿಗಿನ ಕರಾರನ್ನು ರದ್ದುಪಡಿಸಲು ಕಾನೂನಿನನ್ವಯ ನೋಟೀಸ್ ನೀಡುವಂತೆ ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಮಂಡೂರು ಸರ್ವೆ ನಂ.155 ರಲ್ಲಿ ಬಿಓಓಟಿ ಆಧಾರದ ಮೇರೆಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಯ ಘಟಕ ಸ್ಥಾಪಿಸಲು ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯೊಂದಿಗೆ ಪಾಲಿಕೆ ಮಾಡಿಕೊಂಡಿರುವ ಕರಾರನ್ನು ರದ್ದುಪಡಿಸಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 26-06-2012 ರ ಆಯುಕ್ತರು ರವರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ಪಾಲಿಕೆ ಮಾಡಿಕೊಂಡಿರುವ ಕರಾರು ಮತ್ತು ಸಭೆಯಲ್ಲಿ ಚರ್ಚಿಸಿದಂತೆ ಮುಖ್ಯ ಅಭಿಯಂತರರು (ಪರಿಸರಕೋಶ) ರವರು ಕಡತವನ್ನು ಪುನರ್ ಪರಿಶೀಲಿಸಿ ಮರು ಮಂಡಿಸಲು ಸಮಿತಿಯು ತೀರ್ಮಾನಿಸಿತು.**

## 12. ವಿಷಯದ ಸಂಖ್ಯೆ: ಸಾಆಸ್ಥಾಸ/22/2012-13:

ಸಂಖ್ಯೆ: ಆ/ಪಿಎಸ್ಆರ್/3514/2011-12, ದಿನಾಂಕ: 29-06-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 3000 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಈ ಪೈಕಿ ಪಾಲಿಕೆಯ ದಕ್ಷಿಣ ವಲಯದ ಮತ್ತು ಪೂರ್ವ ವಲಯದ ಹಲವು ಭಾಗಗಳ ಸುಮಾರು 700 ಮೆ.ಟನ್ ಘನತ್ಯಾಜ್ಯವನ್ನು ಪಾಲಿಕೆ ವ್ಯಾಪ್ತಿಯ ಮಂಡೂರು ಗ್ರಾಮದ ಸರ್ವೆ ನಂ.155ರ ಉತ್ತರಭಾಗದ ಲ್ಯಾಂಡ್‌ಫಿಲ್‌ಗೆ ಪ್ರತಿದಿನ ಸರಬರಾಜು ಮಾಡಲಾಗುತ್ತಿದೆ.

ಈ ಪೈಕಿ ಸುಮಾರು 300 ಮೆ.ಟನ್ ಘನತ್ಯಾಜ್ಯವನ್ನು ಪಾಲಿಕಯು ಕರಾರು ಮಾಡಿಕೊಂಡಿರುವಂತೆ 10 ಗಾಲಿಗಳ ಟ್ರಕ್‌ಗಳ ಮೂಲಕ ದೊಡ್ಡಬಳ್ಳಾಪುರ ತಾಲ್ಲೂಕಿನ ಗುಂಡ್ಲಹಳ್ಳಿ ಬಳಿಯ ಮೆ॥ಟೆರ್ರಾಫರ್ಮ ಸಂಸ್ಥೆಗೆ ಸಂಸ್ಕರಣೆಗಾಗಿ ರವಾನಿಸಲಾಗುತ್ತಿದೆ. ಉಳಿಕೆ ಸುಮಾರು 400 ಮೆ.ಟನ್ ಘನತ್ಯಾಜ್ಯವನ್ನು ಪಾಲಿಕೆಯ ಮಂಡೂರು ಉತ್ತರಭಾಗದ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲಾಗುತ್ತಿದೆ.

ಸದರಿ ಮಂಡೂರು ಉತ್ತರಭಾಗದ ಪಾಲಿಕೆಯ ಲ್ಯಾಂಡ್‌ಫಿಲ್‌ಗೆ ಘನತ್ಯಾಜ್ಯ ಸಾಗಾಣಿಕೆ ಮಾಡುವಾಗ, ಮಂಡೂರಿನಿಂದ ದೊಡ್ಡಬಳ್ಳಾಪುರ ತಾಲ್ಲೂಕಿನ ಗುಂಡ್ಲಹಳ್ಳಿ ಬಳಿಯ ಮೆ॥ಟೆರ್ರಾಫರ್ಮ ಸಂಸ್ಥೆಗೆ ಸಾಗಾಣಿಕೆ ಮಾಡಲು ಘನತ್ಯಾಜ್ಯವನ್ನು 10 ಗಾಲಿಗಳ ಟ್ರಕಗಳಿಗೆ ತುಂಬುವಾಗ ಮತ್ತು ಘನತ್ಯಾಜ್ಯವನ್ನು ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲು ಹ್ಯಾಂಡಲ್ ಮಾಡುವಾಗ ವಾಸನೆ ಉತ್ಪತ್ತಿಯಾಗುತ್ತದೆ.

ವಾಸನೆಯನ್ನು ನಿಯಂತ್ರಿಸಲು EM Solution ಸಿಂಪಡಿಸಲಾಗುತ್ತಿದೆಯಾದರೂ ಪೂರ್ಣ ಪ್ರಮಾಣದಲ್ಲಿ ವಾಸನೆ ನಿಯಂತ್ರಣವಾಗುವುದಿಲ್ಲ.

ಮೇಲಿನಂತೆ ಘನತ್ಯಾಜ್ಯ ಸಾಗಾಣಿಕೆ ಮಾಡುವಾಗ, ಹ್ಯಾಂಡಲ್ ಮಾಡುವಾಗ ವಾಸನೆಗೆ ನೊಣಗಳ ಆಕರ್ಷಣೆಗೊಂಡು ಸಂತಾನೋತ್ಪತ್ತಿ ಮಾಡಿ ಸಂಖ್ಯೆಯಲ್ಲಿ ಹೆಚ್ಚಾಗುತ್ತ ಹೋಗುತ್ತವೆ. ಜೊತೆಗೆ ಸೊಳ್ಳೆಗಳು ಮತ್ತು ಇತರೆ ಕ್ರಿಮಿ ಕೀಟಗಳು ಉತ್ಪತ್ತಿಯಾಗುತ್ತವೆ.

ಮೇಲೆ ವಿವರಿಸಿರುವಂತೆ ಉತ್ಪತ್ತಿಯಾಗುವ ನೊಣಗಳು, ಸೊಳ್ಳೆಗಳು ಮತ್ತು ಇತರೆ ಕೀಟಗಳನ್ನು, ಸುತ್ತಲಿನ ಗ್ರಾಮಗಳ ನಿವಾಸಿಗಳ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯಾಗದಂತೆ ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುತ್ತದೆ.

[signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಂಡೂರು ಘನತ್ಯಾಜ್ಯ ಘಟಕದಲ್ಲಿನ ಕಸದಿಂದಾಗಿ ನೊಣಗಳು, ಸೊಳ್ಳೆಗಳು, ಸೊಳ್ಳೆ ಇತ್ಯಾದಿ ಕ್ರಿಮಿ ಕೀಟಗಳು ಉತ್ಪತ್ತಿಯಾಗುತ್ತಿದ್ದು, ಸುತ್ತಲಿನ ಗ್ರಾಮಸ್ಥರ ಆರೋಗ್ಯಕ್ಕೆ ಹಾನಿ ಉಂಟಾಗುತ್ತಿರುವುದಾಗಿ ದಿನಾಂಕ: 05-11-2011 ರಂದು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಲೇಖನ ಪ್ರಕಟಣೆಗೊಂಡಿರುತ್ತದೆ. 11/2010 ರಲ್ಲಿ ದೃಶ್ಯ ಮಾಧ್ಯಮದಲ್ಲಿ ಪ್ರಸಾರಗೊಂಡ ದೃಶ್ಯಾವಳಿಗಳನ್ನು ಆಧರಿಸಿ ಗೌರವಾನ್ವಿತ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಸಂಖ್ಯೆ: 558/2010 ರಲ್ಲಿ ಸ್ವಯಂಪ್ರೇರಿತ ದಾವೆ ದಾಖಲಾಗಿರುತ್ತದೆ. ಗೌರವಾನ್ವಿತ ಕರ್ನಾಟಕ ಲೋಕಾಯುಕ್ತಕ್ಕೆ ಮಂಡೂರು ಘನತ್ಯಾಜ್ಯ ವಿಲೇವಾರಿ ಘಟಕದ ಸುತ್ತಲಿನ ಗ್ರಾಮಸ್ಥರ ಆರೋಗ್ಯದ ಹಿತದೃಷ್ಟಿಯಿಂದ ನೊಣ ನಾಶಕ ಔಷಧಿ ಸಿಂಪಡಿಸುತ್ತಿರುವುದಾಗಿ ವರದಿ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಂಡೂರು ಘನತ್ಯಾಜ್ಯ ಘಟಕದ ಸುತ್ತಲಿನ ಗ್ರಾಮಗಳಲ್ಲಿ ನೊಣಗಳ ನಿಯಂತ್ರಣಕ್ಕಾಗಿ 06/2010 ರಿಂದ ಔಷಧಿ ಸಿಂಪಡಿಸುವ ಕೆಲಸವನ್ನು ಕೈಗೊಳ್ಳಲಾಗಿರುತ್ತದೆ.

ಕಳೆದ ಸಾಲಿನಲ್ಲಿ ದಿನಾಂಕ: 23-02-2011 ರಿಂದ 22-02-2012ರವರೆಗಿನ ಅವಧಿಗೆ ಮಂಡೂರು ಘನತ್ಯಾಜ್ಯದ ವಿಲೇವಾರಿ ಘಟಕದ ಸುತ್ತಲಿನ ಗ್ರಾಮಗಳಲ್ಲಿ ನೊಣನಾಶಕ ಔಷಧಿ ಸಿಂಪಡಿಸುವ ಕಾಮಗಾರಿಯನ್ನು ರೂ.58.71 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಕೈಗೊಳ್ಳಲಾಗಿರುತ್ತದೆ. ಸದರಿ ನೊಣ ನಾಶಕ ಔಷಧಿ ಜೊತೆಗೆ ಸೊಳ್ಳೆಗಳ ನಿಯಂತ್ರಣಕ್ಕೆ ಸೊಳ್ಳೆಗಳ ನಾಶಕ ಔಷಧಿಯನ್ನು ಸಿಂಪಡಿಸುವ ಕಾಮಗಾರಿಯನ್ನು ದಿನಾಂಕ: 23-02-2012 ರಿಂದ ಮುಂದುವರೆಸುವ ಅವಶ್ಯಕತೆ ಇರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಮಂಡೂರು ಗ್ರಾಮದ ಸರ್ವೆ ನಂ.155ರ ಉತ್ತರಭಾಗದ ಘನತ್ಯಾಜ್ಯ ವಿಲೇವಾರಿ ಘಟಕ ಹಾಗೂ ಸುತ್ತಲಿನ 7 (ಏಳು) ಹಳ್ಳಿಗಳಲ್ಲಿ ನೊಣ ನಾಶಕ ಮತ್ತು ಸೊಳ್ಳೆ ನಾಶಕ ಔಷಧಿಯನ್ನು ಸಿಂಪಡಿಸುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ದಿನಾಂಕ: 23-02-2012 ರಿಂದ 22-02-2013ರವರೆಗಿನ ಅವಧಿಗೆ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.59.00 ಲಕ್ಷಗಳಾಗಿರುತ್ತದೆ.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ ಮಂಡೂರು ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಸುತ್ತಲಿನ ಗ್ರಾಮಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ನಿಯಂತ್ರಿಸಲು ಔಷಧಿ ಸಿಂಪಡಿಸುವ ಕಾಮಗಾರಿಯನ್ನು ಕಳೆದ ಸಾಲಿನಿಂದ ನಿರ್ವಹಿಸುತ್ತಿರುವ M/s.KRIDL ಸಂಸ್ಥೆ ವತಿಯಿಂದ ದಿನಾಂಕ: 23-02-2012 ರಿಂದ ಅನುಮೋದನೆ ನಿರೀಕ್ಷಿಸಿ ಮುಂದುವರೆಸಲಾಗಿರುತ್ತದೆ.

ಆದುದರಿಂದ ಮಂಡೂರು ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಸುತ್ತಲಿನ ಗ್ರಾಮಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ನಿಯಂತ್ರಣಕ್ಕಾಗಿ ಅನುಮೋದನೆ ನಿರೀಕ್ಷಿಸಿ ದಿನಾಂಕ: 23-02-2012 ರಿಂದ M/s.KRIDL ಸಂಸ್ಥೆ ವತಿಯಿಂದ ಮುಂದುವರೆಸಿರುವ ಮತ್ತು ಈ ಕಾಮಗಾರಿಯನ್ನು ದಿನಾಂಕ: 22-02-2013 ರ ವರೆಗಿನ ಒಂದು ವರ್ಷದ ಅವಧಿಗೆ ಸದರಿ ಸಂಸ್ಥೆ ವತಿಯಿಂದ ಕೈಗೊಳ್ಳಲು ಅನುಮೋದನೆ ಕೋರಿ ಟಿಪ್ಪಣಿಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 29-06-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರು ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಸುತ್ತಲಿನ ಗ್ರಾಮಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ನಿಯಂತ್ರಿಸಲು ಔಷಧಿ ಸಿಂಪಡಿಸುವ ಕಾಮಗಾರಿಯನ್ನು ಕಳೆದ ಸಾಲಿನಿಂದ ನಿರ್ವಹಿಸುತ್ತಿರುವ M/s.KRIDL ಸಂಸ್ಥೆ ವತಿಯಿಂದ ದಿನಾಂಕ: 23-02-2012 ರಿಂದ ಅನುಮೋದನೆ ನಿರೀಕ್ಷಿಸಿ ಮುಂದುವರೆಸಲಾಗಿರುತ್ತದೆ.

ಆದುದರಿಂದ ಮಂಡೂರು ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಸುತ್ತಲಿನ ಗ್ರಾಮಗಳಲ್ಲಿ ನೊಣ ಮತ್ತು ಸೊಳ್ಳೆಗಳ ಹಾವಳಿ ನಿಯಂತ್ರಣಕ್ಕಾಗಿ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ನೀಡುವ ಸಂಬಂಧ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ/69 ವೆಚ್ಚ 12/11, ದಿನಾಂಕ: 10-03-2011 ರಂತೆ ಕೆ.ಟಿ.ಪಿ.ಪಿ. ಕಾಯ್ದೆ 1999 ರ ಕಲಂ 4 (ಜಿ) ಅನ್ವಯ ಈ ಸಂಸ್ಥೆಗೆ ವಿನಾಯಿತಿ ನೀಡಿರುವುದರಿಂದ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.

## 13. ವಿಷಯದ ಸಂಖ್ಯೆ: ಸಾಆಸ್ಥಾಸ/23/2012-13:

ಸಂಖ್ಯೆ: ವಿ.ಆ.(ಯೋ)/ಪಿಆರ್/ /2012-13, ದಿನಾಂಕ: 02-07-2012 ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಪೈಕಿ ಪ್ರತಿದಿನ 600 ಮೆ.ಟನ್ ಸಂಸ್ಕರಿಸಿ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲು ಹೈದರಾಬಾದ್ ಮೂಲದ ಮೆ॥ರಾಂಕೀ ಎನರ್ಜಿ ಅಂಡ್

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಎನ್‌ವೈರಾನ್‌ಮೆಂಟ್ ಸಂಸ್ಥೆಯೊಂದಿಗೆ ದಿನಾಂಕ: 11-08-2004 ರಂದು ಕರಾರು ಮಾಡಿಕೊಂಡಿದ್ದು, ಅದರಂತೆ ಸದರಿ ಸಂಸ್ಥೆಗೆ ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಬಳಿಯ ಹೆಸರಘಟ್ಟ ಹೋಬಳಿಯ ಮಾವಳ್ಳಿಪುರ ಗ್ರಾಮದ ಸರ್ವೆ ನಂ.(8) ರಲ್ಲಿ 46 ಎಕರೆ ಪ್ರದೇಶವನ್ನು ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಗಾಗಿ ಒದಗಿಸಲಾಗಿರುತ್ತದೆ.

ಸದರಿ ಪ್ರದೇಶದಲ್ಲಿ ಮೆ॥ರಾಂಕೀ ಎನರ್ಜಿ ಅಂಡ್ ಎನವಿರಾನಮೆಂಟ್ ಲಿಮಿಟೆಡ್ ಸಂಸ್ಥೆಯು ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ 29-01-2007 ರಿಂದ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಕೆಲಸವನ್ನು ಕೈಗೊಂಡಿರುತ್ತದೆ.

ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಕ್ಕೆ, ಪ್ರತಿದಿನ ಪಾಲಿಕೆ ನಿಗಧಿಪಡಿಸಿರುವ ಗುತ್ತಿಗೆದಾರರು ಮತ್ತು ಪಾಲಿಕೆಯ ಕಾಂಪ್ಯಾಕ್ಟರ್ / ಟಿಪ್ಪರ್ ಲಾರಿ ಮುಂತಾದ ಸುಮಾರು 120 ವಾಹನಗಳ ಮೂಲಕ ಸುಮಾರು 750 ಮೆ.ಟನ್ ಘನತ್ಯಾಜ್ಯವನ್ನು ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಪಾಲಿಕೆಯ ಯಲಹಂಕ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳ ಹಲವು ಪ್ರದೇಶಗಳಿಂದ ಸಾಗಾಣಿಕೆ ಮಾಡಲಾಗುತ್ತಿದೆ. ಈ ಪೈಕಿ ಸುಮಾರು 80 ವಾಹನಗಳು ಉಲ್ಲೇಖದ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮತ್ತು ಸುಮಾರು 40 ವಾಹನಗಳು ಸಂಭ್ರಮ್ ಕಾಲೇಜ್ ರಸ್ತೆ ಮುಖಾಂತರ ಸಂಚರಿಸುತ್ತವೆ.

ಸದರಿ ಮಾವಳ್ಳಿಪುರ ಘಟಕವು ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಗ್ರಾಮದ ರಸ್ತೆಯಲ್ಲಿ ಸುಮಾರು 4.50 ಕಿ.ಮೀ. ದೂರದಲ್ಲಿರುತ್ತದೆ.

ಈ ಪೈಕಿ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಘನತ್ಯಾಜ್ಯ ಸಂಸ್ಕರಣೆ ಘಟಕದ ಕ್ರಾಸ್‌ವರೆಗಿನ 4.00 ಕಿ.ಮೀ. ಉದ್ದಕ್ಕೆ ಸುಮಾರು 3.00 – 3.50 ಅಗಲದ ಡಾಂಬರ ರಸ್ತೆ ಇದ್ದು, ಉಳಿಕೆ ಕ್ರಾಸ್‌ನಿಂದ ಘಟಕದವರೆಗೆ ಸುಮಾರು 0.50 ಕಿ.ಮೀ. ಉದ್ದದ ಕಚ್ಚಾ ಮಣ್ಣಿನ ರಸ್ತೆ ಇರುತ್ತದೆ. ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ, ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಕ್ರಾಸ್‌ವರೆಗಿನ ರಸ್ತೆಯು ಕಿರಿದಾಗಿರುವುದೇ ಅಲ್ಲದೆ ರಸ್ತೆಯಲ್ಲಿ ಗುಂಡಿಗಳು ಉಂಟಾಗಿ, ಬದಿಗಳಲ್ಲಿ ಕೊರೆದು ರಸ್ತೆ ಹಾಳಾಗಿರುತ್ತದೆ. ಈ ರಸ್ತೆಯ ಮೂಲಕ ಮಾವಳ್ಳಿಪುರ, ಅಂಗರಾಜಪುರ, ಕೆಂಪನಹಳ್ಳಿ, ಕುರುಬರಹಳ್ಳಿ ಮುಂತಾದ ಇನ್ನೂ ಹಲವು ಗ್ರಾಮಗಳಿಗೆ ಸಂಪರ್ಕ ಇದ್ದು, ಈ ರಸ್ತೆಯಲ್ಲಿ ವಾಹನಗಳು ಎದುರು ಬದುರು ದಾಟುವುದು (ಕ್ರಾಸಿಂಗ್) ಬಹಳ ಕಷ್ಟಕರವಾಗಿರುತ್ತದೆ. ಅಲ್ಲದೇ ಘನತ್ಯಾಜ್ಯ ಸಾಗಾಣಿಕೆ ವಾಹನಗಳು ಎದುರಾದಾಗ ದ್ವಿಚಕ್ರ ವಾಹನಗಳು ಕ್ರಾಸ್ ಮಾಡಲು ಕಷ್ಟಕರವಾಗಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಮಾವಳ್ಳಿಪುರ ಮತ್ತು ಸುತ್ತಲಿನ ಗ್ರಾಮಸ್ಥರೂ ಕೂಡ ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖದ ರಸ್ತೆಯಲ್ಲಿ ಸಂಚರಿಸುವ ಘನತ್ಯಾಜ್ಯ ಸಾಗಾಣಿಕೆ ವಾಹನಗಳ ಮತ್ತು ಈ ಭಾಗದ ಸಾರ್ವಜನಿಕರ ವಾಹನಗಳ ಸುಗಮ ಸಂಚಾರ ಮತ್ತು ಸ್ಥಳೀಯರ ಸುರಕ್ಷತೆ ದೃಷ್ಟಿಯಿಂದ ಉಲ್ಲೇಖದಲ್ಲಿನ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕದ ಕ್ರಾಸ್‌ವರೆಗಿನ 4.00 ಕಿ.ಮೀ. ರಸ್ತೆಯನ್ನು ಹಾಲಿ ಸುಮಾರು 3.00 – 3.50 ಅಗಲದಿಂದ ಎರಡು ವಾಹನಗಳು ಒಟ್ಟಿಗೆ ಸಂಚರಿಸಲು ಅನುವಾಗುವಂತೆ ಸುಮಾರು 6.00 – 6.50 ಮೀ. ಗೆ ಅಗಲೀಕರಣಗೊಳಿಸಿ, ಅವಶ್ಯಕ ಜಾಗಗಳಲ್ಲಿ ಮೋರಿಗಳನ್ನು ನಿರ್ಮಿಸಿ ಅಭಿವೃದ್ಧಿಗೊಳಿಸಲು ಅಂದಾಜುಪಟ್ಟಿಯನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಆಧರಿಸಿ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.200.00 ಲಕ್ಷಗಳಾಗಿರುತ್ತದೆ. ಕ್ರಾಸ್‌ನಿಂದ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣ ಘಟಕದವರೆಗಿನ ಕಚ್ಚಾ ರಸ್ತೆ ಇರುವ ಜಮೀನಿನ ತಗಾದೆಯು ನ್ಯಾಯಾಲಯದಲ್ಲಿರುವುದರಿಂದ ಈ ಭಾಗದ ಅಭಿವೃದ್ಧಿಗೆ ಯೋಜಿಸಿರುವುದಿಲ್ಲ.

ಸದರಿ ಕಾಮಗಾರಿಗೆ 2012-13ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯದ ಲೆಕ್ಕಶೀರ್ಷಿಕೆ P0935 Approach roads to landfill sites ಅಡಿಯಲ್ಲಿ ರೂ.200.00 ಲಕ್ಷಗಳ ಅನುದಾನ ಒದಗಿಸಿ ಕಾಮಗಾರಿ ಸಂಖ್ಯೆಯನ್ನು ನೀಡಲಾಗಿರುತ್ತದೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಯಲಹಂಕ ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಿಂದ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣ ಮತ್ತು ವಿಲೇವಾರಿ ಘಟಕದವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಈ ಕೆಳಗಿನಂತೆ ಅನುಮೋದನೆ ಕೋರಲಾಗಿದೆ.

1. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಗೆ ನಿಯಮಾನುಸಾರ ಅಲ್ಪಾವಧಿ ಟೆಂಡರ್ ಕರೆದು ಗುತ್ತಿಗೆದಾರರನ್ನು ನಿಗಧಿ ಪಡಿಸಲು ಅನುಮೋದನೆ.

ಕೋರಿ ಟಿಪ್ಪಣಿಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಮುಂದೂಡಲಾಗಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## 14. ವಿಷಯದ ಸಂಖ್ಯೆ: ಸಾಆಸ್ಥಾಸ/24/2012-13:

ಸಂಖ್ಯೆ: ಆ.ವೈ.(ತಾಮಕುಕ)/ಪಿಆರ್/ /2011-12, ದಿನಾಂಕ: 28-06-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.59, ಮಾರುತಿ ಸೇವಾ ನಗರ, ವ್ಯಾಪ್ತಿಯಲ್ಲಿರುವ ಪಾಲಿಕೆ ಕಟ್ಟಡದಲ್ಲಿ ಆರೋಗ್ಯ ಕೇಂದ್ರ ನಡೆಸಲು ಡಾ॥ ಬಿ.ಆರ್.ಅಂಬೇಡ್ಕರ ವೈದ್ಯಕೀಯ ಮಹಾವಿದ್ಯಾಲಯ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಮಾನ್ಯ ಶ್ರೀ.ಆರ್.ರಾಜೇಂದ್ರನ್, ಪಾಲಿಕೆಯ ಸದಸ್ಯರು ಪಾಲಿಕೆಗೆ ಪತ್ರವನ್ನು ಬರೆದು ಕೋರಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಉಭಯ ಸಂಸ್ಥೆಗಳು ಈ ಕೆಳಕಂಡ ನಿರ್ಣಯಗಳಿಗೆ ಒಳಪಟ್ಟು ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

ನಿರ್ಣಯಗಳು:

1. ಬೆಂಗಳೂರು ಉತ್ತರ-ಪೂರ್ವ ಭಾಗದ ವಾರ್ಡ್ ನಂ.59 ರ ಮಾಹಿತಿ ಸೇವಾನಗರ, ಜೀವನಹಳ್ಳಿಯ ಹೌಸಿಂಗ್ ಬೋರ್ಡ್ ಕ್ವಾಟರ್ಸ್ ಕೃಷ್ಣಪ್ಪ ರಸ್ತೆಯಲ್ಲಿರುವ ಆಟದ ಮೈದಾನಕ್ಕೆ ಹೊಂದಿಕೊಂಡಂತೆ ಇರುವ ಪಾಲಿಕೆ ಕಟ್ಟಡವನ್ನು ಆರೋಗ್ಯ ಕೇಂದ್ರವಾಗಿ ನಡೆಸಲು ಸದ್ಯ ಇರುವ ಸಿಬ್ಬಂದಿಯೊಂದಿಗೆ ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ತಜ್ಞ ವೈದ್ಯರ ಸೇವೆಯನ್ನು ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪ್ರಾಂಶುಪಾಲರು, ವಿಭಾಗ ಮುಖ್ಯಸ್ಥರು, ಕಮ್ಯುನಿಟಿ ಮೆಡಿಸನ್ ವಿಭಾಗ, ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ನೇರ ಆಡಳಿತ ನಿರ್ವಹಣೆಯಡಿಯಲ್ಲಿ ನಡೆಸಿಕೊಂಡು ಹೋಗಲು ಮೂರು (3) ವರ್ಷಗಳ ಕಾಲಾವಧಿಗಾಗಿ ವಹಿಸಿಕೊಡಲು ಒಪ್ಪಿರುತ್ತಾರೆ. ಒಪ್ಪಂದದಲ್ಲಿ ಯಾವುದೇ ನ್ಯೂನತೆಗಳು ಇಲ್ಲದಿದ್ದಲ್ಲಿ ಹಾಲಿ ಇರುವ ಒಡಂಬಡಿಕೆಯನ್ನು ಮುಂದುವರೆಸಲು ಪರಸ್ಪರ ಒಪ್ಪಿಕೊಂಡಿರುತ್ತಾರೆ.

2. ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ವತಿಯಿಂದ ಭಾನುವಾರ ಮತ್ತು ಸಾರ್ವಜನಿಕ ರಜಾ ದಿನಗಳ ಹೊರತಾಗಿ ಉಳಿದೆಲ್ಲಾ ದಿನಗಳು ವೈದ್ಯಕೀಯ ಸೇವೆಗಳನ್ನು ಒದಗಿಸಲು ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ: 09.00 ರಿಂದ ಮಧ್ಯಾಹ್ನ: 04.00 ರ ತನಕ ಹಾಗೂ ಶನಿವಾರದಂದು ಬೆಳಿಗ್ಗೆ: 09.00 ರಿಂದ ಮಧ್ಯಾಹ್ನ: 01.00 ಗಂಟೆಯವರೆಗೆ ನೀಡಲು ಒಪ್ಪಿರುತ್ತಾರೆ.

3. ಪ್ರತಿ ದಿನವು ಒಬ್ಬರು ಕರ್ತವ್ಯನಿರತ ವೈದ್ಯರು (ಮೆಡಿಕಲ್ ಆಫೀಸರ್) ಕರ್ತವ್ಯನಿರತರಾಗಿರುತ್ತಾರೆಂದು ಹಾಗೂ ಉಳಿದ ದಿನಗಳಲ್ಲಿ ಪ್ರತಿ ಒಂದು ವಿಭಾಗದಿಂದ ಒಬ್ಬ ತಜ್ಞ ವೈದ್ಯರು ವಾರಕ್ಕೆ ಒಂದು ದಿನ ಕರ್ತವ್ಯ ನಿರ್ವಹಿಸುತ್ತಾರೆಂದು ಒಪ್ಪಿರುತ್ತಾರೆ.

4. ಅದರಂತೆ ಅವರು ಫಿಜಿಶಿಯನ್, ಪ್ರಸೂತಿ ತಜ್ಞರು, ಮಕ್ಕಳ ತಜ್ಞರು, ಚರ್ಮರೋಗ ತಜ್ಞರು, ತಜ್ಞ ದಂತ ವೈದ್ಯರು ಇವರುಗಳ ಸೇವೆಗಳನ್ನು ಒದಗಿಸಲು ಒಪ್ಪಿರುತ್ತಾರೆ.

5. ದಂತ ಚಿಕಿತ್ಸೆಗೆ ಅಗತ್ಯವಿರುವ ಉಪಕರಣಗಳು ಹಾಗೂ ಸಲಕರಣೆಗಳನ್ನು ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯವರ ವತಿಯಿಂದ ಸಣ್ಣ ಚಿಕಿತ್ಸೆಗಳಿಗೆ ಅವಶ್ಯವಿದ್ದಲ್ಲಿ ರೋಗಿಗಳು ಒಪ್ಪಿಕೊಂಡ ಪಕ್ಷದಲ್ಲಿ ಮಾತೃಶ್ರೀ ರಮಾಬಾಯಿ ಅಂಬೇಡ್ಕರ್ ದಂತ ವೈದ್ಯಕೀಯ ವಿದ್ಯಾಲಯದ ಆಸ್ಪತ್ರೆಯಿಂದ ದಂತ ವಿದ್ಯಾಲಯ ಆಸ್ಪತ್ರೆಯು ವಿಧಿಸುವ ಚಿಕಿತ್ಸಾ ಶುಲ್ಕದಲ್ಲಿ ಶೇಕಡಾ 10% ರಿಂದ 20% ರಿಯಾಯಿತಿ ದರದಲ್ಲಿ ಔಷಧಿಗಳನ್ನು ಹೊರತುಪಡಿಸಿ ಚಿಕಿತ್ಸೆ ನೀಡಲು ಒಪ್ಪಿರುತ್ತಾರೆ.

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿಯಮದಂತೆ ಒಂದು ವೇಳೆ ತುರ್ತು ಸಮಯದಲ್ಲಿ ಆರೋಗ್ಯ ಕೇಂದ್ರದಲ್ಲಿ ಔಷಧಿ/ಮಾತ್ರೆಗಳು ದೊರೆಯದಿದ್ದ ಪಕ್ಷದಲ್ಲಿ ಪಾಲಿಕೆ ಆರೋಗ್ಯ ಕೇಂದ್ರದ ಔಷಧಿ ಚೀಟಿಯಲ್ಲಿ ಹೊರಗಡೆ ಔಷಧಿ ಅಂಗಡಿಗಳಿಂದ ಔಷಧಿ/ಮಾತ್ರೆಗಳನ್ನು ತರಲು ಚೀಟಿಯನ್ನು ಬರೆದುಕೊಡಬಹುದೇ ವಿನಃ ಬೇರಾವುದೇ ಸಂದರ್ಭದಲ್ಲಿ ಔಷಧಿಯನ್ನು ಹೊರಗಡೆ ಔಷಧಿ ಅಂಗಡಿಗಳಿಂದ ತರಲು ಚೀಟಿಯನ್ನು ಬರೆದುಕೊಡಬಾರದು.

7. ಯಾವುದೇ ರೋಗಿಯು ಬೇರೆ ಆಸ್ಪತ್ರೆಗಳಿಗೆ ಹೆಲಿಗೆ ಅಥವಾ ಇನ್ನಿತರೆ ಸೌಲಭ್ಯಗಳಿಗೆ ಹತ್ತಿರದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಗೆ ಕಳುಹಿಸುವುದು ಅಲ್ಲದೆ ರೋಗಿಯು, ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಲು ಒಪ್ಪಿದಲ್ಲಿ ಲಿಖಿತವಾಗಿ ಬರೆಯಿಸಿಕೊಂಡು ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಬಹುದು. ಇದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಸರಿಗೆ ಚ್ಯುತಿ ಬರತಕ್ಕದ್ದಲ್ಲ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

8. ಆಸ್ಪತ್ರೆಯ ಆಡಳಿತಕ್ಕೆ ಸಂಬಂಧಿಸಿದಂತೆ ನೀರು ವಿದ್ಯುಚ್ಛಕ್ತಿ ಹಾಗೂ ಇನ್ನಿತರೆ ಆಡಳಿತಾತ್ಮಕ ಖರ್ಚನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಭರಿಸುವುದು. ತಜ್ಞ ವೈದ್ಯರನ್ನು ಮತ್ತು ಇನ್ನಿತರೆ ಅಧೀನ ಸಿಬ್ಬಂದಿಯನ್ನು ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯವರು ನೀಡಲು ಒಪ್ಪಿರುತ್ತಾರೆ.

9. ಈ ಮೇಲ್ಕಂಡ ನಿರ್ಣಾಯಕ ಅಂಶಗಳನ್ನು ಗಣನೀಯವಾಗಿ ತೆಗೆದುಕೊಂಡು ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯವರು ಹಾಗೂ ಆಡಳಿತ ವರ್ಗದವರು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒಳಗೊಂಡಂತೆ ಕಾರ್ಯನಿರ್ವಹಿಸಬೇಕಾಗಿರುತ್ತದೆ.

10. ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯವರು ಸಾರ್ವಜನಿಕರಿಗೆ ದೈನಂದಿನ ಚಿಕಿತ್ಸೆ ನೀಡುವಾಗ ಯಾವುದೇ ಅನಾಹುತಗಳು ಈ ಸ್ಥಳದಲ್ಲಿ ಅಥವಾ ಬೇರೆಡೆ ಸ್ಥಳಕ್ಕೆ (ಆಸ್ಪತ್ರೆಗಳಿಗೆ) ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿದಾಗ ಸಂಭವಿಸುವ ಅನಾಹುತಗಳಿಗೆ ಪಾಲಿಕೆಯು ಜವಾಬ್ದಾರರಾಗಿರುವುದಿಲ್ಲ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಒದಗಿಸಲಾಗುವ ಸೇವಾ ಸೌಲಭ್ಯಗಳು ಮತ್ತು ಸವಲತ್ತುಗಳು:**

1. ಅಗತ್ಯವಿರುವ ಕಟ್ಟಡದಲ್ಲಿ ಚಿಕಿತ್ಸೆ ಪರಿವೀಕ್ಷಣಾ ಕೊಠಡಿ (ಕನ್ಸಲ್ಟೇಷನ್ ರೂಮ್) ಸಣ್ಣ ಶಸ್ತ್ರ ಚಿಕಿತ್ಸೆ ಕೊಠಡಿ (ಮೈನರ್ ಓಟಿ ರೂಂ), ಹೆರಿಗೆ ಕೊಠಡಿ (ಡೆಲಿವರಿ ರೂಂ), ಸಣ್ಣ ಪ್ರಯೋಗ ಶಾಲಾ ಕೊಠಡಿ (ಲ್ಯಾಬ್ ಸರ್ವೀಸಸ್) ಸೌಲಭ್ಯಗಳನ್ನು ಒದಗಿಸಬೇಕು.

2. ಕಟ್ಟಡದಲ್ಲಿ ಆಸ್ಪತ್ರೆಗೆ ಅಗತ್ಯವಿರುವ ವಿದ್ಯುತಚ್ಛಕ್ತಿ ಮತ್ತು ನೀರಿನ ಸೌಲಭ್ಯಗಳನ್ನು ಒದಗಿಸಬೇಕು.

3. ಆಸ್ಪತ್ರೆಗೆ ಅವಶ್ಯವಿರುವ ಆರೋಗ್ಯ ಸಂಪರ್ಕ ಸೇವಾ ಕಾರ್ಯಕರ್ತೆಯರನ್ನು ಸಿಬ್ಬಂದಿಗಳನ್ನು ಒದಗಿಸಬೇಕು.

4. ಇತರೆ ಪಾಲಿಕೆ ಆಸ್ಪತ್ರೆಗಳಿಗೆ ಒದಗಿಸುವಂತಹ ಅಗತ್ಯ ಔಷಧಿಗಳನ್ನು ಈ ಆರೋಗ್ಯ ಸೇವಾ ಕೇಂದ್ರಕ್ಕೂ ಕಾಲಕಾಲಕ್ಕೆ ಸರಿಯಾಗಿ ಒದಗಿಸಬೇಕು.

5. ಆಸ್ಪತ್ರೆಯಲ್ಲಿ ಆರ್‌ಸಿಹೆಚ್ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಬರುವಂತಹ ರೋಗಿಗಳಿಗೆ ವಿಸ್ತರಿಸಬೇಕು.

(ಅ) ಜನನಿ ಸುರಕ್ಷಾ ಯೋಜನೆ
(ಆ) ಪ್ರಸೂತಿ ಆರೈಕೆ
(ಇ) ತಾಯಿ ಭಾಗ್ಯ ಪ್ಲಸ್ ಯೋಜನೆ
(ಈ) ಮಡಿಲು ಯೋಜನೆ

6. ಆಸ್ಪತ್ರೆಯಲ್ಲಿ ಕುಟುಂಬ ಯೋಜನೆ ಕಾರ್ಯಕ್ರಮದಡಿಯಲ್ಲಿ ಗರ್ಭನಿರೋಧಕ ವಿಧಾನದ ಸೌಲಭ್ಯಕ್ಕೆ ಬೇಕಾಗುವಂತಹ ಈ ಕೆಳಕಂಡ ಯೋಜನೆಗಳನ್ನು ಬರುವಂತಹ ಪುರುಷ ಮತ್ತು ಸ್ತ್ರೀರೋಗಿಗಳಿಗೆ ವಿಸ್ತರಿಸಬೇಕು.

(ಅ) ಕಾಂಡೋಮ್
(ಆ) ಗರ್ಭನಿರೋಧಕ ಗುಳಿಗೆಗಳು
(ಇ) ಕಾಪರ್ ಟಿ
(ಈ) ಪುರುಷ ಮತ್ತು ಮಹಿಳೆಯರಿಗೆ ಬೇಕಾಗುವಂತಹ ಲೆಪ್ರೋಸ್ಕೋಪಿಕ್ ಸ್ಟರ್ ಲೈಝೇಷನ್ (ಲೆಪ್ರೋಸ್ಕೋಪ್ ಕೊಡಬೇಕು) ಇನಸೆಂಟೀವ್ ಸಮೇತ

7. ಲಸಿಕಾ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡಂತಹ ಸೌಲಭ್ಯಗಳನ್ನು ಒದಗಿಸಬೇಕು.

(ಅ) ಕಾಯಿಲೆಗಳನ್ನು ತಡೆಗಟ್ಟಲು ಬೇಕಾಗುವಂತಹ ಎಲ್ಲಾ ತರಹದ ಲಸಿಕೆಗಳು ಮತ್ತು ಅದನ್ನು ಶೇಖರಿಸಿಡಲು ಐಸ್ ಲೈನ್ ರೆಫ್ರಿಜರೇಟರ್ (ಐಎಲ್‌ಆರ್)
(ಆ) ಆಂಟಿ ರೇಬೀಸ್ ಚುಚ್ಚುಮದ್ದು ಪೂರೈಸುವುದು
(ಇ) ಹೆಪಟೈಟಿಸ್ 'ಬಿ' ಚುಚ್ಚುಮದ್ದು ಪೂರೈಸುವುದು

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

8. ಆಸ್ಪತ್ರೆಯಲ್ಲಿ ರೋಗಿಗಳಿಗೆ ಒದಗಿಸುವಂತಹ ಈ ಕೆಳಕಂಡಂತಹ ಔಷಧಿ ಮತ್ತು ಮಾತ್ರೆಗಳನ್ನು ಪೂರೈಸುವುದು.

(ಅ) ಐರನ್ ಮತ್ತು ಫೋಲಿಕ್ ಆಸಿಡ್ ಮಾತ್ರೆ ಮತ್ತು ಔಷಧಿಗಳು
(ಆ) ಇತರೆ ಬಿಬಿಎಂಪಿ ಹೆರಿಗೆ ಕೇಂದ್ರಗಳಿಗೆ ಪೂರೈಸುವಂತಹ ಔಷಧಿ ಮತ್ತು ಮಾತ್ರೆಗಳನ್ನು ಇಲ್ಲಿಗೂ ಪೂರೈಸುವುದು.

9. ಸರ್ಕಾರದ ಯೋಜನೆಯಡಿಯಲ್ಲಿ ಘೋಷಿಸಿದಂತ ಯಾವುದೇ ಹೊಸ ಸೇವೆ/ಸೌಲಭ್ಯಗಳು/ಸ್ಕೀಮ್‌ಗಳನ್ನು ಕಾಲಕಾಲಕ್ಕೆ ಈ ಕೇಂದ್ರಕ್ಕೂ ಅನ್ವಯಿಸುವುದು.

10. ಆಸ್ಪತ್ರೆ ಕಟ್ಟಡಕ್ಕೆ ಬೇಕಾಗುವಂತಹ ಅಗತ್ಯ ಸೆಕ್ಯುರಿಟಿ ಗಾರ್ಡ್‌ಗಳನ್ನು ಒದಗಿಸುವುದು.

11. ದೈನಂದಿನ ಆಸ್ಪತ್ರೆಯ ಕಾರ್ಯ ಚಟುವಟಿಕೆಯನ್ನು ನಿರ್ವಹಿಸಲು ಮತ್ತು ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯದೊಂದಿಗೆ ಸಮನ್ವಯ ಸಾಧಿಸಲು ಪಾಲಿಕೆಯಿಂದ ಆಡಳಿತಾತ್ಮಕ ವೈದ್ಯಾಧಿಕಾರಿಯನ್ನು ಮತ್ತು ಇತರೆ ಸಿಬ್ಬಂದಿಯನ್ನು ನಿಯೋಜಿಸುವುದು ಹಾಗೂ ಪಾಲಿಕೆಯಿಂದ ರೋಗಿಗಳಿಗೆ ನೀಡುವ ಎಲ್ಲಾ ಸವಲತ್ತುಗಳಿಗೆ ದೃಢೀಕರಿಸಿ ಮೇಲಾಧಿಕಾರಿಗಳಿಗೆ ಕಳುಹಿಸುವುದು.

**ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯವರು ಒದಗಿಸಬೇಕಾಗಿರುವ ಸೇವಾ ಸೌಲಭ್ಯಗಳು ಮತ್ತು ಸವಲತ್ತುಗಳು:**

1. ಆಸ್ಪತ್ರೆ ಕಟ್ಟಡದಲ್ಲಿ ಬೇರೆ ಬೇರೆ ವಿಭಾಗಳಿಗೆ ಬೇಕಾಗುವಂತಹ ಪಾರ್ಟಿಷನ್

2. ಆಸ್ಪತ್ರೆಗೆ ಬೇಕಾಗುವಂತಹ ಈ ಕೆಳಕಂಡ ಅಗತ್ಯ ಸಿಬ್ಬಂದಿಗಳಾದ:

(ಅ) ನುರಿತ ಮತ್ತು ತಜ್ಞ ವೈದ್ಯರು (ಪ್ರಸೂತಿ ತಜ್ಞರು ಮತ್ತು ಮಕ್ಕಳ ತಜ್ಞರು)
(ಆ) ತಲಾ ಒಬ್ಬ ಮಹಿಳಾ ಮತ್ತು ಪುರುಷ ವೈದ್ಯಾಧಿಕಾರಿಗಳು (ಮೆಡಿಕಲ್ ಆಫೀಸರ್)
(ಇ) ವಾರಕ್ಕೊಂದು ಬಾರಿ ನುರಿತ ಮತ್ತು ತಜ್ಞ ವೈದ್ಯರಿಂದ ಆರೋಗ್ಯ ತಪಾಸಣೆ ಶಿಬಿರ
(ಈ) ಅಗತ್ಯಕ್ಕೆ ತಕ್ಕಂತಹ ಬೋಧಕೇತರ ಸಿಬ್ಬಂದಿ ವರ್ಗದವರು
(ಉ) ಹೌಸ್ ಸರ್ಜನ್ ಗಳನ್ನು ನಿಯೋಜಿಸುವುದು
(ಊ) ಪ್ರತಿ ದಿನವೂ ವಿವಿಧ ವಿಭಾಗದ ತಜ್ಞ ದಂತ ವೈದ್ಯ ಸೇವೆಯನ್ನು ಒದಗಿಸುವುದು
(ಋ) ಕೆಲಸದ ಸಮಯ: ಬೆಳಗ್ಗೆ 09.00 ಘಂಟೆಯಿಂದ ಸಂಜೆ 04.00 ಘಂಟೆಯವರೆಗೆ
(ಋ) ಪ್ರಯೋಗ ಶಾಲೆಗೆ ಅಗತ್ಯವಿರುವ ಪ್ರಯೋಗ ಶಾಲಾ ತಂತ್ರಜ್ಞರನ್ನು ಮತ್ತು ಅರೆ ವೈದ್ಯಕೀಯ ಮತ್ತು ನಾಲ್ಕನೇ ದರ್ಜೆಯ ಸಿಬ್ಬಂದಿಯನ್ನು ನೀಡಲಾಗುವುದು.

3. ಎಲ್ಲಾ ಐಇಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು
4. ಎಲ್ಲಾ ಔಷಧಿ, ಗುಳಿಗೆ ಮತ್ತು ಇತರೆ ಪೂರೈಕೆಗೆ ಎರಡು ಕಡೆಯಿಂದ ಜಂಟಿಯಾಗಿ ನಿರ್ವಹಿಸುವುದು

5. ಎಲ್ಲಾ ತರಹದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಬಿಬಿಎಂಪಿ ಜೊತೆಯಲ್ಲಿ ಜಂಟಿಯಾಗಿ ಅನುಷ್ಠಾನಗೊಳಿಸುವುದು

6. ಕೇಂದ್ರದಲ್ಲಿ ದಂತ ವೈದ್ಯಕೀಯ ಸೇವೆಗಳಿಗೆ ಸೌಲಭ್ಯಗಳನ್ನು ಒದಗಿಸುವುದು

7. ರೋಗಿಯು ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಲು ಒಪ್ಪಿದ್ದಲ್ಲಿ ಲಿಖಿತವಾಗಿ ಬರೆಯಿಸಿಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಬಹುದು. ಡಾ॥ ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಆಸ್ಪತ್ರೆಯಲ್ಲಿ ಒದಗಿಸುವಂತಹ ಶಸ್ತ್ರ ಚಿಕಿತ್ಸೆ/ತಪಾಸಣೆ ಸೇವೆಗಳಿಗೆ (ಔಷಧಿ ಹೊರತುಪಡಿಸಿ) ಈ ಕೆಳಕಂಡ ಶುಲ್ಕವನ್ನು ವಸೂಲಿ ಮಾಡಬಹುದು

(ಅ) ಉದರ ದರ್ಶಕ ಶಸ್ತ್ರ ಚಿಕಿತ್ಸೆ - ರೂ.5,000/-
(ಆ) ಸಾಮಾನ್ಯ ಶಸ್ತ್ರ ಚಿಕಿತ್ಸೆ - ರೂ.2,000/-

S. Venkatesh Babu
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

(ಇ) ಸಾಮಾನ್ಯ ಹೆರಿಗೆ - ಯಾವುದೇ ಶುಲ್ಕವಿರುವುದಿಲ್ಲ.
(ಈ) ಸಿಝೇರಿಯನ್ ಶಸ್ತ್ರ ಚಿಕಿತ್ಸೆ - ರೂ.2,000/-

8. ಪ್ರಯೋಗ ಶಾಲೆಯ ರಕ್ತ ಮತ್ತು ಇತರೆ ತಪಾಸಣೆಗಾಗಿ ಶೇಕಡಾ 20% ರಷ್ಟು ರಿಯಾಯಿತಿ ವಿಸ್ತರಿಸಲಾಗುವುದು. (ಹೆಚ್ ಐ. ಯೂರಿನ್ ರೋಟೀನ್, ಆರ್.ಐ.ಎಸ್. ತಪಾಸಣೆಯನ್ನು ಉಚಿತವಾಗಿ ಮಾಡಲಾಗುವುದು)

9. ಮೇಲ್ಕಂಡ ಅಂಶಗಳಲ್ಲಿ ಯಾವುದೇ ನ್ಯೂನತೆಗಳು ಕಂಡು ಬಂದಲ್ಲಿ ಅಥವಾ ಒಡಂಬಡಿಕೆಯಲ್ಲಿ ವ್ಯತ್ಯಾಸಗಳಾದ್ದಲ್ಲಿ ಪಾಲಿಕೆ ಅಥವಾ ಡಾ|| ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಆಡಳಿತ ಮಂಡಳಿಯವರು ಮೂರು (3) ತಿಂಗಳುಗಳ ಕಾಲಾವಕಾಶ ನೀಡಿ ಒಪ್ಪಂದ ಈಡೇರದಿದ್ದಲ್ಲಿ ಒಪ್ಪಂದ ರದ್ದುಪಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಸಾರ್ವಜನಿಕರಿಗೆ ಉತ್ತಮ ಚಿಕಿತ್ಸಾ ಸೌಲಭ್ಯ ನೀಡುವ ನಿಟ್ಟಿನಲ್ಲಿ ಪಾಲಿಕೆ ಮತ್ತು ಡಾ|| ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಬಹುದಾಗಿದ್ದು, ಈ ಸಮಿತಿಯಲ್ಲಿ ಸ್ಥಳೀಯ ಪಾಲಿಕೆ ಸದಸ್ಯರು, ಉಪ ಆರೋಗ್ಯಾಧಿಕಾರಿಗಳು/ಆರೋಗ್ಯಾಧಿಕಾರಿಗಳು ನಾನ್ ಕ್ಲಿನಿಕಲ್, ಅಧೀಕ್ಷಕರು/ಆರೋಗ್ಯಾಧಿಕಾರಿಗಳು (ಕ್ಲಿನಿಕಲ್), ವೈದ್ಯಾಧಿಕಾರಿಗಳು ಮತ್ತು ಡಾ|| ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಪ್ರತಿನಿಧಿಗಳು ತಿಂಗಳಿಗೊಮ್ಮೆ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚಿಸ ಬೇಕಾಗಿದ್ದು, ನ್ಯೂನತೆಗಳನ್ನು ಸರಿಪಡಿಸುವುದು. ಹಾಗೂ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡಲು ಕ್ರಮವಹಿಸುವುದು.

ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಪ್ರಸ್ತಾಪಿಸುತ್ತಾ ವಾರ್ಡ್ ನಂ.59, ಮಾರುತಿ ಸೇವಾ ನಗರ, ವ್ಯಾಪ್ತಿಯಲ್ಲಿರುವ ಬೆಂಗಳೂರು ಉತ್ತರ-ಪೂರ್ವ ಭಾಗದ ವಾರ್ಡ್ ನಂ.59 ರ ಮಾಹಿತಿ ಸೇವಾನಗರ, ಜೀವನಹಳ್ಳಿಯ ಹೌಸಿಂಗ್ ಬೋರ್ಡ್ ಕ್ವಾಟರ್ಸ್ ಕೃಷ್ಣಪ್ಪ ರಸ್ತೆಯಲ್ಲಿರುವ ಆಟದ ಮೈದಾನಕ್ಕೆ ಹೊಂದಿಕೊಂಡಂತೆ ಇರುವ ಪಾಲಿಕೆ ಕಟ್ಟಡವನ್ನು ಆರೋಗ್ಯ ಕೇಂದ್ರವಾಗಿ ನಡೆಸಲು ಸದ್ಯ ಇರುವ ಸಿಬ್ಬಂದಿಯೊಂದಿಗೆ ಡಾ|| ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ತಜ್ಞರ ವೈದ್ಯರ ಸೇವೆಯನ್ನು ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪ್ರಾಂಶುಪಾಲರು, ವಿಭಾಗ ಮುಖ್ಯಸ್ಥರು, ಕಮ್ಯುನಿಟಿ ಮೆಡಿಸನ್ ವಿಭಾಗ, ಡಾ|| ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ನೇರ ಆಡಳಿತ ನಿರ್ವಹಣೆಯಡಿಯಲ್ಲಿ ನಡೆಸಿಕೊಂಡು ಹೋಗಲು ಮೂರು (3) ವರ್ಷಗಳ ಕಾಲಾವಧಿಗಾಗಿ ವಹಿಸಿಕೊಡಲು ಒಪ್ಪಿರುತ್ತಾರೆ. ತತ್ಸಂಬಂಧಕ್ಕೆ ಅನುಮೋದನೆ ಕೋರಿ ಟಿಪ್ಪಣಿಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 28-06-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.59 ರ ಮಾಹಿತಿ ಸೇವಾನಗರ, ಜೀವನಹಳ್ಳಿಯ ಹೌಸಿಂಗ್ ಬೋರ್ಡ್ ಕ್ವಾಟರ್ಸ್ ಕೃಷ್ಣಪ್ಪ ರಸ್ತೆಯಲ್ಲಿರುವ ಆಟದ ಮೈದಾನಕ್ಕೆ ಹೊಂದಿಕೊಂಡಂತೆ ಇರುವ ಪಾಲಿಕೆ ಕಟ್ಟಡವನ್ನು ಆರೋಗ್ಯ ಕೇಂದ್ರವನ್ನಾಗಿ ನಡೆಸಲು ಪಾಲಿಕೆಯಲ್ಲಿ ಹಾಲಿ ಇರುವ ಸಿಬ್ಬಂದಿಯೊಂದಿಗೆ ಡಾ|| ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯ ತಜ್ಞ ವೈದ್ಯರ ಸೇವೆಯನ್ನು ನೀಡಲು ಒಡಂಬಡಿಕೆ ಮಾಡಿಕೊಳ್ಳಲು ಹಾಗೂ ಸದರಿ ಆಸ್ಪತ್ರೆ ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೇರ ಆಡಳಿತ ನಿರ್ವಹಣೆಯಡಿಯಲ್ಲಿ ಒಳಪಟ್ಟು ಡಾ|| ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ರವರಿಗೆ (3) ವರ್ಷಗಳ ಕಾಲಾವಧಿಯವರೆವಿಗೆ ಆರೋಗ್ಯ ಕೇಂದ್ರವನ್ನು ವಹಿಸಿಕೊಡಲು ಸಮಿತಿಯು ತೀರ್ಮಾನಿಸಿತು.

## 15. ವಿಷಯದ ಸಂಖ್ಯೆ: ಸಾಆಸ್ಥಾಸ/25/2012-13:

ಅಪರ ಆಯುಕ್ತರು (ಯೋಜನೆ) ರವರ ದಿನಾಂಕ: 07-07-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾ.ರಾ.ನಗರ ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಾನ್ಯ ಆಯುಕ್ತರ ಆದೇಶದ ಸಂಖ್ಯೆ: ಆ/ಪಿಎಸ್ಆರ್/5338/2011-12, ದಿನಾಂಕ: 07-12-2011 ರಂತೆ ಒಟ್ಟು 07 ಪ್ಯಾಕೇಜ್‌ಗಳಂತೆ (ಆರ್-1 ರಿಂದ ಆರ್-7) ಟೆಂಡರ್ ಸಂಖ್ಯೆ: EE(P)RRN/SWM/TEND/E-PROC/01/2011-12, Dated: 13-12-2011 ರಲ್ಲಿ ಮತ್ತು ಮೆಕ್ಯಾನಿಕಲ್ ಸ್ವೀಪಿಂಗ್ ಸೇವೆಗೆ 01 ಪ್ಯಾಕೇಜ್‌ನಂತೆ (ಎಂಎಸ್) ಟೆಂಡರ್ ಸಂಖ್ಯೆ: EE(P)/RRN/SWM/TEND/E-PROC/02/2011-12, Dated: 13-12-2011 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ಮಾನ್ಯ ಆಯುಕ್ತರ ಕಛೇರಿ ಆದೇಶದ

S. Venkatesh B.L.
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸಂಖ್ಯೆ: ಪಿಎಸ್‌ಆರ್/ಪಿಆರ್/5338/12-13, ದಿನಾಂಕ: 21-04-2012 ರ ಮೇರೆಗೆ ದಿನಾಂಕ: 23-04-2012 ರಂದು ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿದ್ದು ಕೆಳಕಂಡ ಬಿಡ್ಡ್‌ದಾರರು ಭಾಗವಹಿಸಿರುತ್ತಾರೆ.

| ಕ್ರ.ಸಂ. | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | ಭಾಗವಹಿಸಿದ ಬಿಡ್ಡ್‌ದಾರರು ಹೆಸರು | ಷರಾ |
|---|---|---|---|---|
| 1 | ಆರ್-1 | 129 (ಜ್ಞಾನಭಾರತಿ ಮತ್ತು 160 (ರಾಜರಾಜೇಶ್ವರಿನಗರ), ರಾಜರಾಜೇಶ್ವರಿನಗರ ಉಪವಿಭಾಗ | 1. ಶ್ರೀ.ಸಿ.ಎಸ್.ಸುರೇಶ್ (ಶ್ರೀ ಚಾಮುಂಡೇಶ್ವರಿ ಎಂಟರ್‌ಪ್ರೈಸಸ್)<br>2. ಶ್ರೀಮತಿ.ಮುನಿಲಕ್ಷ್ಮಮ್ಮ<br>3. ಶ್ರೀ.ಪಿ.ಪುರಂದರ ರೆಡ್ಡಿ | |
| 2 | ಆರ್-2 | 69 (ಲಗ್ಗೆರೆ) ಮತ್ತು 73 (ಕೊಟ್ಟಿಗೆಪಾಳ್ಯ), ಲಗ್ಗೆರೆ ಉಪವಿಭಾಗ | 1. ಶ್ರೀ.ಮಾಯಣ್ಣಗೌಡ ಎಂ.ಎನ್.<br>2. ಶ್ರೀಮತಿ.ವೀಣಾ ಎಸ್. (ಆರ್.ಕೆ.ಟ್ರಾನ್ಸ್‌ಪೋರ್ಟ್) | |
| 3 | ಆರ್-3 | 38 (ಹೆಚ್.ಎಂ.ಟಿ.) ಮತ್ತು 42 (ಲಕ್ಷ್ಮೀದೇವಿನಗರ), ಗೊರುಗುಂಟೆಪಾಳ್ಯ ಉಪವಿಭಾಗ | 1. ಶ್ರೀ.ಪಿ.ವಿದ್ಯಾನಾಥ್ ರೆಡ್ಡಿ<br>2. ಶ್ರೀ.ತಮ್ಮಣ್ಣ ಎಲ್. | |
| 4 | ಆರ್-4 | 16 (ಜಾಲಹಳ್ಳಿ) ಮತ್ತು 17 (ಜೆ.ಪಿ. ಪಾರ್ಕ್), ಯಶವಂತಪುರ ಉಪವಿಭಾಗ | 1. ಶ್ರೀ.ಸಿ.ಆರ್.ವೀರ ನಾರಾಯಣಾಚಾರಿ<br>2. ಶ್ರೀ.ರಮೇಶ್. ಹೆಚ್. | |
| 5 | ಆರ್-5 | 37 (ಯಶವಂತಪುರ), ಯಶವಂತಪುರ ಉಪವಿಭಾಗ | 1. ಶ್ರೀ.ಎಂ.ವೇಲು ನಾಯಕರ್<br>2. ಶ್ರೀ.ವೆಂಕಟರಾಮು | |
| 6 | ಆರ್-6 | 40 (ದೊಡ್ಡಬಿದರಕಲ್ಲು) ಮತ್ತು 72 (ಹೇರೋಹಳ್ಳಿ), ಹೇರೋಹಳ್ಳಿ ಉಪವಿಭಾಗ | 1. ಶ್ರೀ.ಸಿ.ಎಸ್. ಸುರೇಶ್ (ಶ್ರೀ ಚಾಮುಂಡೇಶ್ವರಿ ಎಂಟರ್‌ಪ್ರೈಸಸ್)<br>2. ಶ್ರೀ.ಹೆಚ್.ಟಿ.ಜಗದೀಶ<br>3. ಶ್ರೀ.ವಿನೋದ್ ಕುಮಾರ್ (ನಿರ್ಮಲ್ ಎನ್ವಿರೋ ಸಲೂಷನ್ಸ್ ಪ್ರೈ.ಲಿ.) | |
| 7 | ಆರ್-7 | 130 (ಉಲ್ಲಾಳು), 159 (ಕೆಂಗೇರಿ) ಮತ್ತು 198 (ಹೆಮ್ಮಿಗೆಪುರ), ಕೆಂಗೇರಿ ಉಪವಿಭಾಗ | 1. ಶ್ರೀ.ಕೆ.ಎನ್.ಸೌಂದಿರನ್ | |
| 8 | ಎಂ.ಎಸ್. | | 1. ಶ್ರೀ.ಸಿ.ಸೋಮಶೇಕರ ರೆಡ್ಡಿ<br>2. ಶ್ರೀ.ಪನತಿ ಗೋಪಿನಾಥ ರೆಡ್ಡಿ (ಎಸ್.ಆರ್.ಪಿ.ಕ್ಲೀನ್ ಎನ್ವಿರೊ ಎಂಜಿನಿಯರ್ಸ್ ಪ್ರೈ.ಲಿ.) | |

ಮಾನ್ಯ ಆಯುಕ್ತರ ಕಛೇರಿ ಆದೇಶದ ಸಂಖ್ಯೆ: ಪಿಎಸ್‌ಆರ್/ಪಿಆರ್/5338/12-13, ದಿನಾಂಕ: 21-04-2012 ರಂತೆ ಟೆಂಡರ್ ಮೌಲ್ಯಮಾಪನ ಸಮಿತಿ ರಚಿಸಲಾಗಿದ್ದು, ಅಪರ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸಲಾಗಿದೆ.

1. ಮುಖ್ಯ ಅಭಿಯಂತರರು.
2. ಅಧೀಕ್ಷಕ ಅಭಿಯಂತರರು.
3. ಕಾರ್ಯಪಾಲಕ ಅಭಿಯಂತರರು (ಯೋಜನೆ).
4. ಸಹಾಯಕ ನಿಯಂತ್ರಕರು (ಹಣಕಾಸು).

S. Venkatesh B.L

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ದಿನಾಂಕ: 22-05-2012 ರಂದು ಮೌಲ್ಯಮಾಪನ ಸಭೆಯಲ್ಲಿ ಈ ಟೆಂಡರ್‌ಗಳ ತಾಂತ್ರಿಕ ಮೌಲ್ಯಮಾಪನ ಮಾಡಲಾಗಿದೆ. ಈ ಟೆಂಡರ್‌ಗಳ ತಾಂತ್ರಿಕ ಮೌಲ್ಯಮಾಪನ ನಂತರ ಒಟ್ಟು 07 ಪ್ಯಾಕೇಜ್‌ಗಳ ಪೈಕಿ ಪ್ಯಾಕೇಜ್ ಸಂಖ್ಯೆ: ಆರ್-2, ಆರ್-6 ಮತ್ತು ಆರ್-7 ಗಳಲ್ಲಿ ಭಾಗವಹಿಸಿರುವ ಬಿಡ್ಡುದಾರರು ತಾಂತ್ರಿಕ ಅರ್ಹತೆಯಿಲ್ಲದೆ ಸದರಿ 03 ಪ್ಯಾಕೇಜ್‌ಗಳನ್ನು ರದ್ದುಪಡಿಸಲು ಟೆಂಡರ್ ಮೌಲ್ಯಮಾಪನ ಸಮಿತಿಯು ತೀರ್ಮಾನ ಕೈಗೊಂಡಿರುತ್ತದೆ. (ಟೆಂಡರ್ ಮೌಲ್ಯಮಾಪನ ಸಮಿತಿಯ ತಾಂತ್ರಿಕ ವರದಿಯ ಪ್ರತಿಯನ್ನು ಲಗತ್ತಿಸಿದೆ).

ಮುಂದುವರಿದಂತೆ ಅಪರ ಆಯುಕ್ತರು (ಯೋಜನೆ) ರವರ ಕಛೇರಿ ಆದೇಶದ ಸಂಖ್ಯೆ ಅ.ಆ.(ಯೋ)/ಪಿಆರ್/495/12-13, ದಿನಾಂಕ: 05-06-2012 ರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್ಡುದಾರರುಗಳ ಪ್ಯಾಕೇಜ್‌ಗಳನ್ನು ಟೆಂಡರ್ ಮೌಲ್ಯಮಾಪನ ಸಮಿತಿ ತೀರ್ಮಾನದಂತೆ ಬಿಡ್‌ದಾರರ ಆರ್ಥಿಕ ಬಿಡ್ಡನ್ನು ದಿನಾಂಕ: 07-06-2012 ರಂದು ತೆರೆಯಲಾಗಿರುತ್ತದೆ ಮತ್ತು ಅವುಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸ. | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಬಿಡ್ಡದಾರರ ಹೆಸರು | ಮೌಲ್ಯಮಾಪನದ ಮೊತ್ತ/ತಿಂಗಳಿಗೆ (ರೂ.) | ಬಿಡ್ಡುದಾರರು ನಮೂದಿಸಿರುವ ಮೊತ್ತ/ತಿಂಗಳಿಗೆ (ರೂ.) | ವ್ಯತ್ಯಾಸದ ಮೊತ್ತ/ ತಿಂಗಳಿಗೆ (ರೂ.) | ಶೇಕಡವಾರು |
|---|---|---|---|---|---|---|---|
| 1 | ಆರ್-1 | 129 (ಜ್ಞಾನಭಾರತಿ) ಮತ್ತು 160 ರಾಜರಾಜೇಶ್ವರಿನಗರ), ರಾಜರಾಜೇಶ್ವರಿನಗರ ಉಪವಿಭಾಗ | ಶ್ರೀ.ಪಿ.ಪುರಂದರ ರೆಡ್ಡಿ (L1) | 38,39,189 | 78,66,380 | 40,27,191 | 104.90% (ಅಧಿಕ) |
| 2 | ಆರ್-3 | 38 (ಹೆಚ್.ಎಂ.ಟಿ.) ಮತ್ತು 42 (ಲಕ್ಷ್ಮೀದೇವಿನಗರ), ಗೊರಗುಂಟೆಪಾಳ್ಯ ಉಪವಿಭಾಗ | ಶ್ರೀ.ಎಲ್.ತಮ್ಮಣ್ಣ (L1) | 32,29,596 | 33,99,100 | 1,69,504 | 5.25% (ಅಧಿಕ) |
| | | | ಶ್ರೀ.ಪಿ.ವಿದ್ಯಾನಾಥ್ ರೆಡ್ಡಿ (L2) | | 64,43,560 | | |
| 3 | ಆರ್-4 | 16 (ಜಾಲಹಳ್ಳಿ) ಮತ್ತು 17 (ಜೆ.ಪಿ.ಪಾರ್ಕ್), ಯಶವಂತಪುರ ಉಪವಿಭಾಗ | ಶ್ರೀ.ಹೆಚ್.ರಮೇಶ (L1) | 29,25,029 | 26,03,000 | 3,22,029 | (-) 11.01% (ಕಡಿಮೆ) |
| | | | ಶ್ರೀ.ಸಿ.ಆರ್.ವೀರ ನಾರಾಯಣಾಚಾರಿ (L2) | | 52,07,400 | | |
| 4 | ಆರ್-5 | 37 (ಯಶವಂತಪುರ), ಯಶವಂತಪುರ ಉಪವಿಭಾಗ | ಶ್ರೀ.ಎಂ.ವೇಲು ನಾಯಕರ್ (L1) | 11,54,802 | 13,28,000 | 1,73,198 | 15.00% (ಅಧಿಕ) |
| 5 | ಎಂ.ಎಸ್. | | ಶ್ರೀ.ವಿನೀತ ಗೋಪಿನಾಥ ರೆಡ್ಡಿ (ಎಸ್.ಆರ್.ಪಿ. ಕ್ಲೀನ್ ಎನ್ವಿರೋ ಎಂಜಿನಿಯರ್ಸ್ ಪ್ರೈ.ಲಿ.) (L1) | 19,34,214 | 33,37,117 | 14,02,903 | 72.53% (ಅಧಿಕ) |

ಅಪರ ಆಯುಕ್ತರು (ಯೋಜನೆ) ರವರ ಕಛೇರಿ ಟಿಪ್ಪಣಿ ಸಂಖ್ಯೆ: ಮು.ಅ. (ಪ.ಕೋ)/ಪಿಆರ್/495/12-13, ದಿನಾಂಕ: 13-06-2012 ರಂತೆ ದರ ಸಂಧಾನ ಪ್ರಕ್ರಿಯೆಗೆ ದಿನಾಂಕ: 18-06-2012 ರಂದು L1 ಬಿಡ್‌ದಾರರು ಹಾಜರಾಗಿದ್ದು, ಸದರಿ ಬಿಡ್ಡುದಾರರು ಸಂಧಾನದ ನಂತರ ನೀಡಿರುವ ದರಗಳ ವಿವರ ಈ ಕೆಳಕಂಡಂತಿದೆ (ಟೆಂಡರ್ ಮೌಲ್ಯಮಾಪನ ಸಮಿತಿಯ ಆರ್ಥಿಕ ವರದಿಯ ಪ್ರತಿಯನ್ನು ಲಗತ್ತಿಸಿದೆ).

S. Venkatesh Babu

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

| ಕ್ರ. ಸಂ. | ಪ್ಯಾಕೇಜ್ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಉಪವಿಭಾಗ | L1 ಬಿಡ್ಡುದಾರರ ಹೆಸರು | ಬಿಡ್ಡುದಾರರು ನಮೂದಿಸಿರುವ ಮೊತ್ತ/ ತಿಂಗಳಿಗೆ (ರೂ.) | ದರ ಸಂಧಾನದ ನಂತರ ನಮೂದಿಸಿರುವ ಮೊತ್ತ/ ತಿಂಗಳಿಗೆ (ರೂ.) | ವ್ಯತ್ಯಾಸದ ಮೊತ್ತ/ ತಿಂಗಳಿಗೆ (ರೂ.) | ಶೇಕವಾರು ದರಗಳು |
|---|---|---|---|---|---|---|---|
| 1 | ಆರ್-1 | 129 (ಜ್ಞಾನಭಾರತಿ) ಮತ್ತು 160(ರಾಜರಾಜೇಶ್ವರಿ ನಗರ), ರಾಜರಾಜೇಶ್ವರಿನಗರ ಉಪವಿಭಾಗ | ಶ್ರೀ.ಪಿ.ಪುರಂದರ ರೆಡ್ಡಿ | 78,66,380 | - | - | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ. ಟೆಂಡರ್ ಮೊತ್ತವು ಶೇ.104.9% ಅಧಿಕ |
| 2 | ಆರ್ 3 | 38(ಹೆಚ್ ಎಂ ಟಿ) ಮತ್ತು 42 (ಲಕ್ಷ್ಮೀದೇವಿನಗರ), ಗೊರುಗುಂಟೆಪಾಳ್ಯ ಉಪವಿಭಾಗ | ಶ್ರೀ.ಎಲ್.ತಮ್ಮಣ್ಣ | 33,99,100 | | | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ ಆದರೆ ಟೆಂಡರ್ ಮೊತ್ತವು ಶೇ.5.25% ಮಾತ್ರ ಅಧಿಕ ವಾಗಿದೆ. |
| 3 | ಆರ್-4 | 16 (ಜಾಲಹಳ್ಳಿ) ಮತ್ತು 17 (ಜೆ.ಪಿ. ಪಾರ್ಕ್), ಯಶವಂತಪುರ ಉಪವಿಭಾಗ | ಶ್ರೀ.ಹೆಚ್. ರಮೇಶ | 26,03,000 | | | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ ಮತ್ತು ಟೆಂಡರ್ ದರವು ಮೌಲ್ಯಮಾಪನ ದರಕ್ಕೆ ಶೇ.( )11.01% ಕಡಿಮೆ ಇದೆ. |
| 4 | ಆರ್-5 | 37 (ಯಶವಂತರಪುರ), ಯಶವಂತಪುರ ಉಪವಿಭಾಗ | | 13,28,000 | 13,16,400 | 11,600 | ಸಂಧಾನದ ಸಮಯದಲ್ಲಿ ರೂ.11600 ಗಳನ್ನು ಕಡಿಮೆ ಮಾಡಲು ಒಪ್ಪಿರುತ್ತಾರೆ. ಅಂತಿಮ ದರವು ಮೌಲ್ಯಮಾಪನ ದರಕ್ಕಿಂತ ಶೇ.14% ಅಧಿಕ ಇದೆ. |
| 5 | ಎಂ.ಎಸ್. | | ಶ್ರೀ.ಪನತಿ ಗೋಪಿನಾಥ ರೆಡ್ಡಿ (ಎಸ್ ಆರ್ ಪಿ ಕ್ಲೀನ್ ಎನ್ವಿರೊ ಎಂಜಿನಿಯರ್ಸ್ ಪ್ರೈ.ಲಿ.) | 33,37,117 | - | - | ಸಂಧಾನದ ಸಮಯದಲ್ಲಿ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ. ಟೆಂಡರ್ ಮೊತ್ತವು ಶೇ.72.53% ಅಧಿಕ |

ಪ್ಯಾಕೇಜ್ ಸಂಖ್ಯೆ: ಆರ್-3, ಆರ್-4 ಮತ್ತು ಆರ್-5 ಇವುಗಳು ಮೌಲ್ಯಮಾಪನ ವೆಚ್ಚಕ್ಕೆ ಹತ್ತಿರದ ದರಗಳಾಗಿದ್ದು ಇವುಗಳನ್ನು ಅಂಗೀಕರಿಸಬಹುದು. ಆದರೆ ಪ್ಯಾಕೇಜ್ ಸಂಖ್ಯೆ: ಆರ್-1 ಮತ್ತು ಎಂಎಸ್ ಪ್ಯಾಕೇಜ್ ಇವುಗಳ ಟೆಂಡರ್ ದರಗಳು ಮೌಲ್ಯಮಾಪನ ದರಕ್ಕಿಂತ ಬಹಳ ಹೆಚ್ಚಾಗಿದ್ದು, ಒಪ್ಪುವ ಅಥವಾ ತಿರಸ್ಕರಿಸುವ ಬಗ್ಗೆ ಆರೋಗ್ಯ ಸ್ಥಾಯಿ ಸಮಿತಿ ನಿರ್ಣಯ ಕೈಗೊಳ್ಳಬಹುದಾಗಿದೆ. ಈ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ವಿಷಯವನ್ನು ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ನಿರ್ಣಯ:**

ದಿನಾಂಕ: 07.07.2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ರಾ.ರಾ.ನಗರ ವಲಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಮಾನ್ಯ ಆಯುಕ್ತರ ಆದೇಶದ ಸಂಖ್ಯೆ: ಆ/ಪಿಎಸ್‌ಆರ್/5338/2011-12, ದಿನಾಂಕ: 07-12-2011 ರಂತೆ ಒಟ್ಟು 07 ಪ್ಯಾಕೇಜ್‌ಗಳಂತೆ (ಆರ್-1 ರಿಂದ ಆರ್-7) ಟೆಂಡರ್ ಸಂಖ್ಯೆ: EE(P)RRN/SWM/TEND/E-PROC/01/2011-12, Dated: 13-12-2011 ರಲ್ಲಿ ಮತ್ತು ಮೆಕ್ಯಾನಿಕಲ್ ಸ್ವೀಪಿಂಗ್ ಸೇವೆಗೆ 01 ಪ್ಯಾಕೇಜ್‌ನಂತೆ (ಎಂಎಸ್) ಟೆಂಡರ್ ಸಂಖ್ಯೆ: EE(P)/RRN/SWM/TEND/E-PROC/02/2011-12, Dated: 13-12-2011 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ಮಾನ್ಯ ಆಯುಕ್ತರ ಕಛೇರಿ ಆದೇಶದ ಸಂಖ್ಯೆ: ಪಿಎಸ್‌ಆರ್/ಪಿಆರ್/5338/12.13, ದಿನಾಂಕ: 21.04.2012 ರ ಮೇರೆಗೆ ದಿನಾಂಕ: 23-04-2012 ರಂದು ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿದ್ದು ದಿನಾಂಕ: 22-05-2012 ರಂದು ಮೌಲ್ಯಮಾಪನಾ ಸಮಿತಿಯು ಪ್ಯಾಕೇಜ್ ಸಂಖ್ಯೆ: ಆರ್ 2, ಆರ್ 6 ಮತ್ತು ಆರ್ 7 ಗಳಲ್ಲಿ ಭಾಗವಹಿಸಿರುವ ಬಿಡ್ದುದಾರರು ತಾಂತ್ರಿಕ ಅರ್ಹತೆ ಇಲ್ಲದೇ ಇರುವುದರಿಂದ ರದ್ದು ಪಡಿಸಲು ಪ್ಯಾಕೇಜ್ ಸಂಖ್ಯೆ: ಆರ್ 1 ಮತ್ತು ಎಂಎಸ್ ಪ್ಯಾಕೇಜ್ ಇವುಗಳ ಟೆಂಡರ್ ದರಗಳು ಮೌಲ್ಯಮಾಪನಾ ದರಕ್ಕಿಂತ ಬಹಳ ಹೆಚ್ಚಾಗಿರುತ್ತವೆ. ಪ್ಯಾಕೇಜ್ ಸಂಖ್ಯೆ: ಆರ್-3, ಆರ್ 4 ಮತ್ತು ಆರ್ 5 ಇವುಗಳು ಮೌಲ್ಯಮಾಪನಾ ದರಕ್ಕೆ ಹತ್ತಿರದ ದರಗಳಾಗಿದ್ದು, ಇವುಗಳನ್ನು ಅಂಗೀಕರಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಈ ಮೇರೆಗೆ ಆರ್ 1, ಆರ್ 2, ಆರ್ 6, ಆರ್ 7 ಮತ್ತು ಎಂಎಸ್ ಪ್ಯಾಕೇಜ್‌ಗಳ ಟೆಂಡರ್ ಅನ್ನು ಅತಿ ಜರೂರಾಗಿ ಕರೆಯಲು ಕ್ರಮ ವಹಿಸುವುದು ಹಾಗೂ ಪ್ಯಾಕೇಜ್ ಸಂಖ್ಯೆ: ಆರ್-3, ಆರ್-4 ಮತ್ತು ಆರ್-5 ಇವುಗಳು ಮೌಲ್ಯಮಾಪನಾ ದರಕ್ಕೆ ಹತ್ತಿರದ ದರಗಳಾಗಿರುವುದರಿಂದ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.

## 16. ವಿಷಯದ ಸಂಖ್ಯೆ: ಸಾಆಸ್ಥಾಸ/26/2012-13:

ಆಯುಕ್ತರು ರವರ ದಿನಾಂಕ: 08-07-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸರ್ಕಾರೇತರ ಸಂಸ್ಥೆಗಳು/ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದವರಿಗೆ 3 ವರ್ಷದ ಅವಧಿಗೆ ವಹಿಸಲು ಒಪ್ಪಂದ ಮಾಡಿಕೊಳ್ಳುವ ನಿಟ್ಟಿನಲ್ಲಿ ತಯಾರಿಸಿದ ಒಪ್ಪಂದ ಪತ್ರಕ್ಕೆ ಉಲ್ಲೇಖ-(1) ರಂತೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

ಸದರಿ ಒಪ್ಪಂದ ಪತ್ರದಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸರ್ಕಾರೇತರ ಸಂಸ್ಥೆಗಳು/ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದವರಿಗೆ ವಹಿಸಲು, ಸದರಿ ಸಂಸ್ಥೆಗಳಿಂದ ಮುಂಗಡ ಹಣವನ್ನು ರೂ.25,000/- ಗಳನ್ನು ಪಡೆದು ಒಪ್ಪಂದ ಮಾಡಿಕೊಳ್ಳಲು ನಿಭಂದನೆಯನ್ನು ಅಳವಡಿಸಲಾಗಿರುತ್ತದೆ. ಈ ಮಧ್ಯೆ ಕೆಲವೊಂದು ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರು ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ನಿರ್ವಹಿಸಲು ಮುಂದೆ ಬಂದಿರುತ್ತಾರೆ. ಆದರೆ, ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಮುಂಗಡ ಹಣವಾಗಿ ರೂ.25,000/- ಗಳನ್ನು ಪಾವತಿಸಲು ಸಾಧ್ಯವಿಲ್ಲದಿರುವುದರಿಂದ, ಸದರಿ ಮೊತ್ತವನ್ನು ಕಡಿತಗೊಳಿಸಲು ಕೋರಿರುತ್ತಾರೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರಿಗೆ ವಹಿಸಲು ಮುಂಗಡ ಹಣವಾಗಿ ರೂ.5000/- ಗಳನ್ನು ಪಡೆದು 3 ವರ್ಷದ ಅವಧಿಗೆ ಒಪ್ಪಂದ ಮಾಡಿಕೊಳ್ಳಬಹುದಾಗಿರುತ್ತದೆ. ಇದರಿಂದ ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ. ಹಾಗೂ ಒಂದು ವರ್ಷದಲ್ಲಿ ಸ್ವಸಹಾಯ ಗುಂಪುಗಳು ಮತ್ತು ಚಿಂದಿ ಆಯುವವರು ಒಣ ತ್ಯಾಜ್ಯ ಕೇಂದ್ರಗಳನ್ನು ಯಾವುದೇ ದೂರುಗಳಿಲ್ಲದೇ ಸಮರ್ಪಕವಾಗಿ ನಿರ್ವಹಿಸಿದ್ದಲ್ಲಿ, ಸದರಿ ಅವಧಿಯನ್ನು ವಿಸ್ತರಿಸಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸ್ವಸಹಾಯ ಗುಂಪುಗಳು/ಚಿಂದಿ ಆಯುವವರು ರವರಿಗೆ ವಹಿಸಲು ಕೆಲ ನಿಬಂಧನೆಗಳನ್ನು ವಿಧಿಸಿ ಒಪ್ಪಂದ ಮಾಡಿಕೊಳ್ಳಲು ಕರಡು ಒಪ್ಪಂದ ಪತ್ರವನ್ನು ತಯಾರಿಸಿ ಇದರೊಂದಿಗೆ ಲಗತ್ತಿಸಲಾಗಿದೆ. ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## ನಿರ್ಣಯ:

ದಿನಾಂಕ: 08.07.2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸ್ವಸಹಾಯ ಗುಂಪುಗಳು/ಚಿಂದಿ ಆಯುವವರು ರವರಿಗೆ ವಹಿಸಲು ಬಾಲ ಕಾರ್ಮಿಕರ ನಿಯಂತ್ರಣ ಮತ್ತು ನಿಷೇಧ ಕಾಯ್ದೆ 1986 ರನ್ವಯ ನಿಬಂಧನೆಗಳನ್ನು ಗಮನದಲ್ಲಿಟ್ಟುಕೊಂಡ ಒಪ್ಪಂದ ಮಾಡಿಕೊಳ್ಳಲು ಸಮಿತಿಯು ತೀರ್ಮಾನಿಸಿತು.

S. Venkatesh Babu

**(ಎಸ್. ವೆಂಕಟೇಶ್ ಬಾಬು)**

**ಅಧ್ಯಕ್ಷರು**

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 11-06-2012 ರಂದು ನಡೆದ ಸಭೆಯ ನಡವಳಿಗಳು.**

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಶ್ರೀ.ಎಸ್.ವೆಂಕಟೇಶ್ ಬಾಬು | ಅಧ್ಯಕ್ಷರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಡಾ|| ಎಂ.ಎಸ್.ಶಿವಪ್ರಸಾದ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಪರಿಸರಕೋಶ) |
| ಶ್ರೀ.ಎಂ.ಇ.ಪಿಳ್ಳಪ್ಪ | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರಕೋಶ) |
| ಶ್ರೀಮತಿ.ರೂಪಾದೇವಿ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಶ್ರೀಮತಿ.ಶ್ರೀವಿದ್ಯಾ ಎನ್. | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ-ಕ್ಲಿನಿಕಲ್) |
| ಶ್ರೀಮತಿ.ದೇವಿಕಾ ರಾಣಿ ಶ್ರೀಧರ್ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ-ನಾನ್-ಕ್ಲಿನಿಕಲ್) |
| ಶ್ರೀಮತಿ.ಫೌಜೀಯ ಬೇಗಂ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ತಾ.ಮ.ಕು.ಕ.) |
| ಶ್ರೀ.ಸಿ.ಎಸ್. ರಾಧಾಕೃಷ್ಣ | ಸದಸ್ಯರು | ಉಪ ಆರೋಗ್ಯ ವೈದ್ಯಾಧಿಕಾರಿ (ಮಹದೇವಪುರ) |
| ಶ್ರೀ.ಗೋವಿಂದೇಗೌಡ. ಎಂ.ಬಿ. | ಸದಸ್ಯರು | ಅಧೀಕ್ಷಕರು (ಹೊಸಳ್ಳಿ ರೆಫರಲ್ ಆಸ್ಪತ್ರೆ) |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

1. **ವಿಷಯದ ಸಂಖ್ಯೆ: ಸಾಆಸ್ಥಾಸ/03/2012-13:**

ಸಂಖ್ಯೆ: ಆ/ಪಿಎಸ್‌ಆರ್/609/2011-12, ದಿನಾಂಕ: 12-04-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿಗಾಗಿ, ಕರ್ನಾಟಕ ಸರ್ಕಾರವು ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಬಳಿಯ ಹೆಸರಘಟ್ಟ ಹೋಬಳಿ ಮಾವಳ್ಳಿಪುರ ಗ್ರಾಮದ ಸರ್ವೆ ನಂ.8 ರಲ್ಲಿ 100 ಎಕರೆ ಪ್ರದೇಶವನ್ನು ಒದಗಿಸಿರುತ್ತದೆ.

ಸದರಿ ಮಾವಳ್ಳಿಪುರ ಸರ್ವೆ ನಂ.8 ರ ಪ್ರದೇಶದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದ್ದು ತಗಾದೆಯಿಂದಾಗಿ 100 ಎಕರೆ, ಪೈಕಿ 46 ಎಕರೆ ಪ್ರದೇಶವನ್ನು ಮೆ|| ರಾಂಕೀ ಎನರ್ಜಿ & ಎನವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಗೆ ಒದಗಿಸಿ ಪ್ರತಿದಿನ 600 ಮೆ.ಟನ್ ಘನತ್ಯಾಜ್ಯವನ್ನು ಸಂಸ್ಕರಣೆಗಾಗಿ ಸರಬರಾಜು ಮಾಡುವ ಕರಾರನ್ನು ಮಾಡಿಕೊಳ್ಳಲಾಗಿರುತ್ತದೆ. ಅದರಂತೆ, ದಿನಾಂಕ: 29-01-2007 ರಿಂದ ಸದರಿ ಮೆ|| ರಾಂಕೀ ಎನರ್ಜಿ & ಎನವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಯು ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವ ಘಟಕವನ್ನು ಪ್ರಾರಂಭಿಸಿರುತ್ತದೆ.

ಗೊಬ್ಬರ ತಯಾರಿಕೆಗಾಗಿ ಘನತ್ಯಾಜ್ಯವನ್ನು ಕಾಂಕ್ರೀಟ್ ಪ್ಲಾಟ್ ಫಾರಂ ಮೇಲೆ ಹರಡಿ ಸುಮಾರು ಒಂದು ತಿಂಗಳು ಕೊಳೆಯಲು ಬಿಟ್ಟು ನಂತರ ಯಂತ್ರಗಳ ಮೂಲಕ ಗೊಬ್ಬರ ತಯಾರಿಕೆಯನ್ನು ಕೈಗೊಳ್ಳಲಾಗುತ್ತದೆ.

ಪಾಲಿಕೆಯಿಂದ ಸಾಗಾಣಿಕೆಯಾಗುವ ಘನತ್ಯಾಜ್ಯದಲ್ಲಿ ನೊಣ ಮತ್ತು ಸೊಳ್ಳೆಗಳು ಹಾಗೂ ಅವುಗಳ ಮೊಟ್ಟೆಗಳು ಸಾಗಾಣಿಕೆಯಾಗುತ್ತವೆ. ಘಟಕದಲ್ಲಿಯೂ ಸಹ ಗೊಬ್ಬರ ತಯಾರಿಕೆಗಾಗಿ ಕೊಳೆಯುವ ಅವಧಿಯಲ್ಲಿ ಮತ್ತು ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುವ ಘನತ್ಯಾಜ್ಯದಲ್ಲಿಯೂ ಸಹ ನೊಣ ಮತ್ತು ಸೊಳ್ಳೆಗಳು ಉತ್ಪತ್ತಿಯಾಗಿ ಸ್ಥಳೀಯ ಗ್ರಾಮಸ್ಥರ ಆರೋಗ್ಯ ಕೆಡುತ್ತಿರುವುದಾಗಿ ಸ್ಥಳೀಯರು ಪ್ರತಿಭಟನೆ ವ್ಯಕ್ತಪಡಿಸಿರುತ್ತಾರೆ. ನೊಣ ಮತ್ತು ಸೊಳ್ಳೆಗಳ ಹಾವಳಿಯಿಂದಾಗಿ ಬಾಲಕನೊಬ್ಬ ಮೃತಪಟ್ಟಿರುವುದಾಗಿ 2009 ರಲ್ಲಿ ಪ್ರತಿಭಟಿಸಿರುತ್ತಾರೆ.

ಮೇಲಿನ ಹಿನ್ನೆಲೆಯಲ್ಲಿ ಮುಖ್ಯ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ), ಉಪ ಆಯುಕ್ತರು (ಆರೋಗ್ಯ) ಮತ್ತು ಪಾಲಿಕೆ ಅಧಿಕಾರಿಗಳು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ಸ್ಥಳೀಯರೊಂದಿಗೆ ಚರ್ಚಿಸಿ ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಸುತ್ತಲಿನ ಗ್ರಾಮಗಳಲ್ಲಿ ಔಷಧಿ ಸಿಂಪಡಿಸಲು ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ. ಅದರಂತೆ ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಔಷಧಿ ಸಿಂಪಡಿಸುವ ಕಾಮಗಾರಿಯನ್ನು ಮೆ|| ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ 2009-10 ಮತ್ತು

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

2010-11ನೇ ಸಾಲುಗಳಲ್ಲಿ ಕೈಗೊಳ್ಳಲಾಗಿರುತ್ತದೆ. 2010-11ನೇ ಸಾಲಿನಲ್ಲಿ ಕೈಗೊಂಡಿರುವ ಅವಧಿಯು ದಿನಾಂಕ: 24-10-2011 ಕ್ಕೆ ಪೂರ್ಣಗೊಂಡಿರುತ್ತದೆ.

ಮುಂದುವರೆದು ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ನಿರ್ವಹಣೆ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಮತ್ತು ಸ್ಥಳೀಯರು ಸಲ್ಲಿಸಿದ್ದ ದೂರಿನ ಅನ್ವಯ, ಮಾನವಹಕ್ಕುಗಳ ಆಯೋಗವು ದಾಖಲಿಸಿಕೊಂಡಿರುವ ದಾವೆಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ವರದಿಯಲ್ಲಿ, ನೊಣ ಮತ್ತು ಸೊಳ್ಳೆಗಳ ಹಾವಳಿ ನಿಯಂತ್ರಿಸಲು ಔಷಧಿ ಸಿಂಪಡಿಸುತ್ತಿರುವ ಕ್ರಮದ ಬಗ್ಗೆ ವರದಿ ಸಲ್ಲಿಸಲಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ 12 ಗ್ರಾಮಗಳಲ್ಲಿ (1.ಮಾವಳ್ಳಿಪುರ, 2.ಅಂಗರಾಜಪುರ, 3.ಮೈಲಪ್ಪನಹಳ್ಳಿ, 4.ಶಿವಕೋಟೆ, 5.ಕುರುಬರಹಳ್ಳಿ, 6.ದೊಡ್ಡಬ್ಯಾಲಕೆರೆ, 7.ಚಿಕ್ಕಬ್ಯಾಲಕೆರೆ, 8.ರಾಮಗೊಂಡನಹಳ್ಳಿ, 9.ಐ.ವಿ.ಆರ್.ಐ. ಕಾಲೋನಿ, 10.ವೀರಸಾಗರ, 11.ಸುಬೇದಾರ ಪಾಳ್ಯ ಮತ್ತು 12.ಆಶ್ರಯ ಲೇಔಟ್) ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಔಷಧಿ ಸಿಂಪಡಿಸುವ ಕಾಮಗಾರಿಯನ್ನು ದಿನಾಂಕ: 25-10-2011 ರಿಂದ 24-04-2012ರವರೆಗಿನ 6 (ಆರು) ತಿಂಗಳ ಅವಧಿಗೆ ಕೈಗೊಳ್ಳಲಾಗಿರುತ್ತದೆ.

ದಿನಾಂಕ: 25-04-2012ರ ನಂತರದ ಒಂದು ವರ್ಷದ ಅವಧಿಗೆ ಸದರಿ ಕಾಮಗಾರಿಗೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಗೆ ಅನುಮೋದನೆ ದೊರೆತ ನಂತರ ಈ ಕಾಮಗಾರಿಯನ್ನು ಟೆಂಡರ್ ಕರೆದು ಕೈಗೊಳ್ಳಲಾಗುವುದು.

ಆದುದರಿಂದ ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣ ಘಟಕದ ಸುತ್ತಲಿನ ಗ್ರಾಮಗಳಲ್ಲಿ ನೊಣ ಮತ್ತು ಔಷಧಿ ಸಿಂಪಡಿಸುವ (ದಿನಾಂಕ: 25-10-2011 ರಿಂದ 24-10-2012 ರವರೆಗಿನ ಅವಧಿ) ಕಾಮಗಾರಿಗೆ ಈ ಕೆಳಗಿನಂತೆ ಅನುಮೋದನೆ ಕೋರಿ ಕಡತ ಸಲ್ಲಿಸಿದೆ.

(1) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ.
(2) ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ P0968 Maintenance of Landfills ಅಡಿಯಲ್ಲಿ ರೂ.48.00 ಲಕ್ಷಗಳ ಅನುದಾನ ಒದಗಿಸಲು.
(3) ಸದರಿ ಕಾಮಗಾರಿಯನ್ನು ದಿನಾಂಕ: 25-10-2011 ರಿಂದ 24-04-2012 ರವರೆಗೆ ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ತುರ್ತಿನ ಹಿನ್ನೆಲೆಯಲ್ಲಿ ವಹಿಸಿರುವ ಕ್ರಮಕ್ಕೆ ಅನುಮೋದನೆ.

ನೀಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 12-04-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ 12 ಗ್ರಾಮಗಳಲ್ಲಿ (1.ಮಾವಳ್ಳಿಪುರ, 2.ಅಂಗರಾಜಪುರ, 3.ಮೈಲಪ್ಪನಹಳ್ಳಿ, 4.ಶಿವಕೋಟೆ, 5.ಕುರುಬರಹಳ್ಳಿ, 6.ದೊಡ್ಡಬ್ಯಾಲಕೆರೆ, 7.ಚಿಕ್ಕಬ್ಯಾಲಕೆರೆ, 8.ರಾಮಗೊಂಡನಹಳ್ಳಿ, 9.ಐ.ವಿ.ಆರ್.ಐ. ಕಾಲೋನಿ, 10.ವೀರಸಾಗರ, 11.ಸುಬೇದಾರ ಪಾಳ್ಯ ಮತ್ತು 12.ಆಶ್ರಯ ಲೇಔಟ್) ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಔಷಧಿ ಸಿಂಪಡಿಸುವ ಕಾಮಗಾರಿಯನ್ನು ದಿನಾಂಕ: 25-10-2011 ರಿಂದ 24-04-2012ರವರೆಗಿನ 6 (ಆರು) ತಿಂಗಳ ಅವಧಿಗೆ ಕೈಗೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ವತಿಯಿಂದ ನಿರ್ವಹಿಸಿರುವ ಹಿನ್ನೆಲೆಯಲ್ಲಿ ಲೆಕ್ಕಶೀರ್ಷಿಕೆ P0968 Maintenance of Landfills ಅಡಿಯಲ್ಲಿ ರೂ.48.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲು ಸಮಿತಿಯು ತೀರ್ಮಾನಿಸಿತು.

**2. ವಿಷಯದ ಸಂಖ್ಯೆ: ಸಾಆಸ್ಥಾಸ/04/2012-13:**

ಸಂಖ್ಯೆ: ಅ.ಆ.(ಯೋ)/ಪಿಆರ್/583/2012-13, ದಿನಾಂಕ: 05-05-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿಗಾಗಿ, ಕರ್ನಾಟಕ ಸರ್ಕಾರವು ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಬಳಿಯ ಹೆಸರಘಟ್ಟ ಹೋಬಳಿ ಮಾವಳ್ಳಿಪುರ ಗ್ರಾಮದ ಸರ್ವೆ ನಂ.8 ರಲ್ಲಿ 100 ಎಕರೆ ಪ್ರದೇಶವನ್ನು ಒದಗಿಸಿರುತ್ತದೆ.

ಸದರಿ ಮಾವಳ್ಳಿಪುರ ಸರ್ವೆ ನಂ.8 ರ ಪ್ರದೇಶದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದ್ದು ತಗಾದೆಯಿಂದಾಗಿ 100 ಎಕರೆ, ಪೈಕಿ 46 ಎಕರೆ ಪ್ರದೇಶವನ್ನು ಮೆ॥ ರಾಂಕೀ ಎನರ್ಜಿ & ಎನವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಗೆ ಒದಗಿಸಿ ಪ್ರತಿದಿನ 600 ಮೆ.ಟನ್ ಘನತ್ಯಾಜ್ಯವನ್ನು ಸಂಸ್ಕರಣೆಗಾಗಿ ಸರಬರಾಜು ಮಾಡುವ ಕರಾರನ್ನು ಮಾಡಿಕೊಳ್ಳಲಾಗಿರುತ್ತದೆ. ಅದರಂತೆ,

B. Venkatesh B.L.
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ದಿನಾಂಕ: 29-01-2007 ರಿಂದ ಸದರಿ ಮೆ॥ ರಾಂಕೀ ಎನರ್ಜಿ & ಎನವಿರಾನ್‌ಮೆಂಟ್ ಲಿಮಿಟೆಡ್ ಸಂಸ್ಥೆಯು ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವ ಘಟಕವನ್ನು ಪ್ರಾರಂಭಿಸಿರುತ್ತದೆ.

ಗೊಬ್ಬರ ತಯಾರಿಕೆಗಾಗಿ ಘನತ್ಯಾಜ್ಯವನ್ನು ಕಾಂಕ್ರೀಟ್ ಪ್ಲಾಟ್ ಫಾರಂ ಮೇಲೆ ಹರಡಿ ಸುಮಾರು ಒಂದು ತಿಂಗಳು ಕೊಳೆಯಲು ಬಿಟ್ಟು ನಂತರ ಯಂತ್ರಗಳ ಮೂಲಕ ಗೊಬ್ಬರ ತಯಾರಿಕೆಯನ್ನು ಕೈಗೊಳ್ಳಲಾಗುತ್ತದೆ.

ಪಾಲಿಕೆಯಿಂದ ಸಾಗಾಣಿಕೆಯಾಗುವ ಘನತ್ಯಾಜ್ಯದಲ್ಲಿ ನೊಣ ಮತ್ತು ಸೊಳ್ಳೆಗಳು ಹಾಗೂ ಅವುಗಳ ಮೊಟ್ಟೆಗಳು ಸಾಗಾಣಿಕೆಯಾಗುತ್ತವೆ. ಘಟಕದಲ್ಲಿಯೂ ಸಹ ಗೊಬ್ಬರ ತಯಾರಿಕೆಗಾಗಿ ಕೊಳೆಯುವ ಅವಧಿಯಲ್ಲಿ ಮತ್ತು ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುವ ಘನತ್ಯಾಜ್ಯದಲ್ಲಿಯೂ ಸಹ ನೊಣ ಮತ್ತು ಸೊಳ್ಳೆಗಳು ಉತ್ಪತ್ತಿಯಾಗಿ ಸ್ಥಳೀಯ ಗ್ರಾಮಸ್ಥರ ಆರೋಗ್ಯ ಕೆಡುತ್ತಿರುವುದಾಗಿ ಸ್ಥಳೀಯರು ಪ್ರತಿಭಟನೆ ವ್ಯಕ್ತಪಡಿಸಿರುತ್ತಾರೆ. ನೊಣ ಮತ್ತು ಸೊಳ್ಳೆಗಳ ಹಾವಳಿಯಿಂದಾಗಿ ಬಾಲಕನೊಬ್ಬ ಮೃತಪಟ್ಟಿರುವುದಾಗಿ 2009 ರಲ್ಲಿ ಪ್ರತಿಭಟಿಸಿರುತ್ತಾರೆ.

ಮೇಲಿನ ಹಿನ್ನೆಲೆಯಲ್ಲಿ ಮುಖ್ಯ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ), ಉಪ ಆಯುಕ್ತರು (ಆರೋಗ್ಯ) ಮತ್ತು ಪಾಲಿಕೆ ಅಧಿಕಾರಿಗಳು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ಸ್ಥಳೀಯರೊಂದಿಗೆ ಚರ್ಚಿಸಿ ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಸುತ್ತಲಿನ ಗ್ರಾಮಗಳಲ್ಲಿ ಔಷಧಿ ಸಿಂಪಡಿಸಲು ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ. ಅದರಂತೆ ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಔಷಧಿ ಸಿಂಪಡಿಸುವ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ 2009-10 ಮತ್ತು 2010-11 ಮತ್ತು 2011-12ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ. 2011-12ನೇ ಸಾಲಿನಲ್ಲಿ ಕೈಗೊಂಡಿರುವ ಅವಧಿಯು ದಿನಾಂಕ: 24-04-2012 ಕ್ಕೆ ಪೂರ್ಣಗೊಳ್ಳಲಿದ್ದು, ನಂತರದ ಒಂದು ವರ್ಷದ ಅವಧಿಗೆ ಸದರಿ ಕಾಮಗಾರಿಯನ್ನು ಮಾನ್ಯ ಆಯುಕ್ತರ ನಿರ್ದೇಶನದಂತೆ ಟೆಂಡರ್ ಮೂಲಕ ನಿರ್ವಹಿಸಬೇಕಾಗಿರುತ್ತದೆ.

ಮುಂದುವರೆದು ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ನಿರ್ವಹಣೆ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಮತ್ತು ಸ್ಥಳೀಯರು ಸಲ್ಲಿಸಿದ್ದ ದೂರಿನ ಅನ್ವಯ, ಮಾನವಹಕ್ಕುಗಳ ಆಯೋಗವು ದಾಖಲಿಸಿಕೊಂಡಿರುವ ದಾವೆಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ವರದಿಯಲ್ಲಿ, ನೊಣ ಮತ್ತು ಸೊಳ್ಳೆಗಳ ಹಾವಳಿ ನಿಯಂತ್ರಿಸಲು ಔಷಧಿ ಸಿಂಪಡಿಸುತ್ತಿರುವ ಕ್ರಮದ ಬಗ್ಗೆ ವರದಿ ಸಲ್ಲಿಸಲಾಗಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ 12 ಗ್ರಾಮಗಳಲ್ಲಿ (1.ಮಾವಳ್ಳಿಪುರ, 2.ಲಿಂಗರಾಜಪುರ, 3.ಮೈಲಪ್ಪನಹಳ್ಳಿ, 4.ಶಿವಕೋಟೆ, 5.ಕುರುಬರಹಳ್ಳಿ, 6.ದೊಡ್ಡಬ್ಯಾಲಕೆರೆ, 7.ಚಿಕ್ಕಬ್ಯಾಲಕೆರೆ, 8.ರಾಮಗೊಂಡನಹಳ್ಳಿ, 9.ಐ.ವಿ.ಆರ್.ಐ. ಕಾಲೋನಿ, 10.ವೀರಸಾಗರ, 11.ಸುಬೇದಾರ ಪಾಳ್ಯ ಮತ್ತು 12.ಆಶ್ರಯ ಲೇಔಟ್) ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಒಂದು ವರ್ಷದ ಅವಧಿಗೆ ಔಷಧಿ ಸಿಂಪಡಿಸುವ ಕಾಮಗಾರಿಯನ್ನು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಅಂದಾಜು ಮೊತ್ತ ರೂ.96.00 ಲಕ್ಷಗಳಾಗಿರುತ್ತದೆ.

ಆದುದರಿಂದ ಸದರಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣ ಘಟಕದ ಸುತ್ತಲಿನ ಗ್ರಾಮಗಳಲ್ಲಿ 2012-13ನೇ ಸಾಲಿನಲ್ಲಿ ನೊಣ ಮತ್ತು ಔಷಧಿ ಸಿಂಪಡಿಸುವ ಕಾಮಗಾರಿಗೆ ಈ ಕೆಳಗಿನಂತೆ ಅನುಮೋದನೆ ಕೋರಿ ಕಡತ ಸಲ್ಲಿಸಿದೆ.

(1) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ.
(2) ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ P0968 Maintenance of Landfills ಅಡಿಯಲ್ಲಿ ರೂ.96.00 ಲಕ್ಷಗಳ ಅನುದಾನ ಒದಗಿಸಲು ಅನುಮೋದನೆ.
(3) ಸದರಿ ಕಾಮಗಾರಿಯನ್ನು ಅಲ್ಪಾವಧಿ ಟೆಂಡರ್ ಕರೆದು ಕೈಗೊಳ್ಳಲು ಅನುಮೋದನೆ.

ನೀಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 05-05-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ 12 ಗ್ರಾಮಗಳಲ್ಲಿ (1.ಮಾವಳ್ಳಿಪುರ, 2.ಲಿಂಗರಾಜಪುರ, 3.ಮೈಲಪ್ಪನಹಳ್ಳಿ, 4.ಶಿವಕೋಟೆ, 5.ಕುರುಬರಹಳ್ಳಿ, 6.ದೊಡ್ಡಬ್ಯಾಲಕೆರೆ, 7.ಚಿಕ್ಕಬ್ಯಾಲಕೆರೆ, 8.ರಾಮಗೊಂಡನಹಳ್ಳಿ, 9.ಐ.ವಿ.ಆರ್.ಐ. ಕಾಲೋನಿ, 10.ವೀರಸಾಗರ, 11.ಸುಬೇದಾರ ಪಾಳ್ಯ ಮತ್ತು 12.ಆಶ್ರಯ ಲೇಔಟ್) ನೊಣ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಔಷಧಿ ಸಿಂಪಡಿಸುವ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ P0968 Maintenance of Landfills ಅಡಿಯಲ್ಲಿ ರೂ.96.00 ಲಕ್ಷಗಳಿಗೆ ಅಲ್ಪಾವಧಿ ಟೆಂಡರ್ ಕರೆದು ಮುಂದಿನ ಕ್ರಮ ಕೈಗೊಳ್ಳುವ ಸಂಬಂಧ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

### ೩. ವಿಷಯದ ಸಂಖ್ಯೆ: ಸಾಆಸ್ಥಾಸ/05/2012-13:

ಸಂಖ್ಯೆ: ಉ.ಆ.ಅ.(ಪೂ)/ಪಿಆರ್/229/2011-12, ದಿನಾಂಕ: 16-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆರೋಗ್ಯ ಇಲಾಖೆಯ ಉಪ ಆರೋಗ್ಯಾಧಿಕಾರಿ (ಪೂರ್ವ) ವ್ಯಾಪ್ತಿಗೆ ಸಂಬಂಧಪಟ್ಟ ಸಿ.ವಿ.ರಾಮನ್‌ನಗರ ವಲಯ ವಾರ್ಡ್ ಸಂಖ್ಯೆ:70 ರಲ್ಲಿರುವ ಕಲ್ಲಹಳ್ಳಿ ರುದ್ರಭೂಮಿಯಲ್ಲಿ ಸಾರ್ವಜನಿಕರು ಮೃತರಿಗೆ ಶವ ಸಂಸ್ಕಾರ ಮಾಡಿದ್ದು, ಈ ಜಾಗದಲ್ಲಿ ನೂತನ ಘೋರಿ ನಿರ್ಮಾಣ ಮಾಡಲು ಹಾಗೂ ನಿರ್ಮಾಣ ಮಾಡಿರುವ ಘೋರಿಗಳನ್ನು ದುರಸ್ಥಿಗೊಳಿಸಲು ಸಾರ್ವಜನಿಕರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಸದರಿ ಜಾಗದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮ್ ಸಮಾಜದವರು ಅವರ ರುದ್ರ ಭೂಮಿಯಲ್ಲಿ ಘೋರಿ ನಿರ್ಮಾಣ ಮಾಡುತ್ತಿದ್ದು, ಅದೇ ಪ್ರಕಾರವಾಗಿ ತಮಗೂ ಸಹ ಘೋರಿ ನಿರ್ಮಾಣ ಮಾಡಲು ಅವಕಾಶ ಮಾಡಬೇಕಾಗಿ ಪತ್ರ ಮುಖಾಂತರ ಕೋರಿರುತ್ತಾರೆ.

**ಕಲ್ಲಹಳ್ಳಿ ರುದ್ರಭೂಮಿಯಲ್ಲಿ ಘೋರಿಯ ದುರಸ್ತಿಗಾಗಿ ನೀಡಿರುವ ಅರ್ಜಿದಾರರ ಮಾಹಿತಿಗಳು**

| ಕ್ರಮ ಸಂಖ್ಯೆ | ಹೆಸರು | ವಿಳಾಸ | ದಿನಾಂಕ |
|---|---|---|---|
| 01 | ಶ್ರೀಮತಿ.ಶಾರದಮ್ಮ | ನಂ.47 ಹೆಣ್ಣೂರು ಬಂಡೇ ವಡ್ಡರ ಪಾಳ್ಯ, ಕಾವೇರಿ ನಗರ, ಕೆ.ಆರ್.ಪುರಂ ಪೋಸ್ಟ್ ಬೆಂಗಳೂರು. | 31-01-2012 |
| 02 | ಶ್ರೀಮತಿ.ಜಿ.ಸರಸ್ವರಮ್ಮ | ನಂ.44, 1ನೇ ಕ್ರಾಸ್, RIFCO ಶಾಂತಿನಿಕೇತನ್ ಲೇಔಟ್, ಮೆಡಹಳ್ಳಿ, ವಿರ್ಗೋನಗರ ಪೋಸ್ಟ್ ಬೆಂಗಳೂರು-49. | 02-09-2011 |
| 03 | ಸಿ.ಪದ್ಮ | ನಂ.309, 7ನೇ "ಎ" ಮೈನ್, 1ನೇ ಬ್ಲಾಕ್, ಕಲ್ಯಾಣನಗರ, ಹೆಚ್.ಆರ್.ಬಿ.ಆರ್. ಬೆಂಗಳೂರು. | 08-02-2012 |
| 04 | ಗುಣಬೂಷಣಂ | ನಂ.15, 7ನೇ "ಎ" ಕ್ರಾಸ್, 11ನೇ ಮೈನ್ ವಿದ್ಯಾ ಜ್ಯೋತಿನಗರ, ಹೊಂಗಸಂಧ್ರ ಬೆಂಗಳೂರು. | 08-02-2012 |
| 05 | ಶ್ರೀಮತಿ.ಧನಲಕ್ಷ್ಮೀ | ನಂ.12/1, 2ನೇ ಕ್ರಾಸ್, ನಾಗಯ್ಯನ ಪಾಳ್ಯ ಎಂ.ಎಸ್.ನಗರ ಬೆಂಗಳೂರು-33 | 16-02-2012 |

**ಕಲ್ಲಹಳ್ಳಿ ರುದ್ರಭೂಮಿಯಲ್ಲಿ ಹೊಸದಾಗಿ ಘೋರಿ ನಿರ್ಮಾಣಕ್ಕಾಗಿ ನೀಡಿರುವ ಅರ್ಜಿದಾರರ ಮಾಹಿತಿಗಳು**

| ಕ್ರಮ ಸಂಖ್ಯೆ | ಹೆಸರು | ವಿಳಾಸ | ದಿನಾಂಕ |
|---|---|---|---|
| 01 | ಎ.ಗೋವಿಂದ್‌ರಾಜ್ | ನಂ.44, ಸಿ.ಕೆ.ಗಾರ್ಡನ್, ಸೆಂಟ್ ಥಾಮಸ್ ಟೌನ್, ಬೆಂಗಳೂರು. | 30-01-2012 |
| 02 | ಶ್ರೀ.ಸಿ.ವೇಣುಗೋಪಾಲ್ | ನಂ.216, 2ನೇ ಕ್ರಾಸ್, ಸುಬ್ಬಯ್ಯನ ಪಾಳ್ಯ, ಬಾಣಸವಾಗಿ, ಮೈನ್ ರೋಡ್, ಗಣೇಶ ದೇವಸ್ಥಾನದ ಎದುರು, ಬೆಂಗಳೂರು-560033. | 27-01-2012 |
| 03 | ಮಾಲತಿ ಸ್ವಾಮಿ | ನಂ.10, 1ನೇ "ಎ" ಕ್ರಾಸ್, 5ನೇ "ಎ" ಮೈನ್, ದೊಮ್ಮಲೂರು 2ನೇ ಹಂತ, ಬೆಂಗಳೂರು. | 03-02-2012 |
| 04 | ಶುಬತ್ತಿರ | ನಂ.266, 5ನೇ ಮೈನ್, 3ನೇ ಕ್ರಾಸ್, ವಿವೇಕನಗರ, ಬೆಂಗಳೂರು. | 08-02-2012 |
| 05 | ಬಿ.ರಾಮರಾವ್ | ನಂ.234 (ಹೊಸ ನಂ198), 3ನೇ ಅಡ್ಡ ರಸ್ತೆ, ಜಯಂತಿನಗರ, ಹೊರಮಾವು ಅಂಚೆ, ಬೆಂಗಳೂರು. | 02-03-2012 |
| 06 | ಶ್ರೀ.ಮಾಲ ಕೊಂಡಯ್ಯ | ಗಣೇಶ್ ಚಟ್ಟಿ ಕಟ್ಟಡ, ಪಂಚಾಯಿತಿ ಕಛೇರಿ ಎದುರು ರಾಮಸ್ವಾಮಿ ಲೇನ್ ಟಿ.ಜೆ.ಹಳ್ಳಿ, ಬೆಂಗಳೂರು. | 13-02-2012 |
| 07 | ಶ್ರೀಮತಿ.ಜಯಮಾಲಿಯಮ್ಮಾಳ್ | ನಂ.283, ಸಿದ್ಧಾರ್ಥ 6ನೇ ಮೈನ್ ರೋಡ್, ಹೆಚ್.ಎ.ಎಲ್. 3ನೇ ಹಂತ, ಬೆಂಗಳೂರು. | 14-02-2012 |
| 08 | ಶ್ರೀಮತಿ.ಎನ್.ಕಲಾವತಿ | ನಂ.08, ಗಂಗಾ ಗಾರ್ಡನ್ ಹೆನ್ನೂರು ಮೈನ್ ರೋಡ್, ಕಲ್ಯಾಣನಗರ ಪೋಸ್ಟ್, ಬೆಂಗಳೂರು. | 17-02-2012 |
| 09 | ಶ್ರೀಮತಿ.ಶಕುಂತಲಮ್ಮ | ನಂ.4, ಮೊದಲನೇ ಕ್ರಾಸ್, ವಿವೇಕನಂದನಗರ, ಬೆಂಗಳೂರು-33. | 07-03-2012 |

S. Venkatesh Babu

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

ಈ ಸಂಬಂಧ ಮಾನ್ಯ ಶಾಸಕರು ಹಾಗೂ ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಅವರ ಆಪ್ತ ಕಾರ್ಯದರ್ಶಿಯವರು ಪತ್ರ ಮುಖೇನ ಕೋರಿರುತ್ತಾರೆ. ಕಲ್ಲಹಳ್ಳಿ ಸ್ಮಶಾನದ ಸುತ್ತಮುತ್ತ ಪ್ರದೇಶಗಳಲ್ಲಿ ಕರ್ನಾಟಕ ಸರ್ಕಾರವು ರೂ.2,000/- ಗಳನ್ನು ಒಂದು ಚದರ ಅಡಿಗೆ ನಿಗದಿಪಡಿಸಿರುತ್ತದೆ. ಅದರಂತೆ, ಪಾಲಿಕೆಯು ಘೋರಿ ನಿರ್ಮಾಣ ಮಾಡುವವರಿಗೆ ಗರಿಷ್ಠ ರೂ.2,000/- ಗಳನ್ನು ಚದರ ಅಡಿಗೆ ನಿಗದಿಪಡಿಸಬಹುದಾಗಿದ್ದು, ಈಗಾಗಲೇ ನಿರ್ಮಾಣ ಮಾಡಿಕೊಂಡಿದ್ದು, ಘೋರಿ ದುರಸ್ಥಿ ಮಾಡಿಕೊಳ್ಳುವವರಿಗೆ ಕನಿಷ್ಠ ರೂ.1,000/- ಗಳನ್ನು ನಿಗದಿಪಡಿಸಬಹುದಾಗಿರುತ್ತದೆ. ಶವಸಂಸ್ಕಾರಕ್ಕೆ ಗುಂಡಿ ಅಗಿಯುವುದಕ್ಕೆ ರೂ.500/- ಗಳನ್ನು ನಿಗದಿಪಡಿಸಿ ಆರೋಗ್ಯ ಇಲಾಖೆಯಿಂದ ಈ ಬಗ್ಗೆ ಕ್ರಮ ವಹಿಸಬಹುದಾಗಿರುತ್ತದೆ. ಇದರಿಂದ ಈ ವಿಚಾರವಾಗಿ ಕಾನೂನು ಸಲಹೆಯನ್ನು ಪಡೆಯಲಾಗಿದ್ದು, <u>ಕೆ.ಎಂ.ಸಿ. ಕಾಯ್ದೆ 1976, ಕಲಂ-392 ರಂತೆ:</u>

## <u>Licensing of places for disposal of dead:</u>

1. No new place for the disposal of the dead whether public or private shall be opened, formed, constructed of used unless a licence has been obtained from the commissioner on application.
2. Such application for a licence shall be accompanied by a plan of the place to be registered showing the locality, boundaries and extent thereof, the name of the owner or person or community interested therein, the system of management and such further particulars as the commissioner may require.
3. The Commissioner may, with the sanction of the Corporation:
   (a) Grant or refuse a licence; or
   (b) Postpone the grant of a licence until his objections to the site have been removed or the particulars called for by him have been furnished.

<u>ಕಲಂ-398 ರಂತೆ:</u>

Prohibition in respect of corpose: No person shall:

(a) Bury or cause to the buries any corpose or part thereof in a grave whether dug or constructed of masonry or otherwise in such manner that the surface of the coffin or the surface of the body where no coffin is used, is at a less depth than eight meters from the surface of the ground; or

(b) Building or dig or cause to be built or dug any grace in an y buries ground at a less distance than four meters from the margin of any other existing grave; or

ಮಾನ್ಯ ಆಯುಕ್ತರ ಅನುಮತಿ ಪಡೆದು ಪಾಲಿಕೆ ನಿಗದಿಪಡಿಸುವ ಸ್ಥಳದಲ್ಲಿ ಶವ ಸಂಸ್ಕಾರ ಮಾಡಬೇಕೆಂದು ಅನುಬಂಧ-1 ಮತ್ತು 2 ರಲ್ಲಿ ಸಾರ್ವಜನಿಕರು ನೀಡಿರುವ ಮನವಿಯನ್ನು ಇದರೊಂದಿಗೆ ಲಗತ್ತಿಸುತ್ತಾ ವಿವರವಾದ ಟಿಪ್ಪಣಿಯೊಂದಿಗೆ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**<u>ನಿರ್ಣಯ:</u>**

**ದಿನಾಂಕ: 16-05-2012ರ ಆಯುಕ್ತರು ರವರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಆರೋಗ್ಯಾಧಿಕಾರಿ (ಪೂರ್ವ) ರವರೊಂದಿಗೆ ಚರ್ಚಿಸಲಾದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು ರುದ್ರಭೂಮಿ ಮತ್ತು ವಿದ್ಯುತ್ ಚಿತಾಗಾರ ಸಂಖ್ಯೆಗಳ ವಿವರ ಹಾಗೂ ಇವುಗಳಿಗೆ ಒದಗಿಸಿರುವ ಮೂಲಭೂತ ಸೌಕರ್ಯಗಳ ಮಾಹಿತಿಗಳನ್ನೊಳಗೊಂಡಂತೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸುವ ಸಂಬಂಧ ವಿಷಯವನ್ನು ಮುಂದೂಡಲಾಯಿತು.**

## 4. <u>ವಿಷಯದ ಸಂಖ್ಯೆ: ಸಾಆಸ್ಥಾಸ/06/2012-13:</u>

ಸಂಖ್ಯೆ: ಮುಅ/ಪಕೋ/ಪಿಆರ್/ /2011-12, ದಿನಾಂಕ: 17-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರು ಸರ್ವೆ ನಂ.155 ರ ಉತ್ತರ ಭಾಗದಲ್ಲಿ ಪಾಲಿಕೆ ವತಿಯಿಂದ ನಿರ್ವಹಿಸುತ್ತಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ 2007 ರಿಂದ ಪ್ರತಿದಿನ ಸುಮಾರು 700-800 ಮೆ.ಟನ್ ಘನತ್ಯಾಜ್ಯವನ್ನು ಸರಬರಾಜು ಮಾಡಲಾಗುತ್ತಿದ್ದು, ಈ ಪೈಕಿ ಸುಮಾರು 300-350 ಮೆ.ಟನ್ ಘನತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಮೆ|| ಟೆರ್ರಾಫರ್ಮ ಸಂಸ್ಥೆಗೆ 2009 ರಿಂದ ರವಾನಿಸಲಾಗುತ್ತಿದೆ. ಉಳಿಕೆ ಘನತ್ಯಾಜ್ಯವನ್ನು ಲ್ಯಾಂಡ್‌ಫಿಲ್ ನಿರ್ಮಿಸಿ ವಿಲೇವಾರಿ ಮಾಡಲಾಗುತ್ತಿದೆ.

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ತ್ಯಾಜ್ಯ ವಿಲೇವಾರಿಯಿಂದ ಹಾಲಿ ಲ್ಯಾಂಡ್‌ಫಿಲ್‌ಗಳು ಭೂ ಮಟ್ಟದವರೆಗೆ ಮತ್ತು ಭೂ ಮಟ್ಟದಿಂದ ಸುಮಾರು 15ಮೀ ಎತ್ತರದವರೆಗೆ ತುಂಬಿರುತ್ತವೆ. ಈ ಲ್ಯಾಂಡ್‌ಫಿಲ್‌ಗಳ ಸಾಮರ್ಥ್ಯ ಮುಗಿಯುತ್ತಾ ಬಂದಿದ್ದು, ಇನ್ನು ಸುಮಾರು ಒಂದು ತಿಂಗಳು ಮಾತ್ರ ತ್ಯಾಜ್ಯ ವಿಲೇವಾರಿ ಮಾಡಬಹುದಾಗಿರುತ್ತದೆ.

ಹಾಲಿ ಲ್ಯಾಂಡ್‌ಫಿಲ್‌ಗಳು ಭರ್ತಿಯಾಗುತ್ತಿರುವ ಹಿನ್ನಲೆಯಲ್ಲಿ ಈಗಾಗಲೇ ಒಂದು ಹೊಸ ಲ್ಯಾಂಡ್‌ಫಿಲ್‌ನ್ನು ನಿರ್ಮಿಸಲಾಗಿದ್ದು, ಇದರಲ್ಲಿ ಸುಮಾರು ಮೂರು ತಿಂಗಳು ಮಾತ್ರ ತ್ಯಾಜ್ಯ ವಿಲೇವಾರಿ ಮಾಡಬಹುದಾಗಿದೆ.

ಮಂಡೂರು ಸರ್ವೆ ನಂ.155 ರ ಉತ್ತರ ಭಾಗದ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಪ್ರತಿದಿನ 1000 ಮೆ.ಟನ್ ತ್ಯಾಜ್ಯ ಸಂಸ್ಕರಿಸಲು ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಸಂಸ್ಥೆಯವರೊಂದಿಗೆ ಪಾಲಿಕೆಯು ಒಪ್ಪಂದ ಮಾಡಿಕೊಂಡು 02 ವರ್ಷ ಕಳೆದರೂ ಸದರಿ ಸಂಸ್ಥೆಯು ಘಟಕವನ್ನು ಪ್ರಾರಂಭಿಸಿರುವುದಿಲ್ಲ.

ಮಂಡೂರು ಸರ್ವೆ ನಂ.155 ರ ದಕ್ಷಿಣ ಭಾಗದ ಮೆ॥ ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ಸಂಸ್ಥೆಯು 1000 ಮೆಟ್ರಿಕ್ ಟನ್ ಘನತ್ಯಾಜ್ಯದಿಂದ 8 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆಗೆ ಪಾಲಿಕೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಸದರಿ ವಿದ್ಯುತ್ ಉತ್ಪಾದನಾ ಘಟಕ ಇನ್ನು ಪೂರ್ಣಗೊಂಡು ಕಾರ್ಯಾರಂಭವಾಗದೇ ಇರುವುದರಿಂದ, ಪ್ರಸ್ತುತ ಪ್ರತಿದಿನ ಸುಮಾರು 600 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಿ ಗೊಬ್ಬರ ತಯಾರಿಸಿ ಉಳಿಕೆ ತ್ಯಾಜ್ಯವನ್ನು ವಿಲೇ ಮಾಡುತ್ತಿರುತ್ತಾರೆ.

ಪ್ರಸುತ ಸುಮಾರು 5 ಎಕರೆ ಪ್ರದೇಶದಲ್ಲಿ ಹಾಲಿ ಇರುವ ಲ್ಯಾಂಡ್‌ಫಿಲ್‌ಗಳಲ್ಲಿ ಪ್ರತಿದಿನ ಅಂದಾಜು 600 ರಿಂದ 700 ಮೆ.ಟನ್ ಘನತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು ಜಾಗದ ಕೊರತೆಯಿಂದ ತ್ಯಾಜ್ಯ ವಿಲೇವಾರಿಯು ಕಷ್ಟಕರವಾಗಿರುತ್ತದೆ.

ಮುಂದುವರೆದು ಮಹದೇವಪುರ ವಲಯದ ಘನತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದ್ದ ಚೀಮಸಂದ್ರ ಘನತ್ಯಾಜ್ಯ ವಿಲೇವಾರಿ ಘಟಕವು ಪೂರ್ಣ ತುಂಬಿ ಹೋಗಿರುತ್ತದೆ. ಹಾಗೂ ಸದರಿ ವಿಲೇವಾರಿ ಘಟಕದಲ್ಲಿ ದಿನಾಂಕ: 24-02-2012 ರಂದು ಬೆಂಕಿ ಆಕಸ್ಮಿಕ ಉಂಟಾಗಿ ಸಂಪೂರ್ಣ ಸುಟ್ಟು ಹೋಗಿ ವಾಯುಮಾಲಿನ್ಯ ಉಂಟಾಗಿರುತ್ತದೆ.

ಇದರಿಂದಾಗಿ ಸ್ಥಳೀಯರು ಪ್ರತಿಭಟಿಸಿ ಘನತ್ಯಾಜ್ಯ ಸಾಗಾಣಿಕೆ ವಾಹನ ಚಾಲಕರ ಮೇಲೆ ಹಲ್ಲೆ ನಡೆಸಿ, ವಾಹನಗಳಿಗೆ ಬೆಂಕಿ ಹಚ್ಚಲು ಮುಂದಾಗಿರುತ್ತಾರೆ. ಚೀಮಸಂದ್ರ ಲ್ಯಾಂಡ್‌ಫಿಲ್ ತುಂಬಿರುವ ಹಿನ್ನೆಲೆಯಲ್ಲಿ ಸದರಿ ಘಟಕದಲ್ಲಿ ಘನತ್ಯಾಜ್ಯ ವಿಲೇವಾರಿಯನ್ನು ನಿಲ್ಲಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ರದ್ದುಪಡಿಸಿ ಪತ್ರ ನೀಡಿರುತ್ತಾರೆ.

ಸದರಿ ಚೀಮಸಂದ್ರ ಸಂಸ್ಕರಣಾ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಪ್ರತಿದಿನ ಸಾಗಾಣಿಕೆಯಾಗುತ್ತಿದ್ದ ಸುಮಾರು 400 ಮೆ.ಟನ್ ಘನತ್ಯಾಜ್ಯವನ್ನು ಮಂಡೂರು ಉತ್ತರಭಾಗದ ಘಟಕದಲ್ಲಿ ಸ್ವೀಕರಿಸಿ ವಿಲೇವಾರಿ ಮಾಡಲು ಜಂಟಿ ಆಯುಕ್ತರು, ಮಹದೇವಪುರ ರವರು ಕೋರಿರುತ್ತಾರೆ.

ಮಂಡೂರು ಉತ್ತರಭಾಗದ ಘನತ್ಯಾಜ್ಯ ವಿಲೇವಾರಿ ಘಟಕದ ಲ್ಯಾಂಡ್‌ಫಿಲ್‌ಗಳು ಈಗಾಗಲೇ ತುಂಬಿದ್ದು ಹಾಲಿ ಪ್ರತಿದಿನ ಸರಬರಾಜು ಆಗುತ್ತಿರುವ ಸುಮಾರು 1000 ಮೆ.ಟನ್ ಘನತ್ಯಾಜ್ಯವನ್ನು ವಿಲೇವಾರಿ ಮಾಡುವುದು ಕಷ್ಟಕರವಾಗಿದ್ದು, ಹೆಚ್ಚಿನ ಘನತ್ಯಾಜ್ಯ ವಿಲೇವಾರಿಗೆ ಹೊಸ ಲ್ಯಾಂಡ್‌ಫಿಲ್ ನಿರ್ಮಿಸುವುದು ಅವಶ್ಯಕವಾಗಿರುತ್ತದೆ.

ಆದುದರಿಂದ ಸದರಿ ಉದ್ದೇಶಿತ ನೂತನ ಲ್ಯಾಂಡ್‌ಫಿಲ್‌ಅನ್ನು ನಿರ್ಮಿಸಲು ಸೂಕ್ತ ಅನುವುಗಳೊಂದಿಗೆ ಲೋಕೋಪಯೋಗಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆ, ಬೆಂಗಳೂರು ವೃತ್ತದ 2011-12ನೇ ಸಾಲಿನ ದರಪಟ್ಟಿಯನ್ನು ಆಧರಿಸಿ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.198.00 ಲಕ್ಷಗಳಾಗಿರುತ್ತದೆ.

ಮುಂದುವರೆದು ಮಂಡೂರು ಉತ್ತರಭಾಗದಲ್ಲಿ ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆಗೆ ದಿನಾಂಕ: 31-08-2009 ರಂದು ಪಾಲಿಕೆ ವತಿಯಿಂದ ಕರಾರು ಮಾಡಿಕೊಳ್ಳಲಾಗಿದ್ದು, 25 ಎಕರೆ ಪ್ರದೇಶವನ್ನು 30 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ಸದರಿ ಸಂಸ್ಥೆಗೆ ನೀಡಬೇಕಾಗಿರುತ್ತದೆ.

ಅದರಂತೆ ಸದರಿ ಸಂಸ್ಥೆಗಾಗಿ 25 ಎಕರೆ ಪ್ರದೇಶವನ್ನು ಮೀಸಲಿರಿಸಲಾಗಿರುತ್ತದೆ ಆದರೆ **ಕರಾರಿನ ಅವಧಿ ಪೂರ್ಣಗೊಂಡಿದ್ದರೂ, ಸದರಿ ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಘಟಕ ಸ್ಥಾಪನೆಗೆ ಯಾವುದೇ ಕ್ರಮಕೈಗೊಳ್ಳದೇ ಪತ್ರವ್ಯವಹಾರದಲ್ಲೇ ಕಾಲಹರಣ ಮಾಡುತ್ತಿರುತ್ತಾರೆ**. ಸದರಿ ಸಂಸ್ಥೆಯ ಕರಾರನ್ನು ರದ್ದುಗೊಳಿಸಲು ಈಗಾಗಲೇ ನೋಟೀಸ್ ನೀಡಲಾಗಿದೆ. ಆದುದರಿಂದ ಉದ್ದೇಶಿತ ನೂತನ ಲ್ಯಾಂಡ್‌ಫಿಲ್‌ಅನ್ನು ಮೆ॥ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ನಿಗದಿಪಡಿಸಿರುವ 25 ಎಕರೆ ಪೈಕಿ **5 ಎಕರೆ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ**.

ಆದುದರಿಂದ ಮೇಲಿನ ಕಾಮಗಾರಿಯ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಿದೆ.

1. ಸದರಿ ಕಾಮಗಾರಿಗೆ ಅವಶ್ಯವಿರುವ ರೂ.198.00 ಲಕ್ಷಗಳ ಅನುದಾನವನ್ನು ಪಿ0968, Maintenance of landfill/Waste dumping yards ಅಡಿಯಲ್ಲಿ ಒದಗಿಸಿ ಅನುಮೋದನೆ ನೀಡಲು.

S. Venkatesh Babu

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

2. ತುರ್ತಿನ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ಕೋರಿ

ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಮುಂದೂಡಿದೆ.

## 5. ವಿಷಯದ ಸಂಖ್ಯೆ: ಸಾಆಸ್ಥಾಸ/07/2012-13:

ಸಂಖ್ಯೆ: ಆ/ಪಿಎಸಾರ್/ /2012-13, ದಿನಾಂಕ: 18-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು MSW 2000 rules ದಂತೆ ರೀತಿಯಲ್ಲಿ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಮಾನವ ಹಕ್ಕು ಆಯೋಗವು ಇಂಥಹ ಯೋಜನೆಗಳ ಅನುಷ್ಠಾನದ ಬಗ್ಗೆ ನಿರಂತರವಾಗಿ (ಉಸ್ತುವಾರಿ) ಮಾನಿಟರಿಂಗ್ ಮಾಡುತ್ತಿದೆ.

ಹಾಗೂ ಈ ಬಗ್ಗೆ ಕಾಲಕಾಲಕ್ಕೆ ಸದರಿ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಾಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಆಧುನಿಕ ತಂತ್ರಜ್ಞಾನಗಳನ್ನು ಪೌರ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಲು ಅಳವಡಿಸಿಕೊಳ್ಳಲಾಗಿದೆ. ಈ ಪೈಕಿ ಹಸಿ ತ್ಯಾಜ್ಯದಿಂದ ಬಾಬಾ ಆಟಾಮಿಕ್ ರಿಸರ್ಚ್ ಸೆಂಟರ್ ರವರ ತಂತ್ರಜ್ಞಾನ ಬಳಸಿಕೊಂಡು ಜೈವಿಕ ಅನಿಲ ಉತ್ಪಾದಿಸುವ ಘಟಕವು ಒಂದಾಗಿರುತ್ತದೆ.

ಸದರಿ ಘಟಕವನ್ನು ಮೊದಲನೆ ಹಂತವಾಗಿ ಪಾಲಿಕೆ ವ್ಯಾಪ್ತಿಯ ವಿವಿಧ 16 ವಾರ್ಡ್‌ಗಳಲ್ಲಿ ಸ್ಥಾಪಿಸಲು ಉದ್ದೇಶಿಸಿ, ಘನ ಸರ್ಕಾರದ ಅನುಮೋದನೆ ಪಡೆದು, ಬಾಬಾ ಆಟಾಮಿಕ್ ರಿಸರ್ಚ್ ಸೆಂಟರ್‌ರವರಿಂದ ಅನುಮೋದಿತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಯಿತು.

**ಪಾಲಿಕೆ ವ್ಯಾಪ್ತಿಯ ವಿವಿಧ 16 ವಾರ್ಡ್‌ಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಜೈವಿಕ ಅನಿಲ ಉತ್ಪಾದಿಸುವ ಘಟಕದ ಸ್ಥಳದ ವಿವರ ಈ ಕೆಳಕಂಡಂತಿದೆ**

| | |
|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ |
| 2 | ವಾರ್ಡ್ ನಂ.139, ಚಾಮರಾಜಪೇಟೆ, ಎಸ್.ಕೆ.ಆರ್. ಮಾರ್ಕೆಟ್ |
| 3 | ವಾರ್ಡ್ ನಂ.67, ನಾಗಪುರ, ನಾಗಪುರ |
| 4 | ವಾರ್ಡ್ ನಂ.94, ಗಾಂಧಿನಗರ, ಗಾಂಧಿನಗರ |
| 5 | ವಾರ್ಡ್ ನಂ.72, ಆರ್.ಆರ್.ನಗರ, ಬಿಳೆಕಲ್ಲು |
| 6 | ವಾರ್ಡ್ ನಂ.168, 3ನೇ ಬ್ಲಾಕ್, 4ನೇ ಮೇನ್, ಪಟ್ಟಾಭಿರಾಮನಗರ, ಜಯನಗರ |
| 7 | ವಾರ್ಡ್ ನಂ175, ನ್ಯಾನಪ್ಪನ ಬಂಡೆ, ದೇವರಚಿಕ್ಕನಹಳ್ಳಿ (ಬೊಮ್ಮನಹಳ್ಳಿ) |
| 8 | ವಾರ್ಡ್ 4ನೇ ಮುಖ್ಯ ರಸ್ತೆ, ಜಯನಗರ ಬುಲ್ಲೇವಾರ್ಡ್ |
| 9 | ವಾರ್ಡ್ ನಂ.151, 3ನೇ ಬ್ಲಾಕ್, ಕೋರಮಂಗಲ |
| 10 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು |
| 11 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ |
| 12 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್.ರಸ್ತೆ |
| 13 | ವಾರ್ಡ್ ನಂ.82, ಗರುಡಚಾರ್ ಪಾಳ್ಯ, ಕಾವೇರಿ ನಗರ |
| 14 | ವಾರ್ಡ್ ನಂ.55, ಕೆ.ಆರ್.ಪುರಂ ಮಾರ್ಕೆಟ್, ದೇವಸಂದ್ರ |
| 15 | ವಾರ್ಡ್ ನಂ.01, ಕೆಂಪೇಗೌಡ, ಕೆಂಚೆನಹಳ್ಳಿ |
| 16 | ವಾರ್ಡ್ ನಂ.11, ಕುವೆಂಪುನಗರ |

ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಮೊತ್ತವನ್ನು 13ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ಭರಿಸಲಾಗಿದೆ.

S. Venkatesh B.L.

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

### ಆಹ್ವಾನಿಸಲಾದ ಟೆಂಡರ್ ವಿವರ ಕೆಳಕಂಡಂತಿರುತ್ತದೆ

**ಮೊದಲನೇ ಟೆಂಡರ್ ಕರೆಯ ವಿವರ:**

ದಿನಾಂಕ: 08-04-2011 ರಂದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಯಿತು. ವಿಪ್ರೋ ಸಂಸ್ಥೆರವರು ಆಹ್ವಾನಿಸಲಾದ 16 ಟೆಂಡರ್‌ಗಳ ಪೈಕಿ 09 ಜಾಗಗಳಿಗೆ ಮಾತ್ರ ಬಿಡ್ ಸಲ್ಲಿಸಿದ್ದರು ಉಳಿದ 07 ಜಾಗಗಳಿಗೆ ಯಾವುದೇ ಬಿಡ್ ಸ್ವೀಕರಣೆಯಾಗಿರುವುದಿಲ್ಲ.

ಸದರಿ ಟೆಂಡರ್‌ಗೆ ಸರಿಯಾದ response ಇಲ್ಲದೇ ಇರುವುದನ್ನು ಗಮನಿಸಿ ಮರು ಟೆಂಡರ್ ಆಹ್ವಾನಿಸಲು ತೀರ್ಮಾನಿಸಲಾಯಿತು.

**ಎರಡನೇ ಟೆಂಡರ್ ಕರೆಯ ವಿವರ:**

ದಿನಾಂಕ: 28-04-2011 ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮರುಟೆಂಡರ್ ಆಹ್ವಾನಿಸಲಾಯಿತು. ಸದರಿ ಟೆಂಡರ್‌ನಲ್ಲಿ ಮೆ॥ಅಶೋಕ ಬಯೋಗ್ರೀನ್ ಪ್ರೈ. ಲಿ. ಎಂಬ ಸಂಸ್ಥೆರವರು ಮಾತ್ರ 16 ಜಾಗಗಳಿಗೆ ಏಕ ಮಾತ್ರ ಬಿಡ್ ಸಲ್ಲಿಕೆಯಾಗಿತ್ತು.

ಆದರೆ ಶ್ರೀ.ರಾಘವೇಂದ್ರ ಎಂಬುವರು ಉಚ್ಛ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಬಾಬಾ ಅಟಾಮಿಕ್ ರಿಸರ್ಚ್ ಸೆಂಟರ್ ತಂತ್ರಜ್ಞಾನಕ್ಕೆ ಮಾತ್ರ ಅವಕಾಶ ನೀಡಿರುವುದನ್ನು ಪ್ರಶ್ನಿಸಿದ್ದರು, ಈ ಬಗ್ಗೆ ಉಚ್ಛ ನ್ಯಾಯಾಲಯವು ಟೆಂಡರ್ ಪ್ರಕ್ರಿಯೆಗೆ 03 ತಿಂಗಳ ತಡೆಯಾಜ್ಞೆ ನೀಡಿತ್ತು, ಕಾರಣ ಸದರಿ ಟೆಂಡರ್‌ನ್ನು ರದ್ದುಗೊಳಿಸಿ, ಜೈವಿಕ ಅನಿಲ ಉತ್ಪಾದಿಸುವ ಘಟಕ ಅಳವಡಿಸಲು ಇತರೆ ತಂತ್ರಜ್ಞಾನಕ್ಕೂ ಅವಕಾಶ ನೀಡುವುದಾಗಿ ಉಚ್ಛ ನ್ಯಾಯಾಲಯಕ್ಕೆ ಪ್ರಮಾಣವನ್ನು ಸಲ್ಲಿಸಿದ್ದರ ಮೇರೆಗೆ ನ್ಯಾಯಾಲಯವು ತಡೆಯಾಜ್ಞೆಯನ್ನು ತೆರವುಗೊಳಿಸಿತು.

**ಮೂರನೇ ಟೆಂಡರ್ ಕರೆಯ ವಿವರ:** (ಹಾಲಿ ಆಹ್ವಾನಿಸಲಾಗಿರುವ ಟೆಂಡರ್)

ತದನಂತರ ದಿನಾಂಕ: 28-10-2011 ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ 3ನೇ ಬಾರಿಗೆ ಮರುಟೆಂಡರ್ ಆಹ್ವಾನಿಸಲಾಯಿತು.

ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ ಬಿಡ್ಡುದಾರರ ವಿವರ ಈ ಕೆಳಕಂಡಂತಿದೆ.

1. M/s.Mailhem Engineers Pvt. Ltd.,
2. M/s.Ashoka Biogreen Pvt. Ltd.,
3. M/s.UEM India Ltd.,

ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್ಡುದಾರರ ಪೈಕಿ M/s.Ashoka Biogreen Pvt. Ltd., ರವರು ಟೆಂಡರ್ ಆಹ್ವಾನಿಸಲಾದ 16 ವಾರ್ಡ್‌ಗಳಿಗೂ ಬಯೋ-ಮಿಥನೈಷನ್ ಘಟಕ ಅಳವಡಿಸಲು ಬಿಡ್‌ನ್ನು ಸಲ್ಲಿಸಿರುತ್ತಾರೆ.

M/s.UEM India Ltd., ಸಂಸ್ಥೆರವರು ಈ ಕೆಳಕಂಡ 05 ವಾರ್ಡ್‌ಗಳಲ್ಲಿ ಮಾತ್ರ ಬಯೋ-ಮಿಥನೈಷನ್ ಘಟಕ ಅಳವಡಿಸಲು ಬಿಡ್‌ನ್ನು ಸಲ್ಲಿಸಿರುತ್ತಾರೆ.

ವಿವರ ಈ ಕೆಳಕಂಡಂತಿದೆ:

| | |
|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ |
| 2 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು |
| 3 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ |
| 4 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್. ರಸ್ತೆ |
| 5 | ವಾರ್ಡ್ ನಂ.82, ಗರುಡಚಾರ್ ಪಾಳ್ಯ, ಕಾವೇರಿ ನಗರ |

M/s.Mailhem Engineers Pvt. Ltd., ಸಂಸ್ಥೆರವರು ಈ ಕೆಳಕಂಡ 04 ವಾರ್ಡ್‌ಗಳಲ್ಲಿ ಮಾತ್ರ ಬಯೋ-ಮಿಥನೈಷನ್ ಘಟಕ ಅಳವಡಿಸಲು ಬಿಡ್‌ನ್ನು ಸಲ್ಲಿಸಿರುತ್ತಾರೆ.

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ವಿವರ ಈ ಕೆಳಕಂಡಂತಿದೆ:

| | |
|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ |
| 2 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು |
| 3 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ |
| 4 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್. ರಸ್ತೆ |

ಮುಂದುವರೆದು ಉದ್ದೇಶಿತ ಜೈವಿಕ ಅನಿಲ ಘಟಕಗಳ ಸ್ಥಾಪನೆಗಾಗಿ ಕರೆದಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಬಿಡ್ಡುದಾರರ ಅರ್ಹತೆ, ಡಿ.ಪಿ.ಆರ್. ನ ಪರಿಶೀಲನೆ, ಘಟಕದ Techonology ಅಧ್ಯಯನ, ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸ್ಥಳ ಪರಿಶೀಲನೆ ಮುಂತಾದವುಗಳ ಸಮಗ್ರ ಅಧ್ಯಯನ ಮಾಡಲು ಮತ್ತು ಘಟಕಗಳ ಕಾರ್ಯಕ್ಷಮತೆ ಮತ್ತು ಒಪ್ಪುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಕೆಳಗಿನಂತೆ ತಾಂತ್ರಿಕ ಸಮಿತಿ (Technical Committee) ರಚಿಸಲಾಗಿತ್ತು.

| | | |
|---|---|---|
| 1. | ಮುಖ್ಯ ಅಭಿಯಂತರರು, ಪರಿಸರಕೋಶ | ಅಧ್ಯಕ್ಷರು |
| 2. | ಡಾ॥ಎಸ್.ಪಿ.ಕಾಳೆ, ಕೋಚೇರ್‌ಮನ್ ಬಾರ್ಕ್ | ಸದಸ್ಯರು |
| 3. | ಡಾ॥ ಚಾಣಕ್ಯ, ಪ್ರೋಫೆಸರ್, ಇಂಡಿಯನ್ ಇನ್ಸಟ್ಯೂಟ್ ಆಫ್ ಸೈನ್ಸ್, ಬೆಂಗಳೂರು | ಸದಸ್ಯರು |
| 4. | ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ | ಸದಸ್ಯರು |
| 5. | ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಸದಸ್ಯರು |
| 6. | ಕಾರ್ಯಪಾಲಕ ಅಭಿಯಂತರರು-2, ಘನತ್ಯಾಜ್ಯ ನಿರ್ವಹಣೆ | ಸದಸ್ಯರು |

ಸದರಿ ಸಮಿತಿಯು ದಿನಾಂಕ: 16-01-2012 ಮತ್ತು ದಿನಾಂಕ: 21-02-2012 ರಂದು ಸಭೆ ಸೇರಿ ಈ ಕೆಳಗಿನಂತೆ ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ.

ಬಿಡ್ಡುದಾರರಾದ M/s.Ashoka Biogreen Pvt. Ltd., ಮತ್ತು M/s.Mailhem Engineers Pvt. Ltd., ರವರು ಬಹುತೇಕ ತಾಂತ್ರಿಕ ವಿವರಗಳನ್ನು ಸಲ್ಲಿಸಿದ್ದು, ಹಾಗೂ M/s.Ashoka Biogreen Pvt. Ltd., ಮತ್ತು M/s.Mailhem Engineers Pvt. Ltd., ಸಂಸ್ಥೆರವರು ಶ್ರೀ.ಚಾಣಕ್ಯ ಪ್ರೋಫೆಸರ್, ಇಂಡಿಯನ್ ಇನ್ಸಟ್ಯೂಟ್ ಆಫ್ ಸೈನ್ಸ್, ಬೆಂಗಳೂರು, ರವರು ಕೋರುವ ತಾಂತ್ರಿಕ ವಿವರಗಳನ್ನು ಪೂರೈಸುವ ಷರತ್ತಿಗೆ ಒಳಪಡಿಸಿ ಸದರಿ ಸಂಸ್ಥೆಗಳ ತಾಂತ್ರಿಕ ಬಿಡ್‌ನ್ನು ಅರ್ಹಗೊಳಿಸಿ, ಆರ್ಥಿಕ್ ಬಿಡ್ ತೆರೆಯಲು ಹಾಗೂ M/s.UEM India Ltd., ರವರು ಸಲ್ಲಿಸಿರುವ ತಾಂತ್ರಿಕ ವಿವರಗಳನ್ನು ಪರಿಶೀಲಿಸಲಾಗಿ ಸದರಿ ಸಂಸ್ಥೆರವರು ಜೈವಿಕ ಅನಿಲ ಉತ್ಪಾದಿಸುವ ಘಟಕ ನಿರ್ಮಿಸುವಲ್ಲಿ ಪರಿಣಿತಿ ಹೊಂದಿಲ್ಲದ ಕಾರಣ M/s.UEM India Ltd., ಸಂಸ್ಥೆಯನ್ನು ತಾಂತ್ರಿಕ ಬಿಡ್‌ನಲ್ಲಿ ಅನರ್ಹಗೊಳಿಸಲು ತಾಂತ್ರಿಕ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು ದಿನಾಂಕ: 07-03-2012 ರಂದು ಈ ಕೆಳಕಂಡ ಬಿಡ್ಡುದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಯಿತು.

1. M/s.Ashoka Biogreen Pvt. Ltd.,
2. M/s.Mailhem Engineers Pvt. Ltd.,

1. ಬಿಡ್ಡುದಾರರಾದ ಮೆ॥ ಅಶೋಕ ಬಯೋಗ್ರಿನ್ ಪ್ರೈವೇಟ್ ಲಿಮಿಟೆಡ್ ರವರು ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು (ಪ್ರತಿ ಘಟಕಕ್ಕೆ) ರೂ.85.30 ಲಕ್ಷ ಘಟಕ ನಿರ್ಮಾಣ ಮಾಡಲು + ರೂ.25.48 ಲಕ್ಷ 03 ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ = ಒಟ್ಟು ರೂ.110.78 ಲಕ್ಷ ನಮೂದಿಸಿರುತ್ತಾರೆ.

2. ಬಿಡ್ಡುದಾರರಾದ M/s.Mailhem Engineers Pvt. Ltd., ರವರು ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು (ಪ್ರತಿ ಘಟಕಕ್ಕೆ) ರೂ.90.00 + ರೂ.27.00 ಲಕ್ಷ ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ = ಒಟ್ಟು ರೂ.117.00 ಲಕ್ಷ ನಮೂದಿಸಿರುತ್ತಾರೆ.

ಸದರಿ ಬಿಡ್ಡುದಾರರನ್ನು ದರ ಸಂಧಾನಕ್ಕಾಗಿ ದಿನಾಂಕ: 13-03-2012 ರಂದು ಆಹ್ವಾನಿಸಲಾಯಿತು.

ದಿನಾಂಕ: 15-03-2012 ರಂದು ಬಿಡ್ಡುದಾರರಾದ ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ಜೈವಿಕ ಅನಿಲ ಉತ್ಪಾದಿಸುವ ನಂತರ ದೊರೆಯುವ Slurry ಅನ್ನು ಸದರಿ ಸಂಸ್ಥೆರವರಿಗೆ ನೀಡಿದ ಪಕ್ಷದಲ್ಲಿ ಜೈವಿಕ ಅನಿಲ ಘಟಕ ಅಳವಡಿಸಲು ವೆಚ್ಚವಾಗುವ ಮೂಲ ಬಂಡವಾಳದಲ್ಲಿ ಶೇ.10 ರಷ್ಟು ರಿಯಾಯಿತಿ ನೀಡುವುದಾಗಿ ತಿಳಿಸಿರುತ್ತಾರೆ. ಅದರಂತೆ ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ರವರು ನಮೂದಿಸಿರುವ ಟೆಂಡರ್ ದರದಲ್ಲಿ ಶೇ.10 ರಷ್ಟು ರಿಯಾಯಿತಿಯನ್ನು ಕಡಿತಗೊಳಿಸಿದ ನಂತರ ಈ ಕೆಳಗಿನಂತೆ ಟೆಂಡರ್ ದರವಿರುತ್ತದೆ.

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | |
|---|---|
| ಘಟಕ ಸ್ಥಾಪಿಸಲು ನಮೂದಿಸಿರುವ ಮೂಲ ಬಂಡವಾಳ ಮೊತ್ತ | ರೂ.85.30 ಲಕ್ಷ |
| ಶೇ.10 ರಷ್ಟು ರಿಯಾಯಿತಿ (-) | ರೂ.8.53 ಲಕ್ಷ |
| ಒಟ್ಟು | ರೂ.76.77 ಲಕ್ಷ |
| ಮೂರು ವರ್ಷದ ವಾರ್ಷಿಕ ನಿರ್ವಹಣೆಗಾಗಿ ನಮೂದಿಸಿರುವ ಮೊತ್ತ | ರೂ.25.48 ಲಕ್ಷ |
| ಒಟ್ಟು ಮೊತ್ತ | ರೂ.102.25 ಲಕ್ಷ |

ಸದರಿ ಸಂಸ್ಥೆರವರು ಜೈವಿಕ ಅನಿಲ ಉತ್ಪಾದಿಸುವ ಘಟಕದಲ್ಲಿ ತ್ಯಾಜ್ಯವನ್ನು ಅನಿಲ ಉತ್ಪಾದನಾ ಸ್ಥಾವರದಲ್ಲಿ ವಿಲೇವಾರಿ ಮಾನವ ಸಹಾಯಕ ಬದಲಾಗಿ ಯಂತ್ರ ಅಳವಡಿಸಲು (ಯಾವುದೇ ಹೆಚ್ಚುವರಿ ಶುಲ್ಕವಿಲ್ಲದೆ) ಒಪ್ಪಿರುತ್ತಾರೆ.

M/s.Mailhem Engineers Pvt. Ltd., ರವರು ದರ ಸಂಧಾನದ ನಂತರ ಜೈವಿಕ ಅನಿಲ ಉತ್ಪಾದಿಸುವ ಘಟಕಕ್ಕೆ ರೂ.79.00 ಲಕ್ಷಗಳನ್ನು ಹಾಗೂ ಮೂರು ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ ರೂ.23.24 ಲಕ್ಷಗಳನ್ನು ನಮೂದಿಸಿದ್ದು, ದರ ಸಂಧಾನದ ನಂತರ ಒಟ್ಟು ದರವು ಈ ಕೆಳಕಂಡಂತಿರುತ್ತದೆ.

| | |
|---|---|
| ಘಟಕ ಸ್ಥಾಪಿಸಲು ನಮೂದಿಸಿರುವ ಮೂಲ ಬಂಡವಾಳ ಮೊತ್ತ | ರೂ.79.00 ಲಕ್ಷ |
| ಮೂರು ವರ್ಷದ ವಾರ್ಷಿಕ ನಿರ್ವಹಣೆಗಾಗಿ ನಮೂದಿಸಿರುವ ಮೊತ್ತ | ರೂ.23.24 ಲಕ್ಷ |
| ಒಟ್ಟು ಮೊತ್ತ | ರೂ.102.24 ಲಕ್ಷ |

ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ರವರು ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವ ದರದಂತೆ ಈ ಕೆಳಕಂಡ ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ ವೆಚ್ಚವಾಗುವ ಮೊತ್ತವು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಾರ್ಡ್ ಮತ್ತು ಸ್ಥಳದ ಹೆಸರು | ನಮೂದಿಸಿರುವ ಮೊತ್ತ |
|---|---|---|
| 1 | ವಾರ್ಡ್ ನಂ.139, ಚಾಮರಾಜಪೇಟೆ, ಎಸ್.ಕೆ.ಆರ್. ಮಾರ್ಕೆಟ್ | ರೂ.102.25 ಲಕ್ಷ |
| 2 | ವಾರ್ಡ್ ನಂ.67, ನಾಗಪುರ, ನಾಗಪುರ | ರೂ.102.25 ಲಕ್ಷ |
| 3 | ವಾರ್ಡ್ ನಂ.72, ಆರ್.ಆರ್.ನಗರ, ಬಿಳೆಕಲ್ಲು | ರೂ.102.25 ಲಕ್ಷ |
| 4 | ವಾರ್ಡ್ ನಂ.168, 3ನೇ ಬ್ಲಾಕ್, 4ನೇ ಮೇನ್, ಪಟ್ಟಾಭಿರಾಮನಗರ, ಜಯನಗರ | ರೂ.102.25 ಲಕ್ಷ |
| 5 | ವಾರ್ಡ್ ನ.175, ನ್ಯಾನಪ್ಪನ ಬಂಡೆ, ದೇವರಚಿಕ್ಕನಹಳ್ಳಿ (ಬೊಮ್ಮನಹಳ್ಳಿ) | ರೂ.102.25 ಲಕ್ಷ |
| 6 | ವಾರ್ಡ್ 4ನೇ ಮುಖ್ಯ ರಸ್ತೆ, ಜಯನಗರ, ಬುಲ್ಲೇವಾರ್ಡ್ | ರೂ.102.25 ಲಕ್ಷ |
| 7 | ವಾರ್ಡ್ ನಂ.151, 3ನೇ ಬ್ಲಾಕ್, ಕೋರಮಂಗಲ | ರೂ.102.25 ಲಕ್ಷ |
| 8 | ವಾರ್ಡ್ ಹಳೆ ಏರಪೋರ್ಟ್ ರಸ್ತೆ, ದೊಮ್ಮಲೂರು | ರೂ.102.25 ಲಕ್ಷ |
| 9 | ವಾರ್ಡ್ ಯಡಿಯೂರು ಟ್ಯಾಂಕ್, ಕೆ.ಆರ್. ರಸ್ತೆ | ರೂ.102.25 ಲಕ್ಷ |
| 10 | ವಾರ್ಡ್ ನಂ.82, ಗರುಡಚಾರ್ ಪಾಳ್ಯ, ಕಾವೇರಿ ನಗರ | ರೂ.102.25 ಲಕ್ಷ |
| 11 | ವಾರ್ಡ್ ನ.55, ಕೆ.ಆರ್.ಪುರಂ ಮಾರ್ಕೆಟ್, ದೇವಸಂದ್ರ | ರೂ.102.25 ಲಕ್ಷ |
| 12 | ವಾರ್ಡ್ ನಂ.01, ಕೆಂಪೇಗೌಡ, ಕೆಂಚೆನಹಳ್ಳಿ | ರೂ.102.25 ಲಕ್ಷ |

M/s.Mailhem Engineers Pvt. Ltd., ರವರು ದರ ಸಂಧಾನದ ನಮೂದಿಸಿರುವ ಈ ಪರಿಷ್ಕೃತ ದರದಂತೆ ಈ ಕೆಳಕಂಡ ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆಗಾಗಿ ವೆಚ್ಚವಾಗುವ ಮೊತ್ತವು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಾರ್ಡ್ ಮತ್ತು ಸ್ಥಳದ ಹೆಸರು | ನಮೂದಿಸಿರುವ ಮೊತ್ತ |
|---|---|---|
| 1 | ವಾರ್ಡ್ ನಂ.35, ಮತ್ತಿಕೆರೆ, ಅರಮನೆ ನಗರ | ರೂ.102.24 ಲಕ್ಷ |
| 2 | ವಾರ್ಡ್ ನಂ.94, ಗಾಂಧಿನಗರ, ಗಾಂಧಿನಗರ | ರೂ.102.24 ಲಕ್ಷ |
| 3 | ವಾರ್ಡ್ ಸ್ಯಾಂಕಿ ಟ್ಯಾಂಕ್, ಸ್ಯಾಂಕಿ ರಸ್ತೆ | ರೂ.102.24 ಲಕ್ಷ |
| 4 | ವಾರ್ಡ್ ನಂ.11, ಕುವೆಂಪುನಗರ | ರೂ.102.24 ಲಕ್ಷ |

ಆದಕಾರಣ ಮೆ॥ಅಶೋಕ ಬಯೋಗ್ರೀನ್ ಪ್ರೈವೇಟ್ ಲಿಮಿಟೆಡ್ ರವರು 12 ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕ ಸ್ಥಾಪಿಸಲು ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವ ಪರಿಷ್ಕೃತ ದರದಂತೆ ಹಾಗೂ M/s.Mailhem Engineers Pvt. Ltd., ರವರು

S. Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವ ಪರಿಷ್ಕೃತ ದರದಂತೆ 04 ವಾರ್ಡ್‌ಗಳಲ್ಲಿ ಜೈವಿಕ ಅನಿಲ ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಸ್ಥಳದ ಲಭ್ಯತೆಗನುಗುಣವಾಗಿ ಸ್ಥಳ ಬದಲಾವಣೆ ಮಾಡಿಕೊಂಡು ಸ್ಥಾಪಿಸಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ.**

**6. ವಿಷಯದ ಸಂಖ್ಯೆ: ಸಾಆಸ್ಥಾಸ/08/2012-13:**

ಆಯುಕ್ತರು ರವರ ದಿನಾಂಕ: 21-05-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ರವರು ಇಂತಹ ಸ್ಥಳಗಳನ್ನು ಗುರುತಿಸಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರ್‌ಗೆ ರೂ.5/- ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ. ಈಗಾಗಲೇ ಸದರಿರವರು ಈ ಘಟಕವನ್ನು ಆಂಧ್ರ ಪ್ರದೇಶದ 290 ಸ್ಥಳಗಳಲ್ಲಿ ಸ್ಥಾಪಿಸಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಠ 10 ಸಾವಿರ ಜನಸಂಖ್ಯೆಯುಳ್ಳ 10 ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 5 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದ ಮಧ್ಯಭಾಗದಲ್ಲಿ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ವ್ಯವಸ್ಥೆವುಳ್ಳ ಸ್ಥಳವನ್ನು ಮತ್ತು ಸದರಿ ಘಟಕಕ್ಕೆ ವಿದ್ಯುತ್ ಅನ್ನು ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯು ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಪಯುಕ್ತವಾಗಿರುವುದರಿಂದ, ಸದರಿ ಪ್ರಸ್ತಾವನೆಗೆ ಉಲ್ಲೇಖ-(1) ಮತ್ತು (2) ರಂತೆ ಅನುಮೋದನೆ ಪಡೆಯಲಾಗಿದ್ದು, ಸದರಿ ಯೋಜನೆಗೆ ಈ ಕೆಳಕಂಡಂತೆ 8 ಸ್ಥಳಗಳನ್ನು ಗುರುತಿಸಲಾಗಿದೆ.

- ಶಾಂತಿನಗರ, ವಾರ್ಡ್ ಸಂಖ್ಯೆ.117
- ದೇವರಜೀವನಹಳ್ಳಿ, ವಾರ್ಡ್ ಸಂಖ್ಯೆ.47 (ಎರಡು ಸ್ಥಳಗಳಲ್ಲಿ)
- ವಿದ್ಯಾರಣ್ಯಪುರ, ವಾರ್ಡ್ ಸಂಖ್ಯೆ.09
- ಅರಮನೆನಗರ, ವಾರ್ಡ್ ಸಂಖ್ಯೆ.35
- ಪೀಣ್ಯಾ ಕೈಗಾರಿಕಾ ಪ್ರದೇಶ, ವಾರ್ಡ್ ಸಂಖ್ಯೆ.41
- ಪ್ರಕಾಶ್‌ನಗರ, ವಾರ್ಡ್ ಸಂಖ್ಯೆ.98
- ಅಂಗರಾಜಪುರ, ವಾರ್ಡ್ ಸಂಖ್ಯೆ.49

ಪಾಲಿಕೆಯ ವ್ಯಾಪ್ತಿಯ ಕೊಳಚೆ ಪ್ರದೇಶದಲ್ಲಿ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 08 ಸ್ಥಳಗಳಲ್ಲಿ Water Health India Pvt. Ltd., ರವರಿಗೆ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 5 ವರ್ಷಗಳ ಅವಧಿಗೆ ನೀಡಲು ಪ್ರಸ್ತಾವನೆಯನ್ನು ಅನಮೋದನೆಗಾಗಿ ಮಂಡಿಸಲಾಗಿತ್ತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-(3) ರಂತೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 23-11-2011 ರಂದು ನಡೆದ ಸಭೆಯ ನಡವಳಿಗಳ ವಿಷಯದ ಸಂಖ್ಯೆ: ಸಾಆಸ್ಥಾಸ/15/2011-12 ರಲ್ಲಿ "ಪಾಲಿಕೆ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., JA ಸಂಸ್ಥೆಯವರ ಯೋಜನೆಯನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳುವ ವಿಷಯದಲ್ಲಿ ಕುರಿತಂತೆ ಕರಡು ಪತ್ರದಲ್ಲಿರುವ ಹಲವಾರು ನಿಯಮ ಹಾಗೂ ನಿಬಂಧನೆಗಳನ್ನು ಕಾನೂನು ಕೋಶದ ಮುಖ್ಯಸ್ಥರೊಂದಿಗೆ ವಿವರವಾಗಿ ಚರ್ಚಿಸಿ ನಿಯಮಾಅನುಬಂಧಗಳನ್ನು ಅಳವಡಿಸಿ ವಿಷಯವನ್ನು ಮರು ಮಂಡಿಸುವಂತೆ" ಕಡತವನ್ನು ಹಿಂದಿರುಗಿಸಲಾಗಿರುತ್ತದೆ.

S. Venkatesh Babu

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

ಈ ನಿಟ್ಟಿನಲ್ಲಿ ಕರಡು ಒಪ್ಪಂದ ಪತ್ರದಲ್ಲಿ ಮಾರ್ಪಾಡು ಮಾಡಲಾಗಿದ್ದು, ಮಾರ್ಪಾಡು ಮಾಡಿರುವ ಕರಡು ಒಪ್ಪಂದ ಪತ್ರದಲ್ಲಿರುವ ನಿಯಮ ಹಾಗೂ ನಿಬಂಧನೆಗಳನ್ನು ಕಾನೂನು ಕೋಶದ ಮುಖ್ಯಸ್ಥರೊಂದಿಗೆ ಚರ್ಚಿಸಲಾಗಿದ್ದು, ಕರಡು ಪತ್ರದಲ್ಲಿರುವ ನಿಭಂದನೆಗಳು ಸಮಂಜಸವಾಗಿದೆಯೆಂದು ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯ ನೀಡಿರುತ್ತಾರೆ. ಕರಡು ಒಪ್ಪಂದ ಪತ್ರವನ್ನು ಇದರೊಂದಿಗೆ ಲಗತ್ತಿಸಿದ್ದು, ಪಾಲಿಕೆಯ ವ್ಯಾಪ್ತಿಯ ಕೊಳಚೆ ಪ್ರದೇಶದಲ್ಲಿ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 08 ಸ್ಥಳಗಳಲ್ಲಿ Water Health India Pvt. Ltd., ರವರಿಗೆ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 5 ವರ್ಷಗಳ ಅವಧಿಗೆ ನೀಡಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 21-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, **Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 5 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿದ್ದು, ಸದರಿ ಸಂಸ್ಥೆಯೊಂದಿಗೆ ಮಾಡಿಕೊಳ್ಳುವ ಕರಡು ಒಪ್ಪಂದ ಪತ್ರದಲ್ಲಿರುವ ನಿಬಂಧನೆಗಳು ಸಮಂಜಸವಾಗಿದೆ ಎಂದು ಕಾನೂನುಕೋಶದ ಮುಖ್ಯಸ್ಥರು ಅಭಿಪ್ರಾಯ ನೀಡಿರುವ ಹಿನ್ನೆಲೆಯಲ್ಲಿ ವಾರ್ಡ್ ನಂ.73, 163, 143, 152, 10, 105, 121, 61, 33, 137 ಮತ್ತು 71 ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡಲು ಹಾಗೂ ಅಗತ್ಯವಿರುವ ಕಡೆಗಳಲ್ಲಿ ಅನುಷ್ಠಾನ ಮಾಡಲು ಸಮಿತಿಯು ತೀರ್ಮಾನಿಸಿತು.**

## 7. ವಿಷಯದ ಸಂಖ್ಯೆ: ಸಾಆಸ್ಥಾಸ/09/2012-13:

ಸಂಖ್ಯೆ: ಕೇ.ಸ್ಥಾ.ಸ./ಪಿಆ/03/2011-12, ದಿನಾಂಕ: 07-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಉಪ ಆರೋಗ್ಯಾಧಿಕಾರಿಗಳು ಪಾಲಿಕೆಯಲ್ಲಿ ವಿಪತ್ತು ನಿರ್ವಹಣಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಟಿಪ್ಪಣಿ ಹಾಳೆಯಲ್ಲಿ ಕಡತದೊಂದಿಗೆ ಸಾರ್ವಜನಿಕ ರಕ್ಷಣೆ ಮತ್ತು ಹಿತದೃಷ್ಟಿಗೆ ಸಂಬಂಧಿಸಿದಂತೆ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಾಚರಣೆ ಮತ್ತು ಇತರೇ ಕಾರ್ಯಕ್ರಮಗಳಿಗೆ ವಿಪತ್ತು ನಿರ್ವಹಣಾ ಕೇಂದ್ರದಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆ, ಬಿ.ಬಿ.ಎಂ.ಪಿ. ಆರೋಗ್ಯ ಕೇಂದ್ರಗಳಿಗೆ ವೈದ್ಯರುಗಳನ್ನು ಮತ್ತು ಸಿಬ್ಬಂದಿ ವರ್ಗದವರನ್ನು ನಿಯೋಜಿಸಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುತ್ತೇವೆ.

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 109 ಖಾಸಗಿ ಸೂಪರ್ ಸ್ಪಷಾಲಿಟಿ ಆಸ್ಪತ್ರೆಗಳು, 83 ದೊಡ್ಡ ಪ್ರಮಾಣದ ಆಸ್ಪತ್ರೆಗಳು, 30 ರಕ್ತದಾನ ಬ್ಯಾಂಕ್, 23 ಔಷಧಾಲಯಗಳು 10 ಮೇಲ್ಪಟ್ಟ ಇತರೆ ಇಲಾಖೆಗಳು ಇಂಡಿಯನ್ ಮಿಲಿಟರಿ ಸಂಸ್ಥೆ, ಇಂಡಿಯನ್ ಏರಪೋರ್ಸ್, ಜಿಲ್ಲಾಧಿಕಾರಿಗಳು, ಜಿಲ್ಲಾ ಮೆಜಿಸ್ಟ್ರೇಟ್, ತಾಲ್ಲೂಕು ತಹಸೀಲ್ದಾರ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೋಲೀಸ್ ಇಲಾಖೆ, ಅಗ್ನಿ ಶಾಮಕ ದಳ, ಸಾರಿಗೆ ಇಲಾಖೆ, ಡಬ್ಲ್ಯೂಎಸ್ಎಸ್‌ಬಿ, ಬೆಸ್ಕಾಂ, ಪಿಡಬ್ಲ್ಯೂಡಿ, ಇಂಜಿನಿಯರಿಂಗ್ ಇಲಾಖೆ, 108 ಆಂಬುಲೆನ್ಸ್, ಪರಿಸರ ಇಲಾಖೆ, ಹೋಂ ಗಾರ್ಡ್ ಇಲಾಖೆ ಮುಂತಾದವುಗಳ ಸಹಕಾರದಿಂದ ಸೇವೆ ನಿರ್ವಹಿಸಲಾಗುತ್ತಿದೆ.

ಭಾರತದ ಪ್ರಮುಖ ನಗರಗಳಾದ ದೆಹಲಿ, ಬಾಂಬೆ, ಕಲ್ಕತ್ತ, ಗುಜರಾತ್, ಚೆನ್ನೈ, ಬೆಂಗಳೂರು, ಮುಂತಾದ ರಾಜ್ಯಗಳಲ್ಲಿ ಭಯೋತ್ಪಾದಕರ ಮತ್ತು ಉಗ್ರಗಾಮಿಗಳ ದಾಳಿಯಿಂದ ಸಾರ್ವಜನಿಕರು ತೊಂದರೆಯನ್ನು ಅನುಭವಿಸಿರುತ್ತಾರೆ, ಹಾಗೂ ಭಯೋತ್ಪಾದಕರ ದಾಳಿಯಿಂದ ಸಾವು-ನೋವುಗಳು ಸಂಭವಿಸಿರುತ್ತವೆ. ಭಯೋತ್ಪಾದಕರ ದಾಳಿಯಿಂದ ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ಅವರ ರಕ್ಷಣೆ ಮಾಡುವ ಬಗ್ಗೆ ಸಮಸ್ಯೆಗಳನ್ನು ನಿಭಾಯಿಸಲು ವಿಪತ್ತು ನಿರ್ವಹಣಾ ಕೇಂದ್ರವನ್ನು ಸ್ಥಾಪಿಸುವುದು ಅಗತ್ಯವಾಗಿರುತ್ತದೆ. **ವಿಪತ್ತು ನಿರ್ವಹಣಾ ಕೇಂದ್ರವನ್ನು 08 ವಲಯಗಳಿಗೆ ಹಾಗೂ ಸಂಬಂಧಿಸಿದ ಇಲಾಖೆಗೆ ಸಂಪರ್ಕಿಸಲು ಹಾಗೂ ಒಂದು ಮುಖ್ಯ ವಿಪತ್ತು ನಿರ್ವಹಣಾ ಕೇಂದ್ರವನ್ನು ಪಾಲಿಕೆಯ ಆವರಣದಲ್ಲಿ ಅಥವಾ ಕೇಂದ್ರ ಭಾಗದಲ್ಲಿ ಸ್ಥಾಪಿಸಿ 08 ದಿಕ್ಕುಗಳಲ್ಲಿಯೂ ಮಾಹಿತಿ ಸಂಪರ್ಕ ಪಡೆಯಲು ಒಂದು ಕೇಂದ್ರ ನಿರ್ವಹಣಾ ಕೇಂದ್ರ ಸ್ಥಾನವು ಅವಶ್ಯಕವಾಗಿರುತ್ತವೆ. ವಲಯ ಜಂಟಿ ಆಯುಕ್ತರು ಸದರಿ ಕೇಂದ್ರಗಳ ಆಡಳಿತ ಉಸ್ತುವಾರಿ ಹಾಗೂ ಕಾರ್ಯನಿರ್ವಹಣೆಗೆ ಒಳಪಟ್ಟಿರುತ್ತದೆ. ಮುಖ್ಯ ವಿಪತ್ತು ನಿರ್ವಹಣಾ ಕೇಂದ್ರವು ಪಾಲಿಕೆಯ ಮಾನ್ಯ ಆಯುಕ್ತರು ರವರು ನಿರ್ವಹಣೆಯಲ್ಲಿರುತ್ತದೆ.**

ತತ್ಸಂಬಂಧಕ್ಕೆ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಕ್ಕೆ ತರುತ್ತಾ ಸಾರ್ವಜನಿಕರ ರಕ್ಷಣೆ ಮತ್ತು ಹಿತಾಸಕ್ತಿಯನ್ನು ಕಾಪಾಡಲು ವಿಪತ್ತು ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಲು ಹಾಗೂ ಕೇಂದ್ರಕ್ಕೆ ಅಗತ್ಯವಾದ ಸಿಬ್ಬಂದಿ, ಸಲಕರಣೆಗಳು ಮತ್ತು 24X7 ಕಾಲ ನಿರ್ವಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸಾರ್ವಜನಿಕರ ರಕ್ಷಣೆ ಮತ್ತು ಹಿತದೃಷ್ಟಿಯಿಂದ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

**ನಿರ್ಣಯ:**

ದಿನಾಂಕ: 07-05-2012ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸಾರ್ವಜನಿಕ ರಕ್ಷಣೆ ಮತ್ತು ಹಿತಾಸಕ್ತಿಯನ್ನು ಕಾಪಾಡಲು ವಿಪತ್ತು ನಿರ್ವಹಣಾ ಕೇಂದ್ರವನ್ನು ೦೮ ವಲಯಗಳಲ್ಲಿ ಸ್ಥಾಪಿಸಲು ಇದರ ಆಡಳಿತ ಉಸ್ತುವಾರಿ ಹಾಗೂ ಕಾರ್ಯನಿರ್ವಹಣೆ ವಲಯ ಜಂಟಿ ಆಯುಕ್ತರು ರವರ ಅಧೀನಕ್ಕೆ ಒಳಪಟ್ಟಿರುತ್ತದೆ. ೦೮ ವಲಯಗಳಲ್ಲಿರುವ ವಿವಿಧ ಇಲಾಖೆಗಳನ್ನು ಸಂಪರ್ಕಿಸಲು ಪಾಲಿಕೆಯ ಆವರಣದಲ್ಲಿ ಮುಖ್ಯ ವಿಪತ್ತು ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಿ ಸದರಿ ಕೇಂದ್ರದ ಆಡಳಿತ ಕೆಲಸ ಕಾರ್ಯವು ಮಾನ್ಯ ಆಯುಕ್ತರು ರವರ ಅಧೀನದಲ್ಲಿರುತ್ತದೆ. ವಿಪತ್ತು ನಿರ್ವಹಣಾ ಕೇಂದ್ರ 24X7 ಕಾಲ ನಿರ್ವಹಿಸಬೇಕಾಗಿರುವುದರಿಂದ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಅಗತ್ಯವಾದ ಸಿಬ್ಬಂದಿ ಸಲಕರಣೆಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬಹುದಾಗಿರುತ್ತದೆಂದು ಸಮಿತಿಯು ತೀರ್ಮಾನಿಸಿತು.

**೮. ವಿಷಯದ ಸಂಖ್ಯೆ: ಸಾಆಸ್ಥಾಸ/10/2012-13:**

ಸಂಖ್ಯೆ: ಆ/ಪಿ.ಎಸ್.ಆರ್. (G)/1841/2012-13, ದಿನಾಂಕ: 21-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು ಎಂ.ಎಸ್.ಡಬ್ಲ್ಯೂ. ನಿಯಮಾವಳಿ 2000 ಕಾಯ್ದೆಯಂತೆ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಮಾನವ ಹಕ್ಕು ಆಯೋಗವು ಇಂಥಹ ಯೋಜನೆಗಳ ಅನುಷ್ಟಾನದ ಬಗ್ಗೆ ನಿರಂತರವಾಗಿ ಮಾನಿಟರಿಂಗ್ ಮಾಡುತ್ತಿದೆ.

ಈ ಕುರಿತು ಕಾಲಕಾಲಕ್ಕೆ ಸದರಿ ಯೋಜನೆಗಳ ಅನುಷ್ಟಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಾಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಆಧುನಿಕ ತಂತ್ರಜ್ಞಾನಗಳನ್ನು ಘನತ್ಯಾಜ್ಯ ವಸ್ತುಗಳ ಸಂಸ್ಕರಣೆಗೆ ಅಳವಡಿಸಿಕೊಳ್ಳಲಾಗಿದೆ. ಇವುಗಳಲ್ಲಿ ಸಾವಯವ ತ್ಯಾಜ್ಯ ಪರಿವರ್ತಕ ಘಟಕವು ಒಂದಾಗಿರುತ್ತದೆ.

ಸದರಿ ಘಟಕದ ಸ್ಥಾಪನೆಯಿಂದ ಹಸಿ ತ್ಯಾಜ್ಯವು ನೆಲಭರ್ತಿ ಜಾಗಕ್ಕೆ ಹೋಗುವುದಿಲ್ಲ ಹಾಗೂ ನೆಲಭರ್ತಿ ಜಾಗಕ್ಕೆ ಸಾಗಿಸುವ ವೆಚ್ಚವು ಸಹ ಕಡಿಮೆಯಾಗುವುದು. ಇದರಿಂದ ಪರಿಸರಕ್ಕೆ ಯಾವುದೇ ಹಾನಿಯಾಗುವುದಿಲ್ಲ.

ಈ ಘಟಕಗಳಿಂದ ಉತ್ಪತ್ತಿಯಾಗುವ ಗೊಬ್ಬರವನ್ನು ಪಾಲಿಕೆಯ ಉದ್ಯಾನವನಗಳಿಗೆ ಹಾಗೂ ರಸ್ತೆ ಬದಿ ಗಿಡಗಳಿಗೆ ಉಪಯೋಗಿಸಿಕೊಳ್ಳಬಹುದಾಗಿದೆ.

ಕೆರೆಗಳ ಪ್ರದೇಶ ಹಾಗೂ ಉದ್ಯಾನವನಗಳಲ್ಲಿ ಸದರಿ ಘಟಕಗಳನ್ನು ಸ್ಥಾಪಿಸಲು ದಿನಾಂಕ: 28-04-2012 ರಂದು ನಡೆದ ಲೋಕಅದಾಲತ್ ನ್ಯಾಯಾಲಯದ ಕಲಾಪದಲ್ಲಿ ಮಾನ್ಯ ನ್ಯಾಯಮೂರ್ತಿಗಳು ಕೆರೆಗಳು ಹಾಗೂ ಉದ್ಯಾನವನಗಳಲ್ಲಿ ಘನತ್ಯಾಜ್ಯ ಸಂಸ್ಕರಣಾ ಹಾಗೂ ಬಯೋಗ್ಯಾಸ್ ಘಟಕಗಳನ್ನು ಸ್ಥಾಪಿಸಬಾರದೆಂದು ಸೂಚಿಸಿರುವುದರಿಂದ, ಸದರಿ ಪ್ರಸ್ತಾವನೆಗೆ ಕೆರೆಗಳು ಹಾಗೂ ಉದ್ಯಾನವನಗಳಲ್ಲಿ ಸ್ಥಾಪಿಸಲು ಅವಕಾಶವಿಲ್ಲದ ಕಾರಣ ಬಿಬಿಎಂಪಿ ಯಲ್ಲಿ ಈ ಕೆಳಗೆ ಪ್ರಸ್ತಾಪಿಸಿರುವ ಸ್ಥಳಗಳಲ್ಲಿ ಸಾವಯವ ತ್ಯಾಜ್ಯ ಪರಿವರ್ತಕ ಘಟಕಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ.

1. ಪೂರ್ವ ವಲಯದ ಬ್ಯಾಟರಾಯನಪುರ ಉಪ ವಿಭಾಗ ವಾರ್ಡ್ ಸಂಖ್ಯೆ: ೦6 (ಥಣಿಸಂದ್ರ) ದ ಕಛೇರಿ ಆವರಣದಲ್ಲಿ ಅಂದಾಜು ವೆಚ್ಚ ರೂ.73.52 ಲಕ್ಷ.
2. ಪೂರ್ವ ವಲಯದ ಹೆಬ್ಬಾಳ ಉಪ ವಿಭಾಗದ ವಾರ್ಡ್ ಸಂಖ್ಯೆ: 18 (ಡಾಲರ್ಸ್ ಕಾಲನಿ) ಕಛೇರಿ ಆವರಣದಲ್ಲಿ ಅಂದಾಜು ವೆಚ್ಚ ರೂ.73.52 ಲಕ್ಷ.
3. ಪೂರ್ವ ವಲಯದ ವಸಂತನಗರ ಉಪ ವಿಭಾಗದ ವಾರ್ಡ್ ಸಂಖ್ಯೆ: 93 ಕಂಟೋನ್ಮೆಂಟ್ ಹತ್ತಿರ ಕಛೇರಿ ಆವರಣದಲ್ಲಿ ಅಂದಾಜು ವೆಚ್ಚ ರೂ.73.52 ಲಕ್ಷ.

ಮೇಲಿನ ಎಲ್ಲಾ ಮೂರು ಘಟಕಗಳ ಸ್ಥಾಪನಾ ವೆಚ್ಚ ರೂ.220.56 ಲಕ್ಷಗಳಾಗಿದ್ದು, ಸದರಿ ಘಟಕದ ಸ್ಥಾಪನೆಗೆ ತಗಲುವ ವೆಚ್ಚವನ್ನು 13 ನೇ ಹಣಕಾಸು ಆಯೋಗದಡಿಯಲ್ಲಿ ಭರಿಸಬಹುದಾಗಿದೆ.

ಆದಕಾರಣ, ಈ ಕೆಳಕಂಡ ಪ್ರಸ್ತಾವನೆಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

S. Vendatesh B.

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

1. ಮೇಲೆ ಪ್ರಸ್ತಾಪಿಸಿರುವ ಮೂರು ಸಾವಯವ ತ್ಯಾಜ್ಯ ಪರಿವರ್ತಕ ಘಟಕಗಳ ಸ್ಥಾಪನೆಗೆ 13ನೇ ಹಣಕಾಸು ಆಯೋಗದಡಿಯಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಹಾಗೂ ಪ್ರತ್ಯೇಕವಾಗಿ ಜಾಬ್ ಸಂಖ್ಯೆ ನೀಡಿ, ಟೆಂಡರ್ ಆಹ್ವಾನಿಸಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 21-05-2012ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು ಎಂ.ಎಸ್.ಡಬ್ಲ್ಯು ನಿಯಮಾವಳಿ 2000 ಕಾಯ್ದೆಯಂತೆ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದಾಗಿರುತ್ತದೆ. ಸಾವಯವ ತ್ಯಾಜ್ಯ ಪರಿವರ್ತಕ ಘಟಕ ಸ್ಥಾಪಿಸುವುದರಿಂದ ಈ ಘಟಕಗಳಿಂದ ಉತ್ಪತ್ತಿಯಾಗುವ ಗೊಬ್ಬರವನ್ನು ಪಾಲಿಕೆಯ ಉದ್ಯಾನವನಗಳಿಗೆ ಹಾಗೂ ರಸ್ತೆ ಬದಿ ಗಿಡಗಳಿಗೆ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಆದುದರಿಂದ, ವಾರ್ಡ್ 06, 18 ಮತ್ತು 93ಗಳಲ್ಲಿ ಘಟಕಗಳನ್ನು ಸ್ಥಾಪಿಸಲು ಸದರಿ ಘಟಕದ ವೆಚ್ಚ ರೂ.220.56 ಲಕ್ಷಗಳನ್ನು 13ನೇ ಹಣಕಾಸು ಆಯೋಗದಡಿ ಭರಿಸಿ, ಪ್ರತ್ಯೇಕವಾಗಿ ಜಾಬ್ ಸಂಖ್ಯೆ ನೀಡಿ ಟೆಂಡರ್ ಅಹ್ವಾನಿಸಲು ಸಮಿತಿಯು ತೀರ್ಮಾನಿಸಿತು.

**9. ವಿಷಯದ ಸಂಖ್ಯೆ: ಸಾಆಸ್ಥಾಸ/11/2012-13:**

ಸಂಖ್ಯೆ: ಅ.ಆ.(ಯೋ)/ಪಿಆರ್/1563/2012-13, ದಿನಾಂಕ: 22-05-2012 ರ ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 03-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಸ್ಥರೊಂದಿಗೆ ಮಾನ್ಯ ಆಯುಕ್ತರ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ, ಹಾಗೂ ದಿನಾಂಕ: 05-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಆಯುಕ್ತರು ಭೇಟಿ ನೀಡಿದಾಗ ಸ್ಥಳೀಯರು ಮಂಡಿಸಿದ ಬೇಡಿಕೆಯಂತೆ, ಯಲಹಂಕ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ.ಎಸ್.ಆರ್.ವಿಶ್ವನಾಥ್ ರವರೊಂದಿಗೆ ಚರ್ಚಿಸಿ ಮಾವಳ್ಳಿಪುರ ಘಟಕದ ಸುತ್ತಲಿನ ಹಳ್ಳಿಗಳಲ್ಲಿ ಅಭಿವೃದ್ಧಿ ಕೈಗೊಳ್ಳಲು ರೂಪಿಸಿದ ರೂ.400.00 ಲಕ್ಷಗಳ ಯೋಜನೆಯಲ್ಲಿ ಈ ಕಾಮಗಾರಿಯು ರೂ.68.00 ಲಕ್ಷಗಳೊಂದಿಗೆ ಸೇರಿರುತ್ತದೆ.

ಸದರಿ ಕಾಮಗಾರಿಗೆ ಲೆಕ್ಕಶೀರ್ಷಿಕೆ ಪಿ2200 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಅಂದಾಜು ಮೊತ್ತ ರೂ.68.00 ಲಕ್ಷಗಳನ್ನು ಒದಗಿಸಿ ಕಾಮಗಾರಿ ಸಂಖ್ಯೆ:310-11-000042 ಅನ್ನು ನೀಡಲಾಗಿದ್ದು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆಸಾಆಸ್ಥಾಸ/26/2011-12, ದಿನಾಂಕ: 05-09-2011 ರಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ.

ಮುಂದುವರೆದು ಮುಖ್ಯ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರ ಕಛೇರಿ ಸಂಖ್ಯೆ:CE/SWM/AS/27/2011-12, ದಿನಾಂಕ: 03-10-2011 ರಲ್ಲಿ ಆಡಳಿತಾತ್ಮಕ ಮಂಜೂರಾತಿ ಮತ್ತು ಸಂಖ್ಯೆ: CE/SWM/TS/27/2011-12, ದಿನಾಂಕ: 03-10-2011 ರಲ್ಲಿ ತಾಂತ್ರಿಕ ಮಂಜೂರಾತಿಯನ್ನು ರೂ.68.00 ಲಕ್ಷಗಳ ಮೊತ್ತಕ್ಕೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಮುಖ್ಯ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರು ಅನುಮೋದನೆ ನೀಡಿರುತ್ತಾರೆ.

ಅದರಂತೆ, ದಿನಾಂಕ: 22-10-2011 ರಂದು ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಪ್ರಥಮ ಬಾರಿಗೆ ಆಹ್ವಾನಿಸಲಾಗಿದ್ದು ದಿನಾಂಕ: 25-10-2011 ರಂದು ವಿಜಯ ಕರ್ನಾಟಕ ದಿನಪತ್ರಿಕೆ ಮತ್ತು ಡೆಕ್ಕನ್ ಹೆರಾಲ್ಡ್ ಆಂಗ್ಲ ಪತ್ರಿಕೆಗಳಲ್ಲಿ ಪ್ರಕಟಣೆಯಾಗಿರುತ್ತದೆ.

ಸದರಿ **ಪ್ರಥಮ ಕರೆಯ** ತಾಂತ್ರಿಕ ಬಿಡ್ಡನ್ನು ತೆರೆದು ಪರಿಶೀಲಿಸಲಾಗಿ, ಏಕೈಕ ಗುತ್ತಿಗೆದಾರರು ಭಾಗವಹಿಸಿದ ಕಾರಣ **ಪ್ರಥಮ ಕರೆಯ** ಟೆಂಡರ್ ಅನ್ನು ರದ್ದುಪಡಿಸಲಾಗಿರುತ್ತದೆ. **ಎರಡನೆಯ ಕರೆಯ** ಟೆಂಡರ್ ಆಹ್ವಾನವನ್ನು ದಿನಾಂಕ: 12-12-2011 ರಲ್ಲಿ ನೀಡಲಾಗಿದ್ದು, ದಿನಾಂಕ: 14-12-2011 ರಂದು, ಪ್ರಜಾವಾಣಿ ಕನ್ನಡ ದಿನಪತ್ರಿಕೆ ಮತ್ತು ದಿ ಹಿಂದೂ ಆಂಗ್ಲ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ.

**ಎರಡನೆಯ ಕರೆಯ** ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕ ಬಿಡ್ಡನ್ನು ಪರಿಶೀಲಿಸಿ, ಮುಖ್ಯ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರು ಅನುಮತಿ ನೀಡಿರುವಂತೆ ಆರ್ಥಿಕ ಬಿಡ್ಡನ್ನು ತೆರೆಯಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಗುತ್ತಿಗೆದಾರರು ಮತ್ತು ನಮೂದಿಸಿರುವ ವಿವರಗಳು ಕೆಳಗಿನಂತಿರುತ್ತವೆ.

ಮೇಲಿನ ಕಾಮಗಾರಿಯ ಆರ್ಥಿಕ ಬಿಡ್ ಅನ್ನು ದಿನಾಂಕ: 06-02-2012 ರಂದು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ವೆಬ್ ಸೈಟ್‌ನಲ್ಲಿ ತೆರೆಯಲಾಗಿದ್ದು, ವಿವರಗಳು ಕೆಳಗಿನಂತಿರುತ್ತವೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | | |
|---|---|---|
| ಕಾಮಗಾರಿಯ ಅಂದಾಜು ಮೊತ್ತ | - | ರೂ.68,00,000.00 |
| ಭದ್ರತಾ ಠೇವಣಿ ಮೊತ್ತ | - | ರೂ.1,36,000.00 |
| ಟೆಂಡರ್‌ಗಿಟ್ಟ ಮೊತ್ತ | - | ರೂ.67,80,789.00 |

**ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ 2 (ಇಬ್ಬರು) ಗುತ್ತಿಗೆದಾರರು ತಾಂತ್ರಿಕ ಷರತ್ತುಗಳನ್ನು ಪೂರೈಸಿದ್ದು, ಅವರುಗಳು ನಮೂದಿಸಿರುವ ದರಗಳು ಕೆಳಗಿನಂತಿರುತ್ತವೆ.

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಮೊತ್ತ ಮತ್ತು ಮಂಜೂರಾದ ಅಂದಾಜು ಪಟ್ಟಿಗೆ ಹೋಲಿಸಿದಾಗ ಶೇಕಡವಾರು ಹೆಚ್ಚು / ಕಡಿಮೆ | ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಮೊತ್ತ ಮತ್ತು 2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡವಾರು ಹೆಚ್ಚು/ಕಡಿಮೆ |
|---|---|---|---|
| 1 | ಶ್ರೀ.ಆರ್.ಸಿ.ಬಸವರಾಜ<br>1ನೇ ದರ್ಜೆ ಗುತ್ತಿಗೆದಾರರು | **ರೂ.80,08,491.00<br>ಶೇ.18.11 ರಷ್ಟು ಹೆಚ್ಚು** | **ರೂ.80,08,491.00<br>ಶೇ.7.69 ರಷ್ಟು ಹೆಚ್ಚು** |
| 2 | ಶ್ರೀ.ಜಿ.ಓ.ವಿಜಯನಗೌಡ<br>1ನೇ ದರ್ಜೆ ಗುತ್ತಿಗೆದಾರರು | ರೂ.85,32,176.00<br>ಶೇ.25.83 ರಷ್ಟು ಹೆಚ್ಚು | ರೂ.85,32,176.00<br>ಶೇ.14.74 ರಷ್ಟು ಹೆಚ್ಚು |

ಮೇಲಿನ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಲಾಗಿ 1ನೇ ದರ್ಜೆ ಗುತ್ತಿಗೆದಾರರಾದ **ಶ್ರೀ.ಆರ್.ಸಿ.ಬಸವರಾಜ ರವರು** ನಮೂದಿಸಿರುವ ದರಗಳ ಮೊತ್ತವು ರೂ.80,08,491.00 ಆಗಿದ್ದು, ಅನುಮೋದಿತ ಅಂದಾಜು ಪಟ್ಟಿ ದರಗಳ ಮೊತ್ತ ರೂ.67,80,789.00 ಗಳಿಗೆ ಹೋಲಿಸಿದಾಗ **ಶೇ.18.11** ರಷ್ಟು **ಹೆಚ್ಚಾಗಿರುತ್ತದೆ** ಹಾಗೂ 2011-12ನೇ ಸಾಲಿನ ದರಪಟ್ಟಿಯ ಮೊತ್ತ ರೂ.74,63,307.00 ಕ್ಕೆ ಹೋಲಿಸಿದಾಗ **ಶೇ.7.69** ರಷ್ಟು **ಹೆಚ್ಚಾಗಿರುತ್ತದೆ**.

ಮೇಲಿನಂತೆ ಸದರಿ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಗುತ್ತಿಗೆದಾರರ ಪೈಕಿ **ಶ್ರೀ.ಆರ್.ಸಿ.ಬಸವರಾಜ,** 1ನೇ ದರ್ಜೆ ಗುತ್ತಿಗೆದಾರರು ಕಡಿಮೆ ದರಗಳನ್ನು ನಮೂದಿಸಿರುವ ಎಲ್-1 ಗುತ್ತಿಗೆದಾರರಾಗಿರುತ್ತಾರೆ.

ಸದರಿ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಇಬ್ಬರು ಗುತ್ತಿಗೆದಾರರ ಪೈಕಿ ಎಲ್-1 ಗುತ್ತಿಗೆದಾರರು ನಮೂದಿಸಿದ್ದ ಮೊತ್ತ ರೂ.80,08,491/- ಗಳು 2011-12 ನೇ ಸಾಲಿನ ಹೊಸ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇ.7.69 ರಷ್ಟು ಹೆಚ್ಚಾಗಿದ್ದು, ದರ ಸಂಧಾನ ಮಾಡಲು ಸೂಚಿಸಲಾಗಿತ್ತು.

ಅದರಂತೆ, ಕಾರ್ಯಪಾಲಕ ಅಭಿಯಂತರರು ಎಲ್-1 ಗುತ್ತಿಗೆದಾರರನ್ನು ದರ ಸಂಧಾನಕ್ಕೆ ಆಹ್ವಾನಿಸಿದ್ದು, ಸದರಿ ಗುತ್ತಿಗೆದಾರರು ಹಿಂದೆ ನಮೂದಿಸಿದ್ದ ಶೇ.7.69 ಹೆಚ್ಚುವರಿ ದರಗಳನ್ನು ಶೇ.7.40 ಹೆಚ್ಚುವರಿಗೆ ಕಡಿಮೆಗೊಳಿಸಿರುತ್ತಾರೆ.

ದರ ಸಂಧಾನದ ನಂತರ, ಸದರಿ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಎಲ್-1 ಗುತ್ತಿಗೆದಾರರಾದ ಶ್ರೀ.ಆರ್.ಸಿ.ಬಸವರಾಜು ರವರು ನಮೂದಿಸಿರುವ ಮೊತ್ತವು ರೂ.79,86,592/- ಗಳಾಗಿದ್ದು, ಪ್ರತಿ ಸ್ಪರ್ಧಿ ಗುತ್ತಿಗೆದಾರರಾದ ಶ್ರೀ.ಜಿ.ಓ.ವಿಜಯನಗೌಡ ರವರು ನಮೂದಿಸಿರುವ ಮೊತ್ತ ರೂ.85,32,176/- ಗಳಿಗಿಂತ ಕಡಿಮೆ ಇದ್ದು ಅರ್ಹ ಗುತ್ತಿಗೆದಾರರಾಗಿರುತ್ತಾರೆ.

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಸದರಿ ಇ-ಪ್ರೋಕ್ಯೂರ್‌ಮೆಂಟ್ ಅಡಿಯ ದ್ವಿಲಕೋಟೆ ಪದ್ಧತಿಯ **ಎರಡನೇ ಕರೆಯ** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಅರ್ಹಗುತ್ತಿಗೆದಾರರಾದ **ಶ್ರೀ.ಆರ್.ಸಿ.ಬಸವರಾಜುರವರು** ನಮೂದಿಸಿ ದರ ಸಂಧಾನದಲ್ಲಿ ಕಡಿಮೆಗೊಳಿಸಿರುವ **ಮೊತ್ತ ರೂ.79,86,592/- ಗಳು** 2011-12ನೇ ಸಾಲಿನ ಲೋಕೋಪಯೋಗಿ ದರಪಟ್ಟಿಗೆ ಹೋಲಿಸಿದಲ್ಲಿ ಶೇ.7.40 ರಷ್ಟು ಹೆಚ್ಚು ದರಗಳ **ಟೆಂಡರ್ ಅನ್ನು ಅನುಮೋದಿಸಲು** ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ.**

S. Venkatesh Babu

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

10. **ವಿಷಯದ ಸಂಖ್ಯೆ: ಸಾಆಸ್ಥಾಸ/12/2012-13:**

ಸಂಖ್ಯೆ: ಎಂ.ಓ.(ಹೆಚ್)/ಪಿಆರ್/33/2011-12, ದಿನಾಂಕ: 01-06-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 29-ಆರೋಗ್ಯ ಕೇಂದ್ರಗಳು, 07-ಔಷಧಾಲಯಗಳು ಮತ್ತು 04-ನಗರ ಕುಟುಂಬ ಕಲ್ಯಾಣ ಕೇಂದ್ರಗಳು, ಒಟ್ಟು 40 ಕಟ್ಟಡಗಳಿಗೆ, ಭದ್ರತಾ ಸೇವೆ ಒದಗಿಸುವ ದೃಷ್ಠಿಯಿಂದ ಕೆ.ಟಿ.ಪಿ.ಪಿ. ನಿಯಮಾನುಸಾರ ಕರೆಯಲಾದ ಟೆಂಡರ್‌ನಲ್ಲಿ 08 ಜನ ಭಾಗವಹಿಸಿದ್ದು, ಆರ್ಥಿಕ ಬಿಡ್‌ನಲ್ಲಿ ಒಟ್ಟು 07 ಬಿಡ್‌ದಾರರು ಅರ್ಹತೆ ಹೊಂದಿದ್ದು, ಟೆಂಡರ್ ಸಮಿತಿಯು ಪರಿಶೀಲನೆ ನಡೆಸಿರುತ್ತದೆ.

| Bidders | Status | Amount | Observations |
|---|---|---|---|
| Poojaya Security Services | L1 | 5479.00 | Amount quoted as per labour wages act. Basic + Vda = 3998.30, PF, ESI, Service charge, Service tax etc. |
| Excel Security | L2 | 6355.00 | Quoted As per gazette notification Rs.4459.91 with V.D.A., PF, ESI, Service tax etc. |
| Star detective manpower services | L3 | 6358.29 | Quoted As per gazette notification Rs.4459.91 with V.D.A., PF, ESI, Service charge, Service tax. |
| Detectwell & Security Services | L4 | 6488.54 | Quoted As per gazette notification Rs.4459.91 with V.D.A., PF, ESI, Service charge, Service tax. |
| Novel Security Services | L5 | 6504.00 | Quoted As per gazette notification Rs.4459.91, with V.D.A., PF, ESI, Service charge with uniform, Service tax. |
| Sri Udyog Enterprises | L6 | 6894.75 | Quoted As per gazette notification Rs.4459.91 including V.D.A., PF, ESI, weekly off, Service tax, uniform, washing allowances. |
| Tiger Security Services | L7 | 8438.82 | Quoted As per gazette notification Rs.4459.91 with V.D.A., PF, ESI, Weekly Off, General holiday/Festival leave, Bonus, Service charge, Service tax, Uniform, Washing allowances etc., for all items. |

- ಮೆ॥ಪೂಜಾ ಸೆಕ್ಯೂರಿಟಿ ಸರ್ವಿಸಸ್ ಸಂಸ್ಥೆಯವರು, ಕರ್ನಾಟಕ ಕನಿಷ್ಠ ವೇತನ ಕಾಯ್ದೆ-1948 ನಿಯಮಾವಳಿಯ ನೋಟಿಫಿಕೇಶನ್ ಸಂಖ್ಯೆ: ಕೆಐಇ21ಎಲ್‌ಎಂ ಡಬ್ಲ್ಯ 2001, ದಿನಾಂಕ: 14-11-2002 ರಂತೆ, ಆರ್ಥಿಕ ವರ್ಷ 2011-12ನೇ ಸಾಲಿಗೆ ಮೂಲ ವೇತನ ರೂ.2300.00 + ತುಟ್ಟಿಭತ್ಯೆಯ ರೂ.1698.30 ಒಟ್ಟು ರೂ.3998.30 ಗಳ ಹಾಗೂ ಇಎಸ್‌ಐ, ಪಿ.ಎಫ್, ಸೇವಾ ತೆರಿಗೆ, ಸರ್ವೀಸ್ ಟ್ಯಾಕ್ಸ್, ಪ್ರಕಾರ ತೆರಿಗೆಗಳೊಂದಿಗೆ ರೂ.5479.00 ಗಳನ್ನು ನಮೂದಿಸಿರುತ್ತಾರೆ. ಈ ಸಂಸ್ಥೆಯವರು ಕರ್ನಾಟಕ ರಾಜ್ಯ ಪತ್ರದಲ್ಲಿ ತಿಳಿಸಿರುವ ದರಗಳಿಗಿಂತ ಕಡಿಮೆ ದರವನ್ನು ನಮೂದಿಸಿರುತ್ತಾರೆ.
- ಮೆ॥ಎಕ್ಸೆಲ್ ಸೆಕ್ಯೂರಿಟಿ ಸರ್ವೀಸಸ್ ಸಂಸ್ಥೆಯವರು ಮೂಲ ವೇತನ ತುಟ್ಟಿ ಭತ್ಯೆ, ಇ.ಎಸ್.ಐ., ಪಿ.ಎಫ್. ಹಾಗೂ ಸರ್ವೀಸ್ ಟ್ಯಾಕ್ಸ್‌ಗಳಿಗೆ ಸೇರಿ ಒಟ್ಟು ಮೊತ್ತ ರೂ.6355/- ಗಳನ್ನು ನಮೂದಿಸಿರುತ್ತಾರೆ.
- ಮೆ॥ಸ್ಟಾರ್ ಡಿಟೆಕ್ಟೀವ್ ಲ್ಯಾಂಡ್ ಪವರ್ ಸರ್ವೀಸಸ್ ಸಂಸ್ಥೆಯವರು ಮೂಲ ವೇತನ ತುಟ್ಟಿ ಭತ್ಯೆ, ಇ.ಎಸ್.ಐ., ಪಿ.ಎಫ್., ಸರ್ವೀಸ್ ದರ ಹಾಗೂ ಸರ್ವೀಸ್ ಟ್ಯಾಕ್ಸ್‌ಗಳಿಗೆ ಸೇರಿ ಒಟ್ಟು ಮೊತ್ತ ರೂ.6355/- ಗಳನ್ನು ನಮೂದಿಸಿರುತ್ತಾರೆ.
- ಮೆ॥ಡಿಟೆಕ್ಟ್‌ವೆಲ್ ಅಂಡ್ ಸೆಕ್ಯೂರಿಟಿ ಸರ್ವೀಸಸ್ ಸಂಸ್ಥೆಯವರು ಮೂಲ ವೇತನ ತುಟ್ಟಿ ಭತ್ಯೆ, ಇ.ಎಸ್.ಐ., ಪಿ.ಎಫ್., ಸರ್ವೀಸ್ ದರ ಹಾಗೂ ಸರ್ವೀಸ್ ಟ್ಯಾಕ್ಸ್‌ಗಳಿಗೆ ಸೇರಿ ಒಟ್ಟು ಮೊತ್ತ ರೂ.6355=09 ಗಳನ್ನು ನಮೂದಿಸಿರುತ್ತಾರೆ.
- ಮೆ॥ನೋವೆಲ್ ಸೆಕ್ಯೂರಿಟಿ ಸರ್ವೀಸಸ್ ಸಂಸ್ಥೆಯವರು ಮೂಲ ವೇತನ ತುಟ್ಟಿ ಭತ್ಯೆ, ಇ.ಎಸ್.ಐ., ಪಿ.ಎಫ್. ಸರ್ವೀಸ್ ದರ ಹಾಗೂ ಸರ್ವೀಸ್ ಟ್ಯಾಕ್ಸ್‌ಗಳಿಗೆ ಸೇರಿ ಒಟ್ಟು ಮೊತ್ತ ರೂ.6504=00 ಗಳನ್ನು ನಮೂದಿಸಿರುತ್ತಾರೆ.
- ಮೆ॥ಉದ್ಯೋಗ್ ಎಂಟರ್ ಪ್ರೈಸಸ್ ಸಂಸ್ಥೆಯವರು ಮೂಲ ವೇತನ ತುಟ್ಟಿ ಭತ್ಯೆ, ಇ.ಎಸ್.ಐ., ಪಿ.ಎಫ್., ವಾರದ ರಜಾ ದಿನಗಳು, ವಾಷಿಂಗ್ ಅಲೋಯನ್ಸ್‌ಸ್, ಸಮವಸ್ತ್ರ ಹಾಗೂ ಸೇವಾ ದರ, ಹಾಗೂ ಸರ್ವೀಸ್ ಟ್ಯಾಕ್ಸ್‌ಗಳಿಗೆ ಸೇರಿ ಒಟ್ಟು ಮೊತ್ತ ರೂ.6894=75 ಗಳನ್ನು ನಮೂದಿಸಿರುತ್ತಾರೆ.

S Venkatesh Babu

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

- ಮೆ॥ಟೈಗರ್ ಸೆಕ್ಯೂರಿಟಿ ಸರ್ವೀಸಸ್ ಸಂಸ್ಥೆಯವರು ಮೂಲ ವೇತನ ತುಟ್ಟಿ ಭತ್ಯೆ, ಇ.ಎಸ್.ಐ., ಪಿ.ಎಫ್., ವಾರದ ರಜಾ/ಹಬ್ಬದ ರಜಾ ದಿನಗಳು, ಸಾರ್ವತ್ರಿಕ ರಜೆ, ಬೋನಸ್, ಸರ್ವೀಸ್ ದರ, ವಾಷಿಂಗ್ ಅಲೋಯನ್ಸ್‌ಸ್, ಸಮವಸ್ತ್ರ ಹಾಗೂ ಸೇವಾ ದರ, ಹಾಗೂ ಸರ್ವೀಸ್ ಟ್ಯಾಕ್ಸ್‌ಗಳಿಗೆ ಸೇರಿ ಒಟ್ಟು ಮೊತ್ತ ರೂ.8438=82 ಗಳನ್ನು ನಮೂದಿಸಿರುತ್ತಾರೆ.

ಎಕ್ಸೆಲ್ ಸೆಕ್ಯೂರಿಟಿ ಸರ್ವೀಸಸ್, ಶ್ರೀ.ಉದ್ಯೋಗ ಎಂಟರ್ ಪ್ರೈಸಸ್, ಡಿಟೆಕ್ಟ್‌ವೆಲ್ ಸೆಕ್ಯೂರಿಟಿ ಸರ್ವೀಸಸ್, ನೋವೆಲ್ ಸೆಕ್ಯೂರಿಟಿ ಮತ್ತು ಸ್ಟಾರ್ ಸೆಕ್ಯೂರಿಟಿ ಏಜೆನ್ಸಿಗಳವರ ಆರ್ಥಿಕ ಪ್ರಸ್ತಾವನೆಯನ್ನು ತೆರೆಯಲಾಗಿದ್ದು, ಕರ್ನಾಟಕ ರಾಜ್ಯ ಪತ್ರಗಳಿಗನುಗುಣವಾಗಿ ಎಲ್ಲಾ ಸೌಲಭ್ಯಗಳಿಗೆ ದರವನ್ನು ನಮೂದಿಸದೇ ಇರುವುದು ಟೆಂಡರ್ ಸಮಿತಿಯು ಗಮನಿಸಿರುತ್ತದೆ.

**ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯದಲ್ಲಿ ಟೆಂಡರ್ ನಿಬಂಧನೆ ಮತ್ತು ಷರತ್ತುಗೊಳಪಟ್ಟು ಅರ್ಹ ಸಂಸ್ಥೆಗೆ ಕಾರ್ಯಾದೇಶ ನೀಡಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.**

ಮೆ॥ಟೈಗರ್ ಸೆಕ್ಯೂರಿಟಿ ಸರ್ವೀಸಸ್ ರವರು ನಮೂದಿಸಿರುವ ದರಗಳನ್ನು ಪರಿಶೀಲಿಸಿದ್ದು, ಮೆ॥ಟೈಗರ್ ಸೆಕ್ಯೂರಿಟಿ ಸಂಸ್ಥೆಯವರು ಕರ್ನಾಟಕ ರಾಜ್ಯ ಪತ್ರದಲ್ಲಿ ತಿಳಿಸಿರುವ ದರಗಳನ್ವಯ ನೇಮಿಸಲಾಗುವ ಭದ್ರತಾ ಸಿಬ್ಬಂದಿಗೆ ವೇತನ ನೀಡಲಾಗುವುದೆಂದು ನಮೂದು ಮಾಡಿದ್ದು, ನಿಯಮಾನುಸಾರ ದರಗಳನ್ನು ನೀಡಿರುತ್ತಾರೆ. ಹಾಗೂ ದಿನಾಂಕ: 12-04-2012 ರಂದು ದರ ಸಂಧಾನದಲ್ಲಿ ಭಾಗವಹಿಸಿದ್ದು, ಈ ಕೆಳಕಂಡಂತೆ ದರಗಳನ್ನು ಒಪ್ಪಿರುವುದಾಗಿ ಪತ್ರವನ್ನು ನೀಡಿರುತ್ತಾರೆ.

| Sl. No. | Particulars | Rate quoted | Reduced Amount | Final Amount |
|---|---|---|---|---|
| 1 | Basic | 4459.91 | 0.00 | 4459.91 |
| 2 | VDA | 408.91 | 0.00 | 408.00 |
| 3 | ESI 4.75% | 231.22 | 0.00 | 231.22 |
| 4 | PF 13.61% | 662.52 | 0.00 | 662.52 |
| 5 | W/Off | 811.31 | 0.00 | 811.31 |
| 6 | G/H | 234.03 | 0.00 | 234.03 |
| 7 | Uniform | 200 | 100.00 | 100.00 |
| 8 | W/A | 250 | 50.00 | 200.00 |
| 9 | Bonus | 371.51 | 271.51 | 100.00 |
| 10 | Service Charge 0.5% | 22.29 | 10.29 | 12.00 |
| | Total | 7650.79 | 431.80 | 7218.99 |
| 11 | S.Tax 10.3% | 788.03 | 0.00 | 743.55 |
| | **Grand Total** | **8438.82** | **431.80** | **7962.54** |

ಒಬ್ಬ ಭದ್ರತಾ ಸಿಬ್ಬಂದಿಯ ಸೇವೆಗೆ ಟೆಂಡರ್‌ನಲ್ಲಿ ಮೆ॥ಟೈಗರ್ ಸೆಕ್ಯೂರಿಟಿ ಸರ್ವೀಸಸ್ ರವರು ಸಲ್ಲಿಸಿರುವ ದರವು ಒಟ್ಟು ಮೊತ್ತ **ರೂ.8438.82 ಗಳಾಗಿದ್ದು,** ಸಂಧಾನದ ನಂತರ **ರೂ.431.80** ಗಳನ್ನು ಕಡಿಮೆ ಮಾಡಿದ್ದು, ಒಟ್ಟು ಒಬ್ಬ ಭದ್ರತಾ ಸಿಬ್ಬಂದಿಗೆ **ರೂ.7962.54** (ರೂಪಾಯಿ ಏಳು ಸಾವಿರದ ಒಂಬತ್ತುನೂರು ಅರವತ್ತೆರಡು ರೂ ಐವತ್ನಾಲಕ್ಕು ರೂ ಮಾತ್ರ) ಗಳಂತೆ 43 ಆಸ್ಪತ್ರೆಗಳಿಗೆ 03 ಪಾಳಿಯಂತೆ

129 ಭದ್ರತಾ ಸಿಬ್ಬಂದಿಗಳಿಗೆ ಒಂದು ತಿಂಗಳಿಗೆ 10,27167/- ಗಳಂತೆ ಒಂದು ವರ್ಷಕ್ಕೆ ರೂ.1,23,26,012/- (ರೂಪಾಯಿ ಒಂದು ಕೋಟಿ ಇಪ್ಪತ್ಮೂರು ಲಕ್ಷದ ಇಪ್ಪತ್ತಾರು ಸಾವಿರದ ಹನ್ನೆರಡು ರೂ. ಮಾತ್ರ) ಖರ್ಚು ತಗಲುತ್ತಿದ್ದು, ಸದರಿ ಏಜೆನ್ಸಿಯವರಾದ ಮೆ॥ಟೈಗರ್ ಸೆಕ್ಯೂರಿಟಿ ಸರ್ವೀಸಸ್ ರವರಿಗೆ ಪಾಲಿಕೆಯಿಂದ ಈ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

ಈ ಟೆಂಡರ್‌ನ ಸಮಿತಿಯ ಸಭೆಯಲ್ಲಿಯೂ ಸಹ ಮೆ॥ಟೈಗರ್ ಸೆಕ್ಯೂರಿಟಿ ಸರ್ವೀಸಸ್ ರವರಿಗೆ ಟೆಂಡರ್‌ನ್ನು ವಹಿಸುವ ಸಂಬಂಧ ಚರ್ಚಿಸಲಾಗಿದ್ದು, ಸಹಮತ ಹೊಂದಲಾಗಿದೆ.

ಮೇಲ್ಕಂಡ ಅಂಶವನ್ನು ತಮ್ಮ ಆದ್ಯ ಗಮನಕ್ಕೆ ತರಲಾಗಿದ್ದು, ಮೆ॥ಟೈಗರ್ ಸೆಕ್ಯೂರಿಟಿ ಸರ್ವೀಸಸ್ ರವರಿಗೆ ಕಾರ್ಯದೇಶ ನೀಡುವ ಸಂಬಂಧ ಮೇಲ್ಕಂಡ ಅಂಶಗಳನ್ನು ಮಾನ್ಯ ಆಯುಕ್ತರವರ ಆದೇಶಕ್ಕೆ ಸಲ್ಲಿಸಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಕಡತವನ್ನು ಮಂಡಿಸಲು ಹಾಗೂ ಹಿಂದಿನ ಭದ್ರತಾ ಸೇವೆಯನ್ನು ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೂ ಮುಂದುವರೆಸಲು ಟೆಂಡರ್ ಸಮಿತಿಯು ತೀರ್ಮಾನಿಸಿರುತ್ತದೆ. ಮೇಲ್ಕಂಡ ಅಂಶಗಳನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ನಿರ್ಣಯ:**

ದಿನಾಂಕ: 01-06-2012ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 29 ಆರೋಗ್ಯ ಕೇಂದ್ರಗಳ, 7 ಔಷದಾಲಯಗಳು ಮತ್ತು 4 ನಗರ ಕುಟುಂಬ ಕಲ್ಯಾಣ ಕೇಂದ್ರಗಳು ಒಟ್ಟು 40 ಕಟ್ಟಡಗಳಿಗೆ ಭದ್ರತಾ ಸೇವೆ ಒದಗಿಸುವ ಸಂಬಂಧ ಕೆ.ಟಿ.ಪಿ.ಪಿ. ನಿಯಮಾನುಸಾರ ಕರೆಯಲಾದ ಟೆಂಡರ್‌ನಲ್ಲಿ 08 ಜನ ಭಾಗವಹಿಸಿದ್ದು, ಆರ್ಥಿಕ ಬಿಡ್‌ನಲ್ಲಿ 7 ಬಿಡ್‌ದಾರರು ಅರ್ಹತೆ ಹೊಂದಿದ್ದು, ಟೆಂಡರ್ ಸಮಿತಿಯು ಪರಿಶೀಲನೆ ಮಾಡಿದಾಗ ಮೆ॥ ಟೈಗರ್ ಸೆಕ್ಯೂರಿಟಿ ಸರ್ವಿಸಸ್ ರವರು ಸಲ್ಲಿಸಿರುವ ದರವು ಒಬ್ಬ ಭದ್ರತಾ ಸಿಬ್ಬಂದಿಗೆ ರೂ.7962.54/-ಗಳಂತೆ 40 ಆಸ್ಪತ್ರೆಗಳಿಗೆ 3 ಪಾಳಿಯಂತೆ 129 ಭದ್ರತಾ ಸಿಬ್ಬಂದಿಗಳಿಗೆ ಒಂದು ತಿಂಗಳಿಗೆ ರೂ.10,27,167/-ಗಳಂತೆ ಒಂದು ವರ್ಷಕ್ಕೆ ರೂ.1,23,26,012/-ಖರ್ಚು ತಗಲುತ್ತಿದ್ದು, ಈ ಮೊತ್ತವನ್ನು ಪಾಲಿಕೆಯಿಂದ ಪಾವತಿಸಬೇಕಾಗಿರುತ್ತದೆ. ಮೆ॥ ಟೈಗರ್ ಸೆಕ್ಯೂರಿಟಿ ಸರ್ವಿಸಸ್ ರವರಿಗೆ ಟೆಂಡರ್‌ನ್ನು ವಹಿಸುವ ಸಂಬಂಧ ಟೆಂಡರ್‌ನ ಸಮಿತಿಯು ಸಹಮತ ಹೊಂದಿರುವುದರಿಂದ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

11. **ವಿಷಯದ ಸಂಖ್ಯೆ: ಸಾಆಸ್ಥಾಸ/13/2012-13:**

ಸಂಖ್ಯೆ: ಆ.ವೈ. (ತಾಮಕುಕ)/ಪಿ.ಆರ್./243/2011-12, ದಿನಾಂಕ: 29-05-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.44 ರಲ್ಲಿ ಹೆರಿಗೆ ಆಸ್ಪತ್ರೆ, ಔಷಧಾಲಯ ಹಾಗೂ ಆರೋಗ್ಯ ಕೇಂದ್ರ ನಿರ್ಮಿಸುವ ಬಗ್ಗೆ ಶ್ರೀಮತಿ.ಲಕ್ಷ್ಮೀ, ಪಾಲಿಕೆ ಸದಸ್ಯರು ರವರು ಹಿಂದಿನ ಅಧ್ಯಕ್ಷರಾದ ಬಿ.ಎಸ್.ಮಂಜುನಾಥ್ ರೆಡ್ಡಿ ರವರಿಗೆ ಪತ್ರವನ್ನು ಸಲ್ಲಿಸಿ ಕೋರಿರುವ ಹಿನ್ನೆಲೆಯಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಲು ವಾರ್ಡ್ ನಂ.44 ಪಾಲಿಕೆಯ ಸ್ವತ್ತು ಸ್ಥಳದ ಅಳತೆ 120X150 ರ ವಿಸ್ತೀರ್ಣದ ವಿಜಯಾನಂದ ನಗರದ ಕೊಳಚೆ ಪ್ರದೇಶದ ಬಳಿ ಹಾಲಿ ಇರುವ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ ಹಾಗೂ ಖಾಲಿ ಇರುವ ನಿವೇಶನದಲ್ಲಿ ಹೆರಿಗೆ ಆಸ್ಪತ್ರೆ ನಿರ್ಮಾಣ ಮಾಡಲು ತಿಳಿಸಿರುತ್ತಾರೆ.

ತತ್ಸಂಬಂಧಕ್ಕೆ ಸದರಿ ವಿಷಯವನ್ನು ಪ್ರಸ್ತಾಪಿಸುತ್ತಾ ವಾರ್ಡ್ ನಂ.44 ರಲ್ಲಿ ಮಾನ್ಯ ಸದಸ್ಯರು ಕೋರಿರುವಂತೆ ಖಾಲಿ ಇರುವ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಲು ಆರೋಗ್ಯ ಕೇಂದ್ರವನ್ನು ನವೀಕರಿಸಲು ತಾಂತ್ರಿಕತೆಗೆ ಅಳವಡಿಸಲು ಹಾಗೂ ಅಧ್ಯಕ್ಷರು, ಆರೋಗ್ಯ ಸ್ಥಾಯಿ ಸಮಿತಿಯಲ್ಲಿ ಸಲ್ಲಿಸಲು ಹಾಗೂ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 25/05/2012ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್-44, ಪಾಲಿಕೆಯ ಸ್ವತ್ತು ಸ್ಥಳದ ಅಳತೆ 120X150ರ ವಿಸ್ತೀರ್ಣದ ವಿಜಯಾನಂದ ನಗರ ಕೊಳಚೆ ಪ್ರದೇಶದ ಬಳಿ ಹಾಲಿ ಇರುವ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ ಹಾಗೂ ಖಾಲಿ ಇರುವ ನಿವೇಶನದಲ್ಲಿ ಹೆರಿಗೆ ಆಸ್ಪತ್ರೆ ನಿರ್ಮಾಣ ಮಾಡಲು ಸಮಿತಿಯು ತೀರ್ಮಾನಿಸಿತು.

S. Venkatesh Babu

**(ಎಸ್. ವೆಂಕಟೇಶ್ ಬಾಬು)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 16-04-2012 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಕಾರ್ಯಪಾಲಕ ಅಭಿಯಂತರರು (ಪರಿಸರಕೋಶ) |
| ಶ್ರೀ.ಎಂ.ಮುನಿರಾಜು | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | |
| ಶ್ರೀ.ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಶ್ರೀಮತಿ.ಫೌಜೀಯ ಬೇಗಂ | ಸದಸ್ಯರು | |
| ಶ್ರೀ.ಓ.ಮಂಜುನಾಥ್ | ಸದಸ್ಯರು | |
| ಶ್ರೀ.ಎಂ. ಶ್ರೀನಿವಾಸ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1. **ವಿಷಯದ ಸಂಖ್ಯೆ: ಸಾಆಸ್ಥಾಸ/63/2011-12:**

ಸಂಖ್ಯೆ:ಮುಅ/ಪಕೋ/2/ಪಿಆರ್/ /11-12, ದಿನಾಂಕ: 15-03-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 30-07-2009 ರಂದು ಮಾನ್ಯ ಅಂದಿನ ಮಾನ್ಯ ಆಡಳಿತಗಾರರ ಪತ್ರ ಸಂಖ್ಯೆ: ಆಆಶಾ/ಸಾ/426/09-10 ರಂತೆ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಣಾ ಘಟಕಗಳಿಗೆ ಸಾಗಿಸುವ ಬಗ್ಗೆ ಪ್ರತಿಯೊಂದು ಸಂಸ್ಕರಣಾ ಘಟಕಗಳಿಗೆ ಸಿಬ್ಬಂದಿಯನ್ನು ನಿಯೋಜಿಸಿ, ಸದರಿ ಸಿಬ್ಬಂದಿಗೆ ಒಂದು ಆಟೋಮೇಟಿಕ್ ಯಂತ್ರವನ್ನು ಕೊಟ್ಟು ಅದರಲ್ಲಿ ಕಸ ವಿಲೇವಾರಿಗೆ ವಾಹನ/ಲಾರಿ ಬಂದ ತಕ್ಷಣ ಅದರ ಮಾಹಿತಿಯನ್ನು ಆ ಯಂತ್ರದಲ್ಲಿ ದಾಖಲು ಮಾಡುವಂತೆ ವ್ಯವಸ್ಥೆ ಮಾಡಲು ಆದೇಶಿಸಿದ್ದರು.

ತ್ಯಾಜ್ಯ ವಿಲೇವಾರಿ ಬಗ್ಗೆ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ Hand held DS Token ಯಂತ್ರವನ್ನು ತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳಲ್ಲಿ ಅಳವಡಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಪ್ರಾಯೋಗಿಕವಾಗಿ ಅಳವಡಿಸಲು ಉದ್ದೇಶಿಸಿ Hand held DS Token Machine ಗಳನ್ನು ಮೆ.ಕಿಯೋನಿಕ್ಸ್ ಸಂಸ್ಥೆ ರವರಿಂದ ಖರೀದಿಸಲಾಗಿರುತ್ತದೆ.

ಈ ಸಾಧನವು ತ್ಯಾಜ್ಯ ವಿಲೇವಾರಿ ಲಾರಿಯು ತೂಕಮಾಪಕ ಯಂತ್ರದ ಮೇಲೆ ನಿಂತಾಗ ದಾಖಲಾಗುವ ಲಾರಿಯ ಒಟ್ಟು ತೂಕದ ಮಾಹಿತಿಯನ್ನು Hand held DS Token ಯಂತ್ರವು ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ಅಳವಡಿಸಲಾಗುವ Central Server ನಲ್ಲಿ ಮಾಹಿತಿಯನ್ನು ದಾಖಲಿಸುತ್ತದೆ.

ಇದೇ ಸಮಯದಲ್ಲಿ ಈ ಸಾಧನವು ಒಟ್ಟು ತೂಕದ ಬಗ್ಗೆ ರಸೀದಿಯನ್ನು ಮುದ್ರಿಸಿ ನೀಡುತ್ತದೆ. ಈ ಸಾಧನದಿಂದ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಪ್ರತಿದಿವಸ ಬರುವ ತ್ಯಾಜ್ಯದ ಪ್ರಮಾಣವನ್ನು ಬಹಳ ಸುಲಭವಾಗಿ, ನಿಖರವಾಗಿ ಪಡೆಯಬಹುದಾಗಿರುತ್ತದೆ. ಹಾಗೂ ಪ್ರತಿ ಮಾಹೆಯ ವಿವರಗಳನ್ನು ಸಹ ಶೀಘ್ರವಾಗಿ ಪಡೆಯಬಹುದಾಗಿರುತ್ತದೆ.

ಮೇಲ್ಕಂಡ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು, ಸಾಧನದ ನಿರ್ವಹಣೆಗಾಗಿ ಅಗತ್ಯವಾದ ಸಿಬ್ಬಂದಿಯನ್ನು ಕರ್ನಾಟಕ ಸರ್ಕಾರದ ಸಂಸ್ಥೆಯಾದ ಮೆ.ಕಿಯೋನಿಕ್ಸ್ ರವರಿಂದ ಪಡೆಯಲು ತೀರ್ಮಾನಿಸಲಾಗಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದಿಂದ ಮೆ.ಕಿಯೋನಿಕ್ಸ್ ರವರಿಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮದಡಿಯಲ್ಲಿ (KTTP Act) ವಿನಾಯತಿ ನೀಡಲಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಸಾಧನದ ನಿರ್ವಹಣೆಗಾಗಿ ಅಗತ್ಯವಾದ ಸಿಬ್ಬಂದಿಗೆ ಮೆ.ಕಿಯೋನಿಕ್ಸ್ ಸಂಸ್ಥೆರವರು ಈ ಕೆಳಕಂಡಂತೆ ದರ ನಮೂದಿಸಿದ್ದರು, ಮೆ.ಕಿಯೋನಿಕ್ಸ್ ನಿಯೋಜಿಸುವ ಸಿಬ್ಬಂದಿಯವರು ಬೆಳಿಗ್ಗೆ 7 ರಿಂದ ಸಾಯಂಕಾಲ 7 ರ ವರೆಗೂ ಕಾರ್ಯನಿರ್ವಹಿಸುತ್ತಾರೆ.

| Sl. No. | Manpower Requirement | Qty. | Rate/Month | Amount per month |
|---|---|---|---|---|
| 1 | Operator for Dump site token (Hand Held DS-Token) including Travel allowance and Communication allowance | 07 | 12000.00 | 84,000 |

ಮೆ.ಕಿಯೋನಿಕ್ಸ್ ಸಂಸ್ಥೆರವರು ನೀಡಿರುವ ದರಪಟ್ಟಿಅನ್ವಯ ಅಂದಾಜು ಪಟ್ಟಿ ತಯಾರಿಸಲಾಗಿ, ಸದರಿ ಅಂದಾಜು ಪಟ್ಟಿಯಂತೆ ಮೇಲ್ಕಂಡ 5 ತ್ಯಾಜ್ಯ ನಿರ್ವಹಣೆ ಘಟಕಗಳಿಗೆ Hand held DS Token Machine ಸಾಧನ ನಿರ್ವಹಣೆಗೆ ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ಪ್ರತಿ ವಾರ್ಷಿಕವಾಗಿ ರೂ.10,08,000.00 ಗಳಾಗುತ್ತದೆ.

ಪ್ರಾಯೋಗಿಕವಾಗಿ "Hand held DS Token Machine" ಆಪರೇಟರ್ಸ್‌ಗಳನ್ನು ಈ ಕೆಳಕಂಡ 4 ತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳಲ್ಲಿ ದಿನಾಂಕ: 01-01-2010 ರಿಂದ ನಿಯೋಜಿಸಲಾಗಿರುತ್ತದೆ. Hand held DS Token ಯಂತ್ರಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

1. ಮಂಡೂರು ಉತ್ತರ ಭಾಗದ ತ್ಯಾಜ್ಯ ಸಂಸ್ಕರಣ ಘಟಕ.
2. ಮಂಡೂರಿನ ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿ. ತ್ಯಾಜ್ಯ ಸಂಸ್ಕರಣ ಘಟಕ.
3. ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣ.
4. ಟೆರ್ರಾಫಾರ್ಮ ತ್ಯಾಜ್ಯ ಸಂಸ್ಕರಣ ಘಟಕ.

2011-12ನೇ ಸಾಲಿಗೆ ಮತ್ತೊಂದು ಅವಧಿಗೆ ಮೆ.ಕಿಯೋನಿಕ್ಸ್ ಸಂಸ್ಥೆರವರಿಂದ (ಮೆ.ಕಿಯೋನಿಕ್ಸ್ ಸಂಸ್ಥೆಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮದಡಿಯಲ್ಲಿ (KTTP Act) ವಿನಾಯತಿ ನೀಡಲಾಗಿರುತ್ತದೆ) "Hand held DS Token Machine" ಆಪರೇಟರ್ಸ್‌ಗಳನ್ನು ಈ ಹಿಂದೆ ಅನುಮೋದನೆಯಾಗಿರುವ ಮೊತ್ತ ರೂ.10.08 ಲಕ್ಷ (ವಾರ್ಷಿಕವಾಗಿ) ಗಳಲ್ಲಿ ನಿಯೋಜಿಸಿಕೊಳ್ಳಲಾಗಿರುತ್ತದೆ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 15-03-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಪ್ರಾಯೋಗಿಕವಾಗಿ 4 ತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳಲ್ಲಿ **Hand held DS Token** ಯಂತ್ರಗಳನ್ನು ಅಳವಡಿಸಲಾಗಿದ್ದು, ಮೆ.ಕಿಯೋನಿಕ್ಸ್ ಸಂಸ್ಥೆರವರಿಂದ (ಮೆ.ಕಿಯೋನಿಕ್ಸ್ ಸಂಸ್ಥೆಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮದಡಿಯಲ್ಲಿ **(KTTP Act)** ವಿನಾಯತಿ ನೀಡಲಾಗಿರುತ್ತದೆ) **"Hand held DS Token Machine"** ಆಪರೇಟರ್ಸ್‌ಗಳನ್ನು ದಿನಾಂಕ: 01-01-2010 ರಿಂದ ಈ ಕೆಳಕಂಡ ಘಟಕಗಳಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಲಾಗಿರುತ್ತದೆ.

1. ಮಂಡೂರು ಉತ್ತರ ಭಾಗದ ತ್ಯಾಜ್ಯ ಸಂಸ್ಕರಣ ಘಟಕ.
2. ಮಂಡೂರಿನ ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿ. ತ್ಯಾಜ್ಯ ಸಂಸ್ಕರಣ ಘಟಕ.
3. ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣ.
4. ಟೆರ್ರಾಫಾರ್ಮ ತ್ಯಾಜ್ಯ ಸಂಸ್ಕರಣ ಘಟಕ.

ದಿನಾಂಕ: 01-01-2011 ರಿಂದ 31-12-2011 ರ ವರೆವಿಗೆ ಮೆ.ಕಿಯೋನಿಕ್ಸ್ ಸಂಸ್ಥೆರವರಿಂದ **"Hand held DS Token Machine"** ಆಪರೇಟರ್ಸ್‌ಗಳನ್ನು ಈ ಹಿಂದೆ ಅನುಮೋದನೆಯಾಗಿರುವ ಮೊತ್ತ ರೂ.10.08 ಲಕ್ಷ (ವಾರ್ಷಿಕವಾಗಿ)

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಗಳಲ್ಲಿ ನಿಯೋಜಿಸಿಕೊಂಡು ಕಾರ್ಯನಿರ್ವಹಿಸಿರುವುದರಿಂದ ಆಡಳಿತಾತ್ಮಕ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.

**2. ವಿಷಯದ ಸಂಖ್ಯೆ: ಸಾಆಸ್ಥಾಸ/01/2012-13:**

ಸಂಖ್ಯೆ: ಆ.ವೈ.(ತಾಮಕುಕ)/ಪಿಆರ್/266/2011-12, ದಿನಾಂಕ: 19-03-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ನೆಫ್ರೋ-ಯುರಾಲಜಿ ಸಂಸ್ಥೆಯವರು ಯುರಾಲಜಿಗೆ ಸಂಬಂಧಿಸಿದಂತೆ ರೋಗಿಗಳಿಗೆ ಎಲ್ಲಾ ರೀತಿಯ ಚಿಕಿತ್ಸೆಗಳನ್ನು ನೀಡುವುದರೊಂದಿಗೆ ಸಂಸ್ಥೆಯು 159 ಹಾಸಿಗೆಯುಳ್ಳ ಮತ್ತು 150 ಹೊರ ರೋಗಿಗಳಿಗೆ ಆರೋಗ್ಯ ಸೌಲಭ್ಯವನ್ನು ನೀಡಲು ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮುಖ್ಯವಾಗಿ ಬಡ ರೋಗಿಗಳಿಗೆ ಚಿಕಿತ್ಸೆ ನೀಡುವ ಹಿತದೃಷ್ಟಿಯಿಂದ ವ್ಯವಸ್ಥಿತ ಹಾಗೂ ಸುಸಜ್ಜಿತ ಬಹು ಮಹಡಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆಂದು ಪಾಲಿಕೆಗೆ ಬರೆದ ಪತ್ರದಲ್ಲಿ ತಿಳಿಸಿರುತ್ತಾರೆ. ಈಗಾಗಲೇ ಪಾಲಿಕೆಯಿಂದ ಸದರಿ ಸಂಸ್ಥೆಗೆ 25 ಲಕ್ಷ ರೂಗಳನ್ನು ಅನುದಾನವಾಗಿ ನೀಡಲಾಗಿದೆಂದು ಪತ್ರದಲ್ಲಿ ತಿಳಿಸಿರುತ್ತಾರೆ. ಆದುದರಿಂದ ಸದರಿ ಸಂಸ್ಥೆಯವರು ಪಾಲಿಕೆಯ ವತಿಯಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ.1,00,00,000/- (ರೂ.1 ಕೋಟಿ ಮಾತ್ರ) ಅನುದಾನ ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ತತ್ಸಂಬಂದಕ್ಕೆ ವ್ಯವಸ್ಥಿತ ಹಾಗೂ ಸುಸಜ್ಜಿತ ಬಹು ಮಹಡಿ ಕಟ್ಟಡ ನಿರ್ಮಿಸಲು ಖಾಲಿ ಇರುವ 1189.99 ಚದರ ಮೀಟರ್ ಅಳತೆಯ ಜಾಗದಲ್ಲಿ ಬಹು ಮಹಡಿ ಕಟ್ಟಡ ನಿರ್ಮಿಸಲು ಸದರಿ ಸಂಸ್ಥೆಯವರು ಪಾಲಿಕೆಯ ವತಿಯಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ.1,00,00,000/- (ರೂ.1 ಕೋಟಿ ಮಾತ್ರ) ಅನುದಾನ ಮಂಜೂರು ಮಾಡಬೇಕಾಗಿ ಕೋರಿರುತ್ತಾರೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಮುಂದುವರೆಸುತ್ತಾ ಸಾರ್ವಜನಿಕರ ಹಿತದೃಷ್ಟಿಯಿಂದ ತಾಂತ್ರಿಕತೆಗೆ ಅಳವಡಿಸಲು ಅನುಮೋದನೆಗಾಗಿ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 19-03-2012 ರ ಆಯುಕ್ತರು ರವರ ಟಿಪ್ಪಣಿಯನ್ನು ಪರಿಶೀಲಿಸಲಾಗಿ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ನೆಫ್ರೋ-ಯುರಾಲಜಿ ಸಂಸ್ಥೆ ರವರು ಬಡ ರೋಗಿಗಳಿಗೆ ಚಿಕಿತ್ಸೆ ನೀಡುವ ಹಿತದೃಷ್ಟಿಯಿಂದ ಖಾಲಿ ಇರುವ 1189.99 ಚದರ ಮೀಟರ್ ಅಳತೆಯ ಜಾಗದಲ್ಲಿ ವ್ಯವಸ್ಥಿತ ಹಾಗೂ ಸುಸಜ್ಜಿತ ಬಹು ಮಹಡಿ ಕಟ್ಟಡ ನಿರ್ಮಿಸಲು ಪಾಲಿಕೆಯ ವತಿಯಿಂದ ನೂತನ ಕಟ್ಟಡ ನಿರ್ಮಾಣಕ್ಕೆ ರೂ.1,00,00,000/- (ರೂ.1 ಕೋಟಿ ಮಾತ್ರ) ಅನುದಾನ ಮಂಜೂರು ಮಾಡಲು ಸಮಿತಿಯು ತೀರ್ಮಾನಿಸಿದೆ.**

**3. ವಿಷಯದ ಸಂಖ್ಯೆ: ಸಾಆಸ್ಥಾಸ/02/2012-13:**

ಸಂಖ್ಯೆ: ಕೇ.ಸ್ಥಾ.ಸ./ಪಿ.ಆರ್/101/2011-12, ದಿನಾಂಕ: 30-03-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಮುರಳಿ ಕೃಷ್ಣ. ಎನ್. ಪ್ರಥಮ ದರ್ಜೆಯ ಸಹಾಯಕರು, ಕಲ್ಯಾಣ ಶಾಖೆ, ಪಾಲಿಕೆಯ ನೇರ ನೇಮಕಾತಿಯ ಅಡಿಯಲ್ಲಿ ದಿನಾಂಕ: 15-10-2008 ರಿಂದ ಕಾರ್ಯನಿರ್ವಹಿಸುತ್ತಾ ಇರುತ್ತಾರೆ. ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಪಾಲಿಕೆಯಿಂದ ಹೆಲ್ತ್ ಕಾರ್ಡ್‌ನ್ನು ಸಹ ನೀಡಲಾಗಿರುತ್ತದೆ. ಹೆಲ್ತ್ ಕಾರ್ಡಿನ ಸಂಖ್ಯೆ:ಇಐಡಿ ನಂ.10754 ಹೆಲ್ತ್ ಕಾರ್ಡಿನಲ್ಲಿ ಕುಟುಂಬ ಹಾಗೂ ಅವಲಂಬಿತ ಕುಟುಂಬ ಸದಸ್ಯರ ವಿವರವನ್ನು ನೀಡಿರುತ್ತಾರೆ.

ಸದರಿ ನೌಕರರು ಪಾಲಿಕೆಗೆ ದಿನಾಂಕ: 03-11-2011 ರಂದು ಮನವಿ ಪತ್ರವನ್ನು ಸಲ್ಲಿಸಿ ನೌಕರರ ತಂಗಿ ಕು|| ಮಮತ ಎನ್. ನೌಕರರಿಗೆ ಸಂಪೂರ್ಣ ಅವಲಂಬಿತರಾಗಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತು ಪ್ರಮಾಣ ಪತ್ರವನ್ನು ಸಹ ಸಲ್ಲಿಸಿರುತ್ತಾರೆ. ತಂಗಿಯ ಅವಿವಾಹಿತೆಯಾಗಿದ್ದು, ಮಾರಣಾಂತಿಕ ಖಾಯಿಲೆಯಾದ ಮೂತ್ರ ಪಿಂಡದ ಅನಾರೋಗ್ಯ ತೊಂದರೆಯಿಂದ ಬಳಲುತ್ತಿದ್ದು, ಖರ್ಚು ವೆಚ್ಚಗಳನ್ನು ಭರಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ನೌಕರರ ತಾಯಿ ಮಗಳಿಗೆ ಕಿಡ್ನಿ ನೀಡಿ ಮಾರ್ಪಾಡು ಮಾಡಲು ಸಹ ಸಿದ್ಧರಾಗಿರುತ್ತಾರೆ. ಆದರೆ, ಜೀವನ ಪರ್ಯಂತ ತಂಗಿಯ ನೌಕರರಿಗೆ ಅವಲಂಬಿತವಾಗಿರುತ್ತಾರೆ. ಮಾನವೀಯತೆಯ ದೃಷ್ಟಿಯಲ್ಲಿ ನೌಕರರ ಮನವಿಯನ್ನು ಪರಿಗಣಿಸಿ ಟಿಪ್ಪಣಿಯನ್ನು ಉಲ್ಲೇಖದನ್ವಯ ಸಿದ್ಧಪಡಿಸಿ ನೌಕರರ ಹೆಲ್ತ್ ಕಾರ್ಡಿನಲ್ಲಿ ತಂಗಿಯ

the. K. N.
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಹೆಸರು ಮಮತ ಎನ್. ಸೇರ್ಪಡೆ ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 30-03-2012 ರ ಆಯುಕ್ತರು ರವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಮುರಳಿ ಕೃಷ್ಣ ಎನ್. ಪ್ರಥಮ ದರ್ಜೆ ಸಹಾಯಕರು ರವರ ತಂಗಿ ಕು॥ ಮಮತ ಎನ್. ಇವರು ನೌಕರರಿಗೆ ಸಂಪೂರ್ಣವಾಗಿ ಅವಲಂಬಿತರಾಗಿದ್ದು, ಮಾರಣಾಂತಿಕ ಖಾಯಿಲೆಯಾದ ಮೂತ್ರ ಪಿಂಡದ ಅನಾರೋಗ್ಯ ತೊಂದರೆಯಿಂದ ಬಳಲುತ್ತಿರುವುದು ದಾಖಲೆಯಿಂದ ಕಂಡು ಬರುತ್ತದೆ. ಸದರಿ ನೌಕರರ ತಂಗಿಯು ಅವಿವಾಹಿತೆಯಾಗಿದ್ದು, ಜೀವನ ಪರ್ಯಂತ ಅವಲಂಬಿತರಾಗಿರುತ್ತಾರೆಂದು ಬರೆದುಕೊಟ್ಟಿರುವ ಮನವಿ ಪತ್ರದಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ನೌಕರರ ಹೆಲ್ತ್ ಕಾರ್ಡ್‌ನಲ್ಲಿ ತಂಗಿಯ ಹೆಸರು ಕು॥ ಮಮತ ಎನ್. ಸೇರ್ಪಡೆ ಮಾಡಲು ಸಮಿತಿಯು ತೀರ್ಮಾನಿಸಿತು.

Geetha Shashikumar

**(ಡಾ॥ ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 26-03-2012 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಶ್ರೀ.ಎಂ.ಮುನಿರಾಜು | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಪರಿಸರಕೋಶ) |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | |
| ಡಾ॥ ಎಸ್. ರಾಜು | ಸದಸ್ಯರು | |
| ಶ್ರೀ.ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಶ್ರೀ.ಎನ್.ವೀರಣ್ಣ | ಸದಸ್ಯರು | |
| ಶ್ರೀ.ಎಲ್.ರಮೇಶ್ | ಸದಸ್ಯರು | |
| ಶ್ರೀಮತಿ.ಫೌಜೀಯ ಬೇಗಂ | ಸದಸ್ಯರು | |
| ಶ್ರೀ.ಓ.ಮಂಜುನಾಥ್ | ಸದಸ್ಯರು | |
| ಶ್ರೀ.ಎಂ. ಶ್ರೀನಿವಾಸ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1. **ವಿಷಯದ ಸಂಖ್ಯೆ: ಸಾಆಸ್ಥಾಸ/58/2011-12:**

ವಿಶೇಷ ಆಯುಕ್ತರ ದಿನಾಂಕ: 23-02-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕ ಆರಂಭಗೊಳ್ಳುವ ಪೂರ್ವದಲ್ಲಿ ವಿಲೇವಾರಿ ಮಾಡಿರುವ ಘನತ್ಯಾಜ್ಯಕ್ಕೆ ಹೊದಿಕೆ ಇಲ್ಲದ ಕಾರಣ ತ್ಯಾಜ್ಯದ ಮೇಲೆ ಬೀಳುವ ಮಳೆ ನೀರಿನಿಂದಾಗಿ ಸ್ಥಳೀಯ ಪ್ರದೇಶ ಕಲುಷಿತಗೊಳ್ಳುವುದನ್ನು ಮತ್ತು ಮಾಲಿನ್ಯ ನಿಯಂತ್ರಣ ತಡೆಯಲು ಸದರಿ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ಅವಶ್ಯಕತೆ ಹಿನ್ನೆಲೆಯಲ್ಲಿ ಮೇಲಿನ ಕಾಮಗಾರಿಯನ್ನು ರೂ.71.00 ಲಕ್ಷಗಳ ಅಂದಾಜು ಮೊತ್ತದೊಂದಿಗೆ ರೂಪಿಸಲಾಗಿದ್ದು, ಆರೋಗ್ಯ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆಸಾಆಸ್ಥಾಸ/22/11-12, ದಿನಾಂಕ: 05-09-2011 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ಅಂದಾಜುಪಟ್ಟಿಗೆ ಸಂಖ್ಯೆ: CE/SWM/AS/28/11-12, Dt: 03-10-2011 ಮತ್ತು CE/SWM/TS/28/11-12, Dt: 03-10-2011 ರಲ್ಲಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಯನ್ನು 2 ಲಕೋಟೆ ವ್ಯವಸ್ಥೆಯಲ್ಲಿ ಇ-ಪ್ರೋಕ್ಯೂರಮೆಂಟ್ ಮುಖಾಂತರ ಸಂಖ್ಯೆ: ಕಾಪಾಅ-2/ಘ.ತ್ಯಾ.ನಿ./ಟೆಂಡರ್/03/2011-12, ದಿನಾಂಕ: 22-10-2011 ರಲ್ಲಿ ಟೆಂಡರ್ ಕರೆಯಲಾಗಿದ್ದು, ಈ ಕೆಳಗಿನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ.

| | | |
|---|---|---|
| 1. | ಬಸವರಾಜ್.ಆರ್.ಸಿ. | 1ನೇ ದರ್ಜೆ ಗುತ್ತಿಗೆದಾರರು. |
| 2. | ರಾಮಚಂದ್ರ.ಬಿ.ಹೆಚ್. | 1ನೇ ದರ್ಜೆ ಗುತ್ತಿಗೆದಾರರು. |
| 3. | ಚೆರುಕುರಿ ಬೋಜೇಶ್ವರರಾವ್ (ಮೆ॥ರಾವ್ ಕನ್ಸಟ್ರಕ್ಷನ್) | 1ನೇ ದರ್ಜೆ ಗುತ್ತಿಗೆದಾರರು. |

ಈ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿನಾಂಕ: 01-12-2011 ರಂದು ತೆರೆದು ಪರಿಶೀಲಿಸಿ ಮೂವರು ಗುತ್ತಿಗೆದಾರರು ತಾಂತ್ರಿಕ ಷರತ್ತುಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ದಿನಾಂಕ: 12-12-2011 ರಂದು ಆರ್ಥಿಕ ಬಿಡ್ಡನ್ನು ತೆಗೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| ಕಾಮಗಾರಿಯ ಅಂದಾಜು ಮೊತ್ತ | - | ರೂ.71,00,000.00 |
| ಭದ್ರತಾ ಠೇವಣಿ ಮೊತ್ತ | - | ರೂ.1,42,000.00 |
| ಟೆಂಡರ್‌ಗಿಟ್ಟ ಮೊತ್ತ | - | ರೂ.70,66,750.00 |

Geetha.K.N.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಗುತ್ತಿಗೆದಾರರು ನಮೂದಿಸಿರುವ ದರಗಳು

| ಕ್ರಮ ಸಂಖ್ಯೆ | ಗುತ್ತಿಗೆದಾರರ ಹೆಸರು | ಗುತ್ತಿಗೆದಾರರು ನಮೂದಿಸಿರುವ ದರಗಳು |
|---|---|---|
| 1 | ಶ್ರೀ.ಆರ್.ಸಿ.ಬಸವರಾಜ್<br>1ನೇ ದರ್ಜೆ ಗುತ್ತಿಗೆದಾರರು | ರೂ.62,49,800.00<br>ಶೇ.11.56 ರಷ್ಟು ಅಂದಾಜು ಪಟ್ಟಿ ದರಗಳಿಗಿಂತ ಕಡಿಮೆಯಾಗಿರುತ್ತದೆ. |
| 2 | **ಶ್ರೀ.ಬಿ.ಹೆಚ್.ರಾಮಚಂದ್ರ**<br>**1ನೇ ದರ್ಜೆ ಗುತ್ತಿಗೆದಾರರು** | ರೂ.60,54,000.00<br>**ಶೇ.14.33** ರಷ್ಟು ಅಂದಾಜು ಪಟ್ಟಿ ದರಗಳಿಗಿಂತ ಕಡಿಮೆಯಾಗಿರುತ್ತದೆ. |
| 3 | ಶ್ರೀ.ಚರಕುರಿ ಬೋಜೇಶ್ವರ ರಾವ್<br>(ಮೆ॥ ರಾವ್ ಕನ್ಸ್‌ಟ್ರಕ್ಷನ್ಸ್)<br>1ನೇ ದರ್ಜೆ ಗುತ್ತಿಗೆದಾರರು | ರೂ.61,11,000.00<br>ಶೇ.13.52 ರಷ್ಟು ಅಂದಾಜು ಪಟ್ಟಿ ದರಗಳಿಗಿಂತ ಕಡಿಮೆಯಾಗಿರುತ್ತದೆ. |

ಮೇಲಿನ ತುಲನಾತ್ಮಕ ಪಟ್ಟಿಯಂತೆ ಶ್ರೀ.ಬಿ.ಹೆಚ್.ರಾಮಚಂದ್ರ, 1ನೇ ದರ್ಜೆ ಗುತ್ತಿಗೆದಾರರು, ನಮೂದಿಸಿರುವ ದರಗಳ ಮೊತ್ತವು ರೂ.60,54,000.00 ಗಳನ್ನು 2011-12 ನೇ ಸಾಲಿನ ದರಪಟ್ಟಿ ಆಧಾರಿತ ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತ ರೂ.70,66,750.00 ಗಳಿಗಿಂತ ಶೇ.14.33 ರಷ್ಟು ಕಡಿಮೆ ಇದ್ದು, ಅತ್ಯಂತ ಕಡಿಮೆ ದರಗಳನ್ನು ನಮೂದಿಸಿರುವ (ಎಲ್1) ಗುತ್ತಿಗೆದಾರರಾಗಿರುತ್ತಾರೆ.

ಸದರಿ ಯಶಸ್ವಿ ಬಿಡ್ಡುದಾರರಾದ ಶ್ರೀ.ಬಿ.ಹೆಚ್.ರಾಮಚಂದ್ರ, 1ನೇ ದರ್ಜೆ ಗುತ್ತಿಗೆದಾರರು ನಮೂದಿಸಿರುವ ರೂ.60,54,000.00 ಟೆಂಡರ್ ಅನ್ನು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

ಮೇಲಿನ ಹಿನ್ನಲೆಯಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಪಕ್ಕದ ಅರಣ್ಯ ಪ್ರದೇಶದಲ್ಲಿ ಸಂಗ್ರಹಿಸಿರುವ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ಕಾಮಗಾರಿಯ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಅತ್ಯಂತ ಕಡಿಮೆ ದರಗಳನ್ನು (ಎಲ್1) ನಮೂದಿಸಿರುವ ಯಶಸ್ವಿ ಬಿಡ್ಡುದಾರರಾದ ಶ್ರೀ.ಬಿ.ಹೆಚ್.ರಾಮಚಂದ್ರ, 1ನೇ ದರ್ಜೆ ಗುತ್ತಿಗೆದಾರ ರವರ ರೂ.60,54,000.00 ಮೊತ್ತದ ಟೆಂಡರ್ ಅನ್ನು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 23-02-2012 ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಪರಿಶೀಲಿಸಿ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ದಿನಾಂಕ: 21-03-2012 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ 08 ವರ್ಷಗಳ ಹಿಂದೆ ವಿಲೇವಾರಿ ಮಾಡಿರುವ ಘನತ್ಯಾಜ್ಯವು ಸತ್ವವನ್ನು ಕಳೆದುಕೊಂಡು ಇದರಿಂದ ಯಾವುದೇ ಮಾಲಿನ್ಯ ಉಂಟಾಗುವುದು ಕಂಡು ಬಂದಿರುವುದಿಲ್ಲ. ಆದುದರಿಂದ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಕೈಬಿಡಲು ಸಮಿತಿಯು ತೀರ್ಮಾನಿಸಿದ್ದು, ಸದರಿ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ಕಾಮಗಾರಿಯ ರೂ.71,00,000/- ಗಳ ಟೆಂಡರ್ ಮೊತ್ತವನ್ನು ಮಾವಳ್ಳಿಪುರ ವ್ಯಾಪ್ತಿಯ ಸುತ್ತಮುತ್ತ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣಕ್ಕೆ ಉಪಯೋಗಿಸಬಹುದೆಂದು ಸಮಿತಿಯು ತೀರ್ಮಾನಿಸಿತು.**

**2. ವಿಷಯದ ಸಂಖ್ಯೆ: ಸಾಆಸ್ಥಾಸ/59/2011-12:**

ಆಯುಕ್ತರ ದಿನಾಂಕ: 22-02-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯಲಹಂಕ ವಲಯ, ಜಂಟಿ ಆಯುಕ್ತರ ವ್ಯಾಪ್ತಿಗೆ ಬರುವ ಬಳ್ಳಾರಿ ರಸ್ತೆಯನ್ನು ಮತ್ತು ಇದಕ್ಕೆ ಹೊಂದಿಕೊಂಡಿರುವ ಸರ್ವೀಸ್ ರಸ್ತೆಗಳನ್ನು ಯಾಂತ್ರಿಕೃತ ಮತ್ತು ಮಾನವ ಸಂಪನ್ಮೂಲ ಬಳಸಿ ಸ್ವಚ್ಛಗೊಳಿಸುವ ಸಲುವಾಗಿ 5 ವರ್ಷಗಳ ಅವಧಿಗೆ ಮೇಲಿನ ಉಲ್ಲೇಖದ ರೀತ್ಯ ಗುತ್ತಿಗೆ ನಿಗದಿ ಪಡಿಸಲಾಗಿದ್ದು, ಪ್ರಥಮ ಹಂತವಾಗಿ ಶ್ರೀ.ಪಿ. ಗೋಪಿನಾಥರೆಡ್ಡಿರವರು 3 ವರ್ಷ ಸಮರ್ಪಕವಾಗಿ ಸ್ವಚ್ಛತೆ ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ.

| ಕ್ರ.ಸಂ. | ಪ್ಯಾಕೇಜ್ ಸಂಖ್ಯೆ | ಗುತ್ತಿಗೆದಾರರ ಹೆಸರು | ಸ್ವಚ್ಛತೆ ಕೆಲಸ ನಿರ್ವಹಿಸುವ ವ್ಯಾಪ್ತಿ | ಟೆಂಡರ್ ಮೊತ್ತ (ಪ್ರತಿ ತಿಂಗಳಿಗೆ) |
|---|---|---|---|---|
| 1 | 1 | ಶ್ರೀ.ಪಿ.ಗೋಪಿನಾಥ ರೆಡ್ಡಿ | ಹೆಬ್ಬಾಳು ಮೇಲು ಸೇತುವೆಯಿಂದ ಐಎಎಫ್ ಗೇಟ್ ವರೆವಿಗೆ | ರೂ.11,39,499/- |
| 2 | 2 | ಶ್ರೀ.ಪಿ.ಗೋಪಿನಾಥ ರೆಡ್ಡಿ | ಐಎಎಫ್ ಗೇಟ್ ನಿಂದ BIAL ಮೇಲು ಸೇತುವೆ ತಿರುವು ರಸ್ತೆಯ ವರೆಗೆ | ರೂ.11,74,499/- |

ಶ್ರೀ.ಪಿ. ಗೋಪಿನಾಥ ರೆಡ್ಡಿ ಗುತ್ತಿಗೆದಾರರು, ಸಮರ್ಪಕವಾಗಿ ಕೆಲಸ ನಿರ್ವಹಿಸಿರುವುದರಿಂದ ಹಾಲಿ ನೀಡಿರುವ ಟೆಂಡರ್ ಕರಾರು ಒಪ್ಪಂದ, ಷರತ್ತು ಮತ್ತು ನಿಬಂಧನೆಗೊಳಪಟ್ಟಂತೆ, ಮತ್ತು ಇನ್ನೂ 2 ವರ್ಷಗಳ ಅವಧಿಗೆ ಮುಂದುವರೆಸಲು ಉಲ್ಲೇಖ-(1) ರಲ್ಲಿ ಆರೋಗ್ಯ ಸ್ಥಾಯಿ ಸಮಿತಿಯಲ್ಲಿ ಅನುಮೋದಿಸಿರುತ್ತಾರೆ. ಮುಂದುವರೆದಂತೆ, ದಿನಾಂಕ: 01-10-2011 ರಿಂದ ಈ ಮೇಲ್ಕಂಡ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ರವರ ವತಿಯಿಂದ ಮೆ॥ ನವಯುಗ ರವರು ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಶ್ರೀ.ಪಿ.ಗೋಪಿನಾಥ್‌ರೆಡ್ಡಿ ರವರ ಕರಾರು ಒಪ್ಪಂದದ ಪ್ರಕಾರ ಇನ್ನು 21 ತಿಂಗಳು ಬಾಕಿ ಇರುವ ಮೇರೆಗೆ ಈ ಮೇಲ್ಕಂಡ ರಸ್ತೆ ಬದಲಿಗೆ ಈ ಕೆಳಕಂಡ ಬದಲಿ ರಸ್ತೆಗಳನ್ನು ಯಾಂತ್ರಿಕೃತ ಮತ್ತು ಮಾನವ ಸಂಪನ್ಮೂಲ ಬಳಸಿ ಸ್ವಚ್ಛತೆಗೊಳಿಸಲು ಉದ್ದೇಶಿಸಲಾಗಿದೆ.

| ಕ್ರ.ಸಂ | ರಸ್ತೆಯ ಹೆಸರು | ಒಟ್ಟು ರಸ್ತೆಯ ಉದ್ದ ಕಿ.ಮೀ.ಗಳಲ್ಲಿ | ಷರಾ |
|---|---|---|---|
| 1 | ಕೋಗಿಲು ಮುಖ್ಯ ರಸ್ತೆಯ ಕೋಗಿಲು ವೃತ್ತದಿಂದ ಕಣ್ಣೂರಿನವರೆಗೆ | 7.00 | |
| 2 | ಬಾಗಲೂರು ಮುಖ್ಯ ರಸ್ತೆಯ ಬಾಗಲೂರು ವೃತ್ತದಿಂದ ಬಾಗಲೂರು ಮುಖ್ಯ ರಸ್ತೆ ಸಾತನೂರು ವರೆಗೆ | 8.00 | |
| 3 | ಎಸ್.ಟಿ.ಎಸ್. ಗೇಟ್ ನಿಂದ ರೇವ ಕಾಲೇಜು ಬೆಳ್ಳಹ್ಳಿ ಅಂಡರ್‌ಪಾಸ್ ಹೆಗಡೆನಗರದ ವರೆಗೆ | 12.00 | |
| 4 | ಯಲಹಂಕ-ಯಶವಂತಪುರ ಮುಖ್ಯ ರಸ್ತೆಯಲ್ಲಿನ ಎಂ.ಎಸ್.ಪಾಳ್ಯ ಗೇಟ್ ನಿಂದ ಗಂಗಮ್ಮ ಗುಡಿ ವೃತ್ತದವರೆಗೆ | 2.50 | |
| 5 | ಯಲಹಂಕ-ಯಶವಂತಪುರ ಮುಖ್ಯ ರಸ್ತೆಯಲ್ಲಿನ ಗಂಗಮ್ಮ ಗುಡಿ ವೃತ್ತದಿಂದ ಬಿಇಎಲ್ ವೃತ್ತದವರೆಗೆ | 1.50 | |
| 6 | ಜಕ್ಕೂರು ಫ್ಲೈಯಿಂಗ್ ಕ್ಲಬ್ ನಿಂದ ಶಿವರಾಂ ಕಾರಂತ ಲೇಔಟ್ ಮುಖಾಂತರ ಹೆಗಡೆನಗರ ಜಂಕ್ಷನ ವರೆಗೆ | 3.50 | |
| 7 | ಜಕ್ಕೂರು ಮುಖ್ಯ ರಸ್ತೆಯ ಬಿ.ಡಿ.ಕೆ. ಸರ್ಕಲ್‌ನಿಂದ ಜಕ್ಕೂರು ವರೆಗೆ | 3.50 | |
| | ಒಟ್ಟು | 38.00 | |

ಗುತ್ತಿಗೆ ಹಣದಲ್ಲಿ ವ್ಯತ್ಯಾಸವಿಲ್ಲದೇ ಹಾಗೂ ಪಾಲಿಕೆಗೆ ಆರ್ಥಿಕವಾಗಿ ಹೊರೆಯಿಲ್ಲದೆ ಮುಂದುವರೆಸಲು ಪ್ರಸ್ತಾವನೆಯನ್ನು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 22-02-2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಲಾಗಿರುವ ಕೋಗಿಲು ಮುಖ್ಯ ರಸ್ತೆಯ ಕೋಗಿಲು ವೃತ್ತದಿಂದ ಕಣ್ಣೂರಿನವರೆಗೆ, ಬಾಗಲೂರು ಮುಖ್ಯ ರಸ್ತೆಯ ಬಾಗಲೂರು ವೃತ್ತದಿಂದ ಬಾಗಲೂರು ಮುಖ್ಯ ರಸ್ತೆ ಸಾತನೂರು ವರೆಗೆ, ಎಸ್.ಟಿ.ಎಸ್. ಗೇಟ್ ನಿಂದ ರೇವ ಕಾಲೇಜು ಬೆಳ್ಳಹ್ಳಿ ಅಂಡರ್‌ಪಾಸ್ ಹೆಗಡೆನಗರದ ವರೆಗೆ, ಯಲಹಂಕ-ಯಶವಂತಪುರ ಮುಖ್ಯ ರಸ್ತೆಯಲ್ಲಿನ ಎಂ.ಎಸ್.ಪಾಳ್ಯ ಗೇಟ್ ನಿಂದ ಗಂಗಮ್ಮ ಗುಡಿ ವೃತ್ತದವರೆಗೆ, ಯಲಹಂಕ-ಯಶವಂತಪುರ ಮುಖ್ಯ ರಸ್ತೆಯಲ್ಲಿನ ಗಂಗಮ್ಮ ಗುಡಿ ವೃತ್ತದಿಂದ ಬಿಇಎಲ್ ವೃತ್ತದವರೆಗೆ, ಜಕ್ಕೂರು ಫ್ಲೈಯಿಂಗ್ ಕ್ಲಬ್ ನಿಂದ ಶಿವರಾಂ ಕಾರಂತ ಲೇಔಟ್ ಮುಖಾಂತರ ಹೆಗಡೆನಗರ ಜಂಕ್ಷನ ವರೆಗೆ ಹಾಗೂ ಜಕ್ಕೂರು ಮುಖ್ಯ ರಸ್ತೆಯ ಬಿ.ಡಿ.ಕೆ. ಸರ್ಕಲ್‌ನಿಂದ ಜಕ್ಕೂರು ವರೆವಿಗೆ ಯಾಂತ್ರೀಕೃತ ಮತ್ತು ಮಾನವ ಸಂಪನ್ಮೂಲ ಬಳಸಿ ಸ್ವಚ್ಛತೆಗೊಳಿಸುವ ಸಂಬಂಧ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

Ha. K.N.

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

**೩. ವಿಷಯದ ಸಂಖ್ಯೆ: ಸಾಆಸ್ಥಾಸ/60/2011-12:**

ಸಂಖ್ಯೆ: ಮುಅ/ಪ.ಕೋ./ಪಿ.ಆರ್/ /2011-12, ದಿನಾಂಕ: 27-02-2012 ರ ವಿಶೇಷ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರಿನ ಸರ್ವೆ ನಂ.155ರಲ್ಲಿ ಪೌರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಮೆ॥ಎಸ್.ಜಿ.ಆರ್.ಆರ್.ಎಲ್. ರವರೊಂದಿಗೆ ದಿನಾಂಕ: 24-06-2005 ರಂದು ಪಾಲಿಕೆಯು ಒಪ್ಪಂದ ಮಾಡಿಕೊಂಡಿದೆ. ಸದರಿ ಸಂಸ್ಥೆಯವರ ಯೋಜನೆಯು ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವುದಾಗಿರುತ್ತದೆ. 20 ವರ್ಷಗಳ 'Active operation period' ಮತ್ತು 15 ವರ್ಷಗಳ Post closure ಅವಧಿಯದ್ದಾಗಿರುತ್ತದೆ. ಈ ಒಪ್ಪಂದದ ಪ್ರಕಾರ ಪಾಲಿಕೆಯು ಮೆ॥ಎಸ್.ಜಿ.ಆರ್.ಆರ್.ಎಲ್. (Operator) ಗೆ 35 ಎಕರೆ ಜಮೀನನ್ನು ಎಕರೆ ಒಂದಕ್ಕೆ ವಾರ್ಷಿಕ ರೂ.1/- ರಂತೆ ಗುತ್ತಿಗೆ ಆಧಾರದ ಮೇಲೆ ದಿನಾಂಕ: 05-09-2005 ರಂದು ನೀಡಿದೆ. ಒಪ್ಪಂದದ ಪ್ರಕಾರ Operator ರವರು ಪಾಲಿಕೆಯಿಂದ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಬೇಕಾಗಿದೆ.

ಸದರಿ ಘಟಕವು 18 ತಿಂಗಳುಗಳಲ್ಲಿ ಪೂರ್ಣವಾಗಬೇಕಾಗಿತ್ತು. ಆದರೆ, ರಾಜ್ಯ ಮಟ್ಟದ ಪರಿಸರ ಸಮಿತಿಯನ್ನು ರಚಿಸುವಲ್ಲಿ ತಡವಾಗಿದ್ದು, ಅವರಿಂದ Clearance ಸಿಕ್ಕ ನಂತರ ಮಾಲಿನ್ಯ ನಿಯಂತ್ರಣ ಮಂಡಳಿಯವರು ದಿನಾಂಕ: 22-07-2007 ರಂದು CFO ನೀಡಿರುವ ಕಾರಣ, ಘಟಕ ಸ್ಥಾಪನೆಯಲ್ಲಿ ವಿಳಂಬವಾಗಿರುತ್ತದೆ. ಘನ ಕರ್ನಾಟಕ ಸರ್ಕಾರದಿಂದ ಸದರಿ ಘಟಕ ಸ್ಥಾಪನೆಗೆ ಕಾಲಾವಧಿ ವಿಸ್ತರಿಸಲಾಗಿದೆ. Power Plant ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಪತ್ರದಲ್ಲಿ (ಪ್ರತಿ ಲಗತ್ತಿಸಿದೆ). ಮೆ॥ಎಸ್.ಜಿ.ಆರ್.ಆರ್.ಎಲ್. ರವರಿಗೆ ಒಪ್ಪಂದದಲ್ಲಿ ಇಲ್ಲದಿರುವ Composting ಮಾಡಲು ಅನುಮತಿ ನೀಡಿರುವ ಕಾರಣ ಸದರಿ ಸಂಸ್ಥೆಯವರು ದಿನಾಂಕ: 02-09-2008 ರಿಂದ ಘನತ್ಯಾಜ್ಯವನ್ನು ಸ್ವೀಕರಿಸಿ, Composting ಮಾಡುತ್ತಿದ್ದಾರೆ. ಹಾಲಿ ಪಾಲಿಕೆಯಿಂದ ಪ್ರತಿದಿನ ಸುಮಾರು 700 ಮೆ.ಟ. ಘನತ್ಯಾಜ್ಯವನ್ನು ಸ್ವೀಕರಿಸಿ, ಪ್ರತಿದಿನ 250-300 ಮೆ.ಟನ್ ಅನ್ನು ಸಂಸ್ಕರಿಸುತ್ತಿದ್ದಾರೆ. ಹಾಗೂ ಉಳಿಕೆ ಘನತ್ಯಾಜ್ಯವನ್ನು ನೇರವಾಗಿ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುತ್ತಿದ್ದಾರೆ. ಕರಾರು ಒಪ್ಪಂದದ ಷೆಡ್ಯೂಲ್-7ರಲ್ಲಿ ಮೆ॥ಎಸ್.ಜಿ.ಆರ್.ಆರ್.ಎಲ್. ರವರ ಯೋಜನೆಯು ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಆಗಿರುವ ಹಿನ್ನೆಲೆಯಲ್ಲಿ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುವ ಅನುಪಯುಕ್ತ ತ್ಯಾಜ್ಯಗಳ ಪ್ರಮಾಣವನ್ನು ಗರಿಷ್ಠ ಶೇ.14.6ಕ್ಕೆ ಮಿತಿಗೊಳಿಸಲಾಗಿದೆ.

ಆದರೆ ಹಾಲಿ Composting ಮಾಡುತ್ತಿರುವುದರಿಂದ ಲ್ಯಾಂಡ್‌ಫಿಲ್‌ಗೆ ಹೋಗುವ ಅನುಪಯುಕ್ತ ತ್ಯಾಜ್ಯದ ಪ್ರಮಾಣ ಶೇ.40 ಕ್ಕೂ ಮೀರಿ ಅಧಿಕವಾಗಿರುವುದರಿಂದ ಈಗ ನಿರ್ಮಿಸಿರುವ ಲ್ಯಾಂಡ್‌ಫಿಲ್ ನಿರೀಕ್ಷೆಗೂ ಮೀರಿ ಶೀಘ್ರವಾಗಿ ತುಂಬಿ ಹೋಗಿದೆ ಹಾಗೂ ಈಗ ಹೊಸದಾಗಿ ಮತ್ತೊಂದು ಲ್ಯಾಂಡ್‌ಫಿಲ್ ನಿರ್ಮಿಸಬೇಕಾಗಿರುವುದರಿಂದ, ಹೆಚ್ಚುವರಿ ವೆಚ್ಚ ತಗಲುತ್ತದೆ ಎಂದು ತಿಳಿಸಿ ನೈಜ ಪರಿಸ್ಥಿತಿಯಂತೆ ಮತ್ತು ಕರಾರು ಒಪ್ಪಂದದ ಷೆಡ್ಯೂಲ್-7 ರಲ್ಲಿ ಪುನರಾವಲೋಕನೆಗೆ ಅನುವು ಇರುವುದರಿಂದ, ಶೇಕಡವಾರು ಅನುಪಯುಕ್ತ ತ್ಯಾಜ್ಯಗಳ ಪ್ರಮಾಣವನ್ನು ಪುನರಾವಲೋಕಿಸಿ ಶೇ.53ಕ್ಕೆ ಅನುಪಯುಕ್ತ ತ್ಯಾಜ್ಯದ ಪ್ರಮಾಣವನ್ನು ಪರಿಗಣಿಸಿ ಟಿಪ್ಪಿಂಗ್ ಫೀ ಪಾವತಿ ಮಾಡಬೇಕೆಂದು ಮೆ॥ಎಸ್.ಜಿ.ಆರ್.ಆರ್.ಎಲ್. ರವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಪ್ರಧಾನ ಅಭಿಯಂತರರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ಮಾನ್ಯ ಆಯುಕ್ತರು ರಚಿಸಿರುತ್ತಾರೆ (ಕಂಡಿಕೆ-35).

(1) ಮುಖ್ಯ ಅಭಿಯಂತರರು (ಪರಿಸರಕೋಶ)
(2) ಮುಖ್ಯ ಲೆಕ್ಕಪರಿಶೋಧಕರು
(3) ಮುಖ್ಯ ಲೆಕ್ಕಾಧಿಕಾರಿಗಳು
(4) ಅಧೀಕ್ಷಕ ಅಭಿಯಂತರರು (ಪರಿಸರಕೋಶ)
(5) ಕಾನೂನು ಸಲಹೆಗಾರರು
(6) ಕಾರ್ಯಪಾಲಕ ಅಭಿಯಂತರರು-2 (ಘ.ತ್ಯಾ.ನಿ.)

ಸದರಿ ಸಮಿತಿಯ ದಿನಾಂಕ: 15-06-2011 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಧಾನ ಅಭಿಯಂತರರು ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸುದೀರ್ಘವಾಗಿ ಚರ್ಚೆ ನಡೆಸಿ ನೀಡಿದ ಸಭಾ ನಡುವಳಿಯ ಮುಖ್ಯಾಂಶಗಳು ಈ ಕೆಳಕಂಡಂತೆ ಇರುತ್ತದೆ (ಪ್ರತಿಯನ್ನು ಲಗತ್ತಿಸಿದೆ.)

- ಮಂಡೂರಿನ ಸರ್ವೆ ನಂ.155 ರಲ್ಲಿ ಪೌರ ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಮೆ॥ಎಸ್.ಜಿ.ಆರ್.ಆರ್.ಎಲ್. ರವರೊಂದಿಗೆ ದಿನಾಂಕ: 24-06-2005 ರಂದು ಪಾಲಿಕೆಯು ಒಪ್ಪಂದ ಮಾಡಿಕೊಂಡಿದೆ.

- ❖ ಸದರಿ ಸಂಸ್ಥೆಯವರ ಯೋಜನೆಯು ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವುದಾಗಿರುತ್ತದೆ. 20 ವರ್ಷಗಳ 'Active operation period' ಮತ್ತು 15 ವರ್ಷಗಳ Post closure ಅವಧಿಯದ್ದಾಗಿರುತ್ತದೆ.
- ❖ ಈ ಒಪ್ಪಂದದ ಪ್ರಕಾರ ಪಾಲಿಕೆಯು ಮೆ॥ಎಸ್.ಜಿ.ಆರ್.ಆರ್.ಎಲ್. (Operator) ಗೆ 35 ಎಕರೆ ಜಮೀನನ್ನು, ಎಕರೆ ಒಂದಕ್ಕೆ ವಾರ್ಷಿಕ ರೂ.1/- ರಂತೆ ಗುತ್ತಿಗೆ ಆಧಾರದ ಮೇಲೆ ದಿನಾಂಕ: 05-09-2005 ರಂದು ನೀಡಿದೆ. ಒಪ್ಪಂದದ ಪ್ರಕಾರ Operator ರವರು ಪಾಲಿಕೆಯಿಂದ ಪ್ರತಿದಿನ 1000 ಮೆ.ಟನ್ ಘನತ್ಯಾಜ್ಯವನ್ನು ಸ್ವೀಕರಿಸಬೇಕಾಗಿದೆ. ಸದರಿ ಘಟಕವು 20 ತಿಂಗಳುಗಳಲ್ಲಿ ಪೂರ್ಣವಾಗಬೇಕಾಗಿತ್ತು.
- ❖ ಆದರೆ, ರಾಜ್ಯ ಮಟ್ಟದ ಪರಿಸರ ಸಮಿತಿಯನ್ನು ರಚಿಸುವಲ್ಲಿ ತಡವಾಗಿದ್ದು, ಅವರಿಂದ Clearance ಸಿಕ್ಕ ನಂತರ ಮಾಲಿನ್ಯ ನಿಯಂತ್ರಣ ಮಂಡಳಿಯವರು ದಿನಾಂಕ: 22-07-2007 ರಂದು CFO ನೀಡಿದ ಕಾರಣ, ಘಟಕ ಸ್ಥಾಪನೆಯಲ್ಲಿ ವಿಳಂಬವಾಗಿರುತ್ತದೆ. ಘನ ಕರ್ನಾಟಕ ಸರ್ಕಾರದಿಂದ ಸದರಿ ಘಟಕ ಸ್ಥಾಪನೆಗೆ ಕಾಲಾವಧಿಯನ್ನು 31-10-2001 ರ ವರೆಗೆ ವಿಸ್ತರಿಸಲಾಗಿದೆ.
- ❖ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಪತ್ರದಲ್ಲಿ ಮೆ॥ಎಸ್.ಜಿ.ಆರ್.ಆರ್.ಎಲ್. ರವರಿಗೆ Composting ಗೆ ಮಾಡಲು ಅನುಮತಿ ನೀಡಿರುವ ಕಾರಣ ಸದರಿ ಸಂಸ್ಥೆಯವರು ದಿನಾಂಕ: 02-09-2008 ರಿಂದ ಘನತ್ಯಾಜ್ಯವನ್ನು ಸ್ವೀಕರಿಸಿ, Composting ಮಾಡುತ್ತಿದ್ದಾರೆ.
- ❖ ಹಾಲಿ ಪಾಲಿಕೆಯಿಂದ ಪ್ರತಿದಿನ ಸುಮಾರು 700 ಮೆ.ಟ. ಘನತ್ಯಾಜ್ಯವನ್ನು ಸ್ವೀಕರಿಸಿ, ಪ್ರತಿದಿನ 250-300 ಮೆ.ಟನ್. ಅನ್ನು ಸಂಸ್ಕರಿಸುತ್ತಿದ್ದಾರೆ. ಹಾಗೂ ಉಳಿಕೆ ಘನತ್ಯಾಜ್ಯವನ್ನು ನೇರವಾಗಿ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುತ್ತಿದ್ದಾರೆ.
- ❖ ಕರಾರು ಒಪ್ಪಂದದ ಷೆಡ್ಯೂಲ್-7ರಲ್ಲಿ ಮೆ॥ಎಸ್.ಜಿ.ಆರ್.ಆರ್.ಎಲ್. ರವರ ಯೋಜನೆಯು ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಆಗಿರುವ ಹಿನ್ನೆಲೆಯಲ್ಲಿ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುವ ಅನುಪಯುಕ್ತ ತ್ಯಾಜ್ಯಗಳ ಪ್ರಮಾಣವನ್ನು ಗರಿಷ್ಠ ಶೇ.14.6ಕ್ಕೆ ಮಿತಿಗೊಳಿಸಲಾಗಿದೆ.

ಈ ಎಲ್ಲಾ ವಿಷಯಗಳನ್ನು ಸಭೆಯ ಮುಂದೆ ಮಂಡಿಸಿ ಮೆ॥ಎಸ್.ಜಿ.ಆರ್.ಆರ್.ಎಲ್. ಕೋರಿರುವ ಪ್ರಸ್ತಾವನೆಯನ್ನು ಈ ಕೆಳಕಂಡಂತೆ ವಿವರಿಸಿದರು.

ಮೆ॥ಎಸ್.ಜಿ.ಆರ್.ಆರ್.ಎಲ್. ರವರ ಯೋಜನೆಯ ಕರಾರು ಒಪ್ಪಂದದ ಷೆಡ್ಯೂಲ್-7 ರಲ್ಲಿ ಅನುಪಯುಕ್ತ ತ್ಯಾಜ್ಯಗಳ ಪ್ರಮಾಣವನ್ನು ಪುನರಾವಲೋಕಿಸಲು ಅನುವು ಇರುವುದರಿಂದ, ಶೇಕಡವಾರು ಅನುಪಯುಕ್ತ ತ್ಯಾಜ್ಯಗಳ ಪ್ರಮಾಣವನ್ನು ಪುನರಾವಲೋಕಿಸಿ ಶೇ.40% ಅನುಪಯುಕ್ತ ತ್ಯಾಜ್ಯದ ಪ್ರಮಾಣವನ್ನು ಪರಿಗಣಿಸಿ, ಟಿಪ್ಪಿಂಗ್ ಫೀ ಪಾವತಿ ಮಾಡಬೇಕೆಂದು ಕೋರಿರುತ್ತಾರೆ. ಹಾಗೂ ದಿನಾಂಕ: 26-11-2010 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಮೆ॥ಎಸ್.ಜಿ.ಆರ್.ಆರ್.ಎಲ್. ರವರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಬಗ್ಗೆ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮೆ॥ಎಸ್.ಜಿ.ಆರ್.ಆರ್.ಎಲ್. ರವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪಾವತಿಸುತ್ತಿರುವ ವೇಸ್ಟ್ ರಿಸಿಪ್ಟ್ ಫೀಯನ್ನು ಇತರೆ ಸಂಸ್ಥೆಗಳಿಗೆ ನೀಡುತ್ತಿರುವ ಮಾದರಿಯಲ್ಲಿ ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕೂಡಲೇ ಕ್ರಮ ಜರುಗಿಸುವಂತೆ ಸೂಚಿಸಿರುವ ಬಗ್ಗೆ ಹಾಗೂ,

ದಿನಾಂಕ: 10-03-2011 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಮತ್ತೊಂದು ಇದೇ ವಿಷಯದ ಸಭೆಯಲ್ಲಿ ಮೆ॥ಎಸ್.ಜಿ.ಆರ್.ಆರ್.ಎಲ್. ರವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪಾವತಿಸುತ್ತಿರುವ ವೇಸ್ಟ್ ರಿಸಿಪ್ಟ್ ಫೀಯನ್ನು ಇತರೆ ಸಂಸ್ಥೆಗಳಿಗೆ ನೀಡುತ್ತಿರುವ ಮಾದರಿಯಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಬಗ್ಗೆ ಯೋಜನೆಯ ಪೂರ್ಣಗೊಳ್ಳುವವರೆಗೆ ಶೇ.14.6% ರಿಂದ ಶೇ.40% ರ ವರೆಗೆ ಹೆಚ್ಚಿಸುವ ಬಗ್ಗೆ ಪರಿಶೀಲಿಸಿ ಕೂಡಲೇ ಕ್ರಮ ಜರುಗಿಸುವಂತೆ ಸೂಚಿಸಿರುವ ಬಗ್ಗೆ ಸಭೆಗೆ ತಿಳಿಸಿದರು.

ಪ್ರಧಾನ ಅಭಿಯಂತರರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಯು ವಿಳಂಬವಾಗುತ್ತಿರುವ ಬಗ್ಗೆ ಮೆ॥ಎಸ್.ಜಿ.ಆರ್.ಆರ್.ಎಲ್. ಸಂಸ್ಥೆಯಿಂದ ಮಾಹಿತಿ ಕೋರಿದರು, ಮೆ॥ಎಸ್.ಜಿ.ಆರ್.ಆರ್.ಎಲ್. ಸಂಸ್ಥೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ.ರಮೇಶ್ ಬಿಂಗಿರವರು ಮಾತನಾಡುತ್ತಾ, ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕದ ನಿರ್ಮಾಣ ಕಾರ್ಯದ ಸಿವಿಲ್ ಕಾಮಗಾರಿಯ ಬಹುತೇಕ ಪೂರ್ಣಗೊಂಡಿರುವುದಾಗಿ ತಿಳಿಸಿದರು ಹಾಗೂ ಈ ಯೋಜನೆಗೆ ಅಗತ್ಯವಿರುವ ಉಪಕರಣಗಳನ್ನು ಈಗಾಗಲೇ ತರಿಸಲಾಗಿದ್ದು, ಉಪಕರಣಗಳನ್ನು ಜೋಡಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ತಿಳಿಸಿದರು. ಆದರೆ, ಭಾರತ ಸರ್ಕಾರದ MNRE ಸಂಸ್ಥೆ ರವರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕಕ್ಕೆ ನೂತನ ಮಾಲಿನ್ಯ ನಿಯಂತ್ರಣ ಪದ್ಧತಿಗಳನ್ನು ಅಳವಡಿಸಲು ಸೂಚಿಸಿರುತ್ತಾರೆ. ಇದರಿಂದ ಯೋಜನಾ ವೆಚ್ಚವು ಸುಮಾರು ರೂ.12.95 ಕೋಟಿಗಳಷ್ಟು ಹೆಚ್ಚಾಗಿದ್ದು ಹಾಗೂ ತ್ಯಾಜ್ಯದಿಂದ

Hte. K.N.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ವಿದ್ಯುತ್ ಉತ್ಪಾದಿಸಿದ ನಂತರ Power grid ಗೆ ರವಾನಿಸುವ ಮಾರ್ಗದಲ್ಲಿ ತಾಂತ್ರಿಕ ತೊಂದರೆಗಳು ಉಂಟಾಗಿ ಯೋಜನೆಯು ವಿಳಂಬವಾಗಿರುವುದಾಗಿ ಸಭೆಗೆ ತಿಳಿಸಿದರು.

ತದನಂತರ, ಪ್ರಧಾನ ಅಭಿಯಂತರರು (ಯೋಜನೆ) ಯಾವಾಗ ಪ್ರಾರಂಭಗೊಳ್ಳುತ್ತದೆ ಎಂಬ ಬಗ್ಗೆ Affidavit on Stamp Paper ಪತ್ರ ನೀಡುವಂತೆ ಮೆ॥ಎಸ್.ಜಿ.ಆರ್.ಆರ್.ಎಲ್. ಸಂಸ್ಥೆಗೆ ತಿಳಿಸಿದರು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮೆ॥ಎಸ್.ಜಿ.ಆರ್.ಆರ್.ಎಲ್. ಸಂಸ್ಥೆರವರೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದದ ಅನ್ವಯ ಅನುಪಯುಕ್ತ ತ್ಯಾಜ್ಯಗಳಿಗೆ 14.6% ಮಾತ್ರ ನೀಡಬೇಕಾಗಿರುತ್ತದೆ. ಆದರೆ ಇದುವರೆಗೂ Power Plant ಪೂರ್ಣಗೊಂಡಿಲ್ಲದ ಕಾರಣ ಹಾಗೂ ಅನೇಕ ತಾಂತ್ರಿಕ ಕಾರಣಗಳಿಂದ ವಿಳಂಬವಾಗುವ ಹಿನ್ನೆಲೆಯಲ್ಲಿ ಈ ಘಟಕಕ್ಕೆ ಬರುವ ಪ್ರತಿನಿತ್ಯ ಅಂದಾಜು 650 ಮೆ.ಟನ್ ತ್ಯಾಜ್ಯವನ್ನು ಸಂಪೂರ್ಣವಾಗಿ ಸಂಸ್ಕರಿಸಲು ಆಗುತ್ತಿಲ್ಲ. ಆದ ಕಾರಣ ಸಂಸ್ಕರಿಸದೇ ಇರುವ ತ್ಯಾಜ್ಯವನ್ನು ನೇರವಾಗಿ ನೆಲಭರ್ತಿಗೆ ಹಾಕಲಾಗುತ್ತಿದೆ.

ವಿದ್ಯುತ್ ಘಟಕ ಅನುಷ್ಠಾನಗೊಳ್ಳುವವರೆಗೂ ಪ್ರತಿದಿನ ಸ್ವೀಕರಿಸುವ ತ್ಯಾಜ್ಯವನ್ನು ಗೊಬ್ಬರ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಅನುಮತಿ ನೀಡಿರುತ್ತಾರೆ. ಗುತ್ತಿಗೆದಾರರು ಪ್ರತಿದಿನ 300 ಮೆ.ಟನ್ ತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರವನ್ನು ತಯಾರಿಸುತ್ತಿರುತ್ತಾರೆ. ಈ ವಿಷಯವನ್ನು ಗಮನಿಸುತ್ತಾ, ಮೆ॥ಎಸ್.ಜಿ.ಆರ್.ಆರ್.ಎಲ್. ರವರು ಕೋರಿರುವ ವೇಸ್ಟ್ ರಿಸಿಪ್ಟ್ ಫೀ ಹೆಚ್ಚಿಸಲು ಸಾಧ್ಯತೆಗಳಿರುತ್ತದೆ.

ಚೆನ್ನೈನ ಅಣ್ಣಾ ವಿಶ್ವ ವಿದ್ಯಾನಿಲಯ SUSTAINABLE LANDFILL MANAGEMENT ವಿಷಯದ ಕಾರ್ಯಾಗಾರದ ಬಗ್ಗೆ ನಡೆದ ಅಧ್ಯಯನದಲ್ಲಿ ಭಾರದಲ್ಲಿ ಪೌರಘನತ್ಯಾಜ್ಯದಲ್ಲಿ ಅನುಪಯುಕ್ತ ತ್ಯಾಜ್ಯದ ಪ್ರಮಾಣವು ಶೇ.43% ರಿಂದ ಶೇ.55% ರಷ್ಟು ಇರುತ್ತದೆ ಎಂದು ಉಲ್ಲೇಖಿಸಿರುತ್ತದೆ. ಹಾಗೂ ಮೆ॥ಎಸ್.ಜಿ.ಆರ್.ಆರ್.ಎಲ್. ಸಂಸ್ಥೆರವರು ಪ್ರತಿನಿತ್ಯ ಸ್ವೀಕರಿಸುತ್ತಿರುವ ಅಂದಾಜು 650 ಮೆ.ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ಉತ್ಪತ್ತಿಯಾಗುತ್ತಿರುವ 6 ತಿಂಗಳ ಅನುಪಯುಕ್ತ ತ್ಯಾಜ್ಯದ ಪ್ರಮಾಣದ ವರದಿಯನ್ನು ಗಣನೆಗೆ ತೆಗೆದುಕೊಂಡಲ್ಲಿ ಅನುಪಯುಕ್ತ ತ್ಯಾಜ್ಯದ ಪ್ರಮಾಣವು ಸರಾಸರಿ ಶೇ.52.84% ರಷ್ಟು ಇರುತ್ತದೆ.

ಈ ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಪ್ರಸ್ತುತ ಮೆ॥ಎಸ್.ಜಿ.ಆರ್.ಆರ್.ಎಲ್. ನವರು ಪ್ರತಿದಿನ ಸ್ವೀಕರಿಸುತ್ತಿರುವ ಸುಮಾರು 650 ಮೆ.ಟನ್ ಘನತ್ಯಾಜ್ಯಕ್ಕೆ ಶೇ.40% ರಂತೆ ವೇಸ್ಟ್ ರೆಸಿಪ್ಟ್ ಫೀಯನ್ನು ಹೆಚ್ಚಿಸಿದಲ್ಲಿ ಈ ಕೆಳಗಿನಂತೆ ಅಂದಾಜಿಸಬಹುದಾಗಿದೆ.

650 ಮೆಟ್ರಿಕ್ ಟನ್ x 40/100 x ರೂ.189.00 = ರೂ.14,74,200/-

| ಕ್ರ.ಸಂ. | ಪ್ರತಿದಿನ 650 ಮೆಟ್ರಿಕ್ ಟನ್‌ಗೆ ಹಾಲಿ ತಿಂಗಳ ಪಾವತಿಸುತ್ತಿರುವ ಮೊತ್ತ (ಶೇ.14.6) ಪ್ರತಿ ಮಾಹೆಗೆ | ಮೇಲೆ ತಿಳಿಸಿದ ಪ್ರಸ್ತಾವನೆಯಂತೆ ಪ್ರತಿದಿನ 650 ಮೆಟ್ರಿಕ್ ಟನ್‌ಗೆ ಶೇ.40% ರಂತೆ ವೇಸ್ಟ್ ರೆಸಿಪ್ಟ್ ಫೀಯನ್ನು ಹೆಚ್ಚಿಸಿದಲ್ಲಿ ಪಾವತಿಸಬೇಕಾದ ಮೊತ್ತ ಪ್ರತಿ ಮಾಹೆಗೆ | ವ್ಯತ್ಯಾಸದ ಮೊತ್ತ ಪ್ರತಿ ಮಾಹೆಗೆ |
|---|---|---|---|
| 1 | ರೂ.5,38,083/- | ರೂ.14,74,200/- | ರೂ.9,36,117/- |

ಮೇಲೆ ಸೂಚಿಸಿರುವ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಯೋಜನೆಯು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುವ ಹಿನ್ನೆಲೆಯಲ್ಲಿ ಹಾಗೂ Ministry of New & Renewable Energy (M.N.R.E.) ಸಂಸ್ಥೆರವರು ಹೆಚ್ಚುವರಿಯಾಗಿ ಅಳವಡಿಸಲು ಸೂಚಿಸಿರುವ ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ತಿಳಿಸಿರುವುದರಿಂದ ಈ ಯೋಜನೆಯ ಮೊತ್ತವು ಅಧಿಕವಾಗಿರುತ್ತದೆ. ಮತ್ತು ಪಾಲಿಕೆ ವತಿಯಿಂದ ಸರಬರಾಜು ಮಾಡಲಾಗುತ್ತಿರುವ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಣೆ ಮಾಡದಿರುವ ಕಾರಣ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲಾಗುತ್ತಿರುವ ಅನುಪಯುಕ್ತ ತ್ಯಾಜ್ಯದ ಪ್ರಮಾಣವು ಅಧಿಕವಾಗಿರುತ್ತದೆ. ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಕಾರ್ಯವು ಹಾಗೂ ಸಂಸ್ಕರಣಾ ಘಟಕ ಇನ್ನೂ ಪ್ರಾರಂಭವಾಗದ ಕಾರಣ ತ್ಯಾಜ್ಯವನ್ನು ನೇರವಾಗಿ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಬೇಕಾಗಿರುವ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಈ ಕಾರಣಗಳಿಂದಾಗಿ ಮೆ॥ಎಸ್.ಜಿ.ಆರ್.ಆರ್.ಎಲ್. ರವರು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸಂಪೂರ್ಣವಾಗಿ ಅನುಷ್ಠಾನಗೊಳ್ಳುವವರೆಗೆ ಮೆ॥ಎಸ್.ಜಿ.ಆರ್.ಆರ್.ಎಲ್. ಸಂಸ್ಥೆರವರಿಗೆ ಅನುಪಯುಕ್ತ ತ್ಯಾಜ್ಯ ವಿಲೇವಾರಿ ಮಾಡಲು ಪಾವತಿಸುತ್ತಿರುವ ಟಿಪ್ಪಿಂಗ್ ಫೀಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ದಿನಾಂಕದಿಂದ ಶೇ.40%ಗೆ ಹೆಚ್ಚಿಸುವ ಬಗ್ಗೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ದಿನಾಂಕ: 15-06-2011 ರಂದು ಪ್ರಧಾನ ಅಭಿಯಂತರರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯ ಆಧಾರದ ಮೇಲೆ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪರಿಗಣಿಸಿ ಮೆ॥ಎಸ್.ಜಿ.ಆರ್.ಆರ್.ಎಲ್. ರವರ ವೇಸ್ಟ್ ರಿಸಿಪ್ಟ್ ಫೀಯನ್ನು ಪ್ರಸ್ತುತ

ಶೇ.14.60% ನಿಂದ ಶೇ.40%ಕ್ಕೆ ಹೆಚ್ಚಿಸಿ ಪರಿಷ್ಕೃತ ಆದೇಶ ಹೊರಡಿಸುವ ದಿನಾಂಕದಿಂದ (Prospective Effect) ಮೆ॥ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿ., ರವರಿಗೆ ಹಾಲಿ ನಿಗದಿಪಡಿಸಿರುವ ಅನುಪಯುಕ್ತ ತ್ಯಾಜ್ಯದ ಶೇಕಡವಾರು ಪ್ರಮಾಣ 14.6% ರಿಂದ ಶೇ.40% ಗೆ ಹೆಚ್ಚಿಸುವ ಪ್ರಸ್ತಾವನೆಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ದಿನಾಂಕದಿಂದ ಮೆ॥ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿ., ರವರು ವಿದ್ಯುತ್ ಉತ್ಪಾದನಾ ಘಟಕವನ್ನು ದಿನಾಂಕ: 31-07-2012 ರ ಒಳಗಾಗಿ ಪೂರ್ಣಗೊಳಿಸುವುದಾಗಿ ಸಲ್ಲಿಸಿರುವ ಪ್ರಮಾಣ ಪತ್ರದ ಅನ್ವಯ ದಿನಾಂಕ: 31-07-2012 ರವರೆಗೆ ಅನ್ವಯಿಸುವಂತೆ ಸದರಿ ಟಿಪ್ಪಣಿಯ ಪುಟ ಸಂಖ್ಯೆ 4 ರ ಪ್ಯಾರಾ (3) ರಲ್ಲಿ ವಿವರಿಸಿರುವಂತೆ ಹೆಚ್ಚುವರಿ ಮೊತ್ತ ಪಾವತಿಸುವ ಸಲುವಾಗಿ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 27-02-2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಲಾಯಿತು. ದಿನಾಂಕ: 10-03-2011 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಕೆಯನ್ನು ಸಮಿತಿಯು ಗಮನಿಸಿ ಮೆ॥ಎಸ್.ಜಿ.ಆರ್.ಆರ್.ಎಲ್. ಮೆ॥ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿ., ರವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಪಾವತಿಸುತ್ತಿರುವ ವೇಸ್ಟ್ ರಿಸಿಪ್ಟ್ ಫೀಯನ್ನು ಶೇ.14.60% ರಿಂದ ಶೇ.40%ಕ್ಕೆ ಹೆಚ್ಚಿಸಲು ಸಮಿತಿಯು ಒಪ್ಪಿತ್ತು. ಈ ಹೆಚ್ಚಿಸಿದ ದರವನ್ನು ಕಛೇರಿ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸಮಿತಿಯು ತೀರ್ಮಾನಿಸಿತು.**

**4. ವಿಷಯದ ಸಂಖ್ಯೆ: ಸಾಆಸ್ಥಾಸ/62/2011-12:**

ಆಯುಕ್ತರ ದಿನಾಂಕ: 12-03-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆ ವಲಯಗಳ ಒಟ್ಟು 30 ಟೆಂಡರ್ ಪ್ಯಾಕೇಜ್‌ನ್ನು 2007, ಮಾರ್ಚ್ 15 ರಿಂದ 3 ವರ್ಷದ ಅವಧಿಗೆ ಗುತ್ತಿಗೆ ನೀಡಿದ್ದು, ಸದರಿ ಟೆಂಡರ್ ಗುತ್ತಿಗೆಯು ಮಾರ್ಚ್ 14, 2010 ರಂದು ಅಂತ್ಯಗೊಂಡಿದ್ದು, ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಸದರಿ ಗುತ್ತಿಗೆಯನ್ನು ಮುಂದುವರೆಸಲಾಗಿದೆ. ಇದೇ ಸಂಧರ್ಭದಲ್ಲಿ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಹೊಸ ಟೆಂಡರ್‌ನ ಪ್ರಕ್ರಿಯೆಯನ್ನು ದಿನಾಂಕ: 20-09-2009 ರಿಂದ ಪ್ರಾರಂಭಿಸಿದ್ದು, ಹಲವಾರು ಕಾರಣಗಳಿಂದ ಹಾಗೂ ಟೆಂಡರ್ ಪ್ರಕ್ರಿಯೆ ಬಗ್ಗೆ ಕೆಲವೊಂದು ಹಂತಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿದ್ದರಿಂದ ಈವರೆಗೂ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿರುವುದಿಲ್ಲ. ಟೆಂಡರ್ ಪ್ರಕ್ರಿಯೆಯು ವಿಳಂಬವಾಗಿರುವ ಬಗ್ಗೆ ಟೆಂಡರ್ ವಿವರಪಟ್ಟಿಯನ್ನು ಬಾವುಟ "ಅ" ನಲ್ಲಿ ಲಗತ್ತಿಸಿದೆ.

ಈ ಮಧ್ಯೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗುತ್ತಿಗೆ ಪೌರಕಾರ್ಮಿಕರಿಗೆ ಬಿಬಿಎಂಪಿಯು ಕನಿಷ್ಠ ವೇತನ ನೀಡದಿರುವ ಬಗ್ಗೆ ಪಾಲಿಕೆಯ ಗುತ್ತಿಗೆ ಪೌರಕಾರ್ಮಿಕರು ಸಲ್ಲಿಸಿರುವ ದೂರಿನ ಮೇರೆಗೆ ಕಾರ್ಮಿಕ ಆಯುಕ್ತರವರ ಕಛೇರಿಯಲ್ಲಿ ಹಲವಾರು ಸಂಧಾನ ಸಭೆಗಳನ್ನು ನಡೆಸಲಾಗಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ.ಕಾಇ 152 ಎಲ್‌ಎಂಡಬ್ಲ್ಯೂ 2008, ಬೆಂಗಳೂರು ದಿನಾಂಕ:21-02-2011 ರ ಮೂಲಕ "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆ" ಗಳಿಗೆ ಅನ್ವಯಿಸುವ ಪರಿಷ್ಕೃತ ಕನಿಷ್ಠ ವೇತನದ ದರಗಳನ್ನು ನಿಗಧಿಪಡಿಸಿದ್ದು(ಪ್ರತಿ ಲಗತ್ತಿಸಿದೆ),ಈ ಸಂಬಂಧ ಪಾಲಿಕೆಯು ಗುತ್ತಿಗೆ ಪೌರ ಕಾರ್ಮಿಕರಿಗೆ ಪರಿಷ್ಕೃತ ಕನಿಷ್ಠ ವೇತನವನ್ನು ಹಾಲಿ ಅಧಿಸೂಚನೆಯನ್ವಯ ಪ್ರತಿ ದಿನಕ್ಕೆ ರೂ.194/- ರಂತೆ ದಿನಾಂಕ:01-04-2011 ರಿಂದ ಅನ್ವಯಿಸುವಂತೆ ಪಾವತಿಸಬೇಕಾಗಿರುತ್ತದೆ. ಈ ಪ್ರಕಾರ 01-04-2011 ರಿಂದ 31-12-2011 ವರೆಗಿನ ವ್ಯತ್ಯಾಸದ ದರವನ್ನು ತಕ್ಷಣ ಪಾವತಿಸುವ ಬಗ್ಗೆ ಕ್ರಮ ಕೈಗೊಳ್ಳಲು ಹಾಗೂ ಜನವರಿ 2012 ನೇ ಮಾಹೆಯ ವೇತನವನ್ನು ಪರಿಷ್ಕೃತ ದರದನ್ವಯ 7ನೇ ಫೆಬ್ರವರಿ 2012ರ ಒಳಗೆ ಪಾವತಿಸತಕ್ಕದ್ದು, ತಪ್ಪಿದ್ದಲ್ಲಿ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 22 ಪ್ರಕಾರ ಪಾಲಿಕೆಯ ವಿರುದ್ಧ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿ ಉಲ್ಲೇಖ (2) ರಂತೆ ಕಾರ್ಮಿಕ ಆಯುಕ್ತರವರ ಕಛೇರಿಯಿಂದ ಸೂಚನಾ ಪತ್ರ ನೀಡಿರುತ್ತಾರೆ.(ಪ್ರತಿ ಲಗತ್ತಿಸಿದೆ)

ಈಗಾಗಲೇ ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರ ಹಾಗೂ ಗುತ್ತಿಗೆದಾರರ ಸಂಘ(ರಿ) ರವರ ಪರವಾಗಿ ಶ್ರೀ.ಲಕ್ಷ್ಮೀನಾರಾಯಣ, ವಕೀಲರು ಉಲ್ಲೇಖ (3) ರಂತೆ ಪಾಲಿಕೆಗೆ ನೋಟೀಸ್ ಅನ್ನು ನೀಡಿದ್ದು ಸದರಿ ನೋಟೀಸ್ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರು ಪಾಲಿಕೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ಪೌರಕಾರ್ಮಿಕರಿಗೆ ಪ್ರತಿ ತಿಂಗಳು ರೂ.2075.80/- ರಂತೆ ವೇತನವನ್ನು ನೀಡುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ,ಕಾಇ/152/ಎಲ್‌ಡಬ್ಲ್ಯೂ/2008, ದಿನಾಂಕ:21-02-2011 ರಂತೆ ಸ್ವಚ್ಛತಾ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆ ಪ್ರತಿ ದಿನಕ್ಕೆ ರೂ.194/-ರಂತೆ ಕನಿಷ್ಠ ವೇತನ ಪಾವತಿಸಬೇಕಾಗಿರುತ್ತದೆ. ಈ ಬಗ್ಗೆ ಕಾರ್ಮಿಕ ಇಲಾಖೆಯಿಂದ ಹಲವಾರು ಬಾರಿ ಸೂಚನೆಗಳು ಬಂದಿರುವ ಕಾರಣ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆ ನಿಗಧಿಪಡಿಸಿರುವ ಕನಿಷ್ಟ ವೇತನವನ್ನು ಪಾವತಿಸಲು ಪಾಲಿಕೆಯಿಂದ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ ಮತ್ತು ಈ ಬಗ್ಗೆ ಹಲವಾರು ಸಂಘ ಸಂಸ್ಥೆಗಳು ಮತ್ತು ಸಫಾಯಿ ಕರ್ಮಚಾರಿ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
-ಬೆಂಗಳೂರು

ಸಂಘದವರು ಈ ಕಛೇರಿಗೆ ದೂರು ನೀಡಿ ಒತ್ತಾಯಪಡಿಸುತ್ತಿರುವುದಲ್ಲದೇ, ಇದರ ಬಗ್ಗೆ ಕ್ರಮಕೈಗೊಳ್ಳದಿದ್ದಲ್ಲಿ ಪ್ರತಿಭಟನೆ ನಡೆಸುವುದಾಗಿ ತಿಳಿಸಿರುತ್ತಾರೆ.

ಹೊಸ ಟೆಂಡರ್ ದಸ್ತಾವೇಜಿನಲ್ಲಿ ಗುತ್ತಿಗೆದಾರರು ತಾವು ನೇಮಿಸಿಕೊಂಡಿರುವ ಗುತ್ತಿಗೆ ಪೌರಕಾರ್ಮಿಕರಿಗೆ ಉಲ್ಲೇಖ (1) ರಂತೆ ಸರ್ಕಾರದಿಂದ ನಿಗಧಿ ಪಡಿಸಿರುವ ಕನಿಷ್ಠ ವೇತನವನ್ನು ಚೆಕ್ ಮುಖಾಂತರ ಪಾವತಿಸುವ ಬಗ್ಗೆ ಹಾಗೂ ಕಾಲಕಾಲಕ್ಕೆ ನಿಗಧಿಪಡಿಸುವ ಕನಿಷ್ಠ ವೇತನದ ವ್ಯತ್ಯಾಸದ ಮೊತ್ತವನ್ನು ಪಾಲಿಕೆಯಿಂದ ನೀಡುವುದಾಗಿ ನಿಭಂದನೆಯನ್ನು ಅಳವಡಿಸಲಾಗಿದ್ದು, ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಹಾಲಿ ನಿರ್ವಹಿಸುತ್ತಿರುವ ಟೆಂಡರ್‌ನ್ನು ಮುಂದುವರೆಸಿಕೊಂಡು ಹೋಗಬೇಕಾಗಿರುವುದರಿಂದ, ಗುತ್ತಿಗೆ ಪೌರಕಾರ್ಮಿಕರಿಗೆ ನೂತನ ಕನಿಷ್ಠ ವೇತನವನ್ನು ಪಾವತಿಸಬೇಕಾಗಿದ್ದು, ಇಲ್ಲದಿದ್ದಲ್ಲಿ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 22 ಪ್ರಕಾರ ಪಾಲಿಕೆಯ ವಿರುದ್ಧ ಕ್ರಮಕೈಗೊಳ್ಳಲಾಗುವುದರಿಂದ, ಈ ಕೆಳಕಂಡ ಪ್ರಸ್ತಾವನೆಗೆ ಅನುಮೋದನೆ ಕೋರಿ ಮಂಡಿಸಿದೆ.

- ಎಲ್ಲಾ ವಲಯಗಳಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಆಯುಕ್ತರವರ ಆದೇಶದಂತೆ ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ದಿ:01-04-2011 ರಿಂದ ದಿ:31-01-2012 ವರೆಗಿನ ವ್ಯತ್ಯಾಸದ ದರವನ್ನು ಪಾವತಿಸುವ ಬಗ್ಗೆ ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರವರಿಂದ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ, ಒಟ್ಟು ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಪಡೆದು ವ್ಯತ್ಯಾಸದ ಮೊತ್ತವನ್ನು ಪಾವತಿಸುವ ಬಗ್ಗೆ ತೀರ್ಮಾನಕೈಗೊಳ್ಳುವ ಬಗ್ಗೆ.

- ಹಾಗೂ ಪ್ರಸ್ತುತ ಎಲ್ಲಾ ವಲಯಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪೌರಕಾರ್ಮಿಕರಿಗೆ ಫೆಬ್ರವರಿ-2012ನೇ ತಿಂಗಳಿನಿಂದ ಅನ್ವಯವಾಗುವಂತೆ ಕನಿಷ್ಠ ವೇತನದ ಅಧಿಸೂಚನೆಯನ್ವಯ ಹಾಲಿ ಪ್ರತಿ ದಿನಕ್ಕೆ ರೂ.194/-ರಂತೆ, ಇದರ ಜೊತೆಗೆ ಅನ್ವಯವಾಗುವ ತುಟ್ಟಿಭತ್ಯೆ ಮತ್ತು ಗುತ್ತಿಗೆದಾರರ ಇಎಸ್‌ಐ ಮತ್ತು ಪಿಎಫ್ ವಂತಿಕೆ ಶೇ.18.36 ಸೇರಿಸಿ ಚೆಕ್ ಮೂಲಕ/ಇ.ಸಿ.ಎಸ್ ಮೂಲಕ ಗುತ್ತಿಗೆದಾರರು ಪೌರಕಾರ್ಮಿಕರ ಬ್ಯಾಂಕ ಖಾತೆಗೆ ನೇರ ಜಮಾ ಮಾಡಿ ಪಾವತಿಸುವ ಬಗ್ಗೆ.

ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸರ್ಕಾರದ ಆದೇಶ ಸಂಖ್ಯೆ: ಕಾಇ152ಎಲ್‌ಎಂಡಬ್ಲ್ಯೂ/2008, ದಿನಾಂಕ: 21-02-2011 ರ ಪ್ರಕಾರ ಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆ ನಿಗಧಿ ಪಡಿಸಿರುವ ಕನಿಷ್ಠ ವೇತನ ಪ್ರತಿದಿನಕ್ಕೆ ರೂ.194/- ರಂತೆ ತಿಂಗಳಿಗೆ ರೂ.5,484/- ನ್ನು ಅಧಿಸೂಚನೆ ಅನ್ವಯ ಚೆಕ್ ಮೂಲಕ ಪಾವತಿಸಬೇಕಾಗಿರುತ್ತದೆ. ಈಗಾಗಲೇ ಪಾಲಿಕೆ ವತಿಯಿಂದ ಸ್ವಚ್ಛತಾ ಪೌರಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪಾವತಿಸಲು ಹೊಸ ಟೆಂಡರ್‌ನಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.**

**ಸರ್ಕಾರದ ಆದೇಶ ಮತ್ತು ಕಾರ್ಮಿಕ ಇಲಾಖೆಯ ಸುತ್ತೋಲೆ ಆದೇಶದಂತೆ ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ ದಿನಾಂಕ: 01-04-2011 ರಿಂದ 31-01-2012 ರ ವರೆಗಿನ ವ್ಯತ್ಯಾಸದ ದರವನ್ನು ಪಾವತಿಸಬೇಕಾಗಿರುತ್ತದೆ. ಸದರಿ ಗುತ್ತಿಗೆ ಪೌರಕಾರ್ಮಿಕರು ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿರವರು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆಯೇ? ಇಲ್ಲವೇ ಎಂಬ ಬಗ್ಗೆ ಕಡತದಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ಇವರು ಖಾಯಂ ನೌಕರರು ಆಗದೇ ಇರುವುದರಿಂದ ಇವರ ನಿರಂತರ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ. ಸದರಿ ಗುತ್ತಿಗೆ ಪೌರಕಾರ್ಮಿಕರು ಗುತ್ತಿಗೆದಾರರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಮತ್ತು ಪಾಲಿಕೆಯಲ್ಲಿ ಹೊಸದಾಗಿ ಸೇರ್ಪಡೆಗೊಂಡ 07 ನಗರಸಭೆ ಪ್ರದೇಶಗಳಲ್ಲಿ ಸ್ವಚ್ಛತೆ ಬಗ್ಗೆ ಕರೆದ ಟೆಂಡರ್ ಮುಂದುವರೆಸಿದ ಹಿನ್ನೆಲೆಯಲ್ಲಿ ತಾತ್ಕಾಲಿಕ ಪೌರಕಾರ್ಮಿಕರ ಮಾಹಿತಿಯನ್ನು ಪಡೆಯಬೇಕಾಗಿರುತ್ತದೆ. ಈ ಎಲ್ಲಾ ವಿವರಗಳನ್ನು ಪಡೆದ ನಂತರ ಕನಿಷ್ಠ ವೇತನವನ್ನು ಪೂರ್ವಾನ್ವಯವಾಗುವಂತೆ ಪಾವತಿಸಲು ನಿರ್ಧಾರ ಕೈಗೊಳ್ಳಬಹುದಾಗಿರುತ್ತದೆ. ಒಂದು ವೇಳೆ ಪೂರ್ವಾನ್ವಯವಾಗುವಂತೆ ಕನಿಷ್ಠ ವೇತನ ಪಾವತಿಸಿದಲ್ಲಿ ಹಣ ದುರುಪಯೋಗವಾಗುವ ಸಂಭವವಿರುತ್ತದೆ.**

**ಈ ಎಲ್ಲಾ ಮೇಲಿನ ಅಂಶಗಳನ್ನು ಸಮಿತಿಯು ಪರಿಶೀಲಿಸಿ ಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಕಾಯ್ದೆಯಂತೆ ನಿಗದಿಪಡಿಸಿರುವ ಇಖಐ ಮತ್ತು ಕಈ ನ್ನು ಗುತ್ತಿಗೆ ಪೌರಕಾರ್ಮಿಕರಿಗೆ ಪಾವತಿಸಲು ಗುತ್ತಿಗೆ ಪೌರಕಾರ್ಮಿಕರ ಪ್ರತ್ಯೇಕ**

**ಖಾತೆಯನ್ನು ತೆರೆಯಲು ಹಾಗೂ ಎಲ್ಲಾ ಗುತ್ತಿಗೆದಾರರುರವರಿಂದ ಗುತ್ತಿಗೆ ಪೌರಕಾರ್ಮಿಕರಿಗೆ ಕಡ್ಡಾಯವಾಗಿ ಎಲ್ಲಾ ವಿವರಗಳನ್ನೊಳಗೊಂಡ ಗುರುತಿನ ಚೀಟಿಯನ್ನು ವಿತರಿಸಲು ಸೂಚಿಸುತ್ತಾ, ಸರ್ಕಾರದ ಆದೇಶದಂತೆ ಕನಿಷ್ಠ ವೇತನವನ್ನು ದಿನಾಂಕ: 01-04-2012 ರಿಂದ ಜಾರಿಗೆ ತರಲು ಮತ್ತು ವೇತನವನ್ನು ಚೆಕ್ ಮೂಲಕ ಕಡ್ಡಾಯವಾಗಿ ಪಾವತಿಸಲು ಸಮಿತಿ ತೀರ್ಮಾನಿಸಿತು.**

**5. ವಿಷಯದ ಸಂಖ್ಯೆ: ಸಾಆಸ್ಥಾಸ/63/2011-12:**

ಸಂಖ್ಯೆ:ಮುಅ/ಪಕೋ/2/ಪಿಆರ್/ /11-12, ದಿನಾಂಕ: 15-03-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 30-07-2009 ರಂದು ಮಾನ್ಯ ಅಂದಿನ ಮಾನ್ಯ ಆಡಳಿತಗಾರರ ಪತ್ರ ಸಂಖ್ಯೆ: ಆಆಶಾ/ಸಾ/426/09-10 ರಂತೆ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಣಾ ಘಟಕಗಳಿಗೆ ಸಾಗಿಸುವ ಬಗ್ಗೆ ಪ್ರತಿಯೊಂದು ಸಂಸ್ಕರಣಾ ಘಟಕಗಳಿಗೆ ಸಿಬ್ಬಂದಿಯನ್ನು ನಿಯೋಜಿಸಿ, ಸದರಿ ಸಿಬ್ಬಂದಿಗೆ ಒಂದು ಆಟೋಮೇಟಿಕ್ ಯಂತ್ರವನ್ನು ಕೊಟ್ಟು ಅದರಲ್ಲಿ ಕಸ ವಿಲೇವಾರಿಗೆ ವಾಹನ/ಲಾರಿ ಬಂದ ತಕ್ಷಣ ಅದರ ಮಾಹಿತಿಯನ್ನು ಆ ಯಂತ್ರದಲ್ಲಿ ದಾಖಲು ಮಾಡುವಂತೆ ವ್ಯವಸ್ಥೆ ಮಾಡಲು ಆದೇಶಿಸಿದ್ದರು.

ತ್ಯಾಜ್ಯ ವಿಲೇವಾರಿ ಬಗ್ಗೆ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ Hand held DS Token ಯಂತ್ರವನ್ನು ತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳಲ್ಲಿ ಅಳವಡಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಪ್ರಾಯೋಗಿಕವಾಗಿ ಅಳವಡಿಸಲು ಉದ್ದೇಶಿಸಿ Hand held DS Token Machine ಗಳನ್ನು ಮೆ.ಕಿಯೋನಿಕ್ಸ್ ಸಂಸ್ಥೆ ರವರಿಂದ ಖರೀದಿಸಲಾಗಿರುತ್ತದೆ.

ಈ ಸಾಧನವು ತ್ಯಾಜ್ಯ ವಿಲೇವಾರಿ ಲಾರಿಯು ತೂಕಮಾಪಕ ಯಂತ್ರದ ಮೇಲೆ ನಿಂತಾಗ ದಾಖಲಾಗುವ ಲಾರಿಯ ಒಟ್ಟು ತೂಕದ ಮಾಹಿತಿಯನ್ನು Hand held DS Token ಯಂತ್ರವು ಪಾಲಿಕೆಯ ಕೇಂದ್ರ ಕಛೇರಿಯಲ್ಲಿ ಅಳವಡಿಸಲಾಗುವ Central Server ನಲ್ಲಿ ಮಾಹಿತಿಯನ್ನು ದಾಖಲಿಸುತ್ತದೆ.

ಇದೇ ಸಮಯದಲ್ಲಿ ಈ ಸಾಧನವು ಒಟ್ಟು ತೂಕದ ಬಗ್ಗೆ ರಸೀದಿಯನ್ನು ಮುದ್ರಿಸಿ ನೀಡುತ್ತದೆ. ಈ ಸಾಧನದಿಂದ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಪ್ರತಿದಿವಸ ಬರುವ ತ್ಯಾಜ್ಯದ ಪ್ರಮಾಣವನ್ನು ಬಹಳ ಸುಲಭವಾಗಿ, ನಿಖರವಾಗಿ ಪಡೆಯಬಹುದಾಗಿರುತ್ತದೆ. ಹಾಗೂ ಪ್ರತಿ ಮಾಹೆಯ ವಿವರಗಳನ್ನು ಸಹ ಶೀಘ್ರವಾಗಿ ಪಡೆಯಬಹುದಾಗಿರುತ್ತದೆ.

ಮೇಲ್ಕಂಡ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು, ಸಾಧನದ ನಿರ್ವಹಣೆಗಾಗಿ ಅಗತ್ಯವಾದ ಸಿಬ್ಬಂದಿಯನ್ನು ಕರ್ನಾಟಕ ಸರ್ಕಾರದ ಸಂಸ್ಥೆಯಾದ ಮೆ.ಕಿಯೋನಿಕ್ಸ್ ರವರಿಂದ ಪಡೆಯಲು ತೀರ್ಮಾನಿಸಲಾಗಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದಿಂದ ಮೆ.ಕಿಯೋನಿಕ್ಸ್ ರವರಿಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮದಡಿಯಲ್ಲಿ (KTTP Act) ವಿನಾಯಿತಿ ನೀಡಲಾಗಿರುತ್ತದೆ.

ಸದರಿ ಸಾಧನದ ನಿರ್ವಹಣೆಗಾಗಿ ಅಗತ್ಯವಾದ ಸಿಬ್ಬಂದಿಗೆ ಮೆ.ಕಿಯೋನಿಕ್ಸ್ ಸಂಸ್ಥೆರವರು ಈ ಕೆಳಕಂಡಂತೆ ದರ ನಮೂದಿಸಿದ್ದರು, ಮೆ.ಕಿಯೋನಿಕ್ಸ್ ನಿಯೋಜಿಸುವ ಸಿಬ್ಬಂದಿಯವರು ಬೆಳಗ್ಗೆ 7 ರಿಂದ ಸಾಯಂಕಾಲ 7 ರ ವರೆಗೂ ಕಾರ್ಯನಿರ್ವಹಿಸುತ್ತಾರೆ.

| Sl. No. | Manpower Requirement | Qty. | Rate/Month | Amount per month |
|---|---|---|---|---|
| 1 | Operator for Dump site token (Hand Held DS-Token) including Travel allowance and Communication allowance | 07 | 12000.00 | 84,000 |

ಮೆ.ಕಿಯೋನಿಕ್ಸ್ ಸಂಸ್ಥೆರವರು ನೀಡಿರುವ ದರಪಟ್ಟಿಅನ್ವಯ ಅಂದಾಜು ಪಟ್ಟಿ ತಯಾರಿಸಲಾಗಿ, ಸದರಿ ಅಂದಾಜು ಪಟ್ಟಿಯಂತೆ ಮೇಲ್ಕಂಡ 5 ತ್ಯಾಜ್ಯ ನಿರ್ವಹಣೆ ಘಟಕಗಳಿಗೆ Hand held DS Token Machine ಸಾಧನ ನಿರ್ವಹಣೆಗೆ ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ಪ್ರತಿ ವಾರ್ಷಿಕವಾಗಿ ರೂ.10,08,000.00 ಗಳಾಗುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರಾಯೋಗಿಕವಾಗಿ "Hand held DS Token Machine" ಆಪರೇಟರ್ಸ್‌ಗಳನ್ನು ಈ ಕೆಳಕಂಡ 4 ತ್ಯಾಜ್ಯ ಸಂಸ್ಕರಣಾ/ವಿಲೇವಾರಿ ಘಟಕಗಳಲ್ಲಿ ದಿನಾಂಕ: 01-01-2010 ರಿಂದ ನಿಯೋಜಿಸಲಾಗಿರುತ್ತದೆ. Hand held DS Token ಯಂತ್ರಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

1. ಮಂಡೂರು ಉತ್ತರ ಭಾಗದ ತ್ಯಾಜ್ಯ ಸಂಸ್ಕರಣ ಘಟಕ.
2. ಮಂಡೂರಿನ ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿ. ತ್ಯಾಜ್ಯ ಸಂಸ್ಕರಣ ಘಟಕ.
3. ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣ.
4. ಟೆರ್ರಾಫಾರ್ಮ ತ್ಯಾಜ್ಯ ಸಂಸ್ಕರಣ ಘಟಕ.

2011-12ನೇ ಸಾಲಿಗೆ ಮತ್ತೊಂದು ಅವಧಿಗೆ ಮೆ.ಕಿಯೋನಿಕ್ಸ್ ಸಂಸ್ಥೆರವರಿಂದ (ಮೆ.ಕಿಯೋನಿಕ್ಸ್ ಸಂಸ್ಥೆಗೆ ಕರ್ನಾಟಕ ಪಾರದರ್ಶಕತೆ ಅಧಿನಿಯಮದಡಿಯಲ್ಲಿ (KTTP Act) ವಿನಾಯಿತಿ ನೀಡಲಾಗಿರುತ್ತದೆ) "Hand held DS Token Machine" ಆಪರೇಟರ್ಸ್‌ಗಳನ್ನು ಈ ಹಿಂದೆ ಅನುಮೋದನೆಯಾಗಿರುವ ಮೊತ್ತ ರೂ.10.08 ಲಕ್ಷ (ವಾರ್ಷಿಕವಾಗಿ) ಗಳಲ್ಲಿ ನಿಯೋಜಿಸಿಕೊಳ್ಳಲಾಗಿರುತ್ತದೆ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

(ಡಾ|| ಕೆ.ಎನ್. ಗೀತಾ ಶಶಿಕುಮಾರ್)
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 19-03-2012 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ|| ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಶ್ರೀ.ಎಂ.ಮುನಿರಾಜು | ಸದಸ್ಯರು | ಅಧೀಕ್ಷಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ) |
| ಡಾ|| ಎಸ್. ರಾಜು | ಸದಸ್ಯರು | |
| ಶ್ರೀ.ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಶ್ರೀ.ಎನ್.ವೀರಣ್ಣ | ಸದಸ್ಯರು | |
| ಶ್ರೀ.ಎಲ್.ರಮೇಶ್ | ಸದಸ್ಯರು | |
| ಶ್ರೀಮತಿ.ಫೌಜೀಯ ಬೇಗಂ | ಸದಸ್ಯರು | |
| ಶ್ರೀ.ಓ.ಮಂಜುನಾಥ್ | ಸದಸ್ಯರು | |
| ಶ್ರೀ.ಎಂ. ಶ್ರೀನಿವಾಸ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1. ವಿಷಯದ ಸಂಖ್ಯೆ: ಸಾಆಸ್ಥಾಸ/57/2011-12:

ಸಂಖ್ಯೆ: ಆ/ಪಿಎಸ್ಆರ್/ /2011-12, ದಿನಾಂಕ: 21-02-2012 ರ ವಿಶೇಷ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ವೆ ನಂ.155 ಮಂಡೂರು ಉತ್ತರಭಾಗದ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳನ್ನು ನಿರ್ಮಿಸಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆದು, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ.

ಸರ್ವೆ ನಂ.155 ಮಂಡೂರು ಉತ್ತರಭಾಗದಲ್ಲಿನ ಪಾಲಿಕೆಯ ಲ್ಯಾಂಡ್‌ಫಿಲ್ ಘಟಕಕ್ಕೆ ವಿವಿಧ ವಲಯಗಳಿಂದ ಸುಮಾರು 120 ಟಿಪ್ಪರ್/ಲಾರಿಗಳು/ಕ್ಯಾಂಪ್ಯಾಕ್ಟರ್‌ಗಳ ಮುಖಾಂತರ ರವಾನಿಸಲಾಗುವ ಘನತ್ಯಾಜ್ಯವನ್ನು ಸ್ವೀಕರಿಸಲಾಗುತ್ತಿದೆ.

ಈ ರೀತಿ ಸ್ವೀಕರಿಸಲಾಗುವ ತ್ಯಾಜ್ಯವನ್ನು Hitachi ಯಂತ್ರಗಳನ್ನು ಉಪಯೋಗಿಸಿಕೊಂಡು unload ಮಾಡಿಸಿ ನಿಗದಿತ ಸ್ಥಳದಲ್ಲಿ ಹರಡಿ ಸಮತಟ್ಟು ಮಾಡಿ ತಾತ್ಕಾಲಿಕವಾಗಿ ಮಣ್ಣಿನ ಪದರ ಹಾಕಿ ನಿರ್ವಹಿಸುವುದು ಹಾಗೂ ಲ್ಯಾಂಡ್‌ಫಿಲ್‌ನ ಸಂಪರ್ಕ ರಸ್ತೆ ಉದ್ದಕ್ಕೂ ಚೆಲ್ಲುವ ಕಸಗಳನ್ನು ಸ್ವಚ್ಛಗೊಳಿಸುವುದು, ಬೇಸಿಗೆ ಕಾಲದಲ್ಲಿ ರಸ್ತೆಗೆ ನೀರನ್ನು ಸಿಂಪಡಿಸಿ ದೂಳನ್ನು ನಿಯಂತ್ರಿಸುವುದು, ಮುಂತಾದ ಕಾರ್ಯಗಳನ್ನು ಮೇಲುಸ್ತುವಾರಿಯೊಂದಿಗೆ ನಿರ್ವಹಿಸಲಾಗುತ್ತಿದೆ.

ಸರ್ವೆ ನಂ.155 ಮಂಡೂರು ಉತ್ತರಭಾಗದ ವೈಜ್ಞಾನಿಕ ಲ್ಯಾಂಡ್‌ಫಿಲ್‌ನ ನಿರ್ವಹಣೆಯ ಗುತ್ತಿಗೆಯನ್ನು ಪ್ರಸ್ತುತ ಮೆ|| ಕೆ.ಆರ್.ಐ.ಡಿ.ಎಲ್. ರವರಿಂದ ನಿರ್ವಹಿಸಲಾಗುತ್ತಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 31-12-2011 ರಂದು ಮುಕ್ತಾಯಗೊಳ್ಳುತ್ತದೆ.

ಸದರಿ ಲ್ಯಾಂಡ್‌ಫಿಲ್‌ನ 2012ನೇ ಸಾಲಿನ ದಿನಾಂಕ: 01-01-2012 ರಿಂದ 31-12-2012 ರ ವರೆಗಿನ ಒಂದು ವರ್ಷದ ಅವಧಿಯ ನಿರ್ವಹಣೆಯ ಅಂದಾಜು ಪಟ್ಟಿಯನ್ನು, 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆ ಬೆಂಗಳೂರು ವೃತ್ತದ ದರಪಟ್ಟಿಗಳನ್ನು ಆಧರಿಸಿ ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.150.00 ಲಕ್ಷಗಳಾಗಿರುತ್ತದೆ. ಅಂದಾಜು ಪಟ್ಟಿಯಲ್ಲಿ ಈ ಕೆಳಗಿನ ಅನುವುಗಳನ್ನು ಮಾಡಲಾಗಿರುತ್ತದೆ.

ಲ್ಯಾಂಡ್‌ಫಿಲ್‌ನಲ್ಲಿ ಸ್ವೀಕರಿಸಲಾಗುವ ತ್ಯಾಜ್ಯವನ್ನು Hitachi & JCB ಯಂತ್ರಗಳನ್ನು ಉಪಯೋಗಿಸಿಕೊಂಡು unload ಮಾಡಿಸಿ ನಿಗದಿತ ಸ್ಥಳದಲ್ಲಿ ಹರಡಿ ಸಮತಟ್ಟು ಮಾಡಿ ತಾತ್ಕಾಲಿಕವಾಗಿ ಮಣ್ಣಿನ ಪದರ ಹಾಕುವುದು.

ತ್ಯಾಜ್ಯ ಸಾಗಿಸುವ ಅಪ್ರೋಚ್ ರಸ್ತೆಯಲ್ಲಿ ತ್ಯಾಜ್ಯ ವಿಲೇವಾರಿ ವಾಹನಗಳ ಓಡಾಟದಿಂದಾಗಿ ಉತ್ಪಾದನೆಯಾಗುವ ದೂಳನ್ನು ನಿಯಂತ್ರಿಸಲು ರಸ್ತೆಗೆ ನೀರನ್ನು ಚುಮುಕುಸುವ ಕಾರ್ಯ.

Gee tha. K. N.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ತ್ಯಾಜ್ಯ ವಿಲೇವಾರಿ ವಾಹನಗಳಿಂದ ರಸ್ತೆಯಲ್ಲಿ ಹೊರ ಚೆಲ್ಲಲ್ಪಡುವ ತ್ಯಾಜ್ಯವನ್ನು ಟ್ರ್ಯಾಕ್ಟರ್ ಉಪಯೋಗಿಸಿಕೊಂಡು ರಸ್ತೆ ಸ್ವಚ್ಛಗೊಳಿಸುವ ಕಾರ್ಯ.

ಸದರಿ ಅಂದಾಜು ಪಟ್ಟಿಯ ಮೊತ್ತವನ್ನು ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಶೀರ್ಷಿಕೆಯಡಿಯಲ್ಲಿ "Maintenance of scientific landfill (P0968)" ರಲ್ಲಿ ಮೀಸಲಿಟ್ಟಿರುವ ಮೊತ್ತ ರೂ.1000.00 ಲಕ್ಷಗಳಲ್ಲಿ ಭರಿಸಬಹುದಾಗಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯ ಮುಂದೆ ಮಂಡಿಸುತ್ತಾ, ಕೌನ್ಸಿಲ್ ಸಭೆಯಲ್ಲಿ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯಿಂದ ಟಿಪ್ಪಣಿ ಮಂಡಿಸಲಾಗಿದೆ.

1. ಸದರಿ ಸರ್ವೆ ನಂ.155 ಮಂಡೂರು ಉತ್ತರಭಾಗದ ಲ್ಯಾಂಡ್‌ಫಿಲ್ ಘಟಕದ 2012ನೇ ಸಾಲಿನ ದಿನಾಂಕ: 01-01-2012 ರಿಂದ 31-12-2012 ರ ವರೆಗಿನ ಅವಧಿಯ ಒಂದು ವರ್ಷದ ನಿರ್ವಹಣೆಯ ರೂ.150.00 ಲಕ್ಷಗಳ ಕಾಮಗಾರಿಗೆ "Maintenance of scientific landfill (P0968)" ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನಕ್ಕಾಗಿ.
2. ಸದರಿ ಅಂದಾಜು ಪಟ್ಟಿಗೆ ಕಾಮಗಾರಿ ಸಂಖ್ಯೆ (Job Number) ಗಾಗಿ.
3. ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಗಾಗಿ.
4. ಸರ್ವೆ ನಂ.155 ಮಂಡೂರು ಉತ್ತರಭಾಗದ ಲ್ಯಾಂಡ್‌ಫಿಲ್ ಘಟಕದ 2012 ನೇ ಸಾಲಿನ ಒಂದು ವರ್ಷದ ಅವಧಿಯ ದಿನಾಂಕ: 01-01-2012 ರಿಂದ 31-12-2012 ವರೆಗೆ ವಾರ್ಷಿಕ ನಿರ್ವಹಣೆ ಅಂದಾಜು ಪಟ್ಟಿ ಮೊತ್ತ ರೂ.150.00 ಲಕ್ಷಗಳ ಕಾಮಗಾರಿಯು ಸಕ್ಷಮ ಪ್ರಾಧಿಕಾರ ದಿಂದ ಅನುಮೋದನೆಗೊಳ್ಳುವವರೆಗೆ ಹಾಲಿ ಇರುವ ವ್ಯವಸ್ಥೆಯನ್ನು (2011ನೇ ಸಾಲಿನ ದಿನಾಂಕ: 31-12-2011ಕ್ಕೆ ಮುಕ್ತಾಯಗೊಳ್ಳುವ ರೂ.96.60 ಲಕ್ಷಗಳ ಅಂದಾಜು ಪಟ್ಟಿಯಲ್ಲಿನ ಅನುವುಗಳಂತೆ) ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಮೆ|| ಕೆ.ಆರ್.ಐ.ಡಿ.ಎಲ್. ರವರಿಂದ ಮುಂದುವರೆಸಲಾಗಿರುತ್ತದೆ. ಸದರಿ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆಗಾಗಿ.
5. ಸರ್ವೆ ನಂ.155 ಮಂಡೂರು ಉತ್ತರಭಾಗದ ಲ್ಯಾಂಡ್‌ಫಿಲ್ ಘಟಕದ 2012ನೇ ಸಾಲಿನ ಒಂದು ವರ್ಷದ ಅವಧಿಯ ದಿನಾಂಕ: 01-01-2012 ರಿಂದ 31-12-2012 ರವರೆಗೆ ವಾರ್ಷಿಕ ನಿರ್ವಹಣೆ ಅಂದಾಜು ಪಟ್ಟಿ ಮೊತ್ತ ರೂ.150.00 ಲಕ್ಷಗಳ ಕಾಮಗಾರಿಯನ್ನು ಹಾಲಿ ನಿರ್ವಹಣೆ ಕಾರ್ಯ ಮಾಡುತ್ತಿರುವ ಮೆ|| ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಂದ ನಿರ್ವಹಿಸಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 21-02-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸರ್ವೆ ನಂ.155 ಮಂಡೂರು ಉತ್ತರಭಾಗದ ಲ್ಯಾಂಡ್‌ಫಿಲ್ ಘಟಕದ ವಾರ್ಷಿಕ ನಿರ್ವಹಣೆಯನ್ನು ಹಾಲಿ ನಿರ್ವಹಣೆ ಕಾರ್ಯ ಮಾಡುತ್ತಿರುವ ಮೆ||ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಗೆ ದಿನಾಂಕ: 01-01-2012 ರಿಂದ 31-12-2012 ರ ವರೆಗೆ ನಿರ್ವಹಣೆ ಮಾಡಲು ರೂ.150.00 ಲಕ್ಷಗಳ ಕಾಮಗಾರಿಗೆ** "Maintenance of scientific landfill (P0968)" **ಲೆಕ್ಕ ಶೀರ್ಷಿಕೆಯಡಿಯಲ್ಲಿ ಮಂಜೂರು ಮಾಡಲು ಒಪ್ಪಿದೆ ಮತ್ತು ಸದರಿ ಗುತ್ತಿಗೆ ಅವಧಿಯು ಮುಗಿಯುವ ಮುಂಚೆ ಟೆಂಡರ್ ಕರೆಯುವ ಪ್ರಕ್ರಿಯೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ತೀರ್ಮಾನಿಸಿತು.**

## 2. ವಿಷಯದ ಸಂಖ್ಯೆ: ಸಾಆಸ್ಥಾಸ/58/2011-12:

ವಿಶೇಷ ಆಯುಕ್ತರ ದಿನಾಂಕ: 23-02-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕ ಆರಂಭಗೊಳ್ಳುವ ಪೂರ್ವದಲ್ಲಿ ವಿಲೇವಾರಿ ಮಾಡಿರುವ ಘನತ್ಯಾಜ್ಯಕ್ಕೆ ಹೊದಿಕೆ ಇಲ್ಲದ ಕಾರಣ ತ್ಯಾಜ್ಯದ ಮೇಲೆ ಬೀಳುವ ಮಳೆ ನೀರಿನಿಂದಾಗಿ ಸ್ಥಳೀಯ ಪ್ರದೇಶ ಕಲುಷಿತಗೊಳ್ಳುವುದನ್ನು ಮತ್ತು ಮಾಲಿನ್ಯ ನಿಯಂತ್ರಣ ತಡೆಯಲು ಸದರಿ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ಅವಶ್ಯಕತೆ ಹಿನ್ನೆಲೆಯಲ್ಲಿ ಮೇಲಿನ ಕಾಮಗಾರಿಯನ್ನು ರೂ.71.00 ಲಕ್ಷಗಳ ಅಂದಾಜು ಮೊತ್ತದೊಂದಿಗೆ ರೂಪಿಸಲಾಗಿದ್ದು, ಆರೋಗ್ಯ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆಸಾಆಸ್ಥಾಸ/22/11-12, ದಿನಾಂಕ: 05-09-2011 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ಅಂದಾಜುಪಟ್ಟಿಗೆ ಸಂಖ್ಯೆ

CE/SWM/AS/28/11-12, Dt: 03-10-2011 ಮತ್ತು CE/SWM/TS/28/11-12, Dt: 03-10-2011 ರಲ್ಲಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಯನ್ನು 2 ಲಕೋಟೆ ವ್ಯವಸ್ಥೆಯಲ್ಲಿ ಇ-ಪ್ರೋಕ್ಯೂರಮೆಂಟ್ ಮುಖಾಂತರ ಸಂಖ್ಯೆ: ಕಾಪಾಅ-2/ಘ.ತ್ಯಾ.ನಿ./ಟೆಂಡರ್/03/2011-12, ದಿನಾಂಕ: 22-10-2011 ರಲ್ಲಿ ಟೆಂಡರ್ ಕರೆಯಲಾಗಿದ್ದು, ಈ ಕೆಳಗಿನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ.

| | | |
|---|---|---|
| 1. | ಬಸವರಾಜ್.ಆರ್.ಸಿ. | 1ನೇ ದರ್ಜೆ ಗುತ್ತಿಗೆದಾರರು. |
| 2. | ರಾಮಚಂದ್ರ.ಬಿ.ಹೆಚ್. | 1ನೇ ದರ್ಜೆ ಗುತ್ತಿಗೆದಾರರು. |
| 3. | ಚೆರುಕುರಿ ಬೋಜೇಶ್ವರರಾವ್ (ಮೆ॥ರಾವ್ ಕನ್ಸಟ್ರಕ್ಷನ್) | 1ನೇ ದರ್ಜೆ ಗುತ್ತಿಗೆದಾರರು. |

ಈ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿನಾಂಕ: 01-12-2011 ರಂದು ತೆರೆದು ಪರಿಶೀಲಿಸಿ ಮೂವರು ಗುತ್ತಿಗೆದಾರರು ತಾಂತ್ರಿಕ ಷರತ್ತುಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ದಿನಾಂಕ: 12-12-2011 ರಂದು ಆರ್ಥಿಕ ಬಿಡ್ಡನ್ನು ತೆಗೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಗಿನಂತಿರುತ್ತವೆ.

| | | |
|---|---|---|
| ಕಾಮಗಾರಿಯ ಅಂದಾಜು ಮೊತ್ತ | - | ರೂ.71,00,000.00 |
| ಭದ್ರತಾ ಠೇವಣಿ ಮೊತ್ತ | - | ರೂ.1,42,000.00 |
| ಟೆಂಡರ್‌ಗಿಟ್ಟ ಮೊತ್ತ | - | ರೂ.70,66,750.00 |

| ಕ್ರಮ ಸಂಖ್ಯೆ | ಮಾದರಿಯ ಹೆಸರು | ಪ್ರಸ್ತುತ ದರ ರೂ.ಗಳಲ್ಲಿ | ಪ್ರಸ್ತಾಪಿಸಿರುವ ದರ ರೂ.ಗಳಲ್ಲಿ |
|---|---|---|---|
| 1 | ಆಹಾರ ಪದಾರ್ಥಗಳ ರಾಸಾಯನಿಕ ವಿಶ್ಲೇಷಣೆ | 200-00 | 300-00 |
| 2 | ಮಧ್ಯಸಾರ ಮತ್ತು ಪಾನೀಯಕ್ಕೆ ಸಂಬಂಧಪಟ್ಟ ರಾಸಾಯನಿಕ ವಿಶ್ಲೇಷಣೆ | 200-00 | 300-00 |
| 3 | ನೀರಿನ ಮಾದರಿಯ ರಾಸಾಯನಿಕ ವಿಶ್ಲೇಷಣೆ | 300-00 | 450-00 |
| 4 | ನೀರಿನ ರೋಗಾಣು ವಿಶ್ಲೇಷಣೆ | 150-00 | 225-00 |
| 5 | ಇನ್ನಿತರ ಮಾದರಿ ವಸ್ತುಗಳ ವಿಶ್ಲೇಷಣೆ (ಆಹಾರ ಮಾದರಿ ವಿಶ್ಲೇಷಣೆ) | 300-00 | 450-00 |

**ಸರ್ಕಾರದ ಆದೇಶ ಸಂಖ್ಯೆ: ಆಕುಕ 215 ಸಿಜಿಸಿ 2009, ದಿನಾಂಕ: 27-09-2010**

**ಪರಿಷ್ಕರಿಸಿದ ದರ**

| ಕ್ರಮ ಸಂಖ್ಯೆ | ಮಾದರಿಯ ಹೆಸರು | ಪರಿಷ್ಕರಿಸಿ ನಿಗದಿಪಡಿಸಿದ ದರ ರೂ.ಗಳಲ್ಲಿ |
|---|---|---|
| 1 | ಆಹಾರ ಪದಾರ್ಥಗಳ ರಾಸಾಯನಿಕ ವಿಶ್ಲೇಷಣೆ | 300-00 |
| 2 | ಮಧ್ಯಸಾರ ಮತ್ತು ಪಾನೀಯಕ್ಕೆ ಸಂಬಂಧಪಟ್ಟ ರಾಸಾಯನಿಕ ವಿಶ್ಲೇಷಣೆ | 300-00 |
| 3 | ನೀರಿನ ಮಾದರಿಯ ರಾಸಾಯನಿಕ ವಿಶ್ಲೇಷಣೆ | 450-00 |
| 4 | ನೀರಿನ ರೋಗಾಣು ವಿಶ್ಲೇಷಣೆ | 225-00 |
| 5 | ಇನ್ನಿತರ ಮಾದರಿ ವಸ್ತುಗಳ ವಿಶ್ಲೇಷಣೆ (ಆಹಾರ ಮಾದರಿ ವಿಶ್ಲೇಷಣೆ) | 450-00 |

ಸರ್ಕಾರದ ಅಧೀನ ಕಾರ್ಯದರ್ಶಿರವರು ಸದರಿ ಆದೇಶವನ್ನು ಹೊರಡಿಸಿ ಇನ್ನು ಮುಂದೆ ಈ ದರಗಳನ್ನು ಪ್ರತಿ 2 ವರ್ಷಗಳಿಗೊಮ್ಮೆ ಶೇ.50% ಪರಿಷ್ಕರಿಸಲು ಪ್ರಸ್ತಾವನೆ ಕಳುಹಿಸುವುದು. ಇದರನ್ವಯ ಸದರಿ ಆದೇಶದಂತೆ ಪಾಲಿಕೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ವಿಭಾಗೀಯ ಪ್ರಾದೇಶಿಕ ಹಾಗೂ ಪಾಲಿಕೆ ಪ್ರಯೋಗ ಶಾಲೆಗಳಲ್ಲಿ ನೀರು ಮತ್ತು ಆಹಾರ ಮಾದರಿಗಳ ವಿಶ್ಲೇಷಣಾ ಶುಲ್ಕಗಳ ಪರಿಷ್ಕರಣೆ ಮಾಡಲು ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಠಿಯಿಂದ ತಾಂತ್ರಿಕತೆಗೆ ಅಳವಡಿಸಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 07-03-2012 ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಪಾಲಿಕೆಯ ಪ್ರಯೋಗ ಶಾಲೆಗಳಲ್ಲಿ ನೀರು ಮತ್ತು ಆಹಾರ ಮಾದರಿಗಳ ವಿಶ್ಲೇಷಣಾ ಶುಲ್ಕಗಳ ಪರಿಷ್ಕರಣೆಯನ್ನು ಸರ್ಕಾರದ ಆದೇಶದ ಸಂಖ್ಯೆ: ಆಕುಕ 215 ಸಿಜಿಇ 2009, ದಿನಾಂಕ: 27-09-2010 ರಂತೆ ಪರಿಷ್ಕರಿಸಿರುವ ದರವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಿತು.**

Geetha Shashi Kumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**

**ಅಧ್ಯಕ್ಷರು**

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 06-02-2012 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ|| ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| ಡಾ|| ಎಸ್. ರಾಜು | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| ಶ್ರೀ.ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿಗಳು |
| ಶ್ರೀ.ಎಲ್.ರಮೇಶ್ | ಸದಸ್ಯರು | ಆರೋಗ್ಯಾಧಿಕಾರಿಗಳು (ದಕ್ಷಿಣ) |
| ಶ್ರೀಮತಿ.ಫೌಜಿಯ ಬೇಗಂ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಪರಿಸರಕೋಶ) |
| ಶ್ರೀ.ಓ.ಮಂಜುನಾಥ್ | ಸದಸ್ಯರು | |
| ಶ್ರೀ.ಎಂ. ಶ್ರೀನಿವಾಸ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**1. ವಿಷಯದ ಸಂಖ್ಯೆ: ಸಾಆಸ್ಥಾಸ/24/2011-12:**

ಸಂಖ್ಯೆ: ಜಂ.ನಿ.(ಪಪಾ)/ಪಿ.ಆರ್./779/11-12, ದಿನಾಂಕ: 16-11-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನೆ ವಿಭಾಗದ ಅಡಿಯಲ್ಲಿ ಸಾಕುನಾಯಿಗಳ ಪರವಾನಗಿಯನ್ನು ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಸದರಿ ಕಾರ್ಯವನ್ನು ಬೈಲಾ 25 ರ ಅಡಿ ಸಾಕು ನಾಯಿಗಳ ಪರವಾನಗಿಗಾಗಿ ಶುಲ್ಕವನ್ನು ಸಾಕು ನಾಯಿ ಮಾಲೀಕರಿಂದ ವಸೂಲಿ ಮಾಡಿ, ಅನುಷ್ಠಾನಗೊಳಿಸಲಾಗುತ್ತಿದೆ. 1976 ರ ಕರ್ನಾಟಕ ಮುನ್ಸಿಫಲ್ ಕಾಯಿದೆ ಜಾರಿಗೆ ಬಂದ ನಂತರ ಬೈಲಾ 25 ಅನ್ನು ರದ್ದುಗೊಳಿಸಲಾಗಿರುತ್ತದೆ. ಆದುದರಿಂದ ಈಗಿನ ಪರಿಸ್ಥಿತಿಗೆ ಅನ್ವಯಿಸುವಂತೆ ಸಾಕುನಾಯಿ ಪರವಾನಗಿಗೆ ಸಂಬಂಧಿಸಿದಂತೆ, 1976 ರ K.M.C. ಕಾಯಿದೆ Section 423 ರಲ್ಲಿ ಆಯುಕ್ತರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಹಾಗೂ ಇದರ ಜೊತೆ Sub Section 21 ರಲ್ಲಿ ಪ್ರಾಣಿ ಮತ್ತು ಮನುಷ್ಯರಲ್ಲಿ ಅಪಾಯಕಾರಿ ರೋಗಗಳನ್ನು ತಡೆಗಟ್ಟುವ, Sub Section 22 ರ ಪ್ರಕಾರ ಕಡ್ಡಾಯವಾಗಿ ರೋಗನಿರೋಧಕ ಚುಚ್ಚುಮದ್ದು ಹಾಕಿಸುವ ಕ್ರಮವನ್ನು ಜಾರಿಗೊಳಿಸುವ ನಿಯಮಗಳ ಅಡಿಯಲ್ಲಿ ಸಾಕು ನಾಯಿಗಳ ಪರವಾನಗಿ ಬೈಲಾವನ್ನು ಮಾಡಲಾಗಿರುತ್ತದೆ.

ನಾಯಿಗಳಲ್ಲಿ ಹುಚ್ಚುನಾಯಿ ರೋಗ ತಡೆಗಟ್ಟಲು ಪ್ರತಿ ವರ್ಷ ಸದರಿ ರೋಗದ ವಿರುದ್ಧ ಚುಚ್ಚುಮದ್ದು ಹಾಕುವಿಕೆ ಹಾಗೂ ಸಾಕುನಾಯಿಗಳಿಂದಾಗಿ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ನಿಯಂತ್ರಣ ಪಡಿಸುವ ಉದ್ದೇಶದಿಂದ ಈ ಕೆಳಕಂಡ ನಿಭಂದನೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಲು ಉದ್ದೇಶಿಸಿದೆ.

ಸಾಕು ನಾಯಿಗಳ ಪರವಾನಗಿ ಕಡ್ಡಾಯಗೊಳಿಸುವ ಕುರಿತಂತೆ ಹಾಗೂ ಮನೆಗಳಲ್ಲಿ ಸಾಕಬಹುದಾದ ನಾಯಿಗಳ ಸಂಖ್ಯೆಯನ್ನು ನಿರ್ಭಂದಿಸುವ ಬಗ್ಗೆ ಸಾರ್ವಜನಿಕರಿಂದ ಪತ್ರಗಳ ಮುಖಾಂತರ, ಮಾಧ್ಯಮದ ಮುಖಾಂತರ ಹಾಗೂ ಇ-ಮೇಲ್ ಮುಖಾಂತರ ನಕಾರಾತ್ಮಕ ಪ್ರತಿಕ್ರಿಯೆಗಳು ಬರುತ್ತಿರುವುದರಿಂದ ಸಾಕು ನಾಯಿ ಪರವಾನಗಿಯ ಶುಲ್ಕಗಳನ್ನು ಈ ಕೆಳಗಿನಂತೆ ನಿಗಧಿಗೊಳಿಸಲಾಗಿದೆ.

- 1 ರಿಂದ 4 ನಾಯಿಗಳನ್ನು ಸಾಕಿದ್ದಲ್ಲಿ ಸಾಕು ನಾಯಿ ಎಂದು ಪರಿಗಣಿಸಿ
  1. ಮೊದಲ ಸಾಕು ನಾಯಿಗೆ ರೂ.250/- ಪರವಾನಗಿ ಶುಲ್ಕ.
  2. ಎರಡನೇ ಸಾಕು ನಾಯಿಗೆ ರೂ.500/- ಪರವಾನಗಿ ಶುಲ್ಕ.
  3. ಮೂರನೇ ಸಾಕು ನಾಯಿಗೆ ರೂ.750/- ಪರವಾನಗಿ ಶುಲ್ಕ.
  4. ಹಾಗೂ ನಾಲ್ಕನೇ ಸಾಕು ನಾಯಿಗೆ ರೂ.1000/- ಪರವಾನಗಿ ಶುಲ್ಕ ನಿಗಧಿಗೊಳಿಸಲಾಗಿದೆ.
- 5 ಕ್ಕಿಂತಲೂ ಹೆಚ್ಚು ನಾಯಿಗಳನ್ನು ಸಾಕಿರುವವರನ್ನು ತಳಿ ಸಂವರ್ಧಕರು ಎಂದು ಪರಿಗಣಿಸಿ ಪ್ರತಿ ನಾಯಿಗೆ ರೂ.1000/- ಪರವಾನಗಿ ಶುಲ್ಕ ನಿಗಧಿಗೊಳಿಸಲಾಗಿದೆ.
- ಮೈಕ್ರೋಚಿಪ್ ಅಳವಡಿಸಿದಲ್ಲಿ ವೆಚ್ಚ ಪ್ರತ್ಯೇಕ.
- ಫ್ಲಾಟ್‌ಗಳಲ್ಲಿ ಅನುಮೋದಿತ ತಳಿಯ ಒಂದು ಸಾಕು ನಾಯಿ ಮಾತ್ರ ಸಾಕಬಹುದಾಗಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

1. ಸಾಕು ನಾಯಿಗಳ ತಳಿ ಅಭಿವೃದ್ಧಿಗಾಗಿ ನಾಯಿಗಳನ್ನು ಸಾಕುವ ಕೆನಲ್‌ಗಳನ್ನು ಪಾಲಿಕೆಯ ಹಳೆಯ ವಲಯದ ಪ್ರದೇಶಗಳ ಹೊರಗಿನ ಪ್ರದೇಶಗಳಲ್ಲಿ ಗರಿಷ್ಠ 10 ಶ್ವಾನಗಳಿಗೆ ಮೀರದಂತೆ ಸಾಕಬಹುದಾಗಿದ್ದು, ಇದಕ್ಕೆ ಪರವಾನಗಿಯನ್ನು ಕಡ್ಡಾಯವಾಗಿ ಪಡೆಯಬೇಕು.
2. ವಸತಿ ಸಮುಚ್ಛಯಗಳಲ್ಲಿ ನಾಯಿಗಳನ್ನು ಸಾಕುವವರು ಅಕ್ಕಪಕ್ಕದ ಮನೆಯವರಿಗೆ ನಾಯಿಯಿಂದ ತೊಂದರೆ ಆಗದಂತೆ ನಿಗಾ ವಹಿಸುವುದು. ಅಕ್ಕ-ಪಕ್ಕದವರಿಗೆ ತೊಂದರೆ ಆಗುತ್ತಿರುವ ಬಗ್ಗೆ ದೂರುಗಳು ಬಂದಲ್ಲಿ ಸಾಕು ನಾಯಿ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ನಾಯಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.
3. ಮನೆಗಳಲ್ಲಿ ಒಂದಕ್ಕಿಂತ ಹೆಚ್ಚು ನಾಯಿಗಳನ್ನು ಸಾಕಿರುವವರು ಅಕ್ಕ-ಪಕ್ಕದ ಮನೆಯವರಿಂದ ಹಾಗೂ ಹಿಂಬದಿಯ ಮನೆಯವರಿಂದ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕಾಗಿರುತ್ತದೆ.

ಸಾಕು ನಾಯಿಗಳಿಗೆ ಹಾಗೂ ಕೆನಲ್‌ಗಳಲ್ಲಿ ಸಂತಾನೋತ್ಪತ್ತಿಗಾಗಿ ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಶ್ವಾನಗಳ ಮಾಲೀಕರೆ ಪ್ರತ್ಯೇಕವಾಗಿ ಭರಿಸಬೇಕಾಗಿರುತ್ತದೆ.

ಸಾಕು ಶ್ವಾನಗಳ ಪರವಾನಗಿ ಕಡ್ಡಾಯಗೊಳಿಸುವ ಸಲುವಾಗಿ ಹೊಸದಾಗಿ ಬೈಲಾಗಳನ್ನು ರಚಿಸಲಾಗಿದ್ದು, ಬೈಲಾಗಳಲ್ಲಿರುವ ನಿಯಮಗಳಂತೆ ಆಯುಕ್ತರಿಂದ ನೇಮಿತವಾದ ಅಧಿಕಾರಿ ಮತ್ತು ಸಿಬ್ಬಂದಿಗಳು ಕ್ರಮ ವಹಿಸಬಹುದಾಗಿರುತ್ತದೆ.

ಉತ್ತಮ ತಳಿಯ ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವ ಅಂಗಡಿಗಳಿಗೂ ಪರವಾನಗಿ ಕಡ್ಡಾಯಗೊಳಿಸಲಾಗಿದ್ದು, ಪರವಾನಗಿ ಶುಲ್ಕ ಈ ಕೆಳಗಿನಂತೆ ನಿಗಧಿಗೊಳಿಸಲಾಗಿದೆ.

1. 1,000 ಚದುರ ಅಡಿಗಳ ವರೆಗೆ ಇರುವ ಮಾರಾಟ ಮಾಡುವ ಕೇಂದ್ರಗಳಿಗೆ ವಾರ್ಷಿಕ ರೂ.5000/-.
2. 1,001 ರಿಂದ 2,500 ಚದುರ ಅಡಿಗಳ ವರೆಗಿನ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.10,000/-.
3. ಹಾಗೂ 2,501 ಚದುರ ಅಡಿಗಳಿಗೆ ಮೇಲ್ಪಟ್ಟ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.25,000/-.

ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೂ ಸಹ ಪರವಾನಗಿಯನ್ನು ಕಡ್ಡಾಯಗೊಳಿಸಲಾಗಿದ್ದು, ಪರವಾನಗಿ ಶುಲ್ಕ ಈ ಕೆಳಗಿನಂತೆ ನಿಗಧಿಗೊಳಿಸಲಾಗಿದೆ.

1. 1,000 ಚದುರ ಅಡಿಗಳ ವರೆಗಿನ ವಿಸ್ತಾರದ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.3,000/-.
2. 1,001 ಚದುರ ಅಡಿಗಳಿಂದ 2,500 ಚದುರ ಅಡಿಗಳ ವರೆಗಿನ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.5,000/-
3. ಹಾಗೂ 2,501 ಚದುರ ಅಡಿಗಳಿಗಿಂತ ಮೇಲ್ಪಟ್ಟ ಕೇಂದ್ರಗಳಿಗೆ ವಾರ್ಷಿಕ ರೂ.10,000/-.

ದತ್ತು ತೆಗೆದುಕೊಂಡ ಬೀದಿ ನಾಯಿಗಳಿಗೆ ಈ ಕೆಳಗಿನಂತೆ ಪರವಾನಗಿ ಶುಲ್ಕ ನಿಗಧಿಗೊಳಿಸಲಾಗಿದೆ.

1. ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಬೀದಿ ಶ್ವಾನಗಳಿಗೆ ವಾರ್ಷಿಕ ರೂ.30/- ಪ್ರತಿ ನಾಯಿಗೆ.
2. ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಡದ ಬೀದಿ ಶ್ವಾನಗಳಿಗೆ ವಾರ್ಷಿಕ ರೂ.90/- ಪ್ರತಿ ನಾಯಿಗೆ.
3. ಜಾನುವಾರು ಕಲ್ಯಾಣ ಸಂಸ್ಥೆಗಳಲ್ಲಿರುವ ಶ್ವಾನಗಳಿಗೆ ಹಾಗೂ 10 ಕ್ಕೆ ಮೇಲ್ಪಟ್ಟು ಬೀದಿ ನಾಯಿಗಳನ್ನು ದತ್ತು ತೆಗೆದುಕೊಂಡ ಸಾರ್ವಜನಿಕರಿಗೆ (ಅಕ್ಕ-ಪಕ್ಕದ ಮನೆಯವರಿಂದ ಆಕ್ಷೇಪಣೆ ಇಲ್ಲದಿದ್ದಲ್ಲಿ ಮಾತ್ರ) ಸಾಕು ನಾಯಿ ಪರವಾನಗಿಯ ನಿಯಮಗಳು ಅನ್ವಯಿಸುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಪ್ರದೇಶಗಳಲ್ಲಿರುವ ಸಾಕು ಶ್ವಾನಗಳಿಗೆ, ಕೆನಲ್‌ಗಳಿಗೆ, ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಕೇಂದ್ರಗಳಿಗೆ ಮತ್ತು ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ಪರವಾನಗಿಯನ್ನು 2011-12 ಸಾಲಿನಿಂದ ಕಡ್ಡಾಯಗೊಳಿಸಲಾಗಿದೆ. ಸಾಕು ನಾಯಿಗಳಿಂದಾಗಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ತಡೆಗಟ್ಟಬಹುದಲ್ಲದೆ, ಸಾಕು ನಾಯಿಗಳಿಂದ ಹುಚ್ಚು ನಾಯಿ ರೋಗ ಹರಡದಂತೆ ತಡೆಗಟ್ಟಬಹುದಾಗಿರುತ್ತದೆ.

ಈ ಮೇಲ್ಕಂಡ ಅಂಶಗಳ ಬಗ್ಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 16-11-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

**2. ವಿಷಯದ ಸಂಖ್ಯೆ: ಸಾಆಸ್ಥಾಸ/38/2011-12:**

ಆಯುಕ್ತರ ದಿನಾಂಕ: 10-01-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಆಹ್ವಾನಿಸಲಾಗಿರುವ ಘನತ್ಯಾಜ್ಯ ನಿರ್ವಹಣೆ ಟೆಂಡರ್‌ನ ಬಿಡ್ ಪೂರ್ವ ಸ್ಪಷ್ಟನೆಗಳಿಗಾಗಿ (Pre-bid queries) ದಿನಾಂಕ: 23-12-2011 ರಂದು ಐ.ಪಿ.ಪಿ ಕೇಂದ್ರ, ಮಲ್ಲೇಶ್ವರಂನಲ್ಲಿ ಅಧಿಕಾರಿಗಳು ಮತ್ತು ಬಿಡ್ಡುದಾರರೊಂದಿಗೆ ನಡೆದ ಪೂರ್ವಭಾವಿ ಮುಖಾಮುಖಿ ಸಭೆಯಲ್ಲಿ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಹಾಜರಿದ್ದ ಬಿಡ್ಡುದಾರರು ಹಾಲಿ ಕರೆದಿರುವ ಘನತ್ಯಾಜ್ಯ ನಿರ್ವಹಣೆ ಟೆಂಡರ್‌ನ ಕೆಲವೊಂದು ನಿಭಂದನೆಗಳಲ್ಲಿ ವಿನಾಯಿತಿ ಕೋರಿರುತ್ತಾರೆ. ಈ ನಿಟ್ಟಿನಲ್ಲಿ ಟೆಂಡರ್ ದಸ್ತಾವೇಜಿನಲ್ಲಿ ಈ ಕೆಳಕಂಡಂತೆ ಮಾರ್ಪಾಡು ಮಾಡಲಾಗಿರುತ್ತದೆ.

| ಬಿಡ್ಡುದಾರರು ವಿನಾಯಿತಿ ಕೋರಿರುವ ಅಂಶಗಳು | ಟೆಂಡರ್‌ನಲ್ಲಿ ಮಾರ್ಪಾಡು ಮಾಡಿರುವ ಅಂಶಗಳು |
|---|---|
| ಗುತ್ತಿಗೆದಾರರು ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆ ಪ್ರಗತಿಯ ವರದಿಯನ್ನು ಮಾಸಿಕ ಬಿಲ್ಲಿನೊಂದಿಗೆ ಎಲೆಕ್ಟ್ರಾನಿಕ್ ನಮೂನೆ ಮೂಲಕ ಸಲ್ಲಿಸುವುದನ್ನು ತೆಗೆದುಹಾಕುವ ಬಗ್ಗೆ. | ಗುತ್ತಿಗೆದಾರರು ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆ ಪ್ರಗತಿಯ ವರದಿಯನ್ನು ಮಾಸಿಕ ಬಿಲ್ಲಿನೊಂದಿಗೆ ಎಲೆಕ್ಟ್ರಾನಿಕ್ ನಮೂನೆ ಮೂಲಕ ಸಲ್ಲಿಸುವ ನಿಬಂಧನೆಯನ್ನು ತೆಗೆದುಹಾಕಲಾಗಿರುತ್ತದೆ. |
| ಗುತ್ತಿಗೆದಾರರು ರಸ್ತೆ ಬದಿಯಲ್ಲಿರುವ ಮ್ಯಾನ್‌ಹೋಲ್ ಹೂಳು (ಒಳ ಚರಂಡಿ ಹೂಳು) ತ್ಯಾಜ್ಯವನ್ನು ತೆಗೆಯುವುದನ್ನು ಕೈಬಿಡುವ ಬಗ್ಗೆ. | ಗುತ್ತಿಗೆದಾರರು ರಸ್ತೆ ಬದಿಯಲ್ಲಿ ಉಳಿದಿರುವ ಮ್ಯಾನ್‌ಹೋಲ್ ಹೂಳು (ಒಳ ಚರಂಡಿ ಹೂಳು) ತ್ಯಾಜ್ಯವನ್ನು ತೆಗೆಯುವುದು. |
| ರಸ್ತೆ ಬದಿಯಲ್ಲಿ ಬೆಸ್ಕಾಂ ರವರು ಕಟಾವು ಮಾಡಿರುವ ಮರದ ರೆಂಬೆಗಳನ್ನು ತೆರೆವುಗೊಳಿಸಬೇಕೆಂಬ ನಿಬಂಧನೆಯನ್ನು ತೆಗೆದುಕಾಕುವ ಕುರಿತು (ಈಗಾಗಲೇ ಬೆಸ್ಕಾಂ ಅವರು ವಹಿಸಿದ ಸಂಸ್ಥೆಯವರೆ ತೆರವುಗೊಳಿಸಬೇಕೆಂಬ ಆದೇಶ ಇರುವುದರಿಂದ) | ರಸ್ತೆ ಬದಿಯಲ್ಲಿ ಬೆಸ್ಕಾಂ ರವರು ಕಟಾವು ಮಾಡಿರುವ ಮರದ ರೆಂಬೆಗಳನ್ನು ಹೊರತುಪಡಿಸಿ ಉಳಿದ ಮರದ ರೆಂಬೆಗಳನ್ನು ಮತ್ತು ಗಿಡಗಂಟೆಗಳನ್ನು ತೆರವುಗೊಳಿಸುವುದು. |
| ಸತ್ತ ಪ್ರಾಣಿಗಳನ್ನು ನಿಗದಿತ ಸ್ಥಳಗಳಿಂದ 2 ಗಂಟೆಯೊಳಗೆ ವಿಲೇವಾರಿ ಘಟಕಕ್ಕೆ ಸಾಗಾಣೆ ಮಾಡುವುದನ್ನು ತೆಗೆದುಹಾಕುವ ಬಗ್ಗೆ. | ಸತ್ತ ಪ್ರಾಣಿಗಳನ್ನು ನಿಗದಿತ ಸ್ಥಳಗಳಿಂದ 2 ಗಂಟೆಯೊಳಗೆ ತೆಗೆಯಬೇಕು ಹಾಗೂ ತದ ನಂತರ ವಿಲೇವಾರಿ ಘಟಕಕ್ಕೆ ಸಾಗಾಣೆ ಮಾಡುವುದು |
| ಇಎಂಡಿ ಮೊತ್ತವನ್ನು ಗುತ್ತಿಗೆಯ ಅವಧಿಯ ಮುಗಿದ ನಂತರ ಹಿಂತಿರುಗಿಸುವ ಬಗ್ಗೆ | ಯಶಸ್ವಿಯಾದ ಬಿಡ್ಡುದಾರರಿಗೆ ಇ.ಎಂ.ಡಿ ಮೊತ್ತವನ್ನು, ಕಾರ್ಯಾಧಾರಿತ ಭದ್ರತೆಯನ್ನು ನೀಡಿದ ನಂತರ ಹಿಂತಿರುಗಿಸಲಾಗುವುದು. |
| ಗುತ್ತಿಗೆದಾರರು ತಾವು ನೇಮಿಸಿಕೊಂಡಿರುವ ಕಾರ್ಮಿಕರಿಗೆ ವೇತನವನ್ನು ಚೆಕ್ ಮೂಲಕ ಅಥವಾ ನಗದು ರೂಪದಲ್ಲಿ ನೀಡುವ ಬಗ್ಗೆ ಹಾಗೂ ಪೌರಕಾರ್ಮಿಕರು 20 ದಿನಗಳಿಗಿಂತ ಹೆಚ್ಚಾಗಿ ಕೆಲಸ ನಿರ್ವಹಿಸಿದ್ದಲ್ಲಿ ಮಾತ್ರ ಚೆಕ್ ಮೂಲಕ ವೇತನ ಪಾವತಿಸುವ ಬಗ್ಗೆ. ಇದಲ್ಲದೆ ಬ್ಯಾಂಕನ ಮೂಲಕ ಸೂಕ್ತ ವಿಧಾನದಲ್ಲಿ ಪಾವತಿಸುವ ಬಗ್ಗೆ. | ಗುತ್ತಿಗೆದಾರರು ತಾವು ನೇಮಿಸಿಕೊಂಡಿರುವ ಕಾರ್ಮಿಕರು 8 ದಿನಗಳಿಗಿಂಗ ಹೆಚ್ಚಾಗಿ ನಿರ್ವಹಿಸಿದ್ದಲ್ಲಿ, ಅಂತಹವರಿಗೆ ವೇತನವನ್ನು ಚೆಕ್ ಮೂಲಕ/ಇ.ಸಿ.ಎಸ್/ಕಾರ್ಮಿಕರ ಬ್ಯಾಂಕ ಖಾತೆಗೆ ನೇರ ಜಮಾ ಮಾಡುವುದು. ಕಾರ್ಮಿಕವಾರು ಪಾವತಿಯಾದ ಬ್ಯಾಂಕಿನ ವರದಿಯನ್ನು ಪಾಲಿಕೆಗೆ ಒದಗಿಸುವುದು. |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಏಕವ್ಯಕ್ತಿಗಳಿಗೂ ಟೆಂಡರಿನ ಇ.ಎಂ.ಡಿ ಮತ್ತು ಆರ್ಥಿಕ ಸಾಮರ್ಥ್ಯದಲ್ಲಿ ವಿನಾಯಿತಿ ನೀಡುವ ಬಗ್ಗೆ. | ನೊಂದಾಯಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಟೆಂಡರಿನ ಇ.ಎಂ.ಡಿ ಮತ್ತು ಆರ್ಥಿಕ ಸಾಮರ್ಥ್ಯದಲ್ಲಿ ನೀಡಿರುವ ವಿನಾಯಿತಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಏಕವ್ಯಕ್ತಿಗಳಿಗೂ ಸಹ ವಿಸ್ತರಿಸಲಾಗಿರುತ್ತದೆ. |
| ದಸ್ತಾವೇಜಿನ ಅಂಶ 1.17 ನ್ನು (ಕಾಲಾನುಕ್ರಮವಾಗಿ ಕಾರ್ಮಿಕರ ವೇತನ ಹೆಚ್ಚಾದಲ್ಲಿ ಸದರಿ ಹೆಚ್ಚುವರಿ ವೇತನವನ್ನು ಬಿಬಿಎಂಪಿ ವತಿಯಿಂದ ಪಾವತಿಸುವ ಬಗ್ಗೆ) ಒಡಂಬಡಿಕೆ ಪತ್ರದಲ್ಲಿ ಅಳವಡಿಕೊಳ್ಳುವ ಕುರಿತು | ದಸ್ತಾವೇಜಿನ ಅಂಶ 1.17 ನ್ನು (ಕಾಲಾನುಕ್ರಮವಾಗಿ ಕಾರ್ಮಿಕರ ವೇತನ ಹೆಚ್ಚಾದಲ್ಲಿ ಸದರಿ ಹೆಚ್ಚುವರಿ ವೇತನವನ್ನು ಬಿಬಿಎಂಪಿ ವತಿಯಿಂದ ಪಾವತಿಸುವ ಬಗ್ಗೆ) ಒಡಂಬಡಿಕೆ ಪತ್ರದಲ್ಲಿ ಅಳವಡಿಸಲಾಗಿರುತ್ತದೆ. |
| ದಂಡ ಜುಲ್ಮಾನೆಯಲ್ಲಿ ಮಾಸಿಕ ಗುತ್ತಿಗೆ ಮೊತ್ತದ ಶೇ.1 ರ ಬದಲು ದಿನದ ಗುತ್ತಿಗೆ ಮೊತ್ತದ ಶೇ.1 ರಂತೆ ನಿಗಧಿಸುವುದು ಹಾಗು ಅಂಶ 10 & 11 ನ್ನು ಮರುಪರಿಶೀಲಿಸುವುದು. | ದಂಡ ಜುಲ್ಮಾನೆಯಲ್ಲಿ ಮಾಸಿಕ ಗುತ್ತಿಗೆ ಮೊತ್ತದ ಶೇ.1 ರ ಬದಲು ದಿನದ ಗುತ್ತಿಗೆ ಮೊತ್ತದ ಶೇ.5 ರಂತೆ ನಿಗಧಿಸುವುದು ಹಾಗು ಅಂಶ 11 ನ್ನು ತೆಗೆದುಹಾಕಬಹುದಾಗಿರುತ್ತದೆ.<br>ದಂಡದ ಒಟ್ಟು ಮೊತ್ತವು ಮಾಸಿಕ ಗುತ್ತಿಗೆ ಮೌಲ್ಯದ ಶೇ 10 ರ ಬದಲಾಗಿ ಶೇ5 ರಷ್ಟನ್ನು ಅಥವಾ ಹೆಚ್ಚಾಗಿ/ ನಿರಂತರವಾಗಿ ಮೂರು ತಿಂಗಳು ಪಾವತಿಸಿದರೆ ಅಂತಹ ಸಂಧರ್ಭದಲ್ಲಿ "ಗುತ್ತಿಗೆದಾರರ ವೈಫಲ್ಯವೆಂದು ಪರಿಗಣಿಸಿ ಗುತ್ತಿಗೆಯನ್ನು ಅಂತ್ಯಗೊಳಿಸುವುದು, ಕಾರ್ಯಾಧಾರಿತ ಭದ್ರತಾಠೇವಣಿಯನ್ನು ಮೊಟಕುಗೊಳಿಸುವುದು. ಮತ್ತು ಇವರನ್ನು ಕಪ್ಪು ಪಟ್ಟಿಗೆ ಸೇರಿಸುವುದು.<br>ಅಲ್ಲದೇ ಹೊಸ ಗುತ್ತಿಗೆದಾರರು ಬರುವವರೆಗೂ ಇವರಿಂದಲೇ ಕಾರ್ಯ ನಿರ್ವಹಿಸುವುದು" ಎಂಬ ನಿಬಂಧನೆಯನ್ನು ತೆಗೆದುಹಾಕಲಾಗಿರುತ್ತದೆ. |
| ಟೆಂಡರ್ ಸಲ್ಲಿಸುವ ಅವಧಿಯನ್ನು ಇಗಿರುವ ಅವಧಿಗಿಂತ ಹೆಚ್ಚುವರೆಯಾಗಿ 10 ದಿನಗಳಿಗೆ (ಅಂದರೆ ದಿ. 20-01-2012 ರವರೆಗೆ) ವಿಸ್ತರಿಸುವ ಬಗ್ಗೆ. | ಟೆಂಡರ್ ಸಲ್ಲಿಸುವ ದಿನಾಂಕವನ್ನು ದಿ:10-01-2012 ರ ಬದಲು ದಿನಾಂಕ:18-01-2012ರವರೆಗೆ ಹಾಗೂ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ದಿ:13-01-2012ರ ಬದಲು ದಿ:21-01-2012ರವರೆಗೆ ವಿಸ್ತರಿಸಲಾಗಿರುತ್ತದೆ. |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾ...
ಬೆಂಗಳೂರು

ಮೇಲ್ಕಂಡ ನಿಬಂಧನೆಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಮಾರ್ಪಾಡು ಮಾಡಲಾಗಿದ್ದು, ಸದರಿ ಮಾರ್ಪಾಡುಗಳಿಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ**.

**3. ವಿಷಯದ ಸಂಖ್ಯೆ: ಸಾಆಸ್ಥಾಸ/54/2011-12:**

ಸಂಖ್ಯೆ ಆ.ಅ.(ದ)ಪಿಆರ್/335/11-12, ದಿನಾಂಕ: 10-01-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಾಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ಕೆ 198 ವಾರ್ಡ್‌ಗಳಿಗೆ ಪ್ರಸ್ತುತ ಪ್ರತಿ ವಾರ್ಡ್‌ಗೆ 03 ಜನ ಔಷಧಿ ಸಿಂಪರಣೆಗಾರರು ಮತ್ತು 27 ವಿಧಾನಸಭಾ ಕ್ಷೇತ್ರದ ಉಪ ಆರೋಗ್ಯಾಧಿಕಾರಿಗಳ ವಿಭಾಗ ಕಛೇರಿಗಳಿಗೆ ತಲಾ ಒಂದು ಪವರ್ ಸ್ಪ್ರೈ ಯಂತ್ರ ಮತ್ತು ಬಾಡಿಗೆ ಆಟೋ ಹಾಗೂ ಪ್ರತಿ ವಲಯಕ್ಕೆ 05 ಜನ ಹೆಚ್ಚುವರಿ ಔಷಧಿ ಸಿಂಪರಣೆಗಾರರನ್ನು ನಿಯೋಜಿಸಿಕೊಂಡು ಸೊಳ್ಳೆ ನಿಯಂತ್ರಣ ಕಾರ್ಯ ನಡೆಸಲಾಗುತ್ತಿದೆ. ಸದರಿ ಕಾರ್ಯಕ್ಕೆ ಅಂದಾಜು ಕಾರ್ಮಿಕರಿಗೆ ವೇತನ ರೂ.24,69,000/- ಹಾಗೂ ಪವರ್ ಸ್ಪ್ರೈ ಆಟೋ ಮತ್ತು ಪ್ರಚಾರ ಕಾರ್ಯಕ್ಕೆ ರೂ.2,91,000/- ಗಳನ್ನು ಪ್ರತಿ ಮಾಹೆಗೆ ನೀಡಲಾಗುತ್ತಿದೆ. ಹಾಗೂ ಸೊಳ್ಳೆ ನಿಯಂತ್ರಣ ಕಾರ್ಯದ ಮೇಲ್ವಿಚಾರಣೆಗೆ ಮುಖ್ಯ ಆರೋಗ್ಯಾಧಿಕಾರಿಗಳು, ಆರೋಗ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು, ಹಿರಿಯ ಆರೋಗ್ಯ ಪರಿವೀಕ್ಷಕರು ಹಾಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸೊಳ್ಳೆ ನಿಯಂತ್ರಣದ ಕಾರ್ಯಕ್ರಮವನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಲು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣದ ಕಾರ್ಯಕ್ರಮದಡಿಯಲ್ಲಿ ಒಂದು Task Force ರಚಿಸಿ ಸದರಿ Task Force ಮುಖಾಂತರ ಪ್ರತಿ ದಿನದ ಸೊಳ್ಳೆ ನಿಯಂತ್ರಣ ಕಾರ್ಯದ ವರದಿ ಪಡೆಯಬೇಕಾಗಿರುತ್ತದೆ.

ಸದರಿ Task Force ಗೆ Entomologists ಎರಡು ಜನ ಮತ್ತು ಕೀಟ ಸಂಗ್ರಹಗಾರರು ಎರಡು ಜನರ ಅವಶ್ಯವಿರುತ್ತದೆ. ಹಾಗೂ ಪ್ರಪಂಚದಾದ್ಯಂತ ಹಾಗೂ ದೇಶದ ವಿವಿಧ ರಾಜ್ಯಗಳಲ್ಲಿ ಮೇಲ್ಕಂಡ Task Force ಗಳು ಕಾರ್ಯನಿರ್ವಹಿಸುತ್ತಿವೆ.

ಆದ್ದರಿಂದ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಡೆಂಗೀ ರೋಗ ತಡೆಗಟ್ಟಲು ಅವಶ್ಯವಿರುವ Task Force ಪ್ರಾರಂಭಿಸಿ ಕಾರ್ಯನಿರ್ವಹಿಸಲು 2 ಜನ Entomologists ಮತ್ತು 2 ಜನ ಕೀಟ ಸಂಗ್ರಹಗಾರರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲು ಹಾಗೂ ಸದರಿ ಕಾರ್ಯಕ್ಕೆ ತಗಲುವ ವೆಚ್ಚದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದ್ದು, ಸದರಿ ಮೊತ್ತವು ಒಂದು ಲಕ್ಷದ ಮಿತಿಯೊಳಗಿದ್ದು, ಸದರಿ ಮೊತ್ತವನ್ನು ಆಯವ್ಯಯದ ಪಿಓ 126, ಪಿಓ 128, ಮತ್ತು ಪಿಓ 1534 ಗಳಲ್ಲಿ ಭರಿಸಬಹುದಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ**.

**4. ವಿಷಯದ ಸಂಖ್ಯೆ: ಸಾಆಸ್ಥಾಸ/55/2011-12:**

ಆಯುಕ್ತರ ದಿನಾಂಕ: 25-01-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ವಿಲೇವಾರಿಯು ಒಂದು ದೊಡ್ಡ ಸಮಸ್ಯೆಯಾಗಿದ್ದು ಈಗಾಗಲೇ ಉತ್ಪತ್ತಿಯಾಗುತ್ತಿರುವ 3500 ಟನ್ ತ್ಯಾಜ್ಯವನ್ನು ವಿಲೇವಾರಿ ಮಾಡಲು ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಿರುವುದರಿಂದ, ಈ ಸಮಸ್ಯೆಗೆ ಪರಿಹಾರ ಹುಡುಕಲು ಅಂದಿನ ಪೂಜ್ಯ ಮಹಾಪೌರರಾಗಿದ್ದ ಶ್ರೀ.ಎಸ್.ಕೆ.ನಟರಾಜ್ ರವರು, ಉಪ ಮಹಾಪೌರರು, ವಿರೋಧ ಪಕ್ಷದ ನಾಯಕರು ಹಾಗೂ ಆಡಳಿತ ಪಕ್ಷದ ನಾಯಕರನ್ನೊಳಗೊಂಡ ತಂಡವು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಹ ಸಂಪೂರ್ಣ ಸ್ವಯಂಚಾಲಿತ ಸಂಸ್ಕರಣಾ ಘಟಕವನ್ನು ಅಳವಡಿಸಿಕೊಳ್ಳುವ ಉದ್ದೇಶದಿಂದ ದಿನಾಂಕ: 02-09-2010 ರಂದು ಮುಂಬೈಗೆ ಅಧ್ಯಯನ ಪ್ರವಾಸ ಕೈಗೊಂಡು, ಈಗಾಗಲೇ ಸ್ಥಾಪನೆಯಾಗಿರುವ ಸಂಪೂರ್ಣ ಸ್ವಯಂಚಾಲಿತ ಸಂಸ್ಕರಣಾ ಘಟಕವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿ ಸದರಿ ಘಟಕ ಸ್ಥಾಪನೆಯ ಪ್ರಕ್ರಿಯೆಯನ್ನು ಈ ಕೆಳಗಿನಂತೆ ಕೈಗೊಳ್ಳಲಾಗಿರುತ್ತದೆ.

- "Fully Automated Segregation Plant" ನ್ನು ಸ್ಥಾಪಿಸಲು ಪಾಲಿಕೆ ಸಭೆ ದಿನಾಂಕ: 29.09.2010 ವಿಷಯ ಸಂಖ್ಯೆ:1(110)/2010-11, ರಲ್ಲಿ ಪಾಲಿಕೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

- ದಿನಾಂಕ:23.10.2010 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು, **Fully Automated Segregation Plant** ಅಳವಡಿಸುವುದಾಗಿ ಲೋಕಾ ಅದಾಲತ್ ನ್ಯಾಯಾಲಯಕ್ಕೆ ಮಾನ್ಯ ಆಯುಕ್ತರಿಂದ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿರುತ್ತದೆ.

- ದಿನಾಂಕ: 25-10-2010 **Fully Automated Segregation Plant** ನ್ನು ಅಳವಡಿಸುವುದು ಸೇರಿದಂತೆ ಘನತ್ಯಾಜ್ಯ ವಸ್ತುಗಳ ನೂತನ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಪತ್ರ ಸಲ್ಲಿಸಲಾಗಿರುತ್ತದೆ.

- **Fully Automated Segregation Plant** ನ್ನು ಅಳವಡಿಸಲು ದಿನಾಂಕ: 17-01-2011 ರಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೋಫೆಸರ್ ಆದ ಶ್ರೀ.ಚಾಣಕ್ಯ ರವರನ್ನೊಳಗೊಂಡಂತೆ ಈ ಕೆಳಕಂಡ ಅಧಿಕಾರಿಗಳ ತಾಂತ್ರಿಕ ಪರಿಣಿತರ ಸಮಿತಿಯನ್ನು ರಚಿಸಲಾಗಿರುತ್ತದೆ.

1. **Dr.Dasappa, Principal Research Scientist, CGPL, IISC.**
2. **Sri.M.D.N.Simha, Chief Environmental Officer, KSPCB.**
3. **Sri.H.Rajasimha, Technical Advisor to Commissioner, BBMP.**
4. **Sri.K.T.Nagaraj, Superintendent Engineer (Major Roads), BBMP.**
5. **Sri.S.Prabhakar, Superintendent Engineer (TVCC), BBMP.**
6. **Sri.Parameshwaraiah, Superintendent Engineer (West), BBMP.**
7. **Sri.Basavaiah, Advisor (SWM), BBMP.**
8. **Sri.Balachandar, Executive Engineer-2 (SWM), BBMP.**

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ **Fully Automated Segregation Plant** ಅಳವಡಿಸಿಕೊಳ್ಳಲು ಟೆಂಡರ್ ಆಹ್ವಾನಿಸಲು ಸರ್ಕಾರದ ಅಧಿಕಾರಯುಕ್ತ ಸಮಿತಿಯಿಂದ ಅನುಮೋದನೆ ದೊರೆತಿರುತ್ತದೆ.

- ದಿನಾಂಕ: 24-02-2011ರಂದು ಮಹಾಪೌರರ ಅಧ್ಯಕ್ಷತೆ ಸಭೆಯಲ್ಲಿ **Fully Automated Segregation Plant** ನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡಲಾಗಿರುತ್ತದೆ.

- ದಿನಾಂಕ: 11-03-2011ರಂದು ಮೊದಲನೆ ಬಾರಿಗೆ ಟೆಂಡರ್ ಆಹ್ವಾನ.

**1ST CALL TENDER**

**Tender called on: 11-03-2011**
**Last date for submission of Tender on: 21-04-2011**
**Technical bid opened on: 23-04-2011**
**Finacial Bid opened on: 19-08-2011**

ಸದರಿ ಟೆಂಡರ್‌ನಲ್ಲಿ

1. ಮೆ॥ರಾಂಕೀ ಎನರ್ಜಿ ಅಂಡ್ ಎನವಿರನ್‌ಮೆಂಟ್ ಲಿಮಿಟೆಡ್. ಮತ್ತು
2. ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್
3. ಮೆ॥ಸತಾರೆಂ ಎಂಟರ್‌ಪ್ರೈಸೆಸ್ ಪ್ರೈವೆಟ್ ಲಿಮಿಟೆಡ್ ಎಂಬ ಮೂರು ಸಂಸ್ಥೆಗಳು ಭಾಗವಹಿಸಿದ್ದವು.

ಮೊದಲನೇ ಕರೆಯ ಟೆಂಡರ್‌ನಲ್ಲಿ ಭಾಗವಹಿಸಿದ್ದ ಬಿಡ್ಡುದಾರರು ಸ್ಲಲಿಸಿದ್ದ ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನ ಕಾರ್ಯವನ್ನು ಮೆ॥ಐಡೆಕ್ ಸಂಸ್ಥೆರವರಿಗೆ ವಹಿಸಲಾಗಿತ್ತು.

ಮೆ॥ಐಡೆಕ್ ಸಂಸ್ಥೆರವರು ಮೊದಲನೆ ಕರೆಯ ಟೆಂಡರನಲ್ಲಿ ಸಲ್ಲಿಕೆಯಾಗಿದ್ದ,

1. ಮೆ॥ರಾಂಕೀ ಎನರ್ಜಿ ಅಂಡ್ ಎನವಿರನ್‌ಮೆಂಟ್ ಲಿಮಿಟೆಡ್
2. ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್
3. ಮೆ॥ಸತಾರೆಂ ಎಂಟರ್‌ಪ್ರೈಸೆಸ್ ಪ್ರೈವೆಟ್ ಲಿಮಿಟೆಡ್

ಅಧ್ಯಕ್ಷರು,
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸಂಸ್ಥೆಗಳ ತಾಂತ್ರಿಕ ಬಿಡ್‌ಗಳನ್ನು ಪರಿಶೀಲಿಸಿ, ಸದರಿ ಕಂಪೆನಿಗಳು ಟೆಂಡರ್ ಷರತ್ತು ಮತ್ತು ನಿಬಂಧನೆ ಹಾಗೂ ಟೆಂಡರ್‌ನಲ್ಲಿ ನಮೂದಿಸಿರುವ ದಾಖಲೆಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಸದರಿ ಬಿಡ್ಡುದಾರರು ಸ್ಥಾಪಿಸಿರುವ ಘಟಕಗಳ ಸ್ಥಳ ಪರಿಶೀಲನೆ ನಡೆಸಿ, ಸದರಿ ಬಿಡ್ಡುದಾರರಿಂದ ಸದರಿ ಯೋಜನೆ ಬಗ್ಗೆ ಸಂಪೂರ್ಣ ಪ್ರಾತ್ಯಕ್ಷಿಕೆ ವಿವರ ಹಾಗೂ ಸಂಪೂರ್ಣ ಯೋಜನಾ ವಿವರ (ಡಿ.ಪಿ.ಆರ್), ಯೋಜನೆ ಅನುಷ್ಠಾನಗೊಳಿಸುವ ವಿಧಾನ, ಉತ್ಪಾದಿಸುವ ಗೊಬ್ಬರದ ಮಾರಾಟ, ಸಂಸ್ಕರಿತ ಘನತ್ಯಾಜ್ಯದಿಂದ ಉತ್ಪಾದಿಸುವ ಆರ್.ಡಿ.ಎಫ್ ಪ್ರಮಾಣದ ವಿವರಗಳನ್ನು ಪಡೆದು ತದನಂತರ ಅರ್ಹ ಬಿಡ್ಡುದಾರರನ್ನು ಆಯ್ಕೆಗೊಳಿಸುವ ಬಗ್ಗೆ ಮೆ॥ ಐಡೆಕ್ ಸಂಸ್ಥೆರವರು ತಾಂತ್ರಿಕ ಬಿಡ್ **Evaluation Report** ವರದಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ, ಪ್ರಧಾನ ಅಭಿಯಂತರರ ನೇತೃತ್ವದಲ್ಲಿ ಮುಖ್ಯ ಅಭಿಯಂತರರು (ಪರಿಸರ ಕೋಶ), ಅಧೀಕ್ಷಕ ಅಭಿಯಂತರರು (ಪರಿಸರ ಕೋಶ), ಕಾರ್ಯಪಾಲಕ ಅಭಿಯಂತರರು-2 (ಘನತ್ಯಾಜ್ಯ ನಿರ್ವಹಣೆ), ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಮತ್ತು ಕಿರಿಯ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರುಗಳ ತಂಡವು ದಿನಾಂಕ: 24-07-2011 ರಂದು ತಮಿಳುನಾಡಿನ ಸೇಲಂನಲ್ಲಿರುವ ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಘಟಕಕ್ಕೆ ಮತ್ತು ದಿನಾಂಕ: 25-07-2011 ರಂದು ಮೆ॥ರಾಂಕೀ ಎನರ್ಜಿ & ಎನ್ವಿರನ್‌ಮೆಂಟ್ ಲಿಮಿಟೆಡ್ ಘಟಕಕ್ಕೆ ಭೇಟಿ ನೀಡಿ ಘಟಕಗಳನ್ನು ಪರಿಶೀಲಿಸಿರುತ್ತದೆ.

ಸದರಿ ಒಂದನೆ ಕರೆಯ ಟೆಂಡರ್‌ನಲ್ಲಿ ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸೇಲಂ ಘಟಕವು ಟೆಂಡರ್ ಷರತ್ತುಗಳನ್ನು ಪೂರೈಸುವಲ್ಲಿ ಯಶಸ್ವಿಯಾಗಿತ್ತು.

ಮೆ॥ ರಾಂಕೀ ಎನರ್ಜಿ ಅಂಡ್ ಎನವಿರನ್‌ಮೆಂಟ್ ಲಿಮಿಟೆಡ್ ರವರ ಘಟಕವು ಟೆಂಡರ್ ಷರತ್ತಗಳನ್ನು ಪೂರೈಸುವಲ್ಲಿ ವಿಫಲವಾಗಿದ್ದರಿಂದ ಸದರಿ ಸಂಸ್ಥೆಯ ಬಿಡ್ ತಿರಸ್ಕರಿಸಿ ಮೆ॥ ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯ ಆರ್ಥಿಕ ಬಿಡ್ ತೆರೆಯಲು ತೀರ್ಮಾನಿಸಲಾಗಿ, ಆರ್ಥಿಕ ಬಿಡ್‌ನಲ್ಲಿ ಮೆ॥ ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯವರು ಒಬ್ಬರೇ ಬಿಡ್ಡುದಾರರಾಗಿದ್ದರಿಂದ ಹಾಗೂ ಈ ಟೆಂಡರಅನ್ನು ಪ್ರಥಮ ಬಾರಿಗೆ ಆಹ್ವಾನಿಸಲಾಗಿದ್ದರಿಂದ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಸ್ಪರ್ಧಾತ್ಮಕ ಬಿಡ್‌ಗಳಿಗೆ ಪ್ರಾಮುಖ್ಯತೆ ನೀಡುವ ದೃಷ್ಟಿಯಿಂದ ಸದರಿ ಟೆಂಡರ್ ಅನ್ನು ರದ್ದುಗೊಳಿಸಿ ಮರು ಟೆಂಡರ್ ಕರೆಯಲು ತೀರ್ಮಾನಿಸಲಾಯಿತು.

ಅದರಂತೆ, 2ನೇ ಬಾರಿಗೆ ಟೆಂಡರ್ ಆಹ್ವಾನಿಸಲಾಯಿತು. ವಿವರ ಈ ಕೆಳಕಂಡಂತಿದೆ.

**<u>2ND CALL TENDER</u>**

**Tender called on: 08-09-2011.**
**Last date for submission of Tender on: 17-10-2011.**
**Technical bid opened on: 20-10-2011.**

ಹಾಲಿ ಆಹ್ವಾನಿಸಲಾಗಿರುವ ಎರಡನೇ ಕರೆಯ ಟೆಂಡರ್‌ನಲ್ಲಿ ಮೆ॥ ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯ ಏಕೈಕ ಬಿಡ್ ಸಲ್ಲಿಕೆಯಾಗಿರುತ್ತದೆ.

ಸದರಿ ಬಿಡ್ಡುದಾರರಾದ ಮೆ॥ ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯವರು ಮೊದಲನೇ ಕರೆಯ ಟೆಂಡರ್‌ನಲ್ಲಿ ಸಲ್ಲಿಸಿರುವ ತಾಂತ್ರಿಕ ಬಿಡ್ ದಾಖಲೆಗಳನ್ನೇ ಎರಡನೇ ಕರೆಯ ಟೆಂಡರ್‌ನಲ್ಲಿಯೂ ಸಲ್ಲಿಸಿದ್ದು, ಸದರಿ ಟೆಂಡರ್‌ಗೆ ನಿಗಧಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿ ಯಶಸ್ವಿ ಬಿಡ್ಡುದಾರರಾಗಿರುತ್ತಾರೆ. ಹಾಗೂ ಸದರಿ ಬಿಡ್ಡುದಾರರು ನಿರ್ಮಿಸಿರುವ ಘಟಕವನ್ನು ಪ್ರಧಾನ ಅಭಿಯಂತರರ ನೇತೃತ್ವದ ತಾಂತ್ರಿಕ ಸಮಿತಿಯು ಪರಿಶೀಲಿಸಿ ಘಟಕವು ಟೆಂಡರ್ ಷರತ್ತು ಮತ್ತು ನಿಬಂಧನೆಗೆ ಅನುಗುಣವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ಈಗಾಗಲೇ ವರದಿ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್ ತೆರೆಯಲು ತೀರ್ಮಾನಿಸಿ, ಆರ್ಥಿಕ ಬಿಡ್‌ಅನ್ನು ದಿನಾಂಕ: 09-11-2011 ರಂದು ತೆರೆದು ಪರಿಶೀಲಿಸಲಾಗಿರುತ್ತದೆ.

ಈ ಯೋಜನೆಗೆ ಸದರಿ ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯವರು ಟಿಪ್ಪಿಂಗ್ ಫೀಸ್ ರೂಪದಲ್ಲಿ ಪಾಲಿಕೆಯು ಒದಗಿಸುವ ಪ್ರತಿ ಮೆ.ಟನ್ ಘನತ್ಯಾಜ್ಯ ಸಂಸ್ಕರಣೆಗೆ ರೂ.83.00 (ಎಂಬತ್ಮೂ ರು ರೂಪಾಯಿಗಳು ಮಾತ್ರ) ಗಳನ್ನು ಪಾಲಿಕೆ ವತಿಯಿಂದ ಪಾವತಿಸಲು ಕೋರಿ ದರವನ್ನು ನಮೂದಿಸಿರುತ್ತಾರೆ.

ಸದರಿ ಸಂಸ್ಥೆಯವರು ನಮೂದಿಸಿರುವ ಟಿಪ್ಪಿಂಗ್ ಫೀಸ್ ಅನ್ನು ಕಡಿಮೆ ಮಾಡುವಂತೆ ದರ ಸಂಧಾನಕ್ಕೆ ಆಹ್ವಾನಿಸಲಾಗಿ, ದರ ಸಂಧಾನಕ್ಕೆ ಸ್ಪಂದಿಸಿ ಸದರಿ ಸಂಸ್ಥೆಯವರು ಈ ಹಿಂದೆ ನಮೂದಿಸಿದ ಪ್ರತಿ ಮೆ.ಟನ್ ಘನತ್ಯಾಜ್ಯದ ಸಂಸ್ಕರಣೆಗೆ ಪಾಲಿಕೆ ವತಿಯಿಂದ ಪಾವತಿಸಲು ಕೋರಿದ್ದ ರೂ.83/-ಗಳನ್ನು ರೂ.81/- (ಎಂಬತ್ತೊಂದು ರೂಗಳು ಮಾತ್ರ) ಗಳಿಗೆ ಕಡಿಮೆ ಮಾಡಿ ದರ ಸಂಧಾನ ಪತ್ರ ನೀಡಿದ್ದರು. ದಿನಾಂಕ: 09-01-2012 ರಂದು ಮತ್ತೊಮ್ಮೆ ದರ ಸಂಧಾನ ನೆಡೆಸಲಾಗಿ, ಸದರಿ ಸಂಸ್ಥೆರವರು ಪ್ರತಿ ಮೆಟ್ರಿಕ್ ಟನ್ ತ್ಯಾಜ್ಯ ಸಂಸ್ಕರಣೆಗಾಗಿ ಟಿಪ್ಪಿಂಗ್ ಫೀ ಅನ್ನು ರೂ.81/- ಗಳಿಂದ ರೂ.70/-ಗಳಿಗೆ ಇಳಿಸಿ ದರ ಸಂಧಾನ ಪತ್ರ ನೀಡಿರುತ್ತಾರೆ.

ಮೇಲಿನ ಹಿನ್ನೆಲೆಯಲ್ಲಿ ಸದರಿ ಸಂಪೂರ್ಣ ಸ್ವಯಂಚಾಲಿತ **(Automated Segregation Plant)** ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಕೌನ್ಸಿಲ್ ಸಭೆಯಲ್ಲಿ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಕೋರಿ ಟಿಪ್ಪಣಿ ಮಂಡಿಸಲಾಗಿದೆ.

I. ಪ್ರತಿದಿನ 750 ಮೆ.ಟನ್ ಪೌರ ಘನತ್ಯಾಜ್ಯವನ್ನು ಸಂಸ್ಕರಿಸುವ ಸಂಪೂರ್ಣ ಸ್ವಯಂಚಾಲಿತ **(Automated Segregation Plant)** ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು **DBOT** ಆಧಾರದ ಮೇಲೆ ಸ್ಥಾಪಿಸಲು ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯವರಿಗೆ 20 ವರ್ಷ ಕಾಲಾವಧಿಗೆ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಆರ್.ಆರ್.ನಗರ ವಲಯದ ಸುಬ್ಬರಾಯನಪಾಳ್ಯ ಗ್ರಾಮದ ಸರ್ವೆ.ನಂ.142ರ ತ್ಯಾಜ್ಯ ವಿಲೇವಾರಿ ಘಟಕದ 10 ಎಕರೆ ಪ್ರದೇಶವನ್ನು ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ.

2. ಪ್ರತಿದಿನ 750 ಮೆ.ಟನ್ ಪೌರ ಘನತ್ಯಾಜ್ಯವನ್ನು ಸಂಸ್ಕರಿಸುವ ಸಂಪೂರ್ಣ ಸ್ವಯಂಚಾಲಿತ **(Automated Segregation Plant)** ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು **DBOT** ಆಧಾರದ ಮೇಲೆ ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಆರ್.ಆರ್.ನಗರ ವಲಯದ ಸುಬ್ಬರಾಯನಪಾಳ್ಯ ಗ್ರಾಮದ ಸರ್ವೆ.ನಂ.142ರ ತ್ಯಾಜ್ಯ ವಿಲೇವಾರಿ ಘಟಕ ಪ್ರದೇಶದಲ್ಲಿ ಸ್ಥಾಪಿಸಲು ಅನುಮೋದನೆ.

3. ಮೆ॥ಹಂಜೀರ್ ಬಯೋಟೆಕ್ ಎನರ್ಜಿಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆರವರು ಘನತ್ಯಾಜ್ಯ ಸಂಸ್ಕರಣೆಗಾಗಿ ನಮೂದಿಸಿರುವ ಟಿಪ್ಪಿಂಗ್ ಫೀ ಮೊತ್ತ ಪ್ರತಿ ಮೆಟ್ರಿಕ್ ಟನ್ ಘನತ್ಯಾಜ್ಯಕ್ಕೆ ರೂ.70/- (ಎಪ್ಪತ್ತು ರೂಗಳು ಮಾತ್ರ) ಅನ್ನು ಪಾವತಿಸಲು ಅನುಮೋದನೆ.

4. ಸದರಿ 750 ಮೆ.ಟನ್ ಪೌರ ಘನತ್ಯಾಜ್ಯವನ್ನು ಸಂಸ್ಕರಿಸುವ ಸಂಪೂರ್ಣ ಸ್ವಯಂಚಾಲಿತ **(Automated Segregation Plant)** ಘನತ್ಯಾಜ್ಯ ಸಂಸ್ಕರಣಾ ಘಟಕವನ್ನು **DBOT** ಆಧಾರದ ಮೇಲೆ ಆರ್.ಆರ್.ನಗರ ವಲಯದ ಸುಬ್ಬರಾಯನಪಾಳ್ಯ ಗ್ರಾಮದ ಸರ್ವೆ.ನಂ.142ರ ತ್ಯಾಜ್ಯ ವಿಲೇವಾರಿ ಘಟಕ ಪ್ರದೇಶದಲ್ಲಿ ಸ್ಥಾಪಿಸಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲು ಅನುಮೋದನೆ.

ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 25-01-2012 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**5. ವಿಷಯದ ಸಂಖ್ಯೆ: ಸಾಆಸ್ಥಾಸ/56/2011-12:**

ಆಯುಕ್ತರ ದಿನಾಂಕ: 25-01-2012 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 198 ವಾರ್ಡ್‌ಗಳಿದ್ದು, ಸುಮಾರು 800 ಚ.ಕೀ ವಿಸ್ತೀರ್ಣ ಹಾಗೂ 80.00 ಲಕ್ಷ ಜನಸಂಖ್ಯೆಯನ್ನು ಹೊಂದಿರುತ್ತದೆ. ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ ದಿನ ಸುಮಾರು 3000 ಮೆಟ್ರಿಕ್ ಟನ್ ಘನ ತ್ಯಾಜ್ಯ ಉತ್ಪತ್ತಿಯಾಗುತ್ತಿರುತ್ತದೆ, ಮುಂದಿನ 2 ರಿಂದ 3 ವರ್ಷಗಳ ಅವಧಿಯಲ್ಲಿ ಅಂದರೆ ಸುಮಾರು **2015ನೇ ಇಸವಿಯ ಹೊತ್ತಿಗೆ** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಟ್ಟು ಘನ ತ್ಯಾಜ್ಯ ಉತ್ಪಾದನೆ ಪ್ರಮಾಣವು **7129 ಮೆಟ್ರಿಕ್‌ಟನ್** ಆಗಬಹುದೆಂದು ಅಂದಾಜಿಸಲಾಗಿದೆ.

ಈಗಾಗಲೇ ಪಾಲಿಕೆಯು ಪ್ರತಿದಿನ ಘನ ತ್ಯಾಜ್ಯ ಸಂಸ್ಕರಣೆ /ವಿಲೇವಾರಿಗೆ ಈ ಕೆಳಗಿನಂತೆ ವಿವಿಧ ಸಂಸ್ಥೆಗಳೊಂದಿಗೆ ಕರಾರು ಮಾಡಿಕೊಂಡಿರುತ್ತದೆ.

1. ಮೆ॥ ರಾಮ್ಕಿ ಎನರ್ಜಿ ಅಂಡ್ ಎನ್‌ವೈರನ್ ಲಿಮಿಟೆಡ್ ಸಂಸ್ಥೆ ನಿರ್ವಹಿಸುತ್ತಿರುವ ಮಾವಳ್ಳಿಪುರ ಘನ ತ್ಯಾಜ್ಯ ಸಂಸ್ಕರಣಾ ಘಟಕ - **600 ಮೆಟ್ರಿಕ್‌ಟನ್**

2. ಮೆ॥ಶ್ರೀನಿವಾಸ್ ಗಾಯಿತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ಸಂಸ್ಥೆಗೆ ಮಂಡೂರು ದಕ್ಷಿಣ ಭಾಗದಲ್ಲಿ ವಹಿಸಿರುವ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆ

   **- 1000 ಮೆಟ್ರಿಕ್‌ಟನ್**

3. ಮೆ॥ ಟೆರಾಫಾರ್ಮ್ ಬಯೋ ಟೆಕ್ನಾಲಜೀಸ್ ಲಿಮಿಟೆಡ್ ಸಂಸ್ಥೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಗುಂಡ್ಲಹಳ್ಳಿ ಘಟಕ - **1000 ಮೆಟ್ರಿಕ್‌ಟನ್**

4. ಮೆ॥ ಹಂಜಿರ್ ಬಯೋಟೆಕ್ ಲಿಮಿಟೆಡ್ ಸಂಸ್ಥೆಯ ಅಟೋಮೇಟೆಡ್ ಸೆಗ್ರೀಗೇಷನ್ ಪ್ಲಾಂಟ್, ರಾಜರಾಜೇಶ್ವರಿ ನಗರ ವಲಯದ ಸುಬ್ಬರಾಯನಪಾಳ್ಯದ ಘಟಕದಲ್ಲಿ ಉದ್ದೇಶಿಸಿರುವ (ಸದರಿ ಯೋಜನೆಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅನುಮೋದನೆಗಾಗಿ ಸಲ್ಲಿಸಿದೆ. - **750 ಮೆಟ್ರಿಕ್‌ಟನ್**

5. ಪಾಲಿಕೆಯ ವ್ಯಾಪ್ತಿಯ 198 ಒಣ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳ ಮೂಲಕ, ಪ್ರತಿ ಕೇಂದ್ರದಿಂದ ಸುಮಾರು 3 ಮೆಟ್ರಿಕ್‌ಟನ್ (ಪಾಲಿಕೆಯಲ್ಲಿ ಈಗ 40 ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳಿದ್ದು, ಉಳಿಕೆ 158 ವಾರ್ಡ್‌ಗಳಲ್ಲೂ ಸಹ ಒಣ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ).

   - **600 ಮೆಟ್ರಿಕ್‌ಟನ್**

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

6. ಈಗ ಟೆಂಡರ್ ಕರೆದು ಪ್ರಕ್ರಿಯೆಯಲ್ಲಿರುವ 16 ಬಯೋ ಮಿಥನೈಜೇಷನ್ ಅನಿಲ ಘಟಕಗಳು ಹಾಗೂ ಉದ್ದೇಶಿಸಿರುವ 8 ಘಟಕಗಳು, ಒಟ್ಟು 24 ಘಟಕಗಳಿಂದ, ಘಟಕಕ್ಕೆ 5 ಮೆಟ್ರಿಕ್‌ಟನ್ ಘನತ್ಯಾಜ್ಯ ಸಂಸ್ಕರಣೆಯಂತೆ - **120 ಮೆಟ್ರಿಕ್‌ಟನ್**

7. ಈಗ ಟೆಂಡರ್ ಕರೆದು ಪ್ರಕ್ರಿಯೆಯಲ್ಲಿರುವ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾತೈಲ ಉತ್ಪಾದಿಸುವ ಘಟಕ (ಮಂಡೂರು ಉತ್ತರ ಭಾಗದಲ್ಲಿ ಉದ್ದೇಶಿಸಿರುವ) - **10 ಮೆಟ್ರಿಕ್‌ಟನ್**

ಒಟ್ಟು **4080 ಮೆಟ್ರಿಕ್‌ಟನ್**

ಇದ್ದಲ್ಲದೆ ಆರ್ಗಾನಿಕ್ ವೇಸ್ಟ್ ಇಂಜಿನಿಯರಿಂಗ್ ಲಿಮಿಟೆಡ್ ಸಂಸ್ಥೆಯೊಂದಿಗೆ 1000 ಮೆಟ್ರಿಕ್‌ಟನ್ ಘನತ್ಯಾಜ್ಯದಿಂದ 8 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವನ್ನು ಮಂಡೂರು ಉತ್ತರ ಭಾಗದಲ್ಲಿ ಸ್ಥಾಪಿಸಲು ದಿನಾಂಕ: 31-08-2009 ರಂದು ಪಾಲಿಕೆಯು ಕರಾರು ಮಾಡಿಕೊಂಡಿದ್ದು, ಈ ಘಟಕ ಇದುವರೆಗೆ ಸ್ಥಾಪನೆಯಾಗಿರುವುದಿಲ್ಲ, ಸದರಿ ಸಂಸ್ಥೆಯು ಕರಾರಿನ ಕಾಲಾವಧಿ ವಿಸ್ತರಣೆಯನ್ನು ಕೋರಿದ್ದು, ವಿಸ್ತರಣೆಗಾಗಿ ರೂ. 20.00 ಕೋಟಿಗಳ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸಲು ಸೂಚಿಸಿದ್ದು, ಇದುವರೆಗೆ ಸ್ಪಂದಿಸಿರುವುದಿಲ್ಲ ಆದ್ದರಿಂದ ಈ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ 1000 ಮೆಟ್ರಿಕ್ ಟನ್ ಘನತ್ಯಾಜ್ಯ ಸಂಸ್ಕರಣೆಯನ್ನು ಪರಿಗಣಿಸಲಾಗಿರುವುದಿಲ್ಲ.

ಅ) ಮೇಲೆ ವಿವರಿಸಿರುವಂತೆ 2015 ರ ಹೊತ್ತಿಗೆ ಅಂದಾಜಿಸಿರುವ ಘನತ್ಯಾಜ್ಯ ಉತ್ಪಾದನೆಯ ಪ್ರಮಾಣ **7129 ಮೆಟ್ರಿಕ್‌ಟನ್**

ಆ) ಹಾಲಿ ಮತ್ತು ಉದ್ದೇಶಿಸಿರುವ ಯೋಜನೆಗಳಿಂದ ಸಂಸ್ಕರಿಸಬಹುದಾದ ಘನ ತ್ಯಾಜ್ಯದ ಪ್ರಮಾಣ **4080 ಮೆಟ್ರಿಕ್‌ಟನ್**

ಇ) ಉಳಿಕೆ ಪ್ರಮಾಣ **3049 ಮೆಟ್ರಿಕ್‌ಟನ್**

ಪ್ರತಿದಿನ ಘನತ್ಯಾಜ್ಯ ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ BOOT ಆಧಾರದಲ್ಲಿ Integrated Soild Waste Management ಘಟಕಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ಸ್ಥಾಪಿಸಲು ಈ ಕೆಳಗಿನ ಸಂಸ್ಥೆಗಳು ಪ್ರಸ್ತಾವನೆಯೊಂದಿಗೆ ಮುಂದೆ ಬಂದಿರುತ್ತವೆ.

## 1. M/s Satarem Enterprises Pvt.Ltd.,:

ಈ ಸಂಸ್ಥೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1000-1400 ಮೆಟ್ರಿಕ್ ಟನ್ ಪ್ರತಿದಿನ ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ Integrated Soild Waste Management ಘಟಕ ಸ್ಥಾಪಿಸಲು 25 ಎಕರೆ ಜಾಗವನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗೆ ಸರ್ಕಾರದ ಆದೇಶ ಸಂಖ್ಯೆ: **Government Order No:CI 263 SPI 2011, Bangalore Dated: 16-12-2011** ರಲ್ಲಿ ಘನತ್ಯಾಜ್ಯದಿಂದ 25 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಆನೇಕಲ್ ತಾಲ್ಲೂಕು, ಬಗ್ಗನದೊಡ್ಡಿ ಗ್ರಾಮದಲ್ಲಿ ಸ್ಥಾಪಿಸಲು ಪ್ರಾಸ್ತಾವಿಕ ಅನುಮೋದನೆ ನೀಡಲಾಗಿರುತ್ತದೆ **(Approved in Principle).**

## 2. Essel infraprojects Ltd., ಸಂಸ್ಥೆ ಮುಂಬೈ.

ಈ ಸಂಸ್ಥೆಯು 1000 ಮೆಟ್ರಿಕ್ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆಗೆ ಈ ಕೆಳಗಿನ ಬೇಡಿಕೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅ) 30 ಎಕರೆ 30 ವರ್ಷ ಅವಧಿಗೆ

ಆ) ಮೂಲಭೂತ ಸೌಕರ್ಯಗಳ ಘಟಕದವರೆಗೆ ರಸ್ತೆ, ವಿದ್ಯುತ್ ಸಂಪರ್ಕ ಪ್ರತಿ ದಿನ 500 ಘನ ಮೀಟರ್ ಲೀಟರ್ ನೀರು ಒದಗಿಸುವುದು.

ಇ) ಅವಶ್ಯಕ ತೀರುವಳಿಗಳನ್ನು ಪಡೆಯಲು ಪಾಲಿಕೆಯಿಂದ ಸಹಕಾರ ನೀಡುವುದು.

ಈ) ಟಿಪ್ಪಿಂಗ್ ಫೀಸ್‌ನ ಬಗ್ಗೆ ಉಭಯತ್ರರ (ಪಾಲಿಕೆ ಮತ್ತು ಸಂಸ್ಥೆ) ತಿಳುವಳಿಕೆಯೊಂದಿಗೆ ನಿರ್ಣಯಿಸುವುದು.

ವಿದ್ಯುತ್ ಉತ್ಪಾದಿಸುವ ಘಟಕದ ಯೋಜನೆಗೆ **M/s. Essel infraprojects Ltd.,** ಸಂಸ್ಥೆ ಮುಂಬೈ, ರವರು ಕೋರಿರುವ ನೀರಿನ ಸೌಲಭ್ಯವನ್ನು ಪಾಲಿಕೆಯ ವತಿಯಿಂದ ಒದಗಿಸಲು ಸಾಧ್ಯವಾಗುವುದಿಲ್ಲ. ಇದುವರೆಗಿನ ಯೋಜನೆಗಳಲ್ಲಿ ಯಾವುದೇ ಸಂಸ್ಥೆಗೆ ಪಾಲಿಕೆಯಿಂದ ನೀರು ಒದಗಿಸುವ ವ್ಯವಸ್ಥೆ ಮಾಡಿರುವುದಿಲ್ಲ. ಘಟಕ ಸ್ಥಾಪಿಸುವ ಸಂಸ್ಥೆಯವರೇ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ 1200 ಮೆಟ್ರಿಕ್ ಟನ್ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗೆ ಕೆಳಗಿನಂತೆ ಅನುಮೋದನೆ ಕೋರಿ **ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.**

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

1. 1200 ಮೆಟ್ರಿಕ್ ಟನ್ ಘನತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ **Integrated Soild Waste Management** ಘಟಕವನ್ನು **BOOT** ಆಧಾರದಲ್ಲಿ ಕನಹಳ್ಳಿ ಗ್ರಾಮದ ಸರ್ವೆ ನಂ.86 ರಲ್ಲಿ ಮತ್ತು ಸರ್ವೆ ನಂ.23, ತಮ್ಮನಾಯಕನಹಳ್ಳಿ ಆನೇಕಲ್ ತಾಲ್ಲೂಕಿನಲ್ಲಿ ಲಭ್ಯವಿರುವ ಒಟ್ಟು 40 ಎಕರೆ ಜಾಗದಲ್ಲಿ ಸ್ಥಾಪಿಸಲು ಅನುಮೋದನೆ.
2. ಸದರಿ ಘಟಕದ ಸ್ಥಾಪನೆಗೆ ಕೆ.ಟಿ.ಪಿ.ಪಿ ನಿಯಮಾವಳಿಗಳಂತೆ ಟೆಂಡರ್ ಕರೆಯಲು ಅನುಮೋದನೆ.
3. ಸದರಿ ಘಟಕ ಸ್ಥಾಪನೆಗೆ ಕನಹಳ್ಳಿ ಗ್ರಾಮದ ಸರ್ವೆ ನಂ.86 ರಲ್ಲಿ ಮತ್ತು ಸರ್ವೆ ನಂ.23, ತಮ್ಮನಾಯಕನಹಳ್ಳಿ ಆನೇಕಲ್ ತಾಲ್ಲೂಕಿನಲ್ಲಿ ಲಭ್ಯವಿರುವ ಒಟ್ಟು 40 ಎಕರೆ ಜಾಗವನ್ನು **20 ವರ್ಷದ ಅವಧಿಗೆ** ಗುತ್ತಿಗೆ **(Lease)** ಆಧಾರದ ಮೇಲೆ ನೀಡಲು ಅನುಮೋದನೆ ಮತ್ತು ನಂತರ **10 ವರ್ಷದ ಅವಧಿಗೆ ವಿಸ್ತರಿಸಲು** ಅನುಮೋದನೆ.

ಕೋರಿ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 25-01-2012 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

Geetha Shashikumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 18-01-2012 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ|| ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಜಂಟಿ ಆಯುಕ್ತರು (ಆರೋಗ್ಯ) |
| ಶ್ರೀ.ಎಂ.ಮುನಿರಾಜು | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿಗಳು |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| ಡಾ|| ಎಸ್. ರಾಜು | ಸದಸ್ಯರು | ಅಧೀಕ್ಷಕ ಅಭಿಯಂತರರು (ದಕ್ಷಿಣ) |
| ಶ್ರೀ.ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| ಶ್ರೀ.ಎನ್. ವೀರಣ್ಣ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಪರಿಸರಕೋಶ) |
| ಶ್ರೀಮತಿ.ಫೌಜೀಯ ಬೇಗಂ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಬಸವನಗುಡಿ-1) |
| ಶ್ರೀ.ಓ.ಮಂಜುನಾಥ್ | ಸದಸ್ಯರು | ಅಧೀಕ್ಷಕರು (ಬನಶಂಕರಿ ರೆಫರಲ್ ಆಸ್ಪತ್ರೆ) |
| ಶ್ರೀ.ಎಂ. ಶ್ರೀನಿವಾಸ್ | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| | | ಆರೋಗ್ಯ ವೈದ್ಯಾಧಿಕಾರಿ (ಸೊಳ್ಳೆ ನಿಯಂತ್ರಣ) |
| | | ನೋಡಲ್ ಅಧಿಕಾರಿ (ಸೊಳ್ಳೆ ನಿಯಂತ್ರಣ) |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**1. ವಿಷಯದ ಸಂಖ್ಯೆ: ಸಾಆಸ್ಥಾಸ/15/2011-12:**

ಆಯುಕ್ತರ ದಿನಾಂಕ: 26-10-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ರವರು ಇಂತಹ ಸ್ಥಳಗಳನ್ನು ಗುರುತಿಸಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರ್‌ಗೆ ರೂ.5/- ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ. ಈಗಾಗಲೇ ಸದರಿರವರು ಈ ಘಟಕವನ್ನು ಆಂಧ್ರ ಪ್ರದೇಶದ 290 ಸ್ಥಳಗಳಲ್ಲಿ ಸ್ಥಾಪಿಸಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಠ 10 ಸಾವಿರ ಜನಸಂಖ್ಯೆಯುಳ್ಳ 10 ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 5 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದ ಮಧ್ಯಭಾಗದಲ್ಲಿ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ವ್ಯವಸ್ಥೆವುಳ್ಳ ಸ್ಥಳವನ್ನು ಮತ್ತು ಸದರಿ ಘಟಕಕ್ಕೆ ವಿದ್ಯುತ್ ಅನ್ನು ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯು ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಪಯುಕ್ತವಾಗಿರುವುದರಿಂದ, ಸದರಿ ಪ್ರಸ್ತಾವನೆಗೆ ಉಲ್ಲೇಖ-(1) ಮತ್ತು (2) ರಂತೆ ಅನುಮೋದನೆ ಪಡೆಯಲಾಗಿದ್ದು, ಸದರಿ ಯೋಜನೆಗೆ ಈ ಕೆಳಕಂಡಂತೆ 8 ಸ್ಥಳಗಳನ್ನು ಗುರುತಿಸಲಾಗಿದೆ.

- ಶಾಂತಿನಗರ, ವಾರ್ಡ್ ಸಂಖ್ಯೆ.117
- ದೇವರಜೀವನಹಳ್ಳಿ, ವಾರ್ಡ್ ಸಂಖ್ಯೆ.47 (ಎರಡು ಸ್ಥಳಗಳಲ್ಲಿ)
- ವಿದ್ಯಾರಣ್ಯಪುರ, ವಾರ್ಡ್ ಸಂಖ್ಯೆ.09
- ಅರಮನೆನಗರ, ವಾರ್ಡ್ ಸಂಖ್ಯೆ.35
- ಪೀಣ್ಯಾ ಕೈಗಾರಿಕಾ ಪ್ರದೇಶ, ವಾರ್ಡ್ ಸಂಖ್ಯೆ.41
- ಪ್ರಕಾಶ್‌ನಗರ, ವಾರ್ಡ್ ಸಂಖ್ಯೆ.98
- ಅಂಗರಾಜಪುರ, ವಾರ್ಡ್ ಸಂಖ್ಯೆ.49

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 08 ಸ್ಥಳಗಳಲ್ಲಿ Water Health India Pvt. Ltd., ರವರಿಗೆ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 5 ವರ್ಷಗಳ ಅವಧಿಗೆ ನೀಡಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 26-10-2011 ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಪಾಲಿಕೆ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ಎಂಬ ಸಂಸ್ಥೆಯವರ ಯೋಜನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಳವಡಿಸುವ ವಿಷಯದಲ್ಲಿ ಕುರಿತಂತೆ ಕರಡು ಪತ್ರದಲ್ಲಿರುವ ಹಲವಾರು ನಿಯಮ ಹಾಗೂ ನಿಬಂಧನೆಗಳನ್ನು ಕಾನೂನು ಕೋಶದ ಮುಖ್ಯಸ್ಥರೊಂದಿಗೆ ವಿವರವಾಗಿ ಚರ್ಚಿಸಿ ನಿಯಾಮಾಅನುಬಂಧಗಳನ್ನು ಅಳವಡಿಸಿ ವಿಷಯವನ್ನು ಮರು ಮಂಡಿಸುವಂತೆ ಮುಖ್ಯ ಅಭಿಯಂತರರು (ಪರಿಸರಕೋಶ) ರವರಿಗೆ ಸೂಚಿಸಲಾಯಿತು.**

**2. ವಿಷಯದ ಸಂಖ್ಯೆ: ಸಾಆಸ್ಥಾಸ/24/2011-12:**

ಸಂಖ್ಯೆ: ಜಂ.ನಿ.(ಪಪಾ)/ಪಿ.ಆರ್./779/11-12, ದಿನಾಂಕ: 16-11-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನೆ ವಿಭಾಗದ ಅಡಿಯಲ್ಲಿ ಸಾಕುನಾಯಿಗಳ ಪರವಾನಗಿಯನ್ನು ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಸದರಿ ಕಾರ್ಯವನ್ನು ಬೈಲಾ 25 ರ ಅಡಿ ಸಾಕು ನಾಯಿಗಳ ಪರವಾನಗಿಗಾಗಿ ಶುಲ್ಕವನ್ನು ಸಾಕು ನಾಯಿ ಮಾಲೀಕರಿಂದ ವಸೂಲಿ ಮಾಡಿ, ಅನುಷ್ಠಾನಗೊಳಿಸಲಾಗುತ್ತಿದೆ. 1976 ರ ಕರ್ನಾಟಕ ಮುನ್ಸಿಫಲ್ ಕಾಯಿದೆ ಜಾರಿಗೆ ಬಂದ ನಂತರ ಬೈಲಾ 25 ಅನ್ನು ರದ್ದುಗೊಳಿಸಲಾಗಿರುತ್ತದೆ. ಆದುದರಿಂದ ಈಗಿನ ಪರಿಸ್ಥಿತಿಗೆ ಅನ್ವಯಿಸುವಂತೆ ಸಾಕುನಾಯಿ ಪರವಾನಗಿಗೆ ಸಂಬಂಧಿಸಿದಂತೆ, 1976 ರ K.M.C. ಕಾಯಿದೆ Section 423 ರಲ್ಲಿ ಆಯುಕ್ತರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಹಾಗೂ ಇದರ ಜೊತೆ Sub Section 21 ರಲ್ಲಿ ಪ್ರಾಣಿ ಮತ್ತು ಮನುಷ್ಯರಲ್ಲಿ ಅಪಾಯಕಾರಿ ರೋಗಗಳನ್ನು ತಡೆಗಟ್ಟುವ, Sub Section 22 ರ ಪ್ರಕಾರ ಕಡ್ಡಾಯವಾಗಿ ರೋಗನಿರೋಧಕ ಚುಚ್ಚುಮದ್ದು ಹಾಕಿಸುವ ಕ್ರಮವನ್ನು ಜಾರಿಗೊಳಿಸುವ ನಿಯಮಗಳ ಅಡಿಯಲ್ಲಿ ಸಾಕು ನಾಯಿಗಳ ಪರವಾನಗಿ ಬೈಲಾವನ್ನು ಮಾಡಲಾಗಿರುತ್ತದೆ.

ನಾಯಿಗಳಲ್ಲಿ ಹುಚ್ಚುನಾಯಿ ರೋಗ ತಡೆಗಟ್ಟಲು ಪ್ರತಿ ವರ್ಷ ಸದರಿ ರೋಗದ ವಿರುದ್ಧ ಚುಚ್ಚುಮದ್ದು ಹಾಕುವಿಕೆ ಹಾಗೂ ಸಾಕುನಾಯಿಗಳಿಂದಾಗಿ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ನಿಯಂತ್ರಣ ಪಡಿಸುವ ಉದ್ದೇಶದಿಂದ ಈ ಕೆಳಕಂಡ ನಿಭಂದನೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಲು ಉದ್ದೇಶಿಸಿದೆ.

ಸಾಕು ನಾಯಿಗಳ ಪರವಾನಗಿ ಕಡ್ಡಾಯಗೊಳಿಸುವ ಕುರಿತಂತೆ ಹಾಗೂ ಮನೆಗಳಲ್ಲಿ ಸಾಕಬಹುದಾದ ನಾಯಿಗಳ ಸಂಖ್ಯೆಯನ್ನು ನಿರ್ಭಂದಿಸುವ ಬಗ್ಗೆ ಸಾರ್ವಜನಿಕರಿಂದ ಪತ್ರಗಳ ಮುಖಾಂತರ, ಮಾಧ್ಯಮದ ಮುಖಾಂತರ ಹಾಗೂ ಇ-ಮೇಲ್ ಮುಖಾಂತರ ನಕಾರಾತ್ಮಕ ಪ್ರತಿಕ್ರಿಯೆಗಳು ಬರುತ್ತಿರುವುದರಿಂದ ಸಾಕು ನಾಯಿ ಪರವಾನಗಿಯ ಶುಲ್ಕಗಳನ್ನು ಈ ಕೆಳಗಿನಂತೆ ನಿಗಧಿಗೊಳಿಸಲಾಗಿದೆ.

- 1 ರಿಂದ 4 ನಾಯಿಗಳನ್ನು ಸಾಕಿದ್ದಲ್ಲಿ ಸಾಕು ನಾಯಿ ಎಂದು ಪರಿಗಣಿಸಿ

    1. ಮೊದಲ ಸಾಕು ನಾಯಿಗೆ ರೂ.250/- ಪರವಾನಗಿ ಶುಲ್ಕ.
    2. ಎರಡನೇ ಸಾಕು ನಾಯಿಗೆ ರೂ.500/- ಪರವಾನಗಿ ಶುಲ್ಕ.
    3. ಮೂರನೇ ಸಾಕು ನಾಯಿಗೆ ರೂ.750/- ಪರವಾನಗಿ ಶುಲ್ಕ.
    4. ಹಾಗೂ ನಾಲ್ಕನೇ ಸಾಕು ನಾಯಿಗೆ ರೂ.1000/- ಪರವಾನಗಿ ಶುಲ್ಕ ನಿಗಧಿಗೊಳಿಸಲಾಗಿದೆ.

- 5 ಕ್ಕಿಂತಲೂ ಹೆಚ್ಚು ನಾಯಿಗಳನ್ನು ಸಾಕಿರುವವರನ್ನು ತಳಿ ಸಂವರ್ಧಕರು ಎಂದು ಪರಿಗಣಿಸಿ ಪ್ರತಿ ನಾಯಿಗೆ ರೂ.1000/- ಪರವಾನಗಿ ಶುಲ್ಕ ನಿಗಧಿಗೊಳಿಸಲಾಗಿದೆ.
- ಮೈಕ್ರೋಚಿಪ್ ಅಳವಡಿಸಿದಲ್ಲಿ ವೆಚ್ಚ ಪ್ರತ್ಯೇಕ.
- ಫ್ಲಾಟ್‌ಗಳಲ್ಲಿ ಅನುಮೋದಿತ ತಳಿಯ ಒಂದು ಸಾಕು ನಾಯಿ ಮಾತ್ರ ಸಾಕಬಹುದಾಗಿದೆ.

1. ಸಾಕು ನಾಯಿಗಳ ತಳಿ ಅಭಿವೃದ್ಧಿಗಾಗಿ ನಾಯಿಗಳನ್ನು ಸಾಕುವ ಕೆನಲ್‌ಗಳನ್ನು ಪಾಲಿಕೆಯ ಹಳೆಯ ವಲಯದ ಪ್ರದೇಶಗಳ ಹೊರಗಿನ ಪ್ರದೇಶಗಳಲ್ಲಿ ಗರಿಷ್ಠ 10 ಶ್ವಾನಗಳಿಗೆ ಮೀರದಂತೆ ಸಾಕಬಹುದಾಗಿದ್ದು, ಇದಕ್ಕೆ ಪರವಾನಗಿಯನ್ನು ಕಡ್ಡಾಯವಾಗಿ ಪಡೆಯಬೇಕು.
2. ವಸತಿ ಸಮುಚ್ಚಯಗಳಲ್ಲಿ ನಾಯಿಗಳನ್ನು ಸಾಕುವವರು ಅಕ್ಕಪಕ್ಕದ ಮನೆಯವರಿಗೆ ನಾಯಿಯಿಂದ ತೊಂದರೆ ಆಗದಂತೆ ನಿಗಾ ವಹಿಸುವುದು. ಅಕ್ಕ-ಪಕ್ಕದವರಿಗೆ ತೊಂದರೆ ಆಗುತ್ತಿರುವ ಬಗ್ಗೆ ದೂರುಗಳು ಬಂದಲ್ಲಿ ಸಾಕು ನಾಯಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಿ ನಾಯಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

3. ಮನೆಗಳಲ್ಲಿ ಒಂದಕ್ಕಿಂತ ಹೆಚ್ಚು ನಾಯಿಗಳನ್ನು ಸಾಕಿರುವವರು ಅಕ್ಕ-ಪಕ್ಕದ ಮನೆಯವರಿಂದ ಹಾಗೂ ಹಿಂಬದಿಯ ಮನೆಯವರಿಂದ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕಾಗಿರುತ್ತದೆ.

ಸಾಕು ನಾಯಿಗಳಿಗೆ ಹಾಗೂ ಕೆನಲ್‌ಗಳಲ್ಲಿ ಸಂತಾನೋತ್ಪತ್ತಿಗಾಗಿ ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಶ್ವಾನಗಳ ಮಾಲೀಕರೆ ಪ್ರತ್ಯೇಕವಾಗಿ ಭರಿಸಬೇಕಾಗಿರುತ್ತದೆ.

ಸಾಕು ಶ್ವಾನಗಳ ಪರವಾನಗಿ ಕಡ್ಡಾಯಗೊಳಿಸುವ ಸಲುವಾಗಿ ಹೊಸದಾಗಿ ಬೈಲಾಗಳನ್ನು ರಚಿಸಲಾಗಿದ್ದು, ಬೈಲಾಗಳಲ್ಲಿರುವ ನಿಯಮಗಳಂತೆ ಆಯುಕ್ತರಿಂದ ನೇಮಿತವಾದ ಅಧಿಕಾರಿ ಮತ್ತು ಸಿಬ್ಬಂದಿಗಳು ಕ್ರಮ ವಹಿಸಬಹುದಾಗಿರುತ್ತದೆ.

ಉತ್ತಮ ತಳಿಯ ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವ ಅಂಗಡಿಗಳಿಗೂ ಪರವಾನಗಿ ಕಡ್ಡಾಯಗೊಳಿಸಲಾಗಿದ್ದು, ಪರವಾನಗಿ ಶುಲ್ಕ ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ.

1. 1,000 ಚದುರ ಅಡಿಗಳ ವರೆಗೆ ಇರುವ ಮಾರಾಟ ಮಾಡುವ ಕೇಂದ್ರಗಳಿಗೆ ವಾರ್ಷಿಕ ರೂ.5000/-.
2. 1,001 ರಿಂದ 2,500 ಚದುರ ಅಡಿಗಳ ವರೆಗಿನ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.10,000/-.
3. ಹಾಗೂ 2,501 ಚದುರ ಅಡಿಗಳಿಗೆ ಮೇಲ್ಪಟ್ಟ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.25,000/-.

ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೂ ಸಹ ಪರವಾನಗಿಯನ್ನು ಕಡ್ಡಾಯಗೊಳಿಸಲಾಗಿದ್ದು, ಪರವಾನಗಿ ಶುಲ್ಕ ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ.

1. 1,000 ಚದುರ ಅಡಿಗಳ ವರೆಗಿನ ವಿಸ್ತಾರದ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.3,000/-.
2. 1,001 ಚದುರ ಅಡಿಗಳಿಂದ 2,500 ಚದುರ ಅಡಿಗಳ ವರೆಗಿನ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.5,000/-
3. ಹಾಗೂ 2,501 ಚದುರ ಅಡಿಗಳಿಗಿಂತ ಮೇಲ್ಪಟ್ಟ ಕೇಂದ್ರಗಳಿಗೆ ವಾರ್ಷಿಕ ರೂ.10,000/-.

ದತ್ತು ತೆಗೆದುಕೊಂಡ ಬೀದಿ ನಾಯಿಗಳಿಗೆ ಈ ಕೆಳಗಿನಂತೆ ಪರವಾನಗಿ ಶುಲ್ಕ ನಿಗದಿಗೊಳಿಸಲಾಗಿದೆ.

1. ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಬೀದಿ ಶ್ವಾನಗಳಿಗೆ ವಾರ್ಷಿಕ ರೂ.30/- ಪ್ರತಿ ನಾಯಿಗೆ.
2. ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಡದ ಬೀದಿ ಶ್ವಾನಗಳಿಗೆ ವಾರ್ಷಿಕ ರೂ.90/- ಪ್ರತಿ ನಾಯಿಗೆ.
3. ಜಾನುವಾರು ಕಲ್ಯಾಣ ಸಂಸ್ಥೆಗಳಲ್ಲಿರುವ ಶ್ವಾನಗಳಿಗೆ ಹಾಗೂ 10 ಕ್ಕೆ ಮೇಲ್ಪಟ್ಟು ಬೀದಿ ನಾಯಿಗಳನ್ನು ದತ್ತು ತೆಗೆದುಕೊಂಡ ಸಾರ್ವಜನಿಕರಿಗೆ (ಅಕ್ಕ-ಪಕ್ಕದ ಮನೆಯವರಿಂದ ಆಕ್ಷೇಪಣೆ ಇಲ್ಲದಿದ್ದಲ್ಲಿ ಮಾತ್ರ) ಸಾಕು ನಾಯಿ ಪರವಾನಗಿಯ ನಿಯಮಗಳು ಅನ್ವಯಿಸುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಪ್ರದೇಶಗಳಲ್ಲಿರುವ ಸಾಕು ಶ್ವಾನಗಳಿಗೆ, ಕೆನಲ್‌ಗಳಿಗೆ, ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಕೇಂದ್ರಗಳಿಗೆ ಮತ್ತು ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ಪರವಾನಗಿಯನ್ನು 2011-12 ಸಾಲಿನಿಂದ ಕಡ್ಡಾಯಗೊಳಿಸಲಾಗಿದೆ. ಸಾಕು ನಾಯಿಗಳಿಂದಾಗಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ತಡೆಗಟ್ಟಬಹುದಲ್ಲದೆ, ಸಾಕು ನಾಯಿಗಳಿಂದ ಹುಚ್ಚು ನಾಯಿ ರೋಗ ಹರಡದಂತೆ ತಡೆಗಟ್ಟಬಹುದಾಗಿರುತ್ತದೆ.

ಈ ಮೇಲ್ಕಂಡ ಅಂಶಗಳ ಬಗ್ಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ.**

**3. ವಿಷಯದ ಸಂಖ್ಯೆ: ಸಾಆಸ್ಥಾಸ/43/2011-12:**

ಸಂಖ್ಯೆ: ಎಂ.ಹೆಚ್.ಸಿ./ಪಿಆರ್/160/10-11, ದಿನಾಂಕ: 18-11-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ/ನೌಕರರುಗಳ ಹಾಗೂ ಅವರ ಅವಲಂಬಿತರಿಗೆ (ಒಳರೋಗಿ ಮತ್ತು ಹೊರ ರೋಗಿ) ವೈದ್ಯಕೀಯ ಸೌಲಭ್ಯವನ್ನು 2008 ರಿಂದ ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆಯ ಮೂಲಕ ನೀಡಲಾಗುತ್ತಿದೆ. ಪಾಲಿಕೆಯಲ್ಲಿ 12,000 ನೌಕರರಿದ್ದು ಅವರ ಅವಲಂಬಿತರು ಸೇರಿ ಒಟ್ಟು ಸುಮಾರು 60,000 ಜನರಿಗೆ ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆಯ ಮೂಲಕ 139 ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವೈದ್ಯಕೀಯ ಸೌಲಭ್ಯವನ್ನು ನೀಡಲಾಗುತ್ತಿದೆ. ಈ ಸಂಬಂಧ ಪಾಲಿಕೆಯ ಎಲ್ಲಾ ನೌಕರರನ್ನು ಹಾಗೂ ಅವರ ಅವಲಂಬಿತರನ್ನು ಗುರುತಿಸುವ ಸಲುವಾಗಿ ಗುರುತಿನ ಚೀಟಿಯನ್ನು ನೀಡಲಾಗಿರುತ್ತದೆ.

ಪಾಲಿಕೆಯಲ್ಲಿ ನೌಕರರ ಚಿಕಿತ್ಸೆಗೆಂದು 2008-09ನೇ ಸಾಲಿನ ಆಯವ್ಯಯದಲ್ಲಿ 5 ಕೋಟಿ ರೂ ಅನುದಾನ ಮಂಜೂರಾಗಿರುತ್ತದೆ ಹಾಗೂ 2009-10 ನೇ ಸಾಲಿನಲ್ಲಿ 5 1/2 (ಐದುವರೆ) ಕೋಟಿ ಅನುದಾನ ಮಂಜೂರಾಗಿದ್ದು ಸದರಿ ಸಾಲಿನಲ್ಲಿ ಪಾಲಿಕೆಯ ಅಧಿಕಾರಿ/ನೌಕರರು ಹಾಗೂ ಅವಲಂಬಿತರು ಹೆಚ್ಚು ಹೆಚ್ಚಾಗಿ ಸದುಪಯೋಗ ಪಡೆದುಕೊಂಡಿರುವುದರಿಂದ 2 ಕೋಟಿ ವಿಶೇಷ ಅನುದಾನ ಮಂಜೂರಾಗಿರುತ್ತದೆ. ಈ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಯೋಜನೆಯು ಅನುಷ್ಠಾನಗೊಳ್ಳುವ ಮುಂಚೆ ಆಯಾ ವಲಯ ಮಟ್ಟದಲ್ಲಿ ಸರ್ಕಾರದ ಮೆಡಿಕಲ್ ಅಟೆಂಡೆನ್ಸ ರೂಲ್ಸನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿತ್ತು. ಪಾಲಿಕೆಯಲ್ಲಿ 2008 ರಿಂದ ಈ ಯೋಜನೆಯು ಅನುಷ್ಠಾನಗೊಂಡ ನಂತರ ಹೆಚ್ಚು ಹೆಚ್ಚು ನೌಕರ ಹಾಗೂ ಅವರ ಅವಲಂಬಿತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಎಂ.ಓ.ಯು. ಮಾಡಿಕೊಳ್ಳಲಾದ ಖಾಸಗಿ ಆಸ್ಪತ್ರೆಗಳಿಗೆ ಬಿಲ್ಲುಗಳ ಪಾವತಿ, ಹಾಗೂ ಹೊಸ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು. ಈ ಎಲ್ಲಾ ಕೆಲಸವನ್ನು ಮ್ಯಾನೇಜ್ಡ್ ಹೆಲ್ತ್ ಕೇರ್ ಅಡಿಯಲ್ಲಿ ನಿರ್ವಹಿಸಲಾಗುತ್ತಿರುತ್ತದೆ.

ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆ ಅಡಿಯಲ್ಲಿ ಖಾಸಗಿ ಆಸ್ಪತ್ರೆಗಳು ನೀಡುವ ಬಿಲ್ಲುಗಳನ್ನು ತಪಾಸಣೆ ನಡೆಸಿ ಸಿಜಿಹೆಚ್‌ಎಸ್ ದರ ಪಟ್ಟಿಯಂತೆ ಪಾವತಿಸಲಾಗುತ್ತಿದೆ. ಸದರಿ ಸಿ.ಜಿ.ಹೆಚ್.ಎಸ್. ದರ ಪಟ್ಟಿ 6 ತಿಂಗಳಿಗೊಮ್ಮೆ ಪರಿಷ್ಕರಣೆಯಾಗುತ್ತಿರುತ್ತದೆ ಹಾಗೂ ಕೆಲವು ಅನ್ ಕೋಡೆಡ್ ಪ್ರೊಸಿಜರ್ಸ್ (Un Coded Procedures) ಗಳಿಗೆ ದರಗಳು ಸಿ.ಜಿ.ಹೆಚ್.ಎಸ್. ಅಡಿಯಲ್ಲಿ ನಿಗಧಿಪಡಿಸಿರುವುದಿಲ್ಲ. ಈ ಪ್ರೊಸಿಜರ್ಸ್ ಗಳಿಗೆ ಹಾಗೂ ಅನ್‌ಕೋಡೆಡ್ ದರಗಳಿಗೆ ಆಯುಕ್ತರ ಆದೇಶ ಅವಶ್ಯವಿರುತ್ತದೆ. ಪಾಲಿಕೆಯಲ್ಲಿ ಅನ್ ಕೋಡೆಡ್ ಪ್ರೊಸಿಜರ್‌ಗಳಿಗೆ ಹಾಗೂ ಅರ್ಹರಾಗದೇ ಇರುವ ಸಿಬ್ಬಂದಿ ನೌಕರರ ಅವಲಂಬಿತರು (25 ವರ್ಷ ಮೇಲ್ಪಟ್ಟವರು) ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುತ್ತಿರುವುದರಿಂದ ಪಾಲಿಕೆಯ ಖಜಾನೆಗೆ ನಷ್ಟವಾಗುತ್ತಿರುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಈ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಣಿತಿ ಹೊಂದಿರುವ ಸಂಸ್ಥೆಗೆ ವಹಿಸಿದ್ದಲ್ಲಿ ಪಾಲಿಕೆಗೆ ಆರ್ಥಿಕ ಉಳಿತಾಯ ಹಾಗೂ ದುರುಪಯೋಗವನ್ನು ತಡೆಗಟ್ಟಬಹುದಾಗಿದೆ.

ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾದ ಯು.ಟಿ.ಐ. ಸಂಸ್ಥೆಯು ಈಗಾಗಲೇ ಬಿ.ಎಸ್.ಎನ್.ಎಲ್., ಬಿ.ಎಂ.ಟಿ.ಸಿ., ಬಿಡಬ್ಲ್ಯೂಎಸ್‌ಎಸ್‌ಬಿ ಹಾಗೂ ಕೆಪಿಟಿಸಿಎಲ್, ಸರ್ಕಾರಿ ಸಂಸ್ಥೆಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ನಿರ್ವಹಿಸುತ್ತಿರುತ್ತಾರೆ. ಅದೇ ರೀತಿ 2010 ಅಕ್ಟೋಬರ್ ಮಾಹೆಯಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆಯ ಅಡಿಯಲ್ಲಿ ನಿರ್ವಹಿಸಲಾಗುತ್ತಿರುವ ಖಾಸಗಿ ಆಸ್ಪತ್ರೆಯ ಬಿಲ್ಲುಗಳನ್ನು ಪರಿಶೀಲಿಸುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ 14-10-2010 ಹಾಗೂ 23-10-2010 ರಂದು ಸಭೆ ಸೇರಿ ಅಪರ ಆಯುಕ್ತರು (ಆರೋಗ್ಯ) ಹಾಗೂ ವಿಶೇಷ ಆಯುಕ್ತರ ಅಧ್ಯಕ್ಷತೆಯಲ್ಲಿ, ಯು.ಟಿ.ಐ. ಸಂಸ್ಥೆಯವರೊಂದಿಗೆ ಸಭೆಯನ್ನು ನಡೆಸಿ ಸವಿವರವಾಗಿ ಚರ್ಚಿಸಲಾಗಿರುತ್ತದೆ. ಮುಂದುವರೆದಂತೆ ದಿನಾಂಕ: 22-06-2011 ರಂದು ಉಪ ಆಯುಕ್ತರು (ಆರೋಗ್ಯ) ಇವರ ಅಧ್ಯಕ್ಷತೆಯಲ್ಲಿ ಯು.ಟಿ.ಐ. ಸಂಸ್ಥೆಯವರು ನೀಡಿರುವ ಪ್ರಸ್ತಾವನೆಯಂತೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿರುವ ವಿಷಯಗಳ ಬಗ್ಗೆ ಚರ್ಚಿಸಲಾಗಿರುತ್ತದೆ. (ಒಡಂಬಡಿಕೆಯ ಪ್ರತಿಯನ್ನು ಲಗತ್ತಿಸಿದೆ- ANNEXURE-I). ಈ ವ್ಯವಸ್ಥೆಯಿಂದ ಬೃಬೆಂ.ಮ. ಪಾಲಿಕೆಗೆ ಯಾವುದೇ ಹೆಚ್ಚಿನ ಆರ್ಥಿಕ ವೆಚ್ಚವಾಗುವುದಿಲ್ಲ.

ನೌಕರರು ಮತ್ತು ಅವಲಂಬಿತರ ವೈದ್ಯಕೀಯ ಬಿಲ್ಲುಗಳ ಮೇಲೆ ಆಸ್ಪತ್ರೆಗಳಿಂದ ನೀಡಲಾದ ಚಿಕಿತ್ಸೆಯ ನಿರ್ವಹಣೆಯ ಮೊತ್ತ ಅಂದರೆ ಚಿಕಿತ್ಸೆ ನೀಡುವ ಆಸ್ಪತ್ರೆಗಳಿಂದ ರೂ.266-00 ಹಣವನ್ನು ಒಂದು ಬಿಲ್ಲಿಗೆ ಮಾತ್ರ ಯೂ.ಟಿ.ಐ. ಸಂಸ್ಥೆಯವರು ಪಾವತಿ ಪಡೆಯುತ್ತಾರೆ.

ಪಾಲಿಕೆಯಿಂದ ಅಂದಾಜು ಒಂದು ತಿಂಗಳ ಮುಂಗಡವನ್ನು ಅಂದರೆ ಅಂದಾಜು ಒಂದು ಕೋಟಿ ರೂ. ಗಳನ್ನು ಪಾವತಿಸಬೇಕಾಗುತ್ತದೆ. ಯು.ಟಿ.ಐ. ಸಂಸ್ಥೆಯ ತಜ್ಞ ವೈದ್ಯರುಗಳು ಎಲ್ಲಾ ಮೆಡಿಕಲ್ ಬಿಲ್ಲುಗಳನ್ನು Scrutiny ಮಾಡಿ ಅನಗತ್ಯ ಬಿಲ್ಲುಗಳಲ್ಲಿರುವ ವೆಚ್ಚಗಳಿಗೆ ಕಡಿವಾಣ ಹಾಕಲಾಗುತ್ತದೆ.

ಪಾಲಿಕೆಯ ನೌಕರ ಸಿಬ್ಬಂದಿ ಹಾಗೂ ಅವಲಂಬಿತರಿಗೆ ಉತ್ತಮ ಹಾಗೂ ಸಮಯೋಚಿತ ಆರೋಗ್ಯ ಸೌಲಭ್ಯ ನೀಡುವ ಹಿತದೃಷ್ಠಿ ಮತ್ತು ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು, ಮ್ಯಾನೇಜ್ಡ್ ಹೆಲ್ತ್‌ಕೇರ್ ಯೋಜನೆಯನ್ನು ಸಮಗ್ರವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಹಾಗೂ ಯು.ಟಿ.ಐ. ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮ್ಯಾನೇಜ್ಡ್ ಹೆಲ್ತ್‌ಕೇರ್ ಯೋಜನೆಯನ್ನು ವ್ಯವಸ್ಥಿತವಾಗಿ ರೂಪಿಸುವ ಸಂಬಂಧ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 22-11-2011 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಯು.ಟಿ.ಐ. ಸಂಸ್ಥೆಯೊಂದಿಗೆ 06 ತಿಂಗಳ ಅವಧಿಯವರೆಗೆ ಒಡಂಬಡಿಕೆ ಮಾಡಿಕೊಂಡು ಇವರು ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಹಾಗೂ ಪಾಲಿಕೆಗೆ ಆರ್ಥಿಕ ಹೊರೆಯಾಗದಂತೆ ಮ್ಯಾನೇಜ್ಡ್ ಹೇಲ್ತ್ ಕೇರ್ ಕಛೇರಿಯ ಅಧಿಕಾರಿ/ಸಿಬ್ಬಂದಿಯವರು ಪ್ರತಿ ವಾರ ತಪಾಸಣೆ ಮಾಡಿ ವರದಿಯನ್ನು ಜಂಟಿ ಆಯುಕ್ತರು (ಆರೋಗ್ಯ) ರವರಿಗೆ ಸಲ್ಲಿಸುವುದು. ಸದರಿ ಸಂಸ್ಥೆಯವರ ಒಡಂಬಡಿಕೆಯ ಅವಧಿಯಲ್ಲಿ ಯಾವುದೇ ಲೋಪದೋಷ ಕಂಡು ಬಂದಲ್ಲಿ ನೋಟಿಸ್ ಜಾರಿ ಮಾಡಿ ಒಡಂಬಡಿಕೆಯನ್ನು ರದ್ದು ಪಡಿಸುವ ಅಧಿಕಾರವನ್ನು ಪಾಲಿಕೆಯು ಉಳಿಸಿಕೊಂಡು ಒಪ್ಪಂದ ಮಾಡಿಕೊಳ್ಳಬಹುದಾಗಿದೆ ಎಂದು ಸಮಿತಿಯು ತೀರ್ಮಾನಿಸಿತು.**

**4.** **ವಿಷಯದ ಸಂಖ್ಯೆ: ಸಾಆಸ್ಥಾಸ/49/2011-12**:

ಸಂಖ್ಯೆ: ಮು.ಆ.ಅ./ಎಸಿಟಿ/2/ಪಿ.ಆರ್./19/11-12, ದಿನಾಂಕ: 24-12-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ 06 ರೆಫರಲ್ ಆಸ್ಪತ್ರೆಗಳು ಮತ್ತು ರೆಫರಲ್ ಆಸ್ಪತ್ರೆಗಳ ಅಧೀನದಲ್ಲಿರುವ 24 ಹೆರಿಗೆ ಆಸ್ಪತ್ರೆಗಳಿಗೆ 2011-12ನೇ ಸಾಲಿಗೆ ಅವಶ್ಯವಿರುವ Post Natal Kit ಗಳನ್ನು ಒದಗಿಸಬೇಕೆಂದು ಎಲ್ಲಾ 06 ರೆಫರಲ್ ಆಸ್ಪತ್ರೆಗಳ ಅಧೀಕ್ಷಕರುಗಳು ಸಲ್ಲಿಸಲಾಗಿರುವ ಬೇಡಿಕೆ ಪಟ್ಟಿಯನ್ನು ಪುಟ-91 ರಿಂದ 95 ರವರೆಗೆ ಲಗತ್ತಿಸಿದೆ. ಸದರಿಯವರು ಸಲ್ಲಿಸಿರುವ ಪಟ್ಟಿಯನ್ವಯ ಅವಶ್ಯವಿರುವ Post Natal Kit ಗಳ ಕ್ರೂಢೀಕೃತ ಪಟ್ಟಿ ಈ ಕೆಳಕಂಡಂತಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| ಕ್ರಮ ಸಂಖ್ಯೆ | ಆಸ್ಪತ್ರೆಗಳ ಹೆಸರು | ಅವಶ್ಯವಿರುವ Post Natal Kit |
|---|---|---|
| 1 | ಜೆ.ಜೆ.ಆರ್.ನಗರ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 3,360.00 |
| 2 | ಹೊಸಹಳ್ಳಿ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 5,400.00 |
| 3 | ಹಲಸೂರು ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 2,900.00 |
| 4 | ಶ್ರೀರಾಮಪುರ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 3,800.00 |
| 5 | ಹೆಚ್.ಸಿದ್ದಯ್ಯ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 2,700.00 |
| 6 | ಬನಶಂಕರಿ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 4,500.00 |
| | ಒಟ್ಟು | **22,660.00** |

ಪಾಲಿಕೆಯ ಎಲ್ಲಾ ಆಸ್ಪತ್ರೆಗಳಿಂದ ವಾರ್ಷಿಕ 14,000 ಹೆರಿಗೆಗಳು ಸಂಭವಿಸುತ್ತಿದ್ದು, Post Natal Kit ಗಳನ್ನು ಒಂದು ಅಥವಾ ಎರಡು ಮಕ್ಕಳ ತಾಯಂದಿರಿಗೆ ಮಾತ್ರ ವಿತರಿಸಲಾಗುತ್ತಿರುವುದರಿಂದ ಒಟ್ಟಾರೆ 13,000 Post Natal Kit ಗಳ ಅವಶ್ಯಕತೆಯಿರುತ್ತದೆ.

2010-11ನೇ ಸಾಲಿನಲ್ಲಿ 12 ಪರಿಕರಗಳುಳ್ಳ 7,800 ಪೋಸ್ಟ್ ನಾಟಲ್ ಕಿಟ್‌ಗಳನ್ನು ಪ್ರತಿ ಕಿಟ್ ಬೆಲೆ ರೂ.1,110/- ದರದಂತೆ ರೂ.86,58,000/- ಮೊತ್ತದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದಲೂ 06 ಪರಿಕರಗಳುಳ್ಳ 7,800 ಕಿಟ್‌ಗಳನ್ನು ಪ್ರತಿ ಕಿಟ್‌ಗೆ ರೂ.140/- ರಂತೆ ರೂ.10,92,000/- ಮೊತ್ತದಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಲಾಗಿದ್ದು, ವಿವರಗಳನ್ನು ಕಡತದ ಪುಠ-28, 29 ಪ್ಯಾರಾ-90 ರಿಂದ 96 ರವರೆಗೆ ಕಾಣಬಹುದಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 07 ಸಿಜಿಇ 2011, ಬೆಂಗಳೂರು ದಿನಾಂಕ: 21-06-2011 (Page 99 to 100) ರ ರೀತ್ಯಾ Post Natal Kit ಗಳ ಬೆಲೆಯನ್ನು ಕಳೆದ ವರ್ಷದ ಬೆಲೆಗಿಂತ ಶೇ.12 ರಷ್ಟು ಹೆಚ್ಚಿಸಿದ್ದು, ಕಳೆದ ವರ್ಷದ ಬೆಲೆ ಒಂದು Post Natal Kit ಗೆ ರೂ.1,200/- ಇದ್ದದ್ದು ಶೇ.12 ರಷ್ಟು ಬೆಲೆ ಹೆಚ್ಚಳದಿಂದಾಗಿ ಈಗ ಪ್ರತಿ ಕಿಟ್‌ನ ಬೆಲೆ ರೂ.1,403/- ಆಗುತ್ತದೆ. ಅದೇ ರೀತಿ ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರ 06 ಪರಿಕರಗಳುಳ್ಳ 01 ಕಿಟ್‌ಗೆ ರೂ.140/- ಇದ್ದದ್ದು ಈಗ ರೂ.157/- ಹೆಚ್ಚಳವಾಗಿರುತ್ತದೆ. ಕರ್ನಾಟಕ ಪಾರದರ್ಶಕ ನಿಯಮ 1999 ಅಧ್ಯಾಯ-1 ಸೆಕ್ಷನ್ 4 (b) ರೀತ್ಯಾ ಕರ್ನಾಟಕ ಕೈಮಗ್ಗ ನಿಯಮಿತ ರವರಿಂದ ಬಟ್ಟೆ ಸಾಮಗ್ರಿ ಖರೀದಿಸಲು ಮತ್ತು ಇದೇ ಪಾರದರ್ಶಕ ನಿಯಮ ಅಧ್ಯಾಯ 1 ಸೆಕ್ಷನ್ (f) ರೀತ್ಯಾ ಡಿ.ಜಿ.ಎಸ್. ಅಂಡ್ ಡಿ ದರ ನಮೂದಿಸಿದ ಸಂಸ್ಥೆಗಳಿಂದ ಸಾಮಗ್ರಿ ಖರೀದಿಸಲು ವಿನಾಯ್ತಿ ಇದ್ದು, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಸಾಮಗ್ರಿಗಳು ದಿನಾಂಕ: 18ನೇ ಮಾರ್ಚ್ 2012 ರವರೆಗೆ ಡಿಜಿಎಸ್ ಅಂಡ್ ಡಿ ದರ ಹೊಂದಿರುತ್ತವೆ. DGS&D/Regn/BAN/L-1450/09/04622, Date: 13-03-2009 (ಪುಠ 47 ರಿಂದ 53).

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಬೇಕಾದ ಸಾಮಗ್ರಿಗಳ ವಿವರ ಈ ಕೆಳಕಂಡಂತಿರುತ್ತದೆ.

**"ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ"**

| Sl. No. | Particulars | Size | Rate |
|---|---|---|---|
| 1 | Woolen Blanket | | 326.00 |
| 2 | Jamakhana (1 No.) | 48"X78" | 231.00 |
| 3 | Check Bed-sheet (1 No.) | 48"X88" | 92.00 |
| 4 | Checks Towel (2 Nos.) | 25"X52" | 62.00 |
| 5 | Printed Bed-sheet for Baby (2 Nos.) | 24"X24" | 108.00 |
| 6 | Child Jubba (3 Nos.) | As per sample | 62.00 |
| 7 | Cotton Diaper (for Baby)-(6 Nos.) | As per sample | 46.00 |
| 8 | Flannel Bed-sheet for Baby (1 No.) | 20"X30" | 62.00 |
| 9 | Abdominal Belt for Mother (1 No.) | As per sample | 62.00 |
| 10 | Rubber Sheet for Baby (1 No.) | 24"X24" | 62.00 |
| 11 | Sweater+Cap+Socks for Baby with zip (1 set) | (0-1 Years) | 77.00 |
| 12 | Poly (PVC) bag with zip with printed matter on both sides. (with double stitch supporting handle) | 15.5"X18.5"X6.5' | 56.00 |
| | **Total** | | **1246.00** |

ಒಟ್ಟಾರೆ 13,000 Post Natal Kit ಗಳಿಗೆ (1300X1246) ರೂ.1,61,98,000/- (ರೂ. ಒಂದು ಕೋಟಿ ಅರವತ್ತೊಂದು ಲಕ್ಷ ತೊಂಭತ್ತೆಂಟು ಸಾವಿರ ಮಾತ್ರ).

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಬೇಕಾದ ಸಾಮಗ್ರಿಗಳ ವಿವರ

| Sl. No. | Contents of each kit | Qty. in a Kit | Unit Price |
|---|---|---|---|
| 1 | Mysore wave Bathing Bar (100 grms.) | 02 | 23.52 |
| 2 | Mysore Detergent Cake (150 grms.) | 04 | 22.40 |
| 3 | Coconut Oil (200 ml. with comb) | 01 | 40.32 |
| 4 | Mysore Sandal Baby Soap (75 grms.) | 02 | 44.80 |
| 5 | Mysore Sandal Baby Powder (50 grms.) | 01 | 14.56 |
| 6 | Tooth Paste with Brush (50 grms.) | 01 | 11.20 |
| | | Total | **156.80** |
| | | Rounded Off Rs. | **157.00** |

ಒಟ್ಟಾರೆ 13,000 ಕಿಟ್‌ಗಳಿಗೆ 13,000X157=20,41,000 (ರೂ. ಇಪ್ಪತ್ತು ಲಕ್ಷ ನಲವತ್ತೊಂದು ಸಾವಿರ ಮಾತ್ರ)

ಮೇಲಿನಂತೆ 12 ಪರಿಕರಗಳುಳ್ಳ 13,000 ಕಿಟ್‌ಗಳನ್ನು ಪ್ರತಿ ಕಿಟ್‌ಗೆ ರೂ.1,246/- ಬೆಲೆಯಲ್ಲಿ ಒಟ್ಟು ರೂ.1,61,98,000/- ಮೊತ್ತದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದಲೂ 06 ಪರಿಕರಗಳುಳ್ಳ 13,000 ಕಿಟ್ಸ್‌ಗಳನ್ನು ರೂ.157/- ಬೆಲೆಯಲ್ಲಿ ಒಟ್ಟು ರೂ.20,41,000/- ಮೊತ್ತದಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ ಅಂದರೆ ಒಟ್ಟಾರೆ ರೂ.(1,61,98,000+20,41,000) = 1,82,39,000 ಮೊತ್ತದಲ್ಲಿ ಲೆಕ್ಕಶೀರ್ಷಿಕೆ 14, ಆರೋಗ್ಯ ವೈದ್ಯಕೀಯ ಹೆರಿಗೆ ಆಸ್ಪತ್ರೆ ಮತ್ತು ಶಿಶುಕಲ್ಯಾಣ ಕೇಂದ್ರಗಳ ವೆಚ್ಚಗಳು, ತಾಯಿಮಡಿಲು ಕಿಟ್ಸ್ ಖರೀದಿಗಾಗಿ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ, ಖರೀದಿಸುವ ಬಗ್ಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 24-12-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**5. ವಿಷಯದ ಸಂಖ್ಯೆ: ಸಾಆಸ್ಥಾಸ/50/2011-12:**

ಸಂಖ್ಯೆ: ಇಇ/ಐಜಿ/ಇ-ಪ್ರೋಕ್/ಟೆಂಡರ್/15/11-12, ದಿನಾಂಕ: 07-01-2012 ರ ವಿಶೇಷ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Solid Waste Management Services ಗೆ ದಿನಾಂಕ: 23-09-2011 ರಂದು 2ನೇ ಬಾರಿ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ ಎಸ್-9ಗೆ ಏಕಮಾತ್ರ ಬಿಡ್ ನಮೂದಿಸಲಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 30-11-2011 ರಂದು ತೆರೆಯಲಾಗಿ ಅನುಮೋದನೆ ಪಡೆದು ಆರ್ಥಿಕ ಬಿಡ್‌ಗಳನ್ನು ದಿನಾಂಕ: 09-12-2011 ರಂದು ತೆರೆಯಲಾಗಿ ಶ್ರೀ.ಎಂ.ಶಿವಕುಮಾರ್ ರವರು ಪ್ರತಿ ಮಾಹೆ ರೂ.24,16,788/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ: 12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.23,44,285/- ಗಳಿಗೆ ಒಪ್ಪಿರುತ್ತಾರೆ. ಈ ಕೆಳಕಂಡ ಅಂಶಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಅವಗಾಹನೆಗಾಗಿ ಸಲ್ಲಿಸಿದೆ.

1. ಟೆಂಡರ್ ಪ್ರಕಟಣೆಯಲ್ಲಿ ಕರಾರಿನ ಅವಧಿಯನ್ನು 2 ವರ್ಷಗಳೆಂದು ಪರಿಗಣಿಸಲಾಗಿದೆ. **ಕೆ.ಎಂ.ಸಿ ಕಾಯ್ದೆ-1976 ರ ಕಲಂ-176ರಂತೆ** ಮಾನ್ಯ ಆಯುಕ್ತರು ಎರಡು ವರ್ಷಗಳ ಕಾಲಾವಧಿಗೆ ಮೀರದಂತೆ ವಹಿಸಿಕೊಟ್ಟಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸ್ಥಾಯಿ ಸಮಿತಿಯ ಮುಂದೆ 15 ದಿನಗಳೊಳಗಾಗಿ ಅವಗಾಹನೆಗಾಗಿ ತರಬೇಕಾಗಿರುತ್ತದೆ.

2. ಎಸ್-9 ಟೆಂಡರ್ ಮೊತ್ತವು ಎರಡು ವರ್ಷಗಳಿಗೆ ರೂ.5,62,62,840/- ಗಳಾಗಿರುತ್ತದೆ. ಆದರೆ, ದಿನಾಂಕ: 25-01-2010ರ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳಂತೆ ಟೆಂಡರ್ ಮುಖಾಂತರ ವಹಿಸುವ ಕಾಮಗಾರಿಗಳ ಮೊತ್ತವು **ರೂ.5.00 ಕೋಟಿಗಳಿಗೆ ಮೀರಿದರೆ ಸಂಬಂಧಪಟ್ಟ, ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆದು, ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಹಾಗೂ ಪಾಲಿಕೆಯ ಶಿಫಾರಸ್ಸಿನೊಂದಿಗೆ, ಘನ ಸರ್ಕಾರದ ಅನುಮೋದನೆ ಪಡೆಯಲು** ಸಲ್ಲಿಸಬಹುದಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಟೆಂಡರ್‌ನ್ನು ಯಶಸ್ವಿ ಬಿಡ್‌ದಾರರಿಗೆ ವಹಿಸಿಕೊಡಲು ಘನ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 07-01-2012 ರ ವಿಶೇಷ ಆಯುಕ್ತರ ಟಿಪ್ಪಣಿ ಪರಿಶೀಲಿಸಿದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P. No.90-121/2012 C/w. W.P. No.2/2012 & W.P. Nos.29-58/2012 & W.P. Nos.59-89/2012 ರ ದಿನಾಂಕ: 12-01-2012 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.**

> **"In the light of the various contentions raised by the parties, the matter requires consideration. Therefore, in my considered view, at this stage, it is just and appropriate to permit the petitioners, without prejudice to their rights and contentions urged in these writ prtitions, to participate in the tender process. However, the further proceedings including the opening of the tenders and consideration of the same shall stand stayed till the next date of hearing".**

**ಆದಕಾರಣ ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯಕ್ಕಾಗಿ ಕಡತ ಕಳುಹಿಸಲು ಸಮಿತಿಯು ತೀರ್ಮಾನಿಸಿತು.**

**6. ವಿಷಯದ ಸಂಖ್ಯೆ: ಸಾಆಸ್ಥಾಸ/51/2011-12:**

ಸಂಖ್ಯೆ: ಇಇ/ಜಿಜಿ/ಇ-ಪ್ರೋಕ್/ಟೆಂಡರ್/15/11-12, ದಿನಾಂಕ: 07-01-2012 ರ ವಿಶೇಷ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, Solid Waste Management Services ಗೆ ದಿನಾಂಕ: 23-09-2011 ರಂದು 2ನೇ ಬಾರಿ ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿತ್ತು. ಪ್ಯಾಕೇಜ್ ಸಂಖ್ಯೆ: ಎಸ್-7ಗೆ ಏಕಮಾತ್ರ ಬಿಡ್ ನಮೂದಿಸಲಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 30-11-2011 ರಂದು ತೆರೆಯಲಾಗಿ ಅನುಮೋದನೆ ಪಡೆದು ಆರ್ಥಿಕ ಬಿಡ್‌ಗಳನ್ನು ದಿನಾಂಕ: 09-12-2011 ರಂದು ತೆರೆಯಲಾಗಿ ಶ್ರೀ.ಎಂ.ಎಲ್.ಶ್ರೀರಾಮುಲು ರವರು ಪ್ರತಿ ಮಾಹೆ ರೂ.27,68,513/- ಗಳನ್ನು ನಮೂದಿಸಿರುತ್ತಾರೆ. ದಿನಾಂಕ: 12-12-2011 ರಂದು ಗುತ್ತಿಗೆದಾರರಿಗೆ ಸಂಧಾನಕ್ಕಾಗಿ ಪತ್ರವನ್ನು ನೀಡಿ, ಗುತ್ತಿಗೆದಾರರು ಪ್ರತಿ ಮಾಹೆ ರೂ.26,85,457/- ಗಳಿಗೆ ಒಪ್ಪಿರುತ್ತಾರೆ. ಈ ಕೆಳಕಂಡ ಅಂಶಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಅವಗಾಹನೆಗಾಗಿ ಸಲ್ಲಿಸಿದೆ.

1. ಟೆಂಡರ್ ಪ್ರಕಟಣೆಯಲ್ಲಿ ಕರಾರಿನ ಅವಧಿಯನ್ನು 2 ವರ್ಷಗಳೆಂದು ಪರಿಗಣಿಸಲಾಗಿದೆ. **ಕೆ.ಎಂ.ಸಿ ಕಾಯ್ದೆ-1976 ರ ಕಲಂ-176ರಂತೆ** ಮಾನ್ಯ ಆಯುಕ್ತರು ಎರಡು ವರ್ಷಗಳ ಕಾಲಾವಧಿಗೆ ಮೀರದಂತೆ ವಹಿಸಿಕೊಟ್ಟಿದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಸ್ಥಾಯಿ ಸಮಿತಿಯ ಮುಂದೆ 15 ದಿನಗಳೊಳಗಾಗಿ ಅವಗಾಹನೆಗಾಗಿ ತರಬೇಕಾಗಿರುತ್ತದೆ.

2. ಎಸ್-7 ಟೆಂಡರ್ ಮೊತ್ತವು ಎರಡು ವರ್ಷಗಳಿಗೆ ರೂ.6,44,50,968/- ಗಳಾಗಿರುತ್ತದೆ. ಆದರೆ, ದಿನಾಂಕ: 25-01-2010ರ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳಂತೆ ಟೆಂಡರ್ ಮುಖಾಂತರ ವಹಿಸುವ ಕಾಮಗಾರಿಗಳ ಮೊತ್ತವು **ರೂ.5.00 ಕೋಟಿಗಳಿಗೆ ಮೀರಿದರೆ ಸಂಬಂಧಪಟ್ಟ, ಸ್ಥಾಯಿ ಸಮಿತಿಯಿಂದ ಅನುಮೋದನೆ ಪಡೆದು, ಪಾಲಿಕೆಯ ಸಭೆಯ ಮುಂದೆ ಮಂಡಿಸಿ ಹಾಗೂ ಪಾಲಿಕೆಯ ಶಿಫಾರಸ್ಸಿನೊಂದಿಗೆ, ಘನ ಸರ್ಕಾರದ ಅನುಮೋದನೆ ಪಡೆಯಲು** ಸಲ್ಲಿಸಬಹುದಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಟೆಂಡರ್‌ನ್ನು ಯಶಸ್ವಿ ಬಿಡ್‌ದಾರರಿಗೆ ವಹಿಸಿಕೊಡಲು ಘನ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 07-01-2012 ರ ವಿಶೇಷ ಆಯುಕ್ತರ ಟಿಪ್ಪಣಿ ಪರಿಶೀಲಿಸಿದೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ W.P. No.90-121/2012 C/w. W.P. No.2/2012 & W.P. Nos.29-58/2012 & W.P. Nos.59-89/2012 ರ ದಿನಾಂಕ: 12-01-2012 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.**

"In the light of the various contentions raised by the parties, the matter requires consideration. Therefore, in my considered view, at this stage, it is just and appropriate to permit the petitioners, without prejudice to their rights and contentions urged in these writ prtitions, to participate in the tender process. However, the further proceedings including the opening of the tenders and consideration of the same shall stand stayed till the next date of hearing".

**ಆದಕಾರಣ ಸದರಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯಕ್ಕಾಗಿ ಕಡತ ಕಳುಹಿಸಲು ಸಮಿತಿಯು ತೀರ್ಮಾನಿಸಿತು.**

**7. ವಿಷಯದ ಸಂಖ್ಯೆ: ಸಾಆಸ್ಥಾಸ/52/2011-12:**

ಸಂಖ್ಯೆ: ಪಿ.ಸಿ.(ಆರ್.ಸಿ.ಹೆಚ್.)ಪಿಆರ್/249/11-12, ದಿನಾಂಕ: 09-01-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 3 ರಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ಆರೋಗ್ಯ ಕೇಂದ್ರವನ್ನು ಪಾಲಿಕೆಯಿಂದ ತೆರೆಯಲು ಕೋರಿರುವ ಬಗ್ಗೆ, ಅಧ್ಯಕ್ಷರು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರು ದಿನಾಂಕ: 22-12-2011 ಕೋರಿರುತ್ತಾರೆ.

ವಾರ್ಡ್ ಸಂಖ್ಯೆ 3 ರಲ್ಲಿನ ಪ್ರದೇಶದ ಸುತ್ತಮುತ್ತ ಬಡಜನರು, ಪರಿಶಿಷ್ಟ ಜಾತಿ ಪಂಗಡದ ಜನರು ವಾಸಿಸುತ್ತಿದ್ದಾರೆ. ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಹಿಂದಿನ ಹಳೆಯ ವಾರ್ಡ್‌ಗಳಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ತಾಯಿ ಮತ್ತು ಮಕ್ಕಳ ಆರೋಗ್ಯ, ಕ್ಷಯ ರೋಗ ನಿಯಂತ್ರಣ, ನಾಯಿ ಕಡಿತಕ್ಕೆ ಲಸಿಕೆ ನೀಡುವುದು. ಹೆಚ್‌ಐವಿ/ಏಡ್ಸ್ ಕಾರ್ಯಕ್ರಮ, ಸೊಳ್ಳೆ ನಿಯಂತ್ರಣ ಕಾರ್ಯಕ್ರಮ, ತಂಬಾಕು ನಿಯಂತ್ರಣ ಕಾರ್ಯಕ್ರಮ ಹಾಗೂ ಇನ್ನಿತರೇ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಹೊಸ ವಾರ್ಡ್‌ಗಳಲ್ಲಿ ಯಾವುದೇ ಆರೋಗ್ಯ ಕಾರ್ಯಕ್ರಮಗಳನ್ನು ಪಾಲಿಕೆಯಿಂದ ವಿಸ್ತರಿಸಲಾಗಿರುವುದಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರವರಿಗೆ ಪತ್ರವನ್ನು ಬರೆಯಲಾಗಿ, ಹೊಸ ವಾರ್ಡ್‌ಗಳಲ್ಲಿರುವ ಆರೋಗ್ಯ ಘಟಕಗಳನ್ನು ಪಾಲಿಕೆಗೆ ಹಸ್ತಾಂತರಿಸಲು ಕೋರಲಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಯಾವುದೇ ನಿರ್ದೇಶನ ಬಂದಿರುವುದಿಲ್ಲ.

ವಾರ್ಡ್ ನಂ.3 ರಲ್ಲಿ ಪಾಲಿಕೆಯಿಂದ ಕಟ್ಟಲಾಗಿರುವ ಪ್ರಸ್ತಾಪಿತ ಸ್ಥಳದಲ್ಲಿ ಈಗಾಗಲೇ ಮುಖ್ಯ ರಸ್ತೆಯಲ್ಲಿ ಮೂರು ಕೋಣೆಯ ಕಟ್ಟಡ, ಶೌಚಾಲಯಗಳಿದ್ದು, ಸದರಿ ಸ್ಥಳದಲ್ಲಿ ಪಾಲಿಕೆಯಿಂದ ಔಷಧಾಲಯವನ್ನು ಸ್ಥಾಪಿಸಿದ್ದಲ್ಲಿ ಈ ವಾರ್ಡ್‌ನಲ್ಲಿರುವ ಸಾರ್ವಜನಿಕರಿಗೆ ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬಹುದು ಮತ್ತು ಪ್ರಥಮ ಚಿಕಿತ್ಸೆ ಮತ್ತು ಎಲ್ಲಾ ತರಹದ ಪ್ರಾಥಮಿಕ ಚಿಕಿತ್ಸೆಯನ್ನು ನೀಡಬಹುದಾಗಿರುತ್ತದೆ. ಸದರಿ ವಾರ್ಡಿನ ಹತ್ತಿರದಲ್ಲಿ ಪಾಲಿಕೆಯ ಘನತ್ಯಾಜ್ಯ ವಿಲೇವಾರಿ ಮಾಡುವ ಸ್ಥಳವಿರುತ್ತದೆ. ಸದರಿ ಸ್ಥಳದ ಸುತ್ತಲಿನ ಪ್ರದೇಶಗಳಲ್ಲಿ ಆಗಿಂದಾಗ್ಗೆ ಆರೋಗ್ಯ ಶಿಬಿರಗಳನ್ನು ಪಾಲಿಕೆಯಿಂದ ನಡೆಸಬೇಕಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿ, ಸದರಿ ಸ್ಥಳದಲ್ಲಿ ಔಷಧಾಲಯವನ್ನು ಸ್ಥಾಪಿಸುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯಿಸಲಾಗಿದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ 29 ಆರೋಗ್ಯ ಕೇಂದ್ರ, 14 ಆರೋಗ್ಯ ಕೇಂದ್ರಗಳನ್ನು ಎನ್.ಜಿ.ಒ. ಸಂಸ್ಥೆಯಿಂದ ಮತ್ತು 14 ಔಷಧಾಲಯ, 2 ಸಂಚಾರಿ ಔಷಧಾಲಯ ಮತ್ತು 19 ನಗರ ಕುಟುಂಬ ಕಲ್ಯಾಣ ಕೇಂದ್ರಗಳು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಕೆಲಸ ನಿರ್ವಹಿಸುತ್ತಿದೆ. ಸದರಿ 2 ಸಂಚಾರಿ ಔಷಧಾಲಯಗಳಾದ (1) ಗಾಂಧಿನಗರ ಸಂಚಾರಿ ಔಷಧಾಲಯ (2) ಶಾಂತಿನಗರ ಸಂಚಾರಿ ಔಷಧಾಲಯಗಳಲ್ಲಿ ಶಾಂತಿನಗರ ಸಂಚಾರಿ ಔಷಧಾಲಯ ಪೂರ್ವ ವಲಯದಲ್ಲಿದ್ದು, ಈ ಸಂಚಾರಿ ಔಷಧಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಮತ್ತು ನೌಕರರನ್ನು ನಿಯೋಜಿಸಬಹುದಾಗಿರುತ್ತದೆ.

ಸದರಿ ಸಂಚಾರಿ ಔಷಧಾಲಯವನ್ನು ವಾರ್ಡ್ ನಂ.3 ಕ್ಕೆ ಸ್ಥಳಾಂತರಿಸಬಹುದಾಗಿರುತ್ತದೆ. ಹಾಗೂ ಈ ಔಷಧಾಲಯಕ್ಕೆ ಬೇಕಾಗುವ ಪೀಠೋಪಕರಣ ಹಾಗೂ ಇನ್ನಿತರೆ ಅಗತ್ಯ ಉಪಕರಣಗಳನ್ನು ಹಾಲಿ ಪಾಲಿಕೆಯಲ್ಲಿರುವ ಆರೋಗ್ಯ ಕೇಂದ್ರಗಳಿಂದ ಒದಗಿಸಲಾಗುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ವಾರ್ಡ್ ಸಂಖ್ಯೆ 3 ರ ಅಟ್ಟೂರು ಪ್ರದೇಶದಲ್ಲಿ ನಿರ್ಮಿಸಲಾದ ಪಾಲಿಕೆಯ ಕಟ್ಟಡದಲ್ಲಿ ಔಷಧಾಲಯವನ್ನು ಸ್ಥಾಪಿಸಲು ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 09-01-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**8. ವಿಷಯದ ಸಂಖ್ಯೆ: ಸಾಆಸ್ಥಾಸ/53/2011-12:**

ಸಂಖ್ಯೆ ಆ/ಪಿಎಸ್ಆರ್/ /2011-12, ದಿನಾಂಕ: 11-01-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು MSW 2000 rules ನಂತೆ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಮಾನವ ಹಕ್ಕು ಆಯೋಗವು ಇಂಥಹ ಯೋಜನೆಗಳ ಅನುಷ್ಠಾನದ ಬಗ್ಗೆ ನಿರಂತರವಾಗಿ ಉಸ್ತುವಾರಿ (ಮಾನಿಟರಿಂಗ್) ಮಾಡುತ್ತಿರುತ್ತವೆ.

ಹಾಗೂ ಈ ಬಗ್ಗೆ ಕಾಲಕಾಲಕ್ಕೆ ಸದರಿ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಾಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಆಧುನಿಕ ತಂತ್ರಜ್ಞಾನಗಳನ್ನು ಪೌರ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಲು ಅಳವಡಿಸಿಕೊಳ್ಳಲಾಗಿದೆ. ಈ ಪೈಕಿ ತ್ಯಾಜ್ಯ ಪ್ಲಾಸ್ಟಿಕ್ ನಿಂದ ಕಚ್ಚಾ ತೈಲವನ್ನು ಉತ್ಪತ್ತಿ ಮಾಡುವ ಘಟಕವು ಒಂದಾಗಿರುತ್ತದೆ.

ಮಂಡೂರು ತ್ಯಾಜ್ಯ ವಿಲೇವಾರಿ ಘಟಕದ ಪ್ರದೇಶದಲ್ಲಿ DBOT ಆಧಾರದ ಮೇರೆಗೆ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾತೈಲ ಉತ್ಪಾದಿಸುವ ಘಟಕ ಪ್ರಾರಂಭಿಸಲು ಟೆಂಡರ್ ಆಹ್ವಾನಿಸುವ ಸಲುವಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಕೌನ್ಸಿಲ್ ಸಭೆಯ ಅನುಮೋದನೆ ಪಡೆದು, ಆಹ್ವಾನಿಸಲಾದ ಟೆಂಡರ್‌ಗಳ ವಿವರಗಳು ಈ ಕೆಳಕಂಡಂತಿರುತ್ತವೆ.

**<u>1st Call Tender</u>**
**Tender called on: 10-05-2011**
**Last date for submission of Tender on: 30-05-2011**

ಪ್ರಥಮ ಕರೆಯ ಟೆಂಡರ್‌ನಲ್ಲಿ ಬಿಡ್ಡುದಾರರು ಯಾರು ಭಾಗವಹಿಸದ ಕಾರಣ ಟೆಂಡರ್ ಅನ್ನು ರದ್ದುಗೊಳಿಸಲಾಯಿತು.

**2nd Call Tender**
**Tender called on: 13-06-2011**
**Last date for submission of Tender on: 21-06-2011**
**Technical Bid opened on: 23-06-2011**
**Financial Bid opened on: 11-08-2011**

ಎರಡನೇಯ ಕರೆಯ ಟೆಂಡರ್‌ನಲ್ಲಿ **ಮೆ॥ ಎಂ.ಕೆ.ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆಯ** ಏಕೈಕ ಬಿಡ್ಡು ಸಲ್ಲಿಕೆಯಾಗಿತ್ತು. ಟೆಂಡರ್‌ನಲ್ಲಿ ಏಕೈಕ ಬಿಡ್ ಸ್ವೀಕೃತಗೊಂಡಿದ್ದರಿಂದ, ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಸ್ಪರ್ಧಾತ್ಮಕ ಬಿಡ್‌ಗಳಿಗೆ ಪ್ರಾಮುಖ್ಯತೆ ನೀಡುವ ಉದ್ದೇಶದಿಂದ ಸದರಿ ಟೆಂಡರ್ ರದ್ದುಗೊಳಿಸಿ ಮರು ಟೆಂಡರ್ ಕರೆಯಲು ತೀರ್ಮಾನಿಸಲಾಯಿತು.

**3rd Call Tender**
**Tender called on: 29-08-2011**
**Last date for submission of Tender on: 16-09-2011**

ಮೂರನೇಯ ಕರೆಯ ಟೆಂಡರ್‌ನಲ್ಲಿ ಬಿಡ್ಡುದಾರರು ಭಾಗವಹಿಸದ ಕಾರಣ ಟೆಂಡರ್ ಅನ್ನು ರದ್ದುಗೊಳಿಸಲಾಯಿತು.

**4th Call Tender** (ಹಾಲಿ ಆಹ್ವಾನಿಸಲಾಗಿರುವ ಟೆಂಡರ್)
**Tender called on: 26-09-2011**
**Last date for submission of Tender on: 22-10-2011**

ನಾಲ್ಕನೇಯ ಕರೆಯ ಟೆಂಡರ್‌ನಲ್ಲಿ **ಮೆ॥ ಎಂ.ಕೆ.ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆಯ** ಏಕೈಕ ಸಲ್ಲಿಕೆಯಾಗಿರುತ್ತದೆ. ಸದರಿ ಬಿಡ್ಡುದಾರರು ಸದರಿ ಯೋಜನೆಯ ಎರಡನೇ ಟೆಂಡರ್ ಕರೆಯಲ್ಲಿ ಭಾಗವಹಿಸಿದ ಬಿಡ್ಡುದಾರರಾಗಿರುತ್ತಾರೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಎರಡನೇ ಕರೆಯ ಟೆಂಡರ್‌ನಲ್ಲಿ ಭಾಗವಹಿಸಿದ್ದ **ಮೆ॥ ಎಂ.ಕೆ. ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆ** ಸಲ್ಲಿಸಿದ್ದ ತಾಂತ್ರಿಕ ಬಿಡ್‌ನ ಮೌಲ್ಯಮಾಪನ ಕಾರ್ಯವನ್ನು **ಮೆ॥ ಐಡೆಕ್ ಸಂಸ್ಥೆರವರಿಗೆ** ವಹಿಸಲಾಗಿತ್ತು.

**ಮೆ॥ ಐಡೆಕ್ ಸಂಸ್ಥೆರವರು ಮೆ॥ ಐಡೆಕ್ ಸಂಸ್ಥೆ** ಬಿಡ್ಡುದಾರರಾದ **ಮೆ॥ ಎಂ.ಕೆ. ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆರವರು** ಟೆಂಡರ್ ಷರತ್ತು ನಿಬಂಧನೆ ಹಾಗೂ ಟೆಂಡರ್‌ನಲ್ಲಿ ನಮೂದಿಸಿರುವ ದಾಖಲೆಗಳನ್ನು ಪೂರೈಸಿರುವುದಾಗಿ ತಿಳಿಸಿ, ಸದರಿ ಬಿಡ್ಡುದಾರರ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾತೈಲ ಉತ್ಪಾದಿಸುವ ಘಟಕದ ಸ್ಥಳ ಪರಿಶೀಲನೆ ನಡೆಸಿ, ಬಿಡ್ಡುದಾರರಿಂದ ಸದರಿ ಯೋಜನೆ ಬಗ್ಗೆ ಸಂಪೂರ್ಣ ಪ್ರಾತ್ಯಕ್ಷಿಕೆ ವಿವರ, ಯೋಜನಾ ವಿವರ (ಡಿ.ಪಿ.ಆರ್.), ಘಟಕ ಕಾರ್ಯನಿರ್ವಹಿಸುತ್ತಿರುವ ವಿಧಾನ, ಯೋಜನೆ ಅನುಷ್ಠಾನಗೊಳಿಸುವ ವಿಧಾನದ ಬಗ್ಗೆ ವಿವರಗಳನ್ನು ಪಡೆದು ತದನಂತರ ಆರ್ಥಿಕ ಬಿಡ್ ತೆರೆಯಲು ವರದಿ ನೀಡಿದ್ದರು.

ಅದರಂತೆ, ದಿನಾಂಕ: 05-08-2011 ರಂದು ಪ್ರಧಾನ ಅಭಿಯಂತರರು, ಮುಖ್ಯ ಅಭಿಯಂತರರು, ಪರಿಸರಕೋಶ, ಕಾರ್ಯಪಾಲಕ ಅಭಿಯಂತರರು-2, ಘನತ್ಯಾಜ್ಯ ನಿರ್ವಹಣೆ ವಿಭಾಗ ರವರನ್ನೊಳಗೊಂಡ ತಂಡವು ಚೆನ್ನೈನಲ್ಲಿರುವ ಮೆ॥ ಎಂ.ಕೆ.ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆ ಸ್ಥಾಪಿಸಿರುವ ಪ್ಲಾಸ್ಟಿಕ್‌ನಿಂದ ಕಚ್ಚಾತೈಲ ಉತ್ಪಾದಿಸುವ ಘಟಕದ ಪರಿಶೀಲನೆ ನಡೆಸಿ ಸದರಿ ಘಟಕವು ಟೆಂಡರ್ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯ ಆರ್ಥಿಕ ಬಿಡ್ ತೆರೆಯಲು ತೀರ್ಮಾನಿಸಲಾಗಿತ್ತು. ಆದರೆ, ಏಕೈಕ ಬಿಡ್ ಸ್ವೀಕೃತಗೊಂಡಿದ್ದರಿಂದ ಸದರಿ ಟೆಂಡರ್‌ನ್ನು ಸದರಿ ಟೆಂಡರ್‌ನ್ನು ರದ್ದುಗೊಳಿಸಲಾಗಿರುತ್ತದೆ.

ಹಾಲಿ ಆಹ್ವಾನಿಸಲಾಗಿರುವ ನಾಲ್ಕನೇ ಕರೆಯ ಟೆಂಡರ್‌ನಲ್ಲೂ ಸಹ ಮೆ॥ ಎಂ.ಕೆ.ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆಯವರು ಮಾತ್ರ ಭಾಗವಹಿಸಿ ಬಿಡ್ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆರವರು ಸಲ್ಲಿಸಿರುವ ತಾಂತ್ರಿಕ ಬಿಡ್‌ನ್ನು ಪರಿಶೀಲಿಸಲಾಗಿ, ಸದರಿ ಸಂಸ್ಥೆಯವರು ಈ ಹಿಂದೆ ಎರಡನೇ ಕರೆಯ ಟೆಂಡರ್‌ನಲ್ಲಿ ಸಲ್ಲಿಸಿರುವ ದಾಖಲೆಗಳನ್ನೇ ಸಲ್ಲಿಸಿರುತ್ತಾರೆ. ಎರಡನೇ ಕರೆಯ ಟೆಂಡರ್‌ನಲ್ಲಿ ಸದರಿಯವರ Technical Bid ನ್ನು ಪ್ರಧಾನ ಅಭಿಯಂತರರ ಅಧ್ಯಕ್ಷತೆಯ ತಾಂತ್ರಿಕ ಸಮಿತಿಯು ಅನುಮೋದಿಸಿರುತ್ತದೆ. (ಎರಡನೇ ಕರೆಯ ಟೆಂಡರ್‌ನ Technical Bid evaluation report ನ್ನು ಕಡತದಲ್ಲಿ ಲಗತ್ತಿಸಿದೆ).

ಮೆ॥ಎಂ.ಕೆ.ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆರವರು ಸದರಿ ಟೆಂಡರ್‌ಗೆ ನಿಗದಿಪಡಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳನ್ನು ಯಶಸ್ವಿಯಾಗಿ ಪೂರೈಸಿರುತ್ತಾರೆ ಹಾಗೂ ಸದರಿ ಬಿಡ್ಡುದಾರರು ನಿರ್ಮಿಸಿರುವ ಘಟಕವನ್ನು ಈಗಾಗಲೇ ಪ್ರಧಾನ ಅಭಿಯಂತರರ ನೇತೃತ್ವದ ತಂಡವು ಪರಿಶೀಲಿಸಿ ಘಟಕವು ಟೆಂಡರ್ ಷರತ್ತು ನಿಬಂಧನೆಗೆ ಅನುಗುಣವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ವರದಿ ನೀಡಿರುತ್ತಾರೆ.

ಸದರಿ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾತೈಲ ಉತ್ಪಾದಿಸುವ ಯೋಜನೆಗೆ ಈಗಾಗಲೇ 3 ಬಾರಿ ಟೆಂಡರ್ ಆಹ್ವಾನಿಸಲಾಗಿದ್ದರೂ, ಮೇಲಿನ ಹಿನ್ನೆಲೆಯಲ್ಲಿ ಟೆಂಡರ್‌ನ್ನು ಅಂತಿಮಗೊಳಿಸಲು ಸಾಧ್ಯವಾಗಿರುವುದಿಲ್ಲ. ಸದರಿ ಯೋಜನೆಯ ಘಟಕ ಸ್ಥಾಪನೆಯು ಬಹಳಷ್ಟು ವಿಳಂಬವಾಗಿದ್ದು, ಈ ಬಗ್ಗೆ ಜನಪ್ರತಿನಿಧಿಗಳು ತೀವ್ರ ಬೇಸರ ವ್ಯಕ್ತಪಡಿಸಿ ಶೀಘ್ರವೇ ಮೇಲಿನ ಘಟಕದ ಸ್ಥಾಪನೆಗೆ ಕ್ರಮಕೈಗೊಳ್ಳಲು ಒತ್ತಾಯಿಸಿರುತ್ತಾರೆ.

ಪ್ಲಾಸ್ಟಿಕ್‌ನಿಂದ ಕಚ್ಚಾತೈಲ ಉತ್ಪಾದಿಸುವ ತಂತ್ರಜ್ಞಾನವು ಸಿಮೀತ ತಂತ್ರಜ್ಞಾನವಾಗಿದ್ದು, ಮೆ॥ಎಂ.ಕೆ.ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆರವರು ಸದರಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡು ಸ್ಥಳೀಯ ಸಕ್ಷಮ ಪ್ರಾಧಿಕಾರಿಗಳ ಅನುಮೋದನೆಯೊಂದಿಗೆ ಚೆನ್ನೈನಲ್ಲಿ ಘಟಕವನ್ನು ಸ್ಥಾಪಿಸಿ ನಿರ್ವಹಿಸುತ್ತಿರುವುದರಿಂದ ಸದರಿ ಯೋಜನೆಯ ನಾಲ್ಕನೇ ಕರೆಯ ಟೆಂಡರ್‌ನಲ್ಲಿ ಭಾಗವಹಿಸಿರುವ ಏಕೈಕ ಬಿಡ್ಡುದಾರರಾದ ಮೆ॥ಎಂ.ಕೆ.ಅರೋಮೆಟಿಕ್ಸ್ ಪ್ರೈವೇಟ್ ಲಿ. ಸಂಸ್ಥೆಯ ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ಅಂಗೀಕರಿಸಿ, ದಿನಾಂಕ: 08-08-2011 ರಂದು ಆರ್ಥಿಕ ಬಿಡ್ ತೆರೆಯಲಾಗಿರುತ್ತದೆ. ಸದರಿ ಸಂಸ್ಥೆರವರು ಪಾಲಿಕೆ ಸರಬರಾಜು ಮಾಡುವ ಪ್ರತಿ ಟನ್ ಪ್ಲಾಸ್ಟಿಕ್‌ಗೆ ರೂ.123/- ನೀಡುವುದಾಗಿ ದರ ನಮೂದಿಸಿರುತ್ತಾರೆ.

ಸದರಿ ಮೊತ್ತವನ್ನು ಹೆಚ್ಚಿಸಲು ಮೆ॥ಎಂ.ಕೆ.ಅರೋಮೆಟಿಕ್ಸ್ ಸಂಸ್ಥೆರವರನ್ನು ದಿನಾಂಕ: 17-11-2011 ರಂದು ದರ ಸಂಧಾನಕ್ಕೆ ಆಹ್ವಾನಿಸಲಾಗಿತ್ತು. ದರ ಸಂಧಾನದಲ್ಲಿ ಸದರಿ ಸಂಸ್ಥೆರವರು ಪಾಲಿಕೆ ಸರಬರಾಜು ಮಾಡುವ ಪ್ಲಾಸ್ಟಿಕ್‌ಗೆ ರೂ.123/- ಅನ್ನು ಪಾಲಿಕೆಗೆ ಪಾವತಿಸುವ ಬದಲಾಗಿ ಕಚ್ಚಾ ತೈಲ ಉತ್ಪಾದಿಸಿದ ನಂತರ, ಸಂಸ್ಥೆರವರು ಮಾರಾಟ ಮಾಡುವ ಕಚ್ಚಾತೈಲದ ಬೆಲೆಯ ಮೇಲೆ ಶೇ.2% ರಾಯಲ್ಟಿಯನ್ನು ಪಾಲಿಕೆಗೆ ಪಾವತಿಸಲು ಒಪ್ಪಿರುತ್ತಾರೆ. ಸದರಿ ಸಂಸ್ಥೆಯು ಮೊದಲು ನಮೂದಿಸಿದ್ದ ದರದಂತೆ ಪಾಲಿಕೆಗೆ ಸಂದಾಯವಾಗಬಹುದಾದ ಮೊತ್ತ.

| ಕ್ರ. ಸಂ. | ಪ್ರತಿದಿನ ಬಳಸುವ ಘನತ್ಯಾಜ್ಯ ಮೆ.ಟನ್ | ಸದರಿ ಸಂಸ್ಥೆಯವರು ನಮೂದಿಸಿರುವ ದರ | ಮಾಹೆ ದಿನಗಳು | ಮೊತ್ತ ಪ್ರತಿ ತಿಂಗಳಿಗೆ | ವಾರ್ಷಿಕ ಮೊತ್ತ |
|---|---|---|---|---|---|
| 1 | 10.00 | 123-00 | 30 | 36900-00 | 442800-00 |

ದರ ಸಂಧಾನದ ನಂತರ ಸದರಿ ಸಂಸ್ಥೆಯು ಶೇ.2 ರ ರಾಯಲ್ಟಿ ರೂಪದಲ್ಲಿ ನೀಡಲು ಒಪ್ಪಿರುವ ದರದಂತೆ ಪಾಲಿಕೆಗೆ ಸಂದಾಯವಾಗಬಹುದಾದ ಮೊತ್ತ.

| | |
|---|---|
| • 10 ಮೆ.ಟನ್ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಉತ್ಪಾದನೆಯಾಗುವ ಕಚ್ಚಾ ತೈಲ | 9800 ಲೀ |
| • ಕಚ್ಚಾ ತೈಲದ ಹಾಲಿ ಮಾರುಕಟ್ಟೆ ದರ ರೂ.33.00 ಪ್ರತಿ ಲೀ. | |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | |
|---|---|
| • ಕಚ್ಚಾ ತೈಲದ ವಾರ್ಷಿಕ ಮಾರಾಟದ ಮೊತ್ತ 9800 ಲೀ. X ರೂ.33.00 X 365 ದಿನಗಳು | 1,180,41 ಲಕ್ಷ |
| • ದರ ಸಂದಾನದ ಶೇ.2 ರ ರಾಯಲ್ಟಿಯಂತೆ ಪಾಲಿಕೆಗೆ ನೀಡಲು ಒಪ್ಪಿರುವ ಮೊತ್ತ = ರೂ.1180.41 X 0.02 | 23.61 ಲಕ್ಷ |

ಸದರಿ ಘಟಕ ಸ್ಥಾಪಿಸಲು ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ, ಕೇವಲ 5 ಎಕರೆ ಪ್ರದೇಶವನ್ನು 20 ವರ್ಷಗಳ ಕಾಲ ಲೀಸ್ ಆಧಾರದ ಮೇರೆಗೆ ಸದರಿ ಸಂಸ್ಥೆಗೆ ನೀಡಬೇಕಾಗಿರುತ್ತದೆ.

ಈ ಎಲ್ಲಾ ವಿಷಯಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಕರ್ನಾಟಕ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನ ಸಭೆಯ ನಡವಳಿಯ ಅನ್ವಯ e-procurement ಅಡಿ ಗುತ್ತಿಗೆ ಕರೆದಾಗಲೂ (ಏಕೈಕ ಗುತ್ತಿಗೆ ಸ್ವೀಕೃತವಾದಲ್ಲಿ, ಗುತ್ತಿಗೆಯಲ್ಲಿ ಭಾಗವಹಿಸಿರುವವರ ಸಂಖ್ಯೆ ಬಗ್ಗೆ ಅಧಿಕಾರಿಗಳಿಗೆ ತಿಳುವಳಿಕೆ ಇಲ್ಲದ ಕಾರಣ ಇದು ಪಾರದರ್ಶಕವಾಗಿಯೇ ಇರುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ e-procurement ಅಡಿ ಪಡೆಯುವ ಏಕೈಕ ಗುತ್ತಿಗೆಯ ದರಗಳು ಸಮರ್ಪಕವೆಂದು ಕಂಡು ಬಂದಲ್ಲಿ ಅನುಮೋದಿಸಬಹುದೆಂದು ಸೂಚಿಸಲಾಗಿದೆ (ಪ್ರತಿಯನ್ನು ಕಡತದಲ್ಲಿ ಲಗತ್ತಿಸಿದೆ).

ವಿವಿಧ ಟೆಂಡರ್‌ಗಳ ಪ್ರಕ್ರಿಯೆಯಲ್ಲಿ ಏಕ ಮಾತ್ರ ಟೆಂಡರ್‌ಅನ್ನು ಅನುಮೋದಿಸಿರುವ ಉದಾಹರಣೆಗಳು ಇರುವುದರಿಂದ ಹಾಗೂ ಸದರಿ ಯೋಜನೆಯು BOT ಅಡಿ ಆಧಾರದ ಯೋಜನೆಯಾಗಿದ್ದು, ಘಟಕ ಸ್ಥಾಪಿಸುವ ಸಂಸ್ಥೆಯೇ ಪಾಲಿಕೆಗೆ ರಾಜಧನ ನೀಡಲಿದ್ದು, ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇಲ್ಲದಿರುವುದರಿಂದ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲ ಉತ್ಪಾದನೆ ಮಾಡುವ ತಂತ್ರಜ್ಞಾನವು ಸೀಮಿತ ತಂತ್ರಜ್ಞಾನವಾಗಿದ್ದು, ಮೆ॥ಎಂ.ಕೆ.ಆರೋಮೇಟಿಕ್ಸ್ ಸಂಸ್ಥೆರವರು ಸದರಿ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡು ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಘಟಕವನ್ನು ಈಗಾಗಲೇ ಚೆನ್ನೈ ನಗರದಲ್ಲಿ ಸ್ಥಾಪಿಸಿ ಘಟಕವು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ, ಹಾಗೂ ಸದರಿ ಯೋಜನೆಗೆ 4 ಬಾರಿ e-procurement Portal ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದರೂ ಮೆ॥ಎಂ.ಕೆ.ಆರೋಮೇಟಿಕ್ಸ್ ಸಂಸ್ಥೆರವರನ್ನು ಹೊರತುಪಡಿಸಿ ಬೇರೆ ಯಾವುದೇ ಸಂಸ್ಥೆಗಳು ಮುಂದೆ ಬರದಿರುವ ಹಿನ್ನಲೆಯಲ್ಲಿ ಮೆ॥ಎಂ.ಕೆ.ಆರೋಮೇಟಿಕ್ಸ್ ಸಂಸ್ಥೆರವರ ಏಕ ಮಾತ್ರ ಟೆಂಡರ್‌ನ್ನು ಅಂಗೀಕರಿಸಿ, ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲ ಉತ್ಪಾದನೆ ಮಾಡುವ ಘಟಕ ಸ್ಥಾಪಿಸಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಕೌನ್ಸಿಲ್ ಸಭೆಯಲ್ಲಿ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಪಡೆಯಲು ಟಿಪ್ಪಣಿ ಮಂಡಿಸಲಾಗಿದೆ.

1. ಪ್ರತಿದಿನ 10 ಮೆ. ಟನ್ ತ್ಯಾಜ್ಯ ಪ್ಲಾಸ್ಟಿಕ್ ನಿಂದ ಕಚ್ಚಾ ತೈಲವನ್ನು ಉತ್ಪತ್ತಿ ಮಾಡುವ ಘಟಕವನ್ನು DBOT ಆಧಾರದ ಮೇಲೆ ಮಂಡೂರು ಗ್ರಾಮದ ಸರ್ವೆ ನಂ.155 ರ (ಉತ್ತರ ಭಾಗ) 5 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಅನುಮೋದನೆ.
2. ಪ್ರತಿದಿನ 10 ಮೆ. ಟನ್ ತ್ಯಾಜ್ಯ ಪ್ಲಾಸ್ಟಿಕ್ ನಿಂದ ಕಚ್ಚಾ ತೈಲವನ್ನು ಉತ್ಪತ್ತಿ ಮಾಡುವ ಘಟಕವನ್ನು DBOT ಆಧಾರದ ಮೇಲೆ ಸ್ಥಾಪಿಸಲು ಮೆ॥ಎಂ.ಕೆ.ಆರೋಮೇಟಿಕ್ಸ್ ಲಿಮಿಟೆಡ್ ಸಂಸ್ಥೆಯವರಿಗೆ 20 ವರ್ಷ ಕಾಲಾವಧಿಗೆ 5 ಎಕರೆ ಎಕರೆ ಪ್ರದೇಶವನ್ನು ಮಂಡೂರು ಗ್ರಾಮದ ಸರ್ವೆ ನಂ.155 (ಉತ್ತರ ಭಾಗ) ರಲ್ಲಿ ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ.
3. ಸದರಿ ಮೆ॥ಎಂ.ಕೆ.ಆರೋಮೇಟಿಕ್ಸ್ ಲಿಮಿಟೆಡ್ ಸಂಸ್ಥೆ, ಪಾಲಿಕೆಗೆ ಕಚ್ಚಾ ತೈಲ ಮಾರಾಟದ ಮೊತ್ತದ ಮೇಲೆ ನೀಡಲು ಒಪ್ಪಿರುವ ಶೇ.2 ರಾಜಧನವನ್ನು ಒಪ್ಪಿಕೊಳ್ಳಲು ಅನುಮೋದನೆ.
4. ಸದರಿ ಪ್ರತಿದಿನ 10 ಮೆ. ಟನ್ ತ್ಯಾಜ್ಯ ಪ್ಲಾಸ್ಟಿಕ್ ನಿಂದ ಕಚ್ಚಾ ತೈಲವನ್ನು ಉತ್ಪತ್ತಿ ಮಾಡುವ ಘಟಕವನ್ನು DBOT ಆಧಾರದ ಮೇಲೆ ಸ್ಥಾಪಿಸಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲು ಅನುಮೋದನೆ.

**ನಿರ್ಣಯ:**

ದಿನಾಂಕ: 11-01-2012 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

**9. ವಿಷಯದ ಸಂಖ್ಯೆ: ಸಾಆಸ್ಥಾಸ/54/2011-12:**

ಸಂಖ್ಯೆ: ಆ.ಅ.(ದ)ಪಿಆರ್/335/11-12, ದಿನಾಂಕ: 10-01-2012 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಾಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ಕೆ 198 ವಾರ್ಡ್‌ಗಳಿಗೆ ಪ್ರಸ್ತುತ ಪ್ರತಿ ವಾರ್ಡ್‌ಗೆ 03 ಜನ ಔಷಧಿ ಸಿಂಪರಣೆಗಾರರು ಮತ್ತು 27 ವಿಧಾನಸಭಾ ಕ್ಷೇತ್ರದ ಉಪ ಆರೋಗ್ಯಾಧಿಕಾರಿಗಳ ವಿಭಾಗ ಕಛೇರಿಗಳಿಗೆ ತಲಾ ಒಂದು ಪವರ್ ಸ್ಪ್ರೈ ಯಂತ್ರ ಮತ್ತು ಬಾಡಿಗೆ ಆಟೋ ಹಾಗೂ ಪ್ರತಿ ವಲಯಕ್ಕೆ 05 ಜನ ಹೆಚ್ಚುವರಿ ಔಷಧಿ ಸಿಂಪರಣೆಗಾರರನ್ನು ನಿಯೋಜಿಸಿಕೊಂಡು ಸೊಳ್ಳೆ ನಿಯಂತ್ರಣ ಕಾರ್ಯ ನಡೆಸಲಾಗುತ್ತಿದೆ. ಸದರಿ ಕಾರ್ಯಕ್ಕೆ ಅಂದಾಜು ಕಾರ್ಮಿಕರಿಗೆ ವೇತನ ರೂ.24,69,000/- ಹಾಗೂ ಪವರ್ ಸ್ಪ್ರೈ ಆಟೋ ಮತ್ತು ಪ್ರಚಾರ ಕಾರ್ಯಕ್ಕೆ ರೂ.2,91,000/- ಗಳನ್ನು ಪ್ರತಿ ಮಾಹೆಗೆ ನೀಡಲಾಗುತ್ತಿದೆ. ಹಾಗೂ ಸೊಳ್ಳೆ ನಿಯಂತ್ರಣ ಕಾರ್ಯದ ಮೇಲ್ವಿಚಾರಣೆಗೆ ಮುಖ್ಯ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಆರೋಗ್ಯಾಧಿಕಾರಿಗಳು, ಆರೋಗ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು, ಹಿರಿಯ ಆರೋಗ್ಯ ಪರಿವೀಕ್ಷಕರು ಹಾಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸೊಳ್ಳೆ ನಿಯಂತ್ರಣದ ಕಾರ್ಯಕ್ರಮವನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಲು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣದ ಕಾರ್ಯಕ್ರಮದಡಿಯಲ್ಲಿ ಒಂದು Task Force ರಚಿಸಿ ಸದರಿ Task Force ಮುಖಾಂತರ ಪ್ರತಿ ದಿನದ ಸೊಳ್ಳೆ ನಿಯಂತ್ರಣ ಕಾರ್ಯದ ವರದಿ ಪಡೆಯಬೇಕಾಗಿರುತ್ತದೆ.

ಸದರಿ Task Force ಗೆ Entomologists ಎರಡು ಜನ ಮತ್ತು ಕೀಟ ಸಂಗ್ರಹಗಾರರು ಎರಡು ಜನರ ಅವಶ್ಯವಿರುತ್ತದೆ. ಹಾಗೂ ಪ್ರಪಂಚದಾದ್ಯಂತ ಹಾಗೂ ದೇಶದ ವಿವಿಧ ರಾಜ್ಯಗಳಲ್ಲಿ ಮೇಲ್ಕಂಡ Task Force ಗಳು ಕಾರ್ಯನಿರ್ವಹಿಸುತ್ತಿವೆ.

ಆದ್ದರಿಂದ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಡೆಂಗೀ ರೋಗ ತಡೆಗಟ್ಟಲು ಅವಶ್ಯವಿರುವ Task Force ಪ್ರಾರಂಭಿಸಿ ಕಾರ್ಯನಿರ್ವಹಿಸಲು 2 ಜನ Entomologists ಮತ್ತು 2 ಜನ ಕೀಟ ಸಂಗ್ರಹಗಾರರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲು ಹಾಗೂ ಸದರಿ ಕಾರ್ಯಕ್ಕೆ ತಗಲುವ ವೆಚ್ಚದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದ್ದು, ಸದರಿ ಮೊತ್ತವು ಒಂದು ಲಕ್ಷದ ಮಿತಿಯೊಳಗಿದ್ದು, ಸದರಿ ಮೊತ್ತವನ್ನು ಆಯವ್ಯಯದ ಪಿಓ 126, ಪಿಓ 128, ಮತ್ತು ಪಿಓ 1534 ಗಳಲ್ಲಿ ಭರಿಸಬಹುದಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ.**

(Signature) Geetha Shashikumar

**(ಡಾ॥ ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 04-01-2012 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಶ್ರೀ.ಎಂ.ಮುನಿರಾಜು | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿಗಳು |
| ಶ್ರೀ.ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ-ಕ್ಲಿನಿಕಲ್) |
| ಶ್ರೀ.ಎನ್. ವೀರಣ್ಣ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ) |
| ಶ್ರೀ.ಎಲ್.ರಮೇಶ್ | ಸದಸ್ಯರು | ಅಧೀಕ್ಷಕರು (ಬನಶಂಕರಿ ರೆಫರಲ್ ಆಸ್ಪತ್ರೆ) |
| ಶ್ರೀಮತಿ.ಫೌಜೀಯ ಬೇಗಂ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಮ್ಯಾನ್ಯೇಜ್ಡ್ ಹೆಲ್ತ್ ಕೇರ್) |
| ಶ್ರೀ.ಓ.ಮಂಜುನಾಥ್ | ಸದಸ್ಯರು | ಮುಖ್ಯ ಅಭಿಯಂತರರ (ತಾಂತ್ರಿಕ ಸಲಹೆಗಾರರು) |
| ಎಂ. ಶ್ರೀನಿವಾಸ್ | ಸದಸ್ಯರು | ಸಹಾಯಕ ಶಸ್ತ್ರ ಚಿಕಿತ್ಸಕರು |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**1. ವಿಷಯದ ಸಂಖ್ಯೆ: ಸಾಆಸ್ಥಾಸ/15/2011-12:**

ಆಯುಕ್ತರ ದಿನಾಂಕ: 26-10-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ರವರು ಇಂತಹ ಸ್ಥಳಗಳನ್ನು ಗುರುತಿಸಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರ್‌ಗೆ ರೂ.5/- ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ. ಈಗಾಗಲೇ ಸದರಿರವರು ಈ ಘಟಕವನ್ನು ಆಂಧ್ರ ಪ್ರದೇಶದ 290 ಸ್ಥಳಗಳಲ್ಲಿ ಸ್ಥಾಪಿಸಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಠ 10 ಸಾವಿರ ಜನಸಂಖ್ಯೆಯುಳ್ಳ 10 ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 5 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದ ಮಧ್ಯಭಾಗದಲ್ಲಿ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ವ್ಯವಸ್ಥೆವುಳ್ಳ ಸ್ಥಳವನ್ನು ಮತ್ತು ಸದರಿ ಘಟಕಕ್ಕೆ ವಿದ್ಯುತ್ ಅನ್ನು ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯು ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಪಯುಕ್ತವಾಗಿರುವುದರಿಂದ, ಸದರಿ ಪ್ರಸ್ತಾವನೆಗೆ ಉಲ್ಲೇಖ-(1) ಮತ್ತು (2) ರಂತೆ ಅನುಮೋದನೆ ಪಡೆಯಲಾಗಿದ್ದು, ಸದರಿ ಯೋಜನೆಗೆ ಈ ಕೆಳಕಂಡಂತೆ 8 ಸ್ಥಳಗಳನ್ನು ಗುರುತಿಸಲಾಗಿದೆ.

- ಶಾಂತಿನಗರ, ವಾರ್ಡ್ ಸಂಖ್ಯೆ.117
- ದೇವರಜೀವನಹಳ್ಳಿ, ವಾರ್ಡ್ ಸಂಖ್ಯೆ.47 (ಎರಡು ಸ್ಥಳಗಳಲ್ಲಿ)
- ವಿದ್ಯಾರಣ್ಯಪುರ, ವಾರ್ಡ್ ಸಂಖ್ಯೆ.09
- ಅರಮನೆನಗರ, ವಾರ್ಡ್ ಸಂಖ್ಯೆ.35
- ಪೀಣ್ಯಾ ಕೈಗಾರಿಕಾ ಪ್ರದೇಶ, ವಾರ್ಡ್ ಸಂಖ್ಯೆ.41
- ಪ್ರಕಾಶ್‌ನಗರ, ವಾರ್ಡ್ ಸಂಖ್ಯೆ.98
- ಲಿಂಗರಾಜಪುರ, ವಾರ್ಡ್ ಸಂಖ್ಯೆ.49

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 08 ಸ್ಥಳಗಳಲ್ಲಿ Water Health India Pvt. Ltd., ರವರಿಗೆ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 5 ವರ್ಷಗಳ ಅವಧಿಗೆ ನೀಡಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ.**

**2. ವಿಷಯದ ಸಂಖ್ಯೆ: ಸಾಆಸ್ಥಾಸ/18/2011-12:**

ಆಯುಕ್ತರ ದಿನಾಂಕ: 27-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಟಿ. ರಾಜ (ಆಟೋ ರಾಜ), ಸಂಸ್ಥಾಪಕರು, ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಬೆಂಗಳೂರು ರವರು ತಮ್ಮ ಸಂಸ್ಥೆಯ ವತಿಯಿಂದ ಸುಮಾರು 400 ರಿಂದ 450 ಜನ ಅನಾಥರುಗಳನ್ನು ಸಾಕುತ್ತಿದ್ದು, ಇಂತಹ ಅನಾಥರುಗಳನ್ನು ಪೋಲೀಸರು, 108 ಆಂಬ್ಯುಲೆನ್ ಮತ್ತು ಸರ್ಕಾರಿ ಆಸ್ಪತ್ರೆಯವರು ವಿವಿಧ ರಸ್ತೆಗಳಲ್ಲಿ ಬಿದ್ದಿರುವವರನ್ನು ಹಾಗೂ ಬೀದಿಯಲ್ಲಿ ತಿರುಗುವ ಭಿಕ್ಷುಕರನ್ನು ಕರೆ ತಂದು ಮೇಲ್ಕಂಡ ಅನಾಥಶ್ರಮದಲ್ಲಿ ಹಾಕಿ ಹೋಗುತ್ತಿದ್ದು, ಇವರುಗಳು ಅನೇಕ ಖಾಯಿಲೆ ರುಜುನಗಳಿಂದ ನರಳಿ ಸಾಯುತ್ತಾರೆ. ಇಂತಹವರನ್ನು ಸುಡಲು ಅಥವಾ ಮಣ್ಣು ಮಾಡಲು ಬೆಂಗಳೂರು ನಗರದ ವಿವಿಧ ವಿದ್ಯುತ್ ಚಿತಾಗಾರಗಳಿಗೆ ತೆರಳಿದಾಗ ಅಲ್ಲಿನ ಅಧಿಕಾರಿ/ಸಿಬ್ಬಂದಿಗಳು ಸೂಕ್ತ ಪ್ರಾತಿನಿಧ್ಯ ನೀಡದೇ ಇರುವುದರಿಂದ ತೊಂದರೆಯಾಗುತ್ತಿರುವುದಾಗಿ ಹಾಗೂ ಯಾವುದೇ ಶುಲ್ಕವನ್ನು ಪಡೆಯದೇ (ಪ್ರಸ್ತುತ ರೂ.200.00 ಗಳನ್ನು ವಿಧಿಸಲಾಗುತ್ತಿದೆ) ಬೆಂಗಳೂರು ಮಹಾನಗರ ಪಾಲಿಕೆಯ/ಸರ್ಕಾರದ ವತಿಯಿಂದ ಉಚಿತವಾಗಿ ಶವ ಸಂಸ್ಕಾರ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಶ್ರೀ.ಟಿ. ರಾಜ ಅಲಿಯಾಸ್ ಆಟೋ ರಾಜ, ಸಂಸ್ಥಾಪಕರು ಇವರು ತಮ್ಮ ಸಂಸ್ಥೆಯ ಕಾರ್ಯ ವೈಖರಿಯ ಬಗ್ಗೆ ಅನೇಕ ಜನಪ್ರಿಯ ದಿನಪತ್ರಿಕೆ, ವಾರ ಪತ್ರಿಕ ಮತ್ತು ಮಾಸ ಪತ್ರಿಕೆಗಳಲ್ಲಿನ ವರದಿಗಳು ಮತ್ತು ಅನೇಕ ದೂರದರ್ಶನ ಮಾಧ್ಯಮಗಳಲ್ಲಿ ಪ್ರಸಾರವಾಗಿರುತ್ತದೆ. ಇವರು ತಮ್ಮ ಸಂಸ್ಥೆಯ ವತಿಯಿಂದ ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯು ನಿಜಕ್ಕೂ ಶ್ಲಾಘನೀಯವಾಗಿದೆ. ಇಂತಹ ಸಾಮಾಜಿಕ ಹಿತಾಸಕ್ತಿಯುಳ್ಳ ಕೆಲಸಗಳನ್ನು ಮಾಡುತ್ತಿರುವ ಇಂತಹ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಸಂಸ್ಥಾಪಕರಾದ ಶ್ರೀ.ಟಿ. ರಾಜ (ಆಟೋ ರಾಜ), ಇವರಿಗೆ ಆದ್ಯತೆ ಮೇಲೆ ಯಾವುದೇ ಶುಲ್ಕವನ್ನು ಪಡೆಯದೇ ಅನಾಥ ಶವಗಳ ಸಂಸ್ಕಾರ ಮಾಡಲು ಅನುಮತಿ ನೀಡುವ ಬಗ್ಗೆ ತೀರ್ಮಾನಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 27-07-2011 ರ ಮಾನ್ಯ ಆಯುಕ್ತರು ರವರ ಟಿಪ್ಪಣಿಯನ್ನು ಮತ್ತು ಜಂಟಿ ಆಯುಕ್ತರು (ಆರೋಗ್ಯ) ರವರು ಸ್ಥಳ ಪರಿಶೀಲನೆ ಮಾಡಿ ದಿನಾಂಕ: 30-11-2011 ರಂದು ನೀಡಿರುವ ವರದಿಯನ್ನು ಪರಿಶೀಲಿಸಿದೆ. ಸದರಿ ಸಂಸ್ಥೆಯಿಂದ ವಿದ್ಯುತ್ ಚಿತಾಗಾರ/ಸ್ಮಶಾನ ಗಳಿಗೆ ಹೋಗುವ ಅನಾಥ ಶವಗಳ ಸಂಸ್ಕಾರಕ್ಕೆ ಶುಲ್ಕ ವಿನಾಯಿತಿ ನೀಡುವುದನ್ನು ತಿರಸ್ಕರಿಸಲು ಸಮಿತಿಯು ತೀರ್ಮಾನಿಸಿತು.**

**3. ವಿಷಯದ ಸಂಖ್ಯೆ: ಸಾಆಸ್ಥಾಸ/40/2011-12:**

ಆಯುಕ್ತರ ದಿನಾಂಕ: 03-11-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಆನೇಕಲ್ ತಾಲ್ಲೂಕಿನ ಬಗ್ಗನದೊಡ್ಡಿ ಗ್ರಾಮದ ಸರ್ವೆ ನಂ.96 ರ ಪಾಲಿಕೆಯ ಜಾಗವನ್ನು ಸಾರ್ವಜನಿಕರ ಅತಿಕ್ರಮಣದಿಂದ ತಡೆಗಟ್ಟುವ ದೃಷ್ಟಿಯಿಂದ ಜಾಗದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ರೂ.250.00 ಲಕ್ಷಗಳಿಗೆ 2009-10ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರದಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಈಗಾಗಲೇ ಮೊದಲನೇ ಬಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಏಕಮಾತ್ರ ಬಿಡ್ಡುದಾರರು ಮಾತ್ರ ಭಾಗವಹಿಸಿದ್ದರಿಂದ ಕಾಮಗಾರಿಯ ಟೆಂಡರ್‌ನ್ನು ರದ್ದುಗೊಳಿಸಿ, ಕಾರ್ಯಪಾಲಕ ಅಭಿಯಂತರರು-1 (ಘ.ತ್ಯಾ.ನಿ.) ರವರು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಎರಡು ಲಕೋಟೆ ಪದ್ಧತಿಯಲ್ಲಿ 2ನೇ ಬಾರಿಗೆ ಟೆಂಡರ್ ನೋಟಿಫಿಕೇಷನ್ ಸಂಖ್ಯೆ: EE-1(SWM)/Tend/01/11-12, dt: 15-07-2011 ರಂತೆ ಟೆಂಡರ್ ಕರೆದಿರುತ್ತಾರೆ.

ಸದರಿ ಕಾಮಗಾರಿಗೆ ಸಂಬಂಧಿಸಿದ ತಾಂತ್ರಿಕ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ತೆರೆಯಲಾಗಿದ್ದು, ಎರಡನೇ ಬಾರಿಯೂ ಸಹ ಏಕ ಮಾತ್ರ ಬಿಡ್ಡುದಾರರು ಭಾಗವಹಿಸಿರುತ್ತಾರೆ. ಬಿಡ್ಡುದಾರರಾದ ಮೆ|| ಅಭಿರಾಮ್ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ.ಲಿ., ರವರು ಟೆಂಡರ್‌ನ ತಾಂತ್ರಿಕ ಬಿಡ್‌ನಲ್ಲಿ ಕೇಳಲಾದ ಎಲ್ಲಾ ದಾಖಲೆಗಳನ್ನು ಒದಗಿದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುತ್ತಾರೆ.

ಕಾಮಗಾರಿಯ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ತೆರೆಯಲಾಗಿರುತ್ತದೆ. ಗುತ್ತಿಗೆದಾರರಾದ ಶ್ರೀ.ಕೆ.ಮದನಮೋಹನ ರೆಡ್ಡಿ ರವರು ನಮೂದಿಸಿರುವ ದರಗಳನ್ನು ಅನುಮೋದಿತ ಅಂದಾಜು ಪಟ್ಟಿಯೊಂದಿಗೆ ಹೋಲಿಸಿದಾಗ ಮೊತ್ತವು ರೂ.26569030/- ಆಗಿದ್ದು, ಇದು ಅನುಮೋದಿತ ಅಂದಾಜು ಪಟ್ಟಿಯ ದರಗಳಿಗಿಂತ ಶೇ.6.34 ರಷ್ಟು ಹೆಚ್ಚುವರಿಯಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಗುತ್ತಿಗೆದಾರರು ನಮೂದಿಸಿರುವ ಇದೇ ದರಗಳನ್ನು 2010-11 ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗೆ ಹೋಲಿಸಿದಾಗ ಮೊತ್ತವು ರೂ.26569030/- ಆಗಿದ್ದು, ಶೇ.2.24ರಷ್ಟು ಕಡಿಮೆಯಿರುತ್ತದೆ. ಹಾಗೂ ಗುತ್ತಿಗೆದಾರರು ನಮೂದಿಸಿರುವ ಇದೇ ದರಗಳನ್ನು ಲೋಕೋಪಯೋಗಿ ಇಲಾಖೆಯ ಪರಿಷ್ಕೃತ ಉಕ್ಕು ಮತ್ತು ಬಿಟ್ಯುಮಿನ್ ದರಗಳೊಂದಿಗೆ ಶೇ.2.70 ರಷ್ಟು ಕಡಿಮೆಯಿರುತ್ತದೆ ಹಾಗೂ ಗುತ್ತಿಗೆದಾರರಾದ ಶ್ರೀ.ಕೆ.ಮದನಮೋಹನ ರೆಡ್ಡಿ ರವರು ಸದರಿ ಕಾಮಗಾರಿಗೆ ಸಂಬಂಧಿಸಿದ ಕರೆಯಲಾದ ಮೊದಲನೇ ಕರೆಯ ಟೆಂಡರ್‌ನಲ್ಲಿ ಭಾಗವಹಿಸಿದ್ದು ಏಕಮಾತ್ರ ಬಿಡ್ಡುದಾರರಾಗಿರುತ್ತಾರೆ. ಇದೇ ಗುತ್ತಿಗೆದಾರರು ಈ ಬಾರಿಯು ಟೆಂಡರ್‌ನಲ್ಲಿ ಭಾಗವಹಿಸಿದ್ದು ಕನಿಷ್ಠ ದರಗಳನ್ನು ನಮೂದಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ಗುತ್ತಿಗೆದಾರರಾದ ಶ್ರೀ.ಕೆ.ಮದನಮೋಹನ ರೆಡ್ಡಿ ರವರು ನಮೂದಿಸಿರುವ ದರಗಳನ್ನು 2010-11 ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗೆ ಹೋಲಿಸಿದಾಗ ಮೊತ್ತವು ರೂ.26569030/- ಆಗಿದ್ದು ಲೋಕೋಪಯೋಗಿ ಇಲಾಖೆಯ ಪರಿಷ್ಕೃತ ಉಕ್ಕು ಮತ್ತು ಬಿಟ್ಯುಮಿನ್ ದರಗಳೊಂದಿಗೆ ಹೋಲಿಸಿದಾಗ ಶೇ.2.70 ರಷ್ಟು ಕಡಿಮೆಯಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯ ಟೆಂಡರ್‌ನ್ನು ಶ್ರೀ.ಕೆ.ಮದನಮೋಹನ ರೆಡ್ಡಿ (ಮೆ॥ ಅಭಿರಾಮ್ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ. ಲಿ.,) ರವರಿಗೆ ವಹಿಸಿಕೊಡಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 03-11-2011 ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಡತವನ್ನು ಪರಿಶೀಲಿಸಲಾಗಿ ಟೆಂಡರ್‌ನ ಕಾಲಾವಧಿಯು ಮುಗಿದಿರುವುದರಿಂದ ಟೆಂಡರ್ ಕಾಲಾವಧಿ ವಿಸ್ತರಣೆಗಾಗಿ ಗುತ್ತಿಗೆದಾರರಿಂದ ಒಪ್ಪಿಗೆ ಪತ್ರ ಪಡೆದು ಕಡತವನ್ನು ಮರು ಮಂಡಿಸಲು ಸಮಿತಿಯು ತೀರ್ಮಾನಿಸಿದೆ.**

**4. ವಿಷಯದ ಸಂಖ್ಯೆ: ಸಾಆಸ್ಥಾಸ/43/2011-12:**

ಸಂಖ್ಯೆ: ಎಂ.ಹೆಚ್.ಸಿ./ಪಿಆರ್/160/10-11, ದಿನಾಂಕ: 18-11-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ/ನೌಕರರುಗಳ ಹಾಗೂ ಅವರ ಅವಲಂಬಿತರಿಗೆ (ಒಳರೋಗಿ ಮತ್ತು ಹೊರ ರೋಗಿ) ವೈದ್ಯಕೀಯ ಸೌಲಭ್ಯವನ್ನು 2008 ರಿಂದ ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆಯ ಮೂಲಕ ನೀಡಲಾಗುತ್ತಿದೆ. ಪಾಲಿಕೆಯಲ್ಲಿ 12,000 ನೌಕರರಿದ್ದು ಅವರ ಅವಲಂಬಿತರು ಸೇರಿ ಒಟ್ಟು ಸುಮಾರು 60,000 ಜನರಿಗೆ ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆಯ ಮೂಲಕ 139 ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವೈದ್ಯಕೀಯ ಸೌಲಭ್ಯವನ್ನು ನೀಡಲಾಗುತ್ತಿದೆ. ಈ ಸಂಬಂಧ ಪಾಲಿಕೆಯ ಎಲ್ಲಾ ನೌಕರರನ್ನು ಹಾಗೂ ಅವರ ಅವಲಂಬಿತರನ್ನು ಗುರುತಿಸುವ ಸಲುವಾಗಿ ಗುರುತಿನ ಚೀಟಿಯನ್ನು ನೀಡಲಾಗಿರುತ್ತದೆ.

ಪಾಲಿಕೆಯಲ್ಲಿ ನೌಕರರ ಚಿಕಿತ್ಸೆಗೆಂದು 2008-09ನೇ ಸಾಲಿನ ಆಯವ್ಯಯದಲ್ಲಿ 5 ಕೋಟಿ ರೂ ಅನುದಾನ ಮಂಜೂರಾಗಿರುತ್ತದೆ ಹಾಗೂ 2009-10 ನೇ ಸಾಲಿನಲ್ಲಿ 5 1/2 (ಐದುವರೆ) ಕೋಟಿ ಅನುದಾನ ಮಂಜೂರಾಗಿದ್ದು ಸದರಿ ಸಾಲಿನಲ್ಲಿ ಪಾಲಿಕೆಯ ಅಧಿಕಾರಿ/ನೌಕರರು ಹಾಗೂ ಅವಲಂಬಿತರು ಹೆಚ್ಚು ಹೆಚ್ಚಾಗಿ ಸದುಪಯೋಗ ಪಡೆದುಕೊಂಡಿರುವುದರಿಂದ 2 ಕೋಟಿ ವಿಶೇಷ ಅನುದಾನ ಮಂಜೂರಾಗಿರುತ್ತದೆ. ಈ ಯೋಜನೆಯು ಅನುಷ್ಠಾನಗೊಳ್ಳುವ ಮುಂಚೆ ಆಯಾ ವಲಯ ಮಟ್ಟದಲ್ಲಿ ಸರ್ಕಾರದ ಮೆಡಿಕಲ್ ಅಟೆಂಡೆನ್ಸ್ ರೂಲ್ಸನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿತ್ತು. ಪಾಲಿಕೆಯಲ್ಲಿ 2008 ರಿಂದ ಈ ಯೋಜನೆಯು ಅನುಷ್ಠಾನಗೊಂಡ ನಂತರ ಹೆಚ್ಚು ಹೆಚ್ಚು ನೌಕರ ಹಾಗೂ ಅವರ ಅವಲಂಬಿತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಎಂ.ಓ.ಯು. ಮಾಡಿಕೊಳ್ಳಲಾದ ಖಾಸಗಿ ಆಸ್ಪತ್ರೆಗಳಿಗೆ ಬಿಲ್ಲುಗಳ ಪಾವತಿ, ಹಾಗೂ ಹೊಸ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು. ಈ ಎಲ್ಲಾ ಕೆಲಸವನ್ನು ಮ್ಯಾನೇಜ್ಡ್ ಹೆಲ್ತ್ ಕೇರ್ ಅಡಿಯಲ್ಲಿ ನಿರ್ವಹಿಸಲಾಗುತ್ತಿರುತ್ತದೆ.

ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆ ಅಡಿಯಲ್ಲಿ ಖಾಸಗಿ ಆಸ್ಪತ್ರೆಗಳು ನೀಡುವ ಬಿಲ್ಲುಗಳನ್ನು ತಪಾಸಣೆ ನಡೆಸಿ ಸಿಜಿಹೆಚ್ಎಸ್ ದರ ಪಟ್ಟಿಯಂತೆ ಪಾವತಿಸಲಾಗುತ್ತಿದೆ. ಸದರಿ ಸಿ.ಜಿ.ಹೆಚ್.ಎಸ್. ದರ ಪಟ್ಟಿ 6 ತಿಂಗಳಿಗೊಮ್ಮೆ ಪರಿಷ್ಕರಣೆಯಾಗುತ್ತಿರುತ್ತದೆ ಹಾಗೂ ಕೆಲವು ಅನ್ ಕೊಡೆಡ್ ಪ್ರೊಸಿಜರ್ಸ್ (Un Coded Procedures) ಗಳಿಗೆ ದರಗಳು ಸಿ.ಜಿ.ಹೆಚ್.ಎಸ್. ಅಡಿಯಲ್ಲಿ ನಿಗದಿಪಡಿಸಿರುವುದಿಲ್ಲ. ಈ ಪ್ರೊಸಿಜರ್ಸ್ ಗಳಿಗೆ ಹಾಗೂ ಅನ್‌ಕೊಡೆಡ್ ದರಗಳಿಗೆ ಆಯುಕ್ತರ ಆದೇಶ ಅವಶ್ಯವಿರುತ್ತದೆ. ಪಾಲಿಕೆಯಲ್ಲಿ ಅನ್ ಕೊಡೆಡ್ ಪ್ರೊಸಿಜರ್‌ಗಳಿಗೆ ಹಾಗೂ ಅರ್ಹರಾಗದೇ ಇರುವ ಸಿಬ್ಬಂದಿ ನೌಕರರ ಅವಲಂಬಿತರು (25 ವರ್ಷ ಮೇಲ್ಪಟ್ಟವರು) ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುತ್ತಿರುವುದರಿಂದ ಪಾಲಿಕೆಯ ಖಜಾನೆಗೆ ನಷ್ಟವಾಗುತ್ತಿರುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಈ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಣಿತಿ ಹೊಂದಿರುವ ಸಂಸ್ಥೆಗೆ ವಹಿಸಿದ್ದಲ್ಲಿ ಪಾಲಿಕೆಗೆ ಆರ್ಥಿಕ ಉಳಿತಾಯ ಹಾಗೂ ದುರುಪಯೋಗವನ್ನು ತಡೆಗಟ್ಟಬಹುದಾಗಿದೆ.

ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾದ ಯು.ಟಿ.ಐ. ಸಂಸ್ಥೆಯು ಈಗಾಗಲೇ ಬಿ.ಎಸ್.ಎನ್.ಎಲ್., ಬಿ.ಎಂ.ಟಿ.ಸಿ., ಬಿಡಬ್ಲ್ಯೂಎಸ್ಎಸ್‌ಬಿ ಹಾಗೂ ಕೆಪಿಟಿಸಿಎಲ್, ಸರ್ಕಾರಿ ಸಂಸ್ಥೆಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ನಿರ್ವಹಿಸುತ್ತಿರುತ್ತಾರೆ. ಅದೇ ರೀತಿ 2010 ಅಕ್ಟೋಬರ್ ಮಾಹೆಯಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ಮ್ಯಾನೇಜ್ಡ್ ಹೆಲ್ತ್ ಕೇರ್ ಯೋಜನೆಯ ಅಡಿಯಲ್ಲಿ ನಿರ್ವಹಿಸಲಾಗುತ್ತಿರುವ ಖಾಸಗಿ ಆಸ್ಪತ್ರೆಯ ಬಿಲ್ಲುಗಳನ್ನು ಪರಿಶೀಲಿಸುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ 14-10-2010 ಹಾಗೂ 23-10-2010 ರಂದು ಸಭೆ ಸೇರಿ ಅಪರ ಆಯುಕ್ತರು (ಆರೋಗ್ಯ) ಹಾಗೂ ವಿಶೇಷ ಆಯುಕ್ತರ ಅಧ್ಯಕ್ಷತೆಯಲ್ಲಿ, ಯು.ಟಿ.ಐ. ಸಂಸ್ಥೆಯವರೊಂದಿಗೆ ಸಭೆಯನ್ನು ನಡೆಸಿ ಸವಿವರವಾಗಿ ಚರ್ಚಿಸಲಾಗಿರುತ್ತದೆ. ಮುಂದುವರೆದಂತೆ ದಿನಾಂಕ: 22-06-2011 ರಂದು ಉಪ ಆಯುಕ್ತರು (ಆರೋಗ್ಯ) ಇವರ ಅಧ್ಯಕ್ಷತೆಯಲ್ಲಿ ಯು.ಟಿ.ಐ. ಸಂಸ್ಥೆಯವರು ನೀಡಿರುವ ಪ್ರಸ್ತಾವನೆಯಂತೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿರುವ ವಿಷಯಗಳ ಬಗ್ಗೆ ಚರ್ಚಿಸಲಾಗಿರುತ್ತದೆ. (ಒಡಂಬಡಿಕೆಯ ಪ್ರತಿಯನ್ನು ಲಗತ್ತಿಸಿದೆ- ANNEXURE-I). ಈ ವ್ಯವಸ್ಥೆಯಿಂದ ಬೃಬೆಂ.ಮ. ಪಾಲಿಕೆಗೆ ಯಾವುದೇ ಹೆಚ್ಚಿನ ಆರ್ಥಿಕ ವೆಚ್ಚವಾಗುವುದಿಲ್ಲ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನೌಕರರು ಮತ್ತು ಅವಲಂಬಿತರ ವೈದ್ಯಕೀಯ ಬಿಲ್ಲುಗಳ ಮೇಲೆ ಆಸ್ಪತ್ರೆಗಳಿಂದ ನೀಡಲಾದ ಚಿಕಿತ್ಸೆಯ ನಿರ್ವಹಣೆಯ ಮೊತ್ತ ಅಂದರೆ ಚಿಕಿತ್ಸೆ ನೀಡುವ ಆಸ್ಪತ್ರೆಗಳಿಂದ ರೂ.266-00 ಹಣವನ್ನು ಒಂದು ಬಿಲ್ಲಿಗೆ ಮಾತ್ರ ಯೂ.ಟಿ.ಐ. ಸಂಸ್ಥೆಯವರು ಪಾವತಿ ಪಡೆಯುತ್ತಾರೆ.

ಪಾಲಿಕೆಯಿಂದ ಅಂದಾಜು ಒಂದು ತಿಂಗಳ ಮುಂಗಡವನ್ನು ಅಂದರೆ ಅಂದಾಜು ಒಂದು ಕೋಟಿ ರೂ. ಗಳನ್ನು ಪಾವತಿಸಬೇಕಾಗುತ್ತದೆ. ಯು.ಟಿ.ಐ. ಸಂಸ್ಥೆಯ ತಜ್ಞ ವೈದ್ಯರುಗಳು ಎಲ್ಲಾ ಮೆಡಿಕಲ್ ಬಿಲ್ಲುಗಳನ್ನು Scrutiny ಮಾಡಿ ಅನಗತ್ಯ ಬಿಲ್ಲುಗಳಲ್ಲಿರುವ ವೆಚ್ಚಗಳಿಗೆ ಕಡಿವಾಣ ಹಾಕಲಾಗುತ್ತದೆ.

ಪಾಲಿಕೆಯ ನೌಕರ ಸಿಬ್ಬಂದಿ ಹಾಗೂ ಅವಲಂಬಿತರಿಗೆ ಉತ್ತಮ ಹಾಗೂ ಸಮಯೋಚಿತ ಆರೋಗ್ಯ ಸೌಲಭ್ಯ ನೀಡುವ ಹಿತದೃಷ್ಠಿ ಮತ್ತು ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು, ಮ್ಯಾನೇಜ್ಡ್ ಹೆಲ್ತ್‌ಕೇರ್ ಯೋಜನೆಯನ್ನು ಸಮಗ್ರವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಹಾಗೂ ಯು.ಟಿ.ಐ. ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮ್ಯಾನೇಜ್ಡ್ ಹೆಲ್ತ್‌ಕೇರ್ ಯೋಜನೆಯನ್ನು ವ್ಯವಸ್ಥಿತವಾಗಿ ರೂಪಿಸುವ ಸಂಬಂಧ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಲಾಗಿದೆ.**

**5. ವಿಷಯದ ಸಂಖ್ಯೆ: ಸಾಆಸ್ಥಾಸ/44/2011-12:**

ಆಯುಕ್ತರ ದಿನಾಂಕ: 22-11-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗೆ ಹೊಸದಾಗಿ ಆಹ್ವಾನಿಸಲಾಗಿರುವ ಟೆಂಡರ್‌ನಲ್ಲಿ ಪ್ರತಿ ದಿನ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಪ್ರಾಥಮಿಕ ಹಂತದಲ್ಲಿಯೇ ತ್ಯಾಜ್ಯವನ್ನು ಬೇರ್ಪಡಿಕೆ ಮಾಡುವ ಅಂಶವನ್ನು ಅಳವಡಿಸಿಕೊಳ್ಳಲಾಗಿರುವುದರಿಂದ, ತ್ಯಾಜ್ಯ ಸಂಗ್ರಹಣೆ, ತ್ಯಾಜ್ಯ ಬೇರ್ಪಡಿಕೆ, ತ್ಯಾಜ್ಯ ವಿಲೇವಾರಿ ಮತ್ತು ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಇತರೆ ಮಾರ್ಗಗಳನ್ನು ಕಂಡುಕೊಳ್ಳುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಸಾರ್ವಜನಿಕರಿಗೆ ನಿರಂತರವಾಗಿ 1 ವರ್ಷಗಳ ಕಾಲ IEC ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ತ್ಯಾಜ್ಯ ಸಂಗ್ರಹಣೆ, ತ್ಯಾಜ್ಯ ಬೇರ್ಪಡಿಕೆ, ತ್ಯಾಜ್ಯ ವಿಲೇವಾರಿ ಮತ್ತು ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಇತರೆ ಮಾರ್ಗಗಳನ್ನು ಕಂಡುಕೊಳ್ಳುವ ಬಗ್ಗೆ ಅರಿವು ಮೂಡಿಸಲು EOI (Expression of Interest) ಟೆಂಡರ್ ಅನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಕರೆಯಲಾಗಿದ್ದು, ಈ ಕೆಳಕಂಡ ಸಂಸ್ಥೆಗಳು ನಿಗಧಿತ ದಿನಾಂಕದೊಳಗೆ EOI (Expression of Interest) ಅನ್ನು ಆನ್‌ಲೈನ್ ಮೂಲಕ ಸಲ್ಲಿಸಿರುತ್ತಾರೆ.

1. Tetra Tech India Ltd.
2. Kind Hearts Pvt. Ltd.
3. Sri Kalpatharu Education & Rural Development Society.
4. Faith Health Care Pvt. Ltd.
5. Vidyaranya Education and Development Society.
6. People's Action and Rural Development Society.
7. The Energy and Resources Institute (TERI).
8. PVS Education Rural Development Society.
9. Rural Development Society.
10. Gramodaya Bailhongal.

ಮೇಲೆ ತಿಳಿಸಿರುವ ಸಂಸ್ಥೆಗಳು ಸಲ್ಲಿಸಿದ EOI ಅನ್ನು ತಾಂತ್ರಿಕ ಮೌಲ್ಯಮಾಪನ ಮಾಡಲಾಗಿದ್ದು, EOI ನಲ್ಲಿ ಕೇಳಲಾದ ತಾಂತ್ರಿಕ ಅರ್ಹತೆಯ ಎಲ್ಲಾ ಮಾನದಂಡಗಳಲ್ಲಿ ಈ ಕೆಳಕಂಡ 4 ಸಂಸ್ಥೆಗಳು ಅರ್ಹರಾಗಿರುತ್ತಾರೆ.

1. Tetra Tech India Ltd.
2. Faith Health Care Pvt. Ltd.
3. Vidyaranya Education and Development Society.
4. The Energy and Resources Institute (TERI).

ಮೇಲೆ ತಿಳಿಸಿರುವ ಸಂಸ್ಥೆಗಳಿಗೆ ಟೆಂಡರ್ ದಸ್ತಾವೇಜನ್ನು ನೀಡಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ತಗಲುವ ಅಂದಾಜು ಮೊತ್ತವನ್ನು ನಿಗಧಿಪಡಿಸಲು ಸರ್ಕಾರೇತರ ಸಂಸ್ಥೆಗಳಿಂದ ದರಪಟ್ಟಿಯನ್ನು ಪಡೆಯಲಾಗಿದ್ದು, ಸದರಿ ಯೋಜನೆಗೆ ಅಂದಾಜು ವಾರ್ಷಿಕ ರೂ.1 ಕೋಟಿ (ರೂ.ಒಂದು ಕೋಟಿ) ತಗಲುವುದು. ಸದರಿ ಮೊತ್ತವನ್ನು 13ನೇ ಹಣಕಾಸು ಯೋಜನೆಯಡಿಯಲ್ಲಿ ಭರಿಸಬಹುದಾಗಿದ್ದು, ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 22-11-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**6. ವಿಷಯದ ಸಂಖ್ಯೆ: ಸಾಆಸ್ಥಾಸ/45/2011-12:**

ಸಂಖ್ಯೆ: ಯೋ.ಸ.ಅ. (ಆರ್.ಸಿ.ಹೆಚ್.)ಪಿಆರ್/166/2011-12, ದಿನಾಂಕ: 01-12-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 85 ಲಕ್ಷ ಜನಸಂಖ್ಯೆ ಇದ್ದು, ಸಾಂಕ್ರಾಮಿಕವಲ್ಲದ ರೋಗಗಳಾದ ಮಧುಮೇಹ, ಕ್ಯಾನ್ಸರ್, ಹೃದ್ರೋಗ ಸಂಬಂಧಿಸಿದ ಕಾಯಿಲೆಗಳು, ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಮತ್ತು ಪಾರ್ಶ್ವವಾಯುವಿಗೆ ಸಂಬಂಧಪಟ್ಟಂತೆ, ಹೆಚ್ಚು ಹೆಚ್ಚು ಜನರು ತುತ್ತಾಗಿ ಸಾವನ್ನಪ್ಪುತ್ತಿದ್ದಾರೆ.

ಭಾರತದಲ್ಲಿ 2008 ರ ಅಂಕಿ-ಅಂಶದಂತೆ, 2967600 ಪುರುಷರು, 2273800 ಸ್ತ್ರೀಯರು, ಈ ರೀತಿಯ ಕಾಯಿಲೆಗಳಿಂದ ಮರಣ ಹೊಂದಿರುತ್ತಾರೆ. ಈ ಅಂಕಿ-ಅಂಶದಲ್ಲಿ ಶೇಕಡ 35 ಜನರು 60 ವರ್ಷದೊಳಗಿನವರಾಗಿದ್ದು, ಇದು ತುಂಬಾ ಆಘಾತಕಾರಿ ಸಂಗತಿಯಾಗಿರುತ್ತದೆ. ಈ ಸಂಬಂಧ ಪ್ರಮುಖ ದಿನಪತ್ರಿಕೆಗಳಲ್ಲಿಯೂ ಸಹ ಸುದ್ದಿ ಪ್ರಕಟವಾಗಿರುತ್ತದೆ.

**ಮಧುಮೇಹ ಮತ್ತು ರಕ್ತದೊತ್ತಡ:**

ಭಾರತ ದೇಶದಲ್ಲಿ ಒಟ್ಟು 5.1 ಕೋಟಿ ಜನರು ಮಧುಮೇಹದಿಂದ ಬಳುತ್ತಿರುವುದು ಕಂಡು ಬಂದಿದ್ದು, ಪ್ರಪಂಚದ ಎರಡನೇ ಸ್ಥಾನದಲ್ಲಿದ್ದು, 2010ರ ಹೊತ್ತಿಗೆ ಸುಮಾರು 8.0 ಕೋಟಿ ಜನರು ಮಧುಮೇಹದಿಂದ ಬಳಲುತ್ತಿದ್ದು, ಚೈನಾ ದೇಶವನ್ನು ಹಿಂದಿಕ್ಕುವ ಸಾಧ್ಯತೆಗಳಿವೆ. ಭಾರತ ದೇಶದಲ್ಲಿ ಪ್ರತಿ 5 ಜನಕ್ಕೆ 3 ಜನರಿಗೆ ರಕ್ತದ ಒತ್ತಡ ಅಥವಾ ಮಧುಮೇಹದಿಂದ ನರಳುತ್ತಿದ್ದು, ಇತ್ತೀಚೆಗೆ ಸ್ಟಾನೂಫಿ ರವರ ವರದಿಯಂತೆ ನಗರ ಪ್ರದೇಶದಲ್ಲಿ ವಾಸಿಸುವವರನ್ನು ಪರೀಕ್ಷೆಗೆ ಒಳಪಡಿಸಲಾಗಿ ಅದರಲ್ಲಿ ಶೇಕಡ 60 ಜನರು ರಕ್ತದ ಒತ್ತಡ ಅಥವಾ ಮಧುಮೇಹ ಖಾಯಿಲೆಯಿಂದ ಬಳಲುತ್ತಿರುವುದು ಕಂಡು ಬಂದಿರುತ್ತದೆ.

ಈ ಬಗ್ಗೆ ದಿ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ದಿನಪತ್ರಿಕೆಯಲ್ಲಿ 10-11-2011 ರ ಸುದ್ದಿಯಲ್ಲಿ ಕರ್ನಾಟಕದಲ್ಲಿ ಶೇಕಡ 49% ಜನರಿಗೆ ರಕ್ತದ ಒತ್ತಡ ಅಥವಾ ಮಧುಮೇಹದ ಪ್ರಿವೆಲೆನ್ಸ್ ಇರುವುದು ಕಂಡು ಬಂದಿರುತ್ತದೆಂದು ವರದಿಯಾಗಿರುತ್ತದೆ.

**ಥೈರಾಯ್ಡ್:** ಈ ಕಾಯಿಲೆಗೆ ಸಂಬಂಧಿಸಿದಂತೆ, ಭಾರತ ದೇಶದಲ್ಲಿ 4.2 ಕೋಟಿ ಮಹಿಳೆಯರು ತುತ್ತಾಗಿದ್ದು, ಅದರಲ್ಲಿ 7 ರಿಂದ 8 ಶೇಕಡ ಜನರನ್ನು ಈ ಖಾಯಿಲೆ ಇರುವ ಬಗ್ಗೆ ಗುರುತಿಸಲಾಗಿರುತ್ತದೆ. ಥೈರಾಯ್ಡ್ ಹಾರ್ಮೋನ್ ಕೊರತೆಯಿಂದ ಮಹಿಳೆಯರು ಮತ್ತು ಹುಟ್ಟುವ ಮಕ್ಕಳಲ್ಲಿ ಗಂಭೀರ ಪರಿಣಾಮ ಬೀರಬಲ್ಲದು ಆದ್ದರಿಂದ ಇದರ ಬಗ್ಗೆ ಕಾರ್ಯಕ್ರಮ ರೂಪಿಸಿ ಸೂಕ್ತ ಚಿಕಿತ್ಸೆ ನೀಡುವುದು ಮುಖ್ಯವಾಗಿರುತ್ತದೆ. ಈ ಎರಡು ಕಾಯಿಲೆಗಳಾದ ಮಧುಮೇಹ ಮತ್ತು ಥೈರಾಯ್ಡ್‌ವನ್ನು ಹತೋಟಿಯಲ್ಲಿಡಲು ಮತ್ತು ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ನೀಡಲು ಹಾಗೂ ಹೆಚ್ಚು ಹೆಚ್ಚು ಜನರಿಗೆ ಪ್ರಯೋಜನವನ್ನು ದೊರಕಿಸುವ ನಿಟ್ಟಿನಲ್ಲಿ ದಿನಾಂಕ: 03-10-2011 ರಂದು ಮತ್ತು ದಿನಾಂಕ: 06-11-2011 ರಂದು ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ನಡುವಳಿಗಳನ್ನು ದಾಖಲಿಸಲಾಗಿರುತ್ತದೆ. ಪಾಲಿಕೆಯಲ್ಲಿ ಈ ಎರಡು ಕಾಯಿಲೆಗಳ ಬಗ್ಗೆ ಒಂದು ಯೋಜನೆಯನ್ನು ಸಿದ್ಧಪಡಿಸಲು ನಿರ್ಧರಿಸುವಂತೆ ಈ ರೀತಿಯಾಗಿ ಪಾಲಿಕೆಯಲ್ಲಿ ಅನುಷ್ಠಾನಗೊಳಿಸಬಹುದಾಗಿರುತ್ತದೆ.

ಮಧುಮೇಹ ಮತ್ತು ಥೈರಾಯ್ಡ್ ಕಾಯಿಲೆಗಳನ್ನು ಪ್ರಾರಂಭಿಕ ಹಂತದಲ್ಲಿ ಕಂಡು ಹಿಡಿಯುವುದು, ಚಿಕಿತ್ಸೆ ನೀಡುವುದು, ಅರಿವು, ತಿಳುವಳಿಕೆ ಮೂಡಿಸುವುದು, ಈ ಬಗ್ಗೆ ಒಂದು ಯೋಜನೆಯ ಪ್ರಸ್ತಾವನೆಯನ್ನು ಸಿದ್ಧಪಡಿಸಬೇಕಾಗಿರುತ್ತದೆ. ಈ ಯೋಜನೆಯ ಕೆಲಸಕಾರ್ಯ ಅನುಷ್ಠಾನ, ಪ್ರಗತಿ ಇತ್ಯಾದಿಗಳ ಬಗ್ಗೆ ಆಗಿಂದಾಗ್ಗೆ ಚರ್ಚಿಸಬೇಕಾಗಿದ್ದು, ಈ ಸಂಬಂಧ ಪಾಲಿಕೆಯಲ್ಲಿ ಗೌರ್ನರಿಂಗ್ ಕೌನ್ಸಿಲ್ ಮತ್ತು ಟೆಕ್ನಿಕಲ್ ಕಮಿಟಿಯನ್ನು ರಚಿಸುವುದು ಸೂಕ್ತವಾಗಿದ್ದು, ಈ ಕೆಳಕಂಡ ಸದಸ್ಯರನ್ನು ನೇಮಕ ಮಾಡಬಹುದಾಗಿರುತ್ತದೆ.

**ಗೌರ್ನರಿಂಗ್ ಕೌನ್ಸಿಲ್:**

| | |
|---|---|
| ಪೂಜ್ಯ ಮಹಾ ಪೌರರು | ಗೌರವಾಧ್ಯಕ್ಷರು |
| ಮಾನ್ಯ ಉಪ ಮಹಾಪೌರರು | ಸದಸ್ಯರು |
| ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ | ಸದಸ್ಯರು |
| ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ | ಸದಸ್ಯರು |
| ಮಾನ್ಯ ಆಯುಕ್ತರು | ಕಾರ್ಯಾಧ್ಯಕ್ಷರು |
| ಜಂಟಿ ಆಯುಕ್ತರು (ಆರೋಗ್ಯ) | ಕಾರ್ಯದರ್ಶಿಗಳು |
| ಡಾ॥ ಪ್ರಸನ್ನ ಕುಮಾರ (ಮಧು ಮೇಹ ತಜ್ಞರು) | ಸದಸ್ಯರು |
| ಮುಖ್ಯ ಆರೋಗ್ಯಾಧಿಕಾರಿಗಳು | ಹೆಚ್ಚುವರಿ ಕಾರ್ಯದರ್ಶಿಗಳು |
| ಯೋಜನಾ ಸಮನ್ವಯಾಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

**ಟೆಕ್ನಿಕಲ್ ಸಮಿತಿ ಸದಸ್ಯರುಗಳು:**

| | |
|---|---|
| ಜಂಟಿ/ಉಪ ಆಯುಕ್ತರು (ಆರೋಗ್ಯ) | ಅಧ್ಯಕ್ಷರು |
| ಮುಖ್ಯ ಆರೋಗ್ಯಾಧಿಕಾರಿಗಳು | ಸದಸ್ಯರು |
| ಆರೋಗ್ಯಾಧಿಕಾರಿಗಳು (ಕ್ಲಿನಿಕಲ್) | ಸದಸ್ಯರು |
| ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ) | ಸದಸ್ಯರು |
| ಯೋಜನಾ ಸಮನ್ವಯಾಧಿಕಾರಿ, ಆರ್.ಸಿ.ಹೆಚ್. | ಕಾರ್ಯದರ್ಶಿಗಳು |
| ವೈದ್ಯಾಧಿಕಾರಿಗಳು (ಮಧು ಮೇಹ/ಥೈರಾಯ್ಡ್ | ಸದಸ್ಯರು |
| ಡಾ॥ ಪ್ರಸನ್ನ ಕುಮಾರ (ಬೆಂಗಳೂರು ಮಧು ಮೇಹ ಸಂಸ್ಥೆ) | ಸದಸ್ಯರು |
| ಡಾ॥ ರಘುನಾಥ | ಸದಸ್ಯರು |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೆಂಗಳೂರು ಮಹಾನಗರ ಪಾಲಿಕೆ

ಈ ಮೇಲ್ಕಂಡ ಸಮಿತಿ ಸದಸ್ಯರುಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ, ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.

**ಗೌರ್ನಿಂಗ್ ಕೌನ್ಸಿಲ್‌ನ ನಿರ್ವಹಿಸಬೇಕಾದ ಕೆಲಸ-ಕಾರ್ಯಗಳು**

1. ಮಧು ಮೇಹ ಮತ್ತು ಥೈರಾಯ್ಡ್ ಕಾಯಿಲೆಗಳನ್ನು ಹತೋಟಿಯಲ್ಲಿಡಲು ಈಗಾಗಲೇ ಸಿದ್ಧಪಡಿಸಿರುವ ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆ ಮಾಡಲು ಅಥವಾ ಹೊಸ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ನಿರ್ಧಾರ ತೆಗೆದುಕೊಳ್ಳುವುದು.
2. ಯೋಜನೆಗೆ ಅವಶ್ಯವಿರುವ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸುವುದು.
3. ಹೆಚ್ಚಿನ ಮಧು ಮೇಹ/ಥೈರಾಯ್ಡ್ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ನಿರ್ಧರಿಸುವುದು.
4. ಈ ಯೋಜನೆಗೆ ಸಂಬಂಧಿಸಿದ ಮಾನವ ಸಂಪನ್ಮೂಲಗಳನ್ನು ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸುವುದು.
5. ಹೊಸ ಹೊಸ ಅವಿಷ್ಕಾರ ಅಥವಾ ಹೊಸ ಬೆಳವಣಿಗೆಗಳನ್ನು ಅಳವಡಿಕೆ, ನಿರ್ದೇಶನ ನೀಡುವುದು.
6. ಪ್ರತಿ 6 ತಿಂಗಳಿಗೊಮ್ಮೆ ಸಭೆ ಸೇರುವುದು.

**ಟೆಕ್ನಿಕಲ್ ಕಮಿಟಿ ನಿರ್ವಹಿಸುವ ಕೆಲಸ ಕಾರ್ಯಗಳು**

1. ಗೌರ್ನಿಂಗ್ ಕೌನ್ಸಿಲ್ ತೆಗೆದುಕೊಳ್ಳುವ ನಿರ್ಧಾರಗಳನ್ನು ಅಳವಡಿಸಿಕೊಂಡು ಕಾರ್ಯಕ್ರಮ ರೂಪಿಸಿಕೊಂಡು ಅನುಷ್ಠಾನಗೊಳಿಸುವುದು.
2. ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ಮಾನವ ಸಂಪನ್ಮೂಲ, ಯಂತ್ರೋಪಕರಣ, ಔಷಧಿಗಳು, ಪಿಠೋಪಕರಣಗಳು, ರಾಸಾಯನಿಕಗಳು, ಮತ್ತು ಇನ್ನಿತರೆ ಸಾಮಗ್ರಿಗಳನ್ನು ನಿರ್ಧರಿಸುವುದು ಮತ್ತು ಗವರ್ನಲಿಂಗ್ ಕೌನ್ಸಿಲ್‌ನ ಅನುಮತಿ ಪಡೆದು ಅನುಷ್ಠಾನಗೊಳಿಸುವುದು.
3. ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ಆರ್ಥಿಕ ಸಂಪನ್ಮೂಲ ಕ್ರೂಢೀಕರಿಸಲು ಸಲಹೆ ಮತ್ತು ಸೂಚನೆಗಳನ್ನು ನೀಡುವುದು.
4. ಯೋಜನೆಯ ದಿನ ನಿತ್ಯದ ಕೆಲಸ ಕಾರ್ಯಗಳ ಬಗ್ಗೆ ಗಮನಹರಿಸುವುದು ಮತ್ತು ಸಮಗ್ರವಾಗಿ ಅನುಷ್ಠಾನಗೊಳಿಸಿ ಹೆಚ್ಚಿನ ಸಾರ್ವಜನಿಕರಿಗೆ ತಲುಪುವಲ್ಲಿ ಕೆಲಸ ನಿರ್ವಹಿಸುವುದು.
5. ಹೊಸ ಅನುಷ್ಠಾನಗಳನ್ನು ಅವಶ್ಯಕತೆಗನುಗುಣವಾಗಿ ಅಳವಡಿಸಿಕೊಳ್ಳುವುದು.
6. ತರಬೇತಿ, ಮತ್ತು ಯೋಜನೆಯ ಮಾರ್ಪಾಡುಗಳ ಬಗ್ಗೆ ನಿರ್ಧರಿಸಿ ಕ್ರಮ ಕೈಗೊಳ್ಳುವುದು.
7. ಪ್ರತಿ ತಿಂಗಳಿಗೊಮ್ಮೆ ಸಭೆ ಸೇರಿ ಎಲ್ಲಾ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದು ಹಾಗೂ ನಿರ್ಣಯಗಳನ್ನು ದಾಖಲಿಸುವುದು.

**ಥೈರಾಯ್ಡ್ ಖಾಯಿಲೆ:**

ಥೈರಾಯ್ಡ್ ಖಾಯಿಲೆಗೆ ಸಂಬಂಧಿಸಿದಂತೆ, ದಿನಾಂಕ: 07-11-2011 ರಂದು ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ **ಅಬೋಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್** ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಸಾರ್ವಜನಿಕರ ಆರೋಗ್ಯ ಕಾಯ್ದುಕೊಳ್ಳುವ ದಿಸೆಯಲ್ಲಿ ಪಾಲಿಕೆಗೆ ಸುಮಾರು 40 ಲಕ್ಷ ರೂಪಾಯಿ ಬೆಲೆ ಬಾಳುವ ಯಂತ್ರೋಪಕರಣಗಳನ್ನು ಲೀಸ್ ಆಧಾರದಲ್ಲಿ ಒಂದು ವರ್ಷದ ಅವಧಿಗೆ ನೀಡಲಾಗುವುದೆಂದು ಒಪ್ಪಿರುತ್ತಾರೆ.

ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಆರೋಗ್ಯ ಘಟಕಗಳಲ್ಲಿ ಚಿಕಿತ್ಸೆಗೆ ಒಳಪಡುವ ಅವಶ್ಯವಿರುವ ಎಲ್ಲಾ ರೋಗಿಗಳಿಗೂ, ನವಜಾತ ಶಿಶುಗಳು ಮತ್ತು ಗರ್ಭವತಿಯಾಗಿರುವ ಎಲ್ಲಾ ಮಹಿಳೆಯರಿಗೆ ಥೈರಾಯ್ಡ್ ಕಾಯಿಲೆಯ ಬಗ್ಗೆ ಚಿಕಿತ್ಸೆ ನೀಡುವ ಸಂಬಂಧ ರಕ್ತ ಮಾದರಿಯನ್ನು ಎಲ್ಲಾ ಕೇಂದ್ರಗಳಿಂದ ಸಂಗ್ರಹಿಸುವುದು ಮತ್ತು ರೆಫರಲ್ ಆಸ್ಪತ್ರೆಯ ಮುಖಾಂತರ ದಾಸಪ್ಪ ಹೆರಿಗೆ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗುವ ಪ್ರಯೋಗಾಲಯಕ್ಕೆ ರವಾನಿಸಿ ಪರೀಕ್ಷೆಗೆ ಒಳಪಡಿಸುವುದು ವರದಿಯನ್ನು ಪುನ: ಸಂಬಂಧಿಸಿದ ಆರೋಗ್ಯ ಘಟಕಗಳಿಗೆ ನೀಡುವುದು. ಒಂದು ಥೈರಾಯ್ಡ್ ರಕ್ತ ಮಾದರಿಯ ಪರೀಕ್ಷೆ ಮಾಡಲು ಪಾಲಿಕೆಯಿಂದ ರೂ.35-00 (ರೂ. ಮೂವತ್ತೈದು ರೂಪಾಯಿಗಳನ್ನು) **ಅಬೋಟ ಇಂಡಿಯಾ ಪ್ರೈವೇಟ್ ಲಿಮಿಟೆಡ್** ರವರಿಗೆ ಪಾವತಿಸಬಹುದಾಗಿರುತ್ತದೆ (ಖಾಸಗಿ ಪ್ರಯೋಗಾಲಯಗಳಲ್ಲಿ ಈ ಪರೀಕ್ಷೆಗೆ ಸುಮಾರು ರೂ.150-00 ರಿಂದ ರೂ.200-00 ತಗಲುತ್ತದೆ).

ಈ ಎಲ್ಲಾ ವಿಷಯಗಳ ಕುರಿತು ಅಬೋಟ್ ಇಂಡಿಯಾ ಪ್ರೈ. ಲಿ., ಸಂಸ್ಥೆಯೊಂದಿಗೆ ಪಾಲಿಕೆಯು ಒಡಂಬಡಿಕೆ ಮಾಡಿಕೊಳ್ಳಬೇಕಾಗಿರುತ್ತದೆ.

**ಅಬೋಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಒಪ್ಪಿ, ಪಾಲಿಕೆಗೆ ನೀಡಲಿರುವ ಸಹಕಾರಗಳು**

1. ಈ ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ಎಲ್ಲಾ ರೀತಿಯ ವಿಶೇಷ ಮಾಹಿತಿ ಮಾರ್ಗದರ್ಶನ ಮತ್ತು ಸಲಹೆಯನ್ನು ಆಗಿಂದ್ದಾಗೆ ನೀಡುವುದು.
2. ಥೈರಾಯ್ಡ್ ಕಾಯಿಲೆಯ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಲು ಪೋಸ್ಟರ್ಸ್, ಬ್ಯಾನರ್ಸ್, ಕರಪತ್ರ, ಕ್ಯಾಸೆಟ್ಸ್ ಇನ್ನಿತರೆ ಸಾಮಗ್ರಿಗಳನ್ನು ಒದಗಿಸುತ್ತಾರೆ.
3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವೈದ್ಯರಿಗೆ ಥೈರಾಯ್ಡ್ ಕಾಯಿಲೆಯ ಬಗ್ಗೆ ವಿಶೇಷ ತರಬೇತಿಯನ್ನು ನೀಡುತ್ತಾರೆ.
4. ಇಂಡಿಯನ್ ಥೈರಾಯ್ಡ್ ಸೊಸೈಟಿಯಿಂದ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡು ಪಾಲಿಕೆಯ ಎಲ್ಲಾ ವೈದ್ಯರಿಗೆ ಮತ್ತು ನಗರದ ಆಸಕ್ತಿ ಇರುವ ಫಿಜಿಶಿಯನ್‌ಗಳಿಗೆ ತರಬೇತಿ ನೀಡಲಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

5. ಈ ಯೋಜನೆಯನ್ನು ಅನುಷ್ಠಾನದ ಒಂದು ವರ್ಷದ ಅವಧಿಗೆ ಎಲ್ಲಾ ಫಿಜಿಶಿಯನ್‌ಗಳಿಗೆ ಐ.ಟಿ.ಎಸ್. ಜರ್ನಲ್‌ಗಳನ್ನು ಉಚಿತವಾಗಿ ನೀಡಲಿದೆ.
6. ಬೆಂಗಳೂರು ನಗರದಲ್ಲಿ ಥೈರೊ ಕ್ಲಬ್ ಅನ್ನು ರಚಿಸಿ ಥೈರಾಯ್ಡ್ ಕಾಯಿಲೆಯ ಬಗ್ಗೆ ವಿಚಾರ ವಿನಿಮಯ ನಡೆಸುವುದು ಮತ್ತು ಕಾರ್ಯಕ್ರಮ ಆಯೋಜಿಸುತ್ತಾರೆ.
7. ಪ್ಯಾರಾ ಮೆಡಿಕಲ್ ಸಿಬ್ಬಂದಿ ಮತ್ತು ಪ್ರಯೋಗ ಶಾಲಾ ತಂತ್ರಜ್ಞರುಗಳಿಗೆ ಥೈರಾಯ್ಡ್ ಕಾಯಿಲೆ ಮತ್ತು ಪರೀಕ್ಷೆ ಮಾಡುವ ಬಗ್ಗೆ ಉಚಿತವಾಗಿ ತರಬೇತಿ ನೀಡಲಿದ್ದಾರೆ.
8. ಥೈರಾಯ್ಡ್ ಹಾರ್ಮೋನ್‌ನ ರಕ್ತ ಮಾದರಿಯನ್ನು ಪರೀಕ್ಷೆ ಮಾಡಲು ಸುಮಾರು 40 ಲಕ್ಷ ರೂಪಾಯಿಯ ಯಂತ್ರೋಪಕರಣವನ್ನು ಈ ಯೋಜನೆಯ ಒಂದು ವರ್ಷದ ಅವಧಿಗೆ ಲೀಸ್ಡ್ ಆಧಾರದ ಮೇಲೆ ಪಾಲಿಕೆಗೆ ಉಚಿತವಾಗಿ ನೀಡಲಿದ್ದಾರೆ ಮತ್ತು ಈ ಯಂತ್ರೋಪಕರಣದ ಎಲ್ಲಾ ಸುಸ್ಥಿತಿಯನ್ನು ಸದರಿ ಸಂಸ್ಥೆಯವರು ನಿರ್ವಹಿಸಲಿದ್ದು, ಈ ಸಂಬಂಧ ಪಾಲಿಕೆಯಿಂದ ಯಾವುದೇ ಆರ್ಥಿಕ ವೆಚ್ಚ ಭರಿಸಬೇಕಾಗಿರುವುದಿಲ್ಲ.
9. ಈ ಎಲ್ಲಾ ಯೋಜನೆಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಮೇಲ್ಕಂಡಂತೆ ಸಮಿತಿಯನ್ನು ರಚಿಸುವುದು. ಈ ಅನುಷ್ಠಾನಕ್ಕೆ ಪಾಲಿಕೆಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲ ಮತ್ತು ಇನ್ನಿತರೆ ಸಾಮಗ್ರಿಗಳನ್ನು ಬಳಸಿಕೊಳ್ಳುವುದು.
10. ಪಾಲಿಕೆಯ ವ್ಯಾಪ್ತಿಯಲ್ಲಿ ಥೈರಾಯ್ಡ್ ಕಾಯಿಲೆಯ ಚಿಕಿತ್ಸೆ ನೀಡುವಲ್ಲಿ ಮತ್ತು ತಡೆಗಟ್ಟುವಲ್ಲಿ ಆಸಕ್ತಿಯಿರುವ ನಗರದ ಖ್ಯಾತ ಫಿಜಿಷಿಯನ್ ಒಟ್ಟುಗೂಡಿಸಿ ಈ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳುವುದು.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿರ್ವಹಿಸಬೇಕಾಗಿರುವ ಕೆಲಸ ಕಾರ್ಯಗಳು**

1. ಈಗಾಗಲೇ ಸಿದ್ಧಪಡಿಸಿರುವ ಯೋಜನೆಯಂತೆ, **ಅಬೋಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್** ಸಂಸ್ಥೆಯೊಂದಿಗೆ ಮೊದಲಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗುವುದು.
2. ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಪಾಲಿಕೆಯ ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿ ಮತ್ತು ಪ್ರಯೋಗ ಶಾಲಾ ತಂತ್ರಜ್ಞರನ್ನು ನಿಯೋಜಿಸಬೇಕಾಗುವುದು.
3. ಪಾಲಿಕೆಯಿಂದ ಈ ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಜನ ಸಾಮಾನ್ಯರಿಗೆ ಒದಗಿಸಲು ಹಾಗೂ ವಾರ್ಡ್‌ವಾರು ಜನರಿಗೆ ತಲುಪಲು ಒಂದು ಮಾಹಿತಿ ನೀಡುವ ವಾಹನ, ಚಾಲಕರು ಮತ್ತು ಇಂಧನವನ್ನು ಒದಗಿಸಬೇಕಾಗಿರುತ್ತದೆ.
4. ಯೋಜನೆಯ ಅನುಷ್ಠಾನಕ್ಕೆ ವೈದ್ಯರನ್ನು ನಿಯೋಜಿಸಬೇಕಾಗಿರುತ್ತದೆ.
5. ರಕ್ತದ ಮಾದರಿಯನ್ನು ಸಂಗ್ರಹಿಸಲು ಮತ್ತು ಪರೀಕ್ಷೆ ಮಾಡಲು ಸಿರಂಜ್, ಟೆಸ್ಟ್‌ಟ್ಯೂಬ್ಸ್, ಸರ್ಜಿಕಲ್ ಸ್ಪಿರಿಟ್, ಕಾಟನ್, ಇತ್ಯಾದಿಗಳನ್ನು ಒದಗಿಸುವುದು.
6. ರಕ್ತದ ಮಾದರಿ ಸಂಗ್ರಹಣೆ ಪ್ರಯೋಗಶಾಲಾ ವರದಿ, ಹಮ್ಮಿಕೊಂಡಿರುವ ಎಲ್ಲಾ ಕಾರ್ಯಕ್ರಮಗಳ ಮಾಹಿತಿಯನ್ನು ದಾಖಲಿಸುವುದು ಮತ್ತು ಆರೋಗ್ಯ ಘಟಕವಾರು (ವಾರ್ಡ್‌ವಾರು) ಕ್ರೋಡಿಕರಿಸಿ ಸಂಗ್ರಹಿಸಬೇಕಾಗಿರುತ್ತದೆ.
7. ನಗರ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮದ ಬಗ್ಗೆ ಜನರಿಗೆ ಅರಿವು ಮೂಡಿಸುವಲ್ಲಿ ಕೇಬಲ್ ಟಿ.ವಿ., ವಿದ್ಯುನ್ಮಾನ ಮಿಡಿಯ ಮುಖಾಂತರ, ಹೋರ್ಡಿಂಗ್ಸ್‌ಗಳನ್ನು, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಮತ್ತು ಜನರಿರುವ ಸ್ಥಳಗಳಲ್ಲಿ, ಪಾಲಿಕೆಯ ಹೋರ್ಡಿಂಗ್ಸ್‌ಗಳಲ್ಲಿ ಅಳವಡಿಸಿ ಹೆಚ್ಚಿನ ಪ್ರಚಾರವನ್ನು ಕೈಗೊಳ್ಳುವುದು.
8. ಥೈರಾಯ್ಡ್ ರಕ್ತ ಮಾದರಿಯನ್ನು ಪರೀಕ್ಷೆ ಮಾಡಲು (ಟಿ.ಎಸ್.ಹೆಚ್. ಹಾರ್ಮೋನ್) ಒಂದು ಕಿಟ್ ಮಾರುಕಟ್ಟೆಯಲ್ಲಿ ರೂ.150 ರಿಂದ 200 ರಷ್ಟು ಬೆಲೆ ಇದ್ದು ಅದನ್ನು **ಮೆ: ಅಬೋಟ್ ಇಂಡಿಯಾ ಪ್ರೈ. ಲಿ.,** ರವರು ಕಿಟ್ ಒಂದಕ್ಕೆ ರೂ.35-00 ರೂಪಾಯಿಗಳಲ್ಲಿ ನೀಡಲು ಒಪ್ಪಿರುತ್ತಾರೆ. ಈ ಮೊತ್ತವನ್ನು **ಮೆ: ಅಬೋಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ** ಪಾವತಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

**ಮಧು ಮೇಹ ಕಾಯಿಲೆ ಮತ್ತು ರಕ್ತದೊತ್ತಡ:**

ಮಧು ಮೇಹ ಕಾಯಿಲೆಗೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾರಂಭಿಕವಾಗಿ ಒಂದು ಮಧು ಮೇಹ ಚಿಕಿತ್ಸಾಲಯ ಪ್ರಾರಂಭಿಸುವ ಹಂತವಾಗಿ ಎಲ್ಲಾ ವಲಯಗಳಲ್ಲಿ ಒಂದೊಂದು ಮಧು ಮೇಹ ಚಿಕಿತ್ಸಾಲಯ ತೆರೆಯುವುದು ಹಾಗೂ ಮುಂದಿನ ದಿನಗಳಲ್ಲಿ ಪಾಲಿಕೆಯ ಎಲ್ಲಾ ಆರೋಗ್ಯ ಘಟಕಗಳಲ್ಲಿ ಮಧು ಮೇಹ ಚಿಕಿತ್ಸೆಯನ್ನು ನೀಡುವುದರ ಬಗ್ಗೆ ಕ್ರಮ ವಹಿಸಬೇಕಾಗಿರುತ್ತದೆ.

ಮಧು ಮೇಹ ಖಾಯಿಲೆಯ ಚಿಕಿತ್ಸೆ ಕ್ರಮಕ್ಕೆ ಮುನ್ನ ಕಣ್ಣಿ ಪರೀಕ್ಷೆ ಮಾಡಬೇಕಾಗಿದ್ದು, ಇದಕ್ಕಾಗಿ ವೈದ್ಯರನ್ನು ಮತ್ತು ಪ್ಯಾರಮೆಡಿಕಲ್ ಸಿಬ್ಬಂದಿಯನ್ನು ನೇಮಿಸಬೇಕಾಗಿರುತ್ತದೆ. ಈ ಸಂಬಂಧ ಸ್ವಯಂ ಸೇವಾ ಸಂಸ್ಥೆ ಅಥವಾ ಖಾಸಗಿ ಕಣ್ಣಿನ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬಹುದಾಗಿದೆ.

ಪ್ರಾರಂಭಿಕವಾಗಿ ಪೊಬ್ಬತ್ತಿ ಹೆಲಿಗೆ ಆಸ್ಪತ್ರೆಯಲ್ಲಿ ಮಧು ಮೇಹ ಚಿಕಿತ್ಸಾಲಯವನ್ನು ಪ್ರಾರಂಭಿಸಬಹುದಾಗಿರುತ್ತದೆ. ಈ ಮಧು ಮೇಹ ಕೇಂದ್ರಕ್ಕೆ ಪಾಲಿಕೆಯ ವ್ಯಾಪ್ತಿಯ ಎಲ್ಲಾ ಆರೋಗ್ಯ ಘಟಕಗಳಿಂದ ಮಧು ಮೇಹ ಖಾಯಿಲೆ ಇರುವವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಈ ಮಧು ಮೇಹ ಚಿಕಿತ್ಸಾಲಯಕ್ಕೆ ಕಳುಹಿಸಬಹುದಾಗಿದ್ದು ಹೆಚ್ಚಿನ ಚಿಕಿತ್ಸೆ ಮತ್ತು ಔಷಧಿಗಳನ್ನು ಪಡೆಯಬಹುದಾಗಿರುತ್ತದೆ.

ಈ ಮಧು ಮೇಹ ಕೇಂದ್ರವು ಪ್ರಾರಂಭಿಕವಾಗಿ ಬೆಳಗ್ಗೆ: 9-00 ರಿಂದ ಮಧ್ಯಾಹ್ನ: 2-00 ರ ವರೆವಿಗೂ ಕೆಲಸ ನಿರ್ವಹಿಸಲಿದ್ದು, ಇದಕ್ಕಾಗಿ ಈ ಕೆಳಕಂಡ ಸಿಬ್ಬಂದಿಗಳ ಸೇವೆಯು ಅವಶ್ಯವಿರುತ್ತದೆ.

ಅಧ್ಯಕ್ಷರು
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

| | | | |
|---|---|---|---|
| 1. | ಫಿಜಿಶಿಯನ್ | - | 01. |
| 2. | ಸಹಾಯಕ ಶಸ್ತ್ರ ಚಿಕಿತ್ಸಕರು | - | 01. |
| 3. | ಶುಶ್ರೂಷಕಿಯರು | - | 02. |
| 4. | ಕೌನ್ಸಿಲಿಂಗ್ ಮತ್ತು ಆಹಾರ ಶುಶ್ರೂಷಕಿಯರು | - | 01. |
| 5. | ಗಣಕ ಯಂತ್ರ ಆಪರೇಟರ್ | - | 01. |
| 5. | ನಾಲ್ಕನೇ ದರ್ಜೆ ನೌಕರರು | - | 04. |

ಮೇಲ್ಕಂಡ ಸಿಬ್ಬಂದಿಯವರಿಗೆ ಪಾಲಿಕೆಯಿಂದ ತರಬೇತಿ ನೀಡಬೇಕಾಗಿದ್ದು, ಈ ಸಂಬಂಧ ಗುರುತಿಸಲ್ಪಡುವ ಸಿಬ್ಬಂದಿಗೆ ಬೆಂಗಳೂರು ಮಧು ಮೇಹ ಸಂಸ್ಥೆಯಲ್ಲಿ ತರಬೇತಿ ನೀಡಬೇಕಾಗಿರುತ್ತದೆ. ಈ ಮೇಲ್ಕಂಡ ಸಿಬ್ಬಂದಿಯ ಸೇವೆಯನ್ನು ಪಡೆಯುವ ಬಗ್ಗೆ ದಿನಾಂಕ: 05-11-2011 ರ ಸಭೆಯಲ್ಲಿಯು ಸಹ ಚರ್ಚಿಸಲಾಗಿರುತ್ತದೆ.

ಮಧು ಮೇಹ ಖಾಯಿಲೆಯ ಚಿಕಿತ್ಸಾ ಕ್ರಮಕ್ಕೆ ಮುನ್ನಾ ಕಣ್ಣಿನ ಪರೀಕ್ಷೆ ಮಾಡಬೇಕಾಗಿದ್ದು, ಇದಕ್ಕಾಗಿ ವೈದ್ಯರನ್ನು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಯನ್ನು ನೇಮಿಸಬೇಕಾಗಿರುತ್ತದೆ.

ಮೇಲ್ಕಂಡ ಅವಶ್ಯವಿರುವ ವೈದ್ಯರುಗಳು ಮತ್ತು ಪ್ಯಾರಾಮೆಡಿಕಲ್ ವೈದ್ಯರನ್ನು ಪಾಲಿಕೆಯ ಈ ಚಿಕಿತ್ಸಾ ಕೇಂದ್ರ, ಮತ್ತು ಪ್ರಯೋಗಾಲಯಕ್ಕೆ ಪಾಲಿಕೆಯ ಸಿಬ್ಬಂದಿಗಳನ್ನು ನೇಮಿಸಬಹುದು ಅಥವಾ ಲಭ್ಯವಿಲ್ಲದಿದ್ದಲ್ಲಿ ಸರ್ಕಾರದ ಮಾರ್ಗಸೂಚಿಗಳನ್ವಯ ಪಾಲಿಕೆಯಲ್ಲಿಯೂ ಪ್ಯಾನಲ್ ಅನ್ವಯ ಅನುಷ್ಠಾನಗೊಳಿಸಬಹುದಾಗಿರುತ್ತದೆ.

ಮಧು ಮೇಹ ಸಂಸ್ಥೆ ಘಟಕವನ್ನು ಪ್ರಾರಂಭಿಸಲು, ಅವಶ್ಯಕ ಪ್ರಯೋಗ ಶಾಲಾ ಉಪಕರಣಗಳು, ಪೀಠೋಪಕರಣಗಳು, ಇ.ಸಿ.ಜಿ. ಮೆಷಿನ್, ರಾಸಾಯನಿಕ ಮತ್ತು ಕಂಪ್ಯೂಟರ್, ವಾಹನ ಇತ್ಯಾದಿ ಸಲಕರಣೆಗಳ ಅವಶ್ಯವಿರುತ್ತದೆ.

ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಸುಮಾರು ಅಂದಾಜು 80 ಲಕ್ಷ ರೂಪಾಯಿಗಳು ಖರ್ಚಾಗಲಿದ್ದು, ಈ ಖರ್ಚನ್ನು ಪಾಲಿಕೆಯ ಆಯವ್ಯಯ ಅಥವಾ ಮಧು ಮೇಹ ಸಂಸ್ಥೆಯನ್ನು ಪ್ರಾರಂಭಿಸಲು ಮೊದಲಿಗೆ ಸಂಘ-ಸಂಸ್ಥೆಗಳಿಂದ ದೇಣಿಗೆಯನ್ನು ಪಡೆಯಲು ಕ್ರಮವಹಿಸಬೇಕಾಗಿದ್ದು, ಮೊದಲಿಗೆ ಹಣ ನೀಡುವ ದಾನಿಗಳ ಹೆಸರನ್ನು ಸಹ ಸಂಬಂಧಪಟ್ಟ ಆಸ್ಪತ್ರೆಗಳಲ್ಲಿ ಫಲಕಗಳ ಮೂಲಕ ಪ್ರದರ್ಶಿಸಬಹುದಾಗಿದ್ದು, ಮೊದಲಿಗೆ ದಾನಿಗಳಿಂದ ಬರುವ ಹಣದ ಉಪಯೋಗವನ್ನು ನೇರವಾಗಿ ಉಪಯೋಗಿಸಿಕೊಳ್ಳಬೇಕಾಗಿದ್ದು, ಹಾಗೂ ಆಗ್ಗಾಗ್ಗೆ ಪಡೆಯಲಾಗುವ ದೇಣಿಗೆಯನ್ನು ಪಾಲಿಕೆಯ ಖಜಾನೆಯಲ್ಲಿ ಜಮಾ ಮಾಡಬಹುದಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಈ ಹಣವನ್ನು ವಿನಿಯೋಗಿಸಬಹುದಾಗಿರುತ್ತದೆ.

ಇಲ್ಲದಿದ್ದಲ್ಲಿ ಮೊದಲಿಗೆ ಪಾಲಿಕೆಯಿಂದ ಇದಕ್ಕಾಗಿ ಹಣ ಭರಿಸಬೇಕಾಗಿದ್ದು, ಈಗಾಗಲೇ ಪಾಲಿಕೆಯ ಆಯವ್ಯಯ ಲೆಕ್ಕ ಶೀರ್ಷಿಕೆ 2011-12 ನೇ ಸಾಲಿನಲ್ಲಿ ರೂ.200 ಕೋಟಿ ಹಣವನ್ನು ಮೀಸಲಿಡಲಾಗಿದ್ದು, ಈ ಹಣದಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬಹುದಾಗಿದ್ದು, ಆ ನಂತರ ದಾನಿಗಳಿಂದ ಬರುವ ಹಣವನ್ನು ಪಾಲಿಕೆಯ ಖಜಾನೆಯಲ್ಲಿ ಈ ಯೋಜನೆಗಾಗಿ ಮೀಸಲಿಡಬಹುದಾಗಿದೆ.

ಗರ್ಭಿಣಿ ಸ್ತ್ರೀ/ಬಾಣಂತಿಯರಿಗೆ, ಮಧು ಮೇಹ, ರಕ್ತದ ಒತ್ತಡ ಮತ್ತು ಥೈರಾಯ್ಡ್ ಕಾಯಿಲೆಗಳ ಪರೀಕ್ಷೆ, ನಿಯಂತ್ರಣ ಚಿಕಿತ್ಸಾ ಕ್ರಮಗಳನ್ನು ಪಾಲಿಕೆ ಮತ್ತು ಮೆ: ಅಬೋಟ್ ಇಂಡಿಯಾ ಪ್ರೈ. ಲಿ., ಖಾಸಗಿ ಸಹಭಾಗಿತ್ವದಲ್ಲಿ ಮೊಬ್ಬತ್ತಿ ಹಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಬಗ್ಗೆ.

ಈ ಕಾರ್ಯಕ್ರಮವು ಪಾಲಿಕೆಯಲ್ಲಿ ನೂತನ ಯೋಜನೆಯಾಗಿದ್ದು, ನಗರದ ಬಡಜನರ ಆರೋಗ್ಯದ ಹಿತಕ್ಕಾಗಿ ಹಮ್ಮಿಕೊಳ್ಳಲಾಗಿದ್ದು, ಮೇಲ್ಕಾಣಿಸಿದಂತೆ ಅವಶ್ಯಕತೆಯಿರುವ, ತಜ್ಞವೈದ್ಯರು, ಪ್ಯಾರಮೆಡಿಕಲ್ ಸಿಬ್ಬಂದಿ, ಪ್ರಯೋಗ ಶಾಲಾ ಉಪಕರಣ, ಪೀಠೋಪಕರಣಗಳು, ಇ.ಸಿ.ಜಿ. ಮೆಷಿನ್, ರಾಸಾಯನಿಕ ಮತ್ತು ಕಂಪ್ಯೂಟರ್, ವಾಹನ, ಸಲಕರಣೆ ಇತ್ಯಾದಿಗಳನ್ನು ಮೊದಲಿಗೆ ಪಾಲಿಕೆಯಿಂದ ಈ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದ್ದು ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 01-12-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**7. ವಿಷಯದ ಸಂಖ್ಯೆ: ಸಾಆಸ್ಥಾಸ/46/2011-12:**

ಆಯುಕ್ತರ ದಿನಾಂಕ: 13-12-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ ಹೆಬ್ಬಾಳ ಮೇಲು ಸೇತುವೆಯಿಂದ ಐ.ಎ.ಎಫ್. ಗೇಟ್‌ವರೆಗೂ ಮೆಕಾನಿಕಲ್ ಸ್ವೀಪಿಂಗ್ ಯಂತ್ರಗಳಿಂದ ಸ್ವಚ್ಛತಾ ಕಾರ್ಯನಿರ್ವಹಿಸುವ ಗುತ್ತಿಗೆಯನ್ನು ಗುತ್ತಿಗೆದಾರರಾದ ಶ್ರೀ.ಗೋಪಿನಾಥರೆಡ್ಡಿರವರಿಗೆ ದಿನಾಂಕ: 21-05-2008 ರಿಂದ 20-05-2011 ರವರೆಗೆ ಪ್ರಥಮ ಹಂತದಲ್ಲಿ 3 ವರ್ಷದ ಅವಧಿಗೆ ನೀಡಲಾಗಿರುತ್ತದೆ. ಈ ಮಧ್ಯೆ ಹೆಚ್ಚುವರಿಯಾಗಿ ಹೆಬ್ಬಾಳ ಪೋಲೀಸ್ ಸ್ಟೇಷನ್‌ನಿಂದ ಮೇಕ್ರಿ ವೃತ್ತದವರೆಗೂ ಸದರಿ ಗುತ್ತಿಗೆದಾರರಿಗೆ ದಿನಾಂಕ: 09-05-2009 ರಿಂದ 19-05-2011 ರವರೆಗೆ ಪೂರಕ ಕರಾರು ಪತ್ರದೊಂದಿಗೆ (Supplementary agreement) ಗುತ್ತಿಗೆ ನೀಡಲಾಗಿರುತ್ತದೆ. ಸದರಿ ಹೆಚ್ಚುವರಿ ಕೆಲಸದ ಅವಧಿಯು ದಿನಾಂಕ: 19-05-2011 ರಂದು ಪೂರ್ಣಗೊಂಡಿರುತ್ತದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ ಹೆಬ್ಬಾಳ ಮೇಲು ಸೇತುವೆಯಿಂದ ಐ.ಎ.ಎಫ್. ಗೇಟ್‌ವರೆಗೂ ಮೆಕಾನಿಕಲ್ ಸ್ವೀಪಿಂಗ್ ಯಂತ್ರಗಳಿಂದ ಸ್ವಚ್ಛತಾ ಕಾರ್ಯನಿರ್ವಹಿಸುವ ಗುತ್ತಿಗೆಯು ದಿನಾಂಕ: 20-05-2011 ರಂದು ಅಂತ್ಯಗೊಂಡ ಹಿನ್ನೆಲೆಯಲ್ಲಿ ಹಾಗೂ ಗುತ್ತಿಗೆದಾರರು ಪ್ರಥಮ ಹಂತದಲ್ಲಿ 3 ವರ್ಷಗಳ ಕಾಲ ಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದರಿಂದ, ಗುತ್ತಿಗೆ ಕರಾರಿನ ಅನ್ವಯ ಇನ್ನೂ 2 ವರ್ಷಗಳ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅವಧಿಗೆ ಗುತ್ತಿಗೆಯನ್ನು ಮುಂದುವರೆಸಲು ಅವಕಾಶವಿದ್ದುದರಿಂದ, ಪಾಲಿಕೆಯ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಸದರಿ ಗುತ್ತಿಗೆಯನ್ನು ದಿನಾಂಕ: 17-06-2011 ರಿಂದ 2 ವರ್ಷದ ಅವಧಿಗೆ ಜಾರಿಗೆ ಬರುವಂತೆ ಮುಂದುವರೆಸಲಾಗಿದ್ದು, ಇದರಲ್ಲಿ ಹೆಚ್ಚುವರಿಯಾಗಿ ಹೆಬ್ಬಾಳ ಪೋಲೀಸ್ ಸ್ಟೇಷನ್‌ನಿಂದ ಮೇಖ್ರಿ ವೃತ್ತದವರೆಗೂ ಪೂರಕ ಕರಾರು ಪತ್ರದೊಂದಿಗೆ (Supplementary agreement) ನೀಡಲಾಗಿರುವ ಮೆಕಾನಿಕಲ್ ಸ್ವೀಪಿಂಗ್ ಗುತ್ತಿಗೆಯನ್ನು ಸೇರಿಸಿರುವುದಿಲ್ಲ.

ಈ ಮಧ್ಯೆ ಪೂರ್ವ, ದಕ್ಷಿಣ ಮತ್ತು ಯಲಹಂಕ ವಲಯದಲ್ಲಿ ಹಾಲಿ ನಿರ್ವಹಿಸುತ್ತಿರುವ ಮೆಕಾನಿಕಲ್ ಸ್ವೀಪಿಂಗ್ ಗುತ್ತಿಗೆಯ ಅವಧಿಯು 2013 ರವರೆಗೆ ಚಾಲ್ತಿಯಲ್ಲಿರುವುದರಿಂದ, ಸದರಿ ವಲಯಗಳನ್ನು ಹೊರತುಪಡಿಸಿ ಉಳಿದ ವಲಯಗಳಲ್ಲಿ ಮಾತ್ರ ಮೆಕಾನಿಕಲ್ ಸ್ವೀಪಿಂಗ್‌ಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಆದುದರಿಂದ ಹೆಚ್ಚುವರಿಯಾಗಿ ಹೆಬ್ಬಾಳ ಪೋಲೀಸ್ ಸ್ಟೇಷನ್‌ನಿಂದ ಮೇಖ್ರಿ ವೃತ್ತದವರೆಗೂ ಪೂರಕ ಕರಾರು ಪತ್ರದೊಂದಿಗೆ (Supplementary agreement) ನೀಡಲಾಗಿದ್ದ ಗುತ್ತಿಗೆಯ ಅವಧಿಯನ್ನು ಹಾಲಿ ನಿರ್ವಹಿಸುತ್ತಿರುವ ದರಗಳಲ್ಲೇ ಅಂದರೆ ಪ್ರತಿ ತಿಂಗಳಿಗೆ ರೂ.2,48,008/- ರಂತೆ ಮುಖ್ಯ ಗುತ್ತಿಗೆಯ ಅವಧಿಯೊಂದಿಗೆ ದಿನಾಂಕ: 16-06-2013 ರವರೆಗೆ ಮುಂದುವರೆಸಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 14-12-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**8. ವಿಷಯದ ಸಂಖ್ಯೆ: ಸಾಆಸ್ಥಾಸ/47/2011-12:**

ಸಂಖ್ಯೆ ಮು.ಆ./ಪಿ.ಆರ್./31/2011-12, ದಿನಾಂಕ: 28-12-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 06 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳಿಗೆ ದಿನದ 03 ಪಾಳಿಯಲ್ಲಿ ಒಟ್ಟಾರೆ 198 ಮಂದಿ ಸ್ವಚ್ಛತಾ ಸಿಬ್ಬಂದಿಗಳಿಂದ ಮಾಸಿಕ ರೂ.9,49,075/- ಮೊತ್ತದಲ್ಲಿ ಸ್ವಚ್ಛತಾ ಸೇವೆ ಒದಗಿಸಲು ದಿನಾಂಕ: 15-12-2009 ರಿಂದ ಜಾರಿಗೆ ಬರುವಂತೆ 02 ವರ್ಷಗಳ ಅವಧಿಗೆ ಶ್ರೀ ನೀಲಾಂಜನ ಎಂಟರ್‌ಪ್ರೈಸಸ್ ರವರಿಗೆ ಗುತ್ತಿಗೆ ನೀಡಲಾಗಿತ್ತು.

ನಂತರ ಸರ್ಕಾರದ ಕನಿಷ್ಠ ವೇತನ ನಿಯಮದಡಿಯಲ್ಲಿ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳವಾದ್ದರಿಂದ ದಿನಾಂಕ: 01-04-2010 ರಿಂದ ಜಾರಿಗೆ ಬರುವಂತೆ ಸದರಿ ಗುತ್ತಿಗೆದಾರರಿಗೆ ಪಾವತಿಸಲಾಗುತ್ತಿದ್ದ ಮೊತ್ತವನ್ನು ರೂ.9,49,075/- ರಿಂದ ರೂ.10,45,338/- ಮೊತ್ತಕ್ಕೂ, ಪುನ: ದಿನಾಂಕ: 01-04-2011 ರಿಂದ ಜಾರಿಗೆ ಬರುವಂತೆ ರೂ.10.45,338/- ರಿಂದ ರೂ.11,71,147/- ಮೊತ್ತಕ್ಕೂ ಹೆಚ್ಚಳ ಮಾಡಲಾಗಿದ್ದು, ಈಗ ಹಾಲಿ ಗುತ್ತಿಗೆದಾರರಿಗೆ ಮಾಸಿಕ ರೂ.11,71,147/- ಮೊತ್ತ ಪಾವತಿಸಲಾಗುತ್ತಿದ್ದು, ಸದರಿ ಸಂಸ್ಥೆಯ ಗುತ್ತಿಗೆ ಅವಧಿ ದಿನಾಂಕ: 14-12-2011 ಕ್ಕೆ ಮುಕ್ತಾಯವಾಗುತ್ತದೆ.

ಗುತ್ತಿಗೆದಾರರಾದ ಶ್ರೀ.ನೀಲಾಂಜನ ಎಂಟರ್‌ಪ್ರೈಸಸ್ ರವರು ಜಂಟಿ ಆಯುಕ್ತರು (ಆರೋಗ್ಯ) ರವರಿಗೆ ಮನವಿ ಪತ್ರ ಸಲ್ಲಿಸಿ, ಸದರಿಯವರ ಗುತ್ತಿಗೆ ಅವಧಿ ದಿನಾಂಕ: 14-12-2011 ಕ್ಕೆ ಮುಕ್ತಾಯವಾಗುವುದರಿಂದ ಕರಾರು ಒಪ್ಪಂದದ ರೀತ್ಯಾ ಸ್ವಚ್ಛತಾ ಸೇವೆಯ ಗುತ್ತಿಗೆಯನ್ನು ಮುಂದುವರಿಸಬಹುದಾಗಿರುವುದರಿಂದ ಗುತ್ತಿಗೆಯನ್ನು ಈ ಹಿಂದಿನ ಕರಾರು ಒಪ್ಪಂದದ ರೀತ್ಯಾ ಮುಂದಿನ ಒಂದು ವರ್ಷದ ಅವಧಿಗೆ ಮುಂದುವರಿಸಬೇಕೆಂದು ಕೋರಿರುತ್ತಾರೆ.

ಸದರಿಯವರ ಮನವಿಯಂತೆ ಪರಿಶೀಲಿಸಲಾಗಿ, ಕರಾರು ಒಪ್ಪಂದದ ಕ್ರ.ಸಂ. 9(a) ಪುಟ-87, ಫ್ಲಾಗ್ 'ಎ' ರೀತ್ಯಾ This maintainance Contract shall be effective for a period of 02 years from 15-12-2009, may be continued if requires ಎಂದು ಕರಾರು ಒಪ್ಪಂದವಾಗಿದ್ದು, ಹೊಸದಾಗಿ ಟೆಂಡರ್ ಕರೆಯಬಹುದಾಗಿರುತ್ತದೆ. ಅಥವಾ ಸ್ವಚ್ಛತಾ ಸೇವೆಯ ಗುತ್ತಿಗೆಯನ್ನು ಈ ಹಿಂದಿನ ಕರಾರು ಒಪ್ಪಂದದ ರೀತ್ಯಾ ಮುಂದುವರಿಸಬಹುದಾಗಿರುತ್ತದೆ.

ಮೇಲ್ಕಂಡ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, ಗುತ್ತಿಗೆದಾರರ ಮನವಿಯಂತೆ ಪಾಲಿಕೆಯ 06 ರೆಫರಲ್ ಆಸ್ಪತ್ರೆಗಳು ಮತ್ತು 24 ಹೆರಿಗೆ ಆಸ್ಪತ್ರೆಗಳ ಗುತ್ತಿಗೆಯನ್ನು ಹಿಂದಿನ ಕರಾರು ಒಪ್ಪಂದಗಳ ರೀತ್ಯಾ ದಿನಾಂಕ: 15-12-2011 ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ ವಿಸ್ತರಿಸಿದ್ದಲ್ಲಿ ಹಾಲಿ ಸರ್ಕಾರದ ಕನಿಷ್ಠ ವೇತನ ನಿಯಮಾವಳಿ ರೀತ್ಯಾ ವಾರ್ಷಿಕವಾಗಿ ಒಟ್ಟು ರೂ.1,40,53,764/- ಮೊತ್ತ ಖರ್ಚಾಗಲಿದ್ದು, ಲೆಕ್ಕಶೀರ್ಷಿಕೆ ಆರೋಗ್ಯ ವೈದ್ಯಕೀಯ: ಸಾಮಾನ್ಯ ವೆಚ್ಚಗಳು, ಭದ್ರತೆ ಮತ್ತು ಸ್ವಚ್ಛತಾ ಸೇವೆಗೆ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ, ಶ್ರೀ.ನೀಲಾಂಜನ ಎಂಟರ್ ಪ್ರೈಸಸ್ ರವರಿಗೆ ಮುಂದಿನ ಒಂದು ವರ್ಷದ ಅವಧಿಗೆ ಕಾರ್ಯಾದೇಶ ವಿಸ್ತರಿಸಬೇಕಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 22-12-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ. ಸದರಿ ಗುತ್ತಿಗೆ ಅವಧಿಯು ಮುಗಿಯುವ ಮುಂಚೆ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಜಂಟಿ ಆಯುಕ್ತರು (ಆರೋಗ್ಯ) ರವರು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ತೀರ್ಮಾನಿಸಿದೆ.**

ಅಧ್ಯಕ್ಷರು.
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**9. ವಿಷಯದ ಸಂಖ್ಯೆ: ಸಾಆಸ್ಥಾಸ/48/2011-12:**

ಸಂಖ್ಯೆ: ಮು.ಆ./ಪಿಆರ್/30/2011-12, ದಿನಾಂಕ: 21-12-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 06 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳಿಗೆ ದಿನದ 03 ಪಾಳಿಯಲ್ಲಿ ಒಟ್ಟಾರೆ 90 ಮಂದಿ ಭದ್ರತಾ ಸಿಬ್ಬಂದಿಗಳಿಗೆ ದಿನಾಂಕ: 15-12-2009 ರಿಂದ ಜಾರಿಗೆ ಬರುವಂತೆ 02 ವರ್ಷಗಳ ಅವಧಿಗೆ ಭದ್ರತಾ ಸೇವೆ ಒದಗಿಸಲು ಈ ಕೆಳಕಂಡ 03 ಸಂಸ್ಥೆಗಳಿಗೆ ಪ್ರತಿ ಸಂಸ್ಥೆಗೆ ಒಂದು ತಿಂಗಳಿಗೆ ರೂ.1,29,946/- ಮೊತ್ತದಂತೆ ಒಟ್ಟಾರೆ ರೂ.3,89,838/- ಮೊತ್ತದಲ್ಲಿ ಕಾರ್ಯಾದೇಶ ನೀಡಲಾಗಿತ್ತು.

1. ಮೆ॥ ನೋವೆಲ್ ಸೆಕ್ಯೂರಿಟಿ ಸರ್ವಿಸಸ್.
   ನಂ.1174/3, 1ನೇ ಮಹಡಿ, 1ನೇ 'ಎ' ಮುಖ್ಯ ರಸ್ತೆ, ವಿಜಯನಗರ.

2. ಮೆ॥ ವಿಜಿಲೆನ್ಸ್ 24X7 ಸೆಕ್ಯೂರಿಟಿ ಅಂಡ್ ಅಲೈಡ್ ಸರ್ವಿಸಸ್ ಪ್ರೈ. ಲಿ.
   ನಂ.151, 4ನೇ ಮುಖ್ಯ ರಸ್ತೆ, ಡಿಫೆನ್ಸ್ ಕಾಲೋನಿ, ಇಂದಿರಾ ನಗರ, ಬೆಂಗಳೂರು.

3. ಪೋರ್‌ಸೈಟ್ ಸೆಕ್ಯೂರಿಟಿ ಸರ್ವಿಸಸ್.
   814, 6ನೇ ಅಡ್ಡ ರಸ್ತೆ, 5ನೇ ಮುಖ್ಯ ರಸ್ತೆ, ಎಂ.ಸಿ.ಲೇಔಟ್, ವಿಜಯನಗರ, ಬೆಂಗಳೂರು.

ನಂತರ ಸರ್ಕಾರದ ಕನಿಷ್ಠ ವೇತನ ನಿಯಮದಡಿಯಲ್ಲಿ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳವಾದ್ದರಿಂದ ದಿನಾಂಕ: 01-04-2010 ರಿಂದ ಜಾರಿಗೆ ಬರುವಂತೆ ಪ್ರತಿ ಗುತ್ತಿಗೆದಾರರಿಗೆ ಪಾವತಿಸಲಾಗುತ್ತಿದ್ದ ಮೊತ್ತವನ್ನು ರೂ.1,29,946/- ನಿಂದ ರೂ.1,44,610/- ಮೊತ್ತಕ್ಕೆ ಹೆಚ್ಚಿಸಿ ಪುನ: ದಿನಾಂಕ: 01-04-2011 ರಿಂದ ಜಾರಿಗೆ ಬರುವಂತೆ ರೂ.1,44,610/- ರಿಂದ ರೂ.1,55,600/- ಮೊತ್ತಕ್ಕೆ ಹೆಚ್ಚಳ ಮಾಡಲಾಗಿದ್ದು, ಅದರಂತೆ ಈಗ ಹಾಲಿ ಪ್ರತಿ ಗುತ್ತಿಗೆದಾರರಿಗೆ ತಲಾ ರೂ.1,55,600/- ಮೊತ್ತದಂತೆ 03 ಮಂದಿ ಗುತ್ತಿಗೆದಾರರಿಗೆ ಒಟ್ಟಾರೆ ರೂ.4,66,800/- ಮೊತ್ತ ಪಾವತಿಸಲಾಗುತ್ತಿದ್ದು, ಸದರಿ ಸಂಸ್ಥೆಗಳ ಗುತ್ತಿಗೆ ಅವಧಿ ದಿನಾಂಕ: 14-12-2011 ಕ್ಕೆ ಮುಕ್ತಾಯವಾಗುತ್ತದೆ. ಸದರಿ ಗುತ್ತಿಗೆದಾರರು ಮನವಿ ಪತ್ರ ಸಲ್ಲಿಸಿದ್ದು, ಸದರಿಯವರ ಗುತ್ತಿಗೆ ದಿನಾಂಕ: 15-12-2011ಕ್ಕೆ ಮುಕ್ತಾಯವಾಗುವುದರಿಂದ ಕರಾರು ಒಪ್ಪಂದದ ಕ್ರ.ಸಂ.2 ರ ರೀತ್ಯಾ ಭದ್ರತಾ ಸೇವೆಯ ಗುತ್ತಿಗೆಯನ್ನು ಮುಂದುವರಿಸಬಹುದಾಗಿರುವುದರಿಂದ ಗುತ್ತಿಗೆಯನ್ನು ಈ ಹಿಂದಿನ ಕರಾರು ಒಪ್ಪಂದದ ರೀತ್ಯಾ ಮುಂದುವರಿಸಬೇಕೆಂದು ಕೋರಿರುತ್ತಾರೆ.

ಸದರಿಯವರ ಮನವಿಯಂತೆ ಪರಿಶೀಲಿಸಲಾಗಿ, ಕರಾರು ಒಪ್ಪಂದದಲ್ಲಿ "the Services will be required for Two Referral Hospitals ad 08 Maternity Homes of Bruhat Bengaluru Mahanagara Palike, for a period of Two years from 15th December 2009 to and may be continued if requires." ಇದ್ದು, ಹೊಸದಾಗಿ ಟೆಂಡರ್ ಕರೆಯಬಹುದಾಗಿರುತ್ತದೆ. ಅಥವಾ ಭದ್ರತಾ ಸೇವೆಯ ಗುತ್ತಿಗೆಯನ್ನು ಈ ಹಿಂದಿನ ಕರಾರು ಒಪ್ಪಂದದ ರೀತ್ಯಾ ಮುಂದುವರಿಸಬಹುದಾಗಿರುತ್ತದೆ.

ಮೇಲಿನ 03 ಸಂಸ್ಥೆಗಳು ಟೆಂಡರ್‌ನಲ್ಲಿ ಸರ್ಕಾರದ ಕನಿಷ್ಠ ವೇತನ ನಿಯಮಾವಳಿ ರೀತ್ಯಾ ಪಾವತಿಸಬೇಕಾಗಿರುವ ಕಾರ್ಮಿಕರ ಕನಿಷ್ಠ ವೇತನವನ್ನು ಮಾತ್ರ ಟೆಂಡರ್‌ನಲ್ಲಿ ನಮೂದಿಸಿದ್ದು, ಸೇವಾ ವೆಚ್ಚವನ್ನು (Service Charges) ನಮೂದಿಸಿರುವುದಿಲ್ಲ. ಗುತ್ತಿಗೆದಾರರ ಮನವಿಯಂತೆ ಗುತ್ತಿಗೆಯನ್ನು ದಿನಾಂಕ: 15-12-2011 ರಿಂದ ಮುಂದಿನ ಒಂದು ವರ್ಷ ಅವಧಿಗೆ ಇದೇ ಗುತ್ತಿಗೆದಾರರಿಗೆ ಮುಂದುವರಿಸಿದಲ್ಲಿ ಟೆಂಡರ್‌ನ್ನು ಹೊಸದಾಗಿ ಕರೆಯಲು ಖರ್ಚಾಗುವ ಮೊತ್ತ ಉಳಿತಾಯವಾಗುವುದಲ್ಲದೇ ಮೇಲಿನ ಟೆಂಡರ್‌ದಾರರು ಟೆಂಡರ್‌ನಲ್ಲಿ ಕೇವಲ ಸರ್ಕಾರದ ಕನಿಷ್ಠ ವೇತನ ನಿಯಮಾವಳಿ ರೀತ್ಯಾ ಕಾರ್ಮಿಕರಿಗೆ ಪಾವತಿಸಬೇಕಾಗಿರುವ ವೇತನ ಮಾತ್ರ ನಮೂದಿಸಿದ್ದು, ಸೇವಾ ಶುಲ್ಕ (Service Charge) ನಮೂದಿಸಿಲ್ಲವಾದ್ದರಿಂದ, ಹೊಸದಾಗಿ ಟೆಂಡರ್ ಕರೆದಲ್ಲಿ ಭದ್ರತಾ ಸೇವೆಯ ವೆಚ್ಚ ಸಹ ಹೆಚ್ಚಳವಾಗುವ ಸಾಧ್ಯತೆಯಿರುತ್ತದೆ.

ಮೇಲ್ಕಂಡ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, ಮೇಲಿನ 03 ಸಂಸ್ಥೆಗಳಿಗೆ ಈ ಹಿಂದಿನ ಕರಾರು ಒಪ್ಪಂದಗಳ ರೀತ್ಯಾ ದಿನಾಂಕ: 15-12-2011 ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ ಕಾರ್ಯದೇಶ ವಿಸ್ತರಿಸಬೇಕಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 21-12-2011 ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆರಿಗೆ ಆಸ್ಪತ್ರೆಗಳಿಗೆ ಮತ್ತು ರೆಫರಲ್ ಆಸ್ಪತ್ರೆಗಳಿಗೆ ಭದ್ರತಾ ಸೇವೆ ಒದಗಿಸುವ ಮೂರು ಸಂಸ್ಥೆಗಳ ಗುತ್ತಿಗೆ ಅವಧಿಯನ್ನು 06 (ಆರು) ತಿಂಗಳುಗಳ ಕಾಲ ಮುಂದುವರೆಸಲು ಹಾಗೂ ಸದರಿ ಗುತ್ತಿಗೆ ಅವಧಿಯು ಮುಗಿಯುವ ಮುಂಚೆ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಜಂಟಿ ಆಯುಕ್ತರು (ಆರೋಗ್ಯ) ರವರು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ತೀರ್ಮಾನಿಸಿದೆ.**

**10. ವಿಷಯದ ಸಂಖ್ಯೆ: ಸಾಆಸ್ಥಾಸ/49/2011-12:**

ಸಂಖ್ಯೆ: ಮು.ಆ.ಅ./ಎಸಿಟಿ/2/ಪಿ.ಆರ್./19/11-12, ದಿನಾಂಕ: 24-12-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ 06 ರೆಫರಲ್ ಆಸ್ಪತ್ರೆಗಳು ಮತ್ತು ರೆಫರಲ್ ಆಸ್ಪತ್ರೆಗಳ ಅಧೀನದಲ್ಲಿರುವ 24 ಹೆರಿಗೆ ಆಸ್ಪತ್ರೆಗಳಿಗೆ 2011-12ನೇ ಸಾಲಿಗೆ ಅವಶ್ಯವಿರುವ Post Natal Kit

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಗಳನ್ನು ಒದಗಿಸಬೇಕೆಂದು ಎಲ್ಲಾ 06 ರೆಫರಲ್ ಆಸ್ಪತ್ರೆಗಳ ಅಧೀಕ್ಷಕರುಗಳು ಸಲ್ಲಿಸಲಾಗಿರುವ ಬೇಡಿಕೆ ಪಟ್ಟಿಯನ್ನು ಪುಠ-91 ರಿಂದ 95 ರವರೆಗೆ ಲಗತ್ತಿಸಿದೆ. ಸದರಿಯವರು ಸಲ್ಲಿಸಿರುವ ಪಟ್ಟಿಯನ್ವಯ ಅವಶ್ಯವಿರುವ Post Natal Kit ಗಳ ಕ್ರೂಢೀಕೃತ ಪಟ್ಟಿ ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಆಸ್ಪತ್ರೆಗಳ ಹೆಸರು | ಅವಶ್ಯವಿರುವ Post Natal Kit |
|---|---|---|
| 1 | ಜೆ.ಜೆ.ಆರ್.ನಗರ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 3,360.00 |
| 2 | ಹೊಸಹಳ್ಳಿ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 5,400.00 |
| 3 | ಹಲಸೂರು ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 2,900.00 |
| 4 | ಶ್ರೀರಾಮಪುರ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 3,800.00 |
| 5 | ಹೆಚ್.ಸಿದ್ದಯ್ಯ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 2,700.00 |
| 6 | ಬನಶಂಕರಿ ರೆಫರಲ್ ಆಸ್ಪತ್ರೆ ಮತ್ತು ಅಧೀನದಲ್ಲಿರುವ ಹೆರಿಗೆ ಆಸ್ಪತ್ರೆಗಳಿಗೆ | 4,500.00 |
| | ಒಟ್ಟು | 22,660.00 |

ಪಾಲಿಕೆಯ ಎಲ್ಲಾ ಆಸ್ಪತ್ರೆಗಳಿಂದ ವಾರ್ಷಿಕ 14,000 ಹೆರಿಗೆಗಳು ಸಂಭವಿಸುತ್ತಿದ್ದು, Post Natal Kit ಗಳನ್ನು ಒಂದು ಅಥವಾ ಎರಡು ಮಕ್ಕಳ ತಾಯಂದಿರಿಗೆ ಮಾತ್ರ ವಿತರಿಸಲಾಗುತ್ತಿರುವುದರಿಂದ ಒಟ್ಟಾರೆ 13,000 Post Natal Kit ಗಳ ಅವಶ್ಯಕತೆಯಿರುತ್ತದೆ.

2010-11ನೇ ಸಾಲಿನಲ್ಲಿ 12 ಪರಿಕರಗಳುಳ್ಳ 7,800 ಪೋಸ್ಟ್ ನಾಟಲ್ ಕಿಟ್‌ಗಳನ್ನು ಪ್ರತಿ ಕಿಟ್ ಬೆಲೆ ರೂ.1,110/- ದರದಂತೆ ರೂ.86,58,000/- ಮೊತ್ತದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದಲೂ 06 ಪರಿಕರಗಳುಳ್ಳ 7,800 ಕಿಟ್‌ಗಳನ್ನು ಪ್ರತಿ ಕಿಟ್‌ಗೆ ರೂ.140/- ರಂತೆ ರೂ.10,92,000/- ಮೊತ್ತದಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಲಾಗಿದ್ದು, ವಿವರಗಳನ್ನು ಕಡತದ ಪುಠ-28, 29 ಪ್ಯಾರಾ-90 ರಿಂದ 96 ರವರೆಗೆ ಕಾಣಬಹುದಾಗಿದೆ.

| 41 | Bins Big | 120 nos | 1991.00 | 2,38,920/- | 3977.00 | 4,77,240/- |
| 42 | Bins Medium | 60 nos | 949.00 | 56,940/- | 1649.00 | 98,940/- |
| 43 | Bins Small | 60 nos | 714.00 | 42,840/- | 1600.00 | 96,000/- |
| 44 | Ventouse Vaccum Extractor | 06 nos | 2625.00 | 15,750/- | 1700.00 | 10,200/- |
| 45 | Episiotomy Scissor 6" | 240 nos | 336.00 | 80,640/- | 357.00 | 85,680/- |
| 46 | Suture Removal Scissor 6" | 240 nos | 252.00 | 60,480/- | 267.00 | 64,080/- |
| 47 | Venkatesh Vects Forceps | 06 nos | 525.00 | 3,150/- | 538.00 | 3,228/- |
| 48 | Recanlisation Set | | | | | |
| A | Small Toothed Forceps | 24 nos | 126.00 | 3,024/- | 236.00 | 5,664/- |
| B | Small Non Toothed Forceps | 24 nos | 105.00 | 2,520/- | 236.00 | 5,664/- |
| C | Scissor's Curved | 24 nos | 252.00 | 6,048/- | 252.00 | 6,048/- |
| D | Scissor's Straight | 24 nos | 252.00 | 6,048/- | 252.00 | 6,048/- |
| E | Tuboplasty Probe | 24 nos | 525.00 | 12,600/- | 6800.00 | 1,63,200/- |
| 49 | Biclamp for Hysterectomy | 24 nos | 1008.00 | 24,192/- | 1110.00 | 26,640/- |
| | **Total Rs.** | | | **22,13,842/-** | | **27,33,060/-** |

The Same Instruments Purchased by Different Govt.Institutions = 27,33,060.00

Tender Rate (Quoted by M/s Venus Surgical Agencies) = (-) 22,13,842.00

**Difference Rs. 5,19,218.00**

ಸರ್ಕಾರದ ಸುತ್ತೋಲೆ ಸಂಖ್ಯೆ: PWD.1359 SO/FC 2001P-20, ದಿನಾಂಕ: 03-12-2002ರ (Sub Para under Section 13 of the KTPP Act) ಸುತ್ತೋಲೆಯನ್ನು ಪುಟ ______ ರಿಂದ ______ ರಲ್ಲಿ ಲಗತ್ತಿಸಿದೆ. ಸದರಿ ಸುತ್ತೋಲೆಯ ಪ್ಯಾರಾ 3-1 ಮತ್ತು 3-2ರ ರೀತ್ಯಾ ಕಡತ ಪರಿಶೀಲಿಸಲಾಗಿ, ಶಸ್ತ್ರಚಿಕಿತ್ಸಾ ಉಪಕರಣಗಳ ಖರೀದಿಗೆ **ಆರೋಗ್ಯ ವೈದ್ಯಾಧಿಕಾರಿ** (ತಾ.ಮ.ಕು.ಕ) **ರವರು ರೂ. 65.00 ಲಕ್ಷ ಮೊತ್ತದ** ಅಂದಾಜು ನಿಗಧಿಪಡಿಸಲಾಗಿದ್ದು, **(As Per Para 2, Page 1 of Note Sheet)** ಬಿಡ್ಡುದಾರರು **ನಮೂದಿಸಿರುವ ದರಗಳು ಟೆಂಡರ್‌ನಲ್ಲಿ ನಿಗದಿಪಡಿಸಲಾಗಿದ್ದ ಅಂದಾಜು ದರಗಳಿಗಿಂತ ಕಡಿಮೆ ಅಂದರೆ ನಿಗಧಿಪಡಿಸಿದ ಅಂದಾಜು ಮೊತ್ತಕ್ಕಿಂತ ರೂ. 42,86,150/- ಕಡಿಮೆ ಇರುತ್ತದೆ.** ಆದಾಗ್ಯೂ ಇದೇ ಉಪಕರಣಗಳನ್ನು ಸರ್ಕಾರದ ವಿವಿಧ ಸಂಸ್ಥೆ/ಆಸ್ಪತ್ರೆಗಳಲ್ಲಿ ಖರೀದಿಸಿರುವ ದರಗಳೊಂದಿಗೂ ಸಹ ತಾಳೆ ಮಾಡಲಾಗಿದ್ದು, (ಪುಟ 11 ಮತ್ತು 12 ಪ್ಯಾರಾ 31, 32) ಟೆಂಡರ್‌ನಲ್ಲಿ ನಮೂದಿಸಿರುವ ದರಗಳು ಸರ್ಕಾರಿ ಸಂಸ್ಥೆಗಳಲ್ಲಿ ಇದೇ ಉಪಕರಣಗಳನ್ನು ಖರೀದಿಸಿದ ದರಗಳಿಗಿಂತ ರೂ.5,19,218/- ರೂ. ಕಡಿಮೆ ಇರುತ್ತದೆ.

ಮೇಲ್ಕಂಡ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, ಶಸ್ತ್ರಚಿಕಿತ್ಸಾ ಉಪಕರಣಗಳನ್ನು ರೂ. 22,13,842/- ಮೊತ್ತದಲ್ಲಿ ಲೆಕ್ಕಶೀರ್ಷಿಕೆ 14, ಆರೋಗ್ಯ ವೈದ್ಯಕೀಯ, ಕುಟುಂಬ ಕಲ್ಯಾಣ ವೆಚ್ಚಗಳು, ಉಪಕರಣಗಳ ಖರೀದಿಗಾಗಿ ಮೀಸಲಿಟ್ಟಿರುವ ರೂ. 150.00 ಲಕ್ಷ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ, **ಮೆ॥ ವೀನಸ್ ಸರ್ಜಿಕಲ್ಸ್ ಏಜೆನ್ಸೀಸ್ ರವರಿಂದ ಟೆಂಡರ್ ನಿಯಮಾವಳಿ ರೀತ್ಯಾ ಕರಾರು ಒಪ್ಪಂದ ಮಾಡಿಕೊಂಡು, ಖರೀದಿಸುವ** ಬಗ್ಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 09-11-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

Geetha Shashikumar

**(ಡಾ॥ ಕೆ.ಎನ್. ಗೀತಾ ಶಶಿಕುಮಾರ್)**

**ಅಧ್ಯಕ್ಷರು**

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 09-11-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಅಧೀಕ್ಷಕ ಅಭಿಯಂತರರು (ಪರಿಸರಕೋಶ) |
| ಡಾ॥ ಎಸ್. ರಾಜು | ಸದಸ್ಯರು | ತಾಂತ್ರಿಕ ಸಲಹೆಗಾರರು (ಮುಖ್ಯ ಅಭಿಯಂತರರು-ಪರಿಸರಕೋಶ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಎನ್. ವೀರಣ್ಣ | ಸದಸ್ಯರು | |
| ಎಲ್. ರಮೇಶ್ | ಸದಸ್ಯರು | |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಶ್ರೀಮತಿ.ಪಿ.ಸೌಮ್ಯ | ಸದಸ್ಯರು | |
| ಎಂ. ಶ್ರೀನಿವಾಸ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1. ವಿಷಯದ ಸಂಖ್ಯೆ: ಸಾಆಸ್ಥಾಸ/31/2011-12:

ಸಂಖ್ಯೆ ಆ/ಪಿಎಸ್ಆರ್/ /2011-12, ದಿನಾಂಕ: 15-09-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯೊಂದಿಗೆ, ದಿನ ನಿತ್ಯ 600 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವ ಘಟಕವನ್ನು ಮಾವಳ್ಳಿಪುರ ಸರ್ವೆ ನಂ.08 ರ 100 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಒಪ್ಪಂದವನ್ನು 11-08-2004 ರಲ್ಲಿ ಮಾಡಿಕೊಳ್ಳಲಾಗಿರುತ್ತದೆ.

ಆದರೆ ಭೂ ತಗಾದೆ ಹಾಗೂ ಅರಣ್ಯ ಪ್ರದೇಶದಿಂದಾಗಿ ಪಾಲಿಕೆಯು ಸದರಿ ಸಂಸ್ಥೆಗೆ 46 ಎಕರೆ ಪ್ರದೇಶವನ್ನು ಮಾತ್ರ ಒದಗಿಸಲು ಸಾಧ್ಯವಾಗಿರುತ್ತದೆ. ಈ ಪ್ರದೇಶದಲ್ಲಿ ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯು ಘನತ್ಯಾಜ್ಯ ಸಂಸ್ಕರಣ ಘಟಕವನ್ನು ಸ್ಥಾಪಿಸಿ ದಿನಾಂಕ: 29-01-2007 ರಿಂದ ಕಾರ್ಯಾರಂಭಿಸಿರುತ್ತದೆ.

ಸ್ಥಳದ ಕೊರತೆಯಿಂದಾಗಿ ಒಂದು Concrete Platform windrow ಮಾತ್ರ ತಯಾರಿಸಿದ್ದು ಇದರಲ್ಲಿ ಪ್ರತಿದಿನ ಸುಮಾರು 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುತ್ತಿದ್ದು, ಉಳಿಕೆ 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ನೇರವಾಗಿ ಲ್ಯಾಂಡ್‌ಫಿಲ್‌ನಲ್ಲಿ ತುಂಬಲಾಗುತ್ತಿದೆ.

ಘನತ್ಯಾಜವನ್ನು ನೇರವಾಗಿ ಲ್ಯಾಂಡ್‌ಫಿಲ್‌ನಲ್ಲಿ ತುಂಬುತ್ತಿರುವುದರಿಂದ ಹಾಗೂ ಗೊಬ್ಬರ ತಯಾರಿಕೆಗಾಗಿ ಘನತ್ಯಾಜ್ಯವನ್ನು windrow ಮೇಲೆ ಹರಡುವುದರಿಂದ ಕೆಟ್ಟವಾಸನೆ ನೊಣ, ಸೊಳ್ಳೆ ಹಾಗೂ ಕ್ರಿಮಿಕೀಟಗಳ ಹಾವಳಿ ಉಂಟಾಗಿ ಇದರಿಂದಾಗಿ ರೋಗರುಜಿನಗಳು ಹರಡುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿರುತ್ತಾರೆ.

ಮೇಲಿನ ಸನ್ನಿವೇಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯವರಿಗೆ ಘನತ್ಯಾಜ್ಯದಿಂದ ವಿದ್ಯುತ್ ತಯಾರಿಸುವ ಅಥವಾ ಇನ್ನಾವುದೇ ನೂತನ ತಂತ್ರಜ್ಞಾನವನ್ನು ಬಳಸಿ ಹೆಚ್ಚಿನ ಪ್ರಮಾಣದ ಘನತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಣೆ ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ತ್ಯಾಜ್ಯವನ್ನು windrow platform ಮೇಲೆ ಹರಡಿ ಗೊಬ್ಬರ ತಯಾರಿಸುವ ವಿಧಾನವು Out dated technology ಆಗಿದ್ದು, ನೂತನ ತಂತ್ರಜ್ಞಾನ ಅಳವಡಿಸಿಕೊಂಡು ತ್ಯಾಜ್ಯ ಸಂಸ್ಕರಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯವರು, BOT ಆಧಾರದ ಮೇಲೆ 10 ಮೆ.ವ್ಯಾಟ್ ಪ್ರಮಾಣದ ವಿದ್ಯುತ್ ಘಟಕ ತಯಾರಿಸಲು ಮುಂದೆ ಬಂದಿದ್ದು, DPR ಸಲ್ಲಿಸಿರುತ್ತಾರೆ. ಈ ತಂತ್ರಜ್ಞಾನದಂತೆ ಪ್ರತಿನಿತ್ಯ 1000 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ನೇರವಾಗಿ furnace ನಲ್ಲಿ ವಿದ್ಯುತ್ ಉತ್ಪಾದನೆಗೆ ಕಚ್ಚಾವಸ್ತುವಾಗಿ ಸುಡಲ್ಪಡುವುದರಿಂದ, ಲೀಚೆಟ್‌ನ ಸಮಸ್ಯೆ ಹಾಗೂ ತತ್ಸಂಬಂಧದ ವಾಸನೆಯ ತೊಂದರೆಯನ್ನು ನಿವಾರಿಸಬಹುದಾಗಿರುತ್ತದೆ. ಮತ್ತು ಲ್ಯಾಂಡ್‌ಫಿಲ್ ಮಾಡಬೇಕಾದ Inerts ನ ಪರಿಮಾಣ ಸಹ ಗಣನೀಯವಾಗಿ ಕಡಿಮೆಯಾಗಲಿದ್ದು, ಜಾಗದ ಅವಶ್ಯಕತೆ ಕಡಿಮೆಯಾಗಲಿದೆ. ಇದು BOT ಆಧಾರದ ಯೋಜನೆಯಾಗಿರುವುದರಿಂದ ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಬದಲಿಗೆ ಪಾಲಿಕೆಯಿಂದ ಪ್ರತಿನಿತ್ಯ ಕನಿಷ್ಠ 1000 ಮೆಟ್ರಿಕ್ ಟನ್ ಘನತ್ಯಾಜ್ಯ ಒದಗಿಸಬೇಕಾಗುತ್ತದೆ. ಈ ಯೋಜನೆಗೆ ಈಗಾಗಲೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಏರಪೋರ್ಟ್ ಆಥಾರಿಟಿ ಯಿಂದ ಅನುಮತಿಯನ್ನು ಪಡೆಯಲಾಗಿದ್ದು, BWSSB ಸಂಸ್ಥೆಯವರು ಈ ಯೋಜನೆಗೆ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೇಕಾದ 1.00 MLD ನೀರನ್ನು ಪಡೆಯಲು ಅನುಮತಿ ನೀಡಿರುತ್ತಾರೆ. ಈ ಯೋಜನೆಯನ್ನು ಕೈಗೊಳ್ಳಲು ಕಾನೂನು ಕೋಶದ ಅಭಿಪ್ರಾಯದಂತೆ ಪಾಲಿಕೆ ಸಭೆಯ ಅನುಮೋದನೆ ಪಡೆಯಬೇಕಿರುತ್ತದೆ.

ಆದುದರಿಂದ, ಈ ಕೆಳಗಿನಂತೆ ಅನುಮೋದನೆ ಕೋರಿ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಕಡತದೊಂದಿಗೆ ಟಿಪ್ಪಣಿ ಮಂಡಿಸಿದೆ.

1. ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯು ನಿರ್ವಹಿಸುತ್ತಿರುವ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ವಿದ್ಯುತ್ ಉತ್ಪಾದನೆಗಾಗಿ ಪ್ರತಿನಿತ್ಯ ಕನಿಷ್ಟ 1000 ಮೆ.ಟನ್ ಘನತ್ಯಾಜ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಒದಗಿಸಲು ಅನುಮೋದನೆ.
2. ಸರ್ವೆ ನಂ.08 ರ ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಘನ ತ್ಯಾಜ್ಯದಿಂದ 10 ಮೆ.ವ್ಯಾ ವಿದ್ಯುತ್ ಉತ್ಪಾದಿಸುವ ಘಟಕವನ್ನು BOT ಆಧಾರದ ಮೇಲೆ 20 ವರ್ಷದ ಅವಧಿಗೆ ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯವರು ಸ್ಥಾಪಿಸಲು ಅನುಮೋದನೆ.

ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 2. ವಿಷಯದ ಸಂಖ್ಯೆ: ಸಾಆಸ್ಥಾಸ/35/2011-12:

ಸಂಖ್ಯೆ ಉ.ಆ.(ರಾ.ರಾ.ನ.)ಪಿಆರ್/308/2011-12, ದಿನಾಂಕ: 13-10-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ ವಲಯದ ವಾರ್ಡ್ ನಂ.129ರ ಪಾಲಿಕೆ ಸದಸ್ಯರಾದ, ಶ್ರೀ.ಗೋವಿಂದರಾಜು ರವರು ಜ್ಞಾನಭಾರತಿ ವಾರ್ಡ್ ನಂ.129 ರ ವ್ಯಾಪ್ತಿಯಲ್ಲಿ ಬರುವ ಕೆಬ್ಬೆಹಳ್ಳ (ರಾಜೀವಗಾಂಧಿ ನಗರ) ಇಲ್ಲಿ ಪಾಲಿಕೆ ವತಿಯಿಂದ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಕೋರಿರುತ್ತಾರೆ.

ವಾರ್ಡ್ ಸಂಖ್ಯೆ.129 ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿದ್ದು, ಈ ಪ್ರದೇಶದಲ್ಲಿ ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಿಂದ ಒದಗಿಸಲಾಗುತ್ತಿದೆ. ಸದರಿ ವಾರ್ಡ್‌ನಲ್ಲಿ ಅಂಬೇಡ್ಕರ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್, ರಿಂಗ್ ರಸ್ತೆ ಇದರ ಎದುರುಗಡೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿರುತ್ತದೆ. ಮಾನ್ಯ ನಗರ ಸಭಾ ಸದಸ್ಯರು ಕೋರಿರುವ ಆರೋಗ್ಯ ಕೇಂದ್ರದ ಸ್ಥಳವು ಸುಮಾರು 3 ಕಿ.ಮೀ. ನಷ್ಟು ದೂರದಲ್ಲಿರುತ್ತದೆ. ಅಲ್ಲದೆ **ವಾರ್ಡ್-129 ರ ಕೆಬ್ಬೆಹಳ್ಳ (ರಾಜೀವಗಾಂಧಿ ನಗರ) ಈ ಪ್ರದೇಶದಲ್ಲಿ ಬಡಜನರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಆರೋಗ್ಯ ಕೇಂದ್ರದ ಅವಶ್ಯಕತೆ ಇರುತ್ತದೆ.**

ಮಾನ್ಯ ಸದಸ್ಯರು ಸೂಚಿಸಿರುವ ಪ್ರದೇಶದಲ್ಲಿ ಒಂದು ಕಟ್ಟಡವಿದ್ದು, ಅದನ್ನು ಸಮುದಾಯ ಭವನಕ್ಕಾಗಿ ನಿರ್ಮಿಸಲಾಗಿದೆ. ಇದು 2 ಅಂತಸ್ತಿನ ಕಟ್ಟಡವಾಗಿದ್ದು, ಅವಶ್ಯ ವಿಭಾಗಗಳನ್ನು ನಿರ್ಮಿಸಿಕೊಂಡು, ಸಾರ್ವಜನಿಕ ಆರೋಗ್ಯದ ಹಿತ ದೃಷ್ಟಿಯಿಂದ ಔಷಧಾಲಯವನ್ನು (Day Care Centre) ತೆರೆಯಬಹುದಾಗಿದೆ. ಇದಕ್ಕಾಗಿ ಒಬ್ಬರು ವೈದ್ಯರು, ಒಬ್ಬರು ಶುಶ್ರೂಷಕರು/ಎ.ಎನ್.ಎಂ.ಗಳು, ಒಬ್ಬರು ಸಹಾಯಕರ ಅವಶ್ಯಕತೆ ಇರುತ್ತದೆ. ಈ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಬಹುದಾಗಿದ್ದು, ಈ ಔಷಧಾಲಯವನ್ನು ಪ್ರಾರಂಭಿಸಲು ಈ ಕೆಳಕಂಡಂತೆ ವೆಚ್ಚವಾಗಲಿದೆ.

| ಕ್ರಮ ಸಂಖ್ಯೆ | ವಿವರ | ಮೊತ್ತ |
|---|---|---|
| 1 | ಪೀಠೋಪಕರಣಗಳು | 10,00,000/- |
| 2 | ಸಲಕರಣೆಗಳು | 5,00,000/- |
| 3 | ವಿಭಾಗಗಳನ್ನು ನಿರ್ಮಿಸಲು | 1,00,000/- |
| 4 | ಔಷಧಿ ಇತ್ಯಾದಿ ಪ್ರತಿ ಮಾಹೆ ರೂ.50,000/- ರಂತೆ | 6,00,000/- |
| 5 | ವೈದ್ಯರ ವೇತನ ಪ್ರತಿ ಮಾಹೆ ರೂ.25,000/- ರಂತೆ | 3,00,000/- |
| 6 | ಶುಶ್ರೂಷಕಿ/ಎ.ಎನ್.ಎಂ. ವೇತನ ಪ್ರತಿ ಮಾಹೆ ರೂ.8000/- ರಂತೆ | 96,000/- |
| 7 | ಸಹಾಯಕರ ವೇತನ ಪ್ರತಿ ಮಾಹೆ ರೂ.5000/- ರಂತೆ | 60,000/- |
| | ಒಟ್ಟು | **26,56,000/-** |

ಕ್ರಮ ಸಂಖ್ಯೆ.1 ರಲ್ಲಿ ವಿವರಿಸಿರುವ, ಪೀಠೋಪಕರಣಗಳ ಖರೀದಿಗಾಗಿ ವೆಚ್ಚ ರೂ.10,00,000/- (ಹತ್ತು ಲಕ್ಷ ರೂ. ಮಾತ್ರ) 2 ರಲ್ಲಿ ವಿವರಿಸಿರುವ, ಸಲಕರಣೆಗಳ ಖರೀದಿಗಾಗಿ ರೂ.5,00,000/- (ಐದು ಲಕ್ಷ ರೂ ಮಾತ್ರ) ಮತ್ತು 3 ರಲ್ಲಿ ವಿಭಾಗಗಳನ್ನು ನಿರ್ಮಿಸಲು ವೆಚ್ಚ ರೂ.1,00,000/- (ಒಂದು ಲಕ್ಷ ರೂ ಮಾತ್ರ) ಒಟ್ಟು ಮೊತ್ತ ರೂ.16,00,000/- (ಹದಿನಾರು ಲಕ್ಷ ರೂ ಮಾತ್ರ) ಲಕ್ಷಗಳು, ಈ ಮೊತ್ತವು ಒಂದು ಬಾರಿಯ ಬಂಡವಾಳ ಆಗಿರುತ್ತದೆ.

ಉಳಿದಂತೆ ಔಷಧಿ ವೆಚ್ಚ ಮತ್ತು ಸಿಬ್ಬಂದಿಗಳ ವೇತನಗಳಿಗೆ ವಾರ್ಷಿಕ ವೆಚ್ಚ ರೂ.10,56,000/- (ಹತ್ತು ಲಕ್ಷದ ಐವತ್ತಾರು ಸಾವಿರ ರೂ ಮಾತ್ರ) ಲಕ್ಷಗಳಂತೆ ವೆಚ್ಚವಾಗುತ್ತದೆ.

**ಒಟ್ಟು ಮೊತ್ತ ರೂ.26,56,000/-** (ಇಪತ್ತಾರು ಲಕ್ಷದ ಐವತ್ತಾರು ಸಾವಿರ ರೂ ಮಾತ್ರ) **ಗಳು ವೆಚ್ಚವಾಗಲಿದ್ದು, ಈ ಮೊತ್ತವನ್ನು ಆಯವ್ಯಯದಲ್ಲಿ ಸೇರಿಸಿ ಮೀಸಲಿಡಲು ಹಾಗೂ ಔಷಧಾಲಯಕ್ಕೆ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಹಾಗೂ ಸಲಕರಣೆ/ಸಾಮಗ್ರಿಗಳನ್ನು ಕರ್ನಾಟಕ ಪಾರದರ್ಶಕ ಕಾಯ್ದೆ ನಿಯಮಾವಳಿಯಂತೆ ಖರೀದಿಸಬೇಕಾಗಿದ್ದು,** ನಿರ್ಣಯಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 3. ವಿಷಯದ ಸಂಖ್ಯೆ: ಸಾಆಸ್ಥಾಸ/36/2011-12:

ಸಂಖ್ಯೆ ಜಂನಿ/ಪಪಾ/ಪಿಆರ್/664/2011-12, ದಿನಾಂಕ: 20-10-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ ಜಾನುವಾರುಗಳ ಮಾಲೀಕರು ತಮ್ಮ ದನಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿಹಾಕದೆ ಹೊರಗಡೆಗೆ ಮೇಯಲು ಬಿಡುವುದನ್ನು ಮೊದಲಿನಿಂದಲೂ ರೂಢಿಸಿಕೊಂಡು ಬಂದಿರುತ್ತಾರೆ. ಈ ರೀತಿ ಹೊರಗಡೆಗೆ ಮೇಯಲು ಬಿಟ್ಟ ದನಕರುಗಳು ಕಸದ ರಾಶಿಯಲ್ಲಿ ಮೇಯುವುದು, ರಸ್ತೆಗಳಲ್ಲಿ ಅಡ್ಡಾದಿಡ್ಡಿ ಓಡಾಡುವುದು, ರಸ್ತೆಗಳ ಮಧ್ಯದಲ್ಲಿ ಮಲಗಿಕೊಳ್ಳುವುದು, ಕೆಲವೊಮ್ಮೆ ಓಡಾಡುವ ಜನರನ್ನು ಹಾಯುವುದು ಮಾಡುತ್ತವೆ. ಇದರಿಂದಾಗಿ ವಾಹನ ಚಾಲಕರಿಗೆ, ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತದೆ. ಅಲ್ಲದೆ, ವಾಹನ ಸಂಚಾರಕ್ಕೂ ಅಡಚಣೆಯುಂಟಾಗುತ್ತದೆ. ಈ ಬಗ್ಗೆ ಸಾರ್ವಜನಿಕರಿಂದ ಹಾಗೂ ಸಂಚಾರಿ ಪೋಲೀಸ್ ವಿಭಾಗದಿಂದಲೂ ಸಹ ದೂರುಗಳು ಬಂದಿರುತ್ತವೆ.

ಪ್ರಸ್ತುತ ರಸ್ತೆಗಳಲ್ಲಿ ಓಡಾಡುವ ಬೀಡಾಡಿ ದನಗಳನ್ನು ಹಿಡಿದು ತಂದು ಪಾಲಿಕೆಯ ದನದ ದೊಡ್ಡಿಯಲ್ಲಿ ಇರಿಸಿ ಜಾನುವಾರು ಮಾಲೀಕರಿಂದ ದಂಡ ವಸೂಲಿ ಮಾಡಿ, ಜಾನುವಾರುಗಳನ್ನು ಮಾಲೀಕರಿಗೆ ಹಿಂದಿರುಗಿಸಲಾಗುತ್ತಿದೆ.

ಕರ್ನಾಟಕ ಕ್ಯಾಟಲ್ ಟ್ರೆಸ್‌ಪಾಸ್ ಆ್ಯಕ್ಟ್-1966 ರಂತೆ ಕರ್ನಾಟಕ ಸಚಿವಾಲಯ ಅಧಿಸೂಚನೆಯ ಸಂಖ್ಯೆ ಹೆಚ್‌ಯುಡಿ/337/ಎಮ್ಎನ್‌ವೈ/77, ದಿನಾಂಕ: 06-08-1979 ರಲ್ಲಿ ಬೀಡಾಡಿ ದನಗಳಿಗೆ ವಿಧಿಸುವ ದಂಡವನ್ನು ನಮೂದಿಸಲಾಗಿರುತ್ತದೆ. ಸದರಿ ಅಧಿಸೂಚನೆಯನ್ನು ಮಾರ್ಪಾಡು ಮಾಡಿ ಸಚಿವಾಲಯ ಅಧಿಸೂಚನೆಯ ಸಂಖ್ಯೆ ಹೆಚ್‌ಯುಡಿ/26/ಎಮ್ಎನ್‌ವೈ/89, ದಿನಾಂಕ: 13-06-1991 ರಲ್ಲಿ ಬೀಡಾಡಿ ದನಗಳಿಗೆ ವಿಧಿಸುವ ದಂಡವನ್ನು ಪರಿಷ್ಕರಿಸಲಾಗಿದೆ. ಇದರಂತೆ ಪ್ರತಿ ವಯಸ್ಕ ದನಕ್ಕೆ ರೂ.100-00 (ನೂರು ರೂಪಾಯಿಗಳು ಮಾತ್ರ) ರಂತೆ 3 ದಿನಗಳವರೆಗೆ ನಂತರದ 3 ದಿನಗಳವರೆಗೆ ಹೆಚ್ಚುವರಿ ರೂ.50-00 (ಐವತ್ತು ರೂಪಾಯಿಗಳು ಮಾತ್ರ) ರಂತೆ ದಂಡ ವಿಧಿಸಬಹುದಾಗಿರುತ್ತದೆ ಹಾಗೂ ಕರುಗಳಿಗೆ ಪ್ರತಿ ಕರುವಿಗೆ ರೂ.50-00 (ಐವತ್ತು ರೂಪಾಯಿಗಳು ಮಾತ್ರ) ರಂತೆ 3 ದಿನಗಳವರೆಗೆ ನಂತರದ 3 ದಿನಗಳವರೆಗೆ ಹೆಚ್ಚುವರಿ ರೂ.25-00 (ಇಪ್ಪತ್ತೈದು ರೂಪಾಯಿಗಳು ಮಾತ್ರ) ರಂತೆ ದಂಡ ವಿಧಿಸಬಹುದಾಗಿರುತ್ತದೆ. ಪ್ರಸ್ತುತ ಪಾಲಿಕೆಯ ದನದ ದೊಡ್ಡಿಗೆ ಹಿಡಿದು ತರುವ ಬೀಡಾಡಿ ದನಗಳಿಗೆ ಮೇಲಿನಂತೆ ಜಾನುವಾರು ಮಾಲೀಕರಿಂದ ದಂಡ ವಸೂಲಿ ಮಾಡಿ ಜಾನುವಾರುಗಳನ್ನು ಬಿಡಲಾಗುತ್ತಿದೆ.

ಸುಮಾರು 20 ವರ್ಷಗಳಿಂದಲೂ ಮೇಲೆ ತಿಳಿಸಿದ ದರಗಳಂತೆ ದಂಡವನ್ನು ವಸೂಲಿ ಮಾಡಲಾಗುತ್ತಿದ್ದು, ದರ ಪರಿಷ್ಕರಣೆ ಆಗಿರುವುದಿಲ್ಲ. ಪ್ರಸ್ತುತ ಸಾಗಾಣಿಕೆ ವೆಚ್ಚ ದನಗಳ ಮೇವಿನ ವೆಚ್ಚ ಹಾಗೂ ನಿರ್ವಹಣೆ ವೆಚ್ಚಗಳು ಅಧಿಕಗೊಂಡಿದ್ದು ಈ ವೆಚ್ಚಗಳನ್ನು ಸರಿದೂಗಿಸುವ ಸಲುವಾಗಿ ಹಾಗೂ ಜಾನುವಾರುಗಳ ಮಾಲೀಕರು ತಮ್ಮ ಜಾನುವಾರುಗಳನ್ನು ರಸ್ತೆಗೆ ಬಿಡುವುದನ್ನು ನಿರ್ಬಂಧಿಸುವ ಸಲುವಾಗಿ ಬೀಡಾಡಿ ದನಗಳಿಗೆ ವಿಧಿಸುವ ದಂಡವನ್ನು ಈ ಕೆಳಗಿನಂತೆ ಹೆಚ್ಚಿಸಬೇಕಾಗಿರುತ್ತದೆ.

ದಂಡದ ಹಣವನ್ನು ಪ್ರತಿ ವಯಸ್ಕ ದನಕ್ಕೆ ರೂ.600-00 (ಆರುನೂರು ರೂಪಾಯಿಗಳು ಮಾತ್ರ) ರಂತೆ 3 ದಿನಗಳವರೆಗೆ, ನಂತರದ ದಿನಗಳಿಗೆ ಹೆಚ್ಚುವರಿ ರೂ.300-00 (ಮುನ್ನೂರು ರೂಪಾಯಿಗಳು ಮಾತ್ರ) ರಂತೆ ಪ್ರತಿದಿನ ಪ್ರತಿ ವಯಸ್ಕ ದನಕ್ಕೆ ಹಾಗೂ ಪ್ರತಿ ಕರುವಿಗೆ ರೂ.300-00 (ಮುನ್ನೂರು ರೂಪಾಯಿಗಳು ಮಾತ್ರ) ರಂತೆ 3 ದಿನಗಳವರೆಗೆ, ನಂತರದ ದಿನಗಳಿಗೆ ಹೆಚ್ಚುವರಿ ರೂ.200-00 (ಇನ್ನೂರು ರೂಪಾಯಿಗಳು ಮಾತ್ರ) ರಂತೆ ಪ್ರತಿದಿನ ಪ್ರತಿ ಕರುವಿಗೆ ದಂಡವನ್ನು ವಿಧಿಸಬಹುದಾಗಿರುತ್ತದೆ. ಬೀಡಾಡಿ ದನಗಳಿಗೆ ವಿಧಿಸುವ ದಂಡವನ್ನು ಮೇಲಿನಂತೆ ಪರಿಷ್ಕರಿಸಲು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿದ್ದು, ಈ ದರ ಪರಿಷ್ಕರಣೆಯನ್ನು ಅನುಮೋದಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## 4. ವಿಷಯದ ಸಂಖ್ಯೆ: ಸಾಆಸ್ಥಾಸ/37/2011-12:

ಸಂಖ್ಯೆ: ಮು.ಆ.ಅ./ಎಸಿಟಿ/2/ಪಿಆರ್/04/2011-12, ದಿನಾಂಕ: 22-10-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಗಳಿಗೆ ಅವಶ್ಯವಿರುವ ಲ್ಯಾಪ್ರಾಸ್ಕೋಪ್ ಮತ್ತು ಪೂರಕ ಉಪಕರಣಗಳ ಖರೀದಿಗಾಗಿ ಟೆಂಡರ್ ಕರೆಯಲಾಗಿದ್ದ, ಟೆಂಡರ್‌ನಲ್ಲಿ ಈ ಕೆಳಕಂಡ 4 ಸಂಸ್ಥೆಗಳು ಭಾಗವಹಿಸಿದ್ದು, ಈ ಎಲ್ಲಾ ಸಂಸ್ಥೆಗಳ ಟೆಂಡರ್‌ಗಳು Accept ಆಗಿರುತ್ತವೆ.
**ಟೆಂಡರ್ ಅಧಿಸೂಚನೆ ಸಂಖ್ಯೆ : CHO/ACT/2/PR/04/2011-12,** ದಿನಾಂಕ: 24-05-2011.

**ವಿವರ ಈ ಕೆಳಕಂಡಂತಿರುತ್ತದೆ :**

1. ದೃಮುಖ ಎಂಟರ್‌ಪ್ರೈಸಸ್ - Accepted
2. ಫೈಕಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್ - Accepted
3. ಲೋಟಸ್ ಮೆಡಿಕಲ್ ಕಾರ್ಪೋರೇಷನ್ - Accepted
4. ರವಿ ಸ್ಟೀಲ್ ಪರ್ನಿಚರ್ಸ್ - Accepted

Accept ಆಗಿದ್ದ ಟೆಂಡರ್‌ಗಳ ಪೈಕಿ ಕ್ರ.ಸಂ.2ರ ಮೆ॥ ಫೈಕಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್ ರವರ ಟೆಂಡರ್ ಮಾತ್ರ ತಾಂತ್ರಿಕವಾಗಿ ಅರ್ಹವಾಗಿದ್ದು, ಉಳಿದ ಟೆಂಡರ್‌ಗಳು ಅನರ್ಹಗೊಂಡಿರುತ್ತವೆ.

ತಾಂತ್ರಿಕ ಸಮಿತಿ ಸಭೆಯ ನಡವಳಿಕೆಯನ್ನು ಕಡತದ ಪುಟ 154 ರಲ್ಲಿ ಲಗತ್ತಿಸಿದೆ.

ತಾಂತ್ರಿಕವಾಗಿ ಅರ್ಹವಾದ ಮೆ॥ ಫೈಕಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್, ನಂ.12/2, ಟವರ್ ಬಿ-6, ಎಂ.ಜಿ. ರಸ್ತೆ, ಬೆಂಗಳೂರು-01 ರವರು ಸಲ್ಲಿಸಿದ್ದ ಲ್ಯಾಪ್ರಾಸ್ಕೋಪ್ ಮತ್ತು ಪೂರಕ ಉಪಕರಣಗಳ ಪ್ರತ್ಯಕ್ಷಿತೆಯನ್ನು (Demonstation) ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ಹೆಲ್ತ್ ಎಕ್ವಿಪ್‌ಮೆಂಟ್ ಅಧಿಕಾರಿಗಳು ಮತ್ತು ಕೆಂಪೇಗೌಡ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರುಗಳನ್ನೊಳಗೊಂಡ ತಾಂತ್ರಿಕ ಸಮಿತಿಯ ದಿನಾಂಕ: 26-11-2011 ರಂದು ಪಾಲಿಕೆಯ ಹೆಚ್.ಸಿದ್ದಯ್ಯ ರೆಫರಲ್ ಆಸ್ಪತ್ರೆಯಲ್ಲಿ ಕೈಗೊಂಡಿದ್ದು, ಸದರಿ ಸಂಸ್ಥೆ ಪ್ರತ್ಯಕ್ಷಿಕೆಗೆ ಸಲ್ಲಿಸಿರುವ ಯಂತ್ರ/ಉಪಕರಣಗಳು ಟೆಂಡರ್‌ನಲ್ಲಿ ನಿಗಧಿಪಡಿಸಿರುವ ವಿಶಿಷ್ಟತೆಗನುಗುಣವಾಗಿರುವುದಾಗಿಯೂ (Specification) ತಿಳಿಸಿ, ಆಸ್ಪತ್ರೆಗಳಿಗೆ ಯಂತ್ರ ಮತ್ತು ಉಪಕರಣಗಳು ಜರೂರು ಅವಶ್ಯವಿರುವ ಕಾರಣ ಆದಷ್ಟು ಬೇಗ ಖರೀದಿ ಪ್ರಕ್ರಿಯೆ ಕೈಗೊಳ್ಳಬೇಕೆಂದು ತಾಂತ್ರಿಕ ಸಮಿತಿಯ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿರುತ್ತದೆ. ತಾಂತ್ರಿಕ ಸಮಿತಿ ಸಭೆಯ ನಡವಳಿಕೆಯನ್ನು ಪುಟ 158 ರಿಂದ 159 ರಲ್ಲಿ ಲಗತ್ತಿಸಿದೆ.

ಆರ್ಥಿಕ ಬಿಡ್ಡನ್ನು ದಿನಾಂಕ: 15-10-2011 ರಂದು ತೆರೆಯಲಾಗಿದ್ದು, ಮೆ॥ ಫೈಕಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಮಾತ್ರ ಯಂತ್ರ ಮತ್ತು ಉಪಕರಣಗಳಿಗೆ ನಮೂದಿಸಿರುವ ದರ ಈ ಕೆಳಕಂಡಂತಿರುತ್ತದೆ.

| Sl. No. | Cat. No. | Description | U/Price | Qty | T/Price |
|---|---|---|---|---|---|
| 1 | 26031BA | KARLSTORZ: DOUBLE PUNCTURE LAPAROSCOPE HOPKINS Forward-Oblique Telescope 30°, enlarged view, diameter 6.5 mm, length 35 cm, autoclavable, fiber optic light transmission incorporated color code: red | 103500 | 24 | 2484000 |
| 2 | 30101AP | Trocar, size 7mm, color code: Yellow, consisting of : 30101 P Trocar only with pyramidal tip 30101 H2 Cannula without valve, with insufflations stop-cock, length 10.5 cm 30101 A1 Automatic valve | 14884 | 48 | 714420 |
| 3a | 26173RA- | Ring Applicator. Double puncture approach. For use with trocar size 7mm. May be fitted with 2 silastic rings | 25704 | 48 | 1233792 |
| 4 | | LOADER AND PUSHER | | | |
| a | 173C | Cone for loading of rings | 352 | 120 | 42210 |
| b | 173S | Slide for loading of rings | 683 | 90 | 61425 |
| 5 | | VERESS NEEDLE | | | |
| a | 26120J | VERESS Pneumoperitoneum Needle with spring-loaded blunt stylet, LUER-lock, length 10 cm | 4148 | 48 | 199080 |
| b | 26120JLL | VERESS Pneumoperitoneum Needle with spring loaded blunt stylet LUER-lock, length 15 cm. | 5072 | 36 | 182574 |
| 6 | | Essential Spares | | | |
| a | 15003C | Antifog solution 1 bottle | 693 | 90 | 62370 |

| | | | | | |
|---|---|---|---|---|---|
| b | 6127790 | Seal bonnet (60/6) | 142 | 212 | 30051 |
| c | 6004900 | Kit for Cleaning consisting of:<br>Trocar brush X 2 nos,<br>Cannula brush X 2 nos,<br>Silicon oil 50ml X 4 nos (200ml),<br>carrying case | 2310 | 24 | 55440 |
| d | | Environment<br>Telescope should be specified for operation up to 45 C and 10% relative humidity should be certified as per CE &/FDA<br>LIGHT SOURCE & CABLE | | 23 | |
| 7 | 20113301 | KARL STORZ Cold Light Fountain HALOGEN 250 twin with two 250 Watt Halogen lamps, with automatic switch-in spare lamp, one KARL STORZ light outlet Power Supply: 100/120/230/240 VAC, 50/60 Hz. Consisting of : 20113320 Halogen 250 twin 400A Mains Cord | 77805 | 8 | 622440 |
| 8 | | Essential Parts | | | |
| a | 400A | Mains cord compatable with insufflators and light source | 630 | 9 | 5670 |
| b | LAMP250P | Halogen Pin Lamps 250 watt | 357 | 288 | 102816 |
| c | 495NB | Fiber Optic Light Cable, size: 4.8 mm, length 180cm | 20633 | 24 | 495180 |
| d | | Formaline Chamber moulded 20" X 8" X 5" (for sterilization of Laparoscope) | 3990 | 24 | 95760 |
| 9 | | Cidex Tray for Sterilization of Laparoscope | 4725 | 24 | 113400 |
| 10 | | 1 KV UPS with 4 hours backup OPTIONAL BUT REQUIRED TO USE WITH TELESCOPE (24 nos. required one each with each telescopes) | 44625 | 24 | 1071000 |
| 11 | 30101AP | Trocar, size 7mm, color code: Yellow, consisting of: 30101 P Trocar only with Pyramidal tip 30101 H2 Cannula without valve, with insufflations stop-cock, length 10.5 cm 30101 A1 Automatic Valve (Taxes extra @ 5%)<br>Total Price before Tax<br>VAT @ 5%<br>Total Goods Value Rupees | 14884 | 1 | 7571628.00<br>378581.40<br>7950209.40 |

(ರೂ.ಎಪ್ಪತ್ತೊಂಬತ್ತು ಲಕ್ಷ ಐವತ್ತು ಸಾವಿರದ ಎರಡುನೂರ ಒಂಭತ್ತು ಮಾತ್ರ)

ಮುಂದುವರೆದಂತೆ, ಯಂತ್ರಗಳ ವಾರೆಂಟ್ ಅವಧಿ 3 ವರ್ಷಗಳು ಮುಗಿದ ನಂತರ ಮುಂದಿನ 4 ವರ್ಷಗಳಿಗೆ ಯಂತ್ರಗಳ Comprahensive Maintainance ಮತ್ತು Repair Cost ಗೆ ನಮೂದಿಸಿರುವ ದರ ಈ ಕೆಳಕಂಡಂತಿರುತ್ತದೆ.

| A | B | C | D | | | |
|---|---|---|---|---|---|---|
| Schedule No. | Brief description of equipment | Quantity | Comprehensive Maintenance and repairs cost for each unit after warranty period | | | |
| | | | D1 | D2 | D3 | D4 |
| | | | 1st Year/Rupees | 2nd Year/Rupees | 3rd Year/Rupees | 4th Year/Rupees |
| 1 | HOPKINS Forward-Oblique Tele-scope 30°, enlarged view, diameter 6.5 mm, length 35 cm, autoclavable, fiber optic light transmission incorporated, color code: red | 1 | 4140 | 4399 | 4658 | 4916 |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | | | | | | |
|---|---|---|---|---|---|---|
| 2 | Trocar, size 7 mm, color code: Yellow, consisting of: 30101 P Trocar only with pyramidal tip 30101 H2 Cannula without valve, with insufflation stopcock, length 10.5 cm 30101 A1 valve | 1 | 1028 | 1092 | 1157 | 1221 |
| 3a | Ring Applicator. Double puncture approach. For use with trocar size 7mm. May be fitted with 2 silastic rings | 1 | 1028 | 1092 | 1157 | 1221 |
| 7 | KARL STORZ Cold Light Fountain ALOGEN 250 twin with two 250 Watt halogen lamps, with automatic switch-in spare lamp, one KARL STORZ light outlet Power Supply: 100/120/230/240 VAC, 50/60 Hz. Consisting of: 20113320 Halogen 250 twin 400A Mains Cord | 1 | 3112 | 3307 | 3501 | 3696 |

ಲ್ಯಾಪ್ರಾಸ್ಕೋಪ್ ಮತ್ತು ಪೂರಕ ಉಪಕರಣಗಳ ಖರೀದಿಗೆ ಎರಡನೇ ಬಾರಿ ಟೆಂಡರ್ ಕರೆಯಲಾಗಿದ್ದು, ಮೊದಲನೆಯ ಟೆಂಡರ್‌ನಲ್ಲಿ ಟೆಂಡರ್ ಸಲ್ಲಿಸಿದ್ದ 7 ಮಂದಿ ಬಿಡ್ಡುದಾರರು ಅನರ್ಹಗೊಂಡಿದ್ದರಿಂದ ಪ್ರಸ್ತುತ ಎರಡನೇ ಟೆಂಡರ್ ಕರೆಯಲಾಗಿರುತ್ತದೆ. ಈ ಬಾರಿಯ ಟೆಂಡರ್‌ನಲ್ಲಿಯೂ ಸಹ 3 ಮಂದಿ ಬಿಡ್ಡುದಾರರು ಭಾಗವಹಿಸಿದ್ದು, ಕೇವಲ ಒಬ್ಬರೇ ಬಿಡ್ಡುದಾರರು (ಮೆ॥ ಫೈಕಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್) ತಾಂತ್ರಿಕವಾಗಿ ಅರ್ಹವಾಗಿರುವ ಕಾರಣ ಸದರಿ ಬಿಡ್ಡುದಾರರು ನಮೂದಿಸಿರುವ ದರಗಳನ್ನು ಇತರೆ ಸರ್ಕಾರಿ ಸಂಸ್ಥೆಗಳಲ್ಲಿ ಇದೇ ಉಪಕರಣಗಳನ್ನು ಖರೀದಿಸಿರುವ ದರಗಳೊಂದಿಗೆ ತುಲನೆ ಮಾಡಿ, ದರ ಮಾರುಕಟ್ಟೆ ದರಕ್ಕನುಗುಣವಾಗಿದೆಯೇ ಎಂಬುದನ್ನು ಪರಿಶೀಲಿಸಿ, ಅಗತ್ಯಬಿದ್ದಲ್ಲಿ ಮುಖ್ಯ ಆರೋಗ್ಯಾಧಿಕಾರಿಗಳು ಮತ್ತು ಜಂಟಿ ಆಯುಕ್ತರು (ಆರೋಗ್ಯ) ರವರು ದರ ಸಂಧಾನ ನಡೆಸಿ, ಖರೀದಿಸಲು ಕ್ರಮವಹಿಸಬಹುದೆಂದು ದಿನಾಂಕ: 15-10-2011 ತಾಂತ್ರಿಕ ಸಮಿತಿಯ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. ತಾಂತ್ರಿಕ ಸಮಿತಿಯ ನಡವಳಿಕೆಯನ್ನು ಕಡತದ ಪುಟ __________ ರಿಂದ __________ ರವರೆಗೆ ಲಗತ್ತಿಸಿದೆ.

ತಾಂತ್ರಿಕ ಸಮಿತಿಯ ನಿರ್ಣಯದಂತೆ, ಬಿಡ್ಡುದಾರರು ಪಾಲಿಕೆಯ ಟೆಂಡರ್‌ನಲ್ಲಿ ನಮೂದಿಸಿರುವ ದರಗಳನ್ನು ಇದೇ ಸಂಸ್ಥೆ ಇತರೆ ಸರ್ಕಾರಿ ಆಸ್ಪತ್ರೆ/ಸಂಸ್ಥೆಗಳಿಗೆ ಲ್ಯಾಪ್ರಾಸ್ಕೋಪ್ ಮತ್ತು ಪೂರಕ ಉಪಕರಣಗಳನ್ನು ಸರಬರಾಜು ಮಾಡಿದ ಟೆಂಡರ್ ದರಗಳೊಂದಿಗೆ ತಾಳೆ ಮಾಡಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ. ಸರಬರಾಜು ಆದೇಶಗಳು ಮತ್ತು DGS & D ದರಪಟ್ಟಿಗಳನ್ನು ಪುಟ 178 ರಿಂದ 180 ರಲ್ಲಿ ಲಗತ್ತಿಸಿದೆ.

| Sl. No. | Name of the Item | Qty. | Present Rate (Rs.) | Total Price (Rs.) | Rate at which the same item was purchased by the Govt. (Rs.) | Total in (Rs.) |
|---|---|---|---|---|---|---|
| 1 | KARLSTORZ: DOUBLE PUNCTURE LAPAROSCOPE HOPKINS Forward-Oblique Tele-scope 30°, enlarged view, diameter 6.5 mm, length 35 cm, autoclavable, fiber optic light transmission incorporated, color code: red | 24 | 1,03,500/- (Topline) | 24,84,000/- | 1,25,000 DHO-Bidar 2007-08 | 30,00,000/- |
| 2 | Trocar, size 7mm, color code: Yellow, consisting of : 30101 P Trocar only with pyramidal tip 30101 H2 Cannula without valve, with insufflations stop-cock, length 10.5cm 30101 A1 Automatic valve | 48 | 14,884/- | 7,14,420/- | 15,595 DHO-Mysore 2010-11 | 7,48,560/- |
| 3a | Ring Applicator, Double puncture approach. For use with trocar size 7mm. May be fitted with 2 silastic rings | 48 | 25704/- | 12,33,792/- | 25,459 DHO-Mysore 2010-11 | 12,22,032/- |

| | | | | | | |
|---|---|---|---|---|---|---|
| 4 | LOADER AND PUSHER | | | | | |
| a | Cone for loading of rings | 120 | 352/- | 42,210/- | 332<br>DHO-Mysore<br>2010-11 | 39,840/- |
| b | Slide for loading of rings | 90 | 683 | 61,425/- | 645<br>DHO-Mysore<br>2010-11 | 58,050/- |
| 5 | VERESS NEEDLE | | | | | |
| a | VERESS Pneumoperitoneum Needle with spring-loaded blunt stylet, LUER-lock, length 10cm | 48 | 4148 | 1,99,080/- | 4009<br>DHO-Mysore<br>2010-11 | 1,92,432/- |
| b | VERESS Pneumoperitoneum Needle with spring loaded blunt stylet LUER-lock, length 15 cm. | 36 | 5072 | 1,82,574/- | 5,028<br>DHO-Mysore<br>2010-11 | 1,81,008/- |
| 6 | Essential Spares | | | | | |
| a | Antifog solution 1 bottle | 90 | 693 | 62,370/- | 655<br>DHO-Mysore<br>2010-11 | 58,950/- |
| b | Seal bonnet (50/6) | 212 | 142 | 30,051/- | 138<br>DHO-Mysore<br>2010-11 | 29,256/- |
| c | Kit for Cleaning<br>consisting of:<br>Trocar brush X 2 nos.<br>Cannula brush X 2 nos.<br>Silicon oil 50ml X 4 nos.<br>(200ml),<br>Carrying case | 24 | 2310 | 55,440/- | 4,514<br>DHO-Mysore<br>2010-11 | 1,08,336/- |
| d | Environment Telescope should be specified for operation up to 45 C and 10% relative humidity should be certified as per CE &/FDALIGHT SOURCE & CABLE | | | | | |
| 7 | KARL STORZ Cold Light Fountain HALOGEN 250 twin with two 250 Watt halogen lamps, with automatic switch-in spare lamp, one KARL STORZ light outlet Power Supply: 100/120/230/240 VAC, 50/60 Hz. Consisting of : 20113320 Halogen 250 twin 400A Mains Cord | 8 | 77805 | 6,22,440/- | 74,152<br>DHO-Mysore<br>2010-11 | 5,93,216/- |
| 8 | Essential Parts | | | | | |
| a | Mains cord compatable with insufflators and light source | 9 | 630 | 5,670/- | 635<br>DHO-Mysore<br>2010-11 | 5,715/- |
| b | Halogen Pin Lamps 250 watt | 288 | 357 | 1,02,816/- | 338<br>DHO-Mysore<br>2010-11 | 97,344/- |
| c | Fiber Optic Light Cable, size: 4.8mm, length 180 cm | 24 | 20633 | 4,95,180/- | 21,133<br>DHO-Mysore<br>2010-11 | 5,07,192/- |
| d | Forma line Chamber moulded 20" X 8" X 5" (for sterilization of Laparoscope) | 24 | 3990 | 95,760/- | 3,952<br>DHO-Mysore<br>2010-11 | 94,848/- |
| 9 | Cidex Tray for sterilization of Laparoscope | 24 | 4725 | 1,13,400/- | 4,800<br>DPMO<br>Ramnagar<br>01-03-2011 | 1,15,200/- |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | | | | | | |
|---|---|---|---|---|---|---|
| 10 | 1 KV UPS with 4 hours backup OPTIONAL BUT REQUIRED TO USE WITH TELESCOPE (24 nos. required one each with each relescopes) | 24 | 44625 | 10,71,000/- | 47,638 DGS & D 11-11-84/05838/1466 07-01-2011 | 11,43,312/- |
| | **Total** | | | **79,50,209/-** | | **81,96,191/-** |
| | **Difference Amt.** | **2,45,982-00** | | | | |

ಮೇಲಿನ ಪಟ್ಟಿಯನ್ವಯ ಮೆ॥ ಫೈಕಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್ ರವರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳು ಇತರೆ ಸರ್ಕಾರಿ ಸಂಸ್ಥೆಗಳಲ್ಲಿ ಇದೇ ಯಂತ್ರ/ಉಪಕರಣಗಳನ್ನು ಖರೀದಿಸಿರುವ ದರಕ್ಕಿಂತ ರೂ.2,45,982/- ಕಡಿಮೆ ಇರುತ್ತದೆ.

ಮೇಲ್ಕಂಡ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ, ಲ್ಯಾಪ್ರಾಸ್ಕೋಪ್ ಮತ್ತು ಪೂರಕ ಉಪಕರಣಗಳನ್ನು ರೂ.79,50,209/- ಮೊತ್ತದಲ್ಲಿ ಲೆಕ್ಕಶೀರ್ಷಿಕೆ 14, ಆರೋಗ್ಯ ವೈದ್ಯಕೀಯ, ಕುಟುಂಬ ಕಲ್ಯಾಣ ವೆಚ್ಚಗಳು, ಉಪಕರಣಗಳ ಖರೀದಿಗಾಗಿ ಮೀಸಲಿಟ್ಟಿರುವ ರೂ.150.00 ಲಕ್ಷ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ, ಮೆ॥ ಫೈಕಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್ ರವರಿಂದ ಟೆಂಡರ್ ನಿಯಮಾವಳಿ ರೀತ್ಯಾ ಒಪ್ಪಂದ ಮಾಡಿಕೊಂಡು, ಖರೀದಿಸುವ ಬಗ್ಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 5. ವಿಷಯದ ಸಂಖ್ಯೆ: ಸಾಆಸ್ಥಾಸ/38/2011-12:

ಆಯುಕ್ತರ ದಿನಾಂಕ: 29-10-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಆಹ್ವಾನಿಸಲಾಗಿರುವ ಘನತ್ಯಾಜ್ಯ ನಿರ್ವಹಣೆ ಟೆಂಡರ್‌ನ ಬಿಡ್ ಪೂರ್ವ ಸ್ಪಷ್ಟನೆಗಳಿಗಾಗಿ (Pre-bid queries) ದಿನಾಂಕ: 15-10-2011 ರಂದು ಐ.ಪಿ.ಪಿ. ಕೇಂದ್ರ, ಮಲ್ಲೇಶ್ವರಂನಲ್ಲಿ ಮುಖ್ಯ ಅಭಿಯಂತರರು (ಪರಿಸರ ಕೋಶ) ರವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಮತ್ತು ಬಿಡ್ಡುದಾರರೊಂದಿಗೆ ನಡೆದ ಪೂರ್ವಭಾವಿ ಮುಖಾಮುಖಿ ಸಭೆಯಲ್ಲಿ ಹಾಜರಿದ್ದ ಬಿಡ್ಡುದಾರರು ಹಾಲಿ ಕರೆದಿರುವ ಘನತ್ಯಾಜ್ಯ ನಿರ್ವಹಣೆ ಟೆಂಡರ್‌ನ ಕೆಲವೊಂದು ನಿಬಂಧನೆಗಳಲ್ಲಿ ವಿನಾಯಿತಿ ಕೋರಿದ್ದು, ಈ ಕೆಳಕಂಡಂತಿರುತ್ತದೆ.

- ಟೆಂಡರ್‌ನ್ನು 2 ವರ್ಷದ ಬದಲು 5 ವರ್ಷದ ಅವಧಿಗೆ ನೀಡುವುದು.
- ಅರ್ಹತೆಯ ಮಾನದಂಡಗಳಲ್ಲಿ ಆಟೋ ಟಿಪ್ಪರ್, ಟಿಪ್ಪರ್ ಲಾರಿ ಮತ್ತು ಕಾಂಪ್ಯಾಕ್ಟರ್ ವಾಹನದ ಮಾದರಿಯಲ್ಲಿ ವಿನಾಯಿತಿ ನೀಡುವ ಬಗ್ಗೆ.
- ಟೆಂಡರಿನಲ್ಲಿ ಹಣಕಾಸಿನ ಬಿಡ್ಡು (ಅನುಬಂಧ-ಎಫ್1) ಅನ್ನು ತೆಗೆದು ಹಾಕುವುದು.
- ಗುತ್ತಿಗೆದಾರರು ತಾವು ನೇಮಿಸಿಕೊಂಡಿರುವ ಕಾರ್ಮಿಕರಿಗೆ ವೇತನವನ್ನು ಚೆಕ್ ಮೂಲಕ ಅಥವಾ ನಗದು ರೂಪದಲ್ಲಿ ನೀಡುವ ಬಗ್ಗೆ ಹಾಗೂ ಪೌರಕಾರ್ಮಿಕರು 30 ದಿನಗಳಿಗಿಂತ ಹೆಚ್ಚಾಗಿ ಕೆಲಸ ನಿರ್ವಹಿಸಿದ್ದಲ್ಲಿ ಮಾತ್ರ ಚೆಕ್ ಮೂಲಕ ವೇತನ ಪಾವತಿಸುವ ಬಗ್ಗೆ.
- ಕಾರ್ಮಿಕರಿಗೆ ವಾರಕ್ಕೆ ಒಮ್ಮೆ ವೇತನದೊಂದಿಗಿನ ರಜೆ, ರಾಷ್ಟ್ರೀಯ ಹಬ್ಬಗಳಿಗೆ 5 ದಿನಗಳ ರಜೆ ಮತ್ತು ವಾರ್ಷಿಕವಾಗಿ 10 ದಿನಗಳ ಸಾಂಧರ್ಭಿಕ ರಜೆಯೊಂದಿಗಿನ ವೇತನವನ್ನು ನೀಡಬೇಕಾಗಿರುವ ಬಗ್ಗೆ.
- ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ವಾಹನಗಳ ನಿಲುಗಡೆಗಾಗಿ ಸ್ಥಳಾವಕಾಶ ಒದಗಿಸುವ ಬಗ್ಗೆ.
- ಪಾಲಿಕೆಯ ಪೌರಕಾರ್ಮಿಕರು ನಿರ್ವಹಿಸುವ ಸ್ಥಳವನ್ನು ನಕ್ಷೆಯಲ್ಲಿ ಪ್ರತ್ಯೇಕವಾಗಿ ಬಿಂಬಿಸುವ ಬಗ್ಗೆ.
- ರಸ್ತೆ ಬದಿಯಲ್ಲಿ ಬೆಸ್ಕಾಂ ರವರು ಕಟಾವು ಮಾಡಿರುವ ಮರದ ರೆಂಬೆಗಳನ್ನು ಮತ್ತು ರಸ್ತೆ ಬದಿಯಲ್ಲಿರುವ ಒಳಚರಂಡಿ ಹೂಳನ್ನು ತೆಗೆಯುವ ಬಗ್ಗೆ.
- ಭವಿಷ್ಯದಲ್ಲಿ ಯಾವುದೇ ಸ್ವಸಹಾಯ ಸಂಘವು ಮನೆ ಬಾಗಿಲಿನಿಂದ ಕಸವನ್ನು ಸಂಗ್ರಹಿಸಲು ಮುಂದೆ ಬಂದರೆ, ಯಶಸ್ವಿಯಾದ ಬಿಡ್ಡುದಾರರು ಬಂಡವಾಳ ಹೂಡಿರುವ ಮೊತ್ತವನ್ನು ಪಾವತಿಸುವ ಬಗ್ಗೆ.
- ದಂಡ ಜುಲ್ಮಾನೆಯಲ್ಲಿ ಮಾಸಿಕ ಗುತ್ತಿಗೆ ಮೊತ್ತದ ಶೇ.1 ರ ಬದಲು ದಿನದ ಗುತ್ತಿಗೆ ಮೊತ್ತದ ಶೇ.1 ರಂತೆ ನಿಗದಿಸುವುದು ಹಾಗೂ ಕಾರ್ಮಿಕರು ಹಾಜರಾಗದಿದ್ದಲ್ಲಿ ದಿನದ ವೇತನದ ರೂ.15 ರಷ್ಟು ಕಟಾವು ಮಾಡುವುದನ್ನು ತೆಗೆದುಹಾಕುವುದು.
- ಭವಿಷ್ಯದಲ್ಲಿ ಕಾರ್ಮಿಕರ ವೇತನ ಹೆಚ್ಚಾದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾಲಿಕೆಯಿಂದ ಪಾವತಿಸುವ ಬಗ್ಗೆ.
- ಕಟ್ಟಡದ ಭಗ್ನಾವಶೇಷ ತ್ಯಾಜ್ಯ ಮತ್ತು ಇ ತ್ಯಾಜ್ಯವನ್ನು ಸಂಗ್ರಹಣೆ ಮತ್ತು ವಿಲೇವಾರಿಯನ್ನು ತೆಗೆದುಹಾಕುವುದು.
- ಜಿ.ಪಿ.ಎಸ್. ವರದಿಯ ಆಧಾರದ ಮೇಲೆ ಬಿಲ್ಲನ್ನು ಪಾವತಿಸುವುದನ್ನು ತೆಗೆದುಹಾಕುವುದು.

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಏಕವ್ಯಕ್ತಿಗಳಿಗೂ ಟೆಂಡರಿನ ಇ.ಎಂ.ಡಿ. ಮತ್ತು ಆರ್ಥಿಕ ಸಾಮರ್ಥ್ಯದಲ್ಲಿ ವಿನಾಯಿತಿ ನೀಡುವ ಬಗ್ಗೆ.
- ನೊಂದಾಯಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ/ಏಕವ್ಯಕ್ತಿಗಳಿಗೆ ಟೆಂಡರಿನಲ್ಲಿ ಶೇ.22.75 ರಷ್ಟು ಪ್ಯಾಕೇಜುಗಳನ್ನು ಮೀಸಲಿಡುವ ಬಗ್ಗೆ.
- ನೊಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಾಹನ ಖರೀದಿಸಲು ಆರ್ಥಿಕ ಸಹಾಯ ನೀಡುವ ಸಲುವಾಗಿ ಸಫಾಯಿ ಕರ್ಮಚಾರಿ ಅನುದಾನವನ್ನು ನೀಡುವ ಬಗ್ಗೆ.
- ಬಿಡ್ಡುದಾರರು ಅರ್ಹತಾ ಮಾನದಂಡದ ಅನ್ವಯ ಅನುಭವದ ಪ್ರಮಾಣ ಪತ್ರಕ್ಕೆ ಒಪ್ಪಂದ ಪತ್ರದ ಬದಲು ಕಾರ್ಯಾದೇಶ ಪತ್ರವನ್ನು ನೀಡುವ ಬಗ್ಗೆ.
- ಬಿಡ್ಡುದಾರರು ಟೆಂಡರ್‌ನ ಸೂಚಿಸಲಾದಂತಹ ವಾಹನಗಳು ಮತ್ತು ಸಲಕರಣೆಗಳನ್ನು 15 ದಿನಗಳೊಳಗಾಗಿ ಹಾಜರಪಡಿಸುವಂತೆ ಸೂಚಿಸಲಾಗಿದ್ದು, ಕನಿಷ್ಠ ಪಕ್ಷ 90 ದಿನಗಳ ಕಾಲಾವಕಾಶ ನೀಡುವ ಬಗ್ಗೆ.
- ಟೆಂಡರಿನ ಕಾರ್ಯಾಧಾರಿತ ಮೊತ್ತ (Performance security) ನಲ್ಲಿ ಗುತ್ತಿಗೆಯ ಮೊತ್ತದ ಶೇ.5 ರಷ್ಟು 2 ವರ್ಷದ ಅವಧಿಯ ಮೊತ್ತವನ್ನು 1 ವರ್ಷದ ಅವಧಿಗೆ ಸೀಮಿತಗೊಳಿಸಿ, ಎರಡನೇಯ ವರ್ಷಕ್ಕೆ ನವೀಕರಿಸುವ ಬಗ್ಗೆ.
- 18 ರಿಂದ 60 ವರ್ಷದ ಒಳಗಿರುವ ಸಿಬ್ಬಂದಿಯನ್ನು ಹಾಗೂ ಕನಿಷ್ಠ ಶೇ.40 ರಷ್ಟು ಪುರಷರನ್ನು ನೇಮಿಸಿಕೊಳ್ಳುವ ಬದಲು ಶೇ.20 ರಷ್ಟು ಪುರುಷರನ್ನು ನೇಮಿಸಿಕೊಳ್ಳುವುದು.
- ಯಶಸ್ವಿ ಬಿಡ್ಡುದಾರರು ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ ಪ್ರಗತಿಯ ಬಗ್ಗೆ ವರದಿಯನ್ನು Electronic Format ನಲ್ಲಿ ಪ್ರತಿ ತಿಂಗಳ ಮಾಸಿಕ ಬಿಲ್ಲಿನಲ್ಲಿ ಸಲ್ಲಿಸುವುದು.
- ಅನುಬಂಧ ಡಿ-1 ನಲ್ಲಿ ಯಾವುದೇ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಂದ ಕಪ್ಪುಪಟ್ಟಿಗೆ ಸೇರಿಸಿದ ವ್ಯಕ್ತಿ ಅಥವಾ ಸಂಸ್ಥೆಯ ಜೊತೆಗೆ ಅಸಮರ್ಪಕ ಕಾರ್ಯನಿರ್ವಹಣೆ ಮಾಡಿಲ್ಲ ಎಂಬುವ ಸ್ವಯಂ ಘೋಷಣೆ ಪ್ರಮಾಣ ಪತ್ರವನ್ನು ಒದಗಿಸುವುದು.
- ಟೆಂಡರ್ ಸಲ್ಲಿಸುವ ಅವಧಿಯನ್ನು 30 ದಿನಗಳಿಗೆ ವಿಸ್ತರಿಸುವ ಬಗ್ಗೆ.

ಮೇಲ್ಕಂಡ ಅಂಶಗಳ ಬಗ್ಗೆ ಈ ಕೆಳಕಂಡಂತೆ ಕ್ರಮಕೈಗೊಳ್ಳಬಹುದಾಗಿರುತ್ತದೆ.

| ಬಿಡ್ಡುದಾರರು ವಿನಾಯಿತಿ ಕೋರಿರುವ ಅಂಶಗಳು | ಪಾಲಿಕೆಯು ತೆಗೆದುಕೊಳ್ಳಬಹುದಾದ ಕ್ರಮಗಳು |
|---|---|
| ಟೆಂಡರ್‌ನ್ನು 2 ವರ್ಷದ ಬದಲು 5 ವರ್ಷದ ಅವಧಿಗೆ ನೀಡುವುದು. | ಟೆಂಡರ್ ಅವಧಿಯನ್ನು ಹೆಚ್ಚುವರಿ ಮಾಡಲು ಸಾಧ್ಯವಿರುವುದಿಲ್ಲ. |
| ಅರ್ಹತೆಯ ಮಾನದಂಡಗಳಲ್ಲಿ ಆಟೋ ಟಿಪ್ಪರ್, ಟಿಪ್ಪರ್ ಲಾರಿ ಮತ್ತು ಕಾಂಪ್ಯಾಕ್ಟರ್ ವಾಹನದ ಮಾದರಿಯಲ್ಲಿ ವಿನಾಯಿತಿ ನೀಡುವ ಬಗ್ಗೆ. | ಅರ್ಹತೆಯ ಮಾನದಂಡಗಳಲ್ಲಿ ಆಟೋ ಟಿಪ್ಪರ್ ವಾಹನಗಳ ಮಾದರಿಯು 2005 ನೇ ಇಸವಿಯ ಹಾಗೂ ಟಿಪ್ಪರ್ ಲಾರಿ ಮತ್ತು ಕಾಂಪ್ಯಾಕ್ಟರ್ ವಾಹನದ ಮಾದರಿಯು 2000 ನೇ ಇಸವಿಯ ಮೇಲ್ಪಟ್ಟ ವಾಹನಗಳು ಆರ್.ಟಿ.ಓ. ಸಾಮರ್ಥ್ಯ ಪ್ರಮಾಣ ಪತ್ರ ಮತ್ತು ವಾಯು ಮಾಲಿನ್ಯ ಪರೀಕ್ಷೆಯ ಪ್ರಮಾಣ ಪತ್ರ ಹೊಂದಿರಬೇಕು. |
| ಟೆಂಡರಿನಲ್ಲಿ ಹಣಕಾಸಿನ ಬಿಡ್ಡು (ಅನುಬಂಧ-ಎಫ್1) ಅನ್ನು ತೆಗೆದುಹಾಕುವುದು. | ಟೆಂಡರಿನಲ್ಲಿ ಹಣಕಾಸಿನ ಬಿಡ್ಡು (ಅನುಬಂಧ-ಎಫ್1) ಅನ್ನು ಬಿಡ್ಡುದಾರರು ನಮೂದಿಸುವ ಮೊತ್ತವು ಕನಿಷ್ಠ ಸಿಬ್ಬಂದಿಗಳು, ವಾಹನ ಮತ್ತು ಸಲಕರಣೆಗಳನ್ನು ದಸ್ತಾವೇಜಿನಲ್ಲಿ ಸೂಚಿಸಿರುವ ಅನುಗುಣವಾಗಿ ಮೌಲ್ಯಮಾಪನ ಮಾಡಲು ಸೂಚಿಸಲಾಗಿರುತ್ತದೆ. ಸದರಿ ಟೆಂಡರ್ ಸೇವಾ ಟೆಂಡರ್ ಆಗಿರುವುದರಿಂದ ಸದರಿ ಹಣಕಾಸಿನ ಬಿಡ್ಡು (ಅನುಬಂಧ-ಎಫ್1) ಅನ್ನು ಟೆಂಡರ್ ದಸ್ತವೇಜಿನಲ್ಲಿ ತೆಗೆದುಹಾಕಬಹುದಾಗಿರುತ್ತದೆ. |
| ಗುತ್ತಿಗೆದಾರರು ತಾವು ನೇಮಿಸಿಕೊಂಡಿರುವ ಕಾರ್ಮಿಕರಿಗೆ ವೇತನವನ್ನು ಚೆಕ್ ಮೂಲಕ ಅಥವಾ ನಗದು ರೂಪದಲ್ಲಿ ನೀಡುವ ಬಗ್ಗೆ ಹಾಗೂ ಪೌರಕಾರ್ಮಿಕರು 30 ದಿನಗಳಿಗಿಂತ ಹೆಚ್ಚಾಗಿ ಕೆಲಸ ನಿರ್ವಹಿಸಿದ್ದಲ್ಲಿ ಮಾತ್ರ ಚೆಕ್ ಮೂಲಕ ವೇತನ ಪಾವತಿಸುವ ಬಗ್ಗೆ. | ಗುತ್ತಿಗೆದಾರರು ತಾವು ನೇಮಿಸಿಕೊಂಡಿರುವ ಕಾರ್ಮಿಕರಿಗೆ ಚೆಕ್ ಮೂಲಕ ವೇತನವನ್ನು ಪಾವತಿಸುವ ನಿಬಂಧನೆಗೆ ವಿನಾಯಿತಿ ನೀಡಲು ಸಾಧ್ಯವಿರುವುದಿಲ್ಲ. |
| ಕಾರ್ಮಿಕರಿಗೆ ವಾರಕ್ಕೆ ಒಮ್ಮೆ ವೇತನದೊಂದಿಗಿನ ರಜೆ, ರಾಷ್ಟ್ರೀಯ ಹಬ್ಬಗಳಿಗೆ 5 ದಿನಗಳ ರಜೆ ಮತ್ತು ವಾರ್ಷಿಕವಾಗಿ 10 ದಿನಗಳ ಸಾಂದರ್ಭಿಕ ರಜೆಯೊಂದಿಗಿನ ವೇತನವನ್ನು ನೀಡಬೇಕಾಗಿರುವ ಬಗ್ಗೆ. | ಘನತ್ಯಾಜ್ಯ ನಿರ್ವಹಣೆಯು ಪ್ರತಿ ನಿತ್ಯ ನಿರ್ವಹಿಸಬೇಕಾದ ಕಾರ್ಯವಾಗಿರುವುದರಿಂದ, ಸದರಿ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. |
| ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ವಾಹನಗಳ ನಿಲುಗಡೆಗಾಗಿ ಸ್ಥಳಾವಕಾಶ ಒದಗಿಸುವ ಬಗ್ಗೆ. | ಸಾರ್ವಜನಿಕರಿಗೆ ತೊಂದರೆಯಾಗದಂತೆ ಗುತ್ತಿಗೆದಾರರೇ ಸ್ಥಳವನ್ನು ಗುರುತಿಸಿ ವಾಹನಗಳನ್ನು ನಿಲುಗಡೆ ಮಾಡುವುದು. |
| ಪಾಲಿಕೆಯ ಪೌರಕಾರ್ಮಿಕರು ನಿರ್ವಹಿಸುವ ಸ್ಥಳವನ್ನು ನಕ್ಷೆಯಲ್ಲಿ ಪ್ರತ್ಯೇಕವಾಗಿ ಬಿಂಬಿಸುವ ಬಗ್ಗೆ. | ಪಾಲಿಕೆಯ ಪೌರಕಾರ್ಮಿಕರು ಹಾಗೂ ಗುತ್ತಿಗೆದಾರರು ನಿರ್ವಹಿಸಬೇಕಾಗಿರುವ ಪ್ರದೇಶಗಳನ್ನು ನಕ್ಷೆಯಲ್ಲಿ ಪ್ರತ್ಯೇಕವಾಗಿ ಬಿಂಬಿಸಿ ನೀಡಬಹುದಾಗಿರುತ್ತದೆ. |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | |
|---|---|
| ರಸ್ತೆ ಬದಿಯಲ್ಲಿ ಬೆಸ್ಕಾಂ ರವರು ಕಟಾವು ಮಾಡಿರುವ ಮರದ ರೆಂಬೆಗಳನ್ನು ಮತ್ತು ರಸ್ತೆ ಬದಿಯಲ್ಲಿರುವ ಒಳಚರಂಡಿ ಹೂಳನ್ನು ತೆಗೆಯುವ ಬಗ್ಗೆ. | ಗುತ್ತಿಗೆದಾರರು ನಿರ್ವಹಿಸುವ ಪ್ಯಾಕೇಜನ್ನು ಸ್ವಚ್ಛವಾಗಿಡುವ ಕಾರಣದಿಂದಾಗಿ ರಸ್ತೆ ಬದಿಯಲ್ಲಿ ಬೆಸ್ಕಾಂ ರವರು ಕಟಾವು ಮಾಡಿರುವ ಮರದ ರೆಂಬೆಗಳನ್ನು ಮತ್ತು ರಸ್ತೆ ಬದಿಯಲ್ಲಿರುವ ಒಳಚರಂಡಿ ಹೂಳನ್ನು ತೆಗೆಯಲು ಸೂಚಿಸಲಾಗಿದ್ದು, ಸದರಿ ಕಾರ್ಯವನ್ನು ನಿರ್ವಹಿಸಬೇಕಾಗಿರುತ್ತದೆ. |
| ಭವಿಷ್ಯದಲ್ಲಿ ಯಾವುದೇ ಸ್ವಸಹಾಯ ಸಂಘವು ಮನೆ ಬಾಗಿಲಿನಿಂದ ಕಸವನ್ನು ಸಂಗ್ರಹಿಸಲು ಮುಂದೆ ಬಂದರೆ, ಯಶಸ್ವಿಯಾದ ಬಿಡ್ಡುದಾರರು ಬಂಡವಾಳ ಹೂಡಿರುವ ಮೊತ್ತವನ್ನು ಪಾವತಿಸುವ ಬಗ್ಗೆ. | ಸದರಿ ನಿಬಂಧನೆಗೆ ವಿನಾಯಿತಿ ನೀಡಲು ಸಾಧ್ಯವಿರುವುದಿಲ್ಲ. |
| ದಂಡ ಜುಲ್ಮಾನೆಯಲ್ಲಿ ಮಾಸಿಕ ಗುತ್ತಿಗೆ ಮೊತ್ತದ ಶೇ.1 ರ ಬದಲು ದಿನದ ಗುತ್ತಿಗೆ ಮೊತ್ತದ ಶೇ.1 ರಂತೆ ನಿಗಧಿಸುವುದು ಹಾಗೂ ಕಾರ್ಮಿಕರು ಹಾಜರಾಗದಿದ್ದಲ್ಲಿ ದಿನದ ವೇತನದ ರೂ.1.5 ರಷ್ಟು ಕಟಾವು ಮಾಡುವುದನ್ನು ತೆಗೆದುಹಾಕುವುದು. | ಸದರಿ ಟೆಂಡರ್ ಸೇವಾ ಟೆಂಡರ್ ಆಗಿರುವುದರಿಂದ ದಂಡ ಜುಲ್ಮಾನೆಯಲ್ಲಿ ಕಾರ್ಮಿಕರು ಹಾಜರಾಗದಿದ್ದಲ್ಲಿ ದಿನದ ವೇತನದ ರೂ.1.5 ರಷ್ಟು ಕಟಾವು ಮಾಡುವುದನ್ನು ತೆಗೆದುಹಾಕಬಹುದಾಗಿರುತ್ತದೆ. ಉಳಿದ ದಂಡ ಜುಲ್ಮಾನೆಯಲ್ಲಿ ಯಾವುದೇ ಬದಲಾವಣೆ ಮಾಡಲು ಬರುವುದಿಲ್ಲ. |
| ಭವಿಷ್ಯದಲ್ಲಿ ಕಾರ್ಮಿಕರ ವೇತನ ಹೆಚ್ಚಾದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾಲಿಕೆಯಿಂದ ಪಾವತಿಸುವ ಬಗ್ಗೆ. | ಭವಿಷ್ಯದಲ್ಲಿ ಕಾರ್ಮಿಕರ ವೇತನ ಹೆಚ್ಚಾದ ಸಂಧರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾಲಿಕೆಯಿಂದ ಪಾವತಿಸಲಾಗುವುದು ಹಾಗೂ ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ವಾರ್ಷಿಕ ಶೇ.5 ರಷ್ಟು ಹೆಚ್ಚುವರಿ ಮೊತ್ತದ ಬದಲು ಶೇ.3 ರಷ್ಟು ಹೆಚ್ಚುವರಿ ಮೊತ್ತವನ್ನು ಪಾವತಿಸಬಹುದಾಗಿರುತ್ತದೆ. |
| ಕಟ್ಟಡದ ಭಗ್ನಾವಶೇಷ ತ್ಯಾಜ್ಯ ಮತ್ತು ಇ ತ್ಯಾಜ್ಯವನ್ನು ಸಂಗ್ರಹಣೆ ಮತ್ತು ವಿಲೇವಾರಿಯನ್ನು ತೆಗೆದುಹಾಕುವುದು. | ಕಟ್ಟಡದ ಭಗ್ನಾವಶೇಷ ತ್ಯಾಜ್ಯ ಮತ್ತು ಇ ತ್ಯಾಜ್ಯವನ್ನು ಸಂಗ್ರಹಣೆ ಮತ್ತು ವಿಲೇವಾರಿಯನ್ನು ಗುತ್ತಿಗೆದಾರರೇ ನಿರ್ವಹಿಸಬೇಕಾಗಿರುತ್ತದೆ. |
| ಜಿ.ಪಿ.ಎಸ್. ವರದಿಯ ಆಧಾರದ ಮೇಲೆ ಬಿಲ್ಲನ್ನು ಪಾವತಿಸುವುದನ್ನು ತೆಗೆದುಹಾಕುವುದು. | ತ್ಯಾಜ್ಯ ವಿಲೇವಾರಿ ವಾಹನಗಳಿಗೆ ಜಿ.ಪಿ.ಎಸ್. ಯಂತ್ರವನ್ನು ಅಳವಡಿಸದಿದ್ದಲ್ಲಿ, ಬಿಲ್ಲನ್ನು ಪಾವತಿಸಲಾಗುವುದಿಲ್ಲ ಎಂಬ ನಿಬಂಧನೆಗೆ ವಿನಾಯಿತಿ ನೀಡಲು ಸಾಧ್ಯವಿರುವುದಿಲ್ಲ. |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಏಕವ್ಯಕ್ತಿಗಳಿಗೂ ಟೆಂಡರಿನ ಇ.ಎಂ.ಡಿ. ಮತ್ತು ಆರ್ಥಿಕ ಸಾಮರ್ಥ್ಯದಲ್ಲಿ ವಿನಾಯಿತಿ ನೀಡುವ ಬಗ್ಗೆ. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಏಕವ್ಯಕ್ತಿಗಳಿಗೂ ಟೆಂಡರಿನ ಇ.ಎಂ.ಡಿ. ಮತ್ತು ಆರ್ಥಿಕ ಸಾಮರ್ಥ್ಯದಲ್ಲಿ ವಿನಾಯಿತಿ ನೀಡುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶ ಇಲ್ಲದೇ ಇರುವುದರಿಂದ, ಸದರಿ ಅಂಶವನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. |
| ನೊಂದಾಯಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ/ಏಕವ್ಯಕ್ತಿಗಳಿಗೆ ಟೆಂಡರಿನಲ್ಲಿ ಶೇ.22.75 ರಷ್ಟು ಪ್ಯಾಕೇಜ್‌ಗಳನ್ನು ಮೀಸಲಿಡುವ ಬಗ್ಗೆ. | ನೊಂದಾಯಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ/ಏಕವ್ಯಕ್ತಿಗಳಿಗೆ ಟೆಂಡರಿನಲ್ಲಿ ಶೇ.22.75 ರಷ್ಟು ಪ್ಯಾಕೇಜ್‌ಗಳನ್ನು ಮೀಸಲಿಡುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶ ಇಲ್ಲದೇ ಇರುವುದರಿಂದ, ಸದರಿ ಅಂಶವನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. |
| ನೊಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಾಹನ ಖರೀದಿಸಲು ಆರ್ಥಿಕ ಸಹಾಯ ನೀಡುವ ಸಲುವಾಗಿ ಸಫಾಯಿ ಕರ್ಮಚಾರಿ ಅನುದಾನವನ್ನು ನೀಡುವ ಬಗ್ಗೆ. | ನೊಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಾಹನ ಖರೀದಿಸಲು ಆರ್ಥಿಕ ಸಹಾಯ ನೀಡುವ ಸಲುವಾಗಿ ಸಫಾಯಿ ಕರ್ಮಚಾರಿ ಅನುದಾನವನ್ನು ನೀಡುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶ ಇಲ್ಲದೇ ಇರುವುದರಿಂದ, ಸದರಿ ಅಂಶವನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. |
| ಬಿಡ್ಡುದಾರರು ಅರ್ಹತಾ ಮಾನದಂಡದ ಅನ್ವಯ ಅನುಭವದ ಪ್ರಮಾಣ ಪತ್ರಕ್ಕೆ ಒಪ್ಪಂದ ಪತ್ರದ ಬದಲು ಕಾರ್ಯಾದೇಶ ಪತ್ರವನ್ನು ನೀಡುವ ಬಗ್ಗೆ. | ಬಿಡ್ಡುದಾರರು ಅರ್ಹತಾ ಮಾನದಂಡದ ಅನ್ವಯ ಅನುಭವದ ಪ್ರಮಾಣ ಪತ್ರಕ್ಕೆ ಒಪ್ಪಂದ ಪತ್ರದ ಬದಲು ಕಾರ್ಯಾದೇಶ ಪತ್ರದ ಜೊತೆಗೆ ದೃಢೀಕರಿಸಲಾದ ಸೇವಾ ತೃಪ್ತಿಕರ ಪ್ರಮಾಣ ಪತ್ರವನ್ನು ನೀಡಬಹುದಾಗಿರುತ್ತದೆ. |
| ಬಿಡ್ಡುದಾರರು ಟೆಂಡರ್‌ನ ಸೂಚಿಸಲಾದಂತಹ ವಾಹನಗಳು ಮತ್ತು ಸಲಕರಣೆಗಳನ್ನು 15 ದಿನಗಳೊಳಗಾಗಿ ಹಾಜರಪಡಿಸುವಂತೆ ಸೂಚಿಸಲಾಗಿದ್ದು, ಕನಿಷ್ಠ ಪಕ್ಷ 90 ದಿನಗಳ ಕಾಲಾವಕಾಶ ನೀಡುವ ಬಗ್ಗೆ. | ಬಿಡ್ಡುದಾರರು ಟೆಂಡರ್‌ನ ಸೂಚಿಸಲಾದಂತಹ ವಾಹನಗಳು ಮತ್ತು ಸಲಕರಣೆಗಳನ್ನು ಹಾಜರಪಡಿಸಲು ಕನಿಷ್ಠ ಪಕ್ಷ 90 ದಿನಗಳ ಕಾಲಾವಕಾಶ ಬದಲು 45 ದಿನಗಳ ಕಾಲಾವಕಾಶ ನೀಡಬಹುದಾಗಿರುತ್ತದೆ. |
| ಟೆಂಡರಿನ ಕಾರ್ಯಾಧಾರಿತ ಮೊತ್ತ (Performance security) ನಲ್ಲಿ ಗುತ್ತಿಗೆಯ ಮೊತ್ತದ ಶೇ.5 ರಷ್ಟು 2 ವರ್ಷದ ಅವಧಿಯ ಮೊತ್ತವನ್ನು 1 ವರ್ಷದ ಅವಧಿಗೆ ಸೀಮಿತಗೊಳಿಸಿ, ಎರಡನೇಯ ವರ್ಷಕ್ಕೆ ನವೀಕರಿಸುವ ಬಗ್ಗೆ. | ಟೆಂಡರಿನ ಕಾರ್ಯಾಧಾರಿತ ಮೊತ್ತ (Performance security) ನಲ್ಲಿ ಗುತ್ತಿಗೆಯ ಮೊತ್ತದ ಶೇ.5 ರಷ್ಟು 2 ವರ್ಷದ ಅವಧಿಯ ಮೊತ್ತದ ಬದಲಾಗಿ ಶೇ.5 ರಷ್ಟು 1 ವರ್ಷದ ಗುತ್ತಿಗೆಯ ಮೊತ್ತವನ್ನು ಎರಡು ವರ್ಷ ಮತ್ತು ಮೂರು ತಿಂಗಳ ಅವಧಿಗೆ ಚಾಲ್ತಿಯಲ್ಲಿರುವಂತೆ ಯಶಸ್ವಿ ಬಿಡ್ಡುದಾರರು ಸಲ್ಲಿಸಲು ಸೂಚಿಸಲು ಮಾರ್ಪಾಡು ಮಾಡಬಹುದಾಗಿರುತ್ತದೆ. |
| ಗುತ್ತಿಗೆದಾರರು 18 ರಿಂದ 60 ವರ್ಷದ ಒಳಗಿರುವ ಸಿಬ್ಬಂದಿಯನ್ನು ಹಾಗೂ ಕನಿಷ್ಠ ಶೇ.40 ರಷ್ಟು ಪುರಷರನ್ನು ನೇಮಿಸಿಕೊಳ್ಳುವ ಬದಲು ಶೇ.20 ರಷ್ಟು ಪುರುಷರನ್ನು ನೇಮಿಸಿಕೊಳ್ಳುವುದು. | ಗುತ್ತಿಗೆದಾರರು 18 ರಿಂದ 60 ವರ್ಷದ ಒಳಗಿರುವ ಸಿಬ್ಬಂದಿಯನ್ನು ಹಾಗೂ ಕನಿಷ್ಠ ಶೇ.40 ರಷ್ಟು ಪುರಷರ ನೇಮಿಸಿಕೊಳ್ಳುವ ಬದಲು ಶೇ.30 ರಷ್ಟು ಪುರುಷರನ್ನು ನೇಮಿಸಿಕೊಳ್ಳಲು ಮಾರ್ಪಾಡು ಮಾಡಬಹುದಾಗಿರುತ್ತದೆ. |
| ಯಶಸ್ವಿ ಬಿಡ್ಡುದಾರರು ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ ಪ್ರಗತಿಯ ಬಗ್ಗೆ ವರದಿಯನ್ನು Electronic Format ನಲ್ಲಿ ಪ್ರತಿ ತಿಂಗಳ ಮಾಸಿಕ ಬಿಲ್ಲಿನಲ್ಲಿ ಸಲ್ಲಿಸುವುದು. | ಯಶಸ್ವಿ ಬಿಡ್ಡುದಾರರು ಮನೆ ಮನೆಯಿಂದ ತ್ಯಾಜ್ಯ ಸಂಗ್ರಹಣೆ ಪ್ರಗತಿಯ ಬಗ್ಗೆ ವರದಿಯನ್ನು Electronic Format ನಲ್ಲಿ ಮೂಲಕ ಪ್ರತಿ ತಿಂಗಳ ಮಾಸಿಕ ಬಿಲ್ಲಿನಲ್ಲಿ ಸಲ್ಲಿಸುವುದನ್ನು ಸಡಿಲಗೊಳಿಸಬಹುದಾಗಿರುತ್ತದೆ. |

| | |
|---|---|
| ಅನುಬಂಧ ಡಿ-1 ನಲ್ಲಿ ಯಾವುದೇ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಂದ ಕಪ್ಪುಪಟ್ಟಿಗೆ ಸೇರಿಸಿದ ವ್ಯಕ್ತಿ ಅಥವಾ ಸಂಸ್ಥೆಯ ಜೊತೆಗೆ ಅಸಮರ್ಪಕ ಕಾರ್ಯನಿರ್ವಹಣೆ ಮಾಡಿಲ್ಲ ಎಂಬುವ ಸ್ವಯಂ ಘೋಷಣೆ ಪ್ರಮಾಣ ಪತ್ರವನ್ನು ಒದಗಿಸುವುದು. | ಅನುಬಂಧ ಡಿ-1 ನಲ್ಲಿ ಯಾವುದೇ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಂದ ಕಪ್ಪುಪಟ್ಟಿಗೆ ಸೇರಿಸಿದ ವ್ಯಕ್ತಿ ಅಥವಾ ಸಂಸ್ಥೆಯ ಜೊತೆಗೆ ಅಸಮರ್ಪಕ ಕಾರ್ಯನಿರ್ವಹಣೆ ಮಾಡಿಲ್ಲ ಎಂಬುವ ಸ್ವಯಂ ಘೋಷಣಾ ಪ್ರಮಾಣ ಪತ್ರವನ್ನು ಒದಗಿಸುವುದನ್ನು ಪರಿಗಣಿಸಬಹುದಾಗಿರುತ್ತದೆ. |
| ಟೆಂಡರ್ ಸಲ್ಲಿಸುವ ಅವಧಿಯನ್ನು 30 ದಿನಗಳಿಗೆ ವಿಸ್ತರಿಸುವ ಬಗ್ಗೆ. | ಈ ನಿಟ್ಟಿನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು 18-10-2011 ರ ಬದಲು ದಿನಾಂಕ: 10-11-2011 ಸಂಜೆ 4-00 ಗಂಟೆವರೆಗೆ ಮುಂದೂಡಲಾಗಿದ್ದು, ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು 21-10-2011 ರ ಬದಲು ದಿನಾಂಕ: 16-11-2011 ಕ್ಕೆ ಮುಂದೂಡಲಾಗಿರುತ್ತದೆ.<br>ಆದರೆ ಘನತ್ಯಾಜ್ಯ ನಿರ್ವಹಣೆ ಟೆಂಡರ್ ಬಗ್ಗೆ ಶ್ರೀ.ಪಿ.ಆರ್.ರಮೇಶ್ ರವರು ಪಿಐಎಲ್ (PIL) ದಾವೆ ಹೂಡಿದ್ದು, ಈ ಸಂಬಂಧ ಸದರಿ ಟೆಂಡರ್‌ನಲ್ಲಿ ಟೆಂಡರನ್ನು ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಿಲ್ಲವೆಂಬುದು ಒಂದು ಅಂಶವಾಗಿರುವುದರಿಂದ ಈ ಬಗ್ಗೆ ಹಿರಿಯ ವಕೀಲರೊಂದಿಗೆ ಚರ್ಚಿಸಿದಂತೆ ಟೆಂಡರ್‌ನಲ್ಲಿ 60 ದಿನಗಳ ಕಾಲಾವಕಾಶ ನೀಡಲು ಸೂಚಿಸಿರುತ್ತಾರೆ. ಅದರಂತೆ ದಿನಾಂಕ: 24-09-2011 ರಂದು ಆಹ್ವಾನಿಸಲಾಗಿದ್ದ ಘನತ್ಯಾಜ್ಯ ನಿರ್ವಹಣೆ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 10-11-2011 ಸಂಜೆ: 4-00 ರ ಬದಲು ದಿನಾಂಕ: 25-11-2011 ರ ಸಂಜೆ: 4-00 ವರೆಗೆ ಮತ್ತು ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 16-11-2011 ರ ಬದಲು ದಿನಾಂಕ: 29-11-2011 ರ ವರೆಗೆ ಮುಂದೂಡಲು ಮತ್ತು ಪಾಲಿಕೆಯ ಪಶ್ಚಿಮ, ದಾಸರಹಳ್ಳಿ, ಮಹದೇವಪುರ ಬೊಮ್ಮನಹಳ್ಳಿ ಮತ್ತು ರಾಜರಾಜೇಶ್ವರಿನಗರ ವಲಯಗಳಲ್ಲಿ ಮೆಕಾನಿಕಲ್ ಸ್ವೀಪಿಂಗ್ ಕಾರ್ಯಗಳಿಗೆ ಆಹ್ವಾನಿಸಲಾದ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: 10-11-2011 ರ ಸಂಜೆ: 4-00 ರ ಬದಲು ದಿನಾಂಕ: 02-12-2011 ರ ವರೆಗೆ ಮತ್ತು ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 16-11-2011 ರ ಬದಲು ದಿನಾಂಕ: 07-12-2011 ರ ವರೆಗೆ ಮುಂದೂಡಬಹುದಾಗಿರುತ್ತದೆ. |

ಮೇಲೆ ತಿಳಿಸಿರುವ ನಿಬಂಧನೆಗಳಲ್ಲಿ ಕೆಲವು ನಿಬಂಧನೆಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಮಾರ್ಪಾಡುಗೊಳಿಸಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 29-10-2011 ರ ಆಯುಕ್ತರ ಟಿಪ್ಪಣಿ ಒಪ್ಪುತ್ತಾ, ಟೆಂಡರ್ ದಸ್ತಾವೇಜಿನಲ್ಲಿ ಬಿಡ್ದುದಾರರು ಕಾರ್ಮಿಕ ಇಲಾಖೆಯಿಂದ Contract Labour (Regulation and Abolition) Act, 1970 ರಲ್ಲಿ ನೊಂದಣಿ ಮಾಡಿಕೊಂಡಿರಬೇಕು ಅಥವಾ ಕಾರ್ಮಿಕ ಇಲಾಖೆಯಿಂದ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಕೀರ್ಣಗಳ ನಿಯಮ 1961 (Karnataka Shops and Commercial Establishments Act 1961) ರಲ್ಲಿ ನೊಂದಣಿ ಮಾಡಿಕೊಂಡಿರಬೇಕು ಎಂಬುದಾಗಿ ಸೇರ್ಪಡಿಸಲು ಸಮಿತಿ ತೀರ್ಮಾನಿಸಿತು.**

Geetha Shashikumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 19-10-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಜಂಟಿ ಆಯುಕ್ತರು (ಆರೋಗ್ಯ) |
| ಎಂ.ಮುನಿರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಎಸ್. ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಡಾ॥ ಎಸ್. ರಾಜು | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ. |
| ಎನ್. ವೀರಣ್ಣ | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| ಎಲ್. ರಮೇಶ್ | ಸದಸ್ಯರು | ಉಪ ಆರೋಗ್ಯಾಧಿಕಾರಿ (ರಾಜರಾಜೇಶ್ವರಿನಗರ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಎಂ.ಶ್ರೀನಿವಾಸ್ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

**1. ವಿಷಯದ ಸಂಖ್ಯೆ: ಸಾಆಸ್ಥಾಸ/11/11-12:**

ಸಂಖ್ಯೆ: ಉ.ಆ.(ಹೆಚ್)ಪಿಆರ್/(2)197/11-12, ದಿನಾಂಕ: 04-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾಜ್ಯ ಮಹಾಪೌರರು ದಿನಾಂಕ: 26-06-2011 ರ ಟಿಪ್ಪಣಿಯಲ್ಲಿ ಈಗಾಗಲೇ ಪಾಲಿಕೆಯಲ್ಲಿ 35 ಪ್ಯಾಕೇಜ್‌ಗಳಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ಟೆಂಡರ್ ಕರೆಯಲಾಗಿದೆ ಎಂದು, ಈ ಕುರಿತು ಪ್ರಸ್ತಾವನೆಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಖಾಂತರ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಸೂಚನೆ ನೀಡಲಾಗಿರುವ ಸಂಬಂಧ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

ಸಂಖ್ಯೆ: CHO/ACT/2/PR/10/08-09 ದಿನಾಂಕ: 28-05-2008 ರಲ್ಲಿ ಕರೆಯಲಾದ ಟೆಂಡರ್‌ನಲ್ಲಿ 35 ವಾರ್ಡ್‌ಗಳಿಗೆ ಪ್ರತಿ ತಿಂಗಳಿಗೆ ರೂ.34,14,720/- (ಮೂವತ್ನಾಲಕ್ಕು ಲಕ್ಷದ ಹದಿನಾಲ್ಕು ಸಾವಿರದ ಏಳುನೂರ ಇಪ್ಪತ್ತು ರೂ ಮಾತ್ರ) ಗಳಂತೆ ವಾರ್ಷಿಕ ರೂ.4,09,76,640/- (ನಾಲ್ಕು ಕೋಟಿ ಒಂಬತ್ತು ಲಕ್ಷದ ಎಪ್ಪತ್ತಾರು ಸಾವಿರದ ಆರುನೂರ ನಲವತ್ತು ರೂ ಮಾತ್ರ) ಅಂದಾಜು ಮೊತ್ತಕ್ಕೆ ಟೆಂಡರ್ ಕರೆಯಲು ಕಂಡಿಕೆ 22 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಈ ಪ್ರಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೊಳ್ಳೆ ನಿಯಂತ್ರಣ ಸೇವೆಯನ್ನು ಒದಗಿಸಲು, 35 ಪ್ಯಾಕೇಜುಗಳಾಗಿ ಮಾಡಲಾಗಿದ್ದು, ಟೆಂಡರ್ ಅನ್ನು ಮುಖ್ಯ ಆರೋಗ್ಯಾಧಿಕಾರಿಗಳ ಕಛೇರಿ ಕಡತ ಸಂಖ್ಯೆ: CHO/ACT/2/PR/10/08-09, ದಿನಾಂಕ: 28-05-2008 ರಲ್ಲಿ ಕರೆಯಲಾಗಿರುತ್ತದೆ. 35 ಪ್ಯಾಕೇಜುಗಳಿಗೆ ಕರೆಯಲಾದ ಸದರಿ ಟೆಂಡರ್‌ನಲ್ಲಿ 4 ಪ್ಯಾಕೇಜುಗಳಿಗೆ ಮಾತ್ರ ಬಿಡ್‌ದಾರರು ಭಾಗವಹಿಸಿರುತ್ತಾರೆ, ಮೆ: ಗೋದ್ರೇಜ್ ಹೈ ಕೇರ ಲಿ., ಸಂಸ್ಥೆ ಟೆಂಡರ್ ಸಲ್ಲಿಸಿದ್ದು, ಸಿಂಗಲ್ ಟೆಂಡರ್ ಸಲ್ಲಿಸಿರುತ್ತಾರೆ, ಇದರಲ್ಲಿ 2 ಪ್ಯಾಕೇಜುಗಳ ತಾಂತ್ರಿಕ ಬಿಡ್ ಕವರ್ ತೆರೆಯಲಾಗಿದ್ದು, ಆರ್ಥಿಕ ಬಿಡ್ ಪರಿಶೀಲಿಸಿದ್ದು, ಒಂದು ಪ್ಯಾಕೇಜ್‌ಗೆ ಸೊಳ್ಳೆ ನಿಯಂತ್ರಣಕ್ಕಾಗಿ ಒಂದು ತಿಂಗಳಿಗೆ ರೂ.6,53,772/- (ರೂ.ಆರು ಲಕ್ಷದ ಐವತ್ಮೂರು ಸಾವಿರದ ಏಳುನೂರ ಎಪ್ಪತ್ತೆರೆಡು ರೂ ಮಾತ್ರ) ದರ ನಮೂದಿಸಿರುತ್ತಾರೆ.

ಈ ದರದ ಅನ್ವಯ ಎಲ್ಲಾ 35 ಪ್ಯಾಕೇಜುಗಳಿಗೆ ಸೊಳ್ಳೆ ನಿಯಂತ್ರಣ ಕಾರ್ಯ ಕೈಗೊಳ್ಳಲು ಒಂದು ತಿಂಗಳಿಗೆ ರೂ.2,28,82,020/- (ರೂ.ಎರಡು ಕೋಟಿ ಇಪ್ಪತ್ತೆಂಟು ಲಕ್ಷದ ಎಂಬತ್ತೆರಡು ಸಾವಿರದ ಇಪ್ಪತ್ತು ಮಾತ್ರ) ವಾರ್ಷಿಕವಾಗಿ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ರೂ.27,46,00,000/- (ರೂ. ಇಪ್ಪತ್ತೇಳು ಕೋಟಿ ನಲವತ್ತಾರು ಲಕ್ಷ ಮಾತ್ರ) ಖರ್ಚು ಮಾಡಬೇಕಾಗಿರುತ್ತದೆ. ಮುಖ್ಯ ಆರೋಗ್ಯಾಧಿಕಾರಿಗಳ ವರದಿ ಕಂಡಿಕೆ 63 ರಿಂದ 68 ರವರೆಗಿನ ವರದಿಯನ್ನು ಅವಗಾಹಿಸಬಹುದು. ಈ ಟೆಂಡರ್ ಪ್ರಸ್ತಾವನೆಗೆ ಅಂದಿನ ಆಯುಕ್ತರು ಕಂಡಿಕೆ 79 ರಲ್ಲಿ ಈ ಟೆಂಡರ್ ಪ್ರಸ್ತಾವನೆಯು ಗಮನಾರ್ಹವಾಗಿಲ್ಲವೆಂದು ತಿಳಿಸಿರುತ್ತಾರೆ.

ಪುನ: ಪ್ರತ್ಯೇಕ ಕಡತ ಸಂಖ್ಯೆ ಸಿಹೆಚ್‌ಓ/ಪಿಆರ್/1584/09-10 ರಲ್ಲಿ ಪಾಲಿಕೆಯ ಆರೋಗ್ಯಾಧಿಕಾರಿಗಳು ಕಂಡಿಕೆ 20 ರಿಂದ 25 ರವರೆಗಿನ ವರದಿಯಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ರಮವನ್ನು ಇನ್ನು ಹೆಚ್ಚಿನ ಪ್ರಗತಿಯಲ್ಲಿ ನಿರ್ವಹಿಸಬಹುದೆಂದು, ಮೆ: ಗೋದ್ರೇಜ್ ಹೈ ಕೇರ್ ಲಿ., ರವರು ಇದಕ್ಕಾಗಿ ಎಲ್ಲಾ ವೆಚ್ಚಗಳು ಸೇರಿ ವಾರ್ಷಿಕ ರೂ.28,71,52,357/- (ಇಪ್ಪತ್ತೆಂಟು ಕೋಟಿ ಎಪ್ಪತ್ತೊಂದು ಲಕ್ಷದ ಐವತ್ತೆರಡು ಸಾವಿರದ ಮೂರು ನೂರ ಐವತ್ತೇಳು ರೂ ಮಾತ್ರ) ಗಳಿಗೆ ಯೋಜನಾ ವರದಿ ಸಲ್ಲಿಸಿರುತ್ತಾರೆಂದು, ಈ ಯೋಜನೆಯನ್ನು ಒಪ್ಪಬಹುದೆಂದು ಅಪರ ಆಯುಕ್ತರು (ಆರೋಗ್ಯ) ರವರು ಸಲ್ಲಿಸಿದ ವರದಿಗೆ, ಕಂಡಿಕೆ 35 ರಲ್ಲಿ ಈ ಯೋಜನೆ ಅಗತ್ಯವಿಲ್ಲವೆಂದು ಈ ಹಿಂದೆ ಕರೆಯಲಾದ ಟೆಂಡರ್ ಅವಧಿ ಮುಕ್ತಾಯವಾಗಿದ್ದು, ನಿಯಮಾವಳಿಗೆ ಅನುಗುಣವಾಗಿಲ್ಲದ ಕಾರಣ ಟೆಂಡರ್ ಅನ್ನು ರದ್ದುಪಡಿಸಲು ಆದೇಶ ನೀಡಲಾಗಿದೆ.

ಕಂಡಿಕೆ 1 ರಿಂದ 11 ರಲ್ಲಿ ಪುನ: ಆರೋಗ್ಯಾಧಿಕಾರಿಗಳು ಈ ಯೋಜನೆಯ ಬಗ್ಗೆ ಪ್ರಸ್ತಾಪಿಸಿದ್ದು, ಈ ಯೋಜನೆಯಲ್ಲಿ ಕೆಲವು ಮಾರ್ಪಾಡು ಮಾಡಿ, ಸದರಿ ಯೋಜನೆಯ ಅನುಷ್ಠಾನಕ್ಕೆ ಎಲ್ಲಾ ವೆಚ್ಚಗಳು ಸೇರಿ ವಾರ್ಷಿಕ ರೂ.23,19,04,098/- ಗಳು (ರೂ ಇಪ್ಪತ್ಮೂರು ಕೋಟಿ) ಖರ್ಚಾಗುತ್ತದೆಂದು, ಪಾಲಿಕೆಯ ಆಯವ್ಯಯದಲ್ಲಿ ಈ ಮೊತ್ತವನ್ನು ಭರಿಸಬಹುದೆಂದು ವರದಿ ಮಾಡಿರುತ್ತಾರೆ.

ಈ ವರದಿಯನ್ನು ಪರಿಶೀಲಿಸಲಾಗಿ, ಈ ಯೋಜನೆಯು ಸಮರ್ಪಕವಾಗಿಲ್ಲವೆಂದು ಈ ಯೋಜನೆಯನ್ನು ಜಾರಿಗೆ ತಂದಲ್ಲಿ ಪಾಲಿಕೆ ಅತ್ಯಧಿಕ ಮೊತ್ತವನ್ನು ವ್ಯಯ ಮಾಡಬೇಕಾಗಿರುತ್ತದೆ, ಸೊಳ್ಳೆ ನಿಯಂತ್ರಣ ಮಾಡಬಹುದೇ ಹೊರತು, ಸೊಳ್ಳೆ ನಿರ್ಮೂಲನೆ ಅಸಾಧ್ಯವಾದ ಕಾರಣದಿಂದ ಈ ಯೋಜನೆಯನ್ನು ಕೈಬಿಡಲು ಕಂಡಿಕೆ 16 ರಲ್ಲಿ ಉಪ ಆಯುಕ್ತರು (ಆರೋಗ್ಯ) ರವರು ನೀಡಲಾದ ವರದಿಗೆ ಸಮ್ಮತಿ ವ್ಯಕ್ತಪಡಿಸಲಾಗಿದೆ.

ಸದರಿ ಕಡತದ ಕಂಡಿಕೆ 54 ರಲ್ಲಿ, ಸದರಿ ಟೆಂಡರ್‌ನಲ್ಲಿ 2 ಪ್ಯಾಕೇಜುಗಳಿಗೆ ಮಾತ್ರ ಟೆಂಡರ್ ಅಂಗೀಕರಿಸಬೇಕಾಗಿರುವುದರಿಂದ, ಈ ಪ್ರಸ್ತಾವನೆಯನ್ನು ಕೈಬಿಡಲು ಸೂಕ್ತವೆಂದು ಅಂದಿನ ಉಪ ಆಯುಕ್ತರು (ಆರೋಗ್ಯ) ರವರು ಸಹ ವರದಿ ಮಾಡಿರುತ್ತಾರೆ. ಮತ್ತು ಈ ಟೆಂಡರ್ ಕರೆಯಲು ಅಂದಿನ ಆಡಳಿತಗಾರರಿಂದಲೂ ಒಪ್ಪಿಗೆ ಪಡೆದಿರುವುದಿಲ್ಲ. ಮತ್ತು ಟೆಂಡರ್ ಡಾಕ್ಯೂಮೆಂಟ್ ಅನ್ನು ಯಾವುದೇ ಸಮಿತಿಯು ಪರಿಶೀಲಿಸಿ ಒಪ್ಪಿಗೆ ಸೂಚಿಸಿರುವುದು ಸಹ ಕಡತದಲ್ಲಿ ಲಭ್ಯವಿರುವುದಿಲ್ಲ. ಸದರಿ ಪ್ರಸ್ತಾಪಿಸಲಾದ ಟೆಂಡರ್ 28-05-2008 ರಲ್ಲಿ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಸಮರ್ಪಕವಾಗಿ ನಡೆಯದ ಕಾರಣ, 3 ವರ್ಷಗಳ ಅವಧಿ ಆಗಿರುವುದರಿಂದ, ಮುಂದುವರೆಸಲು ಕರ್ನಾಟಕ ಪಾರದರ್ಶಕ ನಿಯಮಾವಳಿಯಲ್ಲಿ ಅವಕಾಶವಿಲ್ಲದ ಕಾರಣ ಈ ಟೆಂಡರ್ ಪ್ರಕ್ರಿಯೆಯನ್ನು ಕೈಬಿಡಲಾಗಿದೆ.

ಪಾಲಿಕೆಯಲ್ಲಿ ಸೊಳ್ಳೆ ನಿಯಂತ್ರಣದ ಎಲ್ಲಾ ಕಾರ್ಯಗಳು ವಾರ್ಷಿಕ ವೆಚ್ಚ ರೂ.6.00 (ರೂ. ಆರು ಕೋಟಿ ಮಾತ್ರ) ಗಳು ಖರ್ಚಾಗುತ್ತಿದೆ, ಮತ್ತು ಬೃಬೆಂ.ಮ. ಪಾಲಿಕೆಯ ವ್ಯಾಪ್ತಿಯಲ್ಲಿ ರೋಗವಾಹಕಗಳಿಂದ ಹರಡುವ ರೋಗಗಳು ಸಹ ಕನಿಷ್ಠವಾಗಿರುತ್ತದೆ. ಮತ್ತು ಸೊಳ್ಳೆ ನಿಯಂತ್ರಣವು ಸಾರ್ವಜನಿಕರು ತೆಗೆದುಕೊಳ್ಳುವ ಕಾರ್ಯವಿಧಾನದಲ್ಲಿಯೂ ಇದ್ದು ಇದಕ್ಕಾಗಿ ಆರೋಗ್ಯ ಶಿಕ್ಷಣ, ಅರಿವು, ಜನ ಜಾಗೃತಿ ಮೂಡಿಸಲಾಗುತ್ತಿದೆ.

ಸೊಳ್ಳೆ ನಿಯಂತ್ರಣದ ಬಗ್ಗೆ, ಅಧಿಕಾರಿಗಳ, ಜನಪ್ರತಿನಿಧಿಗಳ ಸಭೆ ಕರೆದು ಟೆಂಡರ್ ಸಮಿತಿಯನ್ನು ರಚಿಸಿ ಸೂಕ್ತವಾದ ಟೆಂಡರ್ ಪ್ರಕ್ರಿಯೆ ಕರೆಯಲು ಕ್ರಮವಹಿಸಲಾಗುತ್ತಿದ್ದು, ಸೊಳ್ಳೆ ನಿಯಂತ್ರಣಕ್ಕಾಗಿ ಸಂಖ್ಯೆ: CHO/ACT/2/PR/10/08-09 ದಿನಾಂಕ: 28-05-2008 ರಂದು ಕರೆಯಲಾದ ಟೆಂಡರ್ ರದ್ದಾಗಿರುವ ಕಾರಣ ಸದರಿ ಯೋಜನೆಯ ಬಗ್ಗೆ ಪುನ: ಮುಂದುವರೆದಂತೆ ಪ್ರಸ್ತಾಪಿಸಲಾದ ಸಂಖ್ಯೆ ಸಿಹೆಚ್‌ಓ/ಪಿಆರ್/1584/09-10 ರ ಯೋಜನೆಯ ಪ್ರಸ್ತಾವನೆಯು ಸಹ ಮುಕ್ತಾಯವಾಗಿರುತ್ತದೆ.

ಉಲ್ಲೇಖಿತ ಪತ್ರದಲ್ಲಿ ಪೂಜ್ಯ ಮಹಾಪೌರರು ಸದರಿ ಟೆಂಡರ್ ಇತ್ಯರ್ಥಪಡಿಸಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಪ್ರಸ್ತಾಪಿಸಿದ್ದು, ಮೇಲ್ಕಂಡಂತೆ ವಿವರಿಸಲಾದ ಅಂಶಗಳನ್ವಯ ಪಾಲಿಕೆಯ ಸಭೆಯ ಮುಂದೆ ಕಡತವನ್ನು ಮಂಡಿಸಲು ಸರಿಯಾದ ಕ್ರಮವಾಗಿರುವುದಿಲ್ಲ, ಎಂಬ ವರದಿಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 04-07-2011 ರ ಆಯುಕ್ತರ ಟಿಪ್ಪಣಿ ಪರಿಶೀಲಿಸಿದೆ. ದಿನಾಂಕ: 28-05-2008 ರಂದು ಕರೆಯಲಾಗಿದ್ದ ಟೆಂಡರ್ ಪ್ರಕ್ರಿಯೆ ಸಮರ್ಪಕವಾಗಿ ನಡೆಯದ ಕಾರಣ 03 (ಮೂರು) ವರ್ಷಗಳ ಅವಧಿ ಮುಗಿದಿರುವುದರಿಂದ ಟೆಂಡರ್‌ನ್ನು ರದ್ದು ಪಡಿಸಲು ಆಯುಕ್ತರು ತೆಗೆದುಕೊಂಡಿರುವ ತೀರ್ಮಾನವನ್ನು ಒಪ್ಪಿದೆ.**

## 2. ವಿಷಯದ ಸಂಖ್ಯೆ: ಸಾಆಸ್ಥಾಸ/13/2011-12:

ಆಯುಕ್ತರ ದಿನಾಂಕ: 07-10-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವ ಉದ್ದೇಶದಿಂದ ಎ.ಬಿ.ಸಿ. (ಡಾಗ್) ನಿಯಮಾವಳಿ 2001 ರಂತೆ ಕ್ರಮ ಕೈಗೊಳ್ಳುವ ಸಲುವಾಗಿ 2008-09ನೇ ಸಾಲಿನಲ್ಲಿ ಟೆಂಡರ್ ಸಂಖ್ಯೆ DC(H)/ABC-ARV/PR/559/2008-09, ದಿನಾಂಕ: 30-09-2008 ರಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ಎ.ಬಿ.ಸಿ.-ಎ.ಆರ್.ವಿ. ಕಾರ್ಯಕ್ರಮವನ್ನು ಮಾಡಲು 15 ಪ್ಯಾಕೇಜ್‌ಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದ್ದು, ಇದನ್ನು ಅಂತಿಮಗೊಳಿಸಲಾಗಿದ್ದು, ಮಾನ್ಯ ಆಡಳಿತಗಾರರು ಸದರಿ ಕಾರ್ಯಕ್ರಮಕ್ಕಾಗಿ ಈ ಕೆಳಗಿನಂತೆ ದರಗಳನ್ನು ಅನುಮೋದಿಸಿರುತ್ತಾರೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | ದರ ಗಂಡು ನಾಯಿ ರೂ. | ದರ ಹೆಣ್ಣು ನಾಯಿ ರೂ. |
|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗಧಿಪಡಿಸಿದ ದರ | 515/- | 525/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ ಡ್ರೈವ್) ಗೆ ನಿಗಧಿಪಡಿಸಿದ ದರ | 50/- | 50/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | 75/- | 75/- |

ಮೇಲಿನ ದರದಂತೆ 8 ಪ್ಯಾಕೇಜ್‌ಗಳಲ್ಲಿ 3 ಪ್ರಾಣಿ ಕಲ್ಯಾಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಟೆಂಡರ್‌ನ ಅವಧಿಯು ದಿನಾಂಕ: 01-09-2009 ರಿಂದ 31-08-2011ರ ವರೆಗೆ ಎರಡು ವರ್ಷಗಳ ಅವಧಿಗೆ ಚಾಲ್ತಿಯಲ್ಲಿರುತ್ತದೆ.

2010-11ನೇ ಸಾಲಿನಲ್ಲಿ ಎ.ಬಿ.ಸಿ.-ಎ.ಆರ್.ವಿ. ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಎ.ಬಿ.ಸಿ.-ಎ.ಆರ್.ವಿ. ಪ್ಯಾಕೇಜ್‌ಗಳನ್ನು 15 ರಿಂದ 20ಕ್ಕೆ ಹೆಚ್ಚಿಸಿ ಉಳಿಕೆ 12 ಪ್ಯಾಕೇಜ್‌ಗಳಿಗೆ ಟೆಂಡರ್ ಸಂಖ್ಯೆ JD(AH)/ABC-ARV/Tender/PR/867/2009-10, ದಿನಾಂಕ: 24-02-2010 ಹಾಗೂ 13-04-2010 ರಲ್ಲಿ ಇ- ಪ್ರೊಕ್ಯೂರ್‌ಮೆಂಟ್ ಮೂಖಾಂತರ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದ್ದು, ಇದನ್ನು ಅಂತಿಮಗೊಳಿಸಿ, ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದಂತೆ ನಿಗಧಿಯಾದ ದರಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಕೆಲಸದ ವಿವರ | ಫೀಲ್ಡ್ ಕ್ಲಿನಿಕ್ ಮತ್ತು ವಾಹನ ಒದಗಿಸಿದಲ್ಲಿ ದರ | ಫೀಲ್ಡ್ ಕ್ಲಿನಿಕ್ ಅಥವ ವಾಹನ ಒದಗಿಸಿದಲ್ಲಿ ದರ | ಫೀಲ್ಡ್ ಕ್ಲಿನಿಕ್ ಮತ್ತು ವಾಹನ ಒದಗಿಸದಿದ್ದಲ್ಲಿ ದರ |
|---|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗದಿಪಡಿಸಿದ ದರ | ರೂ 550/- | ರೂ. 600/- | ರೂ.650/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ ಡ್ರೈವ್) ಗೆ ನಿಗದಿಪಡಿಸಿದ ದರ | ರೂ.70/- | ರೂ. 70/- | ರೂ.70/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗದಿಪಡಿಸಿದ ದರ | ರೂ. 75/- | ರೂ. 75/- | ರೂ.75/- |

ಟೆಂಡರ್ ಸಂಖ್ಯೆ: DC(H)/ABC-ARV/PR/559/2008-09, ದಿನಾಂಕ: 30-09-2008 ರಲ್ಲಿ ಅಂತಿಮಗೊಂಡಿದ್ದ 8 ಪ್ಯಾಕೇಜ್ ಗಳಲ್ಲಿ ಎ.ಬಿ.ಸಿ-ಎ.ಆರ್.ವಿ. ಕಾರ್ಯಕ್ರಮದ ಅವಧಿಯು ದಿನಾಂಕ: 31-8-2011ಕ್ಕೆ ಎರಡು ವರ್ಷಗಳು ಪೂರೈಸಲಿದ್ದು ಟೆಂಡರ್ ಷರತ್ತು ಸಂಖ್ಯೆ Additional Information(2) ರಲ್ಲಿ ಟೆಂಡರ್ ಅವಧಿಯನ್ನು ಇದೇ ದರಗಳಲ್ಲಿ ಒಂದು ವರ್ಷ ಮಟ್ಟಕ್ಕೆ ಮುಂದುವರೆಸಲು ಅವಕಾಶವಿದ್ದು, ಈ ಷರತ್ತಿನಂತೆ ಟೆಂಡರ್ ಅವಧಿಯನ್ನು ಮುಂದುವರೆಸಿದಲ್ಲಿ ಪಾಲಿಕೆಗೆ ಆರ್ಥಿಕ ಉಳಿತಾಯವಾಗಲಿದ್ದು, ಈ ದೃಷ್ಟಿಯ ಹಿನ್ನೆಲೆಯಲ್ಲಿ ಈ ಕ್ರಮ ಸಮಂಜಸ, ಏಕೆಂದರೆ ಈ ಟೆಂಡರ್ ನಂತರ ಕರೆದ ಟೆಂಡರ್‌ನಲ್ಲಿ ನಿಗದಿಪಡಿಸಿರುವ ದರ ಈ ಕೆಳಗಿನಂತಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| ಕ್ರಮ ಸಂಖ್ಯೆ | ಕೆಲಸದ ವಿವರಗಳು | 2008-09 ರ ಟೆಂಡರ್‌ನ ದರ ರೂ. | 2010-11 ರ ಟೆಂಡರ್‌ನ ದರ ರೂ. |
|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗಧಿಪಡಿಸಿದ ದರ | ಗಂಡು ನಾಯಿ- 515/- ಹೆಣ್ಣು ನಾಯಿ- 525/- | 550/- ರಿಂದ 650/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ. ಡ್ರೈವ್) ಗೆ ನಿಗಧಿಪಡಿಸಿದ ದರ | 50/- | 70/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | 75/- | 75/- |

ಆದುದರಿಂದ ಈಗ ಈ 8 ಪ್ಯಾಕೇಜ್‌ಗಳಿಗೆ ಟೆಂಡರ್ ಕರೆದು ದರ ನಿಗದಿಪಡಿಸಲು ಕ್ರಮಕೈಗೊಂಡಲ್ಲಿ ಹಳೆಯ ದರಗಳಿಗಿಂತ ಹೆಚ್ಚಿನ ದರಗಳನ್ನು ಪ್ರಾಣಿ ಕಲ್ಯಾಣ ಸಂಸ್ಥೆಗಳು ನಮೂದಿಸುವ ಸಾಧ್ಯತೆ ಇರುವುದರಿಂದ ಪಾಲಿಕೆಗೆ ಆರ್ಥಿಕ ಉಳಿತಾಯ ಮಾಡುವ ದೃಷ್ಟಿಯಿಂದ ಮೇಲೆ ತಿಳಿಸಿರುವ ಷರತ್ತು ಮತ್ತು ನಿಬಂಧನೆ ಪ್ರಕಾರ ಈ ಕೆಳಗೆ ನಮೂದಿಸಿರುವ ಹಳೆಯ ಟೆಂಡರ್‌ನ ದರದಂತೆ 8 ಪ್ಯಾಕೇಜ್‌ಗಳಲ್ಲಿ ಎ.ಬಿ.ಸಿ.-ಎ.ಆರ್.ವಿ. ಕಾರ್ಯಕ್ರಮವನ್ನು ಒಂದು ವರ್ಷದ ಅವಧಿಗೆ ಅಂದರೆ ದಿನಾಂಕ: 01-09-2011 ರಿಂದ 31-08-2012 ರ ವರೆಗೆ ಮುಂದುವರಿಸಲು ಸಂಬಂದಪಟ್ಟ ಪ್ರಾಣಿ ಕಲ್ಯಾಣ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಬೇಕಾಗಿರುವುದರಿಂದ ಈ ಪ್ರಸ್ತಾವನೆಯನ್ನು ಅನುಮೋದಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಗೆ ಟಿಪ್ಪಣಿಯನ್ನು ದಿನಾಂಕ: 21-07-2011 ರಂದು ಮಂಡಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | ದರ ಗಂಡು ನಾಯಿ ರೂ. | ದರ ಹೆಣ್ಣು ನಾಯಿ ರೂ. |
|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗದಿಪಡಿಸಿದ ದರ | 515/- | 525/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ ಡ್ರೈವ್) ಗೆ ನಿಗದಿಪಡಿಸಿದ ದರ | 50/- | 50/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗದಿಪಡಿಸಿದ ದರ | 75/- | 75/- |

ದಿನಾಂಕ: 01-08-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯಲ್ಲಿ ವಿಷಯದ ಸಂಖ್ಯೆ: ಸಾಆಸ್ಥಾಸ/13/2011-12 ರಲ್ಲಿ ಈ ವಿಷಯದ ಬಗ್ಗೆ ದಿನಾಂಕ: 21-07-2011 ರಂದು ಮಂಡಿಸಲಾದ ಟಿಪ್ಪಣಿಯಲ್ಲಿನ ವಿವರಗಳನ್ನು ಚರ್ಚಿಸಿ, ಹೆಣ್ಣು ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಹಾಗೂ ಗಂಡು ನಾಯಿಗಳಿಗೆ ಹುಚ್ಚು ನಾಯಿ ರೋಗ ನಿರೋಧಕ ಚುಚ್ಚುಮದ್ದು ಮಾತ್ರ ನೀಡಲು ಸಭೆಯು ತೀರ್ಮಾನಿಸಿರುತ್ತದೆ.

ಎಬಿಸಿ-ಎಆರ್‌ವಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿರುವ ಎಬಿಸಿ-ನಿಯಮ-2001 ಹಾಗೂ ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ ಮತ್ತು ಅನಿಮಲ್ ವೆಲ್ಫೇರ್ ಬೋರ್ಡ್ ಆಫ್ ಇಂಡಿಯಾ ಇವರ ಗೈಡ್‌ಲೈನ್ಸ್‌ನಂತೆ ಗಂಡು ಹಾಗೂ ಹೆಣ್ಣು ಬೀದಿನಾಯಿಗಳಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ಕಾರ್ಯಕ್ರಮವು, ಬೀದಿನಾಯಿ ಸಂಖ್ಯೆ ಹಾಗೂ ನಾಯಿ ಕಡಿತದ ಪ್ರಕರಣಗಳನ್ನು ಕಡಿಮೆ ಮಾಡುವ ಒಂದೆ ಮಾರ್ಗೋಪಾಯವಾಗಿರುವುದರಿಂದ ಗಂಡು ನಾಯಿಗಳಲ್ಲೂ ಕೂಡ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡುವುದು ಅನಿವಾರ್ಯ ಹಾಗೂ ನನ್ನ ಅಭಿಪ್ರಾಯದಲ್ಲಿ ಸೂಕ್ತ ಹಾಗೂ ಅಗತ್ಯವೆಂದು ಕಾಣುತ್ತದೆ. ಆದುದರಿಂದ ದಿನಾಂಕ: 01-08-2011 ರಂದು ನಡೆದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಸಭೆಯ ನಿರ್ಣಯದ ಸಂಖ್ಯೆ: ಸಾಆಸ್ಥಾಸ/13/2011-12 ರಲ್ಲಿ ಈ ವಿಷಯದ ಬಗ್ಗೆ ದಿನಾಂಕ: 21-07-2011 ರಂದು ಮಂಡಿಸಲಾದ ಟಿಪ್ಪಣಿಯಲ್ಲಿರುವಂತೆಯೇ ಚರ್ಚಿಸಿ ಕೋರಿರುವಂತೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಶಿಫಾರಸ್ಸಿನಂತೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 21-07-2011 ರ ಆಯುಕ್ತರ ಟಿಪ್ಪಣಿಯಲ್ಲಿನ ವಿವರಗಳನ್ನು ಚರ್ಚಿಸಲಾಗಿ, ಹೆಣ್ಣು ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಹಾಗೂ ಗಂಡು ನಾಯಿಗಳಿಗೆ ಹುಚ್ಚು ನಾಯಿ ನಿರೋಧಕ ಚುಚ್ಚುಮದ್ದು ಮಾತ್ರ ನೀಡಲು ಸಭೆಯು ತೀರ್ಮಾನಿಸಿತು.**

### ೩. ವಿಷಯದ ಸಂಖ್ಯೆ: ಸಾಆಸ್ಥಾಸ/31/2011-12:

ಸಂಖ್ಯೆ ಆ/ಪಿಎಸ್ಆರ್/ /2011-12, ದಿನಾಂಕ: 15-09-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯೊಂದಿಗೆ, ದಿನ ನಿತ್ಯ 600 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವ ಘಟಕವನ್ನು ಮಾವಳ್ಳಿಪುರ ಸರ್ವೆ ನಂ.08 ರ 100 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಒಪ್ಪಂದವನ್ನು 11-08-2004 ರಲ್ಲಿ ಮಾಡಿಕೊಳ್ಳಲಾಗಿರುತ್ತದೆ.

ಆದರೆ ಭೂ ತಗಾದೆ ಹಾಗೂ ಅರಣ್ಯ ಪ್ರದೇಶದಿಂದಾಗಿ ಪಾಲಿಕೆಯು ಸದರಿ ಸಂಸ್ಥೆಗೆ 46 ಎಕರೆ ಪ್ರದೇಶವನ್ನು ಮಾತ್ರ ಒದಗಿಸಲು ಸಾಧ್ಯವಾಗಿರುತ್ತದೆ. ಈ ಪ್ರದೇಶದಲ್ಲಿ ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯು ಘನತ್ಯಾಜ್ಯ ಸಂಸ್ಕರಣ ಘಟಕವನ್ನು ಸ್ಥಾಪಿಸಿ ದಿನಾಂಕ: 29-01-2007 ರಿಂದ ಕಾರ್ಯಾರಂಭಿಸಿರುತ್ತದೆ.

ಸ್ಥಳದ ಕೊರತೆಯಿಂದಾಗಿ ಒಂದು Concrete Platform windrow ಮಾತ್ರ ತಯಾರಿಸಿದ್ದು ಇದರಲ್ಲಿ ಪ್ರತಿದಿನ ಸುಮಾರು 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುತ್ತಿದ್ದು, ಉಳಿಕೆ 300 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ನೇರವಾಗಿ ಲ್ಯಾಂಡ್‌ಫಿಲ್‌ನಲ್ಲಿ ತುಂಬಲಾಗುತ್ತಿದೆ.

ಘನತ್ಯಾಜವನ್ನು ನೇರವಾಗಿ ಲ್ಯಾಂಡ್‌ಫಿಲ್‌ನಲ್ಲಿ ತುಂಬುತ್ತಿರುವುದರಿಂದ ಹಾಗೂ ಗೊಬ್ಬರ ತಯಾರಿಕೆಗಾಗಿ ಘನತ್ಯಾಜ್ಯವನ್ನು windrow ಮೇಲೆ ಹರಡುವುದರಿಂದ ಕೆಟ್ಟವಾಸನೆ ನೊಣ, ಸೊಳ್ಳೆ ಹಾಗೂ ಕ್ರಿಮಿಕೀಟಗಳ ಹಾವಳಿ ಉಂಟಾಗಿ ಇದರಿಂದಾಗಿ ರೋಗರುಜಿನಗಳು ಹರಡುತ್ತಿರುವುದಾಗಿ ಸ್ಥಳೀಯರು ಪ್ರತಿಭಟಿಸಿರುತ್ತಾರೆ.

ಮೇಲಿನ ಸನ್ನಿವೇಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯವರಿಗೆ ಘನತ್ಯಾಜ್ಯದಿಂದ ವಿದ್ಯುತ್ ತಯಾರಿಸುವ ಅಥವಾ ಇನ್ನಾವುದೇ ನೂತನ ತಂತ್ರಜ್ಞಾನವನ್ನು ಬಳಸಿ ಹೆಚ್ಚಿನ ಪ್ರಮಾಣದ ಘನತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಣೆ ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ತ್ಯಾಜ್ಯವನ್ನು windrow platform ಮೇಲೆ ಹರಡಿ ಗೊಬ್ಬರ ತಯಾರಿಸುವ ವಿಧಾನವು Out dated technology ಆಗಿದ್ದು, ನೂತನ ತಂತ್ರಜ್ಞಾನ ಅಳವಡಿಸಿಕೊಂಡು ತ್ಯಾಜ್ಯ ಸಂಸ್ಕರಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯವರು, BOT ಆಧಾರದ ಮೇಲೆ 10 ಮೆ.ವ್ಯಾಟ್ ಪ್ರಮಾಣದ ವಿದ್ಯುತ್ ಘಟಕ ತಯಾರಿಸಲು ಮುಂದೆ ಬಂದಿದ್ದು, DPR ಸಲ್ಲಿಸಿರುತ್ತಾರೆ. ಈ ತಂತ್ರಜ್ಞಾನದಂತೆ ಪ್ರತಿನಿತ್ಯ 1000 ಮೆಟ್ರಿಕ್ ಟನ್ ಘನತ್ಯಾಜ್ಯವನ್ನು ನೇರವಾಗಿ furnace ನಲ್ಲಿ ವಿದ್ಯುತ್ ಉತ್ಪಾದನೆಗೆ ಕಚ್ಚಾವಸ್ತುವಾಗಿ ಸುಡಲ್ಪಡುವುದರಿಂದ, ಲೀಚೆಟ್‌ನ ಸಮಸ್ಯೆ ಹಾಗೂ ತತ್ಸಂಬಂಧದ ವಾಸನೆಯ ತೊಂದರೆಯನ್ನು ನಿವಾರಿಸಬಹುದಾಗಿರುತ್ತದೆ. ಮತ್ತು ಲ್ಯಾಂಡ್‌ಫಿಲ್ ಮಾಡಬೇಕಾದ Inerts ನ ಪರಿಮಾಣ ಸಹ ಗಣನೀಯವಾಗಿ ಕಡಿಮೆಯಾಗಲಿದ್ದು, ಜಾಗದ ಅವಶ್ಯಕತೆ ಕಡಿಮೆಯಾಗಲಿದೆ. ಇದು BOT ಆಧಾರದ ಯೋಜನೆಯಾಗಿರುವುದರಿಂದ ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಬದಲಿಗೆ ಪಾಲಿಕೆಯಿಂದ ಪ್ರತಿನಿತ್ಯ ಕನಿಷ್ಠ 1000 ಮೆಟ್ರಿಕ್ ಟನ್ ಘನತ್ಯಾಜ್ಯ ಒದಗಿಸಬೇಕಾಗುತ್ತದೆ. ಈ ಯೋಜನೆಗೆ ಈಗಾಗಲೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಏರಪೋರ್ಟ್ ಆಥಾರಿಟಿ ಯಿಂದ ಅನುಮತಿಯನ್ನು ಪಡೆಯಲಾಗಿದ್ದು, BWSSB ಸಂಸ್ಥೆಯವರು ಈ ಯೋಜನೆಗೆ ಬೇಕಾದ 1.00 MLD ನೀರನ್ನು ಪಡೆಯಲು ಅನುಮತಿ ನೀಡಿರುತ್ತಾರೆ. ಈ ಯೋಜನೆಯನ್ನು ಕೈಗೊಳ್ಳಲು ಕಾನೂನು ಕೋಶದ ಅಭಿಪ್ರಾಯದಂತೆ ಪಾಲಿಕೆ ಸಭೆಯ ಅನುಮೋದನೆ ಪಡೆಯಬೇಕಿರುತ್ತದೆ.

ಆದುದರಿಂದ, ಈ ಕೆಳಗಿನಂತೆ ಅನುಮೋದನೆ ಕೋರಿ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಕಡತದೊಂದಿಗೆ ಟಿಪ್ಪಣಿ ಮಂಡಿಸಿದೆ.

1. ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯು ನಿರ್ವಹಿಸುತ್ತಿರುವ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ವಿದ್ಯುತ್ ಉತ್ಪಾದನೆಗಾಗಿ ಪ್ರತಿನಿತ್ಯ ಕನಿಷ್ಠ 1000 ಮೆ.ಟನ್ ಘನತ್ಯಾಜ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಒದಗಿಸಲು ಅನುಮೋದನೆ.

2. ಸರ್ವೆ ನಂ.08 ರ ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಘನ ತ್ಯಾಜ್ಯದಿಂದ 10 ಮೆ.ವ್ಯಾ ವಿದ್ಯುತ್ ಉತ್ಪಾದಿಸುವ ಘಟಕವನ್ನು BOT ಆಧಾರದ ಮೇಲೆ 20 ವರ್ಷದ ಅವಧಿಗೆ ಮೆ॥ರಾಂಕೀ ಎನರ್ಜಿ & ಎನ್‌ವೈರಾನ್‌ಮೆಂಟ್ ಸಂಸ್ಥೆಯವರು ಸ್ಥಾಪಿಸಲು ಅನುಮೋದನೆ.

C. the Shashi kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

**4. ವಿಷಯದ ಸಂಖ್ಯೆ: ಸಾಆಸ್ಥಾಸ/32/2011-12:**

ಆಯುಕ್ತರ ದಿನಾಂಕ: 25-09-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳ ಕಸ ವಿಲೇವಾರಿ 30 ಪ್ಯಾಕೇಜ್‌ಗಳ ಸೇವಾ ಗುತ್ತಿಗೆಗಳನ್ನು ದಿನಾಂಕ: 28-06-2011 ರ ಪಾಲಿಕೆ ಸಭೆಯ ವಿಷಯ ಸಂಖ್ಯೆ: 20(79)/2011-12 ರಂತೆ ದಿನಾಂಕ: 01-07-2011 ರಿಂದ ಮತ್ತೇ ಮೂರು (3) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲಾಗಿರುತ್ತದೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳಲ್ಲಿ 2 ವರ್ಷಗಳ ಅವಧಿಗೆ ಹೊಸದಾಗಿ ಟೆಂಡರ್ ಕರೆಯಲು ಟೆಂಡರ್ ದಸ್ತಾವೇಜುಗಳ ರೂಪುರೇಷುಗಳಿಗೆ ದಿನಾಂಕ: 28-06-2011 ಪಾಲಿಕೆ ಸಭೆಯ ವಿಷಯ ಸಂಖ್ಯೆ: 04(67)/2011-12 ರಲ್ಲಿ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿರುತ್ತದೆ.

ಈ ನಿಟ್ಟಿನಲ್ಲಿ ಪಾಲಿಕೆಯ ವ್ಯಾಪ್ತಿಯ ಎಲ್ಲಾ ವಲಯಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕಾಮಗಾರಿಗಳಿಗೆ ಹಾಗೂ ಮೆಕಾನಿಕಲ್ ಸ್ವೀಪಿಂಗ್‌ಗೆ ದಿನಾಂಕ: 16-07-2011 ರಂದು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ. ದಿನಾಂಕ: 25-08-2011 ರಂದು ಸದರಿ ಟೆಂಡರಿನ ತಾಂತ್ರಿಕ ಬಿಡ್ಡನ್ನು ತೆರೆಯಬೇಕಾಗಿದ್ದು, ಕೆಲವು ಗುತ್ತಿಗೆದಾರರು ದಿನಾಂಕ: 24-08-2011 ರಂದು ಟೆಂಡರಿನ ಪ್ರಕ್ರಿಯೆಗೆ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾವೆ ಹೂಡಿ ತಡೆಯಾಜ್ಞೆ ತಂದಿದ್ದರಿಂದ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು.

ಸದರಿ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕಾಮಗಾರಿಗಳಿಗೆ ಹಾಗೂ ಮೆಕಾನಿಕಲ್ ಸ್ವೀಪಿಂಗ್ ಟೆಂಡರಿನ ಪ್ರಕ್ರಿಯೆಯಲ್ಲಿ ಕೇವಲ 2 ಬಿಡ್ಡುದಾರರು ಮಾತ್ರ ಭಾಗವಹಿಸಿದ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ಹಿಂಪಡೆಯುವುದಾಗಿ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿದ ಮೇರೆಗೆ ದಿನಾಂಕ: 08-09-2011 ರಂದು ಸದರಿ ತಡೆಯಾಜ್ಞೆಯು ತೆರವುಗೊಂಡಿದ್ದು, ಪಾಲಿಕೆಯ ಎಲ್ಲಾ ವಲಯಗಳಲ್ಲಿ ಮೆಕಾನಿಕಲ್ ಸ್ವೀಪಿಂಗ್ ಹೊರತು ಪಡಿಸಿ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕಾಮಗಾರಿಗಳಿಗೆ ಹೊಸದಾಗಿ ಟೆಂಡರ್ ಕರೆಯಬೇಕಾಗಿರುತ್ತದೆ.

ಪಾಲಿಕೆಯ ಎಲ್ಲಾ ವಲಯಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿ ಕಾಮಗಾರಿಗಳಿಗೆ ಸರ್ಕಾರದ ಒಪ್ಪಿಗೆ ಪಡೆದು ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲು ಕನಿಷ್ಠ ಪಕ್ಷ ಒಂದರಿಂದ ಎರಡು ತಿಂಗಳ ಕಾಲಾವಕಾಶ ಬೇಕಾಗಿರುತ್ತದೆ. ಇದೇ ಸಂದರ್ಭದಲ್ಲಿ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳ ಕಸ ವಿಲೇವಾರಿ 30 ಪ್ಯಾಕೇಜ್‌ಗಳ ಸೇವಾ ಗುತ್ತಿಗೆಗಳ ಮುಂದುವರೆದ ಅವಧಿ ದಿನಾಂಕ: 30-09-2011 ರಂದು ಮುಗಿಯಲಿದ್ದು ಹಾಲೀ ಗುತ್ತಿಗೆಗಳನ್ನು ಮುಂದುವರೆಸುವ ಅಗತ್ಯವಿರುತ್ತದೆ.

ಆದುದರಿಂದ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳ ಕಸ ವಿಲೇವಾರಿ 30 ಪ್ಯಾಕೇಜ್‌ಗಳ ಸೇವಾ ಗುತ್ತಿಗೆಗಳ ಮುಂದುವರೆದ ಅವಧಿ ದಿನಾಂಕ: 30-09-2011 ರಂದು ಮುಕ್ತಾಯವಾಗುವುದರಿಂದ ಪುನ: ಸದರಿ ಗುತ್ತಿಗೆಗಳನ್ನು ದಿನಾಂಕ: 01-10-2011 ರಿಂದ ಮತ್ತೆ (ಮೂರು) ತಿಂಗಳ ಅವಧಿಯವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 28-09-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**5. ವಿಷಯದ ಸಂಖ್ಯೆ: ಸಾಆಸ್ಥಾಸ/33/2011-12:**

ಸಂಖ್ಯೆ ಜಂ.ನಿ. (ಪ.ಪಾ)/ಪಿಆರ್/547/11-12, ದಿನಾಂಕ: 03-10-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 11-08-2010 ರಂದು ನಡೆದ ರಾಜ್ಯ ಮಟ್ಟದ ಎ.ಬಿ.ಸಿ. ಮಾನಿಟರಿಂಗ್ ಸಮಿತಿ ಸಭೆಯ ಶಿಫಾರಸ್ಸಿನಂತೆ ಹಾಗೂ ಬೆಂಗಳೂರು ಪಶ್ಚಿಮ ವಲಯದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರಿಂದ ಹಾಗೂ ಪಾಲಿಕೆ ಸದಸ್ಯರುಗಳಿಂದ ದೂರುಗಳು ಬರುತ್ತಿರುವುದರಿಂದ ಬೆಂಗಳೂರು ಪಶ್ಚಿಮ ವಲಯದಲ್ಲಿ ಕ್ಷಿಪ್ರ ಕಾರ್ಯಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕ ಸ್ಥಾಪನೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಟೆಂಡರ್ ಸಂಖ್ಯೆ JD (AH)/ABC/ARV/Tender/PR/358/11-12 ರಂತೆ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ 3 ಪ್ರಾಣಿ ಕಲ್ಯಾಣ ಸಂಸ್ಥೆಗಳು ಭಾಗವಹಿಸಿದ್ದು, ಟೆಂಡರ್‌ದಾರರು ನಮೂದಿಸಿರುವ ದರಗಳು ಈ ಕೆಳಗಿನಂತಿವೆ.

| **ವಿವರ**<br>ಕ್ಷಿಪ್ರ ಕಾರ್ಯಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕ, ಪಶ್ಚಿಮ ವಲಯ | ಅನಿಮಲ್ ರೈಟ್ಸ್ ಫಂಡ್ (ಎ.ಆರ್.ಎಫ್.) | ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್ಮೆಂಟ್ | ಸರ್ವೋದಯ ಸೇವಾಭಾವಿ ಸಂಸ್ಥೆ |
|---|---|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆ (ಸಿ.ಎನ್.ವಿ.ಆರ್. ಪದ್ಧತಿಯಲ್ಲಿ) | ಗಂಡು ನಾಯಿ<br>ರೂ.850/- | ಗಂಡು ನಾಯಿ<br>ರೂ.595/- | ಗಂಡು ನಾಯಿ<br>ರೂ.698 |
| | ಹೆಣ್ಣು ನಾಯಿ<br>ರೂ.850/- | ಹೆಣ್ಣು ನಾಯಿ<br>ರೂ.595/- | ಹೆಣ್ಣು ನಾಯಿ<br>ರೂ.699/- |
| ದಯಾ ಮರಣಕ್ಕೆ ಒಳಪಡಿಸುವುದು | ರೂ.200/- | ರೂ.100/- | ರೂ.89/- |

ಇ-ಪ್ರಕ್ಯೂರ್ ಮೆಂಟ್‌ನಲ್ಲಿ ಮೆ: ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್ಮೆಂಟ್ ಸಂಸ್ಥೆಯವರು ಎಲ್-1 ಆಗಿ ಆಯ್ಕೆಯಾಗಿರುತ್ತಾರೆ. ಸದರಿ ಸಂಸ್ಥೆಯ ಪ್ರತಿನಿಧಿಯನ್ನು ಜಂಟಿ ನಿರ್ದೇಶಕರು (ಪಶುಪಾಲನೆ) ಇವರು ದರ ಸಂಧಾನಕ್ಕಾಗಿ ಕರೆಯಲಾಗಿದ್ದು,

ದರ ಸಂಧಾನದಲ್ಲಿ ದಯಾ ಮರಣಕ್ಕೆ ನಾಯಿಗಳನ್ನು ಒಳಪಡಿಸುವ ದರದಲ್ಲಿ ಮಾತ್ರ ಕಡಿಮೆ ಮಾಡಲು ಒಪ್ಪಿದ್ದು, ಈ ದರವನ್ನು ರೂ.100/- ರ ಬದಲು ರೂ.75/- ಕ್ಕೆ ಕಡಿಮೆಗೊಳಿಸಲು ಒಪ್ಪಿರುತ್ತಾರೆ.

ಮೆ: ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್ಮೆಂಟ್ ಇವರು ನಮೂದಿಸಿರುವ ದರಗಳು ಇತರೆ ಎರಡು ಪ್ರಾಣಿ ಕಲ್ಯಾಣ ಸಂಸ್ಥೆಗಳು ನಮೂದಿಸಿರುವ ದರಗಳಿಗಿಂತ ಕಡಿಮೆ ಇರುವುದರಿಂದ ಇವರು ನಮೂದಿಸಿರುವ ದರಗಳನ್ನು ಒಪ್ಪಬಹುದಾಗಿರುತ್ತದೆ.

ಬೀದಿ ನಾಯಿಗಳ ಸಂತಾನ ಹರಣ ಕಾರ್ಯವನ್ನು ಎ.ಬಿ.ಸಿ. (ಡಾಗ್) ನಿಯಮಗಳು-2001 ರ ಅನ್ವಯ ಸಾರ್ವಜನಿಕ ಹಿತದೃಷ್ಟಿಯಿಂದ ಆದ್ಯತೆಯ ಮೇಲೆ ವಿಳಂಬವಿಲ್ಲದೇ ಕೈಗೊಳ್ಳಬೇಕಾಗಿರುವುದರಿಂದ ಕೆಳಗೆ ನಮೂದಿಸಿರುವ ದರಗಳಿಗೆ ಅನುಮೋದನೆ ನೀಡಲು ಕೋರಿ ನಿವೇದಿಸಿದೆ.

| **ವಿವರ**<br>ಕ್ಷಿಪ್ರ ಕಾರ್ಯಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕ, ಪಶ್ಚಿಮ ವಲಯ | ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್ಮೆಂಟ್ |
|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆ (ಸಿ.ಎನ್.ವಿ.ಆರ್. ಪದ್ಧತಿಯಲ್ಲಿ) | ಗಂಡು ನಾಯಿ<br>ರೂ.595/- |
| | ಹೆಣ್ಣು ನಾಯಿ<br>ರೂ.595/- |
| ದಯಾ ಮರಣಕ್ಕೆ ಒಳಪಡಿಸುವುದು | ರೂ.75/- |

**ಎ.ಬಿ.ಸಿ.-ಎ.ಆರ್.ವಿ. ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ**
**13 ಆರೋಗ್ಯ ಸಾಮಾನ್ಯ-**
**ಆರೋಗ್ಯ ಮತ್ತು ನೈರ್ಮಲೀಕರಣ**
**ಪ್ರಾಣಿ ಸಂಖ್ಯೆ ನಿಯಂತ್ರಣ ವೆಚ್ಚಗಳು**
**ಬೀದಿ ನಾಯಿಗಳ ನಿರ್ವಹಣೆ ವೆಚ್ಚಗಳು**

Thashashi kumar.
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಡಿಯಲ್ಲಿ ಭರಿಸಲಾಗುವುದು. 2011-2012 ನೇ ಸಾಲಿನ ಆಯ-ವ್ಯಯದಲ್ಲಿ ಸದರಿ ಶೀರ್ಷಿಕೆಗೆ ರೂ.600/- ಲಕ್ಷಗಳನ್ನು ನಿಗಧಿಗೊಳಿಸಲಾಗಿರುತ್ತದೆ. ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

## ನಿರ್ಣಯ:

**ದಿನಾಂಕ: 03-10-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 6. ವಿಷಯದ ಸಂಖ್ಯೆ: ಸಾಆಸ್ಥಾಸ/34/2011-12:

ಆಯುಕ್ತರ ದಿನಾಂಕ: 10-10-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ ಜಾನುವಾರುಗಳ ಮಾಲೀಕರು ತಮ್ಮ ದನಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿಹಾಕದೆ ಹೊರಗಡೆಗೆ ಮೇಯಲು ಬಿಡುವುದನ್ನು ಮೊದಲಿನಿಂದಲು ರೂಢಿಸಿಕೊಂಡು ಬಂದಿರುತ್ತಾರೆ. ಈ ರೀತಿ ಹೊರಗಡೆಗೆ ಮೇಯಲು ಬಿಟ್ಟ ದನಕರುಗಳು ಕಸದ ರಾಶಿಯಲ್ಲಿ ಮೇಯುವುದು, ರಸ್ತೆಗಳಲ್ಲಿ ಅಡ್ಡದಿಡ್ಡಿ ಓಡಾಡುವುದು, ರಸ್ತೆಗಳ ಮಧ್ಯದಲ್ಲಿ ಮಲಗಿಕೊಳ್ಳುವುದು, ಕೆಲವೊಮ್ಮೆ ಓಡಾಡುವ ಜನರನ್ನು ಹಾಯುವುದು ಮಾಡುತ್ತವೆ. ಇದರಿಂದಾಗಿ ವಾಹನ ಚಾಲಕರಿಗೆ, ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತದೆ. ಅಲ್ಲದೆ ವಾಹನ ಸಂಚಾರಕ್ಕೂ ಅಡಚಣೆಯುಂಟಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರಿಂದ ಹಾಗೂ ಸಂಚಾರಿ ಪೋಲಿಸ್ ವಿಭಾಗದಿಂದಲೂ-ಸಹ-ದೂರುಗಳು ಬಂದಿರುತ್ತವೆ.

ಪ್ರಸ್ತುತ ರಸ್ತೆಗಳಲ್ಲಿ ಓಡಾಡುವ ಬೀಡಾಡಿ ದನಗಳನ್ನು ಹಿಡಿದು ತಂದು ಪಾಲಿಕೆಯ ದನದ ದೊಡ್ಡಿಯಲ್ಲಿ ಇರಿಸಿ ಜಾನುವಾರು ಮಾಲೀಕರಿಗೆ ದಂಡ ವಿಧಿಸಿ ಜಾನುವಾರುಗಳನ್ನು ಮಾಲೀಕರಿಗೆ ಹಿಂದಿರುಗಿಸಲಾಗುತ್ತಿದೆ. ಕರ್ನಾಟಕ ಕ್ಯಾಟಲ್ ಟ್ರೆಸ್‌ಪಾಸ್ ಆ್ಯಕ್ಟ್, 1966 ರಂತೆ ಕರ್ನಾಟಕ ಸಚಿವಾಲಯ ಅಧಿಸೂಚನೆ ಸಂಖ್ಯೆ: ಹೆಚ್‌ಯೂಡಿ/337/ಎಂಎನ್‌ವೈ/77, ದಿನಾಂಕ: 06-08-1979 ರಲ್ಲಿ ಬೀಡಾಡಿ ದನಗಳಿಗೆ ವಿಧಿಸುವ ದಂಡವನ್ನು ನಮೂದಿಸಲಾಗಿರುತ್ತದೆ. ಸದರಿ ಅಧಿಸೂಚನೆಯನ್ನು ಮಾರ್ಪಾಡು ಮಾಡಿ ಸಚಿವಾಲಯ ಅಧಿಸೂಚನೆ ಸಂಖ್ಯೆ: ಹೆಚ್‌ಯೂಡಿ/26/ಎಂಎನ್‌ವೈ/89, ದಿನಾಂಕ: 13-06-1991 ರಲ್ಲಿ ಬೀಡಾಡಿ ದನಗಳಿಗೆ ವಿಧಿಸುವ ದಂಡವನ್ನು ಪರಿಷ್ಕರಿಸಲಾಗಿದೆ (ಪ್ರತಿ ಲಗತ್ತಿಸಿದೆ). ಇದರಂತೆ ಪ್ರತಿ ವಯಸ್ಕ ದನಕ್ಕೆ ರೂ.100/- ರಂತೆ 3 ದಿನಗಳವರೆಗೆ, ನಂತರದ ದಿನಗಳಿಗೆ ಪ್ರತಿದಿನ ಹೆಚ್ಚುವರಿ ರೂ.50/- ರಂತೆ ದಂಡ ವಿಧಿಸಬಹುದಾಗಿರುತ್ತದೆ. ಹಾಗೂ ಪ್ರತಿ ಕರುವಿಗೆ ರೂ.50/- ರಂತೆ 3 ದಿನಗಳವರೆಗೆ, ನಂತರದ ದಿನಗಳಿಗೆ ಪ್ರತಿದಿನ ಹೆಚ್ಚುವರಿ ರೂ.25/- ರಂತೆ ದಂಡ ವಿಧಿಸಬಹುದಾಗಿರುತ್ತದೆ. ಪ್ರಸ್ತುತ ಪಾಲಿಕೆಯ ದನದ ದೊಡ್ಡಿಗೆ ಹಿಡಿದು ತರುವ ಬೀಡಾಡಿ ದನಗಳಿಗೆ ಮೇಲಿನಂತೆ ಜಾನುವಾರು ಮಾಲೀಕರಿಗೆ ದಂಡ ವಿಧಿಸಿ, ಜಾನುವಾರುಗಳನ್ನು ಮಾಲೀಕರ ವಶಕ್ಕೆ ಕೊಡಲಾಗುತ್ತಿದೆ.

ಈ ದರಗಳು 20 ವರ್ಷಗಳ ಹಿಂದಿನದಾಗಿದ್ದು, ಒಣಹುಲ್ಲು ಮೇವಿನ ಖರ್ಚು, ವಾಹನ ನಿರ್ವಹಣೆ, ತೈಲದ ಬೆಲೆ, ಇತ್ಯಾದಿಗಳ ಬೆಲೆಗಳು ಗಗನಕ್ಕೇರಿದ್ದು ಹಾಗೂ ಬೀದಿ ದನಗಳ ಹಾವಳಿಯು ಜಾಸ್ತಿಯಾಗಿದ್ದು, ಇದರ ಮೇಲೆ ಕಡಿವಾಣ ಹಾಕಲು, ದಂಡದ ದರಗಳನ್ನು ಹೆಚ್ಚಿಸುವುದು ಅನಿವಾರ್ಯ. ಆದ್ದರಿಂದ ಜಾನುವಾರು ಮಾಲೀಕರು ತಮ್ಮ ಜಾನುವಾರುಗಳನ್ನು ರಸ್ತೆಗೆ ಬಿಡುವುದನ್ನು ನಿಲ್ಲಿಸಲು ದಂಡದ ದರಗಳನ್ನು ಹೆಚ್ಚಿಸುವುದು ಅಗತ್ಯ. ಅಲ್ಲದೆ, ಹಿಡಿದು ತಂದ ಜಾನುವಾರುಗಳು ದೊಡ್ಡಿಯಲ್ಲಿ ಇರುವ ಅವಧಿಯಲ್ಲಿ ಜಾನುವಾರುಗಳಿಗೆ ನೀಡುವ ಮೇವಿನ ವೆಚ್ಚವನ್ನು ಪ್ರತ್ಯೇಕವಾಗಿ ಜಾನುವಾರುಗಳ ಮಾಲೀಕರಿಂದ ವಸೂಲಿ ಮಾಡಬೇಕಾಗಿದ್ದು, ಪ್ರತಿ ದೊಡ್ಡ ಜಾನುವಾರಿಗೆ ಪ್ರತಿದಿನಕ್ಕೆ ರೂ.100.00 ರಂತೆ ಹಾಗೂ ಪ್ರತಿ ಕರುವಿಗೆ ಪ್ರತಿ ದಿನಕ್ಕೆ ರೂ.50.00 ರಂತೆ ಶುಲ್ಕ ವಸೂಲಿ ಮಾಡುವುದು ಅಗತ್ಯವಾಗಿರುತ್ತದೆ.

ಜಾನುವಾರು ಮಾಲೀಕರು ತಮ್ಮ ಜಾನುವಾರುಗಳನ್ನು ರಸ್ತೆಗೆ ಬಿಡುವುದನ್ನು ನಿರ್ಬಂದಿಸುವ ದೃಷ್ಟಿಯಿಂದ ಬೀಡಾಡಿ ದನಗಳ ದಂಡದ ಹಣವನ್ನು ಈ ಕೆಳಗಿನಂತೆ ಹೆಚ್ಚಿಸುವುದು ಅವಶ್ಯಕವಿರುತ್ತದೆ. ಪ್ರತಿ ವಯಸ್ಕ ದನಕ್ಕೆ ರೂ.1000/- (ಒಂದು ಸಾವಿರ ರೂಪಾಯಿಗಳು ಮಾತ್ರ) ರಂತೆ 3 ದಿನಗಳವರೆಗೆ, ನಂತರದ ದಿನಗಳಿಗೆ ಪ್ರತಿದಿನ ಹೆಚ್ಚುವರಿ ರೂ.100/- (ಒಂದು ನೂರು ರೂಪಾಯಿಗಳು ಮಾತ್ರ) ರಂತೆ ಹಾಗೂ ಕರುಗಳಿಗೆ ಪ್ರತಿ ಕರುವಿಗೆ ರೂ.500/- (ಐದು ನೂರು ರೂಪಾಯಿಗಳು ಮಾತ್ರ) ರಂತೆ 3 ದಿನಗಳವರೆಗೆ, ನಂತರದ ದಿನಗಳಿಗೆ ಪ್ರತಿದಿನ ಹೆಚ್ಚುವರಿ ರೂ.50/- (ಐವತ್ತು ರೂಪಾಯಿಗಳು ಮಾತ್ರ) ರಂತೆ ದಂಡವನ್ನು ಪರಿಷ್ಕರಿಸಬಹುದಾಗಿರುತ್ತದೆ. ಬೀಡಾಡಿ ದನಗಳಿಗೆ ವಿಧಿಸುವ ದಂಡವನ್ನು ಮೇಲಿನಂತೆ ಪರಿಷ್ಕರಿಸಲು ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಇಲ್ಲಿಗೆ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿರುತ್ತದೆ. ಜಾನುವಾರುಗಳು ದೊಡ್ಡಿಯಲ್ಲಿ ಇರುವ ಅವಧಿಯಲ್ಲಿ ಜಾನುವಾರುಗಳಿಗೆ ನೀಡುವ ಮೇವಿನ ವೆಚ್ಚವನ್ನು ಪ್ರತ್ಯೇಕವಾಗಿ ಜಾನುವಾರುಗಳ ಮಾಲೀಕರಿಂದ ವಸೂಲಿ ಮಾಡಬೇಕಾಗಿದ್ದು, ಪ್ರತಿ ದೊಡ್ಡ ಜಾನುವಾರಿಗೆ ಪ್ರತಿದಿನಕ್ಕೆ ರೂ.100.00 ರಂತೆ ಹಾಗೂ ಪ್ರತಿ ಕರುವಿಗೆ ಪ್ರತಿ ದಿನಕ್ಕೆ ರೂ.50.00 ರಂತೆ ಶುಲ್ಕ ವಸೂಲಿ ಮಾಡುವುದು ಅಗತ್ಯವಾಗಿರುತ್ತದೆ. ಈ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

## ನಿರ್ಣಯ:

**ಪ್ರಸ್ತಾವನೆಯನ್ನು ಮರು ಪರಿಶೀಲಿಸಿ ಮರು ಮಂಡಿಸಲು ಕಡತವನ್ನು ಹಿಂತಿರಿಗಿಸಿದೆ.**

**7. ವಿಷಯದ ಸಂಖ್ಯೆ: ಸಾಆಸ್ಥಾಸ/35/2011-12:**

ಸಂಖ್ಯೆ: ಉ.ಆ.(ರಾ.ರಾ.ನ.)ಪಿಆರ್/308/2011-12, ದಿನಾಂಕ: 13-10-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿ ನಗರ ವಲಯದ ವಾರ್ಡ್ ನಂ.129ರ ಪಾಲಿಕೆ ಸದಸ್ಯರಾದ, ಶ್ರೀ.ಗೋವಿಂದರಾಜು ರವರು ಜ್ಞಾನಭಾರತಿ ವಾರ್ಡ್ ನಂ.129 ರ ವ್ಯಾಪ್ತಿಯಲ್ಲಿ ಬರುವ ಕೆಬ್ಬೆಹಳ್ಳ (ರಾಜೀವಗಾಂಧಿ ನಗರ) ಇಲ್ಲಿ ಪಾಲಿಕೆ ವತಿಯಿಂದ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಕೋರಿರುತ್ತಾರೆ.

ವಾರ್ಡ್ ಸಂಖ್ಯೆ.129 ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿದ್ದು, ಈ ಪ್ರದೇಶದಲ್ಲಿ ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಿಂದ ಒದಗಿಸಲಾಗುತ್ತಿದೆ. ಸದರಿ ವಾರ್ಡ್‌ನಲ್ಲಿ ಅಂಬೇಡ್ಕರ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್, ರಿಂಗ್ ರಸ್ತೆ ಇದರ ಎದುರುಗಡೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿರುತ್ತದೆ. ಮಾನ್ಯ ನಗರ ಸಭಾ ಸದಸ್ಯರು ಕೋರಿರುವ ಆರೋಗ್ಯ ಕೇಂದ್ರದ ಸ್ಥಳವು ಸುಮಾರು 3 ಕಿ.ಮೀ. ನಷ್ಟು ದೂರದಲ್ಲಿರುತ್ತದೆ. ಅಲ್ಲದೆ **ವಾರ್ಡ್-129 ರ ಕೆಬ್ಬೆಹಳ್ಳ (ರಾಜೀವಗಾಂಧಿ ನಗರ) ಈ ಪ್ರದೇಶದಲ್ಲಿ ಬಡಜನರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಆರೋಗ್ಯ ಕೇಂದ್ರದ ಅವಶ್ಯಕತೆ ಇರುತ್ತದೆ**.

ಮಾನ್ಯ ಸದಸ್ಯರು ಸೂಚಿಸಿರುವ ಪ್ರದೇಶದಲ್ಲಿ ಒಂದು ಕಟ್ಟಡವಿದ್ದು, ಅದನ್ನು ಸಮುದಾಯ ಭವನಕ್ಕಾಗಿ ನಿರ್ಮಿಸಲಾಗಿದೆ. ಇದು 2 ಅಂತಸ್ತಿನ ಕಟ್ಟಡವಾಗಿದ್ದು, ಅವಶ್ಯ ವಿಭಾಗಗಳನ್ನು ನಿರ್ಮಿಸಿಕೊಂಡು, ಸಾರ್ವಜನಿಕ ಆರೋಗ್ಯದ ಹಿತ ದೃಷ್ಟಿಯಿಂದ ಔಷಧಾಲಯವನ್ನು (Day Care Centre) ತೆರೆಯಬಹುದಾಗಿದೆ. ಇದಕ್ಕಾಗಿ ಒಬ್ಬರು ವೈದ್ಯರು, ಒಬ್ಬರು ಶುಶ್ರೂಷಕರು/ಎ.ಎನ್.ಎಂ.ಗಳು, ಒಬ್ಬರು ಸಹಾಯಕರ ಅವಶ್ಯಕತೆ ಇರುತ್ತದೆ. ಈ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಬಹುದಾಗಿದ್ದು, ಈ ಔಷಧಾಲಯವನ್ನು ಪ್ರಾರಂಭಿಸಲು ಈ ಕೆಳಕಂಡಂತೆ ವೆಚ್ಚವಾಗಲಿದೆ.

| ಕ್ರಮ ಸಂಖ್ಯೆ | ವಿವರ | ಮೊತ್ತ |
|---|---|---|
| 1 | ಪೀಠೋಪಕರಣಗಳು | 10,00,000/- |
| 2 | ಸಲಕರಣೆಗಳು | 5,00,000/- |
| 3 | ವಿಭಾಗಗಳನ್ನು ನಿರ್ಮಿಸಲು | 1,00,000/- |
| 4 | ಔಷಧಿ ಇತ್ಯಾದಿ ಪ್ರತಿ ಮಾಹೆ ರೂ.50,000/- ರಂತೆ | 6,00,000/- |
| 5 | ವೈದ್ಯರ ವೇತನ ಪ್ರತಿ ಮಾಹೆ ರೂ.25,000/- ರಂತೆ | 3,00,000/- |
| 6 | ಶುಶ್ರೂಷಕಿ/ಎ.ಎನ್.ಎಂ. ವೇತನ ಪ್ರತಿ ಮಾಹೆ ರೂ.8000/- ರಂತೆ | 96,000/- |
| 7 | ಸಹಾಯಕರ ವೇತನ ಪ್ರತಿ ಮಾಹೆ ರೂ.5000/- ರಂತೆ | 60,000/- |
| | ಒಟ್ಟು | **26,56,000/-** |

ಕ್ರಮ ಸಂಖ್ಯೆ.1 ರಲ್ಲಿ ವಿವರಿಸಿರುವ, ಪೀಠೋಪಕರಣಗಳ ಖರೀದಿಗಾಗಿ ವೆಚ್ಚ ರೂ.10,00,000/- (ಹತ್ತು ಲಕ್ಷ ರೂ. ಮಾತ್ರ) 2 ರಲ್ಲಿ ವಿವರಿಸಿರುವ, ಸಲಕರಣೆಗಳ ಖರೀದಿಗಾಗಿ ರೂ.5,00,000/- (ಐದು ಲಕ್ಷ ರೂ ಮಾತ್ರ) ಮತ್ತು 3 ರಲ್ಲಿ ವಿಭಾಗಗಳನ್ನು ನಿರ್ಮಿಸಲು ವೆಚ್ಚ ರೂ.1,00,000/- (ಒಂದು ಲಕ್ಷ ರೂ ಮಾತ್ರ) ಒಟ್ಟು ಮೊತ್ತ ರೂ.16,00,000/- (ಹದಿನಾರು ಲಕ್ಷ ರೂ ಮಾತ್ರ) ಲಕ್ಷಗಳು, ಈ ಮೊತ್ತವು ಒಂದು ಬಾರಿಯ ಬಂಡವಾಳ ಆಗಿರುತ್ತದೆ.

ಉಳಿದಂತೆ ಔಷಧಿ ವೆಚ್ಚ ಮತ್ತು ಸಿಬ್ಬಂದಿಗಳ ವೇತನಗಳಿಗೆ ವಾರ್ಷಿಕ ವೆಚ್ಚ ರೂ.10,56,000/- (ಹತ್ತು ಲಕ್ಷದ ಐವತ್ತಾರು ಸಾವಿರ ರೂ ಮಾತ್ರ) ಲಕ್ಷಗಳಂತೆ ವೆಚ್ಚವಾಗುತ್ತದೆ.

**ಒಟ್ಟು ಮೊತ್ತ ರೂ.26,56,000/-** (ಇಪತ್ತಾರು ಲಕ್ಷದ ಐವತ್ತಾರು ಸಾವಿರ ರೂ ಮಾತ್ರ) ಗಳು **ವೆಚ್ಚವಾಗಲಿದ್ದು, ಈ ಮೊತ್ತವನ್ನು ಆಯವ್ಯಯದಲ್ಲಿ ಸೇರಿಸಿ ಮೀಸಲಿಡಲು ಹಾಗೂ ಔಷಧಾಲಯಕ್ಕೆ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ**

(sd) Shashikumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನೇಮಿಸಿಕೊಳ್ಳಲು ಹಾಗೂ ಸಲಕರಣಿ/ಸಾಮಗ್ರಿಗಳನ್ನು ಕರ್ನಾಟಕ ಪಾರದರ್ಶಕ ಕಾಯ್ದೆ ನಿಯಮಾವಳಿಯಂತೆ ಖರೀದಿಸಬೇಕಾಗಿದ್ದು, ನಿರ್ಣಯಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

(ಡಾ|| ಕೆ.ಎನ್. ಗೀತಾ ಶಶಿಕುಮಾರ್)
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 19-09-2011 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಕಾರ್ಯಪಾಲಕ ಅಭಿಯಂತರರು-2 |
| ಡಾ॥ ಎಸ್. ರಾಜು | ಸದಸ್ಯರು | ಆರೋಗ್ಯಾಧಿಕಾರಿ (ಎಂ.ಸಿ.ಹೆಚ್./ಎಫ್.ಡಬ್ಲು. (ಪಶ್ಚಿಮ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಆರೋಗ್ಯಾಧಿಕಾರಿ (ತಾ.ಮ.ಕು.ಕ.) |
| ಎನ್. ವೀರಣ್ಣ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ತಾ.ಮ.ಕು.ಕ.) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | ಅಧೀಕ್ಷಕರು (ಹೆಚ್.ಎಸ್.ಆರ್.ಹೆಚ್.) |
| ಎಂ. ಶ್ರೀನಿವಾಸ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1. **ವಿಷಯದ ಸಂಖ್ಯೆ: ಸಾಆಸ್ಥಾಸ/18/2011-12:**

ಆಯುಕ್ತರ ದಿನಾಂಕ: 27-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಟಿ. ರಾಜ (ಆಟೋ ರಾಜ), ಸಂಸ್ಥಾಪಕರು, ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಬೆಂಗಳೂರು ರವರು ತಮ್ಮ ಸಂಸ್ಥೆಯ ವತಿಯಿಂದ ಸುಮಾರು 400 ರಿಂದ 450 ಜನ ಅನಾಥರುಗಳನ್ನು ಸಾಕುತ್ತಿದ್ದು, ಇಂತಹ ಅನಾಥರುಗಳನ್ನು ಪೋಲೀಸರು, 108 ಆಂಬ್ಯುಲೆನ್ಸ್ ಮತ್ತು ಸರ್ಕಾರಿ ಆಸ್ಪತ್ರೆಯವರು ವಿವಿಧ ರಸ್ತೆಗಳಲ್ಲಿ ಬಿದ್ದಿರುವವರನ್ನು ಹಾಗೂ ಬೀದಿಯಲ್ಲಿ ತಿರುಗುವ ಭಿಕ್ಷುಕರನ್ನು ಕರೆ ತಂದು ಮೇಲ್ಕಂಡ ಅನಾಥಶ್ರಮದಲ್ಲಿ ಹಾಕಿ ಹೋಗುತ್ತಿದ್ದು, ಇವರುಗಳು ಅನೇಕ ಖಾಯಿಲೆ ರುಜುನಗಳಿಂದ ನರಳಿ ಸಾಯುತ್ತಾರೆ. ಇಂತಹವರನ್ನು ಸುಡಲು ಅಥವಾ ಮಣ್ಣು ಮಾಡಲು ಬೆಂಗಳೂರು ನಗರದ ವಿವಿಧ ವಿದ್ಯುತ್ ಚಿತಾಗಾರಗಳಿಗೆ ತೆರಳಿದಾಗ ಅಲ್ಲಿನ ಅಧಿಕಾರಿ/ಸಿಬ್ಬಂದಿಗಳು ಸೂಕ್ತ ಪ್ರಾತಿನಿಧ್ಯ ನೀಡದೇ ಇರುವುದರಿಂದ ತೊಂದರೆಯಾಗುತ್ತಿರುವುದಾಗಿ ಹಾಗೂ ಯಾವುದೇ ಶುಲ್ಕವನ್ನು ಪಡೆಯದೇ (ಪ್ರಸ್ತುತ ರೂ.200.00 ಗಳನ್ನು ವಿಧಿಸಲಾಗುತ್ತಿದೆ) ಬೆಂಗಳೂರು ಮಹಾನಗರ ಪಾಲಿಕೆಯ/ಸರ್ಕಾರದ ವತಿಯಿಂದ ಉಚಿತವಾಗಿ ಶವ ಸಂಸ್ಕಾರ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಶ್ರೀ.ಟಿ. ರಾಜ ಅಲಿಯಾಸ್ ಆಟೋ ರಾಜ, ಸಂಸ್ಥಾಪಕರು ಇವರು ತಮ್ಮ ಸಂಸ್ಥೆಯ ಕಾರ್ಯ ವೈಖರಿಯ ಬಗ್ಗೆ ಅನೇಕ ಜನಪ್ರಿಯ ದಿನಪತ್ರಿಕೆ, ವಾರ ಪತ್ರಿಕ ಮತ್ತು ಮಾಸ ಪತ್ರಿಕೆಗಳಲ್ಲಿನ ವರದಿಗಳು ಮತ್ತು ಅನೇಕ ದೂರದರ್ಶನ ಮಾಧ್ಯಮಗಳಲ್ಲಿ ಪ್ರಸಾರವಾಗಿರುತ್ತದೆ. ಇವರು ತಮ್ಮ ಸಂಸ್ಥೆಯ ವತಿಯಿಂದ ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯು ನಿಜಕ್ಕೂ ಶ್ಲಾಘನೀಯವಾಗಿದೆ. ಇಂತಹ ಸಾಮಾಜಿಕ ಹಿತಾಸಕ್ತಿಯುಳ್ಳ ಕೆಲಸಗಳನ್ನು ಮಾಡುತ್ತಿರುವ ಇಂತಹ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಸಂಸ್ಥಾಪಕರಾದ ಶ್ರೀ.ಟಿ. ರಾಜ (ಆಟೋ ರಾಜ), ಇವರಿಗೆ ಆದ್ಯತೆ ಮೇಲೆ ಯಾವುದೇ ಶುಲ್ಕವನ್ನು ಪಡೆಯದೇ ಅನಾಥ ಶವಗಳ ಸಂಸ್ಕಾರ ಮಾಡಲು ಅನುಮತಿ ನೀಡುವ ಬಗ್ಗೆ ತೀರ್ಮಾನಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 27-07-2011ರ ಆಯುಕ್ತರ ಟಿಪ್ಪಣಿ ಪರಿಶೀಲಿಸಲಾಯಿತು. ಉಪ ಆಯುಕ್ತರು (ಆರೋಗ್ಯ) ರವರು ವೈದ್ಯರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುವ ಸಂಬಂಧ ಕಡತವನ್ನು ಹಿಂದಿರಿಗಿಸಲಾಗಿದೆ.**

Geetha Shashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**2. ವಿಷಯದ ಸಂಖ್ಯೆ: ಸಾಆಸ್ಥಾಸ/23/2011-12:**

ಸಂಖ್ಯೆ: ಮು.ಆ./ಪಿಆರ್/500/11-12, ದಿನಾಂಕ: 08-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ: ಉತ್ತಾನ ಚಾರಿಟಬಲ್ ಟ್ರಸ್ಟ್, ಇಂದಿರಾ 534, ರಾಜೇಶ್ವರಿ ದೇವಸ್ಥಾನ ಬಳಿ, ರಾಜೇಶ್ವರಿ ನಗರ, ಬೆಂಗಳೂರು-98 ರವರು ಇವರ ಸಂಸ್ಥೆಯ ವತಿಯಿಂದ ಕಂಡಿಕೆ-6 ರಿಂದ 10 ರಲ್ಲಿ ವಿವರಿಸಿರುವ ರೀತ್ಯಾ ಟೆಲಿಮೆಡಿಸನ್ ಮೂಲಕ ಸಾರ್ವಜನಿಕರಿಗೆ ಉಚಿತವಾಗಿ ಚಿಕಿತ್ಸಾ ಸೇವೆಯನ್ನು ನೀಡಲಾಗುವುದೆಂದು ಇದಕ್ಕಾಗಿ ಬೃಬೆಂ.ಮ.ಪಾಲಿಕೆಯ ಆಸ್ಪತ್ರೆಗಳಲ್ಲಿ ಕಿಯೋಸ್ಕಗಳನ್ನು ಸಹ ಸ್ಥಾಪಿಸಲಾಗುವುದೆಂದು, ಇದಕ್ಕಾಗಿ ಬೇಕಾಗಿರುವ ಅವಶ್ಯಕ ಹಣವನ್ನು ಸದರಿ ಸಂಸ್ಥೆಯಿಂದ ಮತ್ತು ದಾನಿಗಳಿಂದ ಪಡೆದು ನೀಡಲಾಗುವುದೆಂದು, ಈ ಚಿಕಿತ್ಸಾ ಸೇವೆಯನ್ನು **ಪಾಲಿಕೆಯ ಆರೋಗ್ಯ ಕೇಂದ್ರಗಳಲ್ಲಿ** (1) ಬನಶಂಕರಿ (2) ವಿದ್ಯಾಪೀಠ (3) ಜೆ.ಪಿ.ನಗರ (4) ಕೆ.ಎಸ್.ಲೇಔಟ್ (5) ಬಿಟಿಎಂ ಲೇಔಟ್ (6) ತಾವರೆಕೆರೆ (7) ಅವಲಹಳ್ಳಿ (8) ಬಿನ್ನಿಪೇಟೆ (9) ನಾಯಂಡನಹಳ್ಳಿ (10) ಚಂದ್ರಾಲೇಔಟ್ (11) ಚಾಮರಾಜಪೇಟೆ (12) ಗೋವಿಂದರಾಜನಗರ (13) ಬೊಮ್ಮನಹಳ್ಳಿ ಮತ್ತು **ನಗರ ಕುಟುಂಬ ಕಲ್ಯಾಣ ಕೇಂದ್ರಗಳಾದ** (1) ಬನಶಂಕರಿ (2) ಬಸವನಗುಡಿ (3) ವಿ.ವಿ.ಪುರಂ (4) ಜಯನಗರ (5) ವಿಜಯನಗರ (6) ವಿಲ್ಸನ್ ಗಾರ್ಡನ್ ಗಳಲ್ಲಿ ಒಟ್ಟು 19 ಆಸ್ಪತ್ರೆಗಳಲ್ಲಿ ಮೊದಲಿಗೆ ಪ್ರಾರಂಭಿಸಲು ಮತ್ತು ಈ ಯೋಜನೆಯನ್ನು ಒಂದು ವರ್ಷದವರೆಗೆ ಅನುಷ್ಠಾನಗೊಳಿಸುವವರೆಗೂ ತರಬೇತಿ ಮತ್ತು ಉಪಕರಣಗಳ ದುರಸ್ಥಿ ಮತ್ತು ನಿರ್ವಹಣೆಯನ್ನು ಸಹ ನಿರ್ವಹಿಸುವುದಾಗಿಯೂ ಆಸ್ಪತ್ರೆಗಳಲ್ಲಿ ಸ್ಥಳಾವಕಾಶ ಮತ್ತು ಈ ಚಿಕಿತ್ಸೆಯನ್ನು ನೀಡಲು ಅನುಮತಿ ಕೋರಿರುತ್ತಾರೆ, ಇವರು ನೀಡುವ ಚಿಕಿತ್ಸಾ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಈ ಯೋಜನೆಯ ಪ್ರಮುಖ ಮುಖ್ಯಾಂಶಗಳು ಈ ಕೆಳಕಂಡಂತಿರುತ್ತದೆ (Kshema)**

1. Electronic health record (Patient registration, Vital signs, symptoms & history diagnosis & Prescription.
2. Automated capture of vital signs Viz, BP,ECG SP02 & temperature
3. Automatic defechan of malaria parositc porosity & Tuberculosis Bacili
4. Integevation of Audio/Video capabilities

**ಈ ಯೋಜನೆಯ ಅನುಷ್ಠಾನದಿಂದ ಆಗುವ ಉಪಯೋಗಗಳು**

1. Doctors Automted Process
2. Optimized productivity
3. Enhanced Patient experience
4. Increases time for diagnosis

**Utthana ಸಂಸ್ಥೆಯವರು ಈ ಯೋಜನೆಯ ಅನುಷ್ಟಾನಕ್ಕೆ ಸಂಬಂಧಪಟ್ಟಂತೆ**

1. Executive Summary
2. Proposed Project:- Kshema Kiosk- Unfiled Health care Management
3. Proposed Project:- Kshema Software
4. Kshmema Kiosk-Benefits and envisaged
5. Im pilementation
6. Deliveries
7. Trining & Support
8. Requirement from BBMP

ಮೆ: ಉತ್ತನ ಚಾರಿಟಬಲ್ ಟ್ರಸ್ಟ್ ರವರು ಪ್ರಾರಂಭಿಸುವ ಮೇಲ್ಕಂಡಂತೆ ವಿವರಿಸಿರುವ ಈ ಯೋಜನೆಯ ಬಗ್ಗೆ ಪಾಲಿಕೆಯ ಯೋಜನಾ ಸಮನ್ವಯಾಧಿಕಾರಿಗಳು (ಆರ್.ಸಿ.ಹೆಚ್) ಮತ್ತು ಮುಖ್ಯ ಆರೋಗ್ಯಾಧಿಕಾರಿಗಳು ಸಹಮತಿ ವ್ಯಕ್ತಪಡಿಸಿದ್ದು, ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯಲ್ಲಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವ ಕಾರಣ ಈ ಯೋಜನೆಯು ಸಾರ್ವಜನಿಕರಿಗೆ ಸಹಕಾರಿಯಾಗುತ್ತದೆಂದು, ಸಾರ್ವಜನಿಕರಿಂದ ಮತ್ತು ಪಾಲಿಕೆಯಿಂದ ಯಾವುದೇ ಆರ್ಥಿಕ ನೆರವು ಅಪೇಕ್ಷಿಸದೇ ಉಚಿತವಾಗಿ ಟೆಲಿಮೆಡಿಸನ್ ಸೌಲಭ್ಯ ಒದಗಿಸುವ

ಮೆ: ಉತ್ತಾನ ಚಾರಿಟಬಲ್ ಟ್ರಸ್ಟ್ ರವರಿಗೆ ಪಾರಂಭಿಕವಾಗಿ 19 ಆರೋಗ್ಯ ಕೇಂದ್ರಗಳಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಬಹುದು ಮತ್ತು ಈ ಚಿಕಿತ್ಸಾ ಸೇವೆಯು ಸಮರ್ಪಕವಾಗಿ ಸಾರ್ವಜನಿಕರಿಗೆ ದೊರೆಯುತ್ತಿರುವ ಬಗ್ಗೆ ಪಾಲಿಕೆಯ ವೈದ್ಯರುಗಳು ಪೂರ್ಣ ನಿಗಾ ಇದಬೇಕಾಗಿರುತ್ತದೆ, ಮೆ: ಉತ್ತನ ಚಾರಿಟಬಲ್ ಟ್ರಸ್ಟ್ ಬೆಂಗಳೂರು ರವರಿಗೆ ಪಾಲಿಕೆಯ ಆಸ್ಪತ್ರೆಗಳಲ್ಲಿ ಟೆಲಿಮೆಡಿಸನ್ ಚಿಕಿತ್ಸಾ ಸೌಲಭ್ಯ ನೀಡಲು ಅನುಮತಿ ನೀಡುವ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 08-08-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**3. ವಿಷಯದ ಸಂಖ್ಯೆ: ಸಾಆಸ್ಥಾಸ/29/2011-12:**

ಸಂಖ್ಯೆ ಆ/ಪಿಎಸ್ಆರ್/ /2011-12, ದಿನಾಂಕ: 29-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರಿನ ಸರ್ವೆ ನಂ.155ರ ಉತ್ತರ ಭಾಗದಲ್ಲಿ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳನ್ನು ನಿರ್ಮಿಸಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆದು, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಹೀಗೆ ಶೇಖರಣೆಯಾದ ಘನತ್ಯಾಜ್ಯವನ್ನು 10 ಗಾಲಿಗಳ ಮುಖಾಂತರ ಟೆರ್ರಾಫರ್ಮಾ ಸಂಸ್ಥೆಗೆ ಸಾಗಿಸಲು ಟೆಂಡರ್ ಅಧಿಸೂಚನೆ ಸಂ.CE/SWM/Tend/03/10-11, ದಿನಾಂಕ: 13-04-2010 ರಂದು ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸಲಾಗಿತ್ತು.

East Zone (ಮಂಡೂರಿನ ಸರ್ವೆ ನಂ.155 ರ ಉತ್ತರ ಭಾಗದ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳಿಂದ) ದೊಡ್ಡಬಳ್ಳಾಪುರದ ಟೆರ್ರಾಫರ್ಮಾ ಸಂಸ್ಥೆಗೆ 10 ಗಾಲಿಗಳ ಟ್ರಕ್ಕುಗಳ ಮೂಲಕ ಘನತ್ಯಾಜ್ಯ ವಸ್ತುಗಳ ಸಾಗಣೆ ಮಾಡುವ ಕಾರ್ಯದ ಕಾರ್ಯಾದೇಶದ ಅವಧಿಯು ಮುಕ್ತಾಯಗೊಂಡಿರುತ್ತದೆ.

ಮಂಡೂರಿನ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ಶೇಖರಣೆಯಾಗಿರುವ ಘನತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಟೆರ್ರಾಫರ್ಮಾ ಸಂಸ್ಥೆಗೆ ಸಾಗಿಸಲು 2011-12 ನೇ ಸಾಲಿಗೆ ಟೆಂಡರ್ ಆಹ್ವಾನಿಸಲು ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಸಲ್ಲಿಸಲಾಗಿ, ಟಿಪ್ಪಣಿಯು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ವಿಷಯ ಸಂ.ಸಾಆಸ್ಥಾಸ/9/11-12, ದಿನಾಂಕ: 11-07-2011 ರಂದು ಅನುಮೋದನೆಗೊಂಡಿರುತ್ತದೆ. ಸದರಿ ಆರೋಗ್ಯ ಸ್ಥಾಯಿ ಸಮಿತಿಯ ನಿರ್ಣಯವನ್ನು ಪಾಲಿಕೆಯ ಕೌನ್ಸಿಲ್ ಸಭೆಗೆ ಟಿಪ್ಪಣಿ ಸಲ್ಲಿಸಲಾಗಿರುತ್ತದೆ.

ಮಂಡೂರಿನ ಸರ್ವೆ ನಂ.155 ರ ಉತ್ತರಭಾಗದ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ಸುಮಾರು 120 ಲಾರಿಗಳು ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು, ಸದರಿ ಲ್ಯಾಂಡ್‌ಫಿಲ್‌ಗಳಿಂದ 10 ಗಾಲಿಗಳ ಟ್ರಕ್‌ಗಳ ಮುಖಾಂತರ ತ್ಯಾಜ್ಯವನ್ನು ಸ್ಥಳಾಂತರಿಸುವ ಕಾರ್ಯ ಸ್ಥಗಿತಗೊಂಡಲ್ಲಿ ಲ್ಯಾಂಡ್‌ಫಿಲ್ ಪೂರ್ಣವಾಗಿ ತ್ಯಾಜ್ಯದಿಂದ ತುಂಬಿ ಹೋಗುವ ಸಾಧ್ಯತೆಯಿದ್ದು ಸದರಿ ಕಾರ್ಯವನ್ನು ಮುಂದುವರೆಸಲಾಗಿರುತ್ತದೆ.

ಸದರಿ ಕಾಮಗಾರಿಯ ಈ ಹಿಂದಿನ ಟೆಂಡರ್‌ನ ಕರಾರು ಒಪ್ಪಂದದಂತೆ ಕಾಮಗಾರಿಯನ್ನು ಮೂಲ ಒಪ್ಪಂದದ ದರದಲ್ಲಿಯೇ ಮುಂದುವರೆಸಲು ಮೂಲ ಟೆಂಡರ್ ಕರಾರು ಒಪ್ಪಂದದ ಟೆಂಡರ್ ಷರತ್ತು ಮತ್ತು ನಿಬಂಧನೆ 31.2 ಅವಕಾಶವಿರುತ್ತದೆ. (ಟೆಂಡರ್ ಷರತ್ತು ಮತ್ತು ನಿಬಂಧನೆ ಪ್ರತಿ ಲಗತ್ತಿಸಿದೆ).

ಮೆ||ಮಾತಾ ಓವರ್‌ಸೀಸ್ ಪ್ರೈ. ಲಿ. ರವರು ಮೂಲ ಒಪ್ಪಂದದ ದರದಲ್ಲಿಯೇ ಕಾಮಗಾರಿಯನ್ನು ಮುಂದುವರೆಸಲು ಒಪ್ಪಿರುತ್ತಾರೆ.

ಮೇಲೆ ತಿಳಿಸಿರುವ ಹಿನ್ನಲೆಯಲ್ಲಿ ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವ ಮೆ||ಮಾತಾ ಓವರ್‌ಸೀಸ್ ಪ್ರೈ. ಲಿ. ರವರ ವತಿಯಿಂದ ಮಂಡೂರಿನ ಸರ್ವೆ ನಂ.155 ರ ಉತ್ತರ ಭಾಗದ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಿಂದ ದೊಡ್ಡಬಳ್ಳಾಪುರದ ಟೆರ್ರಾಫರ್ಮಾ ಸಂಸ್ಥೆಗೆ 10 ಗಾಲಿಗಳ ಟ್ರಕ್ಕುಗಳ ಮೂಲಕ ಘನತ್ಯಾಜ್ಯ ವಸ್ತುಗಳ ಸಾಗಣೆ ಮಾಡುವ ಕಾರ್ಯವನ್ನು ಮುಂದುವರೆಸಲು 2011-12 ನೇ ಸಾಲಿಗೆ ಟೆಂಡರ್ ಆಹ್ವಾನಿಸಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಟೆಂಡರ್ ಅಂತಿಮಗೊಳಿಸಿ, ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡುವವರೆಗೆ ತ್ಯಾಜ್ಯ ಸಾಗಣೆ ಮಾಡುವ ಕಾರ್ಯವನ್ನು ಮುಂದುವರೆಸಲು ಅನುಮೋದನೆ ಹಾಗೂ ಸದರಿ ಕಾಮಗಾರಿಗೆ ಅವಶ್ಯವಿರುವ ಮೊತ್ತವನ್ನು 2010-11 ನೇ ಸಾಲಿನ 13ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಭರಿಸಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 29-08-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**4. ವಿಷಯದ ಸಂಖ್ಯೆ: ಸಾಆಸ್ಥಾಸ/30/2011-12:**

ಸಂಖ್ಯೆ: ಸಿದ್ದಯ್ಯ ರೆಫರೆಲ್ ಆಸ್ಪತ್ರೆ/ಪಿಆರ್/1404/11-12, ದಿನಾಂಕ: 07-09-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ಶಾಂತಿನಗರ ಹೆರಿಗೆ ಆಸ್ಪತ್ರೆ (ವಾರ್ಡ್-117) ಯ ಕಟ್ಟಡದಲ್ಲಿ ಖಾಸಗಿ ಸಂಸ್ಥೆಗಳಾದ ವಿ.ಎಸ್.ಡೆಂಟಲ್ ಕಾಲೇಜು ಹಾಗೂ ಲಯನ್ಸ್ ಸಂಸ್ಥೆ ಜೆ.ಪಿ. ನಗರ ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೊಂದಿಗೆ ಜಂಟಿ ಸಹಭಾಗಿತ್ವದಲ್ಲಿ ಡೆಂಟಲ್ ಕ್ಲಿನಿಕ್ ಪ್ರಾರಂಭಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

**ಒಪ್ಪಂದದ ಕರಾರು ಈ ಕೆಳಕಂಡಂತೆ ಇರುತ್ತದೆ:**

ಬೆಂಗಳೂರು ನಗರ ಜಿಲ್ಲೆ, ಶಾಂತಿನಗರ ವಿಧಾನ ಸಭಾ ಕ್ಷೇತ್ರ, ವಾರ್ಡ್ ನಂ.117 ಶಾಂತಿನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವೈದ್ಯಕೀಯ ಇಲಾಖೆ ವ್ಯಾಪ್ತಿಯ ಶಾಂತಿನಗರ ಹೆರಿಗೆ ಆಸ್ಪತ್ರೆಯ ಕಟ್ಟಡದ ಒಂದು ಕೊಠಡಿಯಲ್ಲಿ ಡೆಂಟಲ್ ಕ್ಲಿನಿಕ್‌ನ್ನು ಪ್ರಾರಂಭಿಸಿ ವಾರದಲ್ಲಿ ಸೋಮವಾರ, ಗುರುವಾರ ಮತ್ತು ಶುಕ್ರವಾರಗಳಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಾರ್ವಜನಿಕರಿಗೆ ಸಂಪೂರ್ಣ ಉಚಿತವಾಗಿ ದಂತ ಚಿಕಿತ್ಸೆ ಸೇವಾ ಸೌಲಭ್ಯವನ್ನು ನೀಡುವುದು ಹಾಗೂ ರೋಗಿಗಳ ಸಂಖ್ಯೆ ಹೆಚ್ಚಾದಲ್ಲಿ ವಾರದಲ್ಲಿ 5 ದಿನಗಳು ಸೇವೆಗಳನ್ನು ಒದಗಿಸುವ ಸಂಬಂಧ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, "ದಿ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಲಯನ್ಸ್ ಕ್ಲಬ್" ನಂ.5, 1ನೇ ಕ್ರಾಸ್, ಗುಪ್ತ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560030 ಹಾಗೂ ಒಕ್ಕಲಿಗರ ಸಂಘ ದಂತ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು-560004, ಇವರ ಸಹಭಾಗಿತ್ವದಲ್ಲಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಲು ಡಿಸ್ಟ್ರಿಕ್ ಛೇರ್‌ಪರ್ಸನ್ – ವುಮೆನ್ಸ್ ಅಂಡ್ ಚೈಲ್ಡ್ ವೆಲ್‌ಫೇರ್ "ದಿ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಲಯನ್ಸ್ ಕ್ಲಬ್" ರವರು ಮೊದಲನೇ ಪಕ್ಷದಾರರು ಎಂದು ಕರೆಯಲಾಗಿದೆ ಮತ್ತು "ಪ್ರಾಂಶುಪಾಲರು, ಒಕ್ಕಲಿಗರ ಸಂಘ ದಂತ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯವರು" ಎರಡನೇಯ ಪಕ್ಷದಾರರು ಎಂದು ಕರೆಯಲಾಗಿದೆ ಹಾಗೂ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರು ಮೂರನೇಯ ಪಕ್ಷದಾರರು ಎಂದು ಕರೆಯಲಾಗಿದೆ. ಇವರುಗಳ ಮಧ್ಯೆ ಈ ಕೆಳಗೆ ತಿಳಿಸಿರುವಂತೆ, ಒಡಂಬಡಿಕೆಯಾಗಿರುತ್ತದೆ.

**ಮೊದಲನೇಯ ಪಕ್ಷಕಾರರಾದ "ದಿ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಲಯನ್ಸ್ ಕ್ಲಬ್"** ರವರು ಈ ಕೆಳಕಂಡಂತೆ ಸೇವೆಗಳನ್ನು ಒದಗಿಸಲು ಒಪ್ಪಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ಹೆರಿಗೆ ಆಸ್ಪತ್ರೆಯಲ್ಲಿ ಉತ್ತಮ ಡೆಂಟಲ್ ಕ್ಲಿನಿಕ್‌ನ್ನು ಪ್ರಾರಂಭಿಸಿ **ಸಾರ್ವಜನಿಕರಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಲು** ಛೇರಪರ್ಸನ್ – ವುಮೆನ್ಸ್ ಅಂಡ್ ಚೈಲ್ಡ್ ವೆಲ್‌ಫೇರ್ **"ದಿ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಲಯನ್ಸ್ ಕ್ಲಬ್"** ರವರು ಒಪ್ಪಿರುತ್ತಾರೆ.

1. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಗೆ ದಂತ ಚಿಕಿತ್ಸೆಗಾಗಿ ಬರುವ **ಸಾರ್ವಜನಿಕರಿಗೆ ಸಂಪೂರ್ಣ ಉಚಿತವಾಗಿ ಸೇವೆ ಹಾಗೂ ಔಷಧಿಗಳನ್ನು ಒದಗಿಸಲಾಗುತ್ತದೆ**.

**ಎರಡನೇಯ ಪಕ್ಷಕಾರರಾದ "ಪ್ರಾಂಶುಪಾಲರು, ಒಕ್ಕಲಿಗರ ಸಂಘ ದಂತ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯವರು"** ರವರು ಈ ಕೆಳಕಂಡಂತೆ ಸೇವೆಗಳನ್ನು ಒದಗಿಸಲು ಒಪ್ಪಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ಹೆರಿಗೆ ಆಸ್ಪತ್ರೆಯಲ್ಲಿ ಉತ್ತಮ ಡೆಂಟಲ್ ಕ್ಲಿನಿಕ್‌ನ್ನು ಪ್ರಾರಂಭಿಸಿ ಸಾರ್ವಜನಿಕರಿಗೆ ಉಚಿತವಾಗಿ ಸೇವಾ ಸೌಲಭ್ಯವನ್ನು ಒದಗಿಸಲು **"ಪ್ರಾಂಶುಪಾಲರು, ಒಕ್ಕಲಿಗರ ಸಂಘ ದಂತ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯವರು"** ಒಪ್ಪಿರುತ್ತಾರೆ.

1. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಗೆ ದಂತ ಚಿಕಿತ್ಸೆಗಾಗಿ ಬರುವ ಸಾರ್ವಜನಿಕರಿಗೆ ಸಂಪೂರ್ಣ ಉಚಿತವಾಗಿ ಸೇವೆ ಒದಗಿಸುವ ಸಂಬಂಧ ಕನಿಷ್ಠ 3 ವರ್ಷಗಳ ಅನುಭವವುಳ್ಳ ನುರಿತ ದಂತ ವೈದ್ಯರು ಹಾಗೂ ಸಹಾಯಕ ದಂತ ವೈದ್ಯರ ಸೇವೆಯನ್ನು ಉಚಿತವಾಗಿ ಒದಗಿಸಲಾಗುತ್ತದೆ.
2. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಗೆ ಕ್ಷ-ಕಿರಣ ಉಪಕರಣ (ಎಕ್ಸರೇ ಉಪಕರಣ) ವನ್ನು ಒದಗಿಸಲಾಗುತ್ತದೆ.
3. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಗೆ ಡೆಂಟಲ್ ಚಿಕಿತ್ಸೆಗಾಗಿ ಬೇಕಾಗುವ ಆಕ್ಸಿಸರಿಸ್ ಹಾಗೂ ಇತರೇ ಪ್ರಮುಖ ಸಲಕರಣೆಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ.

4. ಹಲ್ಲುಗಳ ಲೋಕಲ್ ಅನೆಸ್ಥಿಷಿಯಾ ದಲ್ಲಿ ತೆಗೆಯುವುದು.
5. ಹುಳುಕು ಹಲ್ಲುಗಳ ರಂಧ್ರಗಳನ್ನು ಮುಚ್ಚಲು ಸಿಲ್ವರ್ ಅಮಾಲ್ಗಮ್, ಜಿಂಕ್ ಆಕ್ಸೈಡ್ ಮತ್ತು ಕ್ಲಾಸ್ ಲೋನೊ ಮಾರ್ ನಲ್ಲಿ ತುಂಬುವುದು.
6. RPD (Removable Partial denture).
7. ರೂಟ್ ಕೆನಾಲ್ ಟ್ರೀಟ್‌ಮೆಂಟ್ ಅನ್ನು ವಿ.ಎಸ್. ದಂತ ಮಹಾ ವಿದ್ಯಾಲಯದಲ್ಲಿ 25% ರಿಯಾಯಿತಿಯಲ್ಲಿ ಒದಗಿಸಲಾಗುವುದು.

**ಮೂರನೇಯ ಪಕ್ಷಕಾರರಾದ ಬೃ.ಬೆಂ.ಮ.ಪಾಲಿಕೆಯು ಈ ಕೆಳಕಂಡಂತೆ ಸೇವೆಗಳನ್ನು ಒದಗಿಸಬೇಕಾಗಿರುತ್ತದೆ.**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ಹೆರಿಗೆ ಆಸ್ಪತ್ರೆಯಲ್ಲಿ ಒಂದು ಉನ್ನತ ದರ್ಜೆಯ ದಂತ ವೈದ್ಯಕೀಯ ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಅವಶ್ಯಕವಾದ ಆಸ್ಪತ್ರೆಯ ಕಟ್ಟಡದ ಒಂದು ಕೊಠಡಿ, ಸಿಬ್ಬಂದಿ ವರ್ಗ ಹಾಗೂ ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ನಗರ ಪಾಲಿಕೆಯ ವತಿಯಿಂದ ಈ ಸೇವೆಗಳನ್ನು ಒದಗಿಸಬೇಕಾಗಿರುತ್ತದೆ.

1. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಯ ಕಟ್ಟಡದ ಒಂದು ಕೊಠಡಿಯನ್ನು ದಂತ ಚಿಕಿತ್ಸೆ ಕ್ಲಿನಿಕ್ ಪ್ರಾರಂಭಿಸಲು ಒದಗಿಸಲಾಗುತ್ತದೆ.
2. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಗೆ ಪಾಲಿಕೆಯ ಖಾಯಂ ಸಿಬ್ಬಂದಿ ವರ್ಗದ ನಾಲ್ಕನೇ ದರ್ಜೆ ಒಬ್ಬ ನೌಕರರನ್ನು ಸೇವೆಗಾಗಿ ಒದಗಿಸಲಾಗುತ್ತದೆ.
3. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಗೆ ದಂತ ಚಿಕಿತ್ಸೆ ಕ್ಲಿನಿಕ್ ಕೊಠಡಿಗೆ ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಒದಗಿಸಲಾಗುತ್ತದೆ.
4. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಗೆ ಒದಗಿಸುವ ಎಲ್ಲಾ ಸೇವೆಗಳು ಉಚಿತವಾಗಿರುತ್ತದೆ.
5. ಈ ಒಡಂಬಡಿಕೆ ಅಡಿಯಲ್ಲಿ ಪ್ರಸ್ತುತ ಶಾಂತಿನಗರ ಹೆರಿಗೆ ಆಸ್ಪತ್ರೆಯ ಸೇವಾ ಶುಲ್ಕದ ಹಣವನ್ನು ಈ ಒಡಂಬಡಿಕೆ ಅಡಿಯಲ್ಲಿ ಉಪಯೋಗಿಸಲು ಬರುವುದಿಲ್ಲ. ಅದಕ್ಕಾಗಿ ಪ್ರತ್ಯೇಕ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವೈದ್ಯಕೀಯ ಇಲಾಖೆ ವ್ಯಾಪ್ತಿಯ ಶಾಂತಿನಗರ ಹೆರಿಗೆ ಆಸ್ಪತ್ರೆಯ ಕಟ್ಟಡದ ಒಂದು ಕೊಠಡಿಯಲ್ಲಿ ಡೆಂಟಲ್ ಕ್ಲಿನಿಕ್‌ನ್ನು ಈ ಪ್ರದೇಶದ ಸಾರ್ವಜನಿಕರಿಗಾಗಿ ಸೇವೆಯನ್ನು ನೀಡುವ ಸಂಬಂಧ ಖಾಸಗಿ ಏಜೆನ್ಸಿಗಳಾದ **"ದಿ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಆಫ್ ಲಯನ್ಸ್ ಕ್ಲಬ್"** ಮತ್ತು **ಪ್ರಾಶುಂಪಾಲರು, ಒಕ್ಕಲಿಗರ ಸಂಘ ದಂತ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯವರು"** ರವರು ಮುಂದೆ ಬಂದಿದ್ದು, ಈ ಸಂಸ್ಥೆಗಳೊಂದಿಗೆ ಪಾಲಿಕೆಯು ಸೇರಿದಂತೆ ಒಡಂಬಡಿಕೆ ಮಾಡಿಕೊಳ್ಳಲು ಇಚ್ಛಿಸಿದ್ದು, ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 07-09-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಯಾವುದೇ ಸಮಯದಲ್ಲಿ ಸದರಿ ಒಡಂಬಡಿಕೆಯನ್ನು ರದ್ದುಪಡಿಸುವ ಅಧಿಕಾರವನ್ನು ಬಿ.ಬಿ.ಎಂ.ಪಿ. ಕಾಯ್ದಿರಿಸಿಕೊಳ್ಳಲಾಗಿರುತ್ತದೆ ಎಂಬ ಷರತ್ತನ್ನು ವಿಧಿಸಲು ಸಮಿತಿಯು ತೀರ್ಮಾನಿಸಿದೆ.**

Geetha Shashi Kumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 05-09-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಡಾ|| ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಉಪ ಆಯುಕ್ತರು (ಆರೋಗ್ಯ) |
| ಶ್ರೀಮತಿ.ಎಸ್.ಶಶಿಕಲಾ ಕೃಷ್ಣೇಗೌಡ | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಡಾ|| ಎಸ್. ರಾಜು | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಎನ್. ವೀರಣ್ಣ | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | ಉಪ ಕಾನೂನುಕೋಶ ಅಧಿಕಾರಿ |
| ಎಸ್. ನಟರಾಜ್ | ಸದಸ್ಯರು | ಸಹಾಯಕ ಅಭಿಯಂತರರು (ಪರಿಸರಕೋಶ) |
| ಎಂ. ಶ್ರೀನಿವಾಸ್ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ) |
| | | ಅಧೀಕ್ಷಕರು (ಬನಶಂಕರಿ ರೆಫರಲ್ ಆಸ್ಪತ್ರೆ) |
| | | ಆರೋಗ್ಯ ವೈದ್ಯಾಧಿಕಾರಿ |
| | | ಸಹಾಯಕ ಶಸ್ತ್ರ ಚಿಕಿತ್ಸಕರು (ಎನ್.ಆರ್.ಕಾಲೋನಿ) |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

**1. ವಿಷಯದ ಸಂಖ್ಯೆ: ಸಾಆಸ್ಥಾಸ/18/2011-12:**

ಆಯುಕ್ತರ ದಿನಾಂಕ: 27-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಟಿ. ರಾಜ (ಆಟೋ ರಾಜ), ಸಂಸ್ಥಾಪಕರು, ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಬೆಂಗಳೂರು ರವರು ತಮ್ಮ ಸಂಸ್ಥೆಯ ವತಿಯಿಂದ ಸುಮಾರು 400 ರಿಂದ 450 ಜನ ಅನಾಥರುಗಳನ್ನು ಸಾಕುತ್ತಿದ್ದು, ಇಂತಹ ಅನಾಥರುಗಳನ್ನು ಪೋಲೀಸರು, 108 ಆಂಬ್ಯುಲೆನ್ ಮತ್ತು ಸರ್ಕಾರಿ ಆಸ್ಪತ್ರೆಯವರು ವಿವಿಧ ರಸ್ತೆಗಳಲ್ಲಿ ಬಿದ್ದಿರುವವರನ್ನು ಹಾಗೂ ಬೀದಿಯಲ್ಲಿ ತಿರುಗುವ ಭಿಕ್ಷುಕರನ್ನು ಕರೆ ತಂದು ಮೇಲ್ಕಂಡ ಅನಾಥಶ್ರಮದಲ್ಲಿ ಹಾಕಿ ಹೋಗುತ್ತಿದ್ದು, ಇವರುಗಳು ಅನೇಕ ಖಾಯಿಲೆ ರುಜುನಗಳಿಂದ ನರಳಿ ಸಾಯುತ್ತಾರೆ. ಇಂತಹವರನ್ನು ಸುಡಲು ಅಥವಾ ಮಣ್ಣು ಮಾಡಲು ಬೆಂಗಳೂರು ನಗರದ ವಿವಿಧ ವಿದ್ಯುತ್ ಚಿತಾಗಾರಗಳಿಗೆ ತೆರಳಿದಾಗ ಅಲ್ಲಿನ ಅಧಿಕಾರಿ/ಸಿಬ್ಬಂದಿಗಳು ಸೂಕ್ತ ಪ್ರಾತಿನಿಧ್ಯ ನೀಡದೇ ಇರುವುದರಿಂದ ತೊಂದರೆಯಾಗುತ್ತಿರುವುದಾಗಿ ಹಾಗೂ ಯಾವುದೇ ಶುಲ್ಕವನ್ನು ಪಡೆಯದೇ (ಪ್ರಸ್ತುತ ರೂ.200.00 ಗಳನ್ನು ವಿಧಿಸಲಾಗುತ್ತಿದೆ) ಬೆಂಗಳೂರು ಮಹಾನಗರ ಪಾಲಿಕೆಯ/ಸರ್ಕಾರದ ವತಿಯಿಂದ ಉಚಿತವಾಗಿ ಶವ ಸಂಸ್ಕಾರ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಶ್ರೀ.ಟಿ. ರಾಜ ಅಲಿಯಾಸ್ ಆಟೋ ರಾಜ, ಸಂಸ್ಥಾಪಕರು ಇವರು ತಮ್ಮ ಸಂಸ್ಥೆಯ ಕಾರ್ಯ ವೈಖರಿಯ ಬಗ್ಗೆ ಅನೇಕ ಜನಪ್ರಿಯ ದಿನಪತ್ರಿಕೆ, ವಾರ ಪತ್ರಿಕ ಮತ್ತು ಮಾಸ ಪತ್ರಿಕೆಗಳಲ್ಲಿನ ವರದಿಗಳು ಮತ್ತು ಅನೇಕ ದೂರದರ್ಶನ ಮಾಧ್ಯಮಗಳಲ್ಲಿ ಪ್ರಸಾರವಾಗಿರುತ್ತದೆ. ಇವರು ತಮ್ಮ ಸಂಸ್ಥೆಯ ವತಿಯಿಂದ ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯು ನಿಜಕ್ಕೂ ಶ್ಲಾಘನೀಯವಾಗಿದೆ. ಇಂತಹ ಸಾಮಾಜಿಕ ಹಿತಾಸಕ್ತಿಯುಳ್ಳ ಕೆಲಸಗಳನ್ನು ಮಾಡುತ್ತಿರುವ ಇಂತಹ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಸಂಸ್ಥಾಪಕರಾದ ಶ್ರೀ.ಟಿ. ರಾಜ (ಆಟೋ ರಾಜ), ಇವರಿಗೆ ಆದ್ಯತೆ ಮೇಲೆ ಯಾವುದೇ ಶುಲ್ಕವನ್ನು ಪಡೆಯದೇ ಅನಾಥ ಶವಗಳ ಸಂಸ್ಕಾರ ಮಾಡಲು ಅನುಮತಿ ನೀಡುವ ಬಗ್ಗೆ ತೀರ್ಮಾನಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## 2. ವಿಷಯದ ಸಂಖ್ಯೆ: ಸಾಆಸ್ಥಾಸ/19/2011-12:

ಸಂಖ್ಯೆ: ಮು.ಆ./ಪಿ.ಆರ್./468/2011-12, ದಿನಾಂಕ: 28-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಬಿ.ಎಸ್. ಸತ್ಯನಾರಾಯಣ (ಕಟ್ಟೆ ಸತ್ಯ) ಮಾಜಿ ಆಡಳಿತ ಪಕ್ಷದ ನಾಯಕರು, ಬೃಬೆಂ.ಮ.ಪಾಲಿಕೆರವರು ಮನವಿ ಪತ್ರವನ್ನು ಸಲ್ಲಿಸಿದ್ದು, ಪಾಲಿಕೆಯ ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಯು ಎಲ್ಲಾ ಸೌಲಭ್ಯಗಳನ್ನೊಳಗೊಂಡ ಸುಸಜ್ಜಿತ ಕಟ್ಟಡವನ್ನು ಹೊಂದಿದ್ದು, ವೈದ್ಯರಿಲ್ಲದ ಕಾರಣ ಈ ಆಸ್ಪತ್ರೆಗೆ ಮಹಿಳೆಯರು, ಗರ್ಭಿಣಿ ಸ್ತ್ರೀಯರು, ಮಕ್ಕಳು ಒಳ ಮತ್ತು ಹೊರ ರೋಗಿಗಳಾಗಿ ಬರುವುದು ಬಹಳಷ್ಟು ಕಡಿಮೆಯಾಗಿರುತ್ತದೆಂದು, ಬನಶಂಕರಿ ರೆಫರಲ್ ಆಸ್ಪತ್ರೆಯಿಂದ ವೈದ್ಯರನ್ನು ವಾರಕ್ಕೆ ಒಂದು ಅಥವಾ ಎರಡು ಬಾರಿ ಈ ಆಸ್ಪತ್ರೆಗೆ ನಿಯೋಜಿಸಲು ಕೋರಿದ್ದರು ಸಹ ವೈದ್ಯರ ಕೊರತೆಯಿಂದ ಈ ಆಸ್ಪತ್ರೆಗೆ ನಿಯೋಜಿಸಲು ಸಾಧ್ಯವಿರುವುದಿಲ್ಲ.

ದಿನಾಂಕ: 04-07-2011 ರಂದು ಮಾನ್ಯ ಆಯುಕ್ತರು ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಗೆ ಭೇಟಿ ನೀಡಿದ್ದು, ಈ ಪ್ರದೇಶದಲ್ಲಿರುವ ಸಾಕಷ್ಟು ಹೆಸರಾಂತ ಸ್ತ್ರೀ ರೋಗ ತಜ್ಞ ವೈದ್ಯರುಗಳು ಭೇಟಿ ಮಾಡಿದ್ದು, ಇವರ ಸೇವೆಯನ್ನು ಪಾಲಿಕೆಯ ಈ ಆಸ್ಪತ್ರೆಗೆ ಒದಗಿಸಲು ಸಿದ್ಧರಿರುವುದರಿಂದ ಇವರ ಸೇವೆಯನ್ನು ಬಳಸಿಕೊಳ್ಳಲು, ಖಾಸಗಿ ತಜ್ಞ ವೈದ್ಯರು ಸಲ್ಲಿಸಿರುವ ಕಾರ್ಯಚಟುವಟಿಕೆಯ ಮೇಲೆ ಕ್ರಮ ಕೈಗೊಂಡು, ಪ್ರಸ್ತಾಪಿತ ಹೆರಿಗೆ ಆಸ್ಪತ್ರೆಯನ್ನು ಉನ್ನತ ದರ್ಜೆಗೇರಿಸಲು, ಶ್ರೀ.ಬಿ.ಎಸ್.ಸತ್ಯನಾರಾಯಣ (ಕಟ್ಟೆ ಸತ್ಯ) ಪಾಲಿಕೆ ಸದಸ್ಯರು ಕೋರಿರುತ್ತಾರೆ.

ಅದರಂತೆ, ಮೆ:ಸೋಬೋಜಿನಿಯನ್ ಡಾಕ್ಟರ್ಸ್ ಪ್ರೈವೇಟ್ ಲಿಮಿಟೆಡ್ (SBOBGYN Doctor's Co. Pvt. Ltd.,) ರವರು ಪತ್ರವನ್ನು ಸಲ್ಲಿಸಿದ್ದು, ಈ ಸಂಸ್ಥೆಯ ವತಿಯಿಂದ, ಎಲ್ಲಾ ರೀತಿಯ ಸೌಲಭ್ಯಗಳನ್ನು ಅಂದರೆ ಹೆರಿಗೆಗೆ ಸಂಬಂಧಿಸಿದಂತೆ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ತಜ್ಞ ವೈದ್ಯರುಗಳಿಂದ, ಉತ್ತಮ ವೈದ್ಯಕೀಯ ಸೇವೆಯನ್ನು, ಪಾಲಿಕೆಯ ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಗೆ ನೀಡಲು ಒಪ್ಪಿಕೊಂಡಿರುತ್ತಾರೆ.

ಪಾಲಿಕೆಯ ಆಸ್ಪತ್ರೆಗಳಲ್ಲಿ ವೈದ್ಯರು ತೀವ್ರ ಕೊರತೆಯಿದ್ದು, ಸರ್ಕಾರದ ಆದೇಶದ ಮೇರೆಗೆ ಈಗಾಗಲೇ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸೇವೆಯನ್ನು ಪಾಲಿಕೆಯು ಹಿಂತಿರುಗಿಸಲು ಕ್ರಮವಹಿಸಲಾಗುತ್ತಿದೆ. ಈ ಕಾರಣ ಪಾಲಿಕೆಯಲ್ಲಿ ಅವಶ್ಯಕತೆಯಿರುವ ವೈದ್ಯರುಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ, ಮತ್ತು ಅಲ್ಲಿಯವರೆವಿಗೆ ತಾತ್ಕಾಲಿಕವಾಗಿ ವೈದ್ಯರುಗಳ ಸೇವೆಯನ್ನು ಗೌರವಧನದ ಆಧಾರದ ಮೇಲೆ ಪಡೆಯಲು ಕ್ರಮವಹಿಸಲಾಗುತ್ತಿದೆ.

ಪಾಲಿಕೆಯ ನರಸಿಂಹರಾಜ ಹೆರಿಗೆ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಆರೋಗ್ಯ ಚಿಕಿತ್ಸೆ ನೀಡುವ ಹಿತದೃಷ್ಟಿಯಿಂದ ಮೆ:ಸೋಬೋಜಿನಿಯನ್ ಡಾಕ್ಟರ್ಸ್ ಪ್ರೈವೇಟ್ ಲಿಮಿಟೆಡ್ (SBOBGYN Doctor's Co. Pvt. Ltd.,) ರವರಿಂದ ತಜ್ಞ ವೈದ್ಯರ ಸೇವೆಯನ್ನು ಬಳಸಿಕೊಳ್ಳಲು ಈ ಸಂಸ್ಥೆಯೊಂದಿಗೆ ಎಂ.ಓ.ಯು ಮಾಡಿಕೊಳ್ಳುವ ಸಂಬಂಧ ನಿರ್ಣಯಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 3. ವಿಷಯದ ಸಂಖ್ಯೆ: ಸಾಆಸ್ಥಾಸ/21/2011-12:

ಸಂಖ್ಯೆ: ಆ/ಪಿಎಸ್ಆರ್/ /11-12, ದಿನಾಂಕ: 03-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು MSW 2000 Rules ದಂತೆ ರೀತಿಯಲ್ಲಿ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಮಾನವ ಹಕ್ಕು ಆಯೋಗವು ಇಂಥಹ ಯೋಜನೆಗಳ ಅನುಷ್ಠಾನದ ಬಗ್ಗೆ ನಿರಂತರವಾಗಿ (ಉಸ್ತುವಾರಿ) ಮಾನಿಟರಿಂಗ್ ಮಾಡುತ್ತಿದೆ.

ಹಾಗೂ ಈ ಬಗ್ಗೆ ಕಾಲಕಾಲಕ್ಕೆ ಸದರಿ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಾಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಆಧುನಿಕ ತಂತ್ರಜ್ಞಾನಗಳನ್ನು ಪೌರ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಲು

ಅಳವಡಿಸಿಕೊಳ್ಳಲಾಗಿದೆ, ಇಂತಹ ಯೋಜನೆಗಳ ಪೈಕಿ ಈಗಾಗಲೇ ಮಂಡೂರಿನ ಸರ್ವೆ ನಂ.155, ರಲ್ಲಿ ಖಾಸಗಿ ಸಹ ಭಾಗತ್ವದೊಂದಿಗೆ ಮೆ||ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ರಿಕವರಿ ಲಿ., ಸಂಸ್ಥೆ ವತಿಯಿಂದ ತ್ಯಾಜ್ಯದಿಂದ 8 ಮೆಘಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದೆ.

ಹಾಲಿ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ದಿನ ಸುಮಾರು 3000 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಈ ಪ್ರಮಾಣವು ಮುಂಬರುವ ದಿನಗಳಲ್ಲಿ 5000 ಮೆಟ್ರಿಕ್ ಟನ್ ತಲುಪುವ ಸಾಧ್ಯತೆ ಇದ್ದು, ಸದರಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕಾದ ಅವಶ್ಯಕತೆಯಿರುತ್ತದೆ.

ಈ ನಿಟ್ಟಿನಲ್ಲಿ ಮತ್ತೊಂದು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ಅವಶ್ಯಕತೆಯಿರುತ್ತದೆ, ಆದ ಕಾರಣ ಸರ್ವೆ ನಂ.96 ಬಗ್ಗನದೊಡ್ಡಿಗ್ರಾಮ, ಆನೇಕಲ್ ತಾಲ್ಲೂಕು, ಇಲ್ಲಿ ಲಭ್ಯವಿರುವ 30 ಎಕರೆ ಪ್ರದೇಶದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಉದ್ಧೇಶಿಸಲಾಗಿದ್ದು, ಸದರಿ ಘಟಕವು DBOT ಆಧಾರದ ಯೋಜನೆಯಾಗಿದ್ದು, ಸದರಿ ಘಟಕ ಸ್ಥಾಪಿಸಲು ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ, ಘಟಕ ಸ್ಥಾಪಿಸಲು ಅವಶ್ಯವಿರುವ ಸ್ಥಳವನ್ನು ಲೀಸ್ ಆಧಾರದ ಮೇರೆಗೆ ನೀಡಬೇಕಾಗಿರುತ್ತದೆ.

ಸದರಿ ಘಟಕ ಸ್ಥಾಪಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲು ಅವಶ್ಯವಿರುವ ಟೆಂಡರ್ ದಸ್ತಾವೇಜನ್ನು ತಯಾರಿಸಲು ಸರ್ಕಾರಿ ಸ್ವಾಮ್ಯದ ಮೆ||ಐಡೆಕ್ ಸಂಸ್ಥೆರವರು ಒಪ್ಪಿದ್ದು, ಈ ಕಾರ್ಯಕ್ಕಾಗಿ ರೂ.4.95 ಲಕ್ಷ ಪಾವತಿಸಲು ಕೋರಿರುತ್ತಾರೆ.

ಈ ಎಲ್ಲಾ ವಿಷಯಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸುತ್ತಾ, ಈ ಕೆಳಕಂಡ ವಿಷಯಗಳಿಗೆ ಅನುಮೋದನೆ ಕೋರಿದೆ.

- ❖ ಸರ್ವೆ ನಂ.96 ಬಗ್ಗನದೊಡ್ಡಿ ಗ್ರಾಮ, ಆನೇಕಲ್ ತಾಲ್ಲೂಕು, ಇಲ್ಲಿ ಲಭ್ಯವಿರುವ 30 ಎಕರೆ ಪ್ರದೇಶದಲ್ಲಿ 1000 MTPD ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲು ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆಯಲು ಆದೇಶ.
- ❖ ಟೆಂಡರ್ ದಸ್ತಾವೇಜನ್ನು ತಯಾರಿಸಲು ಸರ್ಕಾರಿ ಸ್ವಾಮ್ಯದ ಮೆ||ಐಡೆಕ್ ಸಂಸ್ಥೆರವರಿಗೆ ರೂ.4.95 ಲಕ್ಷ ಪಾವತಿಸಲು ಅನುಮೋದನೆ.
- ❖ ಘಟಕ ಸ್ಥಾಪಿಸಲು ಅವಶ್ಯವಿರುವ ಸ್ಥಳವನ್ನು 20 ವರ್ಷ ಲೀಸ್ ಆಧಾರದ ಮೇರೆಗೆ ನೀಡಲು ಟೆಂಡರ್ ನಲ್ಲಿ ಷರತ್ತನ್ನು ಅಳವಡಿಸಲು ಅನುಮೋದನೆ.

ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 03-08-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**4. ವಿಷಯದ ಸಂಖ್ಯೆ: ಸಾಆಸ್ಥಾಸ/22/2011-12:**

ಆಯುಕ್ತರ ದಿನಾಂಕ: 08-08-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 03-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳ ನಾಗರೀಕರೊಂದಿಗೆ ಈ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ ಹಾಗೂ ದಿನಾಂಕ: 05-03-2011 ರಂದು ಮಾವಳ್ಳಿಪುರ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ ಪರಿವೀಕ್ಷಿಸಿದಾಗ ಸ್ಥಳೀಯರು ಮಂಡಿಸಿದ ಬೇಡಿಕೆಯಂತೆ, ಸ್ಥಳೀಯ ಯಲಹಂಕ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ.ವಿಶ್ವನಾಥ್ ರವರೊಂದಿಗೆ ಚರ್ಚಿಸಿ ಮಾವಳ್ಳಿಪುರ ಘನತ್ಯಾಜ್ಯ ಘಟಕದ ಸುತ್ತಲಿನ ಹಳ್ಳಿಗಳಲ್ಲಿ 13 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷಗಳ ಯೋಜನೆ ರೂಪಿಸಿ ಲೆಕ್ಕಶೀರ್ಷಿಕೆ ಪಿ2200/83 13ನೇ ಹಣಕಾಸು ಯೋಜನೆ ಅಡಿಯಲ್ಲಿ ಅನುದಾನ ಒದಗಿಸಿ ಕಾಮಗಾರಿ ಸಂಕೇತಗಳನ್ನು ನೀಡಲಾಗಿರುತ್ತದೆ.

ಈ ಪಟ್ಟಿಯ ಕ್ರಮ ಸಂಖ್ಯೆ 2 ರಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಈಗಾಗಲೇ ಹಾಕಿರುವ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ರೂ.71.00 ಲಕ್ಷಗಳ ಕಾಮಗಾರಿಯು ಸೇರಿರುತ್ತದೆ. ಸದರಿ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಘನತ್ಯಾಜ್ಯಕ್ಕೆ ಹೊದಿಕೆ ಇಲ್ಲದ ಕಾರಣ ಈ ತ್ಯಾಜ್ಯದ ಮೇಲೆ ಬೀಳುವ ಮಳೆ ನೀರಿನಿಂದಾಗಿ ಸ್ಥಳೀಯ ಪ್ರದೇಶವು ಕಲುಷಿತಗೊಳ್ಳುವುದನ್ನು ತಡೆಯಲು ಈ ತ್ಯಾಜ್ಯಕ್ಕೆ ಹೊದಿಕೆ ಹಾಕುವುದು ಅವಶ್ಯವಿರುತ್ತದೆ.

ಅದರಂತೆ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಈಗಾಗಲೇ ಹಾಕಿರುವ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ಸೂಕ್ತ ಅನುವುಗಳೊಂದಿಗೆ 2011-12 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ಬೆಂಗಳೂರು ವೃತ್ತದ ದರಪಟ್ಟಿಯನ್ನು ಆಧರಿಸಿ ರೂ.71.00 ಲಕ್ಷಗಳಿಗೆ ತಯಾರಿಸಲಾಗಿದ್ದು, (ಕಾಮಗಾರಿ ಸಂಕೇತ 310-11-000032) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 08-08-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**5. ವಿಷಯದ ಸಂಖ್ಯೆ: ಸಾಆಸ್ಥಾಸ/23/2011-12:**

ಸಂಖ್ಯೆ ಮು.ಆ./ಪಿಆರ್/500/11-12, ದಿನಾಂಕ: 08-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ: ಉತ್ತಾನ ಚಾರಿಟಬಲ್ ಟ್ರಸ್ಟ್, ಇಂದಿರಾ 534, ರಾಜೇಶ್ವರಿ ದೇವಸ್ಥಾನ ಬಳಿ, ರಾಜೇಶ್ವರಿ ನಗರ, ಬೆಂಗಳೂರು-98 ರವರು ಇವರ ಸಂಸ್ಥೆಯ ವತಿಯಿಂದ ಕಂಡಿಕೆ-6 ರಿಂದ 10 ರಲ್ಲಿ ವಿವರಿಸಿರುವ ಲೀತ್ಯಾ ಟೆಲಿಮೆಡಿಸನ್ ಮೂಲಕ ಸಾರ್ವಜನಿಕರಿಗೆ ಉಚಿತವಾಗಿ ಚಿಕಿತ್ಸಾ ಸೇವೆಯನ್ನು ನೀಡಲಾಗುವುದೆಂದು ಇದಕ್ಕಾಗಿ ಬೃ.ಬೆಂ.ಮ.ಪಾಲಿಕೆಯ ಆಸ್ಪತ್ರೆಗಳಲ್ಲಿ ಕಿಯೋಸ್ಕಗಳನ್ನು ಸಹ ಸ್ಥಾಪಿಸಲಾಗುವುದೆಂದು, ಇದಕ್ಕಾಗಿ ಬೇಕಾಗಿರುವ ಅವಶ್ಯಕ ಹಣವನ್ನು ಸದರಿ ಸಂಸ್ಥೆಯಿಂದ ಮತ್ತು ದಾನಿಗಳಿಂದ ಪಡೆದು ನೀಡಲಾಗುವುದೆಂದು, ಈ ಚಿಕಿತ್ಸಾ ಸೇವೆಯನ್ನು **ಪಾಲಿಕೆಯ ಆರೋಗ್ಯ ಕೇಂದ್ರಗಳಲ್ಲಿ** (1) ಬನಶಂಕರಿ (2) ವಿದ್ಯಾಪೀಠ (3) ಜೆ.ಪಿ.ನಗರ (4) ಕೆ.ಎಸ್.ಲೇಔಟ್ (5) ಬಿಟಿಎಂ ಲೇಔಟ್ (6) ತಾವರೆಕೆರೆ (7) ಅವಲಹಳ್ಳಿ (8) ಬಿನ್ನಿಪೇಟೆ (9) ನಾಯಂಡನಹಳ್ಳಿ (10) ಚಂದ್ರಾಲೇಔಟ್ (11) ಚಾಮರಾಜಪೇಟೆ (12) ಗೋವಿಂದರಾಜನಗರ (13) ಬೊಮ್ಮನಹಳ್ಳಿ ಮತ್ತು **ನಗರ ಕುಟುಂಬ ಕಲ್ಯಾಣ ಕೇಂದ್ರಗಳಾದ** (1) ಬನಶಂಕರಿ (2) ಬಸವನಗುಡಿ (3) ವಿ.ವಿ.ಪುರಂ (4) ಜಯನಗರ (5) ವಿಜಯನಗರ (6) ವಿಲ್ಸನ್ ಗಾರ್ಡನ್ ಗಳಲ್ಲಿ ಒಟ್ಟು 19 ಆಸ್ಪತ್ರೆಗಳಲ್ಲಿ ಮೊದಲಿಗೆ ಪ್ರಾರಂಭಿಸಲು ಮತ್ತು ಈ ಯೋಜನೆಯನ್ನು ಒಂದು ವರ್ಷದವರೆಗೆ ಅನುಷ್ಠಾನಗೊಳಿಸುವವರೆಗೂ ತರಬೇತಿ ಮತ್ತು ಉಪಕರಣಗಳ ದುರಸ್ಥಿ ಮತ್ತು ನಿರ್ವಹಣೆಯನ್ನು ಸಹ ನಿರ್ವಹಿಸುವುದಾಗಿಯೂ ಆಸ್ಪತ್ರೆಗಳಲ್ಲಿ ಸ್ಥಳಾವಕಾಶ ಮತ್ತು ಈ ಚಿಕಿತ್ಸೆಯನ್ನು ನೀಡಲು ಅನುಮತಿ ಕೋರಿರುತ್ತಾರೆ, ಇವರು ನೀಡುವ ಚಿಕಿತ್ಸಾ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಈ ಯೋಜನೆಯ ಪ್ರಮುಖ ಮುಖ್ಯಾಂಶಗಳು ಈ ಕೆಳಕಂಡಂತಿರುತ್ತದೆ (Kshema)**

1. Electronic health record (Patient registration, Vital signs, symptoms & history diagnosis & Prescription.
2. Automated capture of vital signs Viz, BP,ECG SP02 & temperature
3. Automatic defechan of malaria parositc porosity & Tuberculosis Bacili
4. Integevation of Audio/Video capabilities

**ಈ ಯೋಜನೆಯ ಅನುಷ್ಠಾನದಿಂದ ಆಗುವ ಉಪಯೋಗಗಳು**

1. Doctors Automted Process
2. Optimized productivity
3. Enhanced Patient experience
4. Increases time for diagnosis

**Utthana ಸಂಸ್ಥೆಯವರು ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ**

1. Executive Summary
2. Proposed Project:- Kshema Kiosk- Unfiled Health care Management
3. Proposed Project:- Kshema Software
4. Kshmema Kiosk-Benefits and envisaged
5. Im pilementation
6. Deliveries
7. Trining & Support
8. Requirement from BBMP

ಮೆ: ಉತ್ತನ ಚಾರಿಟಬಲ್ ಟ್ರಸ್ಟ್ ರವರು ಪ್ರಾರಂಭಿಸುವ ಮೇಲ್ಕಂಡಂತೆ ವಿವರಿಸಿರುವ ಈ ಯೋಜನೆಯ ಬಗ್ಗೆ ಪಾಲಿಕೆಯ ಯೋಜನಾ ಸಮನ್ವಯಾಧಿಕಾರಿಗಳು (ಆರ್.ಸಿ.ಹೆಚ್) ಮತ್ತು ಮುಖ್ಯ ಆರೋಗ್ಯಾಧಿಕಾರಿಗಳು ಸಹಮತಿ ವ್ಯಕ್ತಪಡಿಸಿದ್ದು, ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯಲ್ಲಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವ ಕಾರಣ ಈ ಯೋಜನೆಯು ಸಾರ್ವಜನಿಕರಿಗೆ ಸಹಕಾರಿಯಾಗುತ್ತದೆಂದು, ಸಾರ್ವಜನಿಕರಿಂದ ಮತ್ತು ಪಾಲಿಕೆಯಿಂದ ಯಾವುದೇ ಆರ್ಥಿಕ ನೆರವು ಅಪೇಕ್ಷಿಸದೇ ಉಚಿತವಾಗಿ ಟೆಲಿಮೆಡಿಸನ್ ಸೌಲಭ್ಯ ಒದಗಿಸುವ ಮೆ: ಉತ್ತಾನ ಚಾರಿಟಬಲ್ ಟ್ರಸ್ಟ್ ರವರಿಗೆ ಪಾರಂಭಿಕವಾಗಿ 19 ಆರೋಗ್ಯ ಕೇಂದ್ರಗಳಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಬಹುದು ಮತ್ತು ಈ ಚಿಕಿತ್ಸಾ ಸೇವೆಯು ಸಮರ್ಪಕವಾಗಿ ಸಾರ್ವಜನಿಕರಿಗೆ ದೊರೆಯುತ್ತಿರುವ ಬಗ್ಗೆ ಪಾಲಿಕೆಯ ವೈದ್ಯರುಗಳು ಪೂರ್ಣ ನಿಗಾ ಇದಬೇಕಾಗಿರುತ್ತದೆ, ಮೆ: ಉತ್ತನ ಚಾರಿಟಬಲ್ ಟ್ರಸ್ಟ್ ಬೆಂಗಳೂರು ರವರಿಗೆ ಪಾಲಿಕೆಯ ಆಸ್ಪತ್ರೆಗಳಲ್ಲಿ ಟೆಲಿಮೆಡಿಸನ್ ಚಿಕಿತ್ಸಾ ಸೌಲಭ್ಯ ನೀಡಲು ಅನುಮತಿ ನೀಡುವ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

**6. ವಿಷಯದ ಸಂಖ್ಯೆ: ಸಾಆಸ್ಥಾಸ/24/2011-12:**

ಸಂಖ್ಯೆ: ಜಂ.ನಿ.(ಪಪಾ)/ಪಿ.ಆರ್./386/11-12, ದಿನಾಂಕ: 08-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನೆ ವಿಭಾಗದ ಅಡಿಯಲ್ಲಿ ಸಾಕುನಾಯಿಗಳ ಪರವಾನಗಿಯನ್ನು ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಸದರಿ ಕಾರ್ಯವನ್ನು ಬೈಲಾ 25 ರ ಅಡಿ ಸಾಕು ನಾಯಿಗಳ ಪರವಾನಗಿಗಾಗಿ ಶುಲ್ಕವನ್ನು ಸಾಕು ನಾಯಿ ಮಾಲೀಕರಿಂದ ವಸೂಲಿ ಮಾಡಿ, ಅನುಷ್ಠಾನಗೊಳಿಸಲಾಗುತ್ತಿದೆ. 1976 ರ ಕರ್ನಾಟಕ ಮುನ್ಸಿಫಲ್ ಕಾಯಿದೆ ಜಾರಿಗೆ ಬಂದ ನಂತರ ಬೈಲಾ 25 ಅನ್ನು ರದ್ದುಗೊಳಿಸಲಾಗಿರುತ್ತದೆ. ಆದುದರಿಂದ ಈಗಿನ ಪರಿಸ್ಥಿತಿಗೆ ಅನ್ವಯಿಸುವಂತೆ ಸಾಕುನಾಯಿ ಪರವಾನಗಿಗೆ ಸಂಬಂಧಿಸಿದಂತೆ, 1976 ರ K.M.C. ಕಾಯಿದೆ Section 423 ರಲ್ಲಿ ಆಯುಕ್ತರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಹಾಗೂ ಇದರ ಜೊತೆ Sub Section 21 ರಲ್ಲಿ ಪ್ರಾಣಿ ಮತ್ತು ಮನುಷ್ಯರಲ್ಲಿ ಅಪಾಯಕಾರಿ ರೋಗಗಳನ್ನು ತಡೆಗಟ್ಟುವ, Sub Section 22 ರ ಪ್ರಕಾರ ಕಡ್ಡಾಯವಾಗಿ ರೋಗನಿರೋಧಕ ಚುಚ್ಚುಮದ್ದು ಹಾಕಿಸುವ ಕ್ರಮವನ್ನು ಜಾರಿಗೊಳಿಸುವ ನಿಯಮಗಳ ಅಡಿಯಲ್ಲಿ ಸಾಕು ನಾಯಿಗಳ ಪರವಾನಗಿ ಬೈಲಾವನ್ನು ಮಾಡಲಾಗಿರುತ್ತದೆ.

ನಾಯಿಗಳಲ್ಲಿ ಹುಚ್ಚುನಾಯಿ ರೋಗ ತಡೆಗಟ್ಟಲು ಪ್ರತಿ ವರ್ಷ ಸದರಿ ರೋಗದ ವಿರುದ್ಧ ಚುಚ್ಚುಮದ್ದು ಹಾಕುವಿಕೆ ಹಾಗೂ ಸಾಕುನಾಯಿಗಳಿಂದಾಗಿ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ನಿಯಂತ್ರಣ ಪಡಿಸುವ ಉದ್ದೇಶದಿಂದ ಈ ಕೆಳಕಂಡ ನಿಭಂದನೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಲು ಉದ್ದೇಶಿಸಿದೆ.

Shashi Kumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

(1) 8 ಚದುರದ ವರೆಗಿನ ಅಳತೆಯ ವಾಸದ ಕಟ್ಟಡದಲ್ಲಿ 1 ಶ್ವಾನವನ್ನು ಸಾಕಲು, 8 ರಿಂದ 20 ಚದುರದ ವರೆಗಿನ ವಾಸದ ಕಟ್ಟಡದಲ್ಲಿ 2 ಶ್ವಾನಗಳಿಗೆ ಮೀರದಂತೆ ಸಾಕಲು ಹಾಗೂ 20 ಚದುರಕ್ಕಿಂತ ಮೇಲ್ಪಟ್ಟ ವಾಸದ ಕಟ್ಟಡದಲ್ಲಿ ಗರಿಷ್ಠ 3 ಶ್ವಾನಗಳನ್ನು ಸಾಕಲು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

(2) ಒಂದು ಫ್ಲಾಟ್‌ನಲ್ಲಿ ಅನುಮೋದಿತ ತಳಿಯ 1 ಶ್ವಾನವನ್ನು ಮಾತ್ರ ಸಾಕಲು ಪಾಲಿಕೆಯಿಂದ ಪರವಾನಗಿ ಪಡೆಯುವುದು ಕಡ್ಡಾಯಗೊಳಿಸಲಾಗಿದೆ. ಸಾಕುನಾಯಿ ಪರವಾನಗಿ ಶುಲ್ಕದ ವಿವರಗಳು ಈ ಕೆಳಗಿನಂತಿವೆ.

| ವಿವರಗಳು | ಅಪಾಯಕಾರಿಯಾದ ಶುದ್ಧ ತಳಿ ಶ್ವಾನ ರೂ. (ಪಟ್ಟಿಯಲ್ಲಿರುವಂತೆ) | ಮಧ್ಯಮ ಗಾತ್ರದ ತಳಿ ಶ್ವಾನ ರೂ. | ಸಣ್ಣ ಗಾತ್ರದ ತಳಿ ಶ್ವಾನ ರೂ. | ಮಾಂಗ್ರೆಲ್ ನಾಯಿ ರೂ. |
|---|---|---|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಗೊಂಡ | 500/- | 300/- | 100/- | 30/- |
| ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಗಾಗಿಲ್ಲದ | 1,500/- | 900/- | 300/- | 90/- |

❖ ಮೈಕ್ರೋಚಿಪ್ ಅಳವಡಿಸಿದಲ್ಲಿ ವೆಚ್ಚ ಪ್ರತ್ಯೇಕ.

(3) ಸಾಕುನಾಯಿಗಳ ತಳಿ ಅಭಿವೃದ್ಧಿಗಾಗಿ ನಾಯಿಗಳನ್ನು ಸಾಕುವ ಕೆನಲ್‌ಗಳನ್ನು ಪಾಲಿಕೆಯ ಹಳೆಯ ವಲಯದ ಪ್ರದೇಶಗಳ ಹೊರಗಿನ ಪ್ರದೇಶಗಳಲ್ಲಿ ಗರಿಷ್ಠ 10 ಶ್ವಾನಗಳಿಗೆ ಮೀರದಂತೆ ಸಾಕಲು ಪರವಾನಗಿ ಕಡ್ಡಾಯವಾಗಿ ಪಡೆಯಬೇಕು. ಇದಕ್ಕಾಗಿ ವಾರ್ಷಿಕ ರೂ.25,000/- ಗಳ ಪರವಾನಗಿ ಶುಲ್ಕವನ್ನು ನಿಗಧಿಪಡಿಸಲಾಗಿದೆ.

ಕೆನಲ್‌ಗಳಲ್ಲಿ ಸಂತಾನೋತ್ಪತ್ತಿಗಾಗಿ ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಶ್ವಾನಗಳ ಮಾಲೀಕರೆ ಪ್ರತ್ಯೇಕವಾಗಿ ಭರಿಸಬೇಕಾಗಿರುತ್ತದೆ.

ಸಾಕು ಶ್ವಾನಗಳ ಪರವಾನಗಿ ಕಡ್ಡಾಯಗೊಳಿಸುವ ಸಲುವಾಗಿ ಹೊಸದಾಗಿ ಬೈಲಾಗಳನ್ನು ರಚಿಸಲಾಗಿದ್ದು, ಬೈಲಾಗಳಲ್ಲಿರುವ ನಿಯಮಗಳಂತೆ ಆಯುಕ್ತರಿಂದ ನೇಮಿತವಾದ ಅಧಿಕಾರಿ ಮತ್ತು ಸಿಬ್ಬಂದಿಗಳು ಕ್ರಮ ವಹಿಸಬಹುದಾಗಿರುತ್ತದೆ.

ಉತ್ತಮ ತಳಿಯ ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವ ಅಂಗಡಿಗಳಿಗೂ ಪರವಾನಗಿ ಕಡ್ಡಾಯಗೊಳಿಸಲಾಗಿದ್ದು, 1,000 ಚದುರ ಅಡಿಗಳ ವರೆಗೆ ಇರುವ ಮಾರಾಟ ಮಾಡುವ ಕೇಂದ್ರಗಳಿಗೆ ವಾರ್ಷಿಕ ರೂ.5,000/-, 1,001 ರಿಂದ 2,500 ಚದುರ ಅಡಿಗಳ ವರೆಗಿನ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.10,000/- ಹಾಗೂ 2,501 ಚದುರ ಅಡಿಗಳಿಗೆ ಮೇಲ್ಪಟ್ಟ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.25,000/- ಪರವಾನಗಿ ಶುಲ್ಕ ನಿಗಧಿಪಡಿಸಲಾಗಿದೆ. ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೂ ಸಹ ಪರವಾನಗಿಯನ್ನು ಕಡ್ಡಾಯಗೊಳಿಸಲಾಗಿದ್ದು, 1,000/- ಚದುರ ಅಡಿಗಳ ವರೆಗಿನ ವಿಸ್ತಾರದ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.3,000/-, 1,001 ಚದುರ ಅಡಿಗಳಿಂದ 2,500 ಚದುರ ಅಡಿಗಳ ವರೆಗಿನ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.5,000/- ಹಾಗೂ 2,501 ಚದುರ ಅಡಿಗಳಿಗಿಂತ ಮೇಲ್ಪಟ್ಟ ಕೇಂದ್ರಗಳಿಗೆ ವಾರ್ಷಿಕ ರೂ.10,000/- ಪರವಾನಗಿ ಶುಲ್ಕ ನಗಧಿಪಡಿಸಲಾಗಿದೆ.

ದತ್ತು ತೆಗೆದುಕೊಂಡ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಬೀದಿಶ್ವಾನಗಳಿಗೆ ವಾರ್ಷಿಕ ರೂ.30/- ಪರವಾನಗಿ ಶುಲ್ಕ ಹಾಗೂ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಡದ ಬೀದಿ ನಾಯಿಗೆ ರೂ.90/- ನಿಗಧಿಪಡಿಸಲಾಗಿದೆ. ಜಾನುವಾರು ಕಲ್ಯಾಣ ಸಂಸ್ಥೆಗಳಲ್ಲಿರುವ ಶ್ವಾನಗಳಿಗೆ ಹಾಗೂ 10 ಕ್ಕೆ ಮೇಲ್ಪಟ್ಟು ಬೀದಿ ನಾಯಿಗಳನ್ನು ದತ್ತು ತೆಗೆದುಕೊಂಡ ಸಾರ್ವಜನಿಕರಿಗೆ (ಅಕ್ಕ-ಪಕ್ಕದ ಮನೆಯವರಿಂದ ಆಕ್ಷೇಪಣೆ ಇಲ್ಲದಿದ್ದಲ್ಲಿ ಮಾತ್ರ) ಸಾಕು ನಾಯಿ ಪರವಾನಗಿಯ ನಿಯಮಗಳು ಅನ್ವಯಿಸುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಪ್ರದೇಶಗಳಲ್ಲಿರುವ ಸಾಕು ಶ್ವಾನಗಳಿಗೆ, ಕೆನಲ್‌ಗಳಿಗೆ, ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಕೇಂದ್ರಗಳಿಗೆ ಮತ್ತು ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ಪರವಾನಗಿಯನ್ನು ಕಡ್ಡಾಯಗೊಳಿಸಲಾಗಿದೆ. ಸಾಕು ನಾಯಿಗಳಿಂದಾಗಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ತಡೆಗಟ್ಟಬಹುದಾಗಿರುತ್ತದೆ, ಹಾಗೂ ಸಾಕು ನಾಯಿಗಳಿಂದ ಹುಚ್ಚು ನಾಯಿ ರೋಗ ಹರಡದಂತೆ ತಡೆಗಟ್ಟಬಹುದಾಗಿರುತ್ತದೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಬಿ.ಬಿ.ಎಂ.ಪಿ.ಯ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಪಡೆಯಲು ಸಮಿತಿಯು ತೀರ್ಮಾನಿಸಿತು.**

**7. ವಿಷಯದ ಸಂಖ್ಯೆ: ಸಾಆಸ್ಥಾಸ/25/2011-12:**

ಸಂಖ್ಯೆ: ಆ/ಪಿಎಸ್ಆರ್/ /2010-11, ದಿನಾಂಕ: 18-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರಿನ ಸರ್ವೆ ನಂ.155 ರ ಉತ್ತರಭಾಗ ಮತ್ತು ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದಲ್ಲಿನ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳನ್ನು ನಿರ್ಮಿಸಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆದು, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಹೀಗೆ ಶೇಖರಣೆಯಾದ ಘನತ್ಯಾಜ್ಯವನ್ನು 10 ಗಾಲಿಗಳ ಮುಖಾಂತರ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು ಟೆಂಡರ್ ಅಧಿಸೂಚನೆ ಸಂ.CE/SWM/Tend/03/10-11, ದಿನಾಂಕ: 13-04-2010 ರಂದು ಟೆಂಡರುಗಳನ್ನು ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನಲ್ಲಿ ಯಶಸ್ವಿ ಬಿಡ್ಡುದಾರರಾದ ಮೆ॥ ಮಾತಾ ಓವರ್ ಸೀಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ಟೆಂಡರ್‌ನ ಕನಿಷ್ಟ ದರವಾದ ರೂ.4.06/ಮೆಟ್ರಿಕ್‌ಟನ್/ಕಿ.ಮೀ. ರಂತೆ ರೂ.490.00 ಲಕ್ಷಗಳವರೆಗೆ ಕಾಮಗಾರಿ ನಿರ್ವಹಿಸಲು ಕಾರ್ಯಾದೇಶ ನೀಡಲಾಗಿತ್ತು.

West Zone ನಿಂದ ದೊಡ್ಡಬಳ್ಳಾಪುರದ ಟೆರ್ರಾಫರ್ಮ ಸಂಸ್ಥೆಗೆ 10 ಗಾಲಿಗಳ ಟ್ರಕ್ಕುಗಳ ಮೂಲಕ ಘನತ್ಯಾಜ್ಯ ವಸ್ತುಗಳ ಸಾಗಣೆ ಮಾಡುವ ಕಾರ್ಯದ ಕಾರ್ಯಾದೇಶದ ಅವಧಿಯು ಮುಕ್ತಾಯದ ಹಂತಕ್ಕೆ ಬಂದಿರುತ್ತದೆ. ಜೂನ್ ಮಾಹೆಯ 2011 ರ ಅಂತ್ಯಕ್ಕೆ ಸುಬ್ಬರಾಯನಪಾಳ್ಯದಲ್ಲಿನ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಿಂದ 41,158.99 ಮೆಟ್ರಿಕ್ ಟನ್ ತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲಾಗಿರುತ್ತದೆ.

ಸುಬ್ಬರಾಯನಪಾಳ್ಯದಲ್ಲಿನ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ನ್ನು ಇನ್ನೂ ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸದರಿ ಲ್ಯಾಂಡ್‌ಫಿಲ್ ಸ್ಥಳದಲ್ಲಿ DBOT ಆಧಾರದ ಮೇರೆಗೆ 750 ಟನ್ ಸಾಮರ್ಥ್ಯದ ಸಂಪೂರ್ಣ ಸ್ವಯಂಚಾಲಿತ ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. 750 ಟನ್ ಸಾಮರ್ಥ್ಯದ ಸಂಪೂರ್ಣ ಸ್ವಯಂಚಾಲಿತ ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ ಮಾಡಲು ಇನ್ನು 6 ರಿಂದ 7 ತಿಂಗಳ ಕಾಲಾವಕಾಶ ಬೇಕಾಗಿರುವ ಹಿನ್ನಲೆಯಲ್ಲಿ ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದಲ್ಲಿನ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ಶೇಖರಣೆಯಾಗಿರುವ ಘನತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು 2011-12 ನೇ ಸಾಲಿಗೆ ಟೆಂಡರ್ ಆಹ್ವಾನಿಸಲು ಅರೋಗ್ಯ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಸಲ್ಲಿಸಲಾಗಿ, ಟಿಪ್ಪಣಿಯು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ವಿಷಯ ಸಂ.ಸಾಆಸ್ಥಾಸ/9/11-12, ದಿನಾಂಕ: 11-07-2011 ರಂದು ಅನುಮೋದನೆಗೊಂಡಿರುತ್ತದೆ. ಸದರಿ ಆರೋಗ್ಯ ಸ್ಥಾಯಿ ಸಮಿತಿಯ ನಿರ್ಣಯವನ್ನು ಪಾಲಿಕೆಯ ಕೌನ್ಸಿಲ್ ಸಭೆಗೆ ಟಿಪ್ಪಣಿ ಸಲ್ಲಿಸಲಾಗಿರುತ್ತದೆ.

ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದಲ್ಲಿನ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ಸುಮಾರು 40 ಲಾರಿಗಳು ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು, ಸದರಿ ಲ್ಯಾಂಡ್‌ಫಿಲ್‌ಗಳಿಂದ 10 ಗಾಲಿಗಳ ಟ್ರಕ್‌ಗಳ ಮುಖಾಂತರ ತ್ಯಾಜ್ಯವನ್ನು ಸ್ಥಳಾಂತರಿಸುವ ಕಾರ್ಯ ಸ್ಥಗಿತಗೊಂಡಲ್ಲಿ ಲ್ಯಾಂಡ್‌ಫಿಲ್ ಪೂರ್ಣವಾಗಿ ತ್ಯಾಜ್ಯದಿಂದ ತುಂಬಿ ಹೋಗುವ ಸಾಧ್ಯತೆಯಿರುವುದರಿಂದ ಸದರಿ ಕಾರ್ಯವನ್ನು ಮುಂದುವರೆಸಬೇಕಾದ ಅವಶ್ಯಕತೆಯಿರುತ್ತದೆ.

ಸದರಿ ಕಾಮಗಾರಿಯ ಈ ಹಿಂದಿನ ಟೆಂಡರ್‌ನ ಕರಾರು ಒಪ್ಪಂದದಂತೆ ಕಾಮಗಾರಿಯನ್ನು ಮೂಲ ಒಪ್ಪಂದದ ದರದಲ್ಲಿಯೇ ಮುಂದುವರೆಸಲು ಮೂಲ ಟೆಂಡರ್ ಕರಾರು ಒಪ್ಪಂದದ ಟೆಂಡರ್ ಷರತ್ತು ಮತ್ತು ನಿಬಂಧನೆ 31.2 ಅವಕಾಶವಿರುತ್ತದೆ. (ಟೆಂಡರ್ ಷರತ್ತು ಮತ್ತು ನಿಬಂಧನೆ ಪ್ರತಿ ಲಗತ್ತಿಸಿದೆ).

ಮೆ॥ ಮಾತಾ ಓವರ್‌ಸೀಸ್ ಪ್ರೈ. ಲಿ. ರವರು ಮೂಲ ಒಪ್ಪಂದದ ದರದಲ್ಲಿಯೇ ಕಾಮಗಾರಿಯನ್ನು ಮುಂದುವರೆಸಲು ಒಪ್ಪಿರುತ್ತಾರೆ.

Shashi Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲೆ ತಿಳಿಸಿರುವ ಹಿನ್ನಲೆಯಲ್ಲಿ ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದಲ್ಲಿನ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ಶೇಖರಣೆಯಾಗಿರುವ ಘನತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಟೆರ್‍ರಾಫರ್ಮ ಸಂಸ್ಥೆಗೆ ಸಾಗಿಸಲು 2011-12 ನೇ ಸಾಲಿಗೆ ಟೆಂಡರ್ ಅಂತಿಮಗೊಳಿಸಿ, ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡುವವರೆಗೆ ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವ ಮೆ॥ ಮಾತಾ ಓವರ್‌ಸೀಸ್ ಪ್ರೈ. ಲಿ. ರವರ ವತಿಯಿಂದ ಸುಬ್ಬರಾಯನಪಾಳ್ಯದಲ್ಲಿನ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಿಂದ ದೊಡ್ಡಬಳ್ಳಾಪುರದ ಟೆರ್‍ರಾಫರ್ಮ ಸಂಸ್ಥೆಗೆ 10 ಗಾಲಿಗಳ ಟ್ರಕ್ಕುಗಳ ಮೂಲಕ ಘನತ್ಯಾಜ್ಯ ವಸ್ತುಗಳ ಸಾಗಣೆ ಮಾಡುವ ಕಾರ್ಯವನ್ನು ಮುಂದುವರೆಸಲು ಅನುಮೋದನೆಗಾಗಿ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಿದೆ.

ಹಾಗೂ

ಸದರಿ ಕಾಮಗಾರಿಗೆ ಅವಶ್ಯವಿರುವ ಮೊತ್ತವನ್ನು 2010-11 ನೇ ಸಾಲಿನ 13ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ (P02200) ರಲ್ಲಿ ಭರಿಸಬಹುದಾಗಿರುತ್ತದೆ.

**ನಿರ್ಣಯ:**

**ದಿನಾಂಕ: 18-08-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**8. ವಿಷಯದ ಸಂಖ್ಯೆ: ಸಾಆಸ್ಥಾಸ/26/2011-12:**

ಆಯುಕ್ತರ ದಿನಾಂಕ: 19-08-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 03-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಸುತ್ತಲಿನ ಗ್ರಾಮಗಳ ನಾಗರೀಕರೊಂದಿಗೆ ಈ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ ಹಾಗೂ ದಿನಾಂಕ: 05-03-2011 ರಂದು ಮಾವಳ್ಳಿಪುರ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ ಪರಿವೀಕ್ಷಿಸಿದಾಗ ಸ್ಥಳೀಯರು ಮಂಡಿಸಿದ ಬೇಡಿಕೆಯಂತೆ, ಸ್ಥಳೀಯ ಯಲಹಂಕ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ.ವಿಶ್ವನಾಥ್ ರವರೊಂದಿಗೆ ಚರ್ಚಿಸಿ ಮಾವಳ್ಳಿಪುರ ಘನತ್ಯಾಜ್ಯ ಘಟಕದ ಸುತ್ತಲಿನ ಹಳ್ಳಿಗಳಲ್ಲಿ 13 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷಗಳ ಯೋಜನೆ ರೂಪಿಸಿ ಲೆಕ್ಕಶೀರ್ಷಿಕೆ ಪಿ2200/83 13ನೇ ಹಣಕಾಸು ಯೋಜನೆ ಅಡಿಯಲ್ಲಿ ಅನುದಾನ ಒದಗಿಸಿ ಕಾಮಗಾರಿ ಸಂಕೇತಗಳನ್ನು ನೀಡಲಾಗಿರುತ್ತದೆ.

ಈ ಪಟ್ಟಿಯ ಕ್ರಮ ಸಂಖ್ಯೆ 12 ರಲ್ಲಿ ಮೇಲಿನ ಕಾಮಗಾರಿಯು ರೂ.68.00 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಸೇರಿರುತ್ತದೆ.

ಅದರಂತೆ ವಡೇರಹಳ್ಳಿ ಗ್ರಾಮದ ಅಡ್ಡರಸ್ತೆಗಳ ಡಾಂಬರೀಕರಣ ಕಾಮಗಾರಿಯ ಅಂದಾಜುಪಟ್ಟಿಯನ್ನು ಸೂಕ್ತ ಅನುವುಗಳೊಂದಿಗೆ 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯನ್ನು ಆದರಿಸಿ ರೂ.68.00 ಲಕ್ಷಗಳಿಗೆ ತಯಾರಿಸಲಾಗಿದ್ದು (ಕಾಮಗಾರಿ ಸಂಕೇತ 310-11-000042) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 19-08-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**9. ವಿಷಯದ ಸಂಖ್ಯೆ: ಸಾಆಸ್ಥಾಸ/27/2011-12:**

ಸಂಖ್ಯೆ: ಮು.ಆ./ಪಿಆರ್/560/11-12, ದಿನಾಂಕ: 23-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ: ಲಯನ್ಸ್ ಕ್ಲಬ್ ಸಲ್ಲಿಸಿರುವ ಮನವಿ ಪತ್ರದಲ್ಲಿ ಈ ಸಂಸ್ಥೆಯ ವತಿಯಿಂದ ಬೃಬೆಂ.ಮ.ಪಾಲಿಕೆಯ ಮತ್ತಿಕೆರೆ ವಾರ್ಡ್ ಸಂಖ್ಯೆ.36 ರ ಪ್ರದೇಶದಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಪಬ್ಲಿಕ್ ಹೆಲ್ತ್ ಯೂನಿಟ್ ಮತ್ತು ಡೆ ಕೇರ್ ಸೆಂಟರ್ ಪ್ರಾರಂಭಿಸುವರೆಂದು, ಇದಕ್ಕಾಗಿ ಅವಶ್ಯಕತೆಯಿರುವ ಸಾಧನ ಸಲಕರಣೆಗಳು, ಔಷಧಿ ಸಲಕರಣೆಗಳು, ವೈದ್ಯರು ಮತ್ತು ಸಿಬ್ಬಂದಿಗಳ ವೇತನ ಇವುಗಳಿಗಾಗಿ

ಅಂದಾಜು ವಾರ್ಷಿಕ ರೂ.12,72,000 (ಹನ್ನೆರಡು ಲಕ್ಷದ ಎಪ್ಪತ್ತೆರಡು ಸಾವಿರ ರೂ ಮಾತ್ರ) ಖರ್ಚಾಗುತ್ತದೆಂದು ಈ ಮೊತ್ತವನ್ನು ಪಾಲಿಕೆಯಿಂದ ಭರಿಸಲು ಮನವಿ ಸಲ್ಲಿಸಿರುತ್ತಾರೆ.

ಸದರಿ ಸಂಸ್ಥೆಯವರ ಪ್ರಸ್ತಾವನೆಯನ್ನು ಪರಿಶೀಲಿಸಿದ ಯೋಜನಾ ಸಮನ್ವಯಾಧಿಕಾರಿ ಆರ್.ಸಿ.ಹೆಚ್. ಕಾರ್ಯಕ್ರಮ ರವರು ಮತ್ತು ಮುಖ್ಯ ಆರೋಗ್ಯಾಧಿಕಾರಿಗಳು ವರದಿಯನ್ನು ಸಲ್ಲಿಸಿದ್ದು, ಪಾಲಿಕೆಯ ವಾರ್ಡ್ ಸಂಖ್ಯೆ.36 ರಲ್ಲಿ ಪಾಲಿಕೆಯಿಂದ ನಿರ್ವಹಿಸಲಾಗುತ್ತಿರುವ ಯಾವುದೇ ಆಸ್ಪತ್ರೆಗಳು ಇಲ್ಲವೆಂದು, ಇಲ್ಲಿನ ನಿವಾಸಿಗಳಿಗೆ ಮುಖ್ಯವಾಗಿ ವಯೋವೃದ್ಧರು, ಪಿಂಚಣಿದಾರರು, ಬಡನಿವಾಸಿಗಳ ಉತ್ತಮ ಆರೋಗ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಇವರಿಗೆ ಉತ್ತಮ ಚಿಕಿತ್ಸೆ ನೀಡುವ ದೃಷ್ಟಿಯಿಂದ ಪಾಲಿಕೆಯಿಂದ ಆರೋಗ್ಯ ಘಟಕವನ್ನು ಸ್ಥಾಪಿಸುವುದು ಸೂಕ್ತವಾಗಿರುತ್ತದೆ, ಈ ಆರೋಗ್ಯ ಘಟಕವನ್ನು ವಾರ್ಡ್ 36 ರಲ್ಲಿನ ಪಾಲಿಕೆಯ ಕಛೇರಿಯ ಕಟ್ಟಡದ ಒಂದು ಕೊಠಡಿಯಲ್ಲಿ ಸ್ಥಾಪಿಸಬಹುದಾಗಿರುತ್ತದೆ, ಈ ಆರೋಗ್ಯ ಘಟಕಕ್ಕೆ ಅವಶ್ಯಕತೆಯಿರುವ ಸಾಧನ-ಸಲಕರಣೆಗಳು, ಔಷಧಿ ಇತ್ಯಾದಿಗಳನ್ನು ಪಾಲಿಕೆಯ ಆಯವ್ಯಯದಲ್ಲಿ ಕಾಯ್ದಿರಿಸಿರುವ ಲಭ್ಯವಿರುವ ಮೊತ್ತದಲ್ಲಿ ಭರಿಸಬಹುದಾಗಿದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಚಿಕ್ಕಪೇಟೆ ವಲಯದಲ್ಲಿ ಸಂಚಾರಿ ಔಷಧಾಲಯವಿದ್ದು, ಈ ಸಂಚಾರಿ ವಾಹನವು ದುರಸ್ಥಿಯಲ್ಲಿರುವುದರಿಂದ, ಈ ಔಷಧಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿ, ಇತರೆ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ನಿಯೋಜಿಸಬಹುದಾಗಿದೆ. ಒಟ್ಟಿನಲ್ಲಿ ಮತ್ತಿಕೆರೆ ವಾರ್ಡ್‌ನ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಆರೋಗ್ಯದ ಹಿತದೃಷ್ಟಿಯಿಂದ ಚಿಕ್ಕಪೇಟೆ ವಲಯದ ಸಂಚಾರಿ ಔಷಧಾಲಯವನ್ನು ತಾತ್ಕಾಲಿಕವಾಗಿ ಮತ್ತಿಕೆರೆ ವಾರ್ಡ್‌ನ ಪಾಲಿಕೆಯ ಕಛೇರಿಯ ಕಟ್ಟಡಕ್ಕೆ ಸ್ಥಳಾಂತರಿಸಬಹುದಾಗಿರುತ್ತದೆ. ಸೂಕ್ತ ನಿರ್ಣಯಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ತಾತ್ಕಾಲಿಕವಾಗಿ ಚಿಕ್ಕಪೇಟೆ ವಲಯದಲ್ಲಿರುವ ಸಂಚಾರಿ ಔಷಧಾಲಯದ ಮತ್ತಿಕೆರೆ ವಾರ್ಡ್‌ನ ಪಾಲಿಕೆ ಕಛೇರಿ ಕಟ್ಟಡಕ್ಕೆ ಸ್ಥಳಾಂತರಿಸಲು ಸಮಿತಿಯು ತೀರ್ಮಾನಿಸಿದೆ.**

10. **ವಿಷಯದ ಸಂಖ್ಯೆ: ಸಾಆಸ್ಥಾಸ/28/2011-12:**

ಸಂಖ್ಯೆ: ಆ.ವೈ.(ತಾಮಕುಕ)05/2011-12, ದಿನಾಂಕ: 26-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಕೃಷ್ಣ ಸೇವಾಶ್ರಮ ಆಸ್ಪತ್ರೆ, ನಂ.523, 10ನೇ ಮುಖ್ಯ ರಸ್ತೆ, 45ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು-41 ರವರು ಪೂಜ್ಯ ಮಹಾಪೌರರಿಗೆ ಪತ್ರವನ್ನು ಸಲ್ಲಿಸಿದ್ದು, ಈ ಆಸ್ಪತ್ರೆಯು ಎಲ್ಲಾ ಬಡಜನರಿಗೆ ಕಡಿಮೆ ದರದಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ಒದಗಿಸುತ್ತಿದೆ ಎಂದು, ಈ ಆಸ್ಪತ್ರೆಯು ನುರಿತ ತಜ್ಞರನ್ನು ಒಳಗೊಂಡಿರುತ್ತದೆಂದು, ಈಗಾಗಲೇ ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ ಶಿಬಿರಗಳನ್ನು ನಡೆಸಿರುತ್ತದೆಂದು ತಿಳಿಸಿದ್ದು, ಹಾಗೂ ಪಾಲಿಕೆಯ ಜೆ.ಪಿ. ನಗರ ಆರೋಗ್ಯ ಕೇಂದ್ರವನ್ನು ನಡೆಸಲು ಮುಂದೆ ಬಂದಿರುತ್ತಾರೆ. ಈ ಕಟ್ಟಡವನ್ನು ಈ ಸೇವಾಶ್ರಮಕ್ಕೆ ನೀಡಿದಲ್ಲಿ ಬಡವರಿಗೆ ತಜ್ಞರ ಸೇವೆಯನ್ನು ನೀಡಲು ಮತ್ತು ಕುಟುಂಬ ತಜ್ಞರ ಸೇವೆಯನ್ನು ಈ ಕೆಳಕಂಡಂತೆ ಒದಗಿಸಲಾಗುವುದೆಂದು ಒಪ್ಪಿರುತ್ತಾರೆ.

- ಇವರು ಭಾನುವಾರ ಮತ್ತು ಸಾರ್ವಜನಿಕರ ರಜಾ ದಿನಗಳ ಹೊರತಾಗಿ ಉಳಿದೆಲ್ಲಾ ದಿನಗಳು ಎರಡನೇ ಶನಿವಾರ ಸೇರಿದಂತೆ, ವೈದ್ಯಕೀಯ ಸೇವೆಗಳನ್ನು ಬೆಳಿಗ್ಗೆ: 09-30 ರಿಂದ ಮಧ್ಯಾಹ್ನ: 01-30 ರ ತನಕ ಚಿಕಿತ್ಸಾ ಸೇವೆ ನೀಡಲು ಒಪ್ಪಿರುತ್ತಾರೆ.
- ಪ್ರತಿ ಕರ್ತವ್ಯ ನಿರತ ದಿನವು ಒಬ್ಬರು ವೈದ್ಯರು ಇರುತ್ತಾರೆಂದು, ಹಾಗೂ ಉಳಿದ ದಿನಗಳಲ್ಲಿ ತಜ್ಞ ವೈದ್ಯರುಗಳು- ವಾರದ ಒಂದು ದಿನ ಒಬ್ಬಬ್ಬರು ಕರ್ತವ್ಯ ನಿರ್ವಹಿಸುತ್ತಾರೆಂದು ತಿಳಿಸಿದ್ದು, ಫಿಜಿಷಿಯನ್, ಪ್ರಸೂತಿ ತಜ್ಞರು, ಮಕ್ಕಳ ತಜ್ಞರು, ಚರ್ಮರೋಗ ತಜ್ಞರು ಹಾಗೂ ದಂತ ವೈದ್ಯರುಗಳನ್ನು ಒದಗಿಸಲಾಗುವುದೆಂದು ತಿಳಿಸಿರುತ್ತಾರೆ.
- ತಜ್ಞ ವೈದ್ಯರನ್ನು ಮತ್ತು ಇನ್ನಿತರೆ ಅಧೀನ ಸಿಬ್ಬಂದಿಯನ್ನು ಶ್ರೀ.ಕೃಷ್ಣ ಸೇವಾಶ್ರಮ ರವರು ನೀಡಲು ಒಪ್ಪಿರುತ್ತಾರೆ.
- ದಂತ ವೈದ್ಯರಿಗೆ ಅಗತ್ಯವಿರುವ ಉಪಕರಣಗಳು ಹಾಗೂ ಸಲಕರಣೆಗಳನ್ನು ಒದಗಿಸಲಾಗುವುದೆಂದು ತಿಳಿಸಿರುತ್ತಾರೆ.
- ವಾರದಲ್ಲಿ ಮೂರು ದಿನಗಳು ಪ್ರಯೋಗ ಶಾಲಾ ತಂತ್ರಜ್ಞರು ರ ಸೇವೆಯನ್ನು ನೀಡಲಾಗುವುದೆಂದು ತಿಳಿಸಿರುತ್ತಾರೆ.

(signature) Shashi Kumar

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

- ಪ್ರಯೋಗ ಶಾಲೆ ಸಂಬಂದಿತ ಪರೀಕ್ಷೆಗಳಿಗೆ ರೂ.10/- ರೂ.20/- ರಷ್ಟು ಸೇವಾ ಶುಲ್ಕವನ್ನು ಬಿ.ಬಿ.ಎಂ.ಪಿ. ಯು ತೆಗೆದುಕೊಳ್ಳಬಹುದೆಂದು ತಿಳಿಸಿರುತ್ತಾರೆ. (ಈಗಾಗಲೇ ಪಾಲಿಕೆಯು ಹೊರ ರೋಗಿಗಳಿಂದ ಸೇವಾ ಶುಲ್ಕವೆಂದು ರೂ.5/- ಗಳನ್ನು ಸಂಗ್ರಹಿಸುತ್ತಿದೆ).

**ಬೃ.ಬೆಂ.ಮ. ಪಾಲಿಕೆಯಿಂದ ಒದಗಿಸಬೇಕಾಗಿರುವುದು:**

- ಸದರಿ ಸೇವಾಶ್ರಮದವರು ಬಿ.ಬಿ.ಎಂ.ಪಿ. ಯು ನಿಯಮದಂತೆ ಯಾವುದೇ ಔಷಧಿಗಾಗಿ ಹೊರಗಡೆಗಾಗಿ ಚೀಟಿ ಬರೆದುಕೊಡಬಾರದು.
- ಔಷಧಿಗಳು ಲಭ್ಯತೆಗೆ ಅನುಗುಣವಾಗಿ ಆರೋಗ್ಯ ಕೇಂದ್ರದ ವತಿಯಿಂದ ನಿಯೋಜಿತ ವೈದ್ಯರಿಗೆ ನೀಡಲಾಗುವುದು, ಇತರೆ ಔಷಧಿಗಳು ಬೇಕಾದಲ್ಲಿ ಆಡಳಿತ ವೈದ್ಯಾಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟು ಬೇಕಾದ ಔಷಧಿಗಳನ್ನು ಯೂಸರ್ ಫೀ-ಸೇವಾ ಶುಲ್ಕ ದಿಂದ ತೆಗೆದುಕೊಳ್ಳಲು ಅನುಮತಿಯಿರುತ್ತದೆ.
- ಯಾವುದೇ ರೋಗಿಯು ಬೇರೆ ಆಸ್ಪತ್ರೆಗಳಿಗೆ ಹೆರಿಗೆ ಅಥವಾ ಇನ್ನಿತರೆ ಸೌಲಭ್ಯಗಳಿಗೆ ಹತ್ತಿರದಲ್ಲಿರುವ ಬಿ.ಬಿ.ಎಂ.ಪಿ. ಆಸ್ಪತ್ರೆಗೆ ಕಳುಹಿಸುವುದು.
- ರೋಗಿಯು ಶ್ರೀ.ಕೃಷ್ಣ ಸೇವಾಶ್ರಮದ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಲು ಒಪ್ಪಿದಲ್ಲಿ ಲಿಖಿತವಾಗಿ ಬರೆಯಿಸಿಕೊಂಡು ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಬಹುದು. ಇದರಿಂದ ಬಿ.ಬಿ.ಎಂ.ಪಿ. ಹೆಸರಿಗೆ ಯಾವುದೇ ಚ್ಯುತಿ ಬರದಂತೆ ನೋಡಿಕೊಳ್ಳುವುದು.
- ಆಸ್ಪತ್ರೆಯ ಆಡಳಿತಕ್ಕೆ ಸಂಬಂಧಿಸಿದಂತೆ ನೀರು, ವಿದ್ಯುಚ್ಛಕ್ತಿ ಹಾಗೂ ಇನ್ನಿತರೆ ಆಡಳಿತಾತ್ಮಕ ಖರ್ಚನ್ನು ಬಿ.ಬಿ.ಎಂ.ಪಿ. ಭರಿಸಬೇಕಾಗಿರುತ್ತದೆ.
- ಗ್ರೂಪ್ "ಡಿ" ನೌಕರರನ್ನು ಪಾಲಿಕೆಯ ಆರೋಗ್ಯ ಕೇಂದ್ರಗಳಿಂದ ಒದಗಿಸಬೇಕಾಗಿರುತ್ತದೆ.

ಶ್ರೀ.ಕೃಷ್ಣಸೇವಾ ಆಶ್ರಮ ಆಸ್ಪತ್ರೆ ರವರಿಗೆ ಪಾಲಿಕೆಯ ಜೆ.ಪಿ. ನಗರ ಆರೋಗ್ಯ ಕೇಂದ್ರವನ್ನು ವಹಿಸಲು ಪಾಲಿಕೆಯ ಯೋಜನಾ ಸಮನ್ವಯಾಧಿಕಾರಿಗಳು ಮತ್ತು ಮುಖ್ಯ ಆರೋಗ್ಯಾಧಿಕಾರಿಗಳು ಒಪ್ಪಿರುತ್ತಾರೆ, ಮತ್ತು ಇವರೊಂದಿಗೆ ಮೇಲ್ಕಂಡ ಅಂಶಗಳ ಕುರಿತು ಒಡಂಬಡಿಕೆ ಮಾಡಿಕೊಳ್ಳಬಹುದೆಂದು ತಿಳಿಸಿರುತ್ತಾರೆ. ಸಮರ್ಪಕವಾಗಿ ಸಾರ್ವಜನಿಕರಿಗೆ ಚಿಕಿತ್ಸಾ ಸೌಲಭ್ಯವನ್ನು ಒದಗಿಸದಿದ್ದಲ್ಲಿ ಒಡಂಬಡಿಕೆಯನ್ನು ರದ್ದುಗೊಳಿಸಬಹುದಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಸೇವೆಯನ್ನು ಮೇಲುಸ್ತುವಾರಿ ವಹಿಸಲು ಒಂದು ಸ್ಥಳೀಯ ವೈದ್ಯಾಧಿಕಾರಿಗಳ ಸಮಿತಿ ರಚಿಸಿ ಕಾಲಕಾಲಕ್ಕೆ ತೃಪ್ತಿಕರ ನೀಡುವುದನ್ನು ದೃಢೀಕರಿಸಿಕೊಳ್ಳುವುದು ಹಾಗೂ ಈ ಒಡಂಬಡಿಕೆಯನ್ನು 02 (ಎರಡು) ವರ್ಷಗಳ ಅವಧಿಗೆ ನೀಡುವಂತೆ ಮತ್ತು ಉಭಯ ಪಾರ್ಟಿಗಳ ಒಡಂಬಡಿಕೆ ಕರಾರಿನಂತೆ ತೃಪ್ತಿಕರವಾದ ಕೆಲಸ ನಿರ್ವಹಣೆ ಆಗದಿದ್ದಲ್ಲಿ ಒಂದು ತಿಂಗಳ ಮುಂಗಡ ನೋಟಿಸು ನೀಡಿ ಒಡಂಬಡಿಕೆಯನ್ನು ರದ್ದುಪಡಿಸುವ ಅಧಿಕಾರವನ್ನು ಬಿ.ಬಿ.ಎಂ.ಪಿ.ಗೆ ಕಾಯ್ದಿರಿಸಿಕೊಳ್ಳುವ ಷರತ್ತಿಗೊಳಪಟ್ಟು ಟಿಪ್ಪಣಿಯನ್ನು ಸಮಿತಿ ಒಪ್ಪಿದೆ.**

Geetha Shashikumar

**(ಡಾ॥ ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 18-08-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಡಾ|| ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಎಂ. ಮುನಿರಾಜು | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಡಾ|| ಎಸ್. ರಾಜು | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| ಎನ್. ವೀರಣ್ಣ | ಸದಸ್ಯರು | ಆರೋಗ್ಯಾಧಿಕಾರಿ (ಪಶ್ಚಿಮ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | ಆರೋಗ್ಯಾಧಿಕಾರಿ (ಕ್ಲಿನಿಕಲ್) |
| ಎಸ್. ನಟರಾಜ್ | ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪರಿಸರಕೋಶ) |
| ಶ್ರೀಮತಿ.ಪಿ. ಸೌಮ್ಯ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಮಹದೇವಪುರ) |
| ಎಂ. ಶ್ರೀನಿವಾಸ್ | ಸದಸ್ಯರು | ಸಹಾಯಕ ಶಸ್ತ್ರ ಚಿಕಿತ್ಸಕರು (ಎನ್.ಆರ್. ಕಾಲೋನಿ) |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1. ವಿಷಯದ ಸಂಖ್ಯೆ: ಸಾಆಸ್ಥಾಸ/18/2011-12:

ಆಯುಕ್ತರ ದಿನಾಂಕ: 27-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಟಿ. ರಾಜ (ಆಟೋ ರಾಜ), ಸಂಸ್ಥಾಪಕರು, ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಬೆಂಗಳೂರು ರವರು ತಮ್ಮ ಸಂಸ್ಥೆಯ ವತಿಯಿಂದ ಸುಮಾರು 400 ರಿಂದ 450 ಜನ ಅನಾಥರುಗಳನ್ನು ಸಾಕುತ್ತಿದ್ದು, ಇಂತಹ ಅನಾಥರುಗಳನ್ನು ಪೋಲೀಸರು, 108 ಆಂಬ್ಯುಲೆನ್ ಮತ್ತು ಸರ್ಕಾರಿ ಆಸ್ಪತ್ರೆಯವರು ವಿವಿಧ ರಸ್ತೆಗಳಲ್ಲಿ ಬಿದ್ದಿರುವವರನ್ನು ಹಾಗೂ ಬೀದಿಯಲ್ಲಿ ತಿರುಗುವ ಭಿಕ್ಷುಕರನ್ನು ಕರೆ ತಂದು ಮೇಲ್ಕಂಡ ಅನಾಥಶ್ರಮದಲ್ಲಿ ಹಾಕಿ ಹೋಗುತ್ತಿದ್ದು, ಇವರುಗಳು ಅನೇಕ ಖಾಯಿಲೆ ರುಜುನಗಳಿಂದ ನರಳಿ ಸಾಯುತ್ತಾರೆ. ಇಂತಹವರನ್ನು ಸುಡಲು ಅಥವಾ ಮಣ್ಣು ಮಾಡಲು ಬೆಂಗಳೂರು ನಗರದ ವಿವಿಧ ವಿದ್ಯುತ್ ಚಿತಾಗಾರಗಳಿಗೆ ತೆರಳಿದಾಗ ಅಲ್ಲಿನ ಅಧಿಕಾರಿ/ಸಿಬ್ಬಂದಿಗಳು ಸೂಕ್ತ ಪ್ರಾತಿನಿಧ್ಯ ನೀಡದೇ ಇರುವುದರಿಂದ ತೊಂದರೆಯಾಗುತ್ತಿರುವುದಾಗಿ ಹಾಗೂ ಯಾವುದೇ ಶುಲ್ಕವನ್ನು ಪಡೆಯದೇ (ಪ್ರಸ್ತುತ ರೂ.200.00 ಗಳನ್ನು ವಿಧಿಸಲಾಗುತ್ತಿದೆ) ಬೆಂಗಳೂರು ಮಹಾನಗರ ಪಾಲಿಕೆಯ/ಸರ್ಕಾರದ ವತಿಯಿಂದ ಉಚಿತವಾಗಿ ಶವ ಸಂಸ್ಕಾರ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಶ್ರೀ.ಟಿ. ರಾಜ ಅಲಿಯಾಸ್ ಆಟೋ ರಾಜ, ಸಂಸ್ಥಾಪಕರು ಇವರು ತಮ್ಮ ಸಂಸ್ಥೆಯ ಕಾರ್ಯ ವೈಖರಿಯ ಬಗ್ಗೆ ಅನೇಕ ಜನಪ್ರಿಯ ದಿನಪತ್ರಿಕೆ, ವಾರ ಪತ್ರಿಕ ಮತ್ತು ಮಾಸ ಪತ್ರಿಕೆಗಳಲ್ಲಿನ ವರದಿಗಳು ಮತ್ತು ಅನೇಕ ದೂರದರ್ಶನ ಮಾಧ್ಯಮಗಳಲ್ಲಿ ಪ್ರಸಾರವಾಗಿರುತ್ತದೆ. ಇವರು ತಮ್ಮ ಸಂಸ್ಥೆಯ ವತಿಯಿಂದ ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯು ನಿಜಕ್ಕೂ ಶ್ಲಾಘನೀಯವಾಗಿದೆ. ಇಂತಹ ಸಾಮಾಜಿಕ ಹಿತಾಸಕ್ತಿಯುಳ್ಳ ಕೆಲಸಗಳನ್ನು ಮಾಡುತ್ತಿರುವ ಇಂತಹ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಸಂಸ್ಥಾಪಕರಾದ ಶ್ರೀ.ಟಿ. ರಾಜ (ಆಟೋ ರಾಜ), ಇವರಿಗೆ ಆದ್ಯತೆ ಮೇಲೆ ಯಾವುದೇ ಶುಲ್ಕವನ್ನು ಪಡೆಯದೇ ಅನಾಥ ಶವಗಳ ಸಂಸ್ಕಾರ ಮಾಡಲು ಅನುಮತಿ ನೀಡುವ ಬಗ್ಗೆ ತೀರ್ಮಾನಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

Geetha Shashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**2. ವಿಷಯದ ಸಂಖ್ಯೆ: ಸಾಆಸ್ಥಾಸ/19/2011-12:**

ಸಂಖ್ಯೆ: ಮು.ಆ./ಪಿ.ಆರ್./468/2011-12, ದಿನಾಂಕ: 28-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಬಿ.ಎಸ್. ಸತ್ಯನಾರಾಯಣ (ಕಟ್ಟೆ ಸತ್ಯ) ಮಾಜಿ ಆಡಳಿತ ಪಕ್ಷದ ನಾಯಕರು, ಬೃಬೆಂ.ಮ.ಪಾಲಿಕೆರವರು ಮನವಿ ಪತ್ರವನ್ನು ಸಲ್ಲಿಸಿದ್ದು, ಪಾಲಿಕೆಯ ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಯು ಎಲ್ಲಾ ಸೌಲಭ್ಯಗಳನ್ನೊಳಗೊಂಡ ಸುಸಜ್ಜಿತ ಕಟ್ಟಡವನ್ನು ಹೊಂದಿದ್ದು, ವೈದ್ಯರಿಲ್ಲದ ಕಾರಣ ಈ ಆಸ್ಪತ್ರೆಗೆ ಮಹಿಳೆಯರು, ಗರ್ಭಿಣಿ ಸ್ತ್ರೀಯರು, ಮಕ್ಕಳು ಒಳ ಮತ್ತು ಹೊರ ರೋಗಿಗಳಾಗಿ ಬರುವುದು ಬಹಳಷ್ಟು ಕಡಿಮೆಯಾಗಿರುತ್ತದೆಂದು, ಬನಶಂಕರಿ ರೆಫರಲ್ ಆಸ್ಪತ್ರೆಯಿಂದ ವೈದ್ಯರನ್ನು ವಾರಕ್ಕೆ ಒಂದು ಅಥವಾ ಎರಡು ಬಾರಿ ಈ ಆಸ್ಪತ್ರೆಗೆ ನಿಯೋಜಿಸಲು ಕೋರಿದ್ದರು ಸಹ ವೈದ್ಯರ ಕೊರತೆಯಿಂದ ಈ ಆಸ್ಪತ್ರೆಗೆ ನಿಯೋಜಿಸಲು ಸಾಧ್ಯವಿರುವುದಿಲ್ಲ.

ದಿನಾಂಕ: 04-07-2011 ರಂದು ಮಾನ್ಯ ಆಯುಕ್ತರು ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಗೆ ಭೇಟಿ ನೀಡಿದ್ದು, ಈ ಪ್ರದೇಶದಲ್ಲಿರುವ ಸಾಕಷ್ಟು ಹೆಸರಾಂತ ಸ್ತ್ರೀ ರೋಗ ತಜ್ಞ ವೈದ್ಯರುಗಳು ಭೇಟಿ ಮಾಡಿದ್ದು, ಇವರ ಸೇವೆಯನ್ನು ಪಾಲಿಕೆಯ ಈ ಆಸ್ಪತ್ರೆಗೆ ಒದಗಿಸಲು ಸಿದ್ಧರಿರುವುದರಿಂದ ಇವರ ಸೇವೆಯನ್ನು ಬಳಸಿಕೊಳ್ಳಲು, ಖಾಸಗಿ ತಜ್ಞ ವೈದ್ಯರು ಸಲ್ಲಿಸಿರುವ ಕಾರ್ಯಚಟುವಟಿಕೆಯ ಮೇಲೆ ಕ್ರಮ ಕೈಗೊಂಡು, ಪ್ರಸ್ತಾಪಿತ ಹೆರಿಗೆ ಆಸ್ಪತ್ರೆಯನ್ನು ಉನ್ನತ ದರ್ಜೆಗೇರಿಸಲು, ಶ್ರೀ.ಬಿ.ಎಸ್.ಸತ್ಯನಾರಾಯಣ (ಕಟ್ಟೆ ಸತ್ಯ) ಪಾಲಿಕೆ ಸದಸ್ಯರು ಕೋರಿರುತ್ತಾರೆ.

ಅದರಂತೆ, ಮೆ:ಸೋಬೋಜಿನಿಯನ್ ಡಾಕ್ಟರ್ಸ್ ಪ್ರೈವೇಟ್ ಲಿಮಿಟೆಡ್ (SBOBGYN Doctor's Co. Pvt. Ltd.,) ರವರು ಪತ್ರವನ್ನು ಸಲ್ಲಿಸಿದ್ದು, ಈ ಸಂಸ್ಥೆಯ ವತಿಯಿಂದ, ಎಲ್ಲಾ ರೀತಿಯ ಸೌಲಭ್ಯಗಳನ್ನು ಅಂದರೆ ಹೆರಿಗೆಗೆ ಸಂಬಂಧಿಸಿದಂತೆ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ತಜ್ಞ ವೈದ್ಯರುಗಳಿಂದ, ಉತ್ತಮ ವೈದ್ಯಕೀಯ ಸೇವೆಯನ್ನು, ಪಾಲಿಕೆಯ ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಗೆ ನೀಡಲು ಒಪ್ಪಿಕೊಂಡಿರುತ್ತಾರೆ.

ಪಾಲಿಕೆಯ ಆಸ್ಪತ್ರೆಗಳಲ್ಲಿ ವೈದ್ಯರು ತೀವ್ರ ಕೊರತೆಯಿದ್ದು, ಸರ್ಕಾರದ ಆದೇಶದ ಮೇರೆಗೆ ಈಗಾಗಲೇ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸೇವೆಯನ್ನು ಪಾಲಿಕೆಯು ಹಿಂತಿರುಗಿಸಲು ಕ್ರಮವಹಿಸಲಾಗುತ್ತಿದೆ. ಈ ಕಾರಣ ಪಾಲಿಕೆಯಲ್ಲಿ ಅವಶ್ಯಕತೆಯಿರುವ ವೈದ್ಯರುಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ, ಮತ್ತು ಅಲ್ಲಿಯವರೆವಿಗೆ ತಾತ್ಕಾಲಿಕವಾಗಿ ವೈದ್ಯರುಗಳ ಸೇವೆಯನ್ನು ಗೌರವಧನದ ಆಧಾರದ ಮೇಲೆ ಪಡೆಯಲು ಕ್ರಮವಹಿಸಲಾಗುತ್ತಿದೆ.

ಪಾಲಿಕೆಯ ನರಸಿಂಹರಾಜ ಹೆರಿಗೆ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಆರೋಗ್ಯ ಚಿಕಿತ್ಸೆ ನೀಡುವ ಹಿತದೃಷ್ಟಿಯಿಂದ ಮೆ:ಸೋಬೋಜಿನಿಯನ್ ಡಾಕ್ಟರ್ಸ್ ಪ್ರೈವೇಟ್ ಲಿಮಿಟೆಡ್ (SBOBGYN Doctor's Co. Pvt. Ltd.,) ರವರಿಂದ ತಜ್ಞ ವೈದ್ಯರ ಸೇವೆಯನ್ನು ಬಳಸಿಕೊಳ್ಳಲು ಈ ಸಂಸ್ಥೆಯೊಂದಿಗೆ ಎಂ.ಓ.ಯು ಮಾಡಿಕೊಳ್ಳುವ ಸಂಬಂಧ ನಿರ್ಣಯಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

**3. ವಿಷಯದ ಸಂಖ್ಯೆ: ಸಾಆಸ್ಥಾಸ/21/2011-12:**

ಸಂಖ್ಯೆ: ಆ/ಪಿಎಸ್ಆರ್/ /11-12, ದಿನಾಂಕ: 03-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ದೈನಂದಿನ ಘನತ್ಯಾಜ್ಯವನ್ನು MSW 2000 Rules ದಂತೆ ರೀತಿಯಲ್ಲಿ ಸಂಸ್ಕರಿಸುವ ಜವಾಬ್ದಾರಿಯು ಪಾಲಿಕೆಯದ್ದಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯು ಈಗಾಗಲೇ ಹಲವಾರು ನವೀನ ಮಾದರಿಯ ತಂತ್ರಜ್ಞಾನವನ್ನು ಬಳಸಿಕೊಂಡು ಘನತ್ಯಾಜ್ಯ ಸಂಸ್ಕರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಅಂಶಗಳ ಬಗ್ಗೆ ಮಾನ್ಯ ಲೋಕ ಅದಾಲತ್, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಾನ್ಯ ಮಾನವ ಹಕ್ಕು ಆಯೋಗವು ಇಂಥಹ ಯೋಜನೆಗಳ ಅನುಷ್ಠಾನದ ಬಗ್ಗೆ ನಿರಂತರವಾಗಿ (ಉಸ್ತುವಾರಿ) ಮಾನಿಟರಿಂಗ್ ಮಾಡುತ್ತಿದೆ.

ಹಾಗೂ ಈ ಬಗ್ಗೆ ಕಾಲಕಾಲಕ್ಕೆ ಸದರಿ ಯೋಜನೆಗಳ ಅನುಷ್ಠಾನದ ಬಗ್ಗೆ ವಿವರವಾದ ವರದಿಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ಲೋಕ ಅದಾಲತ್ ನ್ಯಾಯಾಲಯಕ್ಕೆ ಹಾಗೂ ಯೋಜನಾ ವರದಿ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅನೇಕ ಆಧುನಿಕ ತಂತ್ರಜ್ಞಾನಗಳನ್ನು ಪೌರ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸಲು

ಅಳವಡಿಸಿಕೊಳ್ಳಲಾಗಿದೆ, ಇಂತಹ ಯೋಜನೆಗಳ ಪೈಕಿ ಈಗಾಗಲೇ ಮಂಡೂರಿನ ಸರ್ವೆ ನಂ.155, ರಲ್ಲಿ ಖಾಸಗಿ ಸಹ ಭಾಗತ್ವದೊಂದಿಗೆ ಮೆ॥ಶ್ರೀನಿವಾಸ ಗಾಯಿತ್ರಿ ರಿಸೋರ್ಸ್ ರಿಕವರಿ ಲಿ., ಸಂಸ್ಥೆ ವತಿಯಿಂದ ತ್ಯಾಜ್ಯದಿಂದ 8 ಮೆಘಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಯು ಪೂರ್ಣಗೊಳ್ಳುವ ಹಂತದಲ್ಲಿದೆ.

ಹಾಲಿ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ದಿನ ಸುಮಾರು 3000 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಈ ಪ್ರಮಾಣವು ಮುಂಬರುವ ದಿನಗಳಲ್ಲಿ 5000 ಮೆಟ್ರಿಕ್ ಟನ್ ತಲುಪುವ ಸಾಧ್ಯತೆ ಇದ್ದು, ಸದರಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕಾದ ಅವಶ್ಯಕತೆಯಿರುತ್ತದೆ.

ಈ ನಿಟ್ಟಿನಲ್ಲಿ ಮತ್ತೊಂದು ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ಅವಶ್ಯಕತೆಯಿರುತ್ತದೆ, ಆದ ಕಾರಣ ಸರ್ವೆ ನಂ.96 ಬಗ್ಗನದೊಡ್ಡಿಗ್ರಾಮ, ಆನೇಕಲ್ ತಾಲ್ಲೂಕು, ಇಲ್ಲಿ ಲಭ್ಯವಿರುವ 30 ಎಕರೆ ಪ್ರದೇಶದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಸದರಿ ಘಟಕವು DBOT ಆಧಾರದ ಯೋಜನೆಯಾಗಿದ್ದು, ಸದರಿ ಘಟಕ ಸ್ಥಾಪಿಸಲು ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ, ಘಟಕ ಸ್ಥಾಪಿಸಲು ಅವಶ್ಯವಿರುವ ಸ್ಥಳವನ್ನು ಲೀಸ್ ಆಧಾರದ ಮೇರೆಗೆ ನೀಡಬೇಕಾಗಿರುತ್ತದೆ.

ಸದರಿ ಘಟಕ ಸ್ಥಾಪಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲು ಅವಶ್ಯವಿರುವ ಟೆಂಡರ್ ದಸ್ತಾವೇಜನ್ನು ತಯಾರಿಸಲು ಸರ್ಕಾರಿ ಸ್ವಾಮ್ಯದ ಮೆ॥ಐಡೆಕ್ ಸಂಸ್ಥೆರವರು ಒಪ್ಪಿದ್ದು, ಈ ಕಾರ್ಯಕ್ಕಾಗಿ ರೂ.4.95 ಲಕ್ಷ ಪಾವತಿಸಲು ಕೋರಿರುತ್ತಾರೆ.

ಈ ಎಲ್ಲಾ ವಿಷಯಗಳನ್ನು ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸುತ್ತಾ, ಈ ಕೆಳಕಂಡ ವಿಷಯಗಳಿಗೆ ಅನುಮೋದನೆ ಕೋರಿದೆ.

- ಸರ್ವೆ ನಂ.96 ಬಗ್ಗನದೊಡ್ಡಿ ಗ್ರಾಮ, ಆನೇಕಲ್ ತಾಲ್ಲೂಕು, ಇಲ್ಲಿ ಲಭ್ಯವಿರುವ 30 ಎಕರೆ ಪ್ರದೇಶದಲ್ಲಿ 1000 MTPD ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪಿಸುವ ಸಲುವಾಗಿ ಟೆಂಡರ್ ಆಹ್ವಾನಿಸಲು ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆಯಲು ಆದೇಶ.
- ಟೆಂಡರ್ ದಸ್ತಾವೇಜನ್ನು ತಯಾರಿಸಲು ಸರ್ಕಾರಿ ಸ್ವಾಮ್ಯದ ಮೆ॥ಐಡೆಕ್ ಸಂಸ್ಥೆರವರಿಗೆ ರೂ.4.95 ಲಕ್ಷ ಪಾವತಿಸಲು ಅನುಮೋದನೆ.
- ಘಟಕ ಸ್ಥಾಪಿಸಲು ಅವಶ್ಯವಿರುವ ಸ್ಥಳವನ್ನು 20 ವರ್ಷ ಲೀಸ್ ಆಧಾರದ ಮೇರೆಗೆ ನೀಡಲು ಟೆಂಡರ್ ನಲ್ಲಿ ಷರತ್ತನ್ನು ಅಳವಡಿಸಲು ಅನುಮೋದನೆ.

ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 4. ವಿಷಯದ ಸಂಖ್ಯೆ: ಸಾಆಸ್ಥಾಸ/22/2011-12:

ಆಯುಕ್ತರ ದಿನಾಂಕ: 08-08-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ: 03-03-2011 ರಂದು ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಲಿನ ಗ್ರಾಮಗಳ ನಾಗರೀಕರೊಂದಿಗೆ ಈ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ ಹಾಗೂ ದಿನಾಂಕ: 05-03-2011 ರಂದು ಮಾವಳ್ಳಿಪುರ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ ಪರಿವೀಕ್ಷಿಸಿದಾಗ ಸ್ಥಳೀಯರು ಮಂಡಿಸಿದ ಬೇಡಿಕೆಯಂತೆ, ಸ್ಥಳೀಯ ಯಲಹಂಕ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ.ವಿಶ್ವನಾಥ್ ರವರೊಂದಿಗೆ ಚರ್ಚಿಸಿ ಮಾವಳ್ಳಿಪುರ ಘನತ್ಯಾಜ್ಯ ಘಟಕದ ಸುತ್ತಲಿನ ಹಳ್ಳಿಗಳಲ್ಲಿ 13 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷಗಳ ಯೋಜನೆ ರೂಪಿಸಿ ಲೆಕ್ಕಶೀರ್ಷಿಕೆ ಪಿ2200/83 13ನೇ ಹಣಕಾಸು ಯೋಜನೆ ಅಡಿಯಲ್ಲಿ ಅನುದಾನ ಒದಗಿಸಿ ಕಾಮಗಾರಿ ಸಂಕೇತಗಳನ್ನು ನೀಡಲಾಗಿರುತ್ತದೆ.

ಈ ಪಟ್ಟಿಯ ಕ್ರಮ ಸಂಖ್ಯೆ 2 ರಲ್ಲಿ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಈಗಾಗಲೇ ಹಾಕಿರುವ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ರೂ.71.00 ಲಕ್ಷಗಳ ಕಾಮಗಾರಿಯು ಸೇರಿರುತ್ತದೆ. ಸದರಿ

Shashi Kumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಘನತ್ಯಾಜ್ಯಕ್ಕೆ ಹೊದಿಕೆ ಇಲ್ಲದ ಕಾರಣ ಈ ತ್ಯಾಜ್ಯದ ಮೇಲೆ ಬೀಳುವ ಮಳೆ ನೀರಿನಿಂದಾಗಿ ಸ್ಥಳೀಯ ಪ್ರದೇಶವು ಕಲುಷಿತಗೊಳ್ಳುವುದನ್ನು ತಡೆಯಲು ಈ ತ್ಯಾಜ್ಯಕ್ಕೆ ಹೊದಿಕೆ ಹಾಕುವುದು ಅವಶ್ಯವಿರುತ್ತದೆ.

ಅದರಂತೆ ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಈಗಾಗಲೇ ಹಾಕಿರುವ ಘನತ್ಯಾಜ್ಯಕ್ಕೆ ಹೊದಿಕೆ ಹಾಕುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ಸೂಕ್ತ ಅನುವುಗಳೊಂದಿಗೆ 2011-12 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ಬೆಂಗಳೂರು ವೃತ್ತದ ದರಪಟ್ಟಿಯನ್ನು ಆಧರಿಸಿ ರೂ.71.00 ಲಕ್ಷಗಳಿಗೆ ತಯಾರಿಸಲಾಗಿದ್ದು, (ಕಾಮಗಾರಿ ಸಂಕೇತ 310-11-000032) ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 5. ವಿಷಯದ ಸಂಖ್ಯೆ: ಸಾಆಸ್ಥಾಸ/23/2011-12:

ಸಂಖ್ಯೆ: ಮು.ಆ./ಪಿಆರ್/500/11-12, ದಿನಾಂಕ: 08-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ: ಉತ್ತಾನ ಚಾರಿಟಬಲ್ ಟ್ರಸ್ಟ್, ಇಂದಿರಾ 534, ರಾಜೇಶ್ವರಿ ದೇವಸ್ಥಾನ ಬಳಿ, ರಾಜೇಶ್ವರಿ ನಗರ, ಬೆಂಗಳೂರು-98 ರವರು ಇವರ ಸಂಸ್ಥೆಯ ವತಿಯಿಂದ ಕಂಡಿಕೆ-6 ರಿಂದ 10 ರಲ್ಲಿ ವಿವರಿಸಿರುವ ರೀತ್ಯಾ ಟೆಲಿಮೆಡಿಸನ್ ಮೂಲಕ ಸಾರ್ವಜನಿಕರಿಗೆ ಉಚಿತವಾಗಿ ಚಿಕಿತ್ಸಾ ಸೇವೆಯನ್ನು ನೀಡಲಾಗುವುದೆಂದು ಇದಕ್ಕಾಗಿ ಬೃ.ಬೆಂ.ಮ.ಪಾಲಿಕೆಯ ಆಸ್ಪತ್ರೆಗಳಲ್ಲಿ ಕಿಯೋಸ್ಕಗಳನ್ನು ಸಹ ಸ್ಥಾಪಿಸಲಾಗುವುದೆಂದು, ಇದಕ್ಕಾಗಿ ಬೇಕಾಗಿರುವ ಅವಶ್ಯಕ ಹಣವನ್ನು ಸದರಿ ಸಂಸ್ಥೆಯಿಂದ ಮತ್ತು ದಾನಿಗಳಿಂದ ಪಡೆದು ನೀಡಲಾಗುವುದೆಂದು, ಈ ಚಿಕಿತ್ಸಾ ಸೇವೆಯನ್ನು **ಪಾಲಿಕೆಯ ಆರೋಗ್ಯ ಕೇಂದ್ರಗಳಲ್ಲಿ** (1) ಬನಶಂಕರಿ (2) ವಿದ್ಯಾಪೀಠ (3) ಜೆ.ಪಿ.ನಗರ (4) ಕೆ.ಎಸ್.ಲೇಔಟ್ (5) ಬಿಟಿಎಂ ಲೇಔಟ್ (6) ತಾವರೆಕೆರೆ (7) ಅವಲಹಳ್ಳಿ (8) ಬಿನ್ನಿಪೇಟೆ (9) ನಾಯಂಡನಹಳ್ಳಿ (10) ಚಂದ್ರಾಲೇಔಟ್ (11) ಚಾಮರಾಜಪೇಟೆ (12) ಗೋವಿಂದರಾಜನಗರ (13) ಬೊಮ್ಮನಹಳ್ಳಿ ಮತ್ತು **ನಗರ ಕುಟುಂಬ ಕಲ್ಯಾಣ ಕೇಂದ್ರಗಳಾದ** (1) ಬನಶಂಕರಿ (2) ಬಸವನಗುಡಿ (3) ವಿ.ವಿ.ಪುರಂ (4) ಜಯನಗರ (5) ವಿಜಯನಗರ (6) ವಿಲ್ಸನ್ ಗಾರ್ಡನ್ ಗಳಲ್ಲಿ ಒಟ್ಟು 19 ಆಸ್ಪತ್ರೆಗಳಲ್ಲಿ ಮೊದಲಿಗೆ ಪ್ರಾರಂಭಿಸಲು ಮತ್ತು ಈ ಯೋಜನೆಯನ್ನು ಒಂದು ವರ್ಷದವರೆಗೆ ಅನುಷ್ಠಾನಗೊಳಿಸುವವರೆಗೂ ತರಬೇತಿ ಮತ್ತು ಉಪಕರಣಗಳ ದುರಸ್ಥಿ ಮತ್ತು ನಿರ್ವಹಣೆಯನ್ನು ಸಹ ನಿರ್ವಹಿಸುವುದಾಗಿಯೂ ಆಸ್ಪತ್ರೆಗಳಲ್ಲಿ ಸ್ಥಳಾವಕಾಶ ಮತ್ತು ಈ ಚಿಕಿತ್ಸೆಯನ್ನು ನೀಡಲು ಅನುಮತಿ ಕೋರಿರುತ್ತಾರೆ, ಇವರು ನೀಡುವ ಚಿಕಿತ್ಸಾ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಈ ಯೋಜನೆಯ ಪ್ರಮುಖ ಮುಖ್ಯಾಂಶಗಳು ಈ ಕೆಳಕಂಡಂತಿರುತ್ತದೆ (Kshema)**

1. Electronic health record (Patient registration, Vital signs, symptoms & history diagnosis & Prescription.
2. Automated capture of vital signs Viz, BP,ECG SP02 & temperature
3. Automatic defechan of malaria parositc porosity & Tuberculosis Bacili
4. Integevation of Audio/Video capabilities

**ಈ ಯೋಜನೆಯ ಅನುಷ್ಠಾನದಿಂದ ಆಗುವ ಉಪಯೋಗಗಳು**

1. Doctors Automted Process
2. Optimized productivity
3. Enhanced Patient experience
4. Increases time for diagnosis

**Utthana ಸಂಸ್ಥೆಯವರು ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ**

1. Executive Summary
2. Proposed Project:- Kshema Kiosk- Unfiled Health care Management
3. Proposed Project:- Kshema Software
4. Kshmema Kiosk-Benefits and envisaged
5. Im pilementation
6. Deliveries
7. Trining & Support
8. Requirement from BBMP

ಮೆ: ಉತ್ತನ ಚಾರಿಟಬಲ್ ಟ್ರಸ್ಟ್ ರವರು ಪ್ರಾರಂಭಿಸುವ ಮೇಲ್ಕಂಡಂತೆ ವಿವರಿಸಿರುವ ಈ ಯೋಜನೆಯ ಬಗ್ಗೆ ಪಾಲಿಕೆಯ ಯೋಜನಾ ಸಮನ್ವಯಾಧಿಕಾರಿಗಳು (ಆರ್.ಸಿ.ಹೆಚ್) ಮತ್ತು ಮುಖ್ಯ ಆರೋಗ್ಯಾಧಿಕಾರಿಗಳು ಸಹಮತಿ ವ್ಯಕ್ತಪಡಿಸಿದ್ದು, ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯಲ್ಲಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವ ಕಾರಣ ಈ ಯೋಜನೆಯು ಸಾರ್ವಜನಿಕರಿಗೆ ಸಹಕಾರಿಯಾಗುತ್ತದೆಂದು, ಸಾರ್ವಜನಿಕರಿಂದ ಮತ್ತು ಪಾಲಿಕೆಯಿಂದ ಯಾವುದೇ ಆರ್ಥಿಕ ನೆರವು ಅಪೇಕ್ಷಿಸದೇ ಉಚಿತವಾಗಿ ಟೆಲಿಮೆಡಿಸನ್ ಸೌಲಭ್ಯ ಒದಗಿಸುವ ಮೆ: ಉತ್ತಾನ ಚಾರಿಟಬಲ್ ಟ್ರಸ್ಟ್ ರವರಿಗೆ ಪಾರಂಭಿಕವಾಗಿ 19 ಆರೋಗ್ಯ ಕೇಂದ್ರಗಳಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಬಹುದು ಮತ್ತು ಈ ಚಿಕಿತ್ಸಾ ಸೇವೆಯು ಸಮರ್ಪಕವಾಗಿ ಸಾರ್ವಜನಿಕರಿಗೆ ದೊರೆಯುತ್ತಿರುವ ಬಗ್ಗೆ ಪಾಲಿಕೆಯ ವೈದ್ಯರುಗಳು ಪೂರ್ಣ ನಿಗಾ ಇಡಬೇಕಾಗಿರುತ್ತದೆ, ಮೆ: ಉತ್ತನ ಚಾರಿಟಬಲ್ ಟ್ರಸ್ಟ್ ಬೆಂಗಳೂರು ರವರಿಗೆ ಪಾಲಿಕೆಯ ಆಸ್ಪತ್ರೆಗಳಲ್ಲಿ ಟೆಲಿಮೆಡಿಸನ್ ಚಿಕಿತ್ಸಾ ಸೌಲಭ್ಯ ನೀಡಲು ಅನುಮತಿ ನೀಡುವ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 6. ವಿಷಯದ ಸಂಖ್ಯೆ: ಸಾಆಸ್ಥಾಸ/24/2011-12:

ಸಂಖ್ಯೆ: ಜಂ.ನಿ.(ಪಪಾ)/ಪಿ.ಆರ್./386/11-12, ದಿನಾಂಕ: 08-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶುಪಾಲನೆ ವಿಭಾಗದ ಅಡಿಯಲ್ಲಿ ಸಾಕುನಾಯಿಗಳ ಪರವಾನಗಿಯನ್ನು ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಸದರಿ ಕಾರ್ಯವನ್ನು ಬೈಲಾ 25 ರ ಅಡಿ ಸಾಕು ನಾಯಿಗಳ ಪರವಾನಗಿಗಾಗಿ ಶುಲ್ಕವನ್ನು ಸಾಕು ನಾಯಿ ಮಾಲೀಕರಿಂದ ವಸೂಲಿ ಮಾಡಿ, ಅನುಷ್ಠಾನಗೊಳಿಸಲಾಗುತ್ತಿದೆ. 1976 ರ ಕರ್ನಾಟಕ ಮುನ್ಸಿಫಲ್ ಕಾಯಿದೆ ಜಾರಿಗೆ ಬಂದ ನಂತರ ಬೈಲಾ 25 ಅನ್ನು ರದ್ದುಗೊಳಿಸಲಾಗಿರುತ್ತದೆ. ಆದುದರಿಂದ ಈಗಿನ ಪರಿಸ್ಥಿತಿಗೆ ಅನ್ವಯಿಸುವಂತೆ ಸಾಕುನಾಯಿ ಪರವಾನಗಿಗೆ ಸಂಬಂಧಿಸಿದಂತೆ, 1976 ರ K.M.C. ಕಾಯಿದೆ Section 423 ರಲ್ಲಿ ಆಯುಕ್ತರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಹಾಗೂ ಇದರ ಜೊತೆ Sub Section 21 ರಲ್ಲಿ ಪ್ರಾಣಿ ಮತ್ತು ಮನುಷ್ಯರಲ್ಲಿ ಅಪಾಯಕಾರಿ ರೋಗಗಳನ್ನು ತಡೆಗಟ್ಟುವ, Sub Section 22 ರ ಪ್ರಕಾರ ಕಡ್ಡಾಯವಾಗಿ ರೋಗನಿರೋಧಕ ಚುಚ್ಚುಮದ್ದು ಹಾಕಿಸುವ ಕ್ರಮವನ್ನು ಜಾರಿಗೊಳಿಸುವ ನಿಯಮಗಳ ಅಡಿಯಲ್ಲಿ ಸಾಕು ನಾಯಿಗಳ ಪರವಾನಗಿ ಬೈಲಾವನ್ನು ಮಾಡಲಾಗಿರುತ್ತದೆ.

T. Shashikumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನಾಯಿಗಳಲ್ಲಿ ಹುಚ್ಚುನಾಯಿ ರೋಗ ತಡೆಗಟ್ಟಲು ಪ್ರತಿ ವರ್ಷ ಸದರಿ ರೋಗದ ವಿರುದ್ಧ ಹುಚ್ಚುಮದ್ದು ಹಾಕುವಿಕೆ ಹಾಗೂ ಸಾಕುನಾಯಿಗಳಿಂದಾಗಿ ಬೀದಿನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು ನಿಯಂತ್ರಣ ಪಡಿಸುವ ಉದ್ದೇಶದಿಂದ ಈ ಕೆಳಕಂಡ ನಿಭಂದನೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ಕಡ್ಡಾಯವಾಗಿ ಜಾರಿಗೊಳಿಸಲು ಉದ್ದೇಶಿಸಿದೆ.

(1) 8 ಚದುರದ ವರೆಗಿನ ಅಳತೆಯ ವಾಸದ ಕಟ್ಟಡದಲ್ಲಿ 1 ಶ್ವಾನವನ್ನು ಸಾಕಲು, 8 ರಿಂದ 20 ಚದುರದ ವರೆಗಿನ ವಾಸದ ಕಟ್ಟಡದಲ್ಲಿ 2 ಶ್ವಾನಗಳಿಗೆ ಮೀರದಂತೆ ಸಾಕಲು ಹಾಗೂ 20 ಚದುರಕ್ಕಿಂತ ಮೇಲ್ಪಟ್ಟ ವಾಸದ ಕಟ್ಟಡದಲ್ಲಿ ಗರಿಷ್ಠ 3 ಶ್ವಾನಗಳನ್ನು ಸಾಕಲು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

(2) ಒಂದು ಫ್ಲಾಟ್‌ನಲ್ಲಿ ಅನುಮೋದಿತ ತಳಿಯ 1 ಶ್ವಾನವನ್ನು ಮಾತ್ರ ಸಾಕಲು ಪಾಲಿಕೆಯಿಂದ ಪರವಾನಗಿ ಪಡೆಯುವುದು ಕಡ್ಡಾಯಗೊಳಿಸಲಾಗಿದೆ. ಸಾಕುನಾಯಿ ಪರವಾನಗಿ ಶುಲ್ಕದ ವಿವರಗಳು ಈ ಕೆಳಗಿನಂತಿವೆ.

| ವಿವರಗಳು | ಅಪಾಯಕಾರಿಯಾದ ಶುದ್ಧ ತಳಿ ಶ್ವಾನ ರೂ. (ಪಟ್ಟಿಯಲ್ಲಿರುವಂತೆ) | ಮಧ್ಯಮ ಗಾತ್ರದ ತಳಿ ಶ್ವಾನ ರೂ. | ಸಣ್ಣ ಗಾತ್ರದ ತಳಿ ಶ್ವಾನ ರೂ. | ಮಾಂಗ್ರೆಲ್ ನಾಯಿ ರೂ. |
|---|---|---|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಗೊಂಡ | 500/- | 300/- | 100/- | 30/- |
| ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಗಾಗಿಲ್ಲದ | 1,500/- | 900/- | 300/- | 90/- |

❖ ಮೈಕ್ರೋಚಿಪ್ ಅಳವಡಿಸಿದಲ್ಲಿ ವೆಚ್ಚ ಪ್ರತ್ಯೇಕ.

(3) ಸಾಕುನಾಯಿಗಳ ತಳಿ ಅಭಿವೃದ್ಧಿಗಾಗಿ ನಾಯಿಗಳನ್ನು ಸಾಕುವ ಕೆನಲ್‌ಗಳನ್ನು ಪಾಲಿಕೆಯ ಹಳೆಯ ವಲಯದ ಪ್ರದೇಶಗಳ ಹೊರಗಿನ ಪ್ರದೇಶಗಳಲ್ಲಿ ಗರಿಷ್ಠ 10 ಶ್ವಾನಗಳಿಗೆ ಮೀರದಂತೆ ಸಾಕಲು ಪರವಾನಗಿ ಕಡ್ಡಾಯವಾಗಿ ಪಡೆಯಬೇಕು. ಇದಕ್ಕಾಗಿ ವಾರ್ಷಿಕ ರೂ.25,000/- ಗಳ ಪರವಾನಗಿ ಶುಲ್ಕವನ್ನು ನಿಗಧಿಪಡಿಸಲಾಗಿದೆ.

ಕೆನಲ್‌ಗಳಲ್ಲಿ ಸಂತಾನೋತ್ಪತ್ತಿಗಾಗಿ ಶ್ವಾನಗಳಿಗೆ ಮೈಕ್ರೋಚಿಪ್ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಶ್ವಾನಗಳ ಮಾಲೀಕರೆ ಪ್ರತ್ಯೇಕವಾಗಿ ಭರಿಸಬೇಕಾಗಿರುತ್ತದೆ.

ಸಾಕು ಶ್ವಾನಗಳ ಪರವಾನಗಿ ಕಡ್ಡಾಯಗೊಳಿಸುವ ಸಲುವಾಗಿ ಹೊಸದಾಗಿ ಬೈಲಾಗಳನ್ನು ರಚಿಸಲಾಗಿದ್ದು, ಬೈಲಾಗಳಲ್ಲಿರುವ ನಿಯಮಗಳಂತೆ ಆಯುಕ್ತರಿಂದ ನೇಮಿತವಾದ ಅಧಿಕಾರಿ ಮತ್ತು ಸಿಬ್ಬಂದಿಗಳು ಕ್ರಮ ವಹಿಸಬಹುದಾಗಿರುತ್ತದೆ.

ಉತ್ತಮ ತಳಿಯ ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವ ಅಂಗಡಿಗಳಿಗೂ ಪರವಾನಗಿ ಕಡ್ಡಾಯಗೊಳಿಸಲಾಗಿದ್ದು, 1,000 ಚದುರ ಅಡಿಗಳ ವರೆಗೆ ಇರುವ ಮಾರಾಟ ಮಾಡುವ ಕೇಂದ್ರಗಳಿಗೆ ವಾರ್ಷಿಕ ರೂ.5,000/-, 1,001 ರಿಂದ 2,500 ಚದುರ ಅಡಿಗಳ ವರೆಗಿನ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.10,000/- ಹಾಗೂ 2,501 ಚದುರ ಅಡಿಗಳಿಗೆ ಮೇಲ್ಪಟ್ಟ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.25,000/- ಪರವಾನಗಿ ಶುಲ್ಕ ನಿಗಧಿಪಡಿಸಲಾಗಿದೆ. ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೂ ಸಹ ಪರವಾನಗಿಯನ್ನು ಕಡ್ಡಾಯಗೊಳಿಸಲಾಗಿದ್ದು, 1,000/- ಚದುರ ಅಡಿಗಳ ವರೆಗಿನ ವಿಸ್ತಾರದ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.3,000/-, 1,001 ಚದುರ ಅಡಿಗಳಿಂದ 2,500 ಚದುರ ಅಡಿಗಳ ವರೆಗಿನ ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ವಾರ್ಷಿಕ ರೂ.5,000/- ಹಾಗೂ 2,501 ಚದುರ ಅಡಿಗಳಿಗಿಂತ ಮೇಲ್ಪಟ್ಟ ಕೇಂದ್ರಗಳಿಗೆ ವಾರ್ಷಿಕ ರೂ.10,000/- ಪರವಾನಗಿ ಶುಲ್ಕ ನಗಧಿಪಡಿಸಲಾಗಿದೆ.

ದತ್ತು ತೆಗೆದುಕೊಂಡ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಬೀದಿಶ್ವಾನಗಳಿಗೆ ವಾರ್ಷಿಕ ರೂ.30/- ಪರವಾನಗಿ ಶುಲ್ಕ ಹಾಗೂ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಡದ ಬೀದಿ ನಾಯಿಗೆ ರೂ.90/- ನಿಗಧಿಪಡಿಸಲಾಗಿದೆ. ಜಾನುವಾರು ಕಲ್ಯಾಣ ಸಂಸ್ಥೆಗಳಲ್ಲಿರುವ ಶ್ವಾನಗಳಿಗೆ ಹಾಗೂ 10 ಕ್ಕೆ ಮೇಲ್ಪಟ್ಟು ಬೀದಿ ನಾಯಿಗಳನ್ನು ದತ್ತು ತೆಗೆದುಕೊಂಡ ಸಾರ್ವಜನಿಕರಿಗೆ (ಅಕ್ಕ-ಪಕ್ಕದ ಮನೆಯವರಿಂದ ಆಕ್ಷೇಪಣೆ ಇಲ್ಲದಿದ್ದಲ್ಲಿ ಮಾತ್ರ) ಸಾಕು ನಾಯಿ ಪರವಾನಗಿಯ ನಿಯಮಗಳು ಅನ್ವಯಿಸುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಪ್ರದೇಶಗಳಲ್ಲಿರುವ ಸಾಕು ಶ್ವಾನಗಳಿಗೆ, ಕೆನಲ್‌ಗಳಿಗೆ, ಶ್ವಾನ ಮರಿಗಳು ಹಾಗೂ ಇತರೆ ಮುದ್ದು ಪ್ರಾಣಿ, ಪಕ್ಷಿಗಳ ಮಾರಾಟ ಕೇಂದ್ರಗಳಿಗೆ ಮತ್ತು ಅಲಂಕಾರಿಕ ಮೀನುಗಳ ಮಾರಾಟ ಕೇಂದ್ರಗಳಿಗೆ ಪರವಾನಗಿಯನ್ನು ಕಡ್ಡಾಯಗೊಳಿಸಲಾಗಿದೆ. ಸಾಕು ನಾಯಿಗಳಿಂದಾಗಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗುವುದನ್ನು

ತಡೆಗಟ್ಟಬಹುದಾಗಿರುತ್ತದೆ, ಹಾಗೂ ಸಾಕು ನಾಯಿಗಳಿಂದ ಹುಚ್ಚು ನಾಯಿ ರೋಗ ಹರಡದಂತೆ ತಡೆಗಟ್ಟಬಹುದಾಗಿರುತ್ತದೆ. ಆದುದರಿಂದ ಸದರಿ ಪ್ರಸ್ತಾವನೆಯನ್ನು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 08-08-2011 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಉಪ ಆಯುಕ್ತರು (ಆರೋಗ್ಯ) |
| ಎಂ.ಮುನಿರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಡಾ॥ ಎಸ್. ರಾಜು | ಸದಸ್ಯರು | ಕಾರ್ಯಪಾಲಕ ಅಭಿಯಂತರರು-1 (ಪರಿಸರಕೋಶ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ. |
| ಎಲ್. ರಮೇಶ್ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | ಅಧೀಕ್ಷಕರು (ಬನಶಂಕರಿ ರೆಫರಲ್ ಆಸ್ಪತ್ರೆ) |
| ಎಸ್. ನಟರಾಜ್ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪೂರ್ವ) |
| ಎಂ. ಶ್ರೀನಿವಾಸ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಎನ್.ಎಸ್.ಜಿ.ಡಿ.ಯು.ಪಿ.) |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

## 1. ವಿಷಯದ ಸಂಖ್ಯೆ: ಸಾಆಸ್ಥಾಸ/10/11-12:

ದಿನಾಂಕ: 03-08-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಈಗಾಗಲೇ ಭಾರತದಲ್ಲಿ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ನಾನಾ ಸಮಸ್ಯೆಗಳನ್ನು ಎದುರಿಸಲು ಅನೇಕ ಪ್ರಾಂತ್ಯಗಳಲ್ಲಿ ಪ್ಲಾಸ್ಟಿಕ್ ನಿರ್ಮೂಲನೆ ಮಾಡಬೇಕೆಂದು ಸತತ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಪ್ರತಿ ಜನರ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆಯು ಕೈಬಿಡಲಾಗದಂತ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿದ್ದು, ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಸೂಕ್ತ ಪರಿಹಾರ ದೊರಕಿರುವುದಿಲ್ಲ. ಇದೇ ಒಂದು ದೊಡ್ಡ ಸಮಸ್ಯೆಯಾಗಿ ಎದುರಾಗಿದೆ ?

ಈ ದಿಕ್ಕಿನಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲೇಬೇಕಾದ ಸಮಯ ಎದುರಾಗಿದೆ. ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಈಗಾಗಲೇ ಕೆಲವು ನಗರಗಳು ಮತ್ತು ಹಲವಾರು ಪ್ರಾಂತ್ಯದಲ್ಲಿ ಮತ್ತು ನಮ್ಮ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯು (40 ಮೈಕ್ರಾನ್ಸ್) ಸಹ ಪ್ಲಾಸ್ಟಿಕ್ ಬಳಕೆಯನ್ನು ಸೂಕ್ತ ಕಾನೂನಿನ ಮೂಲಕ ರದ್ದುಪಡಿಸಿದ್ದರೂ ಸಹ ಈ ಮಾರ್ಗದಲ್ಲಿ ಸಂಪೂರ್ಣ ಯಶಸ್ವಿ ಕಂಡು ಬಂದಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಈಗಾಗಲೇ ಭಾರತದಲ್ಲಿ ನಿರುಪಯುಕ್ತ ಪ್ಲಾಸ್ಟಿಕ್ ಮೂಲಕ ತೈಲ ಉತ್ಪಾದನೆಯನ್ನು ಪ್ರಾರಂಭಿಸಿ ಕೆಲವು ಮಹಾನಗರಗಳಲ್ಲಿ ಯಶಸ್ವಿಯಾಗಿರುತ್ತಾರೆ. ಹಾಗೂ ಆ ಮಹಾನಗರದ ರಾಜ್ಯ ಸರ್ಕಾರ, ನಗರ ಸಭೆ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಮಿನಿಸ್ಟ್ರಿ ಆಫ್ ನಾನಾ ಕನ್ವೆನ್ಶನಲ್ ಎನರ್ಜಿ ಮತ್ತು ಮಿನಿಸ್ಟ್ರಿ ಆಫ್ ಪೆಟ್ರೋಲಿಯಂ ಅಂಡ್ ಪೆಟ್ರೋಕೆಮಿಕಲ್ಸ್ ಇಲಾಖೆಗಳು ಈ ಯೋಜನೆಗೆ ಅನುಮೋದನೆಯನ್ನು ನೀಡಿ ಸಾಕಷ್ಟು ನಗರಗಳಲ್ಲಿ ಈ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ. ಕರ್ನಾಟಕದಲ್ಲಿ ಈಗಾಗಲೇ ಮೈಸೂರಿನಲ್ಲಿ ಈ ಘಟಕವನ್ನು ಸ್ಥಾಪಿಸಲು ಟೆಂಡರ್‌ರನ್ನು ಆಹ್ವಾನಿಸಿ ರಾಜ್ಯ ಸರ್ಕಾರ ಮಟ್ಟದಲ್ಲಿ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ರದ್ದುಗೊಳಿಸುವ ನಿರ್ಧಾರ ಧೀರ್ಘ ಕಾಲದ ಯೋಜನೆಯಾಗಿದ್ದು, ಈ ಮಾರ್ಗದಲ್ಲಿ ಸಾಕಷ್ಟು ಜನರಲ್ಲಿ ಅರಿವು ಮೂಡಿಸಿ ಯಶಸ್ವಿಯನ್ನು ಕಾಣಬೇಕಾಗಿರುತ್ತದೆ ಹಾಗೂ ಇದಕ್ಕೆ ತಕ್ಕಂತೆ ಕಾನೂನು ಅನ್ನು ಜಾರಿಗೊಳಿಸಬೇಕಾಗಿರುತ್ತದೆ. ಆದರೆ, ಈಗಾಗಲೇ ಉಪಯೋಗದಲ್ಲಿರುವ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲು ಮೇಲೆ ಸೂಚಿಸಿರುವ ಘಟಕವನ್ನು ಸ್ಥಾಪಿಸಿದ್ದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟಬಹುದಾಗಿರುತ್ತದೆ.

ಲಭ್ಯವಿರುವ ಮಾಹಿತಿಗಳ ಪ್ರಕಾರ 10 ಟನ್ ಪ್ಲಾಸ್ಟಿಕ್‌ನ್ನು ಕಚ್ಚಾ ತೈಲವಾಗಿ ಮಾರ್ಪಡಿಸುವ ಸಾಮರ್ಥ್ಯವಿರುವ ಘಟಕವನ್ನು ಅನೇಕ ನಗರಗಳಲ್ಲಿ 5 ಎಕರೆ ಜಮೀನನ್ನು ಲ್ಯಾಂಡ್‌ಫಿಲ್ ಸೈಟಿನಲ್ಲಿ 25 ವರ್ಷ ಕಾಲಕ್ಕೆ ಲೀಸ್ ಮೂಲಕ ನೀಡಿ, ಭಾರತದ ಅನೇಕ ನಗರಗಳಲ್ಲಿ ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಈ ಷರತ್ತಿನಲ್ಲಿ ಕೇವಲ ಪಾಲಿಕೆ ಜಾಗವನ್ನು ನೀಡಿದ್ದಲ್ಲಿ ಬಿಡ್ಡುದಾರರು ಟಿಪ್ಪಿಂಗ್ ಫೀ ಪಡೆದುಕೊಳ್ಳದೆ ಪ್ಲಾಸ್ಟಿಕ್ ವಿಲೇವಾರಿಯನ್ನು ಮಾಡುತ್ತಿರುತ್ತಾರೆ. ಮತ್ತು ತೈಲ ಉತ್ಪಾದನೆಯಲ್ಲಿ ಬಿಡ್ಡುದಾರರು ಶೇ.2% ರಾಯಲ್ಟಿಯನ್ನು ಹಾಗೂ ಶೇ.20% ಸಿ.ಡಿ.ಎಂ. ಗ್ರಾಂಟ್ಸ್ ಅನ್ನು ಅಲ್ಲಿನ ಪಾಲಿಕೆಗೆ ನೀಡಿರುತ್ತಾರೆ. ಇದರ ಮೂಲಕ ಚಿಂದಿ ಆಯುವ ಮಂದಿಗೆ ಉದ್ಯೋಗಾವಕಾಶ ದೊರಕಿರುತ್ತದೆ ಮತ್ತು ಆ ಮಂದಿಗಳಿಗೆ ಸಮವಸ್ತ್ರ (Uniform) ವನ್ನು ಸಹ ನೀಡಲಾಗಿರುತ್ತದೆ. ಈ ಘಟಕದಲ್ಲಿ 1 ಟನ್ ಪ್ಲಾಸ್ಟಿಕ್‌ನಿಂದ 1000 ಲೀ ಕಚ್ಚಾ ತೈಲವನ್ನು ಉತ್ಪಾದಿಸಲಾಗುತ್ತಿದೆ. ಇದರಲ್ಲಿ ಉತ್ಪಾದನೆಯಾಗುವ 200 ಲೀ ಕಚ್ಚಾ ತೈಲವನ್ನು ಈ ಘಟಕದ ಚಾಲನೆಗೆ ಮರು ಬಳಕೆ ಮಾಡಲಾಗುತ್ತಿದೆ. ಹಾಗೂ 800 ಲೀ ತೈಲವನ್ನು ತೈಲ ಸಂಸ್ಕರಿಸುವ ಘಟಕಗಳಿಗೆ ಬಿಡ್ಡುದಾರರು ಮಾರಾಟ ಮಾಡುತ್ತಾರೆ. ಈ ಘಟಕದಿಂದ ಪರಿಸರಕ್ಕೆ ಯಾವುದೇ ವಿಧವಾದ ಹಾನಿ ಉಂಟಾಗುವುದಿಲ್ಲ. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯು ಇರುವುದಿಲ್ಲ. ಹಾಗೂ ಇದಕ್ಕೆ ಯಾವುದೇ ವೆಚ್ಚವು ತಗಲದಿರುವ ಕಾರಣ, ಬಜೆಟ್‌ನಲ್ಲಿ ಅನುದಾನ ಕಲ್ಪಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಮೇಲೆ ತಿಳಿಸಿರುವ ವಿಷಯದ ಮೇಲೆ ಬಿ.ಬಿ.ಎಂ.ಪಿ. ಸಹ ಈ ಮಾರ್ಗದಲ್ಲಿ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲ ಉತ್ಪಾದನೆ ಮಾಡಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಕೌನ್ಸಿಲ್ ಸಭೆಯಲ್ಲಿ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಪಡೆಯಲು ಟಿಪ್ಪಣಿ ಮಂಡಿಸಲಾಗಿದೆ.

1. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ ಹಾಗೂ ಆಪರೇಟರ್ ರವರುಗಳಿಂದ ರಾಜಧನ ಪಡೆಯಲಾಗುವುದು.
2. ಈ ಯೋಜನೆಗೆ DBOT ಆಧಾರದ ಮೇಲೆ ಘಟಕ ಸ್ಥಾಪಿಸಲು ಕೆ.ಸಿ.ಡಿ.ಸಿ. ಕೂಡ್ಲು ಮತ್ತು ಸಿಗೇಹಳ್ಳಿ ಪ್ರದೇಶದಲ್ಲಿ 5 ಎಕರೆ ಜಮೀನನ್ನು ಲೀಸ್ ಆಧಾರದ ಮೇಲೆ 20 ವರ್ಷ ಕಾಲಾವಧಿಗೆ ನೀಡಲು ಅನುಮೋದನೆ ಕೋರಿದೆ.
3. ಪ್ರತಿಯೊಂದು ಘಟಕದಲ್ಲೂ 10 ಮೆ.ಟ. ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲವನ್ನು ತಯಾರಿಸಲಾಗುವುದು. ಕಾಲಕಾಲಕ್ಕೆ ಹಂತ ಹಂತವಾಗಿ ಪ್ರತಿ 10 ಟನ್‌ಅನ್ನು ಹೆಚ್ಚುವರಿ ಮಾಡಲು ಅನುಮೋದನೆ.
4. ಈ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿ ರಚಿಸಲಾದ ಹೈ ಪವರ್ ಕಮಿಟಿಯ ಹಾಗೂ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ.
5. ಈ ಘಟಕ ಸ್ಥಾಪಿಸಲು ಟೆಂಡರ್ ಆಹ್ವಾನಿಸಲು ಅನುಮೋದನೆ.

ಈ ಬಗ್ಗೆ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 03-08-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 2. **ವಿಷಯದ ಸಂಖ್ಯೆ: ಸಾಆಸ್ಥಾಸ/15/11-12:**

ಆಯುಕ್ತರ ದಿನಾಂಕ: 21-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನ್ಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ರವರು ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರಗೆ ರೂ.5/- ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಠ 10 ಸಾವಿರ ಜನಸಂಖ್ಯೆಯುಳ್ಳ ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 15 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಉಲ್ಲೇಖ-(1) ರಲ್ಲಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಉಲ್ಲೇಖ-(2) ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದಲ್ಲಿ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆವುಳ್ಳ ಸ್ಥಳವನ್ನು 15 ವರ್ಷಗಳ ಅವಧಿಗೆ ಒದಗಿಸಬೇಕಾಗಿರುತ್ತದೆ.

ಸದರಿ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 10 ಸ್ಥಳಗಳಲ್ಲಿ Water Health India Pvt. Ltd., ರವರಿಗೆ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 15 ವರ್ಷಗಳ ಅವಧಿಗೆ ನೀಡಲು ಸರ್ಕಾರದ ಅನುಮೋದನೆ ಪಡೆಯಬೇಕಾಗಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿಯನ್ನು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

### **ನಿರ್ಣಯ:**

**ದಿನಾಂಕ: 21-07-2011 ರ ಆಯುಕ್ತರ ಟಿಪ್ಪಣಿ ಪರಿಶೀಲಿಸಿದೆ. ವಿಷಯವನ್ನು ಪುನರ ಪರಿಶೀಲಿಸಿ ಮಂಡಿಸುವ ಸಂಬಂಧ ಕಡತವನ್ನು ಹಿಂದಿರಿಗಿಸಲಾಗಿದೆ.**

## 3. **ವಿಷಯದ ಸಂಖ್ಯೆ: ಸಾಆಸ್ಥಾಸ/18/11-12:**

ಆಯುಕ್ತರ ದಿನಾಂಕ: 27-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಟಿ. ರಾಜ (ಆಟೋ ರಾಜ), ಸಂಸ್ಥಾಪಕರು, ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಬೆಂಗಳೂರು ರವರು ತಮ್ಮ ಸಂಸ್ಥೆಯ ವತಿಯಿಂದ ಸುಮಾರು 400 ರಿಂದ 450 ಜನ ಅನಾಥರುಗಳನ್ನು ಸಾಕುತ್ತಿದ್ದು, ಇಂತಹ ಅನಾಥರುಗಳನ್ನು ಪೋಲೀಸರು, 108 ಆಂಬ್ಯುಲೆನ್ ಮತ್ತು ಸರ್ಕಾರಿ ಆಸ್ಪತ್ರೆಯವರು ವಿವಿಧ ರಸ್ತೆಗಳಲ್ಲಿ ಬಿದ್ದಿರುವವರನ್ನು ಹಾಗೂ ಬೀದಿಯಲ್ಲಿ ತಿರುಗುವ ಭಿಕ್ಷಕರನ್ನು ಕರೆ ತಂದು ಮೆಲ್ಕಂಡ ಅನಾಥಶ್ರಮದಲ್ಲಿ ಹಾಕಿ ಹೋಗುತ್ತಿದ್ದು, ಇವರುಗಳು ಅನೇಕ ಖಾಯಿಲೆ ರುಜುನಗಳಿಂದ ನರಳಿ

Hanshashi Kumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸಾಯುತ್ತಾರೆ. ಇಂತಹವರನ್ನು ಸುಡಲು ಅಥವಾ ಮಣ್ಣು ಮಾಡಲು ಬೆಂಗಳೂರು ನಗರದ ವಿವಿಧ ವಿದ್ಯುತ್ ಚಿತಾಗಾರಗಳಿಗೆ ತೆರಳಿದಾಗ ಅಲ್ಲಿನ ಅಧಿಕಾರಿ/ಸಿಬ್ಬಂದಿಗಳು ಸೂಕ್ತ ಪ್ರಾತಿನಿಧ್ಯ ನೀಡದೇ ಇರುವುದರಿಂದ ತೊಂದರೆಯಾಗುತ್ತಿರುವುದಾಗಿ ಹಾಗೂ ಯಾವುದೇ ಶುಲ್ಕವನ್ನು ಪಡೆಯದೇ (ಪ್ರಸ್ತುತ ರೂ.200.00 ಗಳನ್ನು ವಿಧಿಸಲಾಗುತ್ತಿದೆ) ಬೆಂಗಳೂರು ಮಹಾನಗರ ಪಾಲಿಕೆಯ/ಸರ್ಕಾರದ ವತಿಯಿಂದ ಉಚಿತವಾಗಿ ಶವ ಸಂಸ್ಕಾರ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಶ್ರೀ.ಟಿ. ರಾಜ ಅಲಿಯಾಸ್ ಆಟೋ ರಾಜ, ಸಂಸ್ಥಾಪಕರು ಇವರು ತಮ್ಮ ಸಂಸ್ಥೆಯ ಕಾರ್ಯ ವೈಖರಿಯ ಬಗ್ಗೆ ಅನೇಕ ಜನಪ್ರಿಯ ದಿನಪತ್ರಿಕೆ, ವಾರ ಪತ್ರಿಕ ಮತ್ತು ಮಾಸ ಪತ್ರಿಕೆಗಳಲ್ಲಿನ ವರದಿಗಳು ಮತ್ತು ಅನೇಕ ದೂರದರ್ಶನ ಮಾಧ್ಯಮಗಳಲ್ಲಿ ಪ್ರಸಾರವಾಗಿರುತ್ತದೆ. ಇವರು ತಮ್ಮ ಸಂಸ್ಥೆಯ ವತಿಯಿಂದ ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯು ನಿಜಕ್ಕೂ ಶ್ಲಾಘನೀಯವಾಗಿದೆ. ಇಂತಹ ಸಾಮಾಜಿಕ ಹಿತಾಸಕ್ತಿಯುಳ್ಳ ಕೆಲಸಗಳನ್ನು ಮಾಡುತ್ತಿರುವ ಇಂತಹ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ನ್ಯೂಆರ್ಕ್ ಮಿಷನ್ ಆಫ್ ಇಂಡಿಯಾ, ಸಂಸ್ಥಾಪಕರಾದ ಶ್ರೀ.ಟಿ. ರಾಜ (ಆಟೋ ರಾಜ), ಇವರಿಗೆ ಆದ್ಯತೆ ಮೇಲೆ ಯಾವುದೇ ಶುಲ್ಕವನ್ನು ಪಡೆಯದೇ ಅನಾಥ ಶವಗಳ ಸಂಸ್ಕಾರ ಮಾಡಲು ಅನುಮತಿ ನೀಡುವ ಬಗ್ಗೆ ತೀರ್ಮಾನಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 4. ವಿಷಯದ ಸಂಖ್ಯೆ: ಸಾಆಸ್ಥಾಸ/19/11-12:

ಸಂಖ್ಯೆ: ಮು.ಆ./ಪಿ.ಆರ್./468/2011-12, ದಿನಾಂಕ: 28-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಬಿ.ಎಸ್. ಸತ್ಯನಾರಾಯಣ (ಕಟ್ಟೆ ಸತ್ಯ) ಮಾಜಿ ಆಡಳಿತ ಪಕ್ಷದ ನಾಯಕರು, ಬೃಬೆಂ.ಮ.ಪಾಲಿಕೆರವರು ಮನವಿ ಪತ್ರವನ್ನು ಸಲ್ಲಿಸಿದ್ದು, ಪಾಲಿಕೆಯ ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಯು ಎಲ್ಲಾ ಸೌಲಭ್ಯಗಳನ್ನೊಳಗೊಂಡ ಸುಸಜ್ಜಿತ ಕಟ್ಟಡವನ್ನು ಹೊಂದಿದ್ದು, ವೈದ್ಯರಿಲ್ಲದ ಕಾರಣ ಈ ಆಸ್ಪತ್ರೆಗೆ ಮಹಿಳೆಯರು, ಗರ್ಭಿಣಿ ಸ್ತ್ರೀಯರು, ಮಕ್ಕಳು ಒಳ ಮತ್ತು ಹೊರ ರೋಗಿಗಳಾಗಿ ಬರುವುದು ಬಹಳಷ್ಟು ಕಡಿಮೆಯಾಗಿರುತ್ತದೆಂದು, ಬನಶಂಕರಿ ರೆಫರಲ್ ಆಸ್ಪತ್ರೆಯಿಂದ ವೈದ್ಯರನ್ನು ವಾರಕ್ಕೆ ಒಂದು ಅಥವಾ ಎರಡು ಬಾರಿ ಈ ಆಸ್ಪತ್ರೆಗೆ ನಿಯೋಜಿಸಲು ಕೋರಿದ್ದರು ಸಹ ವೈದ್ಯರ ಕೊರತೆಯಿಂದ ಈ ಆಸ್ಪತ್ರೆಗೆ ನಿಯೋಜಿಸಲು ಸಾಧ್ಯವಿರುವುದಿಲ್ಲ.

ದಿನಾಂಕ: 04-07-2011 ರಂದು ಮಾನ್ಯ ಆಯುಕ್ತರು ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಗೆ ಭೇಟಿ ನೀಡಿದ್ದು, ಈ ಪ್ರದೇಶದಲ್ಲಿರುವ ಸಾಕಷ್ಟು ಹೆಸರಾಂತ ಸ್ತ್ರೀ ರೋಗ ತಜ್ಞ ವೈದ್ಯರುಗಳು ಭೇಟಿ ಮಾಡಿದ್ದು, ಇವರ ಸೇವೆಯನ್ನು ಪಾಲಿಕೆಯ ಈ ಆಸ್ಪತ್ರೆಗೆ ಒದಗಿಸಲು ಸಿದ್ಧರಿರುವುದರಿಂದ ಇವರ ಸೇವೆಯನ್ನು ಬಳಸಿಕೊಳ್ಳಲು, ಖಾಸಗಿ ತಜ್ಞ ವೈದ್ಯರು ಸಲ್ಲಿಸಿರುವ ಕಾರ್ಯಚಟುವಟಿಕೆಯ ಮೇಲೆ ಕ್ರಮ ಕೈಗೊಂಡು, ಪ್ರಸ್ತಾಪಿತ ಹೆರಿಗೆ ಆಸ್ಪತ್ರೆಯನ್ನು ಉನ್ನತ ದರ್ಜೆಗೇರಿಸಲು, ಶ್ರೀ.ಬಿ.ಎಸ್.ಸತ್ಯನಾರಾಯಣ (ಕಟ್ಟೆ ಸತ್ಯ) ಪಾಲಿಕೆ ಸದಸ್ಯರು ಕೋರಿರುತ್ತಾರೆ.

ಅದರಂತೆ, ಮೆ:ಸೋಬೋಜಿನಿಯನ್ ಡಾಕ್ಟರ್ಸ್ ಪ್ರೈವೇಟ್ ಲಿಮಿಟೆಡ್ (SBOBGYN Doctor's Co. Pvt. Ltd.,) ರವರು ಪತ್ರವನ್ನು ಸಲ್ಲಿಸಿದ್ದು, ಈ ಸಂಸ್ಥೆಯ ವತಿಯಿಂದ, ಎಲ್ಲಾ ರೀತಿಯ ಸೌಲಭ್ಯಗಳನ್ನು ಅಂದರೆ ಹೆರಿಗೆಗೆ ಸಂಬಂಧಿಸಿದಂತೆ ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ತಜ್ಞ ವೈದ್ಯರುಗಳಿಂದ, ಉತ್ತಮ ವೈದ್ಯಕೀಯ ಸೇವೆಯನ್ನು, ಪಾಲಿಕೆಯ ನರಸಿಂಹರಾಜ ಕಾಲೋನಿ ಹೆರಿಗೆ ಆಸ್ಪತ್ರೆಗೆ ನೀಡಲು ಒಪ್ಪಿಕೊಂಡಿರುತ್ತಾರೆ.

ಪಾಲಿಕೆಯ ಆಸ್ಪತ್ರೆಗಳಲ್ಲಿ ವೈದ್ಯರು ತೀವ್ರ ಕೊರತೆಯಿದ್ದು, ಸರ್ಕಾರದ ಆದೇಶದ ಮೇರೆಗೆ ಈಗಾಗಲೇ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸೇವೆಯನ್ನು ಪಾಲಿಕೆಯು ಹಿಂತಿರುಗಿಸಲು ಕ್ರಮವಹಿಸಲಾಗುತ್ತಿದೆ. ಈ ಕಾರಣ ಪಾಲಿಕೆಯಲ್ಲಿ ಅವಶ್ಯಕತೆಯಿರುವ ವೈದ್ಯರುಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ, ಮತ್ತು ಅಲ್ಲಿಯವರೆವಿಗೆ ತಾತ್ಕಾಲಿಕವಾಗಿ ವೈದ್ಯರುಗಳ ಸೇವೆಯನ್ನು ಗೌರವಧನದ ಆಧಾರದ ಮೇಲೆ ಪಡೆಯಲು ಕ್ರಮವಹಿಸಲಾಗುತ್ತಿದೆ.

ಪಾಲಿಕೆಯ ನರಸಿಂಹರಾಜ ಹೆರಿಗೆ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಆರೋಗ್ಯ ಚಿಕಿತ್ಸೆ ನೀಡುವ ಹಿತದೃಷ್ಟಿಯಿಂದ ಮೆ:ಸೋಬೋಜಿನಿಯನ್ ಡಾಕ್ಟರ್ಸ್ ಪ್ರೈವೇಟ್ ಲಿಮಿಟೆಡ್ (SBOBGYN Doctor's Co. Pvt. Ltd.,) ರವರಿಂದ ತಜ್ಞ ವೈದ್ಯರ ಸೇವೆಯನ್ನು ಬಳಸಿಕೊಳ್ಳಲು ಈ ಸಂಸ್ಥೆಯೊಂದಿಗೆ ಎಂ.ಓ.ಯು ಮಾಡಿಕೊಳ್ಳುವ ಸಂಬಂಧ ನಿರ್ಣಯಕ್ಕಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದೂಡಿದೆ.**

## 5. ವಿಷಯದ ಸಂಖ್ಯೆ: ಸಾಆಸ್ಥಾಸ/20/11-12:

ಆಯುಕ್ತರ ದಿನಾಂಕ: 28-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರಪ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಹೊಸದಾಗಿ ಸ್ವಚ್ಛತಾ ನಿರ್ವಹಣೆಗೆ ಟೆಂಡರ್ ಕರೆದಿದ್ದು, ಈ ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವೊಂದು ತಿದ್ದುಪಡಿ ಮಾಡಲು ಕೋರಿ ಶ್ರೀ.ಕೆ.ಹೆಚ್.ಎನ್.ಸಿಂಹ, ಮಾಜಿ ಮಹಾಪೌರರು ಮತ್ತು ಅಧ್ಯಕ್ಷರು, ಬಿಬಿಎಂಪಿ ಪೌರಕಾರ್ಮಿಕರು ಮತ್ತು 4ನೇ ದರ್ಜೆ ನೌಕರರ ಸಂಘ ರವರು ಪತ್ರದ ಮುಖಾಂತರ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಹಾಲಿ ಇರುವ ಷರತ್ತು | ಸಡಿಲಗೊಳಿಸಲು ಕೋರಿರುವ ಷರತ್ತು |
|---|---|---|
| 1 | 15000 ರಿಂದ 20000 ಮನೆ ಅಥವಾ ವಾಣಿಜ್ಯ ಮಳಿಗೆಗಳಿಂದ ಕಸ ಶೇಖರಣೆ ಮಾಡಬೇಕು ಮತ್ತು 100 ರಿಂದ 250 ಕಿ.ಮೀ ವರೆಗೆ ಪ್ರತಿನಿತ್ಯ ಗುಡಿಸಿರಬೇಕು, 2005-06 ಇಸವಿಯ ಈಚೆಗೆ 24 ತಿಂಗಳ ಕಾರ್ಯ ನಿರ್ವಹಿಸಿರಬೇಕು | ಯಾವುದಾದರೂ ಅವಧಿಯಲ್ಲಿ 6 ತಿಂಗಳ ಕಾಲ ರಸ್ತೆ ಸ್ವಚ್ಛಗೊಳಿಸುವುದಾಗಲೀ ಅಥವಾ ಕಸ ಸಾಗಿಸುವುದಾಗಲೀ ಅಥವಾ ಮನೆ ಮನೆಯಿಂದ ಕಸ ಸಂಗ್ರಹಣೆ ಮಾಡಿರುವುದು ಅನುಭವ ಹೊಂದಿರಬೇಕು. |
| 2 | ನೊಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಂಘ ಸಂಸ್ಥೆಗಳು ಇ.ಎಂ.ಡಿ ಮೊತ್ತ ಶೇಕಡ 10% ಮತ್ತು ಬ್ಯಾಂಕ್ ಗ್ಯಾರಂಟಿ ಶೇಕಡ 10% ಪಾವತಿಸಬೇಕು. | ನೊಂದಾಯಿತ ಸಂಘ ಸಂಸ್ಥೆಗಳ ಬದಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವ್ಯಕ್ತಿಗಳಿಂದ ಶೇಕಡ 10% ಇ.ಎಂ.ಡಿ ಮತ್ತು ಶೇಕಡ 10% ಬ್ಯಾಂಕ್ ಗ್ಯಾರಂಟಿ ಪಾವತಿಸಲು ತಿದ್ದುಪಡಿ ಮಾಡುವುದು. |
| 3 | ಆಟೋ ಅಥವಾ ಲಾರಿ ಕ್ರಮವಾಗಿ 2010-11 ನೇ ಇಸವಿ ಮತ್ತು ಲಾರಿ 2005-06 ಇಸವಿಯ ಸಾಲಿನದಾಗಿರಬೇಕು. | ಆಟೋ ಅಥವಾ ಲಾರಿ ಯಾವುದೇ ವರ್ಷದ್ದು ಹೊಂದಿದ್ದು ಟೆಂಡರ್‌ನಲ್ಲಿ ಭಾಗವಹಿಸುವ ಪ.ಜಾ; ಪ.ವರ್ಗದವರು ಬಾಡಿಗೆಗೆ, ಲೀಸ್, ಅಗ್ರಿಮೆಂಟ್ ಆಧಾರದ ಮೇಲೆ 3 ವರ್ಷಕ್ಕೆ ಪಡೆದಿರಬೇಕೆಂದು ತಿದ್ದುಪಡಿ ಮಾಡುವುದು. |

K. Shashi Kumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ವಿಷಯದ ಬಗ್ಗೆ ಚರ್ಚಿಸಿದಂತೆ ಈ ಕೆಳಕಂಡಂತೆ ನಿಬಂಧನೆಗಳನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಮಾರ್ಪಾಡುಗೊಳಿಸಬೇಕಾಗಿರುತ್ತದೆ.

1. ಕಳೆದ 5 ವರ್ಷದ ಅವಧಿಯಲ್ಲಿ 6 ತಿಂಗಳ ಕಾಲ ರಸ್ತೆ ಸ್ವಚ್ಛಗೊಳಿಸುವುದಾಗಲೀ ಅಥವಾ ಕಸ ಸಾಗಿಸುವುದಾಗಲೀ ಅಥವಾ ಮನೆ ಮನೆಯಿಂದ ಕಸ ಸಂಗ್ರಹಣೆ ಮಾಡಿರುವುದು ಅನುಭವ ಹೊಂದಿರಬೇಕು.
2. ನೊಂದಾಯಿತ ಸಂಘ ಸಂಸ್ಥೆಗಳ/ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವ್ಯಕ್ತಿಗಳಿಂದ ಶೇಕಡ 10% ಇ.ಎಂ.ಡಿ ಮತ್ತು ಶೇಕಡ 10% ಬ್ಯಾಂಕ್ ಗ್ಯಾರಂಟಿ ಪಾವತಿಸಲು ತಿದ್ದುಪಡಿ ಮಾಡುವುದು.
3. ಟೆಂಡರ್‌ನಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಬಾಡಿಗೆಗೆ, ಲೀಸ್ ಮೂಲಕ 2001 ನೇ ಇಸವಿಯ ಮೇಲ್ಪಟ್ಟ ಟಿಪ್ಪರ್ ಲಾರಿಗಳು ಮತ್ತು ಕಾಂಪ್ಯಾಕ್ಟರ್ ವಾಹನಗಳನ್ನು ಅಗ್ರೀಮೆಂಟ್ ಆಧಾರದ ಮೇಲೆ 3 ವರ್ಷಕ್ಕೆ ಪಡೆದಿರಬೇಕೆಂದು ತಿದ್ದುಪಡಿ ಮಾಡುವುದು.

ಮೇಲೆ ತಿಳಿಸಿರುವ ನಿಬಂಧನೆಗಳನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಮಾರ್ಪಾಡುಗೊಳಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 28-07-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

Geetha Shashi Kumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 01-08-2011 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ|| ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| ಡಾ|| ಎಸ್. ರಾಜು | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ತಾಂತ್ರಿಕ ಸಲಹೆಗಾರರು (ಪರಿಸರಕೋಶ) |
| ಎನ್.ವೀರಣ್ಣ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಎನ್.ಎಸ್.ಬಿ.ಡಿ.ಯು.ಪಿ.) |
| ಎಲ್. ರಮೇಶ್ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಸೊಳ್ಳೆ ನಿಯಂತ್ರಣ/ಕೇಂದ್ರ ಔಷಧಿ ಉಗ್ರಣಾಲಯ (ಪ್ರಭಾರ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಎಸ್. ನಟರಾಜ್ | ಸದಸ್ಯರು | |
| ಶ್ರೀಮತಿ.ಪಿ.ಸೌಮ್ಯ | ಸದಸ್ಯರು | |
| ಎಂ. ಶ್ರೀನಿವಾಸ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

## 1. ವಿಷಯದ ಸಂಖ್ಯೆ: ಸಾಆಸ್ಥಾಸ/11/11-12:

ಸಂಖ್ಯೆ: ಉ.ಆ.(ಹೆಚ್)ಪಿಆರ್/(2)197/11-12, ದಿನಾಂಕ: 04-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ದಿನಾಂಕ: 26-06-2011 ರ ಟಿಪ್ಪಣಿಯಲ್ಲಿ ಈಗಾಗಲೇ ಪಾಲಿಕೆಯಲ್ಲಿ 35 ಪ್ಯಾಕೇಜ್‌ಗಳಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ಟೆಂಡರ್ ಕರೆಯಲಾಗಿದೆ ಎಂದು, ಈ ಕುರಿತು ಪ್ರಸ್ತಾವನೆಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಖಾಂತರ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಸೂಚನೆ ನೀಡಲಾಗಿರುವ ಸಂಬಂಧ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

ಸಂಖ್ಯೆ: CHO/ACT/2/PR/10/08-09 ದಿನಾಂಕ: 28-05-2008 ರಲ್ಲಿ ಕರೆಯಲಾದ ಟೆಂಡರ್‌ನಲ್ಲಿ 35 ವಾರ್ಡ್‌ಗಳಿಗೆ ಪ್ರತಿ ತಿಂಗಳಿಗೆ ರೂ.34,14,720/- (ಮೂವತ್ನಾಲಕ್ಕು ಲಕ್ಷದ ಹದಿನಾಲ್ಕು ಸಾವಿರದ ಏಳುನೂರ ಇಪ್ಪತ್ತು ರೂ ಮಾತ್ರ) ಗಳಂತೆ ವಾರ್ಷಿಕ ರೂ.4,09,76,640/- (ನಾಲ್ಕು ಕೋಟಿ ಒಂಬತ್ತು ಲಕ್ಷದ ಎಪ್ಪತ್ತಾರು ಸಾವಿರದ ಆರುನೂರ ನಲವತ್ತು ರೂ ಮಾತ್ರ) ಅಂದಾಜು ಮೊತ್ತಕ್ಕೆ ಟೆಂಡರ್ ಕರೆಯಲು ಕಂಡಿಕೆ 22 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಈ ಪ್ರಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೊಳ್ಳೆ ನಿಯಂತ್ರಣ ಸೇವೆಯನ್ನು ಒದಗಿಸಲು, 35 ಪ್ಯಾಕೇಜುಗಳಾಗಿ ಮಾಡಲಾಗಿದ್ದು, ಟೆಂಡರ್ ಅನ್ನು ಮುಖ್ಯ ಆರೋಗ್ಯಾಧಿಕಾರಿಗಳ ಕಛೇರಿ ಕಡತ ಸಂಖ್ಯೆ : CHO/ACT/2/PR/10/08-09 ದಿನಾಂಕ: 28-05-2008 ರಲ್ಲಿ ಕರೆಯಲಾಗಿರುತ್ತದೆ. 35 ಪ್ಯಾಕೇಜುಗಳಿಗೆ ಕರೆಯಲಾದ

Geetha Shashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಟೆಂಡರ್‌ನಲ್ಲಿ 4 ಪ್ಯಾಕೇಜುಗಳಿಗೆ ಮಾತ್ರ ಬಿಡ್‌ದಾರರು ಭಾಗವಹಿಸಿರುತ್ತಾರೆ, ಮೆ: ಗೋದ್ರೇಜ್ ಹೈ ಕೇರ ಲಿ., ಸಂಸ್ಥೆ ಟೆಂಡರ್ ಸಲ್ಲಿಸಿದ್ದು, ಸಿಂಗಲ್ ಟೆಂಡರ್ ಸಲ್ಲಿಸಿರುತ್ತಾರೆ, ಇದರಲ್ಲಿ 2 ಪ್ಯಾಕೇಜುಗಳ ತಾಂತ್ರಿಕ ಬಿಡ್ ಕವರ್ ತೆರೆಯಲಾಗಿದ್ದು, ಆರ್ಥಿಕ ಬಿಡ್ ಪರಿಶೀಲಿಸಿದ್ದು, ಒಂದು ಪ್ಯಾಕೇಜ್‌ಗೆ ಸೊಳ್ಳೆ ನಿಯಂತ್ರಣಕ್ಕಾಗಿ ಒಂದು ತಿಂಗಳಿಗೆ ರೂ.6,53,772/- (ರೂ.ಆರು ಲಕ್ಷದ ಐವತ್ಮೂರು ಸಾವಿರದ ಏಳುನೂರ ಎಪ್ಪತ್ತೆರೆಡು ರೂ ಮಾತ್ರ) ದರ ನಮೂದಿಸಿರುತ್ತಾರೆ.

ಈ ದರದ ಅನ್ವಯ ಎಲ್ಲಾ 35 ಪ್ಯಾಕೇಜುಗಳಿಗೆ ಸೊಳ್ಳೆ ನಿಯಂತ್ರಣ ಕಾರ್ಯ ಕೈಗೊಳ್ಳಲು ಒಂದು ತಿಂಗಳಿಗೆ ರೂ.2,28,82,020/- (ರೂ.ಎರಡು ಕೋಟಿ ಇಪ್ಪತ್ತೆಂಟು ಲಕ್ಷದ ಎಂಬತ್ತೆರಡು ಸಾವಿರದ ಇಪ್ಪತ್ತು ಮಾತ್ರ) ವಾರ್ಷಿಕವಾಗಿ ರೂ.27,46,00,000/- (ರೂ. ಇಪ್ಪತ್ತೇಳು ಕೋಟಿ ನಲವತ್ತಾರು ಲಕ್ಷ ಮಾತ್ರ) ಖರ್ಚು ಮಾಡಬೇಕಾಗಿರುತ್ತದೆ. ಮುಖ್ಯ ಆರೋಗ್ಯಾಧಿಕಾರಿಗಳ ವರದಿ ಕಂಡಿಕೆ 63 ರಿಂದ 68 ರವರೆಗಿನ ವರದಿಯನ್ನು ಅವಗಾಹಿಸಬಹುದು. ಈ ಟೆಂಡರ್ ಪ್ರಸ್ತಾವನೆಗೆ ಅಂದಿನ ಆಯುಕ್ತರು ಕಂಡಿಕೆ 79 ರಲ್ಲಿ ಈ ಟೆಂಡರ್ ಪ್ರಸ್ತಾವನೆಯು ಗಮನಾರ್ಹವಾಗಿಲ್ಲವೆಂದು ತಿಳಿಸಿರುತ್ತಾರೆ.

ಪುನ: ಪ್ರತ್ಯೇಕ ಕಡತ ಸಂಖ್ಯೆ: ಸಿಹೆಚ್‌ಓ/ಪಿಆರ್/1584/09-10 ರಲ್ಲಿ ಪಾಲಿಕೆಯ ಆರೋಗ್ಯಾಧಿಕಾರಿಗಳು ಕಂಡಿಕೆ 20 ರಿಂದ 25 ರವರೆಗಿನ ವರದಿಯಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ರಮವನ್ನು ಇನ್ನು ಹೆಚ್ಚಿನ ಪ್ರಗತಿಯಲ್ಲಿ ನಿರ್ವಹಿಸಬಹುದೆಂದು, ಮೆ: ಗೋದ್ರೇಜ್ ಹೈ ಕೇರ್ ಲಿ., ರವರು ಇದಕ್ಕಾಗಿ ಎಲ್ಲಾ ವೆಚ್ಚಗಳು ಸೇರಿ ವಾರ್ಷಿಕ ರೂ.28,71,52,357/- (ಇಪ್ಪತ್ತೆಂಟು ಕೋಟಿ ಎಪ್ಪತ್ತೊಂದು ಲಕ್ಷದ ಐವತ್ತೆರೆಡು ಸಾವಿರದ ಮೂರು ನೂರ ಐವತ್ತೇಳು ರೂ ಮಾತ್ರ) ಗಳಿಗೆ ಯೋಜನಾ ವರದಿ ಸಲ್ಲಿಸಿರುತ್ತಾರೆಂದು, ಈ ಯೋಜನೆಯನ್ನು ಒಪ್ಪಬಹುದೆಂದು ಅಪರ ಆಯುಕ್ತರು (ಆರೋಗ್ಯ) ರವರು ಸಲ್ಲಿಸಿದ ವರದಿಗೆ, ಕಂಡಿಕೆ 35 ರಲ್ಲಿ ಈ ಯೋಜನೆ ಅಗತ್ಯವಿಲ್ಲವೆಂದು ಈ ಹಿಂದೆ ಕರೆಯಲಾದ ಟೆಂಡರ್ ಅವಧಿ ಮುಕ್ತಾಯವಾಗಿದ್ದು, ನಿಯಮಾವಳಿಗೆ ಅನುಗುಣವಾಗಿಲ್ಲದ ಕಾರಣ ಟೆಂಡರ್ ಅನ್ನು ರದ್ದುಪಡಿಸಲು ಆದೇಶ ನೀಡಲಾಗಿದೆ.

ಕಂಡಿಕೆ 1 ರಿಂದ 11 ರಲ್ಲಿ ಪುನ: ಆರೋಗ್ಯಾಧಿಕಾರಿಗಳು ಈ ಯೋಜನೆಯ ಬಗ್ಗೆ ಪ್ರಸ್ತಾಪಿಸಿದ್ದು, ಈ ಯೋಜನೆಯಲ್ಲಿ ಕೆಲವು ಮಾರ್ಪಾಡು ಮಾಡಿ, ಸದರಿ ಯೋಜನೆಯ ಅನುಷ್ಠಾನಕ್ಕೆ ಎಲ್ಲಾ ವೆಚ್ಚಗಳು ಸೇರಿ ವಾರ್ಷಿಕ ರೂ.23,19,04,098/- ಗಳು (ರೂ ಇಪ್ಪತ್ಮೂರು ಕೋಟಿ) ಖರ್ಚಾಗುತ್ತದೆಂದು, ಪಾಲಿಕೆಯ ಆಯವ್ಯಯದಲ್ಲಿ ಈ ಮೊತ್ತವನ್ನು ಭರಿಸಬಹುದೆಂದು ವರದಿ ಮಾಡಿರುತ್ತಾರೆ.

ಈ ವರದಿಯನ್ನು ಪರಿಶೀಲಿಸಲಾಗಿ, ಈ ಯೋಜನೆಯು ಸಮರ್ಪಕವಾಗಿಲ್ಲವೆಂದು ಈ ಯೋಜನೆಯನ್ನು ಜಾರಿಗೆ ತಂದಲ್ಲಿ ಪಾಲಿಕೆ ಅತ್ಯಧಿಕ ಮೊತ್ತವನ್ನು ವ್ಯಯ ಮಾಡಬೇಕಾಗಿರುತ್ತದೆ, ಸೊಳ್ಳೆ ನಿಯಂತ್ರಣ ಮಾಡಬಹುದೇ ಹೊರತು, ಸೊಳ್ಳೆ ನಿರ್ಮೂಲನೆ ಅಸಾಧ್ಯವಾದ ಕಾರಣದಿಂದ ಈ ಯೋಜನೆಯನ್ನು ಕೈಬಿಡಲು ಕಂಡಿಕೆ 16 ರಲ್ಲಿ ಉಪ ಆಯುಕ್ತರು (ಆರೋಗ್ಯ) ರವರು ನೀಡಲಾದ ವರದಿಗೆ ಸಮ್ಮತಿ ವ್ಯಕ್ತಪಡಿಸಲಾಗಿದೆ.

ಸದರಿ ಕಡತದ ಕಂಡಿಕೆ 54 ರಲ್ಲಿ, ಸದರಿ ಟೆಂಡರ್‌ನಲ್ಲಿ 2 ಪ್ಯಾಕೇಜುಗಳಿಗೆ ಮಾತ್ರ ಟೆಂಡರ್ ಅಂಗೀಕರಿಸಬೇಕಾಗಿರುವುದರಿಂದ, ಈ ಪ್ರಸ್ತಾವನೆಯನ್ನು ಕೈಬಿಡಲು ಸೂಕ್ತವೆಂದು ಅಂದಿನ ಉಪ ಆಯುಕ್ತರು (ಆರೋಗ್ಯ) ರವರು ಸಹ ವರದಿ ಮಾಡಿರುತ್ತಾರೆ. ಮತ್ತು ಈ ಟೆಂಡರ್ ಕರೆಯಲು ಅಂದಿನ ಆಡಳಿತಗಾರರಿಂದಲೂ ಒಪ್ಪಿಗೆ ಪಡೆದಿರುವುದಿಲ್ಲ. ಮತ್ತು ಟೆಂಡರ್ ಡಾಕ್ಯೂಮೆಂಟ್ ಅನ್ನು ಯಾವುದೇ ಸಮಿತಿಯು ಪರಿಶೀಲಿಸಿ ಒಪ್ಪಿಗೆ ಸೂಚಿಸಿರುವುದು ಸಹ ಕಡತದಲ್ಲಿ ಲಭ್ಯವಿರುವುದಿಲ್ಲ. ಸದರಿ ಪ್ರಸ್ತಾಪಿಸಲಾದ ಟೆಂಡರ್ 28-05-2008 ರಲ್ಲಿ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಸಮರ್ಪಕವಾಗಿ ನಡೆಯದ ಕಾರಣ, 3 ವರ್ಷಗಳ ಅವಧಿ ಆಗಿರುವುದರಿಂದ, ಮುಂದುವರೆಸಲು ಕರ್ನಾಟಕ ಪಾರದರ್ಶಕ ನಿಯಮಾವಳಿಯಲ್ಲಿ ಅವಕಾಶವಿಲ್ಲದ ಕಾರಣ ಈ ಟೆಂಡರ್ ಪ್ರಕ್ರಿಯೆಯನ್ನು ಕೈಬಿಡಲಾಗಿದೆ.

ಪಾಲಿಕೆಯಲ್ಲಿ ಸೊಳ್ಳೆ ನಿಯಂತ್ರಣದ ಎಲ್ಲಾ ಕಾರ್ಯಗಳು ವಾರ್ಷಿಕ ವೆಚ್ಚ ರೂ.6.00 (ರೂ. ಆರು ಕೋಟಿ ಮಾತ್ರ) ಗಳು ಖರ್ಚಾಗುತ್ತಿದೆ, ಮತ್ತು ಬೃಬೆಂ.ಮ.ಪಾಲಿಕೆಯ ವ್ಯಾಪ್ತಿಯಲ್ಲಿ ರೋಗವಾಹಕಗಳಿಂದ ಹರಡುವ ರೋಗಗಳು ಸಹ ಕನಿಷ್ಠವಾಗಿರುತ್ತದೆ. ಮತ್ತು ಸೊಳ್ಳೆ ನಿಯಂತ್ರಣವು ಸಾರ್ವಜನಿಕರು ತೆಗೆದುಕೊಳ್ಳುವ ಕಾರ್ಯವಿಧಾನದಲ್ಲಿಯೂ ಇದ್ದು ಇದಕ್ಕಾಗಿ ಆರೋಗ್ಯ ಶಿಕ್ಷಣ, ಅರಿವು, ಜನ ಜಾಗೃತಿ ಮೂಡಿಸಲಾಗುತ್ತಿದೆ.

ಸೊಳ್ಳೆ ನಿಯಂತ್ರಣದ ಬಗ್ಗೆ, ಅಧಿಕಾರಿಗಳ, ಜನಪ್ರತಿನಿಧಿಗಳ ಸಭೆ ಕರೆದು ಟೆಂಡರ್ ಸಮಿತಿಯನ್ನು ರಚಿಸಿ ಸೂಕ್ತವಾದ ಟೆಂಡರ್ ಪ್ರಕ್ರಿಯೆ ಕರೆಯಲು ಕ್ರಮವಹಿಸಲಾಗುತ್ತಿದ್ದು, ಸೊಳ್ಳೆ ನಿಯಂತ್ರಣಕ್ಕಾಗಿ ಸಂಖ್ಯೆ: CHO/ACT/2/PR/10/08-09 ದಿನಾಂಕ: 28-05-2008 ರಂದು ಕರೆಯಲಾದ ಟೆಂಡರ್ ರದ್ದಾಗಿರುವ ಕಾರಣ ಸದರಿ ಯೋಜನೆಯ ಬಗ್ಗೆ ಪುನ: ಮುಂದುವರೆದಂತೆ ಪ್ರಸ್ತಾಪಿಸಲಾದ ಸಂಖ್ಯೆ: ಸಿಹೆಚ್ಓ/ಪಿಆರ್/1584/09-10 ರ ಯೋಜನೆಯ ಪ್ರಸ್ತಾವನೆಯು ಸಹ ಮುಕ್ತಾಯವಾಗಿರುತ್ತದೆ.

ಉಲ್ಲೇಖಿತ ಪತ್ರದಲ್ಲಿ ಪೂಜ್ಯ ಮಹಾಪೌರರು ಸದರಿ ಟೆಂಡರ್ ಇತ್ಯರ್ಥಪಡಿಸಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಪ್ರಸ್ತಾಪಿಸಿದ್ದು, ಮೇಲ್ಕಂಡಂತೆ ವಿವರಿಸಲಾದ ಅಂಶಗಳನ್ವಯ ಪಾಲಿಕೆಯ ಸಭೆಯ ಮುಂದೆ ಕಡತವನ್ನು ಮಂಡಿಸಲು ಸರಿಯಾದ ಕ್ರಮವಾಗಿರುವುದಿಲ್ಲ, ಎಂಬ ವರದಿಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಸುದೀರ್ಘವಾಗಿ ಚರ್ಚಿಸಲಾಯಿತು. ಕಾನೂನುಕೋಶದ ಅಭಿಪ್ರಾಯವನ್ನು ಪಡೆದು ಮರು ಮಂಡಿಸಲು ಕಡತವನ್ನು ಹಿಂದಿರಿಗಿಸಲಾಯಿತು.**

## 2. ವಿಷಯದ ಸಂಖ್ಯೆ: ಸಾಆಸ್ಥಾಸ/13/11-12:

ಆಯುಕ್ತರ ದಿನಾಂಕ: 21-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವ ಉದ್ದೇಶದಿಂದ ಎ.ಬಿ.ಸಿ. (ಡಾಗ್) ನಿಯಮಾವಳಿ 2001 ರಂತೆ ಕ್ರಮ ಕೈಗೊಳ್ಳುವ ಸಲುವಾಗಿ 2008-09ನೇ ಸಾಲಿನಲ್ಲಿ ಟೆಂಡರ್ ಸಂಖ್ಯೆ: DC(H)/ABC-ARV/PR/559/2008-09, ದಿನಾಂಕ: 30-09-2008 ರಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ಎ.ಬಿ.ಸಿ.-ಎ.ಆರ್.ವಿ. ಕಾರ್ಯಕ್ರಮವನ್ನು ಮಾಡಲು 15 ಪ್ಯಾಕೇಜ್‌ಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದ್ದು, ಇದನ್ನು ಅಂತಿಮಗೊಳಿಸಲಾಗಿದ್ದು, ಮಾನ್ಯ ಆಡಳಿತಗಾರರು ಸದರಿ ಕಾರ್ಯಕ್ರಮಕ್ಕಾಗಿ ಈ ಕೆಳಗಿನಂತೆ ದರಗಳನ್ನು ಅನುಮೋದಿಸಿರುತ್ತಾರೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | ದರ ಗಂಡು ನಾಯಿ ರೂ. | ದರ ಹೆಣ್ಣು ನಾಯಿ ರೂ. |
|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗಧಿಪಡಿಸಿದ ದರ | 515/- | 525/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ ಡ್ರೈವ್) ಗೆ ನಿಗಧಿಪಡಿಸಿದ ದರ | 50/- | 50/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | 75/- | 75/- |

ಮೇಲಿನ ದರದಂತೆ 8 ಪ್ಯಾಕೇಜ್‌ಗಳಲ್ಲಿ 3 ಪ್ರಾಣಿ ಕಲ್ಯಾಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಟೆಂಡರ್‌ನ ಅವಧಿಯು ದಿನಾಂಕ: 01-09-2009 ರಿಂದ 31-08-2011ರ ವರೆಗೆ ಎರಡು ವರ್ಷಗಳ ಅವಧಿಗೆ ಚಾಲ್ತಿಯಲ್ಲಿರುತ್ತದೆ.

(Sd/-) Thimmashashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

2010-11ನೇ ಸಾಲಿನಲ್ಲಿ ಎ.ಬಿ.ಸಿ.-ಎ.ಆರ್.ವಿ. ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಎ.ಬಿ.ಸಿ.-ಎ.ಆರ್.ವಿ. ಪ್ಯಾಕೇಜ್‌ಗಳನ್ನು 15 ರಿಂದ 20ಕ್ಕೆ ಹೆಚ್ಚಿಸಿ ಉಳಿಕೆ 12 ಪ್ಯಾಕೇಜ್‌ಗಳಿಗೆ ಟೆಂಡರ್ ಸಂಖ್ಯೆ: JD(AH)/ABC-ARV/Tender/PR/867/2009-10, ದಿನಾಂಕ: 24-02-2010 ಹಾಗೂ 13-04-2010 ರಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಖಾಂತರ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿದ್ದು, ಇದನ್ನು ಅಂತಿಮಗೊಳಿಸಿ, ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದಂತೆ ನಿಗಧಿಯಾದ ದರಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಕೆಲಸದ ವಿವರ | ಫೀಲ್ಡ್ ಕ್ಲಿನಿಕ್ ಮತ್ತು ವಾಹನ ಒದಗಿಸಿದಲ್ಲಿ ದರ | ಫೀಲ್ಡ್ ಕ್ಲಿನಿಕ್ ಅಥವ ವಾಹನ ಒದಗಿಸಿದಲ್ಲಿ ದರ | ಫೀಲ್ಡ್ ಕ್ಲಿನಿಕ್ ಮತ್ತು ವಾಹನ ಒದಗಿಸದಿದ್ದಲ್ಲಿ ದರ |
|---|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗದಿಪಡಿಸಿದ ದರ | ರೂ 550/- | ರೂ. 600/- | ರೂ.650/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ ಡ್ರೈವ್) ಗೆ ನಿಗದಿಪಡಿಸಿದ ದರ | ರೂ.70/- | ರೂ. 70/- | ರೂ.70/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗದಿಪಡಿಸಿದ ದರ | ರೂ. 75/- | ರೂ. 75/- | ರೂ.75/- |

ಟೆಂಡರ್ ಸಂಖ್ಯೆ: DC(H)/ABC-ARV/PR/559/2008-09, ದಿನಾಂಕ: 30-09-2008 ರಲ್ಲಿ ಅಂತಿಮಗೊಂಡಿದ್ದ 8 ಪ್ಯಾಕೇಜ್ ಗಳಲ್ಲಿ ಎ.ಬಿ.ಸಿ-ಎ.ಆರ್.ವಿ. ಕಾರ್ಯಕ್ರಮದ ಅವಧಿಯು ದಿನಾಂಕ: 31-8-2011ಕ್ಕೆ ಎರಡು ವರ್ಷಗಳು ಪೂರೈಸಲಿದ್ದು ಟೆಂಡರ್ ಷರತ್ತು ಸಂಖ್ಯೆ: Additional Information(2) ರಲ್ಲಿ ಟೆಂಡರ್ ಅವಧಿಯನ್ನು ಇದೇ ದರಗಳಲ್ಲಿ ಒಂದು ವರ್ಷ ಮಟ್ಟಕ್ಕೆ ಮುಂದುವರೆಸಲು ಅವಕಾಶವಿದ್ದು, ಈ ಷರತ್ತಿನಂತೆ ಟೆಂಡರ್ ಅವಧಿಯನ್ನು ಮುಂದುವರೆಸಿದಲ್ಲಿ ಪಾಲಿಕೆಗೆ ಆರ್ಥಿಕ ಉಳಿತಾಯವಾಗಲಿದ್ದು, ಈ ದೃಷ್ಟಿಯ ಹಿನ್ನೆಲೆಯಲ್ಲಿ ಈ ಕ್ರಮ ಸಮಂಜಸ, ಏಕೆಂದರೆ ಈ ಟೆಂಡರ್ ನಂತರ ಕರೆದ ಟೆಂಡರ್‌ರಲ್ಲಿ ನಿಗದಿಪಡಿಸಿರುವ ದರ ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | 2008-09 ರ ಟೆಂಡರ್‌ನ ದರ ರೂ. | 2010-11 ರ ಟೆಂಡರ್‌ನ ದರ ರೂ. |
|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗಧಿಪಡಿಸಿದ ದರ | ಗಂಡು ನಾಯಿ- 515/-<br>ಹೆಣ್ಣು ನಾಯಿ- 525/- | 550/- ರಿಂದ 650/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ. ಡ್ರೈವ್) ಗೆ ನಿಗಧಿಪಡಿಸಿದ ದರ | 50/- | 70/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗಧಿಪಡಿಸಿದ ದರ | 75/- | 75/- |

ಆದುದರಿಂದ ಈಗ ಈ 8 ಪ್ಯಾಕೇಜ್‌ಗಳಿಗೆ ಟೆಂಡರ್ ಕರೆದು ದರ ನಿಗದಿಪಡಿಸಲು ಕ್ರಮಕೈಗೊಂಡಲ್ಲಿ ಹಳೆಯ ದರಗಳಿಗಿಂತ ಹೆಚ್ಚಿನ ದರಗಳನ್ನು ಪ್ರಾಣಿ ಕಲ್ಯಾಣ ಸಂಸ್ಥೆಗಳು ನಮೂದಿಸುವ ಸಾಧ್ಯತೆ ಇರುವುದರಿಂದ ಪಾಲಿಕೆಗೆ ಆರ್ಥಿಕ ಉಳಿತಾಯ ಮಾಡುವ ದೃಷ್ಟಿಯಿಂದ ಮೇಲೆ ತಿಳಿಸಿರುವ ಷರತ್ತು ಮತ್ತು ನಿಭಂದನೆ ಪ್ರಕಾರ ಈ ಕೆಳಗೆ ನಮೂದಿಸಿರುವ ಹಳೆಯ ಟೆಂಡರ್‌ನ ದರದಂತೆ 8 ಪ್ಯಾಕೇಜ್‌ಗಳಲ್ಲಿ ಎ.ಬಿ.ಸಿ.-ಎ.ಆರ್.ವಿ. ಕಾರ್ಯಕ್ರಮವನ್ನು ಒಂದು ವರ್ಷದ ಅವಧಿಗೆ

ಅಂದರೆ ದಿನಾಂಕ: 01-09-2011 ರಿಂದ 31-08-2012 ರ ವರೆಗೆ ಮುಂದುವರಿಸಲು ಸಂಬಂಧಪಟ್ಟ ಪ್ರಾಣಿ ಕಲ್ಯಾಣ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಬೇಕಾಗಿರುವುದರಿಂದ ಈ ಪ್ರಸ್ತಾವನೆಯನ್ನು ಅನುಮೋದಿಸಲು ಕೋರಿ ನಿವೇದಿಸಲಾಗಿದೆ.

| ಕ್ರಮ ಸಂಖ್ಯೆ | ಕೆಲಸದ ವಿವರಗಳು | ದರ ಗಂಡು ನಾಯಿ ರೂ. | ದರ ಹೆಣ್ಣು ನಾಯಿ ರೂ. |
|---|---|---|---|
| 1 | ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಗೆ ನಿಗದಿಪಡಿಸಿದ ದರ | 515/- | 525/- |
| 2 | ಪುನರಾವರ್ತಿತ ಎ.ಆರ್.ವಿ. ಲಸಿಕೆ (ಎ.ಆರ್.ವಿ ಡ್ರೈವ್) ಗೆ ನಿಗದಿಪಡಿಸಿದ ದರ | 50/- | 50/- |
| 3 | ದಯಾಮರಣಕ್ಕೆ ಒಳಪಡಿಸಲು ನಿಗದಿಪಡಿಸಿದ ದರ | 75/- | 75/- |

ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 21-07-2011 ರ ಆಯುಕ್ತರ ಟಿಪ್ಪಣಿಯಲ್ಲಿನ ವಿವರಗಳನ್ನು ಚರ್ಚಿಸಲಾಗಿ, ಹೆಣ್ಣು ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಹಾಗೂ ಗಂಡು ನಾಯಿಗಳಿಗೆ ಹುಚ್ಚು ನಾಯಿ ನಿರೋಧಕ ಚುಚ್ಚುಮದ್ದು ಮಾತ್ರ ನೀಡಲು ಸಭೆಯು ತೀರ್ಮಾನಿಸಿತು.**

## ೩. ವಿಷಯದ ಸಂಖ್ಯೆ: ಸಾಆಸ್ಥಾಸ/14/11-12:

ಆಯುಕ್ತರ ದಿನಾಂಕ: 21-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ 2 ತಿಂಗಳಿಗೊಮ್ಮೆ BESCOM ರವರು ವಿದ್ಯುತ್ ಕಂಬದ ಅಡ್ಡವಾಗಿ ಬೆಳೆದಿರುವ ಮರಗಳ ರೆಂಬೆಗಳನ್ನು ಕಟಾವು ಮಾಡುತ್ತಿದ್ದು, ಸದರಿ ರಂಬೆಗಳ ತ್ಯಾಜ್ಯವು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ವಿಲೇವಾರಿ ಮಾಡಲು ಹರಸಾಹಸ ಪಡಬೇಕಾಗಿದ್ದು, ಈ ನಿಟ್ಟಿನಲ್ಲಿ ನೆರೆಯ ಪ್ರದೇಶವಾದ ಪಾಂಡಿಚೇರಿಯಲ್ಲಿ ಮರದ ರೆಂಬೆಗಳನ್ನು ಮತ್ತು ಎಲೆಗಳನ್ನು ಕಟಾವು ಮಾಡಲು Shredding Machine (ಕಟಾವು ಯಂತ್ರ) ವನ್ನು ಉಪಯೋಗಿಸುತ್ತಿದ್ದು, ಸದರಿ ಯಂತ್ರದಿಂದ ಮರದ ರೆಂಬೆಗಳನ್ನು ಮತ್ತು ಎಲೆಗಳನ್ನು ಅತಿ ಚಿಕ್ಕ ತುಂಡುಗಳಾಗಿ ಕಟಾವು ಮಾಡಿ ವಿಲೇವಾರಿ ಮಾಡುತ್ತಿದ್ದು, ಇದರಿಂದ ವಿಲೇವಾರಿ ಮಾಡುವ ತ್ಯಾಜ್ಯದ ಪ್ರಮಾಣ ಕಡಿಮೆಯಾಗುತ್ತಿರುತ್ತದೆ. ಸದರಿ ಯಂತ್ರವು ಪಾಲಿಕೆಗೆ ಉಪಯುಕ್ತವಾಗಿರುವುದರಿಂದ ಯಂತ್ರವನ್ನು ಖರೀದಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ಯಂತ್ರವನ್ನು ಖರೀದಿಸುವ ನಿಟ್ಟಿನಲ್ಲಿ ಟ್ರಾಕ್ಟರ್ ಚಾಲಿತ Shredder ಯಂತ್ರದ "Data Rate" ಗಳನ್ನು ಯುರೇಕಾ ಸಂಸ್ಥೆ ಮತ್ತು ಮಹಿಂದ್ರಾ ಟ್ರಾಕ್ಟರ್ ಸಂಸ್ಥೆಯಿಂದ ಪಡೆದಿದ್ದು, ಸದರಿ Shredder ಯಂತ್ರಕ್ಕೆ ತೆರಿಗೆ ಸೇರಿ ಅಂದಾಜು ರೂ.1,18,552/- (ರೂ.ಒಂದು ಲಕ್ಷದ ಹದಿನೆಂಟು ಸಾವಿರದ ಐದು ನೂರು ಐವತ್ತೆರಡು ಮಾತ್ರ) ಗಳಾಗುತ್ತದೆ ಮತ್ತು 30HP ಟ್ರಾಕ್ಟರ್ ಟ್ರೇಲರ್ ಯಂತ್ರಕ್ಕೆ ಅಂದಾಜು ರೂ.5,89,400/- (ರೂ.ಐದು ಲಕ್ಷದ ಎಂಬತ್ತೊಂಬತ್ತು ಸಾವಿರದ ನಾಲ್ಕು ನೂರು ಮಾತ್ರ) ಗಳಾಗುತ್ತದೆ, ಒಟ್ಟು ಒಂದು ಟ್ರಾಕ್ಟರ್ ಚಾಲಿತ Shredder ಯಂತ್ರಕ್ಕೆ ಅಂದಾಜು ರೂ.7,07,952/- (ರೂ.ಏಳು ಲಕ್ಷದ ಏಳು ಸಾವಿರದ ಒಂಬೈನೂರು ಐವತ್ತೆರಡು ಮಾತ್ರ) ಗಳಾಗಲಿದ್ದು, ಪ್ರತಿ ವಲಯಕ್ಕೆ ಒಂದರಂತೆ 8 ಟ್ರಾಕ್ಟರ್ ಚಾಲಿತ Shredder ಯಂತ್ರವನ್ನು ಟೆಂಡರ್ ಮೂಲಕ ಖರೀದಿಸಬೇಕಾಗಿರುತ್ತದೆ.

H. Shashi Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ನಿಟ್ಟಿನಲ್ಲಿ ಪ್ರತಿ ವಲಯಕ್ಕೆ ಒಂದರಂತೆ 8 ಟ್ರಾಕ್ಟರ್ ಚಾಲಿತ Shredder ಯಂತ್ರವನ್ನು ಖರೀದಿಸಲು ಅಂದಾಜು ರೂ.56,63,616/- (ರೂ.ಐವತ್ತಾರು ಲಕ್ಷದ ಅರವತ್ತ ಮೂರು ಸಾವಿರದ ಆರು ನೂರ ಹದಿನಾರು ಮಾತ್ರ) ಗಳಾಗುತ್ತದೆ. ಮುಖ್ಯ ಲೆಕ್ಕಾಧಿಕಾರಿಗಳು ಸದರಿ ಕಾಮಗಾರಿಯನ್ನು ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ P0541 ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಾಬ್ ನಂಬರ್ (310-11-00044) ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರತಿ ವಲಯಕ್ಕೆ ಒಂದರಂತೆ 8 ಟ್ರಾಕ್ಟರ್ ಚಾಲಿತ Shredder ಯಂತ್ರವನ್ನು ಖರೀದಿಸಲು ಅಂದಾಜು ಮೊತ್ತ ರೂ.56.64 ಲಕ್ಷಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆಗಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 21-07-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 4. ವಿಷಯದ ಸಂಖ್ಯೆ: ಸಾಆಸ್ಥಾಸ/15/11-12:

ಆಯುಕ್ತರ ದಿನಾಂಕ: 21-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನ್ಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ರವರು ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರಗೆ ರೂ.5/- ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಠ 10 ಸಾವಿರ ಜನಸಂಖ್ಯೆಯುಳ್ಳ ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಠಾನಗೊಳಿಸಿ, 15 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಉಲ್ಲೇಖ-(1) ರಲ್ಲಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಉಲ್ಲೇಖ-(2) ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದಲ್ಲಿ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥವುಳ್ಳ ಸ್ಥಳವನ್ನು 15 ವರ್ಷಗಳ ಅವಧಿಗೆ ಒದಗಿಸಬೇಕಾಗಿರುತ್ತದೆ.

ಸದರಿ ಘಟಕವನ್ನು ಸ್ಥಾಪಿಸಲು ಮಾದರಿ ಯೋಜನೆಯಾಗಿ 10 ಸ್ಥಳಗಳಲ್ಲಿ Water Health India Pvt. Ltd., ರವರಿಗೆ ಸುಮಾರು 30X40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ಮತ್ತು ವಿದ್ಯುತ್ ವ್ಯವಸ್ಥೆಯುಳ್ಳ ಸ್ಥಳವನ್ನು 15 ವರ್ಷಗಳ ಅವಧಿಗೆ ನೀಡಲು ಸರ್ಕಾರದ ಅನುಮೋದನೆ ಪಡೆಯಬೇಕಾಗಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿಯನ್ನು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಮುಂದುಡಿದೆ.**

## 5. ವಿಷಯದ ಸಂಖ್ಯೆ: ಸಾಆಸ್ಥಾಸ/16/11-12:

ಆಯುಕ್ತರ ದಿನಾಂಕ: 24-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ ದಿನ ಅಂದಾಜು 4800 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಶೇ.70 ರಷ್ಟು ಹಸಿ ತ್ಯಾಜ್ಯ ಹಾಗೂ ಶೇ.30 ರಷ್ಟು ಒಣ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಸದರಿ ಒಣ ತ್ಯಾಜ್ಯವನ್ನು ಬೇರ್ಪಡಿಸಿ ಪುನರ್‌ಬಳಕೆದಾರರಿಗೆ ನೀಡಿದಲ್ಲಿ, ಸಾಗಾಣಿ ಪ್ರಮಾಣವು ಕಡಿಮೆ ಆಗುವುದಲ್ಲದೇ ಚಿಂದಿ ಆಯುವವರಿಗೆ ಉದ್ಯೋಗವಕಾಶ ಕಲ್ಪಿಸಬಹುದಾಗಿರುತ್ತದೆ. ಈಗಾಗಲೇ ಪಾಲಿಕೆಯ ಕೇಂದ್ರ ಕಛೇರಿ ಹಾಗೂ ಇನ್ನಿತರ ವಲಯಗಳಲ್ಲಿ ಸುಮಾರು 29 ಸ್ಥಳಗಳಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಿದ್ದು, ಸದರಿ ಕೇಂದ್ರಗಳನ್ನು ಈಗಾಗಲೇ ಪುನರ್ ಬಳಕೆದಾರರು ಮತ್ತು ಕೆಲವು ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುತ್ತಿರುತ್ತಾರೆ ಹಾಗೂ 90 ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು ಸ್ಥಳವನ್ನು ಗುರುತಿಸಲಾಗಿದೆ.

ಈಗಾಗಲೇ ಮಾರುಕಟ್ಟೆಯಲ್ಲಿ ಹಲವಾರು ಪುನರ್ ಬಳಕೆದಾರರು, ಸರ್ಕಾರೇತರ ಸಂಸ್ಥೆಗಳು ಮತ್ತು ಕಾರ್ಪೋರೇಟ್ ಕಂಪನಿಯು ಸದರಿ ಯೋಜನೆಯಲ್ಲಿ ಪಾಲ್ಗೊಳ್ಳಲು ಆಸಕ್ತರಾಗಿದ್ದು, ಇವರಿಗೆ ಸದರಿ ಘಟಕದ ನಿರ್ವಹಣೆಯನ್ನು ವಹಿಸಿ ವಾರ್ಡಿನಲ್ಲೇ ನಿರ್ವಹಿಸಬಹುದಾಗಿರುತ್ತದೆ.

ಸದರಿ ವಿಷಯದ ಬಗ್ಗೆ ದಿನಾಂಕ: 26-05-2011 ರಂದು ಪೂಜ್ಯ ಮಹಾಪೌರರು ಮತ್ತು ಉಪ ಮಹಾಪೌರರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಒಣ ತ್ಯಾಜ್ಯವನ್ನು ಸಂಸ್ಕರಣಾ ಘಟಕಕ್ಕೆ ಸಾಗಿಸುವ ಬದಲು ವಾರ್ಡುವಾರು ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಿ, ಸದರಿ ಕೇಂದ್ರಗಳಲ್ಲಿ ಒಣ ತ್ಯಾಜ್ಯವನ್ನು ಸಂಗ್ರಹಣೆ ಮಾಡಿ ಪುನರ್‌ಬಳಕೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಇದರಂತೆ ಹೊಸದಾಗಿ ಕರೆಯಲು ಉದ್ದೇಶಿಸಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ಟೆಂಡರ್‌ನಲ್ಲಿ ಸದರಿ ಅಂಶವು ಒಳಗೊಂಡಿರುವುದರಿಂದ ಎಲ್ಲಾ ವಾರ್ಡುಗಳಲ್ಲಿ ಒಂದು ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ನಿರ್ವಹಣೆಯನ್ನು ಸರ್ಕಾರೇತರ ಸಂಸ್ಥೆಗಳು/ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದವರಿಗೆ ವಹಿಸಲು ಕೆಲ ನಿಬಂಧನೆಗಳನ್ನು ವಿಧಿಸಿ ಒಪ್ಪಂದ ಮಾಡಿಕೊಳ್ಳಲು ಕರಡು ಒಪ್ಪಂದ ಪತ್ರವನ್ನು ತಯಾರಿಸಿ ಇದರೊಂದಿಗೆ ಲಗತ್ತಿಸಿದ್ದು, ಅನುಮೋದನೆಗಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 24-07-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## 6. ವಿಷಯದ ಸಂಖ್ಯೆ: ಸಾಆಸ್ಥಾಸ/17/11-12:

ಆಯುಕ್ತರ ದಿನಾಂಕ: 28-07-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಹೊಸದಾಗಿ ಘನತ್ಯಾಜ್ಯ ನಿರ್ವಹಣೆಗೆ ಮತ್ತು ಮೆಕಾನಿಕಲ್ ಸ್ವೀಪಿಂಗ್ ಪ್ಯಾಕೇಜಿಗೆ ದಿನಾಂಕ:18-07-2011 ರಂದು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಮೆಕಾನಿಕಲ್ ಸ್ವೀಪಿಂಗ್ ಟೆಂಡರಿಗೆ ಹೆಚ್ಚಿನ ಬಿಡ್ಡುದಾರರು ಪಾಲ್ಗೊಳ್ಳುವ ನಿಟ್ಟಿನಲ್ಲಿ ಪೂಜ್ಯ ಮಹಾಪೌರರು ಮತ್ತು ಉಪ ಮಹಾಪೌರರು ರವರೊಂದಿಗೆ ಚರ್ಚಿಸಿದಂತೆ ಟೆಂಡರ್ ಮೆಕಾನಿಕಲ್ ಸ್ವೀಪಿಂಗ್ ದಸ್ತಾವೇಜಿನ ತಾಂತ್ರಿಕ ಅರ್ಹತೆಯ ನಿಬಂಧನೆಯಲ್ಲಿ ಈ ಕೆಳಕಂಡಂತೆ ಮಾರ್ಪಾಡು ಮಾಡಬೇಕಾಗಿರುತ್ತದೆ.

Sd/- (signature)
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| ಮೆಕಾನಿಕಲ್ ಸ್ವೀಪಿಂಗ್ ಟೆಂಡರ್‌ನಲ್ಲಿ ಹಾಲಿ ಇರುವ ಷರತ್ತು | ಮೆಕಾನಿಕಲ್ ಸ್ವೀಪಿಂಗ್ ಟೆಂಡರ್‌ನಲ್ಲಿ ಮಾರ್ಪಾಡಿಸಬೇಕಾದ ನಿಬಂಧನೆ |
|---|---|
| ಅರ್ಹತೆಯ ಮಾನದಂಡಗಳು<br>ಬಿಡ್ಡುದಾರರು ಟೆಂಡರ್‌ನಲ್ಲಿ ಆಯ್ಕೆಯಾಗಲು ಕೆಳಗೆ ತಿಳಿಸಿರುವ ಅನುಭವದ ಅರ್ಹತೆಯ ಎಲ್ಲಾ ಮಾನದಂಡಗಳನ್ನು ಕಡ್ಡಾಯವಾಗಿ ಪೂರೈಸಬೇಕು. | ಅರ್ಹತೆಯ ಮಾನದಂಡಗಳು<br>ಬಿಡ್ಡುದಾರರು ಟೆಂಡರ್‌ನಲ್ಲಿ ಆಯ್ಕೆಯಾಗಲು ಕೆಳಗೆ ತಿಳಿಸಿರುವ ಅನುಭವದ ಅರ್ಹತೆಯ ಕ್ರಮ ಸಂಖ್ಯೆ (a) ಮತ್ತು (b) ಯಲ್ಲಿನ ಒಂದು ಮಾನದಂಡವನ್ನು ಮತ್ತು (c) ಯಲ್ಲಿನ ಮಾನದಂಡವನ್ನು ಕಡ್ಡಾಯವಾಗಿ ಪೂರೈಸಬೇಕು. |
| a) ಕಳೆದ 2006-07 ರಿಂದ 2010-11 ನೇ ಇಸವಿಯ ವರ್ಷಗಳಲ್ಲಿ ಕನಿಷ್ಠ 24 ತಿಂಗಳುಗಳ ಕಾಲ ಬಿಡ್ಡುದಾರನು ಪ್ರತಿನಿತ್ಯ [1]________ಕಿಲೋ ಮೀಟರ್‌ನಷ್ಟು ಮೆಕಾನಿಕಲ್ ಸ್ವೀಪಿಂಗ್ ಯಂತ್ರದ ಮೂಲಕ ಸ್ವಚ್ಛತೆ ಮತ್ತು ರಸ್ತೆ ಗುಡಿಸುವಿಕೆಯನ್ನು ನಿರ್ವಹಿಸಿರುವುದು. | a) ಕಳೆದ 2006-07 ರಿಂದ 2010-11 ನೇ ಇಸವಿಯ ವರ್ಷಗಳಲ್ಲಿ ಕನಿಷ್ಠ 24 ತಿಂಗಳುಗಳ ಕಾಲ ಬಿಡ್ಡುದಾರನು ಪ್ರತಿನಿತ್ಯ________ಕಿಲೋ ಮೀಟರ್‌ನಷ್ಟು ಮೆಕಾನಿಕಲ್ ಸ್ವೀಪಿಂಗ್ ಯಂತ್ರದ ಮೂಲಕ ಸ್ವಚ್ಛತೆ ಮತ್ತು ರಸ್ತೆ ಗುಡಿಸುವಿಕೆಯನ್ನು ನಿರ್ವಹಿಸಿರುವುದು. |
| b) ಕಳೆದ 2006-07 ರಿಂದ 2010-11 ನೇ ಇಸವಿಯ ವರ್ಷಗಳಲ್ಲಿ ಕನಿಷ್ಠ 24 ತಿಂಗಳುಗಳ ಕಾಲ ಬಿಡ್ಡುದಾರನು ಪ್ರತಿನಿತ್ಯ[2]________ಕಿಲೋ ಮೀಟರ್‌ನಷ್ಟು ಕಾರ್ಮಿಕರ ಮೂಲಕ ಸ್ವಚ್ಛತೆ ಮತ್ತು ರಸ್ತೆ ಗುಡಿಸುವಿಕೆಯನ್ನು ನಿರ್ವಹಿಸಿರುವುದು. | b) ಕಳೆದ 2006-07 ರಿಂದ 2010-11 ನೇ ಇಸವಿಯ ವರ್ಷಗಳಲ್ಲಿ ಕನಿಷ್ಠ 24 ತಿಂಗಳುಗಳ ಕಾಲ ಬಿಡ್ಡುದಾರನು ಪ್ರತಿನಿತ್ಯ________ಕಿಲೋ ಮೀಟರ್‌ನಷ್ಟು ಕಾರ್ಮಿಕರ ಮೂಲಕ ಸ್ವಚ್ಛತೆ ಮತ್ತು ರಸ್ತೆ ಗುಡಿಸುವಿಕೆಯನ್ನು ನಿರ್ವಹಿಸಿರುವುದು. |
| c) ಬಿಡ್ಡುದಾರನು ಸ್ವಂತವಾಗಿ ಶೇ.50 ರಷ್ಟು ಮತ್ತು ಶೇ.50 ರಷ್ಟು ಗುತ್ತಿಗೆ ಆಧಾರದ ಮೇಲೆ ಕನಿಷ್ಟ [3]________ ರಷ್ಟು ಮೆಕಾನಿಕಲ್ ಸ್ವೀಪಿಂಗ್ ಯಂತ್ರ ಮತ್ತು [4]__________ರಷ್ಟು ಟಿಪ್ಪರ್ ಲಾರಿಗಳನ್ನು ಹೊಂದಿರಬೇಕು. ಮೆಕಾನಿಕಲ್ ಸ್ವೀಪಿಂಗ್ ಯಂತ್ರದ ತಯಾರಿಕೆ ವರ್ಷ 2008-ಏಪ್ರಿಲ್ ಮೇಲ್ಪಟ್ಟಿರಬೇಕು. | c) ಬಿಡ್ಡುದಾರನು ಸ್ವಂತವಾಗಿ ಅಥವಾ ಗುತ್ತಿಗೆ ಆಧಾರದ ಮೇಲೆ ಕನಿಷ್ಟ________ ರಷ್ಟು ಮೆಕಾನಿಕಲ್ ಸ್ವೀಪಿಂಗ್ ಯಂತ್ರ ಮತ್ತು __________ರಷ್ಟು ಟಿಪ್ಪರ್ ಲಾರಿಗಳನ್ನು ಹೊಂದಿರಬೇಕು. ಮೆಕಾನಿಕಲ್ ಸ್ವೀಪಿಂಗ್ ಯಂತ್ರದ ತಯಾರಿಕೆ ವರ್ಷ 2008 ಮತ್ತು ಟಿಪ್ಪರ್ ಲಾರಿಯ ತಯಾರಿಕೆ ವರ್ಷ 2005 ಮೇಲ್ಪಟ್ಟಿರಬೇಕು. |

1. ಶೇ.50 ರಷ್ಟು ಪ್ಯಾಕೇಜಿನ ರಸ್ತೆಯ ಉದ್ದ
2. ಶೇ.50 ರಷ್ಟು ಪ್ಯಾಕೇಜಿನ ರಸ್ತೆಯ ಉದ್ದ
3. ಪ್ಯಾಕೇಜಿಗೆ ಅವಶ್ಯವಿರುವ ಒಟ್ಟು ಮೆಕಾನಿಕಲ್ ಸ್ವೀಪಿಂಗ್ ಯಂತ್ರದ ಸಂಖ್ಯೆ
4. ಪ್ಯಾಕೇಜಿಗೆ ಅವಶ್ಯವಿರುವ ಒಟ್ಟು ಟಿಪ್ಪರ್ ಲಾರಿಯ ಸಂಖ್ಯೆ

ಮೆಕಾನಿಕಲ್ ಸ್ವೀಪಿಂಗ್ ಟೆಂಡರಿನಲ್ಲಿ ಹೆಚ್ಚಿನ ಬಿಡ್ಡುದಾರರು ಪಾಲ್ಗೊಳ್ಳುವ ನಿಟ್ಟಿನಲ್ಲಿ ತಾಂತ್ರಿಕ ಅರ್ಹತೆಯ ನಿಬಂಧನೆಯಲ್ಲಿ ಮೇಲಿನಂತೆ ಮಾರ್ಪಾಡು ಮಾಡಲು ಅನುಮೋದನೆಗಾಗಿ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ದಿನಾಂಕ: 28-07-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

G. Shashi Kumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**

**ಅಧ್ಯಕ್ಷರು**

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 27-07-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಉಪ ಆಯುಕ್ತರು (ಆರೋಗ್ಯ) |
| ಎಂ. ಮುನಿರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಡಾ॥ ಎಸ್. ರಾಜು | ಸದಸ್ಯರು | |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಎನ್. ವೀರಣ್ಣ | ಸದಸ್ಯರು | |
| ಎಲ್. ರಮೇಶ್ | ಸದಸ್ಯರು | |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಎಸ್. ನಟರಾಜ್ | ಸದಸ್ಯರು | |
| ಶ್ರೀಮತಿ.ಪಿ.ಸೌಮ್ಯ | ಸದಸ್ಯರು | |
| ಎಂ.ಶ್ರೀನಿವಾಸ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1) ವಿಷಯದ ಸಂಖ್ಯೆ: ಸಾಆಸ್ಥಾಸ/12/11-12:

ಸಂಖ್ಯೆ: ಐ12(4)/ಪಿಆರ್/290/10-11, ದಿನಾಂಕ: 18-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಘನ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅರ್ಜಿ ಸಂಖ್ಯೆ 155/2011 (ಸಾರ್ವಜನಿಕ ಹಿತಾಸಕ್ತಿ ಅರ್ಜಿ) ರಲ್ಲಿ ದಿನಾಂಕ: 18-1-2011 ರಂದು ನೀಡಿರುವ ಆದೇಶದಂತೆ, ರಾಜ್ಯದಾದ್ಯಂತ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಲಿ ಇರುವ ವೈದ್ಯರುಗಳ ಸಿಬ್ಬಂದಿ ಕೊರತೆಯನ್ನು ಕೂಡಲೇ ತುಂಬಲು ನಿಯೋಜನೆ ಮೇಲೆ ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳನ್ನು ಕೂಡಲೇ ಹಿಂಪಡೆದು ತುಂಬಲು ಸರ್ಕಾರಕ್ಕೆ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಸರ್ಕಾರವು ಇತರೆ ಸರ್ಕಾರಿ ಸಂಸ್ಥೆಗಳಲ್ಲಿ ಪ್ರತಿ ನಿಯೋಜನೆ ಮೇಲೆ ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳನ್ನು ಸೇವೆಯಿಂದ ತಕ್ಷಣಕ್ಕೆ ಜಾರಿಗೆ ಬರುವಂತೆ ಮಾತೃ ಇಲಾಖೆಗೆ ಹಿಂಪಡೆದು ಸದರಿ ವೈದ್ಯರುಗಳು 15 ದಿನದೊಳಗೆ ನಿರ್ದೇಶನಾಲಯಕ್ಕೆ ಕರ್ತವ್ಯದ ಮೇರೆಗೆ ಹಾಜರಾಗತಕ್ಕದೆಂದು ಸರ್ಕಾರದ

Geethashikumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಆದೇಶ ಸಂಖ್ಯೆ:ಆಕುಕ 52 ಎಂಎಸ್ಎಸ್ 2011, ಬೆಂಗಳೂರು ದಿನಾಂಕ:17-06-2011 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಬೃ.ಬೆಂ.ಮ.ಪಾಲಿಕೆಯಲ್ಲಿ ಸರ್ಕಾರದಿಂದ ನಿಯೋಜನೆ ಮೇಲೆ 43 ಸಹಾಯಕ ಶಸ್ತ್ರ ಚಿಕಿತ್ಸಕರು ಕಾರ್ಯ ನಿರ್ವಹಿಸುತ್ತಿದ್ದು, ಮೇಲೆ ಸೂಚಿಸಿರುವ ಸರ್ಕಾರಿ ಆದೇಶದಂತೆ, 43 ವೈದ್ಯರುಗಳನ್ನು ಕೂಡಲೇ ಪಾಲಿಕೆಯಿಂದ ಬಿಡುಗಡೆ ಮಾಡಬೇಕಾಗಿರುತ್ತದೆ, ತಪ್ಪಿದಲ್ಲಿ ಘನ ಉಚ್ಚನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿದಂತಾಗುತ್ತದೆ. ಇದಕ್ಕೆ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಪೂರ್ಣ ಜವಬ್ದಾರರಾಗುತ್ತಾರೆಂದು, ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿರುತ್ತದೆ.

ಈ ವೈದ್ಯರುಗಳನ್ನು ಕೂಡಲೇ ಬಿಡುಗಡೆ ಮಾಡಿದಲ್ಲಿ ಪಾಲಿಕೆಯ ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲದೇ ಸಾರ್ವಜನರಿಗೆ ವೈದ್ಯಕೀಯ ಸೇವೆಯ ಕೊರತೆ ಉಂಟಾಗುತ್ತದೆ. ಈಗಾಗಲೇ ಬೃ.ಬೆಂ.ಮ.ಪಾಲಿಕೆಯಲ್ಲಿ ಈಗಾಗಲೇ 39+2 ಸಹಾಯಕ ಚಿಕಿತ್ಸಕ ವೈದ್ಯರ ಹುದ್ದೆ ಖಾಲಿ ಇದ್ದು, ಇದರ ಜೊತೆಗೆ 43 ಸರ್ಕಾರದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಶಸ್ತ್ರ ವೈದ್ಯರುಗಳನ್ನು ಬಿಡುಗಡೆಗೊಳಿಸಿ ಸರ್ಕಾರಕ್ಕೆ ಕಳುಹಿಸಿದಲ್ಲಿ ಬಿ.ಬಿ.ಎಂ.ಪಿಯ ಹಲವಾರು ಆಸ್ಪತ್ರೆಗಳನ್ನು ಮುಚ್ಚುವ ಪರಿಸ್ಥಿತಿ ಬರುವುದಲ್ಲದೆ ಈ ಆಸ್ಪತ್ರೆಗಳ ಮೇಲೆ ಅವಲಂಬಿಸಿರುವ ಹಲವಾರು ನಗರದ ಬಡಜನರಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸುವಲ್ಲಿ ತೀವ್ರ ತೊಂದರೆ ಉಂಟಾಗುತ್ತದೆ. ಈಗಾಗಲೇ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಮತ್ತು ಇತರೆ ಅರೆ ವೈದ್ಯಕೀಯ ಖಾಲಿ ಹುದ್ದೆಗಳನ್ನು ತುಂಬಲು ಈ ಹಿಂದೆ ಆರೋಗ್ಯ ಸ್ಥಾಯಿ ಸಮಿತಿಯ ಮತ್ತು ಪಾಲಿಕೆಯ ಅನುಮೋದನೆ ಪಡೆದು ಸರ್ಕಾರದ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಸರ್ಕಾರದ ಅನುಮೋದನೆ ಪಡೆದ ನಂತರ ವೈದ್ಯರುಗಳ ನೇಮಕಾತಿ ಮಾಡುವ ಸಲುವಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಮನವಿ ಸಲ್ಲಿಸಿ ಸದರಿ ಸಂಸ್ಥೆಯು ವೈದ್ಯರುಗಳ ನೇಮಕಾತಿ ಮಾಡಿ, ಸರ್ಕಾರ ಸದರಿ ವೈದ್ಯರುಗಳಿಗೆ ನೇಮಕಾತಿ ಆದೇಶ ನೀಡಲು, ಕನಿಷ್ಠ ಒಂದು ವರ್ಷ ಕಾಲಾವಕಾಶ ಬೇಕಾಗುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 13-07-2011 ರಂದು ಆರ್ಥಿಕ ಇಲಾಖೆಯ ಅಧಿಕಾರಿಗಳು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಕಾನೂನು ಇಲಾಖೆಯ ಕಾರ್ಯದರ್ಶಿಗಳು, ವೈದ್ಯಕೀಯ ಇಲಾಖೆಯ ಕಾರ್ಯದರ್ಶಿಗಳು ಮತ್ತು ಬಿ.ಬಿ.ಎಂ.ಪಿ ಆಯುಕ್ತರ ಸಭೆ ನಡೆದು, ಸದರಿ ಸಭೆಯಲ್ಲಿ ಮಾನ್ಯ ಆಯುಕ್ತರು, ಕರ್ನಾಟಕ ಪೌರ ನಿಗಮ ನಿಯಮಗಳು 1977ರ ನಿಯಮ 26ರಡಿ ಕೋಷ್ಟಕ 16ಎ ರನ್ವಯ ಸಹಾಯಕ ಶಸ್ತ್ರ ವೈದ್ಯಾಧಿಕಾರಿಗಳ ವೃಂದದಲ್ಲಿ ಶೇಕಡಾ 50 ರಷ್ಟನ್ನು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಾಯಕ ಶಸ್ತ್ರ ವೈದ್ಯಾಧಿಕಾರಿ ವೃಂದದಿಂದ ಪ್ರತಿ ನಿಯೋಜನೆ

ಮೂಲಕ ತುಂಬಬೇಕೆಂದು, ಉಳಿಕೆ ಶೇಕಡಾ 50 ರಷ್ಟನ್ನು ಎಂ.ಬಿ.ಬಿ.ಎಸ್ ಪದವಿ ಹೊಂದಿರುವ ವ್ಯಕ್ತಿಗಳನ್ನು ನೇರನೇಮಕಾತಿ ಮೂಲಕ ತುಂಬಬೇಕೆಂದು, ನಿಯಮ ಇರುವುದನ್ನು ವಿವರಿಸಿ, ಬಿ.ಬಿ.ಎಂ.ಪಿ.ಯ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ 6 ರೆಫರೆಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳು, ಒಟ್ಟು 64 ಆರೋಗ್ಯ ಕೇಂದ್ರಗಳು, ಔಷಧಾಲಯಗಳು ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳು, ನಗರ ಬಡಜನರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಈ ಮೇಲ್ಕಂಡಂತೆ ಸರ್ಕಾರ 43 ವೈದ್ಯರ ಸೇವೆಯನ್ನು ಹಿಂಪಡೆದುಕೊಂಡಿರುವುದರಿಂದ, ಈಗಾಗಲೇ ಖಾಲಿ ಇರುವ 39+2 ಹುದ್ದೆಗಳು ಸೇರಿ ಒಟ್ಟು 84 ಹುದ್ದೆಗಳಲ್ಲಿ ವೈದ್ಯರು ಮತ್ತು 10 ತಜ್ಞ ವೈದ್ಯರು ಇಲ್ಲದೆ ತೀವ್ರ ತೊಂದರೆ ಉಂಟಾಗುವುದಾಗಿ ವಿವರಿಸಿದರು. ಗ್ರಾಮಾಂತರ ಪ್ರದೇಶದ ಆರೋಗ್ಯ ಕೇಂದ್ರಗಳಂತೆ ಬಿ.ಬಿ.ಎಂ.ಪಿಯ ಈ ಮೇಲ್ಕಂಡ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿದ್ದು, ನಗರದ ಬಡಜನರಿಗೆ ವೈದ್ಯಕೀಯ ಸೇವೆ ಪಡೆಯುವಲ್ಲಿ ಭಾರಿ ವ್ಯತ್ಯಯ ಉಂಟಾಗುತ್ತದೆ ಎಂಬುದಾಗಿ ಆಯುಕ್ತರು ಸಭೆಗೆ ವಿವರಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿಯಲ್ಲಿ ವೈದ್ಯರ ನೇರ ನೇಮಕಾತಿ ಮಾಡಿಕೊಳ್ಳುವಲ್ಲಿ ಆಗಿರುವ ವಿಳಂಬದ ಬಗ್ಗೆ ವಿವರಣೆ ಕೋರಿದಾಗ ಬಿ.ಬಿ.ಎಂ.ಪಿ ಯಿಂದ ಈಗಾಗಲೇ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರದಿಂದ ಅನುಮತಿ ಕೋರಿದ್ದು, ಸದರಿ ಕಡತವು ಆರ್ಥಿಕ ಇಲಾಖೆಯ ಅನುಮೋದನೆಗೆ ಹೋಗಿದ್ದು, ಆರ್ಥಿಕ ಇಲಾಖೆಯು ಕೆಲವು ಆಕ್ಷೇಪಣೆಗಳನ್ನು ಎತ್ತಿ ವಿವರಣೆಯನ್ನು ಕೋರಿದ್ದು, ಉತ್ತರ ನೀಡುವ ಹಂತದಲ್ಲಿ ಇರುವುದಾಗಿ ಮಾನ್ಯ ಆಯುಕ್ತರು ತಿಳಿಸಿದರು.

**ಈ ಹಂತದಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಮುಂದಿನ 2 ದಿನಗಳಲ್ಲಿ ಆರ್ಥಿಕ ಇಲಾಖೆಯು ವೈದ್ಯರನ್ನು ನೇಮಕಾತಿ ಮಾಡಿಕೊಳ್ಳುವ ವಿಷಯದಲ್ಲಿ ಅನುಮತಿ ನೀಡುವಂತೆ ನಿರ್ದೇಶಿಸಿದರು. ವೈದ್ಯರನ್ನು ಖಾಯಂ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಕರ್ನಾಟಕ ಲೋಕಸೇವಾ ಆಯೋಗದಿಂದ ಆಗಬೇಕಾಗಿದ್ದು, ಸದರಿ ನೇಮಕಾತಿಗೆ ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ ಬೃ.ಬೆ.ಮ.ಪಾಲಿಕೆಯು ಈ ಕೂಡಲೇ ನಿವೃತ್ತ ವೈದ್ಯರನ್ನು ನಿಯಮಾನುಸಾರ ಗೌರವಧನದ ಆಧಾರದ ಮೇಲೆ ಈ ತಕ್ಷಣದಿಂದಲೇ ಖಾಲಿ ಹುದ್ದೆಗಳಿಗೆ ವೈದ್ಯರನ್ನು ನೇಮಿಸಿಕೊಳ್ಳಬೇಕೇಂದು ಸೂಚಿಸಿ ಈ ಮೇಲ್ಕಂಡ ಸರ್ಕಾರದಿಂದ ಪ್ರತಿ ನಿಯೋಜನೆ ಮೇಲೆ ಇರುವ 43 ವೈದ್ಯರನ್ನು ಬಿಡುಗಡೆಗೊಳಿಸುವಂತೆ ಸೂಚಿಸಿದರು. ಅಲ್ಲದೇ ಶೇಕಡಾ 100% ರಷ್ಟು ವೈದ್ಯರುಗಳನ್ನು ಹಾಗೂ ಅರೆ ವೈದ್ಯಕೀಯ ಸಿಬ್ಬಂಧಿಯನ್ನು ಬಿ.ಬಿ.ಎಂ.ಪಿ ವತಿಯಿಂದಲೇ ನೇರ ನೇಮಕಾತಿ ಮಾಡಿಕೊಳ್ಳಲು ಅನುವಾಗುವಂತೆ ಕರ್ನಾಟಕ ಪೌರ ನಿಗಮ ನಿಯಮಗಳ 1977ರ ನಿಯಮ 26ಕ್ಕೆ ತಿದ್ದುಪಡಿ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.**

Shashikumar

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

ಕರ್ನಾಟಕ ಪೌರಾಡಳಿತ ನಿಯಮ 1977ರ ನಿಯಮ 20(1)ರಂತೆ ಸಾರ್ವಜನಿಕ ಹಿತಾಸಕ್ತಿಯ ಆಧಾರದ ಮೇಲೆ ಸರ್ಕಾರದ ಪೂರ್ವಾನುಮತಿಯೊಂದಿಗೆ ನಿಯಮ 20(1)(ಎ)ರಡಿಯಲ್ಲಿ ನಿವೃತ್ತಿ ಹೊಂದಿರುವ ವೈದ್ಯಾಧಿಕಾರಿಗಳನ್ನು ಅವಶ್ಯಕವಾಗಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂತಹ ಅವಧಿಗಾಗಿ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ.

ಸರ್ಕಾರದ ದಿನಾಂಕ: 25-6-2005ರ ಅಧಿಸೂಚನೆ ಸಂಖ್ಯೆ ಯು.ಡಿ.ಡಿ 118 ಎಂ.ಎನ್.ಯು 2005 ರಂತೆ ನಿಯಮ 20 (1)(ಬಿ)ರಡಿಯಲ್ಲಿ ಸಮರ್ಥರಾದ ಯಾವುದೇ ವ್ಯಕ್ತಿಯನ್ನು ನಿವೃತ್ತನಾದ ವ್ಯಕ್ತಿಯನ್ನು ಹೊರತುಪಡಿಸಿ ಒಪ್ಪಂದದ ಮೂಲಕ ಆಯುಕ್ತರು ನಿರ್ಧರಿಸಬಹುದಾಂತಹ ನಿಬಂಧನೆಗಳು ಮತ್ತು ಷರತ್ತುಗಳ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆ. ಅಂದರೆ ವಿದ್ಯಾರ್ಹತೆ ಹೊಂದಿರುವ ಯುವ ವೈದ್ಯರನ್ನೂ ಸಹ ತಾತ್ಕಾಲಿಕ ಅವಧಿಗೆ ಗೌರವಧನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಪಾಲಿಕೆಯಲ್ಲಿ ಸಹಾಯಕ ಶಸ್ತ್ರ ವೈದ್ಯರ ಒಟ್ಟು 91 ಮಂಜೂರಾತಿ ಹುದ್ದೆಯಿದ್ದು, ಶೇಕಡಾ 50% ನೇರ ನೇಮಕಾತಿಯಂತೆ 46 ಹುದ್ದೆಯಿದ್ದು, ಇವುಗಳ ಪೈಕಿ 7 ಹುದ್ದೆಗಳಲ್ಲಿ ಮಾತ್ರ ಸಹಾಯಕ ಶಸ್ತ್ರ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, 39 ಸಹಾಯಕ ಶಸ್ತ್ರ ವೈದ್ಯರ ಹುದ್ದೆಗಳು ಖಾಲಿ ಇರುತ್ತದೆ.

ಕರ್ನಾಟಕ ಸರ್ಕಾರದ ಆರೋಗ್ಯ ಇಲಾಖೆಯಿಂದ ಎರವಲು ಸೇವೆಯ ಮೇಲೆ ಶೇಕಡಾ 50% ರಷ್ಟರ ಅಡಿಯಲ್ಲಿ 45 ಹುದ್ದೆಗಳು ಇದ್ದು, ಇವುಗಳ ಪೈಕಿ 43 ಹುದ್ದೆಗಳಲ್ಲಿ ಎರವಲು ಸೇವೆಯ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, 2 ಹುದ್ದೆ ಖಾಲಿ ಇರುತ್ತವೆ. ಅಂದರೆ ಈಗ ಸರ್ಕಾರವು ಎರವಲು 43 ವೈದ್ಯರನ್ನು ಹಿಂಪಡೆದುಕೊಂಡು ಆದೇಶಿಸಿರುವುದರಿಂದ 39+43+2 ಒಟ್ಟು 84 ಸಹಾಯಕ ಶಸ್ತ್ರ ವೈದ್ಯರು ಹುದ್ದೆಗಳನ್ನು ಕೂಡಲೇ ತುಂಬುವ ಅವಶ್ಯಕತೆ ಇರುತ್ತದೆ.

ತಜ್ಞರ ಪೈಕಿ ಮಕ್ಕಳ ತಜ್ಞರ 1 ಹುದ್ದೆ , ಪ್ರಸೂತಿ ತಜ್ಞರ 7 ಹುದ್ದೆ, ಅರವಳಿಕೆ ತಜ್ಞರ 2 ಹುದ್ದೆಗಳನ್ನು ನೇರನೇಮಕಾತಿ ಕಾಯ್ದಿರಿಸಿ ತಾತ್ಕಾಲಿಕವಾಗಿ ಈ ಮೇಲ್ಕಂಡ 10 ಹುದ್ದೆಗಳನ್ನು ಸಹ ಈ ಕೂಡಲೇ ತಾತ್ಕಾಲಿಕವಾಗಿ ಗೌರವಧನದ ಆಧಾರದ ಮೆಲೆ ತುಂಬಬೇಕಾಗಿರುತ್ತದೆ.

ಗೌರವಧನವನ್ನು ನಿಗಧಿಪಡಿಸುವ ಬಗ್ಗೆ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಿಂದ ಸುತ್ತೋಲೆ ಸಂಖ್ಯೆಃಉ.ನಿ/ತಾ.ಆ/ವೈ.ನೇ/79/2009-10, ದಿನಾಂಕ: 17-03-2010ರ

ಸುತ್ತೋಲೆಯನ್ನು ಆಧಾರವಾಗಿಟ್ಟುಕೊಂಡು ಎಂ.ಬಿ.ಬಿ.ಎಸ್ ಪದವಿ ಹೊಂದಿರುವ ಸಹಾಯಕ ಶಸ್ತ್ರ ವೈದ್ಯಾಧಿಕಾರಿಗಳಿಗೆ ಮಾಸಿಕ ರೂ.25,000-00 ಗಳ ಗೌರವಧನ ಮತ್ತು ಎಂ.ಬಿ.ಬಿ.ಎಸ್ ಜೊತೆಗೆ ಡಿಪ್ಲೋಮಾ ಹೊಂದಿರುವ ತಜ್ಞ ವೈದ್ಯರುಗಳಿಗೆ ಮಾಸಿಕ ಗೌರವಧನ ರೂ.30,000-00, ಎಂ.ಬಿ.ಬಿ.ಎಸ್ ಜೊತೆಗೆ ಸ್ನಾತಕೋತ್ತರ ಪದವಿ ಹೊಂದಿರುವ ತಜ್ಞ ವೈದ್ಯರಿಗೆ ರೂ.35,000-00ಗಳ ಮಾಸಿಕ **ಗೌರವಧನದವನ್ನು ನೀಡುವ ಆಧಾರದ ಮೇಲೆ 6 ತಿಂಗಳ ಕಾಲಾವಧಿಗೆ ಒಟ್ಟು 84 ಸಹಾಯಕ ಶಸ್ತ್ರ ವೈದ್ಯರು ಮತ್ತು 10 ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು** ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 18-07-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

G. Thashashikumar

**(ಡಾ॥ ಕೆ.ಎಸ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 11-07-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಉಪ ಆಯುಕ್ತರು (ಆರೋಗ್ಯ) |
| ಎಂ. ಮುನಿರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಎನ್. ವೀರಣ್ಣ | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಎಲ್. ರಮೇಶ್ | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) (ಪ್ರಭಾರ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ) (ಪ್ರಭಾರ) |
| ಎಸ್. ನಟರಾಜ್ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಸೊಳ್ಳೆ ನಿಯಂತ್ರಣ/ಕೇಂದ್ರ ಔಷಧ ಉಗ್ರಾಣ) (ಪ್ರಭಾರ) |
| ಎಂ.ಶ್ರೀನಿವಾಸ | ಸದಸ್ಯರು | ಅಧೀಕ್ಷಕರು (ಬನಶಂಕರಿ ರೆಫರಲ್ ಆಸ್ಪತ್ರೆ) |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1. ವಿಷಯದ ಸಂಖ್ಯೆ: ಸಾಆಸ್ಥಾಸ/5/11-12:

ಸಂಖ್ಯೆ: ಆ.ವೈ.(ಎಂ.ಸಿ.ಹೆಚ್. & ಎಫ್.ಡಬ್ಲ್ಯೂ)/ಪಿಆರ್/285/2011-12, ದಿನಾಂಕ: 27-05-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬನಶಂಕರಿ ರೆಫರೆಲ್ ಆಸ್ಪತ್ರೆ ವ್ಯಾಪ್ತಿಯಲ್ಲಿ ಬರುವ ಹೆರಿಗೆ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದೆ ಪ್ರಗತಿ ಕುಂಠಿತವಾಗಿರುತ್ತದೆ. ಹಾಗೂ ಸಾರ್ವಜನಿಕರಿಗೆ ಸೇವೆ ನೀಡಲು ಕಷ್ಟಕರವಾಗಿರುತ್ತದೆ. ಈಗಾಗಲೇ ಜಯನಗರ ಹೆರಿಗೆ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ॥ ಚಿತ್ರಾ ರವರನ್ನು ಪೊಬತ್ತಿ ಹೆರಿಗೆ ಆಸ್ಪತ್ರೆಯಲ್ಲಿಯೆ ಕಾರ್ಯನಿರ್ವಹಿಸುವಂತೆ ನಿಯೋಜಿಸಲಾಗಿದೆ. ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯವರು ಎರವಲು ಸೇವೆಯಲ್ಲಿ ಪಾಲಿಕೆಯ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಹಿಂಪಡೆಯಲು ಆದೇಶವನ್ನು ಹೊರಡಿಸಿರುತ್ತಾರೆ. ಬನಶಂಕರಿ ರೆಫರೆಲ್ ಆಸ್ಪತ್ರೆಯಲ್ಲಿ ವೈದ್ಯರುಗಳ ತೀವ್ರಕೊರತೆ ಉಂಟಾಗಿರುತ್ತದೆ.

ಬನಶಂಕರಿ ರೆಫರೆಲ್ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಿಂದಲೂ ಕುಟುಂಬ ಕಲ್ಯಾಣ ಕೇಂದ್ರ ಸೌಲಭ್ಯವನ್ನು "ಕಿಮ್ಸ್ ಆಸ್ಪತ್ರೆ ಕಮ್ಯೂನಿಟಿ ಡಿಪಾರ್ಟ್‌ಮೆಂಟ್" ನಿಂದ House Surgeons ನ್ನು ನಿಯೋಜಿಸಿ ಪ್ರಯೋಜನ ಪಡೆಯುತ್ತಿರುತ್ತೇವೆ.

Geethashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಅಂಶವನ್ನು ಪರಾಮರ್ಷೆ ಮಾಡಿ ವೈದ್ಯರ ಕೊರತೆ ನೀಗಿಸಲು 3 Post Students, 3 House Surgeons ನ್ನು 3 ಪಾಳಿಯಲ್ಲಿ ಪೊಬ್ಬತ್ತಿ ಹೆರಿಗೆ ಆಸ್ಪತ್ರೆಗೆ ಕಿಮ್ಸ್ ಆಸ್ಪತ್ರೆಯಿಂದ ನಿಯೋಜಿಸಿದಲ್ಲಿ ಪೊಬ್ಬತ್ತಿ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸಿ ಸಾರ್ವಜನಿಕರಿಗೆ ಹಾಗೂ ಕಡುಬಡವರಿಗೆ ವೈದ್ಯಕೀಯ ಸೇವೆ ನೀಡುವಂತಾಗುತ್ತದೆ. ಈ ನಿಟ್ಟಿನಲ್ಲಿ ವೈದ್ಯರುಗಳನ್ನು ಕಿಮ್ಸ್ ಆಸ್ಪತ್ರೆಯಿಂದ ನಿಯೋಜಿಸಿಕೊಳ್ಳುವ ಬಗ್ಗೆ ಆದೇಶವನ್ನು ನೀಡಲು ಯೋಜನಾ ಸಮನ್ವಯಾಧಿಕಾರಿಗಳು, ಮುಖ್ಯ ಆರೋಗ್ಯಾಧಿಕಾರಿಗಳು ಕೋರಿದ್ದು, ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

## ನಿರ್ಣಯ:

**ದಿನಾಂಕ: 27-05-2011 ರ ಆಯುಕ್ತರ ಟಿಪ್ಪಣಿ ಒಪ್ಪುತ್ತಾ, ಆರು ತಿಂಗಳ ಅವಧಿಯವರೆವಿಗೆ ಅಥವಾ ಮುಂದಿನ ಆಯುಕ್ತರ ಆದೇಶದವರೆವಿಗೆ ಅಥವಾ ಈ ಎರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆವಿಗೆ ಸೇವೆಯನ್ನು ಪಡೆಯಲು ಸಮಿತಿ ತೀರ್ಮಾನಿಸಿದೆ.**

## 2. ವಿಷಯದ ಸಂಖ್ಯೆ: ಸಾಆಸ್ಥಾಸ/9/11-12:

ಸಂಖ್ಯೆ: ಆ/ಪಿಎಸ್‌ಆರ್/ /2010-11, ದಿನಾಂಕ: 28-06-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಂಡೂರಿನ ಸರ್ವೆ ನಂ.155ರ ಉತ್ತರಭಾಗ ಮತ್ತು ರಾಜರಾಜೇಶ್ವರಿ ನಗರದ ಸುಬ್ಬರಾಯನಪಾಳ್ಯದಲ್ಲಿನ ಪಾಲಿಕೆ ಜಮೀನಿನಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳನ್ನು ನಿರ್ಮಿಸಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆದು, ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಹೀಗೆ ಶೇಖರಣೆಯಾದ ಘನತ್ಯಾಜ್ಯವನ್ನು 10 ಗಾಲಿಗಳ ಮುಖಾಂತರ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು ಟೆಂಡರ್ ಅಧಿಸೂಚನೆ ಸಂ: CE(SWM)/Tend/03/10-11, ದಿನಾಂಕ: 13-04-2010 ರಂತೆ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸಲಾಗಿತ್ತು.

**East Zone ಮತ್ತು West Zone ನಿಂದ ದೊಡ್ಡಬಳ್ಳಾಪುರದ ಟೆರ್ರಾಫರ್ಮಾ ಸಂಸ್ಥೆಗೆ 10 ಗಾಲಿಗಳ ಟ್ರಕ್ಕುಗಳ ಮೂಲಕ ಘನತ್ಯಾಜ್ಯ ವಸ್ತುಗಳ ಸಾಗಣೆ ಮಾಡುವ ಕಾರ್ಯದ ಅವಧಿಯು ಮುಕ್ತಾಯಗೊಂಡಿರುತ್ತದೆ.**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 8 ಪ್ಯಾಕೇಜ್‌ಗಳಿಗೆ ಆಹ್ವಾನಿಸಲಾದ ಕಸ ಸಂಗ್ರಹಿಸಿ ಸಾಗಣೆ ಮಾಡುವ ಜಾಗತಿಕ ಟೆಂಡರ್ ಅಂತಿಮಗೊಂಡ ನಂತರ, ಮಂಡೂರಿನ ಸರ್ವೆ ನಂ.155, ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಕಾಂಪ್ಯಾಕ್ಟರ್‌ಗಳು ನೇರವಾಗಿ ದೊಡ್ಡಬಳ್ಳಾಪುರದ ಮೆ|| ಟೆರ್ರಾಫರ್ಮ ತ್ಯಾಜ್ಯ ವಿಲೇವಾರಿ ಘಟಕಕ್ಕೆ ನೇರವಾಗಿ ತ್ಯಾಜ್ಯವನ್ನು ಸಾಗಿಸಲು ವ್ಯವಸ್ಥೆ ರೂಪಿಸಲಾಗಿತ್ತು.

ಹಾಗೂ ಮಂಡೂರಿನ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ವಹಿಸುತ್ತಿರುವ ಮೆ|| ಎಸ್.ಜಿ.ಆರ್.ಆರ್.ಎಲ್. ಸಂಸ್ಥೆರವರು ಒಪ್ಪಂದದಂತೆ ತ್ಯಾಜ್ಯದಿಂದ ಉತ್ಪಾದನಾ ಮೇ-2011 ರಂದು ಪ್ರಾರಂಭವಾಗುವ ನಿರೀಕ್ಷೆಯಿದ್ದುದರಿಂದ ಮಂಡೂರಿನ ಸರ್ವೆ ನಂ.155, ಉತ್ತರಭಾಗದಲ್ಲಿ ವೈಜ್ಞಾನಿಕ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡಲಾಗುತ್ತಿರುವ

ತ್ಯಾಜ್ಯವನ್ನು ಸ್ಥಗಿರಗೊಳಿಸಿದ್ದು, ತ್ಯಾಜ್ಯವನ್ನು 10 ಗಾಲಿಗಳ ಟ್ರಕ್‌ಗಳ ಮುಖಾಂತರ ದೊಡ್ಡಬಳ್ಳಾಪುರದ ಮೆ॥ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸುವ ಕಾರ್ಯವನ್ನು ಸಹ ಸ್ಥಗಿತಗೊಳಿಸಲು ಸಹ ತೀರ್ಮಾನಿಸಲಾಗಿತ್ತು.

ಆದರೆ, ಕಸ ಸಂಗ್ರಹಿಸಿ ಸಾಗಣೆ ಮಾಡುವ ಜಾಗತಿಕ ಟೆಂಡರ್ ಇನ್ನೂ ಅಂತಿಮಗೊಂಡಿರುವುದಿಲ್ಲ. ಸದರಿ ಟೆಂಡರ್ ಪ್ರಕ್ರಿಯೆ ಇನ್ನೂ ವಿಳಂಬವಾಗುವ ಸಾಧ್ಯತೆ ಇರುತ್ತದೆ. ಹಾಗೂ ಮೆ॥ ಎಸ್.ಜಿ.ಆರ್.ಆರ್.ಎಲ್. ಸಂಸ್ಥೆರವರು ತ್ಯಾಜ್ಯದಿಂದ ಉತ್ಪಾದನಾ ಘಟಕದ ಕಾಮಗಾರಿಯು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುತ್ತದೆ.

ಮಂಡೂರಿನ ಸರ್ವೆ ನಂ.155 ರ ಉತ್ತರಭಾಗದ ವೈಜ್ಞಾನಿಕ ಲ್ಯಾಂಡ್‌ಫಿಲ್‌ಗಳಲ್ಲಿ ಸುಮಾರು 120 ಲಾರಿಗಳು ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು, ಸದರಿ ಲ್ಯಾಂಡ್‌ಫಿಲ್‌ಗಳಿಂದ 10 ಗಾಲಿಗಳ ಟ್ರಕ್‌ಗಳ ಮುಖಾಂತರ ತ್ಯಾಜ್ಯವನ್ನು ಸ್ಥಳಾಂತರಿಸುವ ಕಾರ್ಯ ಸ್ಥಗಿತಗೊಂಡಲ್ಲಿ ಲ್ಯಾಂಡ್‌ಫಿಲ್ ಪೂರ್ಣವಾಗಿ ತ್ಯಾಜ್ಯದಿಂದ ತುಂಬಿ ಹೋಗುವ ಸಾಧ್ಯತೆಯಿರುವುದರಿಂದ ಸದರಿ ಕಾರ್ಯವನ್ನು ಮುಂದುವರೆಸಬೇಕಾದ ಅವಶ್ಯಕತೆಯಿರುತ್ತದೆ ಹಾಗೂ ಈ ವ್ಯವಸ್ಥೆ ತಾತ್ಕಾಲಿಕವಾಗಿ ವಾರ್ಡ್ ಕಸ ಗುಡಿಸುವಿಕೆ ಹಾಗೂ ಕಸ ಸಾಗಾಣಿಕೆ ಟೆಂಡರ್ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವವರೆಗೂ ಮುಂದುವರೆಸಲು **East Zone** ಮತ್ತು **West Zone** ಗಳ ವೈಜ್ಞಾನಿಕ ಟ್ರಾನ್ಸಿಟ್ ಲ್ಯಾಂಡ್‌ಫಿಲ್‌ಗಳಲ್ಲಿ ಶೇಖರಣೆಯಾಗಿರುವ ಘನತ್ಯಾಜ್ಯವನ್ನು ದೊಡ್ಡಬಳ್ಳಾಪುರದ ಟೆರ್ರಾಫರ್ಮ ಸಂಸ್ಥೆಗೆ ಸಾಗಿಸಲು 2011-12 ನೇ ಸಾಲಿಗೆ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ.

ಮೇಲೆ ಸೂಚಿಸಿರುವ ವಿವರಗಳ ಹಿನ್ನೆಲೆಯಲ್ಲಿ ಕೆಳಕಂಡ ವಿಷಯಗಳಿಗೆ ಅನುಮೋದನೆ ಕೋರಿ ಆರೋಗ್ಯ ಸ್ಥಾಯಿ ಸಮಿತಿಗೆ ಅನುಮೋದನೆಗೆ ಮಂಡಿಸಲಾಗಿದೆ.

1. Transportation of Waste from BBMP area to D.Pura (East Package)
   Est. Cost : 295.68 lakhs.
2. Transportation of Waste from BBMP area to D.Pura (West Package)
   Est. Cost: 299.55 lakhs.

ಸದರಿ ಟೆಂಡರ್‌ಗಳನ್ನು ಆಹ್ವಾನಿಸಲು ಅವಶ್ಯವಿರುವ ಅನುದಾನವನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗಕ್ಕೆ 13ನೇ ಹಣಕಾಸು ಆಯೋಗದ ಅನುದಾನ ಪಡೆಯಲು ಸಲ್ಲಿಸಲಾದ ಪ್ರಸ್ತಾವನೆಯಲ್ಲಿ 2010-11ನೇ ಸಾಲಿನಲ್ಲಿ Transportation of MSW from transfer points to disposal yard scientific landfill sites / Transfer points ಕಾಮಗಾರಿಗೆ ರೂ.500 ಲಕ್ಷಗಳ ಮೊತ್ತ ಮೀಸಲಿರಿಸಿದ್ದು, ಈ ಅನುದಾನದಲ್ಲಿ ಸದರಿ ಕಾಮಗಾರಿಗೆ ಅವಶ್ಯವಿರುವ ಮೊತ್ತವನ್ನು ಭರಿಸಬಹುದಾಗಿರುತ್ತದೆ. ಈ ಬಗ್ಗೆ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ದಿನಾಂಕ: 28-06-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## ೩. ವಿಷಯದ ಸಂಖ್ಯೆ: ಸಾಆಸ್ಥಾಸ/10/11-12:

ದಿನಾಂಕ: 01-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಈಗಾಗಲೇ ಭಾರತದಲ್ಲಿ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ನಾನಾ ಸಮಸ್ಯೆಗಳನ್ನು ಎದುರಿಸಲು ಅನೇಕ ಪ್ರಾಂತ್ಯಗಳಲ್ಲಿ ಪ್ಲಾಸ್ಟಿಕ್ ನಿರ್ಮೂಲನೆ ಮಾಡಬೇಕೆಂದು ಸತತ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಪ್ರತಿ ಜನರ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆಯು ಕೈಬಿಡಲಾಗದಂತ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿದ್ದು, ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಸೂಕ್ತ ಪರಿಹಾರ ದೊರಕಿರುವುದಿಲ್ಲ. ಇದೇ ಒಂದು ದೊಡ್ಡ ಸಮಸ್ಯೆಯಾಗಿ ಎದುರಾಗಿದೆ ?

ಈ ದಿಕ್ಕಿನಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲೇಬೇಕಾದ ಸಮಯ ಎದುರಾಗಿದೆ. ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಈಗಾಗಲೇ ಕೆಲವು ನಗರಗಳು ಮತ್ತು ಹಲವಾರು ಪ್ರಾಂತ್ಯದಲ್ಲಿ ಮತ್ತು ನಮ್ಮ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯು (40 ಮೈಕ್ರಾನ್ಸ) ಸಹ ಪ್ಲಾಸ್ಟಿಕ್ ಬಳಕೆಯನ್ನು ಸೂಕ್ತ ಕಾನೂನಿನ ಮೂಲಕ ರದ್ದುಪಡಿಸಿದ್ದರೂ ಸಹ ಈ ಮಾರ್ಗದಲ್ಲಿ ಸಂಪೂರ್ಣ ಯಶಸ್ವಿ ಕಂಡು ಬಂದಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಈಗಾಗಲೇ ಭಾರತದಲ್ಲಿ ನಿರುಪಯುಕ್ತ ಪ್ಲಾಸ್ಟಿಕ್ ಮೂಲಕ ತೈಲ ಉತ್ಪಾದನೆಯನ್ನು ಪ್ರಾರಂಭಿಸಿ ಕೆಲವು ಮಹಾನಗರಗಳಲ್ಲಿ ಯಶಸ್ವಿಯಾಗಿರುತ್ತಾರೆ. ಹಾಗೂ ಆ ಮಹಾನಗರದ ರಾಜ್ಯ ಸರ್ಕಾರ ನಗರ ಸಭೆ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಮಿನಿಸ್ಟ್ರಿ ಆಫ್ ನಾನಾ ಕನ್ವವೆಂಷನಲ್ ಎನರ್ಜಿ ಮತ್ತು ಮಿನಿಸ್ಟ್ರಿ ಆಫ್ ಪೆಟ್ರೋಲಿಯಂ ಅಂಡ್ ಪೆಟ್ರೋಕೆಮಿಕಲ್ಸ್ ಇಲಾಖೆಗಳು ಈ ಯೋಜನೆಗೆ ಅನುಮೋದನೆಯನ್ನು ನೀಡಿ ಸಾಕಷ್ಟು ನಗರಗಳಲ್ಲಿ ಈ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ. ಕರ್ನಾಟಕದಲ್ಲಿ ಈಗಾಗಲೇ ಮೈಸೂರಿನಲ್ಲಿ ಈ ಘಟಕವನ್ನು ಸ್ಥಾಪಿಸಲು ಟೆಂಡರ್‌ರನ್ನು ಆಹ್ವಾನಿಸಿ ರಾಜ್ಯ ಸರ್ಕಾರ ಮಟ್ಟದಲ್ಲಿ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ರದ್ದುಗೊಳಿಸುವ ನಿರ್ಧಾರ ಧೀರ್ಘ ಕಾಲದ ಯೋಜನೆಯಾಗಿದ್ದು, ಈ ಮಾರ್ಗದಲ್ಲಿ ಸಾಕಷ್ಟು ಜನರಲ್ಲಿ ಅರಿವು ಮೂಡಿಸಿ ಯಶಸ್ವಿಯನ್ನು ಕಾಣಬೇಕಾಗಿರುತ್ತದೆ ಹಾಗೂ ಇದಕ್ಕೆ ತಕ್ಕಂತೆ ಕಾನೂನು ಅನ್ನು ಜಾರಿಗೊಳಿಸಬೇಕಾಗಿರುತ್ತದೆ. ಆದರೆ, ಈಗಾಗಲೇ ಉಪಯೋಗದಲ್ಲಿರುವ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲು ಮೇಲೆ ಸೂಚಿಸಿರುವ ಘಟಕವನ್ನು ಸ್ಥಾಪಿಸಿದ್ದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟಬಹುದಾಗಿರುತ್ತದೆ.

ಲಭ್ಯವಿರುವ ಮಾಹಿತಿಗಳ ಪ್ರಕಾರ 10 ಟನ್ ಪ್ಲಾಸ್ಟಿಕ್‌ನ್ನು ಕಚ್ಚಾ ತೈಲವಾಗಿ ಮಾರ್ಪಡಿಸುವ ಸಾಮರ್ಥ್ಯವಿರುವ ಘಟಕವನ್ನು ಅನೇಕ ನಗರಗಳಲ್ಲಿ 5 ಎಕರೆ ಜಮೀನನ್ನು ಲ್ಯಾಂಡ್‌ಫಿಲ್ ಸೈಟಿನಲ್ಲಿ 25 ವರ್ಷ ಕಾಲಕ್ಕೆ ಲೀಸ್ ಮೂಲಕ ನೀಡಿ, ಭಾರತದ ಅನೇಕ ನಗರಗಳಲ್ಲಿ ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಈ ಷರತ್ತಿನಲ್ಲಿ ಕೇವಲ ಪಾಲಿಕೆ ಜಾಗವನ್ನು ನೀಡಿದ್ದಲ್ಲಿ ಬಿಡ್ಡುದಾರರು ಟಿಪ್ಪಿಂಗ್ ಫೀ ಪಡೆದುಕೊಳ್ಳದೆ ಪ್ಲಾಸ್ಟಿಕ್ ವಿಲೇವಾರಿಯನ್ನು ಮಾಡುತ್ತಿರುತ್ತಾರೆ. ಮತ್ತು ತೈಲ ಉತ್ಪಾದನೆಯಲ್ಲಿ ಬಿಡ್ಡುದಾರರು ಶೇ.2% ರಾಯಲ್ಟಿಯನ್ನು ಹಾಗೂ ಶೇ.20% ಸಿ.ಡಿ.ಎಂ. ಗ್ರಾಂಟ್ಸ್ ಅನ್ನು ಅಲ್ಲಿನ ಪಾಲಿಕೆಗೆ ನೀಡಿರುತ್ತಾರೆ. ಇದರ ಮೂಲಕ ಚಿಂದಿ ಆಯುವ ಮಂದಿಗೆ ಉದ್ಯೋಗಾವಕಾಶ ದೊರಕಿರುತ್ತದೆ ಮತ್ತು ಆ ಮಂದಿಗಳಿಗೆ ಸಮವಸ್ತ್ರ (Uniform) ವನ್ನು ಸಹ ನೀಡಲಾಗಿರುತ್ತದೆ. ಈ ಘಟಕದಲ್ಲಿ 1 ಟನ್ ಪ್ಲಾಸ್ಟಿಕ್‌ನಿಂದ 1000 ಲೀ ಕಚ್ಚಾ ತೈಲವನ್ನು ಉತ್ಪಾದಿಸಲಾಗುತ್ತಿದೆ. ಇದರಲ್ಲಿ ಉತ್ಪಾದನೆಯಾಗುವ 200 ಲೀ ಕಚ್ಚಾ ತೈಲವನ್ನು ಈ ಘಟಕದ ಚಾಲನೆಗೆ ಮರು ಬಳಕೆ ಮಾಡಲಾಗುತ್ತಿದೆ. ಹಾಗೂ ೮೦೦ ಲೀ ತೈಲವನ್ನು ತೈಲ ಸಂಸ್ಕರಿಸುವ ಘಟಕಗಳಿಗೆ ಬಿಡ್ಡುದಾರರು ಮಾರಾಟ ಮಾಡುತ್ತಾರೆ. ಈ ಘಟಕದಿಂದ ಪರಿಸರಕ್ಕೆ ಯಾವುದೇ ವಿಧವಾದ ಹಾನಿ ಉಂಟಾಗುವುದಿಲ್ಲ. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯು ಇರುವುದಿಲ್ಲ. ಹಾಗೂ ಇದಕ್ಕೆ ಯಾವುದೇ ವೆಚ್ಚವು ತಗಲದಿರುವ ಕಾರಣ, ಬಜೆಟ್‌ನಲ್ಲಿ ಅನುದಾನ ಕಲ್ಪಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಮೇಲೆ ತಿಳಿಸಿರುವ ವಿಷಯದ ಮೇಲೆ ಬಿ.ಬಿ.ಎಂ.ಪಿ. ಸಹ ಈ ಮಾರ್ಗದಲ್ಲಿ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲ ಉತ್ಪಾದನೆ ಮಾಡಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಕೌನ್ಸಿಲ್ ಸಭೆಯಲ್ಲಿ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಪಡೆಯಲು ಟಿಪ್ಪಣಿ ಮಂಡಿಸಲಾಗಿದೆ.

1. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ ಹಾಗೂ ಆಪರೇಟರ್ ರವರುಗಳಿಂದ ರಾಜಧನ ಪಡೆಯಲಾಗುವುದು.
2. ಈ ಯೋಜನೆಗೆ **DBOT** ಆಧಾರದ ಮೇಲೆ ಘಟಕ ಸ್ಥಾಪಿಸಲು ಕೆ.ಸಿ.ಡಿ.ಸಿ. ಕೂಡ್ಲು ಪ್ರದೇಶದಲ್ಲಿ 5 ಎಕರೆ ಜಮೀನನ್ನು ಲೀಸ್ ಆಧಾರದ ಮೇಲೆ 20 ವರ್ಷ ಕಾಲಾವಧಿಗೆ ನೀಡಲು ಅನುಮೋದನೆ ಕೋರಿದೆ.
3. ಪ್ರತಿಯೊಂದು ಘಟಕದಲ್ಲೂ 10 ಮೆ.ಟ. ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲವನ್ನು ತಯಾರಿಸಲಾಗುವುದು. ಕಾಲಕಾಲಕ್ಕೆ ಹಂತ ಹಂತವಾಗಿ ಪ್ರತಿ 10 ಟನ್‌ಅನ್ನು ಹೆಚ್ಚುವರಿ ಮಾಡಲು ಅನುಮೋದನೆ.
4. ಈ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿ ರಚಿಸಲಾದ ಹೈ ಪವರ್ ಕಮಿಟಿಯ ಹಾಗೂ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ.
5. ಈ ಘಟಕ ಸ್ಥಾಪಿಸಲು ಟೆಂಡರ್ ಆಹ್ವಾನಿಸಲು ಅನುಮೋದನೆ.

ಈ ಬಗ್ಗೆ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಮುಂದೂಡಿದೆ.

## 4. ವಿಷಯದ ಸಂಖ್ಯೆ: ಸಾಆಸ್ಥಾಸ/11/11-12:

ಸಂಖ್ಯೆ: ಉ.ಆ.(ಹೆಚ್)ಪಿಆರ್/(2)197/11-12, ದಿನಾಂಕ: 04-07-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ದಿನಾಂಕ: 26-06-2011 ರ ಟಿಪ್ಪಣಿಯಲ್ಲಿ ಈಗಾಗಲೇ ಪಾಲಿಕೆಯಲ್ಲಿ 35 ಪ್ಯಾಕೇಜ್‌ಗಳಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ಟೆಂಡರ್ ಕರೆಯಲಾಗಿದೆ ಎಂದು, ಈ ಕುರಿತು ಪ್ರಸ್ತಾವನೆಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಖಾಂತರ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಸೂಚನೆ ನೀಡಲಾಗಿರುವ ಸಂಬಂಧ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

ಸಂಖ್ಯೆ: CHO/ACT/2/PR/10/08-09 ದಿನಾಂಕ: 28-05-2008 ರಲ್ಲಿ ಕರೆಯಲಾದ ಟೆಂಡರ್‌ನಲ್ಲಿ 35 ವಾರ್ಡ್‌ಗಳಿಗೆ ಪ್ರತಿ ತಿಂಗಳಿಗೆ ರೂ.34,14,720/- (ಮೂವತ್ನಾಲಕ್ಕು ಲಕ್ಷದ ಹದಿನಾಲ್ಕು ಸಾವಿರದ ಏಳುನೂರ ಇಪ್ಪತ್ತು ರೂ ಮಾತ್ರ) ಗಳಂತೆ ವಾರ್ಷಿಕ ರೂ.4,09,76,640/- (ನಾಲ್ಕು ಕೋಟಿ ಒಂಬತ್ತು ಲಕ್ಷದ ಎಪ್ಪತ್ತಾರು ಸಾವಿರದ ಆರುನೂರ ನಲವತ್ತು ರೂ ಮಾತ್ರ) ಅಂದಾಜು ಮೊತ್ತಕ್ಕೆ ಟೆಂಡರ್ ಕರೆಯಲು ಕಂಡಿಕೆ 22 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ಪ್ರಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೊಳ್ಳೆ ನಿಯಂತ್ರಣ ಸೇವೆಯನ್ನು ಒದಗಿಸಲು, 35 ಪ್ಯಾಕೇಜುಗಳಾಗಿ ಮಾಡಲಾಗಿದ್ದು, ಟೆಂಡರ್ ಅನ್ನು ಮುಖ್ಯ ಆರೋಗ್ಯಾಧಿಕಾರಿಗಳ ಕಛೇರಿ ಕಡತ ಸಂಖ್ಯೆ : CHO/ACT/2/PR/10/08-09 ದಿನಾಂಕ: 28-05-2008 ರಲ್ಲಿ ಕರೆಯಲಾಗಿರುತ್ತದೆ. 35 ಪ್ಯಾಕೇಜುಗಳಿಗೆ ಕರೆಯಲಾದ ಸದರಿ ಟೆಂಡರ್‌ನಲ್ಲಿ 4 ಪ್ಯಾಕೇಜುಗಳಿಗೆ ಮಾತ್ರ ಬಿಡ್‌ದಾರರು ಭಾಗವಹಿಸಿರುತ್ತಾರೆ, ಮೆ: ಗೋದ್ರೇಜ್ ಹೈ ಕೇರ ಲಿ., ಸಂಸ್ಥೆ ಟೆಂಡರ್ ಸಲ್ಲಿಸಿದ್ದು, ಸಿಂಗಲ್ ಟೆಂಡರ್ ಸಲ್ಲಿಸಿರುತ್ತಾರೆ, ಇದರಲ್ಲಿ 2 ಪ್ಯಾಕೇಜುಗಳ ತಾಂತ್ರಿಕ ಬಿಡ್ ಕವರ್ ತೆರೆಯಲಾಗಿದ್ದು, ಆರ್ಥಿಕ ಬಿಡ್ ಪರಿಶೀಲಿಸಿದ್ದು, ಒಂದು ಪ್ಯಾಕೇಜ್‌ಗೆ ಸೊಳ್ಳೆ ನಿಯಂತ್ರಣಕ್ಕಾಗಿ ಒಂದು ತಿಂಗಳಿಗೆ ರೂ.6,53,772/- (ರೂ.ಆರು ಲಕ್ಷದ ಐವತ್ಮೂರು ಸಾವಿರದ ಏಳುನೂರ ಎಪ್ಪತ್ತೆರೆಡು ರೂ ಮಾತ್ರ) ದರ ನಮೂದಿಸಿರುತ್ತಾರೆ.

ಈ ದರದ ಅನ್ವಯ ಎಲ್ಲಾ 35 ಪ್ಯಾಕೇಜುಗಳಿಗೆ ಸೊಳ್ಳೆ ನಿಯಂತ್ರಣ ಕಾರ್ಯ ಕೈಗೊಳ್ಳಲು ಒಂದು ತಿಂಗಳಿಗೆ ರೂ.2,28,82,020/- (ರೂ.ಎರಡು ಕೋಟಿ ಇಪ್ಪತ್ತೆಂಟು ಲಕ್ಷದ ಎಂಬತ್ತೆರಡು ಸಾವಿರದ ಇಪ್ಪತ್ತು ಮಾತ್ರ) ವಾರ್ಷಿಕವಾಗಿ ರೂ.27,46,00,000/- (ರೂ. ಇಪ್ಪತ್ತೇಳು ಕೋಟಿ ನಲವತ್ತಾರು ಲಕ್ಷ ಮಾತ್ರ) ಖರ್ಚು ಮಾಡಬೇಕಾಗಿರುತ್ತದೆ. ಮುಖ್ಯ ಆರೋಗ್ಯಾಧಿಕಾರಿಗಳ ವರದಿ ಕಂಡಿಕೆ 63 ರಿಂದ 68 ರವರೆಗಿನ ವರದಿಯನ್ನು ಅವಗಾಹಿಸಬಹುದು. ಈ ಟೆಂಡರ್ ಪ್ರಸ್ತಾವನೆಗೆ ಅಂದಿನ ಆಯುಕ್ತರು ಕಂಡಿಕೆ 79 ರಲ್ಲಿ ಈ ಟೆಂಡರ್ ಪ್ರಸ್ತಾವನೆಯು ಗಮನಾರ್ಹವಾಗಿಲ್ಲವೆಂದು ತಿಳಿಸಿರುತ್ತಾರೆ.

ಪುನ: ಪ್ರತ್ಯೇಕ ಕಡತ ಸಂಖ್ಯೆ: ಸಿಹೆಚ್‌ಓ/ಪಿಆರ್/1584/09-10 ರಲ್ಲಿ ಪಾಲಿಕೆಯ ಆರೋಗ್ಯಾಧಿಕಾರಿಗಳು ಕಂಡಿಕೆ 20 ರಿಂದ 25 ರವರೆಗಿನ ವರದಿಯಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ರಮವನ್ನು ಇನ್ನು ಹೆಚ್ಚಿನ ಪ್ರಗತಿಯಲ್ಲಿ ನಿರ್ವಹಿಸಬಹುದೆಂದು, ಮೆ: ಗೋದ್ರೇಜ್ ಹೈ ಕೇರ್ ಲಿ., ರವರು ಇದಕ್ಕಾಗಿ ಎಲ್ಲಾ ವೆಚ್ಚಗಳು ಸೇರಿ ವಾರ್ಷಿಕ ರೂ.28,71,52,357/- (ಇಪ್ಪತ್ತೆಂಟು ಕೋಟಿ ಎಪ್ಪತ್ತೊಂದು ಲಕ್ಷದ ಐವತ್ತೆರೆಡು ಸಾವಿರದ ಮೂರು ನೂರ ಐವತ್ತೇಳು ರೂ ಮಾತ್ರ) ಗಳಿಗೆ ಯೋಜನಾ ವರದಿ ಸಲ್ಲಿಸಿರುತ್ತಾರೆಂದು, ಈ ಯೋಜನೆಯನ್ನು ಒಪ್ಪಬಹುದೆಂದು ಅಪರ ಆಯುಕ್ತರು (ಆರೋಗ್ಯ) ರವರು ಸಲ್ಲಿಸಿದ ವರದಿಗೆ, ಕಂಡಿಕೆ 35 ರಲ್ಲಿ ಈ ಯೋಜನೆ ಅಗತ್ಯವಿಲ್ಲವೆಂದು ಈ ಹಿಂದೆ ಕರೆಯಲಾದ ಟೆಂಡರ್ ಅವಧಿ ಮುಕ್ತಾಯವಾಗಿದ್ದು, ನಿಯಮಾವಳಿಗೆ ಅನುಗುಣವಾಗಿಲ್ಲದ ಕಾರಣ ಟೆಂಡರ್ ಅನ್ನು ರದ್ದುಪಡಿಸಲು ಆದೇಶ ನೀಡಲಾಗಿದೆ.

ಕಂಡಿಕೆ 1 ರಿಂದ 11 ರಲ್ಲಿ ಪುನ: ಆರೋಗ್ಯಾಧಿಕಾರಿಗಳು ಈ ಯೋಜನೆಯ ಬಗ್ಗೆ ಪ್ರಸ್ತಾಪಿಸಿದ್ದು, ಈ ಯೋಜನೆಯಲ್ಲಿ ಕೆಲವು ಮಾರ್ಪಾಡು ಮಾಡಿ, ಸದರಿ ಯೋಜನೆಯ ಅನುಷ್ಠಾನಕ್ಕೆ ಎಲ್ಲಾ ವೆಚ್ಚಗಳು ಸೇರಿ ವಾರ್ಷಿಕ ರೂ.23,19,04,098/- ಗಳು (ರೂ ಇಪ್ಪತ್ಮೂರು ಕೋಟಿ) ಖರ್ಚಾಗುತ್ತದೆಂದು, ಪಾಲಿಕೆಯ ಆಯವ್ಯಯದಲ್ಲಿ ಈ ಮೊತ್ತವನ್ನು ಭರಿಸಬಹುದೆಂದು ವರದಿ ಮಾಡಿರುತ್ತಾರೆ.

ಈ ವರದಿಯನ್ನು ಪರಿಶೀಲಿಸಲಾಗಿ, ಈ ಯೋಜನೆಯು ಸಮರ್ಪಕವಾಗಿಲ್ಲವೆಂದು ಈ ಯೋಜನೆಯನ್ನು ಜಾರಿಗೆ ತಂದಲ್ಲಿ ಪಾಲಿಕೆ ಅತ್ಯಧಿಕ ಮೊತ್ತವನ್ನು ವ್ಯಯ ಮಾಡಬೇಕಾಗಿರುತ್ತದೆ, ಸೊಳ್ಳೆ ನಿಯಂತ್ರಣ ಮಾಡಬಹುದೇ ಹೊರತು, ಸೊಳ್ಳೆ ನಿರ್ಮೂಲನೆ ಅಸಾಧ್ಯವಾದ ಕಾರಣದಿಂದ ಈ ಯೋಜನೆಯನ್ನು ಕೈಬಿಡಲು ಕಂಡಿಕೆ 16 ರಲ್ಲಿ ಉಪ ಆಯುಕ್ತರು (ಆರೋಗ್ಯ) ರವರು ನೀಡಲಾದ ವರದಿಗೆ ಸಮ್ಮತಿ ವ್ಯಕ್ತಪಡಿಸಲಾಗಿದೆ.

ಸದರಿ ಕಡತದ ಕಂಡಿಕೆ 54 ರಲ್ಲಿ, ಸದರಿ ಟೆಂಡರ್‌ನಲ್ಲಿ 2 ಪ್ಯಾಕೇಜುಗಳಿಗೆ ಮಾತ್ರ ಟೆಂಡರ್ ಅಂಗೀಕರಿಸಬೇಕಾಗಿರುವುದರಿಂದ, ಈ ಪ್ರಸ್ತಾವನೆಯನ್ನು ಕೈಬಿಡಲು ಸೂಕ್ತವೆಂದು ಅಂದಿನ ಉಪ ಆಯುಕ್ತರು (ಆರೋಗ್ಯ) ರವರು ಸಹ ವರದಿ ಮಾಡಿರುತ್ತಾರೆ. ಮತ್ತು ಈ ಟೆಂಡರ್ ಕರೆಯಲು ಅಂದಿನ ಆಡಳಿತಗಾರರಿಂದಲೂ ಒಪ್ಪಿಗೆ ಪಡೆದಿರುವುದಿಲ್ಲ. ಮತ್ತು ಟೆಂಡರ್ ಡಾಕ್ಯೂಮೆಂಟ್ ಅನ್ನು ಯಾವುದೇ ಸಮಿತಿಯು ಪರಿಶೀಲಿಸಿ ಒಪ್ಪಿಗೆ ಸೂಚಿಸಿರುವುದು ಸಹ ಕಡತದಲ್ಲಿ ಲಭ್ಯವಿರುವುದಿಲ್ಲ. ಸದರಿ ಪ್ರಸ್ತಾಪಿಸಲಾದ ಟೆಂಡರ್ 28-05-2008 ರಲ್ಲಿ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಸಮರ್ಪಕವಾಗಿ ನಡೆಯದ ಕಾರಣ, 3 ವರ್ಷಗಳ ಅವಧಿ ಆಗಿರುವುದರಿಂದ,

ಮುಂದುವರೆಸಲು ಕರ್ನಾಟಕ ಪಾರದರ್ಶಕ ನಿಯಮಾವಳಿಯಲ್ಲಿ ಅವಕಾಶವಿಲ್ಲದ ಕಾರಣ ಈ ಟೆಂಡರ್ ಪ್ರಕ್ರಿಯೆಯನ್ನು ಕೈಬಿಡಲಾಗಿದೆ.

ಪಾಲಿಕೆಯಲ್ಲಿ ಸೊಳ್ಳೆ ನಿಯಂತ್ರಣದ ಎಲ್ಲಾ ಕಾರ್ಯಗಳು ವಾರ್ಷಿಕ ವೆಚ್ಚ ರೂ.6.00 (ರೂ. ಆರು ಕೋಟಿ ಮಾತ್ರ) ಗಳು ಖರ್ಚಾಗುತ್ತಿದೆ, ಮತ್ತು ಬೃಬೆಂ.ಮ.ಪಾಲಿಕೆಯ ವ್ಯಾಪ್ತಿಯಲ್ಲಿ ರೋಗವಾಹಕಗಳಿಂದ ಹರಡುವ ರೋಗಗಳು ಸಹ ಕನಿಷ್ಠವಾಗಿರುತ್ತದೆ. ಮತ್ತು ಸೊಳ್ಳೆ ನಿಯಂತ್ರಣವು ಸಾರ್ವಜನಿಕರು ತೆಗೆದುಕೊಳ್ಳುವ ಕಾರ್ಯವಿಧಾನದಲ್ಲಿಯೂ ಇದ್ದು ಇದಕ್ಕಾಗಿ ಆರೋಗ್ಯ ಶಿಕ್ಷಣ, ಅರಿವು, ಜನ ಜಾಗೃತಿ ಮೂಡಿಸಲಾಗುತ್ತಿದೆ.

ಸೊಳ್ಳೆ ನಿಯಂತ್ರಣದ ಬಗ್ಗೆ, ಅಧಿಕಾರಿಗಳ, ಜನಪ್ರತಿನಿಧಿಗಳ ಸಭೆ ಕರೆದು ಟೆಂಡರ್ ಸಮಿತಿಯನ್ನು ರಚಿಸಿ ಸೂಕ್ತವಾದ ಟೆಂಡರ್ ಪ್ರಕ್ರಿಯೆ ಕರೆಯಲು ಕ್ರಮವಹಿಸಲಾಗುತ್ತಿದ್ದು, ಸೊಳ್ಳೆ ನಿಯಂತ್ರಣಕ್ಕಾಗಿ ಸಂಖ್ಯೆ: CHO/ACT/2/PR/10/08-09 ದಿನಾಂಕ: 28-05-2008 ರಂದು ಕರೆಯಲಾದ ಟೆಂಡರ್ ರದ್ದಾಗಿರುವ ಕಾರಣ ಸದರಿ ಯೋಜನೆಯ ಬಗ್ಗೆ ಪುನ: ಮುಂದುವರೆದಂತೆ ಪ್ರಸ್ತಾಪಿಸಲಾದ ಸಂಖ್ಯೆ: ಸಿಹೆಚ್ಒ/ಪಿಆರ್/1584/09-10 ರ ಯೋಜನೆಯ ಪ್ರಸ್ತಾವನೆಯು ಸಹ ಮುಕ್ತಾಯವಾಗಿರುತ್ತದೆ.

ಉಲ್ಲೇಖಿತ ಪತ್ರದಲ್ಲಿ ಪೂಜ್ಯ ಮಹಾಪೌರರು ಸದರಿ ಟೆಂಡರ್ ಇತ್ಯರ್ಥಪಡಿಸಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಪ್ರಸ್ತಾಪಿಸಿದ್ದು, ಮೇಲ್ಕಂಡಂತೆ ವಿವರಿಸಲಾದ ಅಂಶಗಳನ್ವಯ ಪಾಲಿಕೆಯ ಸಭೆಯ ಮುಂದೆ ಕಡತವನ್ನು ಮಂಡಿಸಲು ಸರಿಯಾದ ಕ್ರಮವಾಗಿರುವುದಿಲ್ಲ, ಎಂಬ ವರದಿಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಮುಂದೂಡಿದೆ.

G Thashashikumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 24-06-2011 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಎಂ. ಮುನಿರಾಜು | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಡಾ॥ ಎಸ್. ರಾಜು | ಸದಸ್ಯರು | |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಎನ್. ವೀರಣ್ಣ | ಸದಸ್ಯರು | |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಎಸ್. ನಟರಾಜ್ | ಸದಸ್ಯರು | |
| ಶ್ರೀಮತಿ.ಪಿ. ಸೌಮ್ಯ | ಸದಸ್ಯರು | |
| ಎಂ. ಶ್ರೀನಿವಾಸ | ಸದಸ್ಯರು | |
| **ಗೈರು ಹಾಜರಾದ ಸದಸ್ಯರು:** | | |
| ಎಲ್. ರಮೇಶ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**1) ವಿಷಯದ ಸಂಖ್ಯೆ: ಸಾಆಸ್ಥಾಸ/8/11-12:**

ಆಯುಕ್ತರ ದಿನಾಂಕ: 24-06-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳಲ್ಲಿ 2 ವರ್ಷಗಳ ಅವಧಿಗೆ ಹೊಸದಾಗಿ ಟೆಂಡರ್ ಕರೆಯಲು ತಯಾರಿಸಿರುವ ಟೆಂಡರ್ ದಸ್ತಾವೇಜುಗಳ ರೂಪುರೇಷುಗಳಿಗೆ ದಿನಾಂಕ: 13-01-2011 ಪಾಲಿಕೆ ಸಭೆಯ ವಿಷಯ ಸಂಖ್ಯೆ: 5(189)/2010-11 ರಲ್ಲಿ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿರುತ್ತದೆ.

Geetha Shashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಇದೇ ಸಂದರ್ಭದಲ್ಲಿ ಟೆಂಡರ್‌ನಲ್ಲಿ ಏಕವ್ಯಕ್ತಿಗೆ ಅವಕಾಶವಿಲ್ಲದಿರುವುದರಿಂದ ಕೆಲವು ಗುತ್ತಿಗೆದಾರರು ದಿನಾಂಕ: 05-02-2011 ಪಾಲಿಕೆ ಸಭೆಯ ನಿರ್ಣಯದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಿ ಟೆಂಡರ್ ಕರೆಯಲು ತಡೆಯಾಜ್ಞೆ ತಂದಿದ್ದರಿಂದ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು.

ಟೆಂಡರ್‌ನಲ್ಲಿ ಏಕವ್ಯಕ್ತಿಗೆ ಭಾಗವಹಿಸಲು ಅವಕಾಶ ಕಲ್ಪಿಸುವುದಾಗಿ ತಿಳಿಸಿರುವುದರಿಂದ, ಸದರಿ ತಡೆಯಾಜ್ಞೆಯು ದಿನಾಂಕ: 28-02-2011 ರಂದು ನ್ಯಾಯಾಲಯದಲ್ಲಿ ತೆರವುಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಟೆಂಡರ್ ದಸ್ತಾವೇಜಿನಲ್ಲಿ ಏಕವ್ಯಕ್ತಿಗೆ ಅವಕಾಶ ಕಲ್ಪಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರಂತೆ **Standard Tender Document** ರೀತ್ಯಾ ಟೆಂಡರ್ ದಸ್ತಾವೇಜನ್ನು ತಯಾರಿಸಲಾಗಿದ್ದು, ಮಾರ್ಪಾಡು ಮಾಡಿದ ಟೆಂಡರ್ ದಸ್ತಾವೇಜನ್ನು ಕಾನೂನು ಕೋಶದ ಮುಖ್ಯಸ್ಥರಿಗೆ ಸಲ್ಲಿಸಲಾಗಿರುತ್ತದೆ. ಟೆಂಡರ್ ದಸ್ತಾವೇಜನ್ನು ನಿಯಮಾನುಸಾರ ತಯಾರಿಸಿರುವುದರಿಂದ ಕಾನೂನು ಅಡಿಯಲ್ಲಿ ಮುಂದಿನ ಸೂಕ್ತ ಕ್ರಮತೆಗೆದುಕೊಳ್ಳಲು ಸದರಿರವರು ಸೂಚಿಸಿದ್ದರಿಂದ, ಮಾರ್ಪಾಡು ಮಾಡಿದ ಟೆಂಡರ್ ದಸ್ತಾವೇಜನ್ನು ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ದಿನಾಂಕ: 18-03-2011 ರಂದು ನಡೆದ ಪಾಲಿಕೆಯ ಸಭೆಯ ವಿಷಯ ಸಂಖ್ಯೆ:1(262) ರಲ್ಲಿ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆಯಲು ನಿರ್ಣಯಕೈಗೊಳ್ಳಲಾಗಿರುತ್ತದೆ.

ಪಾಲಿಕೆಯ ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆಯಲು ದಿನಾಂಕ: 18-03-2011 ರಂದು ಕೈಗೊಂಡ ನಿರ್ಣಯದ ಬಗ್ಗೆ ಹಲವಾರು ಸದಸ್ಯರುಗಳು ಆಕ್ಷೇಪಣೆ ವ್ಯಕ್ತಪಡಿಸಿದ್ದರಿಂದ, ಟೆಂಡರ್ ಕರೆಯಲು ಈಗಾಗಲೇ ತೀರ್ಮಾನಿಸಿರುವ ಕಡತವನ್ನು ಆರೋಗ್ಯ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳು ಪುನರ್ ಪರಿಶೀಲಿಸುವ ಅಗತ್ಯತೆ ಇರುವುದರಿಂದ, ಕಡತವನ್ನು ಸಂಬಂಧಪಟ್ಟ ಸಮಿತಿಗಳ ಪರಿಶೀಲನೆಗೆ ಹಿಂದಿರುಗಿಸಿ, ಸಮಿತಿಗಳು ಕೈಗೊಂಡ ನಿರ್ಣಯವನ್ನು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸುವುದೆಂದು ದಿನಾಂಕ: 29-03-2011 ರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ: 294/2010-11 ರಲ್ಲಿ ತೀರ್ಮಾನಿಸಲಾಯಿತು.

ಮಾನ್ಯ ಲೋಕ್ ಅದಾಲತ್‌ನಲ್ಲಿ ಮೂಲದಲ್ಲಿಯೇ ತ್ಯಾಜ್ಯವನ್ನು ಹಸಿ ಮತ್ತು ಒಣ ತ್ಯಾಜ್ಯವನ್ನಾಗಿ ವಿಂಗಡನೆ ಮಾಡಲು ಹಾಗೂ ಎಲ್ಲಾ ವಲಯಗಳಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ನಿರ್ದೇಶನ ನೀಡಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:26-05-2011 ರಂದು ಪೂಜ್ಯ ಮಹಾಪೌರರು ಅಧ್ಯಕ್ಷತೆಯಲ್ಲಿ ಉಪ ಮಹಾಪೌರರು ಮತ್ತು ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರೊಡನೆ ನಡೆದ ಸಭೆಯಲ್ಲಿ ಟೆಂಡರ್‌ನ್ನು **(RFP Document)** ಪ್ರಾತ್ಯಕ್ಷತೆ ಮೂಲಕ ವಿವರಿಸಲಾಗಿದ್ದು, ಅದರಂತೆ ಒಣ ತ್ಯಾಜ್ಯವನ್ನು ಸಂಸ್ಕರಣಾ ಘಟಕಕ್ಕೆ ಸಾಗಿಸುವ ಬದಲು ವಾರ್ಡುವಾರು ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಿ, ಸದರಿ ಕೇಂದ್ರಗಳಲ್ಲಿ ಒಣ ತ್ಯಾಜ್ಯವನ್ನು ಸಂಗ್ರಹಣೆ ಮಾಡಿ ಪುನರ್‌ಬಳಕೆ ಮಾಡಲು ಹಾಗೂ ಮದ್ಯಾಹ್ನದ ಪಾಳಿಯಲ್ಲಿ ನಿಯೋಜಿಸಿರುವ 10 ಜನ ಕಾರ್ಮಿಕರನ್ನು ಕೈಬಿಡಲು ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರಂತೆ **Standard Tender Document** ರೀತ್ಯಾ ಟೆಂಡರ್ ದಸ್ತಾವೇಜನ್ನು ತಯಾರಿಸಲಾಗಿದ್ದು, ಸದರಿ ದಸ್ತಾವೇಜಿನಲ್ಲಿರುವ ತಾಂತ್ರಿಕ ಮತ್ತು ಆರ್ಥಿಕ ಅರ್ಹತೆಯ ಮಾನದಂಡಗಳನ್ನು ಸಡಿಲಗೊಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ನಿಟ್ಟಿನಲ್ಲಿ ಕ್ರಮವಹಿಸುವಂತೆ ಹಾಗೂ ಈ ಬಗ್ಗೆ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಪೂಜ್ಯ ಮಹಾಪೌರರು, ಉಪ ಮಹಾಪೌರರು ಮತ್ತು ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳು ಸಭೆಯಲ್ಲಿ ನಿರ್ದೇಶಿಸಿರುತ್ತಾರೆ. ಅದರಂತೆ ಟೆಂಡರ್ ದಸ್ತಾವೇಜಿನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಅರ್ಹತೆಯ ಮಾನದಂಡಗಳನ್ನು ಸಡಿಲಗೊಳಿಸಲಾಗಿರುತ್ತದೆ.

ಮುಂದುವರೆದಂತೆ, ಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಹೊರಡಿಸಿದ ಪರಿಷ್ಕೃತ ವೇತನದ ಹೆಚ್ಚುವರಿ ವೇತನವನ್ನು ಪಾವತಿಸಲು ಮತ್ತು ಚೆಕ್ ಮೂಲಕವೇ ವೇತನವನ್ನು ಪಾವತಿಸಬೇಕೆಂದು ಕರ್ನಾಟಕ ರಾಜ್ಯ ದಲಿತ ಕ್ರಿಯಾ ಸಮಿತಿ ರವರು ಕಾರ್ಮಿಕ ಇಲಾಖೆಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಯೋಗಕ್ಕೆ ಮನವಿ ಸಲ್ಲಿಸಿರುವ ಮೇರೆಗೆ, ದಿನಾಂಕ: 16-06-2011 ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಯೋಗದ ಮುಂದೆ ಹಾಜರಾಗಿ ಪಾಲಿಕೆಯ ವ್ಯಾಪ್ತಿಯಲ್ಲಿ ಹೊಸದಾಗಿ ಸ್ವಚ್ಛತಾ ಟೆಂಡರ್ ಕರೆದು, ಸದರಿ ಟೆಂಡರಿನಲ್ಲಿ ಪೌರಕಾರ್ಮಿಕರಿಗೆ ಚೆಕ್ ಮೂಲಕ ವೇತನವನ್ನು ಪಾವತಿಸಲು ಮತ್ತು ಸರ್ಕಾರದಿಂದ ಹೊರಡಿಸಿದ ಪರಿಷ್ಕೃತ ವೇತನವನ್ನು ಪೌರಕಾರ್ಮಿಕರಿಗೆ ಪಾವತಿಸುವ ಅಂಶಗಳನ್ನು ಅಳವಡಿಸಕೊಂಡು ಶೀಘ್ರವಾಗಿ ಕಾರ್ಯರೂಪಕ್ಕೆ ತರಲು ಸೂಚನೆ ನೀಡಿರುತ್ತಾರೆ.

ಇದೇ ಸಂಧರ್ಭದಲ್ಲಿ ಕಾರ್ಮಿಕ ಇಲಾಖೆಯ ಆಯುಕ್ತರ ಕಛೇರಿಯಿಂದ ಪೌರಕಾರ್ಮಿಕರಿಗೆ ಸರ್ಕಾರದ ಆದೇಶದಂತೆ ಪರಿಷ್ಕೃತ ಹೆಚ್ಚುವರಿ ವೇತನ ನೀಡಬೇಕೆಂದು ಪತ್ರದ ಮುಖಾಂತರ ತಿಳಿಸಿರುವ ಹಿನ್ನೆಲೆಯಲ್ಲಿ ಮತ್ತು ಗುತ್ತಿಗೆ ಪೌರಕಾರ್ಮಿಕರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಆಯೋಗದ ಮಧ್ಯಂತರ ಆದೇಶದನ್ವಯ ವೇತನವನ್ನು ಚೆಕ್ ಮೂಲಕ ಪಾವತಿಸಲು ಅಂಶಗಳನ್ನು ಅಳವಡಿಸಿಕೊಂಡು ಟೆಂಡರ್ ಕರೆಯಲು ಈ ಕೆಳಕಂಡಂತೆ ಕ್ರಮವಹಿಸಬೇಕಾಗಿರುತ್ತದೆ.

Sd/- the Shashi Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

1. ವಲಯದ ಮುಖ್ಯ ಅಭಿಯಂತರರು/ಅಧೀಕ್ಷಕ ಅಭಿಯಂತರರವರ ಉಸ್ತುವಾರಿಯಲ್ಲಿ ಟೆಂಡರ್ ಆಹ್ವಾನಿಸುವುದು.
2. ಪ್ರತಿಯೊಂದು ಉಪ ವಿಭಾಗದ ಎರಡು ಅಥವಾ ಮೂರು ವಾರ್ಡುಗಳಿಗೆ ಒಂದು ಪ್ಯಾಕೇಜಿನಂತೆ ಟೆಂಡರ್ ಆಹ್ವಾನಿಸುವುದು.
3. ಹೊರಮಾವು, ಸಿಂಗಸಂದ್ರ ವಾರ್ಡುಗಳಿಗೆ ಮತ್ತು ಕೆ.ಆರ್. ಮಾರುಕಟ್ಟೆ, ರಸಲ್ ಮಾರುಕಟ್ಟೆಗಳಲ್ಲಿ ಪ್ರತ್ಯೇಕ ಪ್ಯಾಕೇಜುಗಳಾಗಿ ಟೆಂಡರ್ ಕರೆಯುವುದು.
4. ೩೦ ದಿನ ನಿಗಧಿಪಡಿಸಿ ಅಲ್ಪಾವಧಿ ಟೆಂಡರ್ ಆಹ್ವಾನಿಸುವುದು.
5. ಎಲ್ಲಾ ವಲಯಗಳಲ್ಲಿ ಏಕಕಾಲಕ್ಕೆ ಟೆಂಡರ್ ಆಹ್ವಾನಿಸುವುದು.
6. ಅವಶ್ಯವಿರುವ ವಲಯಗಳಲ್ಲಿ ಮೆಕಾನಿಕಲ್ ಸ್ವೀಪಿಂಗ್ ಪ್ಯಾಕೇಜನ್ನು ವಲಯಕ್ಕೆ ಒಂದರಂತೆ ಟೆಂಡರ್ ಆಹ್ವಾನಿಸುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಎಲ್ಲಾ ವಲಯಗಳಲ್ಲಿ ಏಕಕಾಲದಲ್ಲಿ ಪ್ಯಾಕೇಜುವಾರು ಘನತ್ಯಾಜ್ಯ ವಸ್ತು ನಿರ್ವಹಣೆಗೆ ಟೆಂಡರ್ ಕರೆಯಲು ಅನುಮೋದನೆಗಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**<u>ನಿರ್ಣಯ:</u>**

**ಆಯುಕ್ತರ ಟಿಪ್ಪಣಿ ದಿನಾಂಕ: 24-06-2011 ಅನ್ನು ಒಪ್ಪಿದೆ.**

(signature) K. N. Geetha Shashikumar

**(ಡಾ॥ ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 20-06-2011 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಉಪ ಆಯುಕ್ತರು (ಆರೋಗ್ಯ) |
| ಎಂ. ಮುನಿರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರಕೋಶ) |
| ಎನ್. ವೀರಣ್ಣ | ಸದಸ್ಯರು | ಅಧೀಕ್ಷಕರು (ಪರಿಸರಕೋಶ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | ಮುಖ್ಯ ಅಭಿಯಂತರರ ಸಲಹೆಗಾರರು (ಪರಿಸರಕೋಶ) |
| ಎಂ. ಶ್ರೀನಿವಾಸ | ಸದಸ್ಯರು | |
| **ಗೈರು ಹಾಜರಾದ ಸದಸ್ಯರು:** | | |
| ಡಾ॥ ಎಸ್. ರಾಜು | ಸದಸ್ಯರು | |
| ಎಲ್. ರಮೇಶ್ | ಸದಸ್ಯರು | |
| ಎಸ್. ನಟರಾಜ್ | ಸದಸ್ಯರು | |
| ಶ್ರೀಮತಿ.ಪಿ. ಸೌಮ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1) <u>ವಿಷಯದ ಸಂಖ್ಯೆ: ಸಾಆಸ್ಥಾಸ/3/11-12:</u>

ಪ್ಲಾಸ್ಟಿಕ್ ತ್ಯಾಜ್ಯದಿಂದ ಪರಿಣಾಮಕಾರಿಯಾಗಿ ಪರಿಸರದ ಅವನತಿಯನ್ನು ತಡೆಯುವ ಉದ್ದೇಶದಿಂದ, ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು (MoEF) ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011, ದಿನಾಂಕ: 04-02-2011 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಪ್ರಕಾರ ಪಾಲಿಕೆಯು ಈ ಕೆಳಕಂಡಂತೆ ಕೈಗೊಳ್ಳಬೇಕಾಗಿರುತ್ತದೆ.

- ಸಮಗ್ರ ಮತ್ತು ಸಮಂಜಸ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಕಾರ್ಯಾಚರಣೆ ಚೌಕಟ್ಟನ್ನು ಸ್ಥಾಪಿಸಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾರ್ಯಗಳ ವ್ಯವಸ್ಥಾಪನೆಗೆ ಸೂಕ್ತವಾದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು. ಮುಖ್ಯವಾಗಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಣೆ, ಬೇರ್ಪಡಿಸುವುದು, ಸಾಗಾಟ, ಸಂಸ್ಕರಣೆ ಮತ್ತು ಅಂತಿಮ ವಿಲೇವಾರಿಗೆ ಅನುಸರಿಸಬೇಕಾದ ಪ್ರಮಾಣಗಳನ್ನು ರೂಪಿಸುವುದು.

G. Shashi Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾರ್ಯಗಳ (ಸಂಗ್ರಹಣೆ, ಬೇರ್ಪಡಿಸುವಿಕೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿ) ಯನ್ನು ಮಿತವ್ಯಯಕರವಾಗಿ, ಪರಿಸರಕ್ಕೆ ಹಾನಿಯಾಗದಂತೆ ನಿರ್ವಹಿಸುವುದು.
- ಪ್ಲಾಸ್ಟಿಕ್ ಉತ್ಪಾದಕರನ್ನು ತೊಡಗಿಸಿಕೊಂಡು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸುವುದು. ಈ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ತ್ಯಾಜ್ಯ ಪುನರ್ ಬಳಕೆದಾರರೊಂದಿಗೆ ಜೊತೆಗೂಡಿಸಿ ನಿರ್ವಹಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯ ಬಗ್ಗೆ ಎಲ್ಲಾ ಹಿತಾಸಕ್ತಿಗಳ (Stakeholders) ಜವಾಬ್ದಾರಿಯ ಬಗ್ಗೆ ಜಾಗೃತಿ ಮೂಡಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಅಸಂಪ್ರದಾಯಕ ಘಟಕಗಳು (ಚಿಂದಿ ಆಯುವವರು, ತ್ಯಾಜ್ಯವನ್ನು ಪುನರ್ ಬಳಕೆಗೆ ತರುವವರು ಇತ್ಯಾದಿ) ರವರನ್ನು ತೊಡಗಿಸಿಕೊಳ್ಳುವುದು.
- ತೆರೆದ ಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸುಡುವುದನ್ನು ನಿಷೇಧಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು, ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಕರ ಜವಾಬ್ದಾರಿಯ ಅಡಿಯಲ್ಲಿ ಆರ್ಥಿಕ ಸಹಾಯವನ್ನು ಪಡೆಯುವುದು.
- ಪ್ಲಾಸ್ಟಿಕ್ ತ್ಯಾಜ್ಯದಿಂದ ನಿಸ್ಸತ್ವಗೊಂಡ ಮತ್ತು ಇತರೆ ಮರು ಉಪಯೋಗಕ್ಕೆ ಬರದಂತ ತ್ಯಾಜ್ಯಗಳನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000) ಮತ್ತು Schedule III (Specifications for Landfill sites) ಪ್ರಕಾರ ನಿರ್ವಹಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮವನ್ನು ಪಾಲಿಕೆಯ ಪುರಸಭಾ ನೀತಿಯಲ್ಲಿ (Municipal Bye Law) ಅಳವಡಿಸಿಕೊಳ್ಳುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಸೂಕ್ತ ತಂತ್ರಜ್ಞಾನವನ್ನು ರಸ್ತೆ ನಿರ್ಮಾಣ, Coincirenation ಅಳವಡಿಸಿಕೊಳ್ಳುವುದು, ಇತ್ಯಾದಿ, ಈ ತಂತ್ರಜ್ಞಾನದ ಬಳಕೆಯು ಪರಿಸರ ಪ್ರಮಾಣವನ್ನು ಮೀರದಂತೆ ಕ್ರಮವಹಿಸಬೇಕು.
- ಉತ್ಪಾದಕರಿಗೆ ಪ್ಲಾಸ್ಟಿಕ್ ತಯಾರಿಕೆ, ತ್ಯಾಜ್ಯ ನಿರ್ವಹಣೆ, ಪುನರ್ ಬಳಕೆಗೆ ಉತ್ತೇಜಿಸಲು, ಹಾಗೂ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣವನ್ನು ಕಡಿಮೆ ಮಾಡಲು, ಪ್ಲಾಸ್ಟಿಕ್ ಚೀಲಗಳು ಬಳಕೆದಾರರಿಗೆ ಉಚಿತವಾಗಿ ಲಭ್ಯವಾಗದಂತೆ, ಪಾಲಿಕೆಯು ಕನಿಷ್ಠ ಮೊತ್ತವನ್ನು ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗದಿಪಡಿಸುವುದು.

ಈ ನಿಟ್ಟಿನಲ್ಲಿ ಮೊದಲ ಹಂತವಾಗಿ, ಮಾನ್ಯ ಆಯುಕ್ತರವರ ಆದೇಶದಂತೆ ದಿನಾಂಕ: 15-03-2011 ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿಗಳು, ಹೋಟೆಲ್‌ಗಳು, ವಾಣಿಜ್ಯ ಸಂಕೀರ್ಣಗಳು ಮತ್ತು ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ (ಪ್ಲಾಸ್ಟಿಕ್ ಕೈಚೀಲ, ಪ್ಲಾಸ್ಟಿಕ್ ಶೀಟ್, ತಿಂಡಿ ಊಟದ ಬಳಕೆಯಲ್ಲಿ ಇತ್ಯಾದಿ) ಬಳಕೆ ಮಾಡುವುದನ್ನು ನಿಷೇಧಿಸಲಾಗಿರುತ್ತದೆ. ಹಾಗೂ ಪ್ಲಾಸ್ಟಿಕ್ ಕೈಚೀಲಗಳ ಕನಿಷ್ಠ ಮೊತ್ತವನ್ನು ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗದಿಪಡಿಸಲು, ಪ್ಲಾಸ್ಟಿಕ್ ಉತ್ಪಾದಕರನ್ನು ತೊಡಗಿಸಿಕೊಂಡು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು, ಪುನರ್ ಬಳಕೆದಾರರು ಮತ್ತು ಚಿಂದಿ ಆಯುವವರನ್ನು ಸದರಿ ಕೇಂದ್ರದಲ್ಲಿ ತೊಡಗಿಸಿಕೊಳ್ಳುವ ಬಗ್ಗೆ ತೀರ್ಮಾನ ಕೈಗೊಳ್ಳಲು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣಾ ಮಂಡಳಿಯ

ಸಹಯೋಗದೊಂದಿಗೆ, ಪ್ಲಾಸ್ಟಿಕ್ ಉದ್ದಿಮೆದಾರರು ಮತ್ತು ಉತ್ಪಾದಕರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011 ಅನ್ವಯ ಪಾಲಿಕೆಯ ಪುರಸಭಾ ನೀತಿಯಲ್ಲಿ (Municipal Bye Law) ಅಳವಡಿಸಿಕೊಳ್ಳಬೇಕಾಗಿರುವುದರಿಂದ, ಸದರಿ ನಿಯಮವನ್ನು ಪುರಸಭಾ ನೀತಿಯಲ್ಲಿ (Municipal Bye Law) ಅಳವಡಿಸಿಕೊಳ್ಳಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಸಮಿತಿಯ ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿ ಆಯುಕ್ತರ ದಿನಾಂಕ: 09-04-2011 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಲಾಗಿದೆ.**

**ಮಾರ್ಪಾಡುಗಳು**

- **ಸಮಗ್ರ ಮತ್ತು ಸಮಂಜಸ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಕಾರ್ಯಾಚರಣೆ ಚೌಕಟ್ಟನ್ನು ಸ್ಥಾಪಿಸಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾರ್ಯಗಳ ವ್ಯವಸ್ಥಾಪನೆಗೆ ಸೂಕ್ತವಾದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು. ಮುಖ್ಯವಾಗಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಮೂಲದಲ್ಲೇ ಬೇರ್ಪಡಿಸಿ ಸಂಗ್ರಹಿಸಿ, ಸಾಗಾಟ, ಸಂಸ್ಕರಣೆ ಮತ್ತು ಅಂತಿಮ ವಿಲೇವಾರಿಗೆ ಅನುಸರಿಸಬೇಕಾದ ಪ್ರಮಾಣಗಳನ್ನು ರೂಪಿಸುವುದು.**
- **ಪ್ಲಾಸ್ಟಿಕ್‌ನ್ನು ತಿಂಡಿ, ಊಟದ ಪದಾರ್ಥಗಳನ್ನು ಪ್ಯಾಕಿಂಗ್ ಮತ್ತು ಪಾರ್ಸಲ್ ಮಾಡುವುದನ್ನು (ಸಾಂಬಾರು, ಚಟ್ನಿ ಇತ್ಯಾದಿ) ಪೂರ್ಣ ಪ್ರಮಾಣದಲ್ಲಿ ನಿಷೇದಿಸುವುದು.**
- **ಕಲ್ಯಾಣ ಮಂಟಪ, ಇತರೇ ಸಭೆ-ಸಮಾರಂಭ ನಡೆಯುವ ಸಭಾಂಗಣದಲ್ಲಿ ಊಟಕ್ಕೆ ಹಾಸುವ ಪ್ಲಾಸ್ಟಿಕ್ ಶೀಟ್‌ನ್ನು ಪೂರ್ಣ ಪ್ರಮಾಣದಲ್ಲಿ ನಿಷೇದಿಸುವುದು.**
- **ಪ್ಲಾಸ್ಟಿಕ್ ತ್ಯಾಜ್ಯವನ್ನು ಪುನರ್ ಬಳಕೆ ಮಾಡಲು ರಸ್ತೆ ನಿರ್ಮಾಣ, Co-incineration, ಕ್ರೂಡ್ ಆಯಿಲ್ ಇತ್ಯಾದಿ ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು, ಈ ತಂತ್ರಜ್ಞಾನದ ಬಳಕೆಯು ಪರಿಸರ ಪ್ರಮಾಣವನ್ನು ಮೀರದಂತೆ ಕ್ರಮವಹಿಸಬೇಕು.**
- **ಪ್ಲಾಸ್ಟಿಕ್ ಉತ್ಪಾದಕರು ಮತ್ತು ಮಾರಾಟಗಾರರು 40 ಮೈಕ್ರಾನ್‌ಗಿಂತ ಕಡಿಮೆಯಿರುವ ಪ್ಲಾಸ್ಟಿಕ್‌ನ್ನು ಉತ್ಪಾದನೆ ಅಥವಾ ಮಾರಾಟ ಮಾಡಿದ್ದಲ್ಲಿ ಮೊದಲನೇ ಬಾರಿಗೆ 40 ಮೈಕ್ರಾನ್‌ಗಿಂತ ಕಡಿಮೆಯಿರುವ ಪ್ಲಾಸ್ಟಿಕ್‌ನ್ನು ಮುಟ್ಟುಗೋಲು ಹಾಕಿಕೊಂಡು ರೂ.25,000/- ಉತ್ಪಾದಕರಿಗೆ ಹಾಗೂ ರೂ.5,000/- ವರೆಗೆ ಮಾರಾಟಗಾರರಿಗೆ ದಂಡ ವಿಧಿಸಿ ಎಚ್ಚರಿಕೆ ನೋಟಿಸ್ ನೀಡುವುದು, ಎರಡನೇ ಬಾರಿಗೆ ಪುನರಾವರ್ತಿಸಿದ್ದಲ್ಲಿ ಉದ್ದಿಮೆ ಪರವಾನಗಿಯನ್ನು ರದ್ದುಗೊಳಿಸುವುದು ಹಾಗೂ ಉದ್ದಿಮೆಯನ್ನು ಮುಚ್ಚುವುದು.**

Shashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ಮೇಲ್ಕಂಡ ನಿಯಮಗಳನ್ನು ಅಳವಡಿಸಿಕೊಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿಯಮಾವಳಿಯಲ್ಲಿ ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ನಿಯಮವನ್ನು ರೂಪಿಸಿ, ಪುನರ್‌ಮಂಡಿಸುವಂತೆ ನಿರ್ಣಯಿಸಿ ಕಡತ ಹಿಂತಿರುಗಿಸಲಾಯಿತು.

## 2) ವಿಷಯದ ಸಂಖ್ಯೆ: ಸಾಆಸ್ಥಾಸ/5/11-12:

ಸಂಖ್ಯೆ: ಆ.ವೈ. (ಎಂ.ಸಿ.ಹೆಚ್. & ಎಫ್.ಡಬ್ಲ್ಯೂ)/ಪಿಆರ್/285/2011-12, ದಿನಾಂಕ: 27-05-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬನಶಂಕರಿ ರೆಫರೆಲ್ ಆಸ್ಪತ್ರೆ ವ್ಯಾಪ್ತಿಯಲ್ಲಿ ಬರುವ ಹೆರಿಗೆ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದೆ ಪ್ರಗತಿ ಕುಂಠಿತವಾಗಿರುತ್ತದೆ. ಹಾಗೂ ಸಾರ್ವಜನಿಕರಿಗೆ ಸೇವೆ ನೀಡಲು ಕಷ್ಟಕರವಾಗಿರುತ್ತದೆ. ಈಗಾಗಲೇ ಜಯನಗರ ಹೆರಿಗೆ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ|| ಚಿತ್ರಾ ರವರನ್ನು ಪೊಬತ್ತಿ ಹೆರಿಗೆ ಆಸ್ಪತ್ರೆಯಲ್ಲಿಯೆ ಕಾರ್ಯನಿರ್ವಹಿಸುವಂತೆ ನಿಯೋಜಿಸಲಾಗಿದೆ. ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯವರು ಎರವಲು ಸೇವೆಯಲ್ಲಿ ಪಾಲಿಕೆಯ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಹಿಂಪಡೆಯಲು ಆದೇಶವನ್ನು ಹೊರಡಿಸಿರುತ್ತಾರೆ. ಬನಶಂಕರಿ ರೆಫರೆಲ್ ಆಸ್ಪತ್ರೆಯಲ್ಲಿ ವೈದ್ಯರುಗಳ ತೀವ್ರಕೊರತೆ ಉಂಟಾಗಿರುತ್ತದೆ.

ಬನಶಂಕರಿ ರೆಫರೆಲ್ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಿಂದಲೂ ಕುಟುಂಬ ಕಲ್ಯಾಣ ಕೇಂದ್ರ ಸೌಲಭ್ಯವನ್ನು "ಕಿಮ್ಸ್ ಆಸ್ಪತ್ರೆ ಕಮ್ಯೂನಿಟಿ ಡಿಪಾರ್ಟ್‌ಮೆಂಟ್" ನಿಂದ House Surgeons ನ್ನು ನಿಯೋಜಿಸಿ ಪ್ರಯೋಜನ ಪಡೆಯುತ್ತಿರುತ್ತೇವೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಅಂಶವನ್ನು ಪರಾಮರ್ಷೆ ಮಾಡಿ ವೈದ್ಯರ ಕೊರತೆ ನೀಗಿಸಲು 3 Post Students, 3 House Surgeons ನ್ನು 3 ಪಾಳಿಯಲ್ಲಿ ಪೊಬ್ಬತ್ತಿ ಹೆರಿಗೆ ಆಸ್ಪತ್ರೆಗೆ ಕಿಮ್ಸ್ ಆಸ್ಪತ್ರೆಯಿಂದ ನಿಯೋಜಿಸಿದಲ್ಲಿ ಪೊಬ್ಬತ್ತಿ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸಿ ಸಾರ್ವಜನಿಕರಿಗೆ ಹಾಗೂ ಕಡುಬಡವರಿಗೆ ವೈದ್ಯಕೀಯ ಸೇವೆ ನೀಡುವಂತಾಗುತ್ತದೆ. ಈ ನಿಟ್ಟಿನಲ್ಲಿ ವೈದ್ಯರುಗಳನ್ನು ಕಿಮ್ಸ್ ಆಸ್ಪತ್ರೆಯಿಂದ ನಿಯೋಜಿಸಿಕೊಳ್ಳುವ ಬಗ್ಗೆ ಆದೇಶವನ್ನು ನೀಡಲು ಯೋಜನಾ ಸಮನ್ವಯಾಧಿಕಾರಿಗಳು, ಮುಖ್ಯ ಆರೋಗ್ಯಾಧಿಕಾರಿಗಳು ಕೋರಿದ್ದು, ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಮುಂದೂಡಲಾಗಿದೆ.

## 3) ವಿಷಯದ ಸಂಖ್ಯೆ: ಸಾಆಸ್ಥಾಸ/6/11-12:

ಸಂಖ್ಯೆ: ಮುಆಅ/ಎಸಿಟಿ2/ಪಿಆರ್/49/2010-11, ದಿನಾಂಕ: 08-06-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆ ಆಸ್ಪತ್ರೆಗಳಿಗೆ ಅವಶ್ಯವಿರುವ ಔಷಧಿ (I.V. Fluids) ಖರೀದಿಗಾಗಿ ಕರೆಯಲಾಗಿದ್ದ ಟೆಂಡರಿನಲ್ಲಿ Tender Notification No.CHO/ACT/2/PR/49/2010-11,

Date: 15-04-2011 ಎರಡನೇ ಬಾರಿಯು ಸಹ ಈಕ ಸಂಸ್ಥೆ ಮೆ॥ ಬೆಂಗಳೂರು ಟ್ರೇಡರ್ಸ್‌ರವರು ಟೆಂಡರ್ ಸಲ್ಲಿಸಿದ್ದು, ಸದರಿಯವರು ಟೆಂಡರ್ ನಿಯಮಾವಳಿ ರೀತ್ಯ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿ ತಾಂತ್ರಿಕವಾಗಿ ಅರ್ಹವಾಗಿರುತ್ತಾರೆ.

ಪಾಲಿಕೆ ಆಸ್ಪತ್ರೆಗಳಿಗೆ (I.V. Fluids) ಜರೂರು ಆವಶ್ಯವಿದ್ದುದರಿಂದ Single ಬಿಡ್ಡುದಾರರು ನಮೂದಿಸಿರುವ ದರಗಳನ್ನು ಸರ್ಕಾರ ನಿಗದಿಪಡಿಸಿದ ಕರ್ನಾಟಕ ಡ್ರಗ್ಸ್ ಆಂಡ್ ಲಾಜಿಸ್ಟಿಕ್ ವೇರಹೌಸಿಂಗ್ ಸೊಸೈಟಿರವರು ನಿಗದಿಪಡಿಸಿದ ದರಗಳೊಂದಿಗೆ ತುಲನೆ ಮಾಡಿ ಬಿಡ್ಡುದಾರರು ನಮೂದಿಸಿರುವ ದರಗಳು ಸರ್ಕಾರ ನಿಗದಿಪಡಿಸಿದ ದರಗಳ ರೀತ್ಯ ಕಡಿಮೆ ದರ ಇದ್ದಲ್ಲಿ ಖರೀದಿಸಲು ಕ್ರಮಕೈಗೊಳ್ಳಬಹುದಾಗಿರುತ್ತದೆ. ಆದರೆ ಕಳೆದ 2-3 ವರ್ಷಗಳಿಂದ ಸರ್ಕಾರದಿಂದ ಔಷಧಿ ಖರೀದಿ ಪ್ರಕ್ರಿಯೆ ನಡೆಯದೆ ಇರುವುದರಿಂದ ಬಿಡ್ಡುದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳನ್ನು ಸರ್ಕಾರದ **NPPA (National Pharmaceutical Authority) Department of Chemicals and petrochemicals- Govt. of India** ರವರ Drugs (Prices Control) Order (Website www.nppindia.nic.in ದರಗಳೊಂದಿಗೆ ತುಲನೆ ಮಾಡಿ ಬಿಡ್ಡುದಾರರ ದರಗಳು ಕಡಿಮೆ ಇದ್ದಲ್ಲಿ ಖರೀದಿಸಲು ಕ್ರಮವಹಿಸಬಹುದೆಂದು ತಾಂತ್ರಿಕ ಸಮಿತಿಯು ತೀರ್ಮಾನ ತೆಗೆದುಕೊಂಡಿರುತ್ತದೆ. ತಾಂತ್ರಿಕ ಸಮಿತಿಯ ನಡವಳಿಕೆಯನ್ನು ಕಡತದ ಪುಟ 46 ರಲ್ಲಿ ಲಗತ್ತಿಸಿದೆ.

ಆರ್ಥಿಕ ಬಿಡ್ಡನ್ನು ದಿನಾಂಕ: 01-06-2011 ರಂದು ತೆರೆಯಲಾಗಿದ್ದು, ಬಿಡ್ಡುದಾರರ ದರಪಟ್ಟಿಯನ್ನು ಪುಟ 50 ರಿಂದ 52 ರಲ್ಲಿ ಲಗತ್ತಿಸಿದೆ.

ತಾಂತ್ರಿಕ ಸಮಿತಿಯ ನಿರ್ಣಯದಂತೆ ಡೌನಲೋಡ್ ಮಾಡಲಾದ Drugs (Prices Control) Order ಪ್ರತಿಯನ್ನು ಕಡತದಲ್ಲಿ ಪುಟ 47 ರಲ್ಲಿ ಲಗತ್ತಿಸಿದೆ. ಹಾಗೂ ಬಿಡ್ಡುದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳನ್ನು ಸರ್ಕಾರದ (NPPA) ದರಗಳೊಂದಿಗೆ ತುಲನೆ ಮಾಡಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

## COMPARATIVE STATEMENT

| Sl. No. | Drugs Description | Rates quoted by M/s. Bangalore Traders (Inclusive of all taxes) (in Rs.) | Rates as per Govt. celing prices exclusive of all Taxes. (in Rs.) |
|---|---|---|---|
| 1 | Inj. Dextrose 5% 500ml | 15-75 | 21-00 |
| 2 | Inj. Dextrose 5% with normal saline 0.9% 500ml | 15-75 | 21-00 |
| 3 | Inj. Dextrose 10% 500ml | 26-15 | Govt. Cealing Price not fixed |
| 4 | Inj. I.V. Plasma, Volume Substitute 3.5% W/V 500ml | 340-20 | Govt. Cealing Price not fixed |
| 5 | I.V. Metronidozole 500mg/100ml | 14-28 | 15-70 |
| 6 | I.V. Normal Saline 0.9% | 15-75 | 21-00 |
| 7 | I.V. Ringers Lactate 500ml | 26-15 | Govt. Cealing Price not fixed |
| 8 | I.V. Trinidazole with 5% dextrose 400ml | 75-60 | Govt. Cealing Price not fixed |
| 9 | Inj. Ciprofluxacin 200mg/100ml | 15-23 | 15-92 |

ಮೇಲಿನ ಔಷಧಿಗಳ ಪೈಕಿ ಕ್ರ.ಸಂ. 1, 2, 5, 6 ಮತ್ತು 9 ಕ್ಕೆ ಮಾತ್ರ ಸರ್ಕಾರದ Ceiling ದರ ನಿಗದಿಪಡಿಸಿದ್ದು, ಉಳಿದ ಔಷಧಿಗಳಿಗೆ ಅಂದರೆ ಕ್ರ.ಸಂ. 3, 4, 7 ಮತ್ತು 8 ರ ಔಷಧಿಗಳಿಗೆ Ceiling ದರ ನಿಗದಿಯಾಗಿರುವುದಿಲ್ಲವಾದ ಕಾರಣ <u>**ಕರ್ನಾಟಕ ಸ್ಟೇಟ್ ಕನ್ಸೂಮರ್ಸ್ ಫೆಡರೇಷನ್**</u> ರವರಿಂದ ದರಪಟ್ಟಿ

Shashi Kumar
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪಡೆದು ಬಿಡ್ಡುದಾರರ ದರಗಳೊಂದಿಗೆ ತುಲನೆ ಮಾಡಲಾಗಿರುತ್ತದೆ. ಕೆ.ಸಿ.ಸಿ.ಎಫ್. ರವರ ದರಪಟ್ಟಿಯನ್ನು ಪುಟ 49 ರಲ್ಲಿ ಲಗತ್ತಿಸಿದೆ.

| Sl. No. | Drugs Description | Rates quoted by the bidder (Inclusive of all taxes) (in Rs.) | Rates quoted by KCCF Ltd. (Inclusive of all Taxes) (in Rs.) |
|---|---|---|---|
| 1 | Inj. Dextrose 10% 500ml | 26-15 | 29-80 |
| 2 | Inj. I.V. Plasma, Volume substitute 3.5% W/V 500ml | 340-20 | 389-00 |
| 3 | I.V. Ringers Lactate 500ml | 26-15 | 29-90 |
| 4 | I.V. Trinidazole with 5% dextrose 400ml | 75-60 | 86-40 |

ಮೇಲಿನ ಎರಡೂ ವ್ಯತ್ಯಾಸ ಪಟ್ಟಿಯಲ್ಲಿರುವಂತೆ ಬಿಡ್ಡುದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳು ಭಾರತ ಸರ್ಕಾರದ NPPA (National Pharmaceutical Authority)ರವರ **Drugs (Prices Control)**ದರಗಳು ಮತ್ತು **ಕೆ.ಸಿ.ಸಿ.ಎಫ್**. ರವರ ದರ ಕಡಿಮೆ ಇರುವುದು ಕಂಡು ಬಂದಿರುತ್ತದೆ. ಬಿಡ್ಡುದಾರರು ನಮೂದಿಸಿರುವ ದರಗಳನ್ವಯ ಔಷಧಿಗಳಿಗೆ ಖರ್ಚಾಗಬಹುದಾದ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.

| Sl. No. | Description | Qty. | Brand Name | Manufacturer | Unit pack (each) | Rate | Total |
|---|---|---|---|---|---|---|---|
| 1 | Inj. Dextrose 5% 500ml | 41221 | - | Ives Drugs (I) Pvt. Ltd., Indore | 500ml | 15-75 | 649230.75 |
| 2 | Inj. Dextrose 5% with normal saline 0.9% 500ml | 49955 | - | Ives Drugs (I) Pvt. Ltd., Indore | 500ml | 15-75 | 786791.25 |
| 3 | Inj. Dextrose 10% 500ml | 11701 | - | Ives Drugs (I) Pvt. Ltd., Indore | 500 ml | 26-15 | 305981.15 |
| 4 | Inj. I.V. Plasma, Volume substitute 3.5% W/V 500ml | 2377 | Icoccel | Ives Drugs (I) Pvt. Ltd., Indore | 500ml | 340-20 | 808655.40 |
| 5 | I.V. Metronidozole 500mg/ 100ml | 20986 | - | Ives Drugs (I) Pvt. Ltd., Indore | 100ml | 14-28 | 299680.08 |
| 6 | I.V. Normal Saline 0.9% | 28512 | - | Ives Drugs (I) Pvt. Ltd., Indore | 500ml | 15-75 | 449064.00 |
| 7 | I.V. Ringers Lactate 500ml | 61351 | - | Ives Drugs (I) Pvt. Ltd., Indore | 500ml | 26-15 | 1604328.65 |
| 8 | I.V. Trinidazole with 5% dextrose 400ml | 12556 | Icotinol-D | Ives Drugs (I) Pvt. Ltd., Indore | 400ml | 75-60 | 949233.60 |
| 9 | Inj. Ciprofluxacin 200mg/100ml | 23630 | - | Ives Drugs (I) Pvt. Ltd., Indore | 100ml | 15-23 | 359884.90 |
| | | | | Total | | | 62,12,849-78 |

(Inclusive of all taxes)

**(ಒಟ್ಟು ಮೊತ್ತ ರೂ.ಅರವತ್ತೆರಡು ಲಕ್ಷದ ಹನ್ನೆರಡು ಸಾವಿರದ ಎಂಟುನೂರ ನಲವತ್ತೊಂಬತ್ತು ಮಾತ್ರ)**

ಬಿಡ್ಡುದಾರರು ನಮೂದಿಸಿರುವ ದರಗಳು ಭಾರತ ಸರ್ಕಾರದ (NPPA)ರವರ Drug Prices Control ದರಗಳು KCCF ರವರ ದರಗಳಿಗಿಂತ ಕಡಿಮೆ ಇರುವುದರಿಂದ ತಾಂತ್ರಿಕ ಸಮಿತಿಯ ನಿರ್ಣಯದಂತೆ ಮೆ॥ ಬೆಂಗಳೂರು ಟ್ರೇಡರ್ಸ್‌ರವರಿಂದ ರೂ.62,12,849-00 ಮೊತ್ತದಲ್ಲಿ ಲೆಕ್ಕಶೀರ್ಷಿಕೆ : 14. ಆರೋಗ್ಯ-ವೈದ್ಯಕೀಯ-ಸಾಮಾನ್ಯ ವೆಚ್ಚಗಳು. ಔಷಧಿ ಖರೀದಿಗಾಗಿ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ ಖರೀದಿಸುವ ಬಗ್ಗೆ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ಟಿಪ್ಪಣಿ ದಿನಾಂಕ: 08-06-2011 ಅನ್ನು ಒಪ್ಪಿದೆ.**

## 4) ವಿಷಯದ ಸಂಖ್ಯೆ: ಸಾಆಸ್ಥಾಸ/7/11-12:

ಸಂಖ್ಯೆ: ಮುಆಅ/ಎಸಿಟಿ2/ಪಿಆರ್/59/2010-11, ದಿನಾಂಕ: 25-05-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ನಾಯಿ ಕಡಿತದ ವಿರುದ್ಧ ನೀಡಲಾಗುವ ಆಂಟಿರೇಬೀಸ್ ಲಸಿಕೆಗಳು, ಈಕ್ವೈನ್ ರೇಬೀಸ್ ಇಮ್ಯುನೊಗ್ಲೋಬುಲಿನ್ ಮತ್ತು Anti 'D' ಲಸಿಕೆಗಳ ಖರೀದಿಗಾಗಿ ಟೆಂಡರ್ ಅಧಿಸೂಚನಾ ಸಂಖ್ಯೆ: **CHO/ACT/2/PR/04/2011-12. Dated: 05-03-2011** ರಂತೆ **e-Procurement Tender** ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ 7 ಸಂಸ್ಥೆಗಳು ಭಾಗವಹಿಸಿದ್ದು, ಈ ಪೈಕಿ 1 ಸಂಸ್ಥೆಯ ಟೆಂಡರ್ **Reject** ಆಗಿದ್ದು, ಉಳಿದ 6 ಸಂಸ್ಥೆಗಳ **Tender Accept** ಆಗಿರುತ್ತವೆ. ವಿವರ ಈ ಕೆಳಕಂಡಂತಿರುತ್ತದೆ.

| | | | |
|---|---|---|---|
| 1. | M/s. Chiron Behring Vaccines Pvt Ltd. | – | Accepted. |
| 2. | M/s. Rahul Pharama | – | Accepted. |
| 3. | M/s. Bharat Biotech International Limited | – | Accepted. |
| 4. | M/s. Life Associates | – | Accepted. |
| 5. | M/s. Sanofi Pasteur India Pvt. Ltd. | – | Rejected. |
| 6. | M/s. Human Biologicals Institute, A division of Indian Immunologicals Ltd. | – | Accepted. |
| 7. | M/s. Vins Bioproducts Limited | – | Accepted. |

ಮೇಲಿನ **Accept** ಆಗಿದ್ದ 6 ಮಂದಿ ಬಿಡ್ಡುದಾರರ ತಾಂತ್ರಿಕ ಬಿಡ್‌ಗಳನ್ನು ತಾಂತ್ರಿಕ ಸಮಿತಿ ಪರಿಶೀಲಿಸಿದ್ದು, 6 ಮಂದಿ ಬಿಡ್ಡುದಾರರ ಪೈಕಿ ಈ ಕೆಳಕಂಡ 4 ಮಂದಿ ಬಿಡ್ಡುದಾರರು ಮಾತ್ರ ತಾಂತ್ರಿಕ ಬಿಡ್ಡಿನಲ್ಲಿ ಅರ್ಹವಾಗಿದ್ದ ಕಾರಣ ಅರ್ಹವಾದ ಬಿಡ್ಡುದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ದಿನಾಂಕ: 12-05-2011 ರಂದು ತೆರೆಯಲಾಗಿರುತ್ತದೆ. ತಾಂತ್ರಿಕ ಸಮಿತಿಯ ತೀರ್ಮಾನದ ಪ್ರತಿಯನ್ನು ಕಡತದ **ಪುಟ 87 ರಿಂದ 91 ರಲ್ಲಿ ಲಗತ್ತಿಸಿದೆ**. ಅದರಂತೆ ಸದರಿ ಸಂಸ್ಥೆಗಳು ಲಸಿಕೆಗಳಿಗೆ ನಮೂದಿಸಿರುವ ದರ ಈ ಕೆಳಕಂಡಂತ್ತಿರುತ್ತದೆ.

Thashashi Kumar

...ಕ್ಷರು
...ರೋಗ್ಯ ಸ್ಥಾಯಿ ಸಮಿತಿ
...ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## COMPARATIVE STATEMENT

| Sl. No. | Description of the Drugs | Rate quoted by M/s. Human Biological Institute | Rate Quoted by M/s.Chiron Behring Vaccines Pvt. Ltd., | Rate Quoted by M/s.Bharath Biotech International Ltd., | Rate Quoted by M/s. Rahul Pharma |
|---|---|---|---|---|---|
| 1 | Anti rabies Vaccine, Human Cell culture 2.5 IU per IM dose irrespective of reconstituted volume. The vaccine shall been approved by DCG (I) for ID administration Intra Muscular/Intra Dermal. Quantity 15000 vials | Rs.190.80 Per vial | Rs.198.00 Per vial | Rs.229.95 per vial | - |
| 2 | Tissue Culture Anti Rabies Vaccine I.P. 2.5 IU/Vial/dose. Quantity 35000 Vials | Rs.185.50 per vial | Rs.198.00 per vial | Rs.201.75 per vial | - |
| 3 | Equine Rabies Immunoglobulin 300 IU/ml. 5ml. Quantity-1500 vials | - | - | - | Rs.351.75 per vial |
| 4 | Inj. Anti-D Immunoglobulin 300 mcg. Liquid stable preservative free. Quantity-1529 vials | - | - | - | Rs.1686.14 per vial |

ಮೇಲಿನ ಪಟ್ಟಿಯಲ್ಲಿ ತಿಳಿಸಿದಂತೆ ಆಂಟಿರೇಬೀಸ್ ಲಸಿಕೆಗಳಿಗೆ 3 ಸಂಸ್ಥೆಗಳು ಟೆಂಡರ್ ಸಲ್ಲಿಸಿದ್ದು, **ಮೆ॥ ಹ್ಯೂಮನ್ ಬಯಾಲಾಜಿಕಲ್ಸ್ ಇನ್ಸ್ಟಿಟ್ಯೂಟ್** L1 ದರವನ್ನು **ಮೆ॥ ಖೈರಾನ್ ಬೇರಿಂಗ್ ವ್ಯಾಕ್ಸೀನ್ ಪ್ರೈ ಲಿ., ರವರು** L2 ದರವನ್ನು **ಮೆ॥ ಭಾರತ್ ಬಯೋಟೆಕ್ ಇಂಟರ್‌ನ್ಯಾಷನಲ್ ಲಿಮಿಟೆಡ್** L3 ದರವನ್ನು ನಮೂದಿಸಿರುತ್ತಾರೆ.

Equine ರೇಬಿಸ್ ಇಮ್ಯುನೊಗ್ಲೋಬುಲಿನ್ ಲಸಿಕೆ ಮತ್ತು ಆಂಟಿ 'ಡಿ' ಇಮ್ಯುನೊಗ್ಲೋಬುಲಿನ್ ಲಸಿಕೆಗಳಿಗೆ ಕೇವಲ ಒಂದು ಸಂಸ್ಥೆ ಮೆ॥ ರಾಹುಲ್ ಫಾರ್ಮ ಮಾತ್ರ ಟೆಂಡರ್ ಸಲ್ಲಿಸಿದ್ದು, ಟೆಂಡರ್‌ನಲ್ಲಿ **Single Bid** ಆಗಿರುವುದರಿಂದ ತಾಂತ್ರಿಕ ಸಮಿತಿಯ ನಿರ್ಣಯದಂತೆ ಸದರಿ ಲಸಿಕೆಗಳ ಖರೀದಿಯನ್ನು ಕೈಬಿಡಲಾಗಿದೆ.

ಮೇಲಿನ ದರಪಟ್ಟಿಯನ್ವಯ ಆಂಟಿರೇಬೀಸ್ ಲಸಿಕೆಗಳಿಗೆ L1 ದರ ನಮೂದಿಸಿರುವ **ಮೆ॥ ಹ್ಯೂಮನ್ ಬಯಲಾಜಿಕಲ್ಸ್ ಇನ್ಸಿಟ್ಯೂಟ್** ರವರಿಂದ ಖರೀದಿಸಬೇಕಾಗಿರುವ ಲಸಿಕೆಗಳ ವಿವರ ಈ ಕೆಳಕಂಡಂತಿರುತ್ತದೆ.

| Sl. No. | Name of the Company | Description of the drug | Quantity | L1 Rate Inclusive all taxs | Total in Rs. |
|---|---|---|---|---|---|
| 1 | HUMAN BIOLOGICALS INSTITUTE (A DIVISION OF INDIAN IMMUNOLOGICALS LTD) | Anti rabies vaccine, Human Cell culture 2.5 IU per IM dose irrespective of reconstituted volume. The vaccine shall been approved by DCG (I) for ID administration **Intra Muscular/Intra Dermal.** | Rs.15000 per vials | Rs.190.80 per vials | Rs.28,62,000.00 |
| 2 | HUMAN BIOLOGICALS INSTITUTE (A DIVISION OF INDIAN IMMUNOLOGICALS LTD) | Tissue Culture anti Rabies Vaccine I.P. 2.5 IU/Vial/dose. Quantity 35000 Vials | Rs.35000 per Vials | Rs.185.50 per vials | Rs.64,92,500.00 |
| | | | | **Total** | 9354,500.00 |

(ರೂ. ತ್ತೊಂಬತ್ತ ಮೂರು ಲಕ್ಷದ ಐವತ್ತು ನಾಲ್ಕು ಸಾವಿರದ ಐದು ನೂರ ರೂಪಾಯಿಗಳು ಮಾತ್ರ)

ಆದ್ದರಿಂದ ಮೇಲೆ ತಿಳಿಸಿದ **ಮೆ॥ ಹ್ಯೂಮನ್ ಬಯಾಲಾಜಿಕಲ್ಸ್ ಇನ್ಸ್ಟಿಟ್ಯೂಟ್** ರವರಿಂದ ಆಂಟಿರೇಬೀಸ್ ಲಸಿಕೆಗಳನ್ನು ಒಟ್ಟಾರೆ **ರೂ.93,54,500.00 (ರೂ.ತ್ತೊಂಬತ್ತ ಮೂರು ಲಕ್ಷದ ಐವತ್ತು ನಾಲ್ಕು ಸಾವಿರದ ಐದು ನೂರ ರೂಪಾಯಿಗಳು ಮಾತ್ರ)** ಮೊತ್ತದಲ್ಲಿ 2011-12 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ : 14 ಆರೋಗ್ಯ ವೈದ್ಯಕೀಯ, ಆಂಟಿರೇಬೀಸ್ ಲಸಿಕೆ ಖರೀದಿಗಾಗಿ ಮೀಸಲಿಟ್ಟಿರುವ ಹಣದಲ್ಲಿ ಈ ಖರ್ಚನ್ನು ಭರಿಸಿ ಟೆಂಡರ್ ನಿಯಮಾವಳಿ ರೀತ್ಯಾ ಕರಾರು ಒಪ್ಪಂದ ಮಾಡಿಕೊಂಡು ವ್ಯಾಕ್ಸೀನ್‌ಗಳನ್ನು ಖರೀದಿಸುವ ಬಗ್ಗೆ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ಟಿಪ್ಪಣಿ ದಿನಾಂಕ: 25-05-2011 ಅನ್ನು ಒಪ್ಪಿದೆ.**

Geetha Shashi Kumar

**(ಡಾ॥ ಕೆ.ಎನ್. ಗೀತಾ ಶಶಿಕುಮಾರ್)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 06-06-2011 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಡಾ॥ ಕೆ.ಎನ್. ಗೀತಾ ಶಶಿಕುಮಾರ್ | ಅಧ್ಯಕ್ಷರು | ಉಪ ಆಯುಕ್ತರು (ಆರೋಗ್ಯ) |
| ಎಂ. ಮುನಿರಾಜು | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀಮತಿ.ಶಶಿಕಲಾ ಕಿರಣ್ ಎಸ್. | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| ಡಾ॥ ಎಸ್. ರಾಜು | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಮುಖ್ಯ ಅಭಿಯಂತರರು (ಪರಿಸರ ವಿಭಾಗ) |
| ಎನ್. ವೀರಣ್ಣ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಯಲಹಂಕ) |
| ಎಲ್. ರಮೇಶ್ | ಸದಸ್ಯರು | ಸ.ಕಾ.ನಿ.ಅ. (ಪರಿಸರ ವಿಭಾಗ) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | ಆರೋಗ್ಯಾಧಿಕಾರಿ (ದಾಸಪ್ಪ ಹೆರಿಗೆ ಆಸ್ಪತ್ರೆ) |
| ಶ್ರೀಮತಿ.ಪಿ. ಸೌಮ್ಯ | ಸದಸ್ಯರು | ಆರೋಗ್ಯಾಧಿಕಾರಿ (ಪೂರ್ವ-ಕ್ಲಿನಿಕಲ್) |
| ಎಂ.ಶ್ರೀನಿವಾಸ | ಸದಸ್ಯರು | |
| **ಗೈರು ಹಾಜರಾದ ಸದಸ್ಯರು:** | | |
| ಎಸ್. ನಟರಾಜ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1) ವಿಷಯದ ಸಂಖ್ಯೆ: ಸಾಆಸ್ಥಾಸ/1/11-12:

ಆಯುಕ್ತರ ಟಿಪ್ಪಣಿ ಸಂಖ್ಯೆ.ಉನಿ(ಪಪಾ)/ಪಿಆರ್/84/10-11, ದಿನಾಂಕ: 21-03-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂರು ವಧಾಗಾರಗಳು ಕಾರ್ಯ ನಿರ್ವಹಿಸುತ್ತಿವೆ (1) ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಫ್ರೇಜರ್ ಟೌನ್, (2) ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ, (3) ನಾಗರೀಕ ಹಂದಿ ಮಾಂಸ ಉತ್ಪಾದನಾ ಕೇಂದ್ರ

Geetha Shashikumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಫ್ರೇಜರಟೌನ್ ಈ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಗುತ್ತಿಗೆಯನ್ನು ದಿನಾಂಕ: 01-04-2011 ರಿಂದ 31-03-2012 ರವರೆಗೆ ಹೊಸದಾಗಿ ನಿಗದಿಪಡಿಸುವ ಸಲುವಾಗಿ ಟೆಂಡರ್ ಸಂಖ್ಯೆ. ಸಂ JD(AH)/Slaughterhouse/Tend/PR/1220-1223/10-11 ರಂತೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿತ್ತು.

ದಿನಾಂಕ: 08-03-2011 ರಂದು ಮಧ್ಯಾಹ್ನ 4.00 ಗಂಟೆಗೆ ನಗರ ಮತ್ತು ನಾಗರೀಕಾ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಆರ್ಥಿಕ ಬಿಡ್ಡನ್ನು ತೆರೆಯಲಾಗಿರುತ್ತದೆ.

(1) ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1220/10-11 ಕ್ಕೆ 3 ಜನ ಬಿಡ್ಡ್ ಸಲ್ಲಿಸಿದ್ದು, ಸದರಿ ಮೂರು ಜನ ಬಿಡ್ಡ್‌ದಾರರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರವಾಗಿದ್ದು, ಅವರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಟೆಂಡರ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 1 | ಶ್ರೀ ಬೆಂಗಳೂರು ಮಹ್ಮದ್ ಯೂಸಫ್ | 45,00,999/- |
| 2 | ಶ್ರೀ ಭಾಬು ಅಬ್ದುಲ್ ಅಜೀಜ್ | 43,99,787/- |
| 3 | ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 69,00,786/- |

(2) ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1221/10-11 ಕ್ಕೆ 6 ಜನ ಬಿಡ್ಡ್‌ನಲ್ಲಿ

ಭಾಗವಹಿಸಿದ್ದು, ಈ 6 ಜನರಲ್ಲಿ 4 ಜನ ಬಿಡ್ಡ್‌ದಾರರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರಗೊಂಡಿರುತ್ತಾರೆ.

**ಅಂಗೀಕಾರಗೊಂಡಿರುವ** ಬಿಡ್ಡ್‌ದಾರರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಬಿಡ್ಡ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 1 | ಶ್ರೀ.ಎ.ಎಂ. ಭರ್ಖತುಲ್ಲಾ | 72,11,786/- |
| 2 | ಶ್ರೀ.ಫಿರ್‌ದೋಸ್ ರಾಜೆ | 76,29,786/- |
| 3 | ಶ್ರೀ.ಗೌಸ್ ಮೊಹಿದಿನ್ ಯೂಸಫ್ | 78,70,786/- |
| 4 | ಶ್ರೀ.ಮಿಸ್ಕೀನ್ ಮುಜೀಬ್ | 63,00,786/- |

**ತಿರಸ್ಕೃತಗೊಂಡವರ ಹೆಸರು** ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಟೆಂಡರ್‌ದಾರರ ಹೆಸರು |
|---|---|
| 1 | ಶ್ರೀ.ಭಾಬು ಅಬ್ದುಲ್ ಅಜೀಜ್ |
| 2 | ಶ್ರೀ.ಇಬ್ರಾಹಿಂ ಖುರೇಶಿ |

(3) ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1222/10-11 ಕ್ಕೆ 6 ಜನ ಬಿಡ್ಡ್‌ನಲ್ಲಿ ಭಾಗವಹಿಸಿದ್ದು, ಈ 6 ಜನರಲ್ಲಿ 4 ಜನ ಬಿಡ್ಡ್‌ದಾರರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರಗೊಂಡಿರುತ್ತಾರೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಅಂಗೀಕಾರಗೊಂಡಿರುವ** ಬಿಡ್ಡ್‌ದಾರರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | **ಬಿಡ್ಡ್‌ದಾರರ ಹೆಸರು** | **ನಮೂದಿಸಿರುವ ಮೊತ್ತ ರೂ.** |
|---|---|---|
| 1 | ಶ್ರೀ.ಗೌಸ್ ಮೊಹಿದಿನ್ ಯೂಸಫ್ | 2,07,786/- |
| 2 | ಶ್ರೀ.ದಾವುದ್ ಮೊಹಮದ್ ಇಬ್ರಾಹಿಂ | 25,77,786/- |
| 3 | ಶ್ರೀ.ನಾಜಿರ್ ರಿಯಾಜ್ ಅಹ್ಮದ್ | 27,25,786/- |
| 4 | ಶ್ರೀ.ಮಹಮದ್ ನಿಜಾಂ | 31,09,999.75/- |

**ತಿರಸ್ಕೃತಗೊಂಡವರ ಹೆಸರು** ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | **ಟೆಂಡರ್‌ದಾರರ ಹೆಸರು** |
|---|---|
| 1 | ಶ್ರೀ.ಎ.ಎಂ. ಭರ್ಖತುಲ್ಲಾ |
| 2 | ಶ್ರೀ.ವಿಶ್ವನಾಥ ಎಂ ನಾಗಪ್ಪ |

(4) ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1223/10-11 ಕ್ಕೆ ಒಬ್ಬರು ಬಿಡ್ಡ್ ಸಲ್ಲಿಸಿದ್ದು, ಇವರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರವಾಗಿದ್ದು, ಅವರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | **ಬಿಡ್ಡ್‌ದಾರರ ಹೆಸರು** | **ನಮೂದಿಸಿರುವ ಮೊತ್ತ ರೂ.** |
|---|---|---|
| 1 | ಶ್ರೀ.ಆರ್. ಪ್ರಸನ್ನ | 1,35,000/- |

ನಗರ ಹಾಗೂ ನಾಗರೀಕ ವಧಾಗಾರಗಳಲ್ಲಿ ವಧಾಗಾರಗಳಲ್ಲಿ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಚಾಲ್ತಿ ಗುತ್ತಿಗೆಯ ಟೆಂಡರ್ ಮೊತ್ತ, ಕರೆಯಲಾಗಿರುವ ಟೆಂಡರ್‌ನಲ್ಲಿ ಅಪೇಕ್ಷಿಸಲಾಗಿದ್ದ, ಟೆಂಡರ್ ಮೊತ್ತ ಹಾಗೂ ಹೊಸ ಟೆಂಡರ್‌ನಲ್ಲಿ ಟೆಂಡರ್‌ದಾರರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ವಿವರ | ಪ್ರಸ್ತುತ ಟೆಂಡರ್‌ನ ಮೊತ್ತ | ಕರೆಯಲಾಗಿರುವ ಟೆಂಡರ್‌ನಲ್ಲಿ ಅಪೇಕ್ಷಿಸಲಾಗಿರುವ ಟೆಂಡರ್ ಮೊತ್ತ | ಕರೆಯಲಾಗಿರುವ ಟೆಂಡರ್‌ನಲ್ಲಿ ಟೆಂಡರ್‌ದಾರರು ನಮೂದಿಸಿರುವ ಮೊತ್ತ | |
|---|---|---|---|---|
| | | | ಹೆಸರು | ಮೊತ್ತ ರೂ. |
| ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 30,59,110/- | 33,65,020/- | 1) ಬೆಂಗಳೂರು ಮಹ್ಮದ್ ಯೂಸುಫ್<br>2) ಭಾಬು ಅಬ್ದುಲ್ ಅಜೀಜ್<br>3) ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 45,00,999/-<br>43,99,787/-<br>69,00,786/- |
| ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 56,45,250/- | 62,09,775/- | 1) ಎ.ಎಂ. ಫರ್ಖತುಲ್ಲಾ<br>2) ಫಿರದೋಸ್ ರಾಜೆ<br>3) ಗೌಸ್ ಮೊಹಿದಿನ್ ಯೂಸಫ್<br>4) ಗೌಸ್ ಮೊಹಿದಿನ್ ಯೂಸಫ್ | 72,11,786/-<br>76,29,786/-<br>78,70,786/-<br>63,00.786/- |
| ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 17,24,572/- | 18,97,030/- | 1) ಗೌಸ್ ಮೊಹಿದಿನ್ ಯೂಸಫ್<br>2) ದಾವುದ್ ಮೊಹಮದ್ ಇಬ್ರಾಹಿಂ<br>3) ನಾಜಿರ್ ಲಿಯಾಜ್ ಅಹ್ಮದ್ ನಾಜಿರ್ ರಿಯಾಜ್ ಅಹ್ಮದ್<br>4) ಮಹಮದ್ ನಿಜಾಂ | 2,07,786/-<br>25,77,786/-<br>27,25,786/-<br>31,09,999.75/- |
| ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 1,30,000/- | 1,43,000/- | ಆರ್. ಪ್ರಸನ್ನ | 1,35,000/- |

Theshashi Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ಗೆ ಶ್ರೀ.ಆರ್. ಪ್ರಸನ್ನ ಇವರು ಒಬ್ಬರೆ ಟೆಂಡರ್ ಅನ್ನು ಸಲ್ಲಿಸಿದ್ದು, ಇವರು ನಮೂದಿಸಿದ ಮೊತ್ತ ರೂ.1,35,000/- ಟೆಂಡರ್‌ನಲ್ಲಿ ಅಪೇಕ್ಷಿಸಿದ ಮೊತ್ತ ರೂ.1,43,000/- ಗಳಿಗಿಂತ ಕಡಿಮೆ ಇದ್ದುದರಿಂದ ಸದರಿ ಟೆಂಡರ್‌ದಾರರನ್ನು ದರ ಸಂಧಾನಕ್ಕೆ ಕರೆಯಲಾಗಿದ್ದು, ಟೆಂಡರ್‌ದಾರರು ರೂ.1,43,040/- ಗಳಿಗೆ ಟೆಂಡರ್ ಅನ್ನು ನಿಗಧಿಗೊಳಿಸಲು ಲಿಖಿತವಾಗಿ ಒಪ್ಪಿಗೆಯನ್ನು ನೀಡಿರುತ್ತಾರೆ.

ನಗರ ಮತ್ತು ನಾಗರೀಕ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ಗೆ ಅತೀ ಹೆಚ್ಚು ಟೆಂಡರ್ ಮೊತ್ತ ನಮೂದಿಸಿರುವ ಟೆಂಡರ್‌ದಾರರ ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ವಿವರ | ಟೆಂಡರ್‌ದಾರರ ಹೆಸರು | ಬಿಡ್ಡ್‌ನ ಮೊತ್ತ ರೂ. |
|---|---|---|---|
| 1 | ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 60,00,786/- |
| 2 | ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಗೌಸ ಮೊಹಿದಿನ್ ಯೂಸಫ್ | 78,70,786/- |
| 3 | ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಮಹಮದ್ ನಿಜಾಂ | 31,09,999.75/- |
| 4 | ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಆರ್. ಪ್ರಸನ್ನ | 1,43,040/- |

ಈ ಮೇಲೆ ತಿಳಿಸಿದ ಟೆಂಡರ್‌ದಾರರು ಇತರೆ ಟೆಂಡರ್‌ದಾರರಿಗಿಂತ ಹೆಚ್ಚು ಮೊತ್ತ ನಮೂದಿಸಿರುತ್ತಾರೆ ಹಾಗೂ ಟೆಂಡರ್‌ನಲ್ಲಿ ಅಪೇಕ್ಷಿಸಿದ ಮೊತ್ತಕ್ಕಿಂತಲು ಹೆಚ್ಚಿನ ಮೊತ್ತವನ್ನು ನಮೂದಿಸಿರುತ್ತಾರೆ. ಅಲ್ಲದೆ ಹೊಸ ಟೆಂಡರ್‌ನಲ್ಲಿ ನಮೂದಿಸಿರುವ ಟೆಂಡರ್ ಮೊತ್ತಗಳು ಚಾಲ್ತಿ ಟೆಂಡರ್‌ನ ಮೊತ್ತಕ್ಕಿಂತ ಹೆಚ್ಚಾಗಿ ಇರುವುದರಿಂದ ಮೇಲೆ ತಿಳಿಸಿರುವ ಟೆಂಡರ್‌ದಾರರಿಗೆ ಪಾಲಿಕೆಗೆ ಸೇರಿರುವ ನಗರ ಮತ್ತು ನಾಗರೀಕ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕನ್ನು ದಿನಾಂಕ: 01-04-2011 ರಿಂದ 31-03-2012 ರವರೆಗೆ ನೀಡುವ ಬಗ್ಗೆ ಆದೇಶ ನೀಡಬೇಕಾಗಿರುವುದರಿಂದ ಅವರು ನಮೂದಿಸಿರುವ ಟೆಂಡರ್ ಮೊತ್ತವನ್ನು ಅಂಗೀಕರಿಸುವ ತೀರ್ಮಾನಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ಟಿಪ್ಪಣಿ ದಿನಾಂಕ: 28-03-2011 ಅನ್ನು ಒಪ್ಪಿದೆ.**

## 2) ವಿಷಯದ ಸಂಖ್ಯೆ: ಸಾಆಸ್ಥಾಸ/2/11-12:

ಸಂಖ್ಯೆ: ಉನಿ (ಪಪಾ)/ಪಿಆರ್/ /10-11, ದಿನಾಂಕ: 31-03-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂಖ್ಯೆಯನ್ನು ಹಾಗೂ ಬೀದಿ ನಾಯಿಗಳ ಹಾವಳಿ ನಿಯಂತ್ರಿಸುವ ಸಲುವಾಗಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಕರೆಯಲಾಗಿದ್ದ, ಅಲ್ಪಾವಧಿ ಟೆಂಡರ್‌ನ ವಿವರಗಳನ್ನು ಹಾಗೂ ಅಂತಿಮವಾಗಿ ನಿಗದಿಪಡಿಸಿದ ಏಕರೂಪದ ದರಗಳಿಗೆ ಅನುಮೋದನೆ ನೀಡಲು ಕೋರಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ದಿನಾಂಕ: 24-07-2010 ರಂದು ಟಿಪ್ಪಣಿಯನ್ನು ಸಲ್ಲಿಸಲಾಗಿರುತ್ತದೆ. ದಿನಾಂಕ: 12-08-2010 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ವಿಷಯದ ಸಂ: ಕೆಆಸ್ಥಾಸ/11/2010-11 ರಲ್ಲಿ ಟಿಪ್ಪಣಿಯನ್ನು ಒಪ್ಪಲಾಗಿದ್ದು,

Hathashi Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ದಿನಾಂಕ: 28-08-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯದ ಸಂ: 4 (82)/2010-11 ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 12-08-2010 ರ ನಿರ್ಣಯವನ್ನು ಒಪ್ಪಿ ಅನುಮೋದಿಸಲಾಗಿರುತ್ತದೆ. ಸದರಿ ನಿರ್ಣಯದಲ್ಲಿ ರಾಜ್ಯ ಮಟ್ಟದ ಎ.ಬಿ.ಸಿ. ಮಾನಿಟರಿಂಗ್ ಸಮಿತಿಯ ಶಿಫಾರಸ್ಸಿನಂತೆ ಬೀದಿ ನಾಯಿಗಳ ಹಾವಳಿ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ದೂರುಗಳು ದಾಖಲಾಗುತ್ತಿರುವ ಪೂರ್ವ ಮತ್ತು ದಕ್ಷಿಣ ವಲಯಗಳಲ್ಲದೆ ಪಶ್ಚಿಮ ವಲಯದಲ್ಲಿಯು ಸಹ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಲಾಗಿರುತ್ತದೆ. ಆದರೆ ಪಶ್ಚಿಮ ವಲಯದಲ್ಲಿ ಬೀದಿ ನಾಯಿಗಳ ಹಾವಳಿ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ದೂರುಗಳು ದಾಖಲಾಗದೆ ಇದ್ದ ಕಾರಣ ಪಶ್ಚಿಮ ವಲಯದಲ್ಲಿ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕವನ್ನು ಪ್ರಾರಂಭಿಸಲು ಟೆಂಡರ್ ಕರೆದಿರುವುದಿಲ್ಲ.

**ಪ್ಯಾಕೇಜ್-ಕ್ಷಿಪ್ರ ಕಾರ್ಯಾಚರಣೆ-ಕಂ-ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕ ಬೆಂಗಳೂರು ಪೂರ್ವ ಹಾಗೂ ಬೆಂಗಳೂರು ದಕ್ಷಿಣ ವಲಯಗಳಿಗೆ ನಿಗದಿಪಡಿಸಿದ ಏಕರೂಪದ ದರ.**

| **ವಿವರ**<br>**(ಕ್ಷಿಪ್ರ ಕಾರ್ಯಾಚರಣೆ-ಕಂ-ಸಂಚಾರಿ ಶಸ್ತ್ರ ಚಿಕಿತ್ಸೆ ಘಟಕ** | **ಫೀಲ್ಡ್ ಕ್ಲಿನಿಕ್ ಒದಗಿಸದಿದ್ದಲ್ಲಿ ಪ್ರತಿ ನಾಯಿಗೆ** | **ಫೀಲ್ಡ್ ಕ್ಲಿನಿಕ್ ಒದಗಿಸಿದಲ್ಲಿ ಪ್ರತಿ ನಾಯಿಗೆ** |
|---|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮತ್ತು ಎಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | ರೂ.700/- | ರೂ.650/- |
| ಪುನರಾವರ್ತಿತ ಎಆರ್‌ವಿ (ಎಆರ್‌ವಿ ಡ್ರೈವ್) | ರೂ.70/- | ರೂ.70/- |
| ದಯಾಮರಣಕ್ಕೆ ಒಳಪಡಿಸಿರುವುದು | ರೂ.75/- | ರೂ.75/- |

ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವಲಪ್‌ಮೆಂಟ್ ಹಾಗೂ ಅನಿಮಲ್ ವೆಲ್ಫೇರ್ ಸೊಸೈಟಿ ಇವರು ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಪೂರ್ವ ವಲಯದ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸೆ ಘಟಕದ ಟೆಂಡರ್‌ನಲ್ಲಿ ಭಾಗವಹಿಸಿದ್ದು, ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವೆಲಪ್‌ಮೆಂಟ್ ಇವರು ದಕ್ಷಿಣ ವಲಯದ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸೆ ಘಟಕದ ಟೆಂಡರ್‌ನಲ್ಲಿ LI ಆಗಿ

ಆಯ್ಕೆಯಾಗಿರುತ್ತಾರೆ. ಹಾಗೂ ಅನಿಮಲ್ ವೆಲ್ಫೇರ್ ಸೊಸೈಟಿ ಇವರು ಪೂರ್ವ ವಲಯದ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸೆ ಘಟಕದ ಟೆಂಡರ್‌ನಲ್ಲಿ LI ಆಗಿ ಆಯ್ಕೆಯಾಗಿರುತ್ತಾರೆ. ಅದರಂತೆ, ಈ ಕೆಳಗೆ ನಮೂದಿಸಿದ ದರಗಳಲ್ಲಿ ಕಾರ್ಯ ನಿರ್ವಹಿಸಲು ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

| ವಿವರ<br>(ಕ್ಷಿಪ್ರ ಕಾರ್ಯಾಚರಣೆ-ಕಂ-ಸಂಚಾರಿ ಶಸ್ತ್ರ ಚಿಕಿತ್ಸೆ ಘಟಕ | ಮೆ॥ ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವೆಲಪ್‌ಮೆಂಟ್ (ದಕ್ಷಿಣ ವಲಯ) | ಮೆ॥ ಅನಿಮಲ್ ವೆಲ್ಫೇರ್ ಸೊಸೈಟಿ (ಪೂರ್ವ ವಲಯ) |
|---|---|---|
| ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮತ್ತು ಎಆರ್‌ವಿ ಲಸಿಕೆಯೊಂದಿಗೆ (ಸಿಎನ್‌ವಿಆರ್ ಪದ್ಧತಿಯಲ್ಲಿ) | ರೂ.650/- | ರೂ.650/- |
| ಪುನರಾವರ್ತಿತ ಎಆರ್‌ವಿ (ಎಆರ್‌ವಿ ಡ್ರೈವ್) | ರೂ.70/- | ರೂ.70/- |
| ದಯಾಮರಣಕ್ಕೆ ಒಳಪಡಿಸಿರುವುದು | ರೂ.75/- | ರೂ.75/- |

ಮೇಲಿನ ದರದಂತೆ ಪಶ್ಚಿಮ ವಲಯದಲ್ಲಿಯು ಸಹ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸೆ ಘಟಕ ಪ್ರಾರಂಭಿಸಲು ಅನುವು ಮಾಡಿಕೊಡುವಂತೆ ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವೆಲಪ್‌ಮೆಂಟ್ ಇವರು ದಿನಾಂಕ: 20-09-2010 ರಂದು ಮನವಿ ಸಲ್ಲಿಸಿದ್ದು, ಕಡತ ಸಂ.ಉನಿ(ಪಪಾ)/ಪಿಆರ್/412/2010-11 ಕಂಡಿಕೆ-(21) ರಲ್ಲಿ ದಿನಾಂಕ: 07-02-2011 ರಂದು ಅನುಮೋದನೆಯನ್ನು ನೀಡಲಾಗಿರುತ್ತದೆ. ಆದರೆ ಪಶ್ಚಿಮ ವಲಯದಲ್ಲಿ ಈ ಹಿಂದೆ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕಕ್ಕೆ ಟೆಂಡರ್ ಕರೆಯದೆ ಇರುವ ಕಾರಣ ಪೂರ್ವ ಮತ್ತು ದಕ್ಷಿಣ ವಲಯಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸಾ ಘಟಕಗಳಿಗೆ ಟೆಂಡರ್ ಕರೆದು ನಿಗದಿಗೊಳಿಸಿದ ಏಕ ರೂಪದ ದರಗಳಂತೆ ವೆಟ್ಸ್ ಸೊಸೈಟಿ ಫಾರ್ ಅನಿಮಲ್ ವೆಲ್ಫೇರ್ ಅಂಡ್ ರೂರಲ್ ಡೆವೆಲಪ್‌ಮೆಂಟ್ ಸಂಸ್ಥೆಗೆ 2 ವರ್ಷಗಳ ಅವಧಿಗೆ ಪಶ್ಚಿಮ ವಲಯದಲ್ಲಿ ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸೆ ಘಟಕ ಕಾರ್ಯ ನಿರ್ವಹಿಸಲು ಒಪ್ಪಿಗೆ ಪತ್ರವನ್ನು ಕಳುಹಿಸಿ ಭದ್ರತಾ ಠೇವಣಿಯನ್ನು ಪಡೆದು ಕಾರ್ಯಾದೇಶವನ್ನು ನೀಡಬೇಕಾಗಿದ್ದು, ಇದಕ್ಕೆ ಅನುಮೋದನೆ ನೀಡಲು ಕೋರಿ ನಿವೇದಿಸಲಾಗಿದೆ.

(Sd/- Shashikumar)

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಕ್ಷಿಪ್ರ ಕಾರ್ಯಾಚರಣೆ ಕಂ ಸಂಚಾರಿ ಶಸ್ತ್ರ ಚಿಕಿತ್ಸೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ**

13-ಆರೋಗ್ಯ ಸಾಮಾನ್ಯ,
ಆರೋಗ್ಯ ಮತ್ತು ನೈರ್ಮಲೀಕರಣ,
ಪ್ರಾಣಿ ಸಂಖ್ಯೆಯ ನಿಯಂತ್ರಣ ವೆಚ್ಚಗಳು,
ಬೀದಿ ನಾಯಿಗಳ ನಿರ್ವಹಣೆ (P0273) ಅಡಿಯಲ್ಲಿ ಭರಿಸಲಾಗುವುದು.

2010-11 ನೇ ಸಾಲಿನ ಆಯವ್ಯಯದಲ್ಲಿ ಸದರಿ ಶೀರ್ಷಿಕೆಯಲ್ಲಿ ರೂ.500/- ಲಕ್ಷಗಳಿಗೆ ನಿಗದಿಗೊಳಿಸಲಾಗಿದೆ ಎಂದು ನಿವೇದಿಸಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**<u>ನಿರ್ಣಯ:</u>**

**ಆಯುಕ್ತರ ಟಿಪ್ಪಣಿ ದಿನಾಂಕ: 31-03-2011 ಅನ್ನು ಒಪ್ಪಿದೆ.**

**3) <u>ವಿಷಯದ ಸಂಖ್ಯೆ: ಸಾಆಸ್ಥಾಸ/3/11-12:</u>**

ಪ್ಲಾಸ್ಟಿಕ್ ತ್ಯಾಜ್ಯದಿಂದ ಪರಿಣಾಮಕಾರಿಯಾಗಿ ಪರಿಸರದ ಅವನತಿಯನ್ನು ತಡೆಯುವ ಉದ್ದೇಶದಿಂದ, ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು (MoEF) ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011, ದಿನಾಂಕ: 04-02-2011 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಪ್ರಕಾರ ಪಾಲಿಕೆಯು ಈ ಕೆಳಕಂಡಂತೆ ಕೈಗೊಳ್ಳಬೇಕಾಗಿರುತ್ತದೆ.

- ಸಮಗ್ರ ಮತ್ತು ಸಮಂಜಸ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ಕಾರ್ಯಾಚರಣೆ ಚೌಕಟ್ಟನ್ನು ಸ್ಥಾಪಿಸಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾರ್ಯಗಳ

ವ್ಯವಸ್ಥಾಪನೆಗೆ ಸೂಕ್ತವಾದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವುದು. ಮುಖ್ಯವಾಗಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಣೆ, ಬೇರ್ಪಡಿಸುವುದು, ಸಾಗಾಟ, ಸಂಸ್ಕರಣೆ ಮತ್ತು ಅಂತಿಮ ವಿಲೇವಾರಿಗೆ ಅನುಸರಿಸಬೇಕಾದ ಪ್ರಮಾಣಗಳನ್ನು ರೂಪಿಸುವುದು.

- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಕಾರ್ಯಗಳ (ಸಂಗ್ರಹಣೆ, ಬೇರ್ಪಡಿಸುವಿಕೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿ) ಯನ್ನು ಮಿತವ್ಯಯಕರವಾಗಿ, ಪರಿಸರಕ್ಕೆ ಹಾನಿಯಾಗದಂತೆ ನಿರ್ವಹಿಸುವುದು.
- ಪ್ಲಾಸ್ಟಿಕ್ ಉತ್ಪಾದಕರನ್ನು ತೊಡಗಿಸಿಕೊಂಡು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸುವುದು. ಈ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ತ್ಯಾಜ್ಯ ಪುನರ್ ಬಳಕೆದಾರರೊಂದಿಗೆ ಜೊತೆಗೂಡಿಸಿ ನಿರ್ವಹಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯ ಬಗ್ಗೆ ಎಲ್ಲಾ ಹಿತಾಸಕ್ತಿಗಳ (Stakeholders) ಜವಾಬ್ದಾರಿಯ ಬಗ್ಗೆ ಜಾಗೃತಿ ಮೂಡಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಅಸಂಪ್ರದಾಯಕ ಘಟಕಗಳು (ಚಿಂದಿ ಆಯುವವರು, ತ್ಯಾಜ್ಯವನ್ನು ಪುನರ್ ಬಳಕೆಗೆ ತರುವವರು ಇತ್ಯಾದಿ) ರವರನ್ನು ತೊಡಗಿಸಿಕೊಳ್ಳುವುದು.
- ತೆರೆದ ಪ್ರದೇಶದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸುಡುವುದನ್ನು ನಿಷೇಧಿಸುವುದು.
- ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು, ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಕರ ಜವಾಬ್ದಾರಿಯ ಅಡಿಯಲ್ಲಿ ಆರ್ಥಿಕ ಸಹಾಯವನ್ನು ಪಡೆಯುವುದು.
- ಪ್ಲಾಸ್ಟಿಕ್ ತ್ಯಾಜ್ಯದಿಂದ ನಿಸ್ಸತ್ವಗೊಂಡ ಮತ್ತು ಇತರೆ ಮರು ಉಪಯೋಗಕ್ಕೆ ಬರದಂತ ತ್ಯಾಜ್ಯಗಳನ್ನು ಘನತ್ಯಾಜ್ಯ ವಸ್ತು ನಿರ್ವಹಣೆ

Shashi kumar.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನಿಯಮ 2000) ಮತ್ತು Schedule III (Specifications for Landfill sites) ಪ್ರಕಾರ ನಿರ್ವಹಿಸುವುದು.

- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮವನ್ನು ಪಾಲಿಕೆಯ ಪುರಸಭಾ ನೀತಿಯಲ್ಲಿ (Municipal Bye Law) ಅಳವಡಿಸಿಕೊಳ್ಳುವುದು.
- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಸೂಕ್ತ ತಂತ್ರಜ್ಞಾನವನ್ನು ರಸ್ತೆ ನಿರ್ಮಾಣ, Coincirenation ಅಳವಡಿಸಿಕೊಳ್ಳುವುದು, ಇತ್ಯಾದಿ, ಈ ತಂತ್ರಜ್ಞಾನದ ಬಳಕೆಯು ಪರಿಸರ ಪ್ರಮಾಣವನ್ನು ಮೀರದಂತೆ ಕ್ರಮವಹಿಸಬೇಕು.
- ಉತ್ಪಾದಕರಿಗೆ ಪ್ಲಾಸ್ಟಿಕ್ ತಯಾರಿಕೆ, ತ್ಯಾಜ್ಯ ನಿರ್ವಹಣೆ, ಪುನರ್ ಬಳಕೆಗೆ ಉತ್ತೇಜಿಸಲು, ಹಾಗೂ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣವನ್ನು ಕಡಿಮೆ ಮಾಡಲು, ಪ್ಲಾಸ್ಟಿಕ್ ಚೀಲಗಳು ಬಳಕೆದಾರರಿಗೆ ಉಚಿತವಾಗಿ ಲಭ್ಯವಾಗದಂತೆ, ಪಾಲಿಕೆಯು ಕನಿಷ್ಠ ಮೊತ್ತವನ್ನು ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗದಿಪಡಿಸುವುದು.

ಈ ನಿಟ್ಟಿನಲ್ಲಿ ಮೊದಲ ಹಂತವಾಗಿ, ಮಾನ್ಯ ಆಯುಕ್ತರವರ ಆದೇಶದಂತೆ ದಿನಾಂಕ: 15-03-2011 ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿಗಳು, ಹೋಟೆಲ್‌ಗಳು, ವಾಣಿಜ್ಯ ಸಂಕೀರ್ಣಗಳು ಮತ್ತು ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರು 40 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ (ಪ್ಲಾಸ್ಟಿಕ್ ಕೈಚೀಲ, ಪ್ಲಾಸ್ಟಿಕ್ ಶೀಟ್, ತಿಂಡಿ ಊಟದ ಬಳಕೆಯಲ್ಲಿ ಇತ್ಯಾದಿ) ಬಳಕೆ ಮಾಡುವುದನ್ನು ನಿಷೇಧಿಸಲಾಗಿರುತ್ತದೆ. ಹಾಗೂ ಪ್ಲಾಸ್ಟಿಕ್ ಕೈಚೀಲಗಳ ಕನಿಷ್ಠ ಮೊತ್ತವನ್ನು ಪ್ರಮಾಣ ಮತ್ತು ಅಳತೆಯ ಅನುಗುಣವಾಗಿ ನಿಗದಿಪಡಿಸಲು, ಪ್ಲಾಸ್ಟಿಕ್ ಉತ್ಪಾದಕರನ್ನು ತೊಡಗಿಸಿಕೊಂಡು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲು, ಪುನರ್ ಬಳಕೆದಾರರು ಮತ್ತು ಚಿಂದಿ ಆಯುವವರನ್ನು ಸದರಿ ಕೇಂದ್ರದಲ್ಲಿ ತೊಡಗಿಸಿಕೊಳ್ಳುವ ಬಗ್ಗೆ

ತೀರ್ಮಾನ ಕೈಗೊಳ್ಳಲು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣಾ ಮಂಡಳಿಯ ಸಹಯೋಗದೊಂದಿಗೆ, ಪ್ಲಾಸ್ಟಿಕ್ ಉದ್ದಿಮೆದಾರರು ಮತ್ತು ಉತ್ಪಾದಕರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2011 ಅನ್ವಯ ಪಾಲಿಕೆಯ ಪುರಸಭಾ ನೀತಿಯಲ್ಲಿ (Municipal Bye Law) ಅಳವಡಿಸಿಕೊಳ್ಳಬೇಕಾಗಿರುವುದರಿಂದ, ಸದರಿ ನಿಯಮವನ್ನು ಪುರಸಭಾ ನೀತಿಯಲ್ಲಿ (Municipal Bye Law) ಅಳವಡಿಸಿಕೊಳ್ಳಲು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**<u>ನಿರ್ಣಯ:</u>**

**ಮುಂದೂಡಿದೆ.**

## 4) ವಿಷಯದ ಸಂಖ್ಯೆ: ಸಾಆಸ್ಥಾಸ/4/11-12:

ಆಯುಕ್ತರ ದಿನಾಂಕ: 01-06-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯಲಹಂಕ ವಲಯ, ಜಂಟಿ ಆಯುಕ್ತರ ವ್ಯಾಪ್ತಿಗೆ ಬರುವ ಬಳ್ಳಾರಿ ರಸ್ತೆಯನ್ನು ಮತ್ತು ಇದಕ್ಕೆ ಹೊಂದಿಕೊಂಡಿರುವ ಸೇವಾ ರಸ್ತೆಗಳನ್ನು ಉತ್ತಮ ದರ್ಜೆಯಲ್ಲಿ ಗುಡಿಸುವ ಸಲುವಾಗಿ, ಈ ರಸ್ತೆಗಳನ್ನು ಉತ್ಕೃಷ್ಟ ದರ್ಜೆಯ ಯಂತ್ರಗಳಿಂದ ಹಾಗೂ ಮಾನವ ಸಂಪನ್ಮೂಲಗಳಿಂದ ಸ್ವಚ್ಛಗೊಳಿಸುವ ಸಲುವಾಗಿ 5 ವರ್ಷಗಳ ಅವಧಿಗೆ ಮೇಲಿನ ಉಲ್ಲೇಖದ ರೀತ್ಯ ಗುತ್ತಿಗೆ ನಿಗದಿ ಪಡಿಸಲಾಗಿದ್ದು, ಪ್ರಥಮ ಹಂತವಾಗಿ ಶ್ರೀ.ಪಿ. ಗೋಪಿನಾಥರೆಡ್ಡಿರವರು 3 ವರ್ಷ ಸಮರ್ಪಕವಾಗಿ ಸ್ವಚ್ಛತೆ ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ.

Hashashi Kumar

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| ಕ್ರ.ಸಂ. | ಪ್ಯಾಕೇಜ್ ಸಂಖ್ಯೆ | ಗುತ್ತಿಗೆದಾರರ ಹೆಸರು | ಸ್ವಚ್ಚತೆ ಕೆಲಸ ನಿರ್ವಹಿಸುವ ವ್ಯಾಪ್ತಿ | ಟೆಂಡರ್ ಮೊತ್ತ (ಪ್ರತಿ ತಿಂಗಳಿಗೆ) |
|---|---|---|---|---|
| 1 | 1 | ಶ್ರೀ.ಪಿ.ಗೋಪಿನಾಥ ರೆಡ್ಡಿ | ಹೆಬ್ಬಾಳು ಮೇಲು ಸೇತುವೆಯಿಂದ IAF ಗೇಟ್ ವರೆವಿಗೆ | ರೂ.11,39,499/- |
| 2 | 2 | ಶ್ರೀ.ಪಿ.ಗೋಪಿನಾಥ ರೆಡ್ಡಿ | IAF ಗೇಟ್ ನಿಂದ BIAL ಮೇಲು ಸೇತುವೆ ತಿರುವು ರಸ್ತೆಯ ವರೆಗೆ | ರೂ.11,74,499/- |

ಶ್ರೀ.ಪಿ. ಗೋಪಿನಾಥ ರೆಡ್ಡಿ ಗುತ್ತಿಗೆದಾರರು, ಸಮರ್ಪಕವಾಗಿ ಕೆಲಸ ನಿರ್ವಹಿಸಿರುವುದರಿಂದ ಹಾಲಿ ನೀಡಿರುವ ಟೆಂಡರ್ ಕರಾರು ಒಪ್ಪಂದ, ಷರತ್ತು ಮತ್ತು ನಿಬಂಧನೆಗೊಳಪಟ್ಟಂತೆ, ಮತ್ತು ಇನ್ನೂ 2 ವರ್ಷಗಳ ಅವಧಿಗೆ ಮುಂದುವರೆಸಲು ಪ್ರಸ್ತಾವನೆಯನ್ನು ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ಟಿಪ್ಪಣಿ ದಿನಾಂಕ: 01-06-2011 ಅನ್ನು ಒಪ್ಪಿದೆ.**

## 5) ವಿಷಯದ ಸಂಖ್ಯೆ: ಸಾಆಸ್ಥಾಸ/5/11-12:

ಸಂಖ್ಯೆ: ಆ.ವೈ. (ಎಂ.ಸಿ.ಹೆಚ್. & ಎಫ್.ಡಬ್ಲ್ಯೂ)/ಪಿಆರ್/285/2011-12, ದಿನಾಂಕ: 27-05-2011 ರ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬನಶಂಕರಿ ರೆಫರೆಲ್ ಆಸ್ಪತ್ರೆ ವ್ಯಾಪ್ತಿಯಲ್ಲಿ ಬರುವ ಹೆರಿಗೆ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದೆ ಪ್ರಗತಿ ಕುಂಠಿತವಾಗಿರುತ್ತದೆ. ಹಾಗೂ ಸಾರ್ವಜನಿಕರಿಗೆ ಸೇವೆ ನೀಡಲು ಕಷ್ಟಕರವಾಗಿರುತ್ತದೆ. ಈಗಾಗಲೇ ಜಯನಗರ ಹೆರಿಗೆ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ|| ಚಿತ್ರಾ ರವರನ್ನು ಪೊಬತ್ತಿ ಹೆರಿಗೆ ಆಸ್ಪತ್ರೆಯಲ್ಲಿಯೆ

ಕಾರ್ಯನಿರ್ವಹಿಸುವಂತೆ ನಿಯೋಜಿಸಲಾಗಿದೆ. ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯವರು ಎರವಲು ಸೇವೆಯಲ್ಲಿ ಪಾಲಿಕೆಯ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರನ್ನು ಹಿಂಪಡೆಯಲು ಆದೇಶವನ್ನು ಹೊರಡಿಸಿರುತ್ತಾರೆ. ಬನಶಂಕರಿ ರೆಫರೆಲ್ ಆಸ್ಪತ್ರೆಯಲ್ಲಿ ವೈದ್ಯರುಗಳ ತೀವ್ರಕೊರತೆ ಉಂಟಾಗಿರುತ್ತದೆ.

ಬನಶಂಕರಿ ರೆಫರೆಲ್ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಿಂದಲೂ ಕುಟುಂಬ ಕಲ್ಯಾಣ ಕೇಂದ್ರ ಸೌಲಭ್ಯವನ್ನು "ಕಿಮ್ಸ್ ಆಸ್ಪತ್ರೆ ಕಮ್ಯೂನಿಟಿ ಡಿಪಾರ್ಟ್‌ಮೆಂಟ್" ನಿಂದ House Surgeons ನ್ನು ನಿಯೋಜಿಸಿ ಪ್ರಯೋಜನ ಪಡೆಯುತ್ತಿರುತ್ತೇವೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಅಂಶವನ್ನು ಪರಾಮರ್ಷೆ ಮಾಡಿ ವೈದ್ಯರ ಕೊರತೆ ನೀಗಿಸಲು 3 Post Students, 3 House Surgeons ನ್ನು ೩ ಪಾಳಿಯಲ್ಲಿ ಪೊಬ್ಬತ್ತಿ ಹೆರಿಗೆ ಆಸ್ಪತ್ರೆಗೆ ಕಿಮ್ಸ್ ಆಸ್ಪತ್ರೆಯಿಂದ ನಿಯೋಜಿಸಿದಲ್ಲಿ ಪೊಬ್ಬತ್ತಿ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸಿ ಸಾರ್ವಜನಿಕರಿಗೆ ಹಾಗೂ ಕಡುಬಡವರಿಗೆ ವೈದ್ಯಕೀಯ ಸೇವೆ ನೀಡುವಂತಾಗುತ್ತದೆ. ಈ ನಿಟ್ಟಿನಲ್ಲಿ ವೈದ್ಯರುಗಳನ್ನು ಕಿಮ್ಸ್ ಆಸ್ಪತ್ರೆಯಿಂದ ನಿಯೋಜಿಸಿಕೊಳ್ಳುವ ಬಗ್ಗೆ ಆದೇಶವನ್ನು ನೀಡಲು ಯೋಜನಾ ಸಮನ್ವಯಾಧಿಕಾರಿಗಳು, ಮುಖ್ಯ ಆರೋಗ್ಯಾಧಿಕಾರಿಗಳು ಕೋರಿದ್ದು, ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಮುಂದೂಡಿದೆ.

G. Shashikumar

**(ಡಾ|| ಕೆ.ಎನ್. ಗೀತಾ ಶಶಿಕುಮಾರ್)**

**ಅಧ್ಯಕ್ಷರು**

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 01-04-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ | | |
| ಬಿ.ಎಸ್. ಮಂಜುನಾಥ ರೆಡ್ಡಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಡಾ॥ ಎಂ.ಎಸ್. ಶಿವಪ್ರಸಾದ್ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ. |
| ಹೆಚ್.ಎನ್. ಗಂಗಾಧರ | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಆರೋಗ್ಯಾಧಿಕಾರಿ (ಪಶ್ಚಿಮ-ಕ್ಲಿನಿಕಲ್) |
| ಕೆ. ರವೀಂದ್ರನ್ | ಸದಸ್ಯರು | ಯೋಜನಾ ಸಮನ್ವಯಾಧಿಕಾರಿ (ಎನ್.ಪಿ.ಬಿ.ಡಿ.ಸಿ.ಪಿ.) |
| ಶ್ರೀಮತಿ.ಕೆ. ನಂದಿನಿ ಶ್ರೀನಿವಾಸ್ | ಸದಸ್ಯರು | ಯೋಜನಾ ಸಮನ್ವಯಾಧಿಕಾರಿ (ಆರ್.ಸಿ.ಹೆಚ್.) (ಪ್ರಭಾರ) |
| ಸಿ.ಎಸ್. ರಾಧಕೃಷ್ಣ | ಸದಸ್ಯರು | ಉಪ ಆರೋಗ್ಯಾಧಿಕಾರಿ (ನೈರುತ್ಯ) |
| ಎಸ್. ನಟರಾಜ್ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ತಾ.ಮ.ಕು.ಕ.) |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಶ್ರೀಮತಿ.ಪಿ. ಸೌಮ್ಯ | ಸದಸ್ಯರು | |
| ಗೈರು ಹಾಜರಾದ ಸದಸ್ಯರು: | | |
| ಕೆ.ಎಲ್. ತಿಮ್ಮನಂಜಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

## 1) ವಿಷಯದ ಸಂಖ್ಯೆ: ಸಾಆಸ್ಥಾಸ/18/10-11:

ಆಯುಕ್ತರ ದಿನಾಂಕ: 10-02-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಗಳಲ್ಲಿ "ಪ್ರಿವೆಂಟೀವ್ ಹೆಲ್ತ್ ಕೇರ್" ಯೋಜನೆಯನ್ನು ಹಮ್ಮಿಕೊಳ್ಳಬಹುದಾಗಿದ್ದು, ಪ್ರಾಯೋಗಿಕವಾಗಿ ಮೊದಲನೇ ಹಂತದಲ್ಲಿ ವಾರ್ಡ್ ನಂ.68 ಗೆಳೆಯರ ಬಳಗ ಮತ್ತು ವಾರ್ಡ್ ನಂ.108-ರಾಜಾಜಿನಗರ ರಲ್ಲಿ "ಪ್ರಿವೆಂಟೀವ್ ಕಾರ್ಡಿಯಾಲಜಿ" ಯೋಜನೆಯನ್ನು ತದನಂತರ "ಪ್ರಿವೆಂಟೀವ್ ಹೆಲ್ತ್ ಕೇರ್" ಯೋಜನೆಯನ್ನು ಹಮ್ಮಿಕೊಳ್ಳಬಹುದಾಗಿರುತ್ತದೆ.

ಸದರಿ "ಪ್ರಿವೆಂಟೀವ್ ಕಾರ್ಡಿಯಾಲಜಿ" ಯೋಜನೆಯು (ಸಿ.ಟಿ.ಪಿ.ಹೆಚ್.ಸಿ.ಎಫ್.) ಕ್ಯಾಮ್‌ಹ್ಯಾಡ್ ಟ್ರೈಸೆಕ್ಟರ್ ಪ್ರಿವೆಂಟೀವ್ ಹೆಲ್ತ್‌ಕೇರ್ ಫೌಂಡೇಶನ್, ಪನೇಶಿಯ ಆಸ್ಪತ್ರೆ ಮತ್ತು ಬೃಹತ್ ಬೆಂಗಳೂರು

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಹಾನಗರ ಪಾಲಿಕೆ ಈ 3 ಸಂಸ್ಥೆಗಳನ್ನೊಳಗೊಂಡು ಹಾಗೂ ಜನ ಪ್ರತಿನಿಧಿಗಳೊಂದಿಗೆ ಸಮುದಾಯ ಸಹಭಾಗಿತ್ವದ ಅಡಿಯಲ್ಲಿ ಯೋಜನೆಯನ್ನು ಮೊದಲ ಹಂತದಲ್ಲಿ ಪ್ರಾರಂಭಿಸಲಾಗುವುದು.

ಸದರಿ ಯೋಜನೆಗೆ ಅವಶ್ಯಕ ಸಿಬ್ಬಂದಿಯವರನ್ನು ಈ ಕೆಳಕಂಡಂತೆ ಪೆನೇಶಿಯ ಆಸ್ಪತ್ರೆಯವರಿಂದ ಒದಗಿಸಲಾಗುವುದು.

- ವೈದ್ಯರು-1
- ಸ್ಟಾಫ್ ನರ್ಸ-2
- ಆಡಳಿತಾತ್ಮಕ ಸಿಬ್ಬಂದಿ/ಡಾಟಾ ಎಂಟ್ರಿ ಆಪರೇಟರ್-1

ಯೋಜನೆಗೆ ಅವಶ್ಯಕವಿರುವ ಸಲಕರಣೆ ಮತ್ತು ಲೇಖನ ಸಾಮಗ್ರಿಗಳನ್ನು ಅಂದರೆ ಗ್ಲೂಕೋಮೀಟರ್/ಬಿ.ಪಿ. ಆಪರೇಟಸ್/ಕೇಸ್‌ಶೀಟ್ಸ್/ರೆಫರಲ್‌ಕಾರ್ಡ್ ಇತ್ಯಾದಿಗಳನ್ನು ಸಹ ಪೆನೇಶಿಯ ಆಸ್ಪತ್ರೆಯವರು ಒದಗಿಸುವರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಯೋಜನೆಗೆ ಅವಶ್ಯವಿರುವ ಪ್ರಯೋಗಶಾಲೆಯ ರಿಏಜೆಂಟ್ಸ್ ಮತ್ತು ಅವಶ್ಯಕ ಔಷಧಿಗಳನ್ನು ಹಾಗೂ ಓರ್ವ ಯೋಜನಾ ಸಮನ್ವಯಾಧಿಕಾರಿ, 1 ಗ್ರೂಪ್-ಡಿ ನೌಕರರನ್ನು ಒದಗಿಸಲಾಗುವುದು.

ತಪಾಸಣೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಅಗತ್ಯವಿರುವ ರೋಗಿಗಳಿಗೆ ಪಾಲಿಕೆಯು ಹಮ್ಮಿಕೊಳ್ಳುತ್ತಿರುವ ಧೀನದಯಾಳು ಸುವರ್ಣ ಆರೋಗ್ಯಶ್ರೀ ಯೋಜನೆ ಅಡಿಯ ಆಸ್ಪತ್ರೆಗಳ ಪ್ಯಾನಲ್‌ನಲ್ಲಿ ಪೆನೇಶಿಯ ಆಸ್ಪತ್ರೆರವರು ಇರುತ್ತಾರೆ. ತತ್ಸಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಕಡತದ ಪರಿಶೀಲನೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:** ದಿನಾಂಕ: 19-03-2011 ರಂದು ಮುಂದೂಡಿದೆ.

ದಿನಾಂಕ: 01-04-2011 ರ ನಿರ್ಣಯ:

**ಆರೋಗ್ಯ ಸ್ಥಾಯಿ ಸಮಿತಿಯ ಮಾನ್ಯ ಸದಸ್ಯರಾದ ಡಾ|| ಎಂ.ಎಸ್. ಶಿವಪ್ರಸಾದ್ ಹಾಗೂ ಪಾಲಿಕೆಯ ಮಾನ್ಯ ಸದಸ್ಯರಾದ ಡಾ|| ಗೀತಾ ಮತ್ತು ಡಾ|| ರಾಜು ರವರ**

B. S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಉಪಸ್ಥಿತಿಯಲ್ಲಿ ಮತ್ತು CHO ರವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಉಪ ಆಯುಕ್ತರು (ಆರೋಗ್ಯ) ರವರ ನೈತೃತ್ವದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳ ಒಂದು ತಜ್ಞರ ತಂಡ ರಚಿಸಿ, ಆ ತಂಡದಿಂದ NUHM ಮಾರ್ಗದರ್ಶನಗಳಂತೆ ಪ್ರಸ್ತಾವನೆಗಳನ್ನು/ಪ್ರೋಜೆಕ್ಟ್ ವರದಿಯನ್ನು ಸಮಗ್ರ ಮಾಹಿತಿಯೊಂದಿಗೆ ಸಮಿತಿಯ ಮುಂದೆ ಮಂಡಿಸಲು ಹಾಗೂ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲು ಅಗತ್ಯವಾದ ಕ್ರಮಗಳೊಂದಿಗೆ ಮಂಡಿಸಲು ಕಡತ ಹಿಂದಿರುಗಿಸಲಾಯಿತು.**

## 2) ವಿಷಯದ ಸಂಖ್ಯೆ: ಸಾಆಸ್ಥಾಸ/19/10-11:

ಆಯುಕ್ತರ ಟಿಪ್ಪಣಿ ಸಂಖ್ಯೆ.ಎಂ.ಓ.ಹೆಚ್ (ಎಂ.ಸಿ.)ಪಿ.ಆರ್./214/10-11, ದಿನಾಂಕ: 14-03-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಜನರು ವಾಸಿಸುತ್ತಿದ್ದು, ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಎಲ್ಲಾ ವೇಳೆಯಲ್ಲೂ ಚಿಕಿತ್ಸೆ ನೀಡುವ ದೃಷ್ಠಿಯಿಂದ ಈ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಅಗತ್ಯ ವೈದ್ಯರು ಮತ್ತು ಸಿಬ್ಬಂದಿಗಳನ್ನು ನೇಮಿಸಲು ಕೋರಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಗಣ್ಯರ ಹೆಸರು ಶ್ರೀಯುತರು | ಮೇಲ್ದರ್ಜೆಗೇರಿಸಬೇಕಾದ ಆಸ್ಪತ್ರೆಗಳ ವಿವರ |
|---|---|---|
| 01 | ಶ್ರೀ.ಎಂ.ಕೃಷ್ಣಪ್ಪ, ವಿಜಯನಗರ ವಿಧಾನ ಸಭಾ ಕ್ಷೇತ್ರ | 1. ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಪೂಜಿನಗರ<br>2. ಪ್ರಾಥಮಿಕ ಆರೋಗ್ಯ ಕೇಂದ್ರ, ಹೊಸಹಳ್ಳಿ<br>3. ಪ್ರಾಥಮಿಕ ಆರೋಗ್ಯ ಕೇಂದ್ರ, ಮುನೇಶ್ವರಬ್ಲಾಕ್ |
| 02 | ಶ್ರೀ.ಎನ್.ವಿಜಯಕುಮಾರ್ ಜಯನಗರ ವಿಧಾನ ಸಭಾ ಕ್ಷೇತ್ರ | ವಾರ್ಡ್ ನಂ.177 ರಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ |
| 03 | ಶ್ರೀ.ರಾಜೇಂದ್ರನ್, ಪಾಲಿಕೆ ಸದಸ್ಯರು, ವಾರ್ಡ್ ನಂ.59, ಎಂ.ಎಸ್. ನಗರ | ಪ್ರಾಥಮಿಕ ಆರೋಗ್ಯ ಕೇಂದ್ರ ವಾರ್ಡ್ ನಂ.59 |
| 04 | ಮೆಃ ಜೆ.ಪಿ.ನಗರ ಸಿಟಿಜನ್ಸ್ ಅಸೋಸಿಯೇಷನ್ (ರಿ), ಪಾಲಿಕೆ ವಾರ್ಡ್ ಕಛೇರಿ, (ಇಂಜಿನಿಯರ್) ವಾರ್ಡ್ ನಂ.57, 21 ನೇ ಮುಖ್ಯ ರಸ್ತೆ, ಬರೋಡ ಬ್ಯಾಂಕ್ ಹತ್ತಿರ, ಜೆ.ಪಿ. ನಗರ, ಬೆಂಗಳೂರು-78 | ಜೆ.ಪಿ. ನಗರ 1ನೇ ಹಂತದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ |

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ವೈದ್ಯರುಗಳನ್ನು/ಅರೆ ವೈದ್ಯಕೀಯ ಸಿಬ್ಬಂದಿಯನ್ನು ಪೂರ್ಣಾವಧಿಗೆ ನೇಮಿಸಬೇಕಾಗಿರುತ್ತದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯಕ ಪೀಠೋಪಕರಣಗಳು ಮತ್ತು ವೈದ್ಯಕೀಯ ಸಲಕರಣೆಗಳನ್ನು ಖರೀದಿಸಬೇಕಾಗಿದ್ದು, ಇದಕ್ಕಾಗಿ ಒಟ್ಟು ರೂ.200=00 (ಇನ್ನೂರು ಲಕ್ಷ ರೂಗಳು ಮಾತ್ರ) ಭರಿಸಬೇಕಾಗಿದ್ದು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ದಿನಾಂಕ: 18-03-2011 ರ ಟಿಪ್ಪಣಿಯನ್ನು ಮಾರ್ಪಡಿಸುತ್ತಾ ಪೀಠೋಪಕರಣ ಮತ್ತು ವೈದ್ಯಕೀಯ ಸಲಕರಣೆಗಳನ್ನು ಖರೀದಿಸಲು ರೂ.200.00 ಲಕ್ಷ (ರೂ.ಇನ್ನೂರು ಲಕ್ಷ ಮಾತ್ರ) ಗಳನ್ನು 2011-2012 ರ ಆಯವ್ಯಯದಲ್ಲಿ ಕಾಯ್ದಿರಿಸಲು ಒಪ್ಪಿದೆ.**

## 3) ವಿಷಯದ ಸಂಖ್ಯೆ: ಸಾಆಸ್ಥಾಸ/20/10-11:

ಆಯುಕ್ತರ ಟಿಪ್ಪಣಿ ಸಂಖ್ಯೆ.ಮುಆ/ಎಸಿಟಿ/2/ಪಿಆರ್/1051/10-11, ದಿನಾಂಕ: 21-03-2011 ರಲ್ಲಿ ವಿವರಿಸಿರುವಂತೆ, ಎನ್.ವಿ.ಬಿ.ಡಿ.ಸಿ.ಪಿ. (ನ್ಯಾಷನಲ್ ವೆಕ್ಟರ್ ಬಾರ್ನ್ ಡೀಸಿಸ್ ಕಂಟ್ರೋಲ್ ಪ್ರೋಗ್ರಾಂ) ಯೋಜನಾ ಅಧಿಕಾರಿಗಳಾದ ಡಾ॥ ಲೋಕೇಶ್ ರವರು ದಿನಾಂಕ: 11-03-2011 ರಂದು ಒಂದು ವರದಿಯನ್ನು ನೀಡಿದ್ದು, ಬೃಬೆಂ.ಮ. ಪಾಲಿಕೆಯ ವ್ಯಾಪ್ತಿಯಲ್ಲಿ 27 ಆರೋಗ್ಯ ವೈದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ವಾರ್ಡ್ ಒಂದಕ್ಕೆ ಈ ಕೆಳಕಂಡಂತೆ ವಿವರಿಸಿರುವ ಸೊಳ್ಳೆ ನಾಶಕ ರಾಸಾಯನಿಕಗಳನ್ನು ಮತ್ತು ಫಾಗಿಂಗ್ ಮೆಷಿನ್ ಖರೀದಿಸಲು ಕೋರಿರುತ್ತಾರೆ.

| | | |
|---|---|---|
| (1) | ಬಿ.ಟಿ.ಐ. ರಾಸಾಯನಿಕ | - ರೂ ಒಂದು ಲಕ್ಷ ಮಿತಿ. |
| (2) | ಟಿಮಿಪೋಸ್ | - ರೂ ಒಂದು ಲಕ್ಷ ಮಿತಿ. |
| (3) | ಪೈರೇಥ್ರಂ | - ರೂ ಐವತ್ತು ಸಾವಿರ ಮಿತಿ. |
| (4) | ಟೆಕ್ನಿಕಲ್ ಮೆಲಾಥಿಯನ್ | - ರೂ ಐವತ್ತು ಸಾವಿರ ಮಿತಿ. |
| (5) | ಫಾಗಿಂಗ್ ಯಂತ್ರ-2 | - ರೂ ಒಂದು ಲಕ್ಷ ಮಿತಿ. |

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಆರೋಗ್ಯ ವೈದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ, ಮೇಲೆ ವಿವರಿಸಿರುವಂತೆ, ಸೊಳ್ಳೆ ನಿಯಂತ್ರಣ ರಾಸಾಯನಿಕಗಳನ್ನು ಹಾಗೂ ಫಾಗಿಂಗ್ ಯಂತ್ರಗಳನ್ನು ಕರ್ನಾಟಕ ಪಾರದರ್ಶಕ ನಿಯಮಾವಳಿ ರೀತ್ಯಾ ಆರೋಗ್ಯ ವೈದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ಖರೀದಿಸಲು ಮುಖ್ಯ ಆರೋಗ್ಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಹಿಂದಿನ 05 ವರ್ಷಗಳಲ್ಲಿ ಸೊಳ್ಳೆ ನಿಯಂತ್ರಣಕ್ಕಾಗಿ ರಾಸಾಯನಿಕಗಳ ಖರೀದಿಗೆ ಖರ್ಚು ಮಾಡಿರುವ ವಿವರಗಳು ಈ ಕೆಳಕಂಡಂತೆ ವಿವರಿಸಿದೆ.

| ಕ್ರಮ ಸಂಖ್ಯೆ | ವರ್ಷ | ಖರ್ಚಾದ ಮೊತ್ತ ರೂ ಗಳಲ್ಲಿ |
|---|---|---|
| 01 | 2005-06 | 19.21 ಲಕ್ಷ |
| 02 | 2006-07 | 51-00 ಲಕ್ಷ |
| 03 | 2007-08 | 83-14 ಲಕ್ಷ |
| 04 | 2008-09 | 93-96 ಲಕ್ಷ |
| 05 | 2009-10 | 274-00 ಲಕ್ಷ |
| 06 | 2010-11 (ನವೆಂಬರ್ 2011 ರವರೆಗೆ) | 204-42 ಲಕ್ಷ |

ಆದ್ದರಿಂದ 2010-11 ನೇ ಸಾಲಿನ ಆಯವ್ಯಯ ಮಾರ್ಚ್ 31 ಕ್ಕೆ ಮುಕ್ತಾಯವಾಗುವುದರಿಂದ, ಈ ಮೇಲ್ಕಂಡ ರಾಸಾಯನಿಕಗಳನ್ನು ಮತ್ತು ಫಾಗಿಂಗ್ ಯಂತ್ರವನ್ನು, ಆಯಾ ಆರೋಗ್ಯ ವೈದ್ಯಾಧಿಕಾರಿಗಳ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕ ನಿಯಮಾನುಸಾರ ಪ್ರಕ್ರಿಯೆ ಕೈಗೊಳ್ಳಲು ಹಾಗೂ ಖರೀದಿಸಲಾಗುವ ಸೊಳ್ಳೆ ನಾಶಕ ರಾಸಾಯನಿಕಗಳನ್ನು ಆರೋಗ್ಯ ವೈದ್ಯಾಧಿಕಾರಿಗಳ (ಸೊಳ್ಳೆ ನಿಯಂತ್ರಣ) ಕಛೇರಿಯ ದಾಸ್ತಾನು ಕೊಠಡಿಯಲ್ಲಿ ಶೇಖರಿಸಿ, ಇವುಗಳನ್ನು ಅವಶ್ಯಕತೆಯ ಮೇರೆಗೆ ಆರೋಗ್ಯ ವೈದ್ಯಾಧಿಕಾರಿಗಳು ಇಂಡೆಂಟ್ ಮುಖಾಂತರ ಸರಬರಾಜು ಪಡೆಯಬಹುದಾಗಿರುತ್ತದೆ.

ಈಗಾಗಲೇ 2010-11 ನೇ ಸಾಲಿನಲ್ಲಿ ಇದಕ್ಕಾಗಿ ಕಾದಿರಿಸಲಾದ ಮೊತ್ತ 400.00 (ನಾಲ್ಕು ಕೋಟಿ ರೂ ಮಾತ್ರ) ಗಳಲ್ಲಿ 5.00 (ಐದು ಲಕ್ಷ ರೂ ಮಾತ್ರ) ಉಳಿದಿರುತ್ತದೆ.

ಅಗತ್ಯವಿರುವ ಈ ರಾಸಾಯನಿಕಗಳನ್ನು ಖರೀದಿಸಲು ಆರೋಗ್ಯ ಇಲಾಖೆಯಲ್ಲಿ 2010-11 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪುಟ 46 ರ **P2165 Integrated Disease Surveillance Programme** ನಲ್ಲಿ 100.00 (ನೂರು ಲಕ್ಷ ರೂ ಗಳಲ್ಲಿ) ಉಳಿದಿರುವ ಮೊತ್ತದಲ್ಲಿ

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಭರಿಸಬೇಕಾಗಿದ್ದು, ಈ ವಿಷಯವನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ದಿನಾಂಕ: 25-03-2011 ರ ಟಿಪ್ಪಣಿಯನ್ನು ಒಪ್ಪುತ್ತಾ ಹಾಗೂ ಪ್ರಸ್ತುತ ಬೇಸಿಗೆಕಾಲ ಪ್ರಾರಂಭವಾಗಿದ್ದು, ಸಾಂಕ್ರಾಮಿಕಾ ರೋಗಗಳು ಹರಡುವ ಸಾಧ್ಯತೆಯಿರುವುದರಿಂದ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಮುನ್ನೆಚ್ಚರಿಕಾ ಕ್ರಮವಾಗಿ ಈ ಕೆಳಕಂಡ ಔಷಧಿಗಳನ್ನು ರೂ.1.00 ಲಕ್ಷ ಮಿತಿಯಲ್ಲಿಯೂ ರಾಸಾಯನಿಕಗಳಾದ ಬ್ಲೀಚಿಂಗ್ ಪೌಡರ್ ಮತ್ತು ಕಪ್ಪು ಪೆನಾಯಿಲ್‌ಗಳನ್ನು ತಲಾ ರೂ.50,000/- ರ ಮಿತಿಯಲ್ಲಿ ಪಾರದರ್ಶಕ ನಿಯಮಾವಳಿ ರೀತ್ಯಾ ಆಯಾ ವಲಯದ 27 ಆರೋಗ್ಯ ವೈದ್ಯಾಧಿಕಾರಿರವರ ವ್ಯಾಪ್ತಿಯಲ್ಲಿ ಈ ಹಿಂದೆ ಖರೀದಿಸಿರುವ ಮಾದರಿಯಲ್ಲಿಯೇ ಈ ಸಾಲಿಗೂ ಖರೀದಿಸಲು ಸಮಿತಿಯು ಅನುಮತಿ ನೀಡಲು ತೀರ್ಮಾನಿಸಲಾಯಿತು.**

**ORS Powder, Tab. Metronidazole, Tab. Ornidazole, Tab. Loperamide, Tab. Dicyclomine hydrochloride with paraletomol, Tab. Domperidone, Tab. Omeperzole 40 MG, Tab. Norfloxacin with Tinidazole, Halozone Tablets, Tab. Ciprofloxacin, Syp. Ciprofloxacin.**

## 4) ವಿಷಯದ ಸಂಖ್ಯೆ: ಸಾಆಸ್ಥಾಸ/21/10-11:

ಆಯುಕ್ತರ ಟಿಪ್ಪಣಿ ಸಂಖ್ಯೆ.ಉನಿ(ಪಪಾ)/ಪಿಆರ್/84/10-11, ದಿನಾಂಕ: 21-03-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂರು ವಧಾಗಾರಗಳು ಕಾರ್ಯ ನಿರ್ವಹಿಸುತ್ತಿವೆ (1) ನಾಗರೀಕ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಫ್ರೇಜರ್ ಟೌನ್, (2) ನಗರ ಮಾಂಸ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರ, ಉಸ್ಮಾನ್‌ಖಾನ್ ರಸ್ತೆ, (3) ನಾಗರೀಕ ಹಂದಿ ಮಾಂಸ ಉತ್ಪಾದನಾ ಕೇಂದ್ರ ಫ್ರೇಜರಟೌನ್ ಈ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಗುತ್ತಿಗೆಯನ್ನು ದಿನಾಂಕ: 01-

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

04-2011 ರಿಂದ 31-03-2012 ರವರೆಗೆ ಹೊಸದಾಗಿ ನಿಗದಿಪಡಿಸುವ ಸಲುವಾಗಿ ಟೆಂಡರ್ ಸಂಖ್ಯೆ. ಸಂ JD(AH)/Slaughterhouse/Tend/PR/1220-1223/10-11 ರಂತೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಕರೆಯಲಾಗಿತ್ತು.

ದಿನಾಂಕ: 08-03-2011 ರಂದು ಮಧ್ಯಾಹ್ನ 4.00 ಗಂಟೆಗೆ ನಗರ ಮತ್ತು ನಾಗರೀಕಾ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಆರ್ಥಿಕ ಬಿಡ್ಡನ್ನು ತೆರೆಯಲಾಗಿರುತ್ತದೆ.

(1) ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1220/10-11 ಕ್ಕೆ 3 ಜನ ಬಿಡ್ಡ್ ಸಲ್ಲಿಸಿದ್ದು, ಸದರಿ ಮೂರು ಜನ ಬಿಡ್ಡ್‌ದಾರರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರವಾಗಿದ್ದು, ಅವರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಟೆಂಡರ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 1 | ಶ್ರೀ ಬೆಂಗಳೂರು ಮಹ್ಮದ್ ಯೂಸಫ್ | 45,00,999/- |
| 2 | ಶ್ರೀ ಬಾಬು ಅಬ್ದುಲ್ ಅಜೀಜ್ | 43,99,787/- |
| 3 | ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 69,00,786/- |

(2) ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1221/10-11 ಕ್ಕೆ 6 ಜನ ಬಿಡ್ಡ್‌ನಲ್ಲಿ ಭಾಗವಹಿಸಿದ್ದು, ಈ 6 ಜನರಲ್ಲಿ 4 ಜನ ಬಿಡ್ಡ್‌ದಾರರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರಗೊಂಡಿರುತ್ತಾರೆ.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಅಂಗೀಕಾರಗೊಂಡಿರುವ** ಬಿಡ್ಡ್‌ದಾರರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಬಿಡ್ಡ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 1 | ಶ್ರೀ.ಎ.ಎಂ. ಭರ್ಖತುಲ್ಲಾ | 72,11,786/- |
| 2 | ಶ್ರೀ.ಫಿರ್‌ದೋಸ್ ರಾಜೆ | 76,29,786/- |
| 3 | ಶ್ರೀ.ಗೌಸ್ ಮೊಹಿದಿನ್ ಯೂಸಫ್ | 78,70,786/- |
| 4 | ಶ್ರೀ.ಮಿಸ್ಕೀನ್ ಮುಜೀಬ್ | 63,00,786/- |

**ತಿರಸ್ಕೃತಗೊಂಡವರ ಹೆಸರು** ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಟೆಂಡರ್‌ದಾರರ ಹೆಸರು |
|---|---|
| 1 | ಶ್ರೀ.ಭಾಬು ಅಬ್ದುಲ್ ಅಜೀಜ್ |
| 2 | ಶ್ರೀ.ಇಬ್ರಾಹಿಂ ಖುರೇಶಿ |

(3) ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1222/10-11 ಕ್ಕೆ 6 ಜನ ಬಿಡ್ಡ್‌ನಲ್ಲಿ ಭಾಗವಹಿಸಿದ್ದು, ಈ 6 ಜನರಲ್ಲಿ 4 ಜನ ಬಿಡ್ಡ್‌ದಾರರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರಗೊಂಡಿರುತ್ತಾರೆ.

**ಅಂಗೀಕಾರಗೊಂಡಿರುವ** ಬಿಡ್ಡ್‌ದಾರರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಬಿಡ್ಡ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 1 | ಶ್ರೀ.ಗೌಸ್ ಮೊಹಿದಿನ್ ಯೂಸಫ್ | 2,07,786/- |
| 2 | ಶ್ರೀ.ದಾವುದ್ ಮೊಹಮದ್ ಇಬ್ರಾಹಿಂ | 25,77,786/- |
| 3 | ಶ್ರೀ.ನಾಜಿರ್ ಲಿಯಾಜ್ ಅಹ್ಮದ್ | 27,25,786/- |
| 4 | ಶ್ರೀ.ಮಹಮದ್ ನಿಜಾಂ | 31,09,999.75/- |

B. S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ತಿರಸ್ಕೃತಗೊಂಡವರ ಹೆಸರು** ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಟೆಂಡರ್‌ದಾರರ ಹೆಸರು |
|---|---|
| 1 | ಶ್ರೀ.ಎ.ಎಂ. ಭರ್ಖತುಲ್ಲಾ |
| 2 | ಶ್ರೀ.ವಿಶ್ವನಾಥ ಎಂ ನಾಗಪ್ಪ |

(4) ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿಗಾಗಿ ಕರೆಯಲಾಗಿದ್ದ ಅಲ್ಪಾವಧಿ ಟೆಂಡರ್‌ನ ಸಂ. JD(AH)/Slaughterhouse/Tend/PR/1223/10-11 ಕ್ಕೆ ಒಬ್ಬರು ಬಿಡ್ಡ್ ಸಲ್ಲಿಸಿದ್ದು, ಇವರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಂಗೀಕಾರವಾಗಿದ್ದು, ಅವರ ಹೆಸರು ಹಾಗೂ ಅವರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

| ಕ್ರ. ಸಂ. | ಬಿಡ್ಡ್‌ದಾರರ ಹೆಸರು | ನಮೂದಿಸಿರುವ ಮೊತ್ತ ರೂ. |
|---|---|---|
| 1 | ಶ್ರೀ.ಆರ್. ಪ್ರಸನ್ನ | 1,35,000/- |

ನಗರ ಹಾಗೂ ನಾಗರೀಕ ವಧಾಗಾರಗಳಲ್ಲಿ ವಧಾಗಾರಗಳಲ್ಲಿ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾ ಶುಲ್ಕ ಸಂಗ್ರಹಿಸುವ ಹಕ್ಕಿನ ಚಾಲ್ತಿ ಗುತ್ತಿಗೆಯ ಟೆಂಡರ್ ಮೊತ್ತ, ಕರೆಯಲಾಗಿರುವ ಟೆಂಡರ್‌ನಲ್ಲಿ ಅಪೇಕ್ಷಿಸಲಾಗಿದ್ದ, ಟೆಂಡರ್ ಮೊತ್ತ ಹಾಗೂ ಹೊಸ ಟೆಂಡರ್‌ನಲ್ಲಿ ಟೆಂಡರ್‌ದಾರರು ನಮೂದಿಸಿರುವ ಮೊತ್ತ ಈ ಕೆಳಗಿನಂತೆ ಇರುತ್ತದೆ.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| ವಿವರ | ಪ್ರಸ್ತುತ ಟೆಂಡರ್‌ನ ಮೊತ್ತ | ಕರೆಯಲಾಗಿರುವ ಟೆಂಡರ್‌ನಲ್ಲಿ ಅಪೇಕ್ಷಿಸಲಾಗಿರುವ ಟೆಂಡರ್ ಮೊತ್ತ | ಕರೆಯಲಾಗಿರುವ ಟೆಂಡರ್‌ನಲ್ಲಿ ಟೆಂಡರ್‌ದಾರರು ನಮೂದಿಸಿರುವ ಮೊತ್ತ | |
|---|---|---|---|---|
| | | | ಹೆಸರು | ಮೊತ್ತ ರೂ. |
| ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 30,59,110/- | 33,65,020/- | 1) ಬೆಂಗಳೂರು ಮಹ್ಮದ್ ಯೂಸುಫ್<br>2) ಬಾಬು ಅಬ್ದುಲ್ ಅಜೀಜ್<br>3) ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 45,00,999/-<br>43,99,787/-<br>69,00,786/- |
| ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 56,45,250/- | 62,09,775/- | 1) ಎ.ಎಂ. ಫರ್ಖತುಲ್ಲಾ<br>2) ಫಿರದೋಸ್ ರಾಜೆ<br>3) ಗೌಸ್ ಮೊಹಿದಿನ್ ಯೂಸಫ್<br>4) ಗೌಸ್ ಮೊಹಿದಿನ್ ಯೂಸಫ್ | 72,11,786/-<br>76,29,786/-<br>78,70,786/-<br>63,00.786/- |
| ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 17,24,572/- | 18,97,030/- | 1) ಗೌಸ್ ಮೊಹಿದಿನ್ ಯೂಸಫ್<br>2) ದಾವುದ್ ಮೊಹಮದ್ ಇಬ್ರಾಹಿಂ<br>3) ನಾಜಿರ್ ರಿಯಾಜ್ ಅಹ್ಮದ್ ನಾಜಿರ್ ರಿಯಾಜ್ ಅಹ್ಮದ್<br>4) ಮಹಮದ್ ನಿಜಾಂ | 2,07,786/-<br>25,77,786/-<br>27,25,786/-<br>31,09,999.75/- |
| ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | 1,30,000/- | 1,43,000/- | ಆರ್. ಪ್ರಸನ್ನ | 1,35,000/- |

ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ಗೆ ಶ್ರೀ.ಆರ್. ಪ್ರಸನ್ನ ಇವರು ಒಬ್ಬರೆ ಟೆಂಡರ್ ಅನ್ನು ಸಲ್ಲಿಸಿದ್ದು, ಇವರು ನಮೂದಿಸಿದ ಮೊತ್ತ ರೂ.1,35,000/- ಟೆಂಡರ್‌ನಲ್ಲಿ ಅಪೇಕ್ಷಿಸಿದ ಮೊತ್ತ ರೂ.1,43,000/- ಗಳಿಗಿಂತ ಕಡಿಮೆ ಇದ್ದುದರಿಂದ ಸದರಿ ಟೆಂಡರ್‌ದಾರರನ್ನು ದರ ಸಂಧಾನಕ್ಕೆ ಕರೆಯಲಾಗಿದ್ದು, ಟೆಂಡರ್‌ದಾರರು ರೂ.1,43,040/- ಗಳಿಗೆ ಟೆಂಡರ್ ಅನ್ನು ನಿಗಧಿಗೊಳಿಸಲು ಲಿಖಿತವಾಗಿ ಒಪ್ಪಿಗೆಯನ್ನು ನೀಡಿರುತ್ತಾರೆ.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನಗರ ಮತ್ತು ನಾಗರೀಕ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ಗೆ ಅತೀ ಹೆಚ್ಚು ಟೆಂಡರ್ ಮೊತ್ತ ನಮೂದಿಸಿರುವ ಟೆಂಡರ್‌ದಾರರ ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ವಿವರ | ಟೆಂಡರ್‌ದಾರರ ಹೆಸರು | ಬಿಡ್ಡ್‌ನ ಮೊತ್ತ ರೂ. |
|---|---|---|---|
| 1 | ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ದೊಡ್ಡ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಕಾಸಿಂ ಇಜಾಜ್ ಅಹ್ಮದ್ ಖುರೇಶಿ | 60,00,786/- |
| 2 | ನಾಗರೀಕ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಗೌಸ ಮೊಹಿದಿನ್ ಯೂಸಫ್ | 78,70,786/- |
| 3 | ನಗರ ವಧಾಗಾರಕ್ಕೆ ವಧೆಗೆ ಬರುವ ಕುರಿ, ಮೇಕೆಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಮಹಮದ್ ನಿಜಾಂ | 31,09,999.75/- |
| 4 | ನಾಗರೀಕ ಹಂದಿ ವಧಾಗಾರಕ್ಕೆ ವಧೆಗೆ ಬರುವ ಹಂದಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕಿನ ಟೆಂಡರ್‌ನ ಮೊತ್ತ | ಆರ್. ಪ್ರಸನ್ನ | 1,43,040/- |

ಈ ಮೇಲೆ ತಿಳಿಸಿದ ಟೆಂಡರ್‌ದಾರರು ಇತರೆ ಟೆಂಡರ್‌ದಾರರಿಗಿಂತ ಹೆಚ್ಚು ಮೊತ್ತ ನಮೂದಿಸಿರುತ್ತಾರೆ ಹಾಗೂ ಟೆಂಡರ್‌ನಲ್ಲಿ ಅಪೇಕ್ಷಿಸಿದ ಮೊತ್ತಕ್ಕಿಂತಲು ಹೆಚ್ಚಿನ ಮೊತ್ತವನ್ನು ನಮೂದಿಸಿರುತ್ತಾರೆ. ಅಲ್ಲದೆ ಹೊಸ ಟೆಂಡರ್‌ನಲ್ಲಿ ನಮೂದಿಸಿರುವ ಟೆಂಡರ್ ಮೊತ್ತಗಳು ಚಾಲ್ತಿ ಟೆಂಡರ್‌ನ ಮೊತ್ತಕ್ಕಿಂತ ಹೆಚ್ಚಾಗಿ ಇರುವುದರಿಂದ ಮೇಲೆ ತಿಳಿಸಿರುವ ಟೆಂಡರ್‌ದಾರರಿಗೆ ಪಾಲಿಕೆಗೆ ಸೇರಿರುವ ನಗರ ಮತ್ತು ನಾಗರೀಕ ವಧಾಗಾರಗಳಿಗೆ ವಧೆಗೆ ಬರುವ ಪ್ರಾಣಿಗಳ ಪ್ರವೇಶ ಶುಲ್ಕ ಹಾಗೂ ವಧಾಶುಲ್ಕ ಸಂಗ್ರಹಿಸುವ ಹಕ್ಕನ್ನು ದಿನಾಂಕ: 01-04-2011 ರಿಂದ 31-03-2012 ರವರೆಗೆ ನೀಡುವ ಬಗ್ಗೆ

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಆದೇಶ ನೀಡಬೇಕಾಗಿರುವುದರಿಂದ ಅವರು ನಮೂದಿಸಿರುವ ಟೆಂಡರ್ ಮೊತ್ತವನ್ನು ಅಂಗೀಕರಿಸುವ ತೀರ್ಮಾನಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

ಪ್ರಸ್ತಾವನೆ ಮತ್ತು ಕಡತವನ್ನು ಪರಿಶೀಲಿಸಲಾಗಿ, ಕಡತವು ರ್‍ಯಾಪಿಡ್ ಆಕ್ಷನ್ ಟೀಂ ಕಂ ಸರ್ಜಿಕಲ್ ಘಟಕ ಪೂರ್ವ ವಲಯಕ್ಕೆ ಸಂಬಂಧಪಟ್ಟದ್ದಾಗಿದ್ದು, ಆಯುಕ್ತರ ದಿನಾಂಕ: 21-03-2011 ರ ಟಿಪ್ಪಣಿಯು ಪಾಲಿಕೆಯ ವಿವಿಧ (3) ವಧಾಗಾರ ಕೇಂದ್ರಗಳಿಗೆ ಬರುವ ಜಾನುವಾರುಗಳ ಪ್ರವೇಶ ಹಾಗೂ ವಧಾಶುಲ್ಕ ಸಂಗ್ರಹಣ ಟೆಂಡರ್‌ನ ಅಂಗೀಕರಿಸುವ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಮೂಲ ಕಡತದೊಂದಿಗೆ ಸಲ್ಲಿಸಲು ಸಮಿತಿಯು ನಿರ್ದೇಶನ ನೀಡಿ ಕಡತ ಹಿಂತಿರುಗಿಸಲು ನಿರ್ಧರಿಸಲಾಯಿತು.

B.S. [signature]

**(ಬಿ.ಎಸ್. ಮಂಜುನಾಥ ರೆಡ್ಡಿ)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# 2011–2012

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 19-03-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ: | | |
| ಬಿ.ಎಸ್. ಮಂಜುನಾಥ ರೆಡ್ಡಿ | ಅಧ್ಯಕ್ಷರು | ವೈ.ಎಂ. ರಾಮಚಂದ್ರಮೂರ್ತಿ, ಉಪ ಆಯುಕ್ತರು (ಆರೋಗ್ಯ) |
| ಹೆಚ್.ಎನ್. ಗಂಗಾಧರ | ಸದಸ್ಯರು | ಮಾರಿಯೋ ಪೈರೀಸ್, ಸಹಾಯಕ ಕೌನ್ಸಿಲ್ ಕಾರ್ಯದರ್ಶಿ |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | ಡಾ॥ ಕೆ.ಇ. ಮಂಜುಳ, ಆರೋಗ್ಯಾಧಿಕಾರಿ |
| ಕೆ. ರವೀಂದ್ರನ್ | ಸದಸ್ಯರು | ಡಾ॥ ಅಂಬಿಕಾ ಪಿ. ಅಧೀಕ್ಷಕರು (ಜೆ.ಜೆ.ಆರ್.) ರೆಫರಲ್ ಆಸ್ಪತ್ರೆ |
| ಶ್ರೀಮತಿ.ಕೆ. ನಂದಿನಿ ಶ್ರೀನಿವಾಸ್ | ಸದಸ್ಯರು | ಡಾ॥ ಸುರೇಶ ಜಿ.ಕೆ. ಆರೋಗ್ಯ ವೈದ್ಯಾಧಿಕಾರಿ (ತಾ.ಮ.ಕು.ಕ.) (ಪ್ರಭಾರ-ಮುಖ್ಯ ಆರೋಗ್ಯಾಧಿಕಾರಿಗಳ ಕೇಂದ್ರಿಯ ಸ್ಥಾನಿಕ ಸಹಾಯಕರು) |
| ಸಿ.ಎಸ್. ರಾಧಕೃಷ್ಣ | ಸದಸ್ಯರು | ಬಿ.ವಿ. ಸತೀಶ್, ಮುಖ್ಯ ಅಭಿಯಂತರರು (ಎಸ್.ಡಬ್ಲು.ಎಂ) |
| ಎಸ್. ನಟರಾಜ್ | ಸದಸ್ಯರು | ಜೀವನಪಾಲ್, ಅಧೀಕ್ಷಕ ಅಭಿಯಂತರರು (ರಾ.ರಾ. ನಗರ) |
| | | ಯು. ಕೃಷ್ಣಮೂರ್ತಿ, ಪರಿಸರ ಅಧಿಕಾರಿ (ರಾ.ರಾ. ನಗರ) |
| ಗೈರು ಹಾಜರಾದ ಸದಸ್ಯರು: | | |
| ಡಾ॥ ಎಂ.ಎಸ್. ಶಿವಪ್ರಸಾದ್ | ಸದಸ್ಯರು | |
| ಕೆ.ಎಲ್. ತಿಮ್ಮನಂಜಯ್ಯ | ಸದಸ್ಯರು | |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಶ್ರೀಮತಿ.ಪಿ. ಸೌಮ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1) **ವಿಷಯದ ಸಂಖ್ಯೆ: ಸಾಆಸ್ಥಾಸ/15/10-11:**

ಆಯುಕ್ತರ ಟಿಪ್ಪಣಿ ಸಂಖ್ಯೆ.ಮು.ಆ./ಪಿಆರ್/1235/10-11, ದಿನಾಂಕ: 23-02-2011 ರಲ್ಲಿ ವಿವರಿಸಿರುವಂತೆ, ಶ್ರೀ.ಬಿ.ಜೆಡ್. ಜಮೀರ ಅಹ್ಮದ್ ಖಾನ್, ಮಾನ್ಯ ಶಾಸಕರು, ಚಾಮರಾಜಪೇಟೆ ಮತ ಕ್ಷೇತ್ರ, ರವರು ಮನವಿ ಸಲ್ಲಿಸಿದ್ದು, ಚಾಮರಾಜ ಪೇಟೆ ಮತ ಕ್ಷೇತ್ರದ ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಜೆ.ಜೆ.ಆರ್. ನಗರ ರೆಫರೆಲ್ ಆಸ್ಪತ್ರೆ ಮತ್ತು ಇದರ ಖಾಲಿ ನಿವೇಶನವನ್ನು ಸರ್ಕಾರದ ಕುಟುಂಬ ಕಲ್ಯಾಣ ಇಲಾಖೆಗೆ ಒಪ್ಪಿಸಿದಲ್ಲಿ ಸರ್ಕಾರದ ವತಿಯಿಂದ ಈ ಸ್ಥಳದಲ್ಲಿ ಸುಸಜ್ಜಿತ ಆಸ್ಪತ್ರೆಯನ್ನಾಗಿ ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದೆಂದು ಕೋರಿರುತ್ತಾರೆ.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಧೀಕ್ಷಕರು ಜೆ.ಜೆ. ನಗರ ರೆಫರೆಲ್ ಆಸ್ಪತ್ರೆ ಮತ್ತು ಮುಖ್ಯ ಆರೋಗ್ಯಾಧಿಕಾರಿಗಳು, ಜೆ.ಜೆ.ಆರ್. ನಗರ ರೆಫರೆಲ್ ಆಸ್ಪತ್ರೆಯು ಈಗಾಗಲೇ ಉತ್ತಮ ಆಸ್ಪತ್ರೆಯಾಗಿ ರೂಪುಗೊಂಡಿದ್ದು, ತಾಯಿ ಮತ್ತು ಮಕ್ಕಳ ಆಸ್ಪತ್ರೆಯಾಗಿ ಜನಮೆಚ್ಚುವ ಕೆಲಸವನ್ನು ನಿರ್ವಹಿಸುತ್ತಿದ್ದು, ಇದರ ಆವರಣದಲ್ಲಿ ಪಾಲಿಕೆಯ ವತಿಯಿಂದಲೇ ಕಟ್ಟಡ ನಿರ್ಮಾಣ ಮಾಡಿ ವಿವಿಧ ವಿಭಾಗದ ವೈದ್ಯರುಗಳನ್ನು ನಿಯೋಜಿಸಿ, ಇನ್ನಿತರೆ ಸಲಕರಣೆಗಳನ್ನು ಖರೀದಿಸಿ ಸಾರ್ವಜನಿಕ ಆಸ್ಪತ್ರೆಯಾಗಿ ರೂಪಿಸಲು ಕ್ರಮವಹಿಸಬಹುದೆಂದು ಸಲಹೆ ನೀಡಿರುವ ಮೇರೆಗೆ, ಇಲ್ಲಿನ ಪ್ರದೇಶದ ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಸದರಿ ಪ್ರಸ್ತಾವನೆಯ ಬಗ್ಗೆ, ಹಾಗೂ 2011-12 ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಈ ಪ್ರಸ್ತಾವನೆಯನ್ನು ಸೇರಿಸಿಕೊಳ್ಳಲು ತೀರ್ಮಾನಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ:</u>

**ದಿನಾಂಕ: 03-03-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

**2) <u>ವಿಷಯದ ಸಂಖ್ಯೆ: ಸಾಆಸ್ಥಾಸ/16/10-11:</u>**

ಆಯುಕ್ತರ ಟಿಪ್ಪಣಿ ಸಂಖ್ಯೆ.ಮು.ಆ./ಪಿಆರ್/2671/10-11, ದಿನಾಂಕ: 09-02-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ.65 ರ ಕಾಡು ಮಲ್ಲೇಶ್ವರಂ ಆರೋಗ್ಯ ಕೇಂದ್ರಕ್ಕಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿದ್ದು, ಸ್ಥಳೀಯ ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಈ ಕಟ್ಟಡದಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡಲು ಈ ಕೆಳಕಂಡಂತೆ ಆದೇಶಗಳು ಮತ್ತು ಮೂಲಭೂತ ಸೌಕರ್ಯಗಳು ಬೇಕಾಗಿರುತ್ತದೆ. ಪ್ರಾರಂಭಿಸಬಹುದಾದ ಆರೋಗ್ಯ ಘಟಕಕ್ಕೆ ವೈದ್ಯರುಗಳನ್ನು ಮತ್ತು ಸಿಬ್ಬಂದಿಗಳನ್ನು ನೇಮಿಸಬೇಕಾಗಿದ್ದು, ಈಗಾಗಲೇ ಪಾಲಿಕೆಯಲ್ಲಿ ವೈದ್ಯರುಗಳ ಮತ್ತು ಸಿಬ್ಬಂದಿಗಳ ಕೊರತೆಯಿರುತ್ತದೆ. ಆದರೂ ಹಾಲಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು/ಸಿಬ್ಬಂದಿಗಳನ್ನೇ ಸೀಮಿತವಾಗಿ ನೇಮಿಸಬಹುದಾಗಿದೆ ಅಥವಾ ಈ ಮೇರೆಗೆ ಒಪ್ಪಿದಲ್ಲಿ

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪಾಲಿಕೆಯಲ್ಲಿ ವೈದ್ಯರುಗಳ ನೇಮಕವಾಗುವವರೆಗೂ ಆಸಕ್ತ ಎನ್.ಜಿ.ಓ. ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಆಸ್ಪತ್ರೆಯನ್ನು ನಡೆಸಬಹುದಾಗಿದೆ. ಈ ಮೇರೆಗೆ ಈ ಕೆಳಕಂಡ ಅಂಶಗಳ ಬಗ್ಗೆ ಸಮಿತಿಯ ತೀರ್ಮಾನಕ್ಕಾಗಿ ಸಲ್ಲಿಸಿದೆ.

(1) ಈ ಕಟ್ಟಡವನ್ನು ಆಸ್ಪತ್ರೆಯೆಂದು ಘೋಷಣೆ ಮಾಡುವ ಬಗ್ಗೆ.

(2) ಎನ್.ಜಿ.ಓ. ಜೊತೆಗೆ ಒಡಂಬಡಿಕೆ ಮಾಡಿಕೊಂಡು ಸದರಿ ಆಸ್ಪತ್ರೆಯ ನಿರ್ವಹಣೆಯನ್ನು ವಹಿಸುವ ಬಗ್ಗೆ.

(3) ಆಸ್ಪತ್ರೆಗೆ ಅಗತ್ಯ ಸಲಕರಣೆಗಳನ್ನು ಖರೀದಿಸುವ ಬಗ್ಗೆ.

ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಮೇಲ್ಕಂಡ ಅಂಶಗಳನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿ ಮಂಡಿಸಿದೆ.

ನಿರ್ಣಯ:

**ಆಯುಕ್ತರ ದಿನಾಂಕ: 09-02-2011 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿದೆ.**

ಮಾರ್ಪಾಡುಗಳು:

(1) **ಕಟ್ಟಡವನ್ನು ಆಸ್ಪತ್ರೆಯೆಂದು ಘೋಷಣೆ ಮಾಡಲು ಒಪ್ಪಿದೆ.**

(2) **ಸದರಿ ಆಸ್ಪತ್ರೆಗೆ ಪಾಲಿಕೆಯ ವೈದ್ಯರು/ಸಿಬ್ಬಂದಿಗಳನ್ನೇ ಸೀಮಿತವಾಗಿ ನಿಯೋಜಿಸಿ ನಿರ್ವಹಣೆ ಮಾಡಲು ಒಪ್ಪಿದೆ.**

(3) **ಯೋಜನಾಸಮನ್ವಯಾಧಿಕಾರಿ (ಆರ್.ಸಿ.ಹೆಚ್.) ರವರು ಆಸ್ಪತ್ರೆಯ ಅಗತ್ಯ ಸಲಕರಣೆಗಳನ್ನು ಖರೀದಿಸುವ ಸಂಬಂಧ ಟೆಂಡರ್ ಕರೆದು ಕಡತವನ್ನು ಜರೂರಾಗಿ ಸಮಿತಿ ಮುಂದೆ ಮಂಡಿಸಲು ಒಪ್ಪಿದೆ.**

B. S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

3) **ವಿಷಯದ ಸಂಖ್ಯೆ: ಸಾಆಸ್ಥಾಸ/17/10-11:**

ಆಯುಕ್ತರ ದಿನಾಂಕ: 10-03-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಕಸ ವಿಲೇವಾರಿ 30 ಪ್ಯಾಕೇಜ್‌ಗಳ ಸೇವಾ ಗುತ್ತಿಗೆಗಳನ್ನು ದಿನಾಂಕ: 13-01-2011 ರ ಪಾಲಿಕೆ ಸಭೆಯ ವಿಷಯ ಸಂಖ್ಯೆ: 8 (192)/2010-11 ರಲ್ಲಿ ಮೂರು ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲಾಗಿತ್ತು ಹಾಗೂ ಹೊಸದಾಗಿ ಟೆಂಡರ್ ಕರೆಯಲು ಟೆಂಡರ್ ದಸ್ತಾವೇಜುಗಳ ರೂಪುರೇಷುಗಳಿಗೆ ದಿನಾಂಕ: 13-01-2011 ಪಾಲಿಕೆ ಸಭೆಯ ವಿಷಯ ಸಂಖ್ಯೆ: 5 (189)/2010-11 ರಲ್ಲಿ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿರುತ್ತದೆ.

ಇದೇ ಸಂದರ್ಭದಲ್ಲಿ ಟೆಂಡರ್‌ನಲ್ಲಿ ಏಕವ್ಯಕ್ತಿಗೆ ಅವಕಾಶವಿಲ್ಲದಿರುವುದರಿಂದ ಕೆಲವು ಗುತ್ತಿಗೆದಾರರು ದಿನಾಂಕ: 05-02-2011 ಪಾಲಿಕೆ ಸಭೆಯ ನಿರ್ಣಯದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಿ ಟೆಂಡರ್ ಕರೆಯಲು ತಡೆಯಾಜ್ಞೆ ತಂದಿದ್ದರಿಂದ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು.

ಸದರಿ ತಡೆಯಾಜ್ಞೆಯು ದಿನಾಂಕ: 28-02-2011 ರಂದು ತೆರವುಗೊಂಡಿದ್ದು, ಮಾರ್ಪಾಡು ಮಾಡಿದ ಟೆಂಡರ್ ದಸ್ತಾವೇಜುಗಳಿಗೆ ಸರ್ಕಾರದ ಒಪ್ಪಿಗೆ ಪಡೆದು ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲು ಕನಿಷ್ಠ ಪಕ್ಷ ಒಂದರಿಂದ ಎರಡು ತಿಂಗಳ ಕಾಲಾವಕಾಶ ಬೇಕಾಗಿರುತ್ತದೆ. ಇದೇ ಸಂದರ್ಭದಲ್ಲಿ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳ ಕಸ ವಿಲೇವಾರಿ 30 ಪ್ಯಾಕೇಜ್‌ಗಳ ಸೇವಾ ಗುತ್ತಿಗೆಗಳ ಮುಂದುವರೆದ ಅವಧಿ ದಿನಾಂಕ: 31-03-2011 ರಂದು ಮುಗಿಯಲಿದ್ದು ಹಾಲೀ ಗುತ್ತಿಗೆಗಳನ್ನು ಮುಂದುವರೆಸುವ ಅಗತ್ಯವಿರುತ್ತದೆ.

ಈ ಮಧ್ಯೆ ದಿನಾಂಕ: 13-01-2011 ರ ಪಾಲಿಕೆ ಸಭೆಯ ವಿಷಯ ಸಂಖ್ಯೆ: 8 (192)/2010-11 ರಲ್ಲಿ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿನ ಹಾಲಿ ಸೇವಾ ಪ್ಯಾಕೇಜ್‌ಗಳ ಗುತ್ತಿಗೆಗಳನ್ನು ಮೂರು ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಿಕೊಂಡು ಹೋಗುವ ಕಡತವನ್ನು ಕೆ.ಎಂ.ಸಿ. ಕಾಯ್ದೆ, ರೂಲ್-51 ರ

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅಡಿಯಲ್ಲಿ ಪಾಲಿಕೆ ಸಭೆಯ ಮುಂದೆ ಮರು ಮಂಡಿಸಲು ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಾದ ಶ್ರೀ.ಪದ್ಮನಾಭ ರೆಡ್ಡಿ ರವರು ಕೋರಿದ್ದು, ಕಡತವನ್ನು ಪಾಲಿಕೆಯ ಸಭೆಯ ಮುಂದೆ ಮರುಮಂಡಿಸಿದೆ.

ತದನಂತರ ಹಾಲಿ ಇರುವ 30 ಸೇವಾ ಪ್ಯಾಕೇಜ್‌ಗಳ ಗುತ್ತಿಗೆಗಳ ಮುಂದುವರೆದ ಅವಧಿ ದಿನಾಂಕ: 31-03-2011 ರಂದು ಮುಕ್ತಾಯವಾಗುವುದರಿಂದ ಪುನ: ಗುತ್ತಿಗೆಗಳನ್ನು ದಿನಾಂಕ: 01-04-2011 ರಿಂದ ಮತ್ತೆ 03 (ಮೂರು) ತಿಂಗಳ ಅವಧಿಯವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿ ಮಂಡಿಸಿದೆ.

ನಿರ್ಣಯ:

**ದಿನಾಂಕ: 10-03-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## 4) ವಿಷಯದ ಸಂಖ್ಯೆ: ಸಾಆಸ್ಥಾಸ/18/10-11:

ಆಯುಕ್ತರ ದಿನಾಂಕ: 10-02-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ಪತ್ರೆಗಳಲ್ಲಿ "ಪ್ರಿವೆಂಟೀವ್ ಹೆಲ್ತ್ ಕೇರ್" ಯೋಜನೆಯನ್ನು ಹಮ್ಮಿಕೊಳ್ಳಬಹುದಾಗಿದ್ದು, ಪ್ರಾಯೋಗಿಕವಾಗಿ ಮೊದಲನೇ ಹಂತದಲ್ಲಿ ವಾರ್ಡ್ ನಂ.68 ಗೆಳೆಯರ ಬಳಗ ಮತ್ತು ವಾರ್ಡ್ ನಂ.108-ರಾಜಾಜಿನಗರ ರಲ್ಲಿ "ಪ್ರಿವೆಂಟೀವ್ ಕಾರ್ಡಿಯಾಲಜಿ" ಯೋಜನೆಯನ್ನು ತದನಂತರ "ಪ್ರಿವೆಂಟೀವ್ ಹೆಲ್ತ್ ಕೇರ್" ಯೋಜನೆಯನ್ನು ಹಮ್ಮಿಕೊಳ್ಳಬಹುದಾಗಿರುತ್ತದೆ.

ಸದರಿ "ಪ್ರಿವೆಂಟೀವ್ ಕಾರ್ಡಿಯಾಲಜಿ" ಯೋಜನೆಯು (ಸಿ.ಟಿ.ಪಿ.ಹೆಚ್.ಸಿ.ಎಫ್.) ಕ್ಯಾಮ್‌ಹ್ಯಾಡ್ ಟ್ರೈಸೆಕ್ಟರ್ ಪ್ರಿವೆಂಟೀವ್ ಹೆಲ್ತ್‌ಕೇರ್ ಫೌಂಡೇಶನ್, ಪೆನೇಶೀಯ ಆಸ್ಪತ್ರೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಈ 3 ಸಂಸ್ಥೆಗಳನ್ನೊಳಗೊಂಡು ಹಾಗೂ ಜನ ಪ್ರತಿನಿಧಿಗಳೊಂದಿಗೆ ಸಮುದಾಯ ಸಹಭಾಗಿತ್ವದ ಅಡಿಯಲ್ಲಿ ಯೋಜನೆಯನ್ನು ಮೊದಲ ಹಂತದಲ್ಲಿ ಪ್ರಾರಂಭಿಸಲಾಗುವುದು.

B. S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಸದರಿ ಯೋಜನೆಗೆ ಅವಶ್ಯಕ ಸಿಬ್ಬಂದಿಯರನ್ನು ಈ ಕೆಳಕಂಡಂತೆ ಪೆನೇಲಿಯ ಆಸ್ಪತ್ರೆಯವರಿಂದ ಒದಗಿಸಲಾಗುವುದು.

- ವೈದ್ಯರು-1
- ಸ್ಟಾಫ್ ನರ್ಸ-2
- ಆಡಳಿತಾತ್ಮಕ ಸಿಬ್ಬಂದಿ/ಡಾಟಾ ಎಂಟ್ರಿ ಆಪರೇಟರ್-1

ಯೋಜನೆಗೆ ಅವಶ್ಯಕವಿರುವ ಸಲಕರಣೆ ಮತ್ತು ಲೇಖನ ಸಾಮಗ್ರಿಗಳನ್ನು ಅಂದರೆ ಗ್ಲೂಕೋಮೀಟರ್/ಬಿ.ಪಿ. ಆಪರೇಟಿಸ್/ಕೇಸ್‌ಶೀಟ್ಸ್/ರೆಫರಲ್‌ಕಾರ್ಡ್ ಇತ್ಯಾದಿಗಳನ್ನು ಸಹ ಪೆನೇಲಿಯ ಆಸ್ಪತ್ರೆಯವರು ಒದಗಿಸುವವರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಯೋಜನೆಗೆ ಅವಶ್ಯವಿರುವ ಪ್ರಯೋಗಶಾಲೆಯ ರಿಏಜೆಂಟ್ಸ್ ಮತ್ತು ಅವಶ್ಯಕ ಔಷಧಿಗಳನ್ನು ಹಾಗೂ ಓರ್ವ ಯೋಜನಾ ಸಮನ್ವಯಾಧಿಕಾರಿ, 1 ಗ್ರೂಪ್-ಡಿ ನೌಕರರನ್ನು ಒದಗಿಸಲಾಗುವುದು.

ತಪಾಸಣೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಅಗತ್ಯವಿರುವ ರೋಗಿಗಳಿಗೆ ಪಾಲಿಕೆಯು ಹಮ್ಮಿಕೊಳ್ಳುತ್ತಿರುವ ಧೀನದಯಾಳು ಸುವರ್ಣ ಆರೋಗ್ಯಶ್ರೀ ಯೋಜನೆ ಅಡಿಯ ಆಸ್ಪತ್ರೆಗಳ ಪ್ಯಾನಲ್‌ನಲ್ಲಿ ಪೆನೇಲಿಯ ಆಸ್ಪತ್ರೆರವರು ಇರುತ್ತಾರೆ. ತತ್ಸಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಕಡತದ ಪರಿಶೀಲನೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿ ಮಂಡಿಸಿದೆ.

**ನಿರ್ಣಯ:**

ಮುಂದೂಡಿದೆ.

B. S. [signature]

**(ಬಿ.ಎಸ್. ಮಂಜುನಾಥ ರೆಡ್ಡಿ)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 11-03-2011 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ: | | |
| ಬಿ.ಎಸ್. ಮಂಜುನಾಥ ರೆಡ್ಡಿ | ಅಧ್ಯಕ್ಷರು | ಮುಖ್ಯ ಅಭಿಯಂತರರು (ಘನತ್ಯಾಜ್ಯ ವಸ್ತು ವಿಲೇವಾರಿ) |
| ಡಾ|| ಎಂ.ಎಸ್. ಶಿವಪ್ರಸಾದ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು |
| ಹೆಚ್.ಎನ್. ಗಂಗಾಧರ | ಸದಸ್ಯರು | ಪರಿಸರ ಅಭಿಯಂತರರು |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಶ್ರೀಮತಿ.ಕೆ. ನಂದಿನಿ ಶ್ರೀನಿವಾಸ್ | ಸದಸ್ಯರು | |
| ಕೆ.ಎಲ್. ತಿಮ್ಮನಂಜಯ್ಯ | ಸದಸ್ಯರು | |
| ಸಿ.ಎಸ್. ರಾಧಕೃಷ್ಣ | ಸದಸ್ಯರು | |
| ಎಸ್. ನಟರಾಜ್ | ಸದಸ್ಯರು | |
| ಶ್ರೀಮತಿ.ಇರ್ಷಾದ್ ಬೇಗಂ | ಸದಸ್ಯರು | |
| ಶ್ರೀಮತಿ.ಪಿ. ಸೌಮ್ಯ | ಸದಸ್ಯರು | |
| ಗೈರು ಹಾಜರಾದ ಸದಸ್ಯರುಗಳು: | | |
| ಶ್ರೀ.ಕೆ. ರವೀಂದ್ರನ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1) **ವಿಷಯದ ಸಂಖ್ಯೆ: ಸಾಆಸ್ಥಾಸ/14/10-11:**

ಆಯುಕ್ತರ ದಿನಾಂಕ: 11-03-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ಹಾಗೂ ಎಲ್ಲಾ ವಲಯಗಳ ಕಸ ವಿಲೇವಾರಿ 30 ಪ್ಯಾಕೇಜ್‌ಗಳ ಸೇವಾ ಗುತ್ತಿಗೆಗಳನ್ನು ದಿನಾಂಕ: 13-01-2011 ರ ಪಾಲಿಕೆ ಸಭೆಯ ವಿಷಯ ಸಂಖ್ಯೆ: 8 (192)/2010-11 ರಲ್ಲಿ ಮೂರು ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲಾಗಿತ್ತು ಹಾಗೂ ಹೊಸದಾಗಿ ಎಲ್ಲಾ ವಲಯಗಳ ಟೆಂಡರ್ ಕರೆಯಲು ಟೆಂಡರ್ ದಸ್ತಾವೇಜುಗಳ

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ರೂಪುರೇಷುಗಳಿಗೆ ದಿನಾಂಕ: 13-01-2011 ಪಾಲಿಕೆ ಸಭೆಯ ವಿಷಯ ಸಂಖ್ಯೆ: 5 (189)/2010-11 ರಲ್ಲಿ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿರುತ್ತದೆ.

ಇದೇ ಸಂದರ್ಭದಲ್ಲಿ ಟೆಂಡರ್‌ನಲ್ಲಿ ಏಕವ್ಯಕ್ತಿಗೆ ಅವಕಾಶವಿಲ್ಲದಿರುವುದರಿಂದ ಕೆಲವು ಗುತ್ತಿಗೆದಾರರು ದಿನಾಂಕ: 05-02-2011 ಪಾಲಿಕೆ ಸಭೆಯ ನಿರ್ಣಯದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಿ ಟೆಂಡರ್ ಕರೆಯಲು ತಡೆಯಾಜ್ಞೆ ತಂದಿದ್ದರಿಂದ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿತ್ತು.

ಟೆಂಡರ್‌ನಲ್ಲಿ ಏಕವ್ಯಕ್ತಿಗೆ ಭಾಗವಹಿಸಲು ಅವಕಾಶ ಕಲ್ಪಿಸುವುದಾಗಿ ತಿಳಿಸಿರುವುದರಿಂದ, ಸದರಿ ತಡೆಯಾಜ್ಞೆಯು ದಿನಾಂಕ: 28-02-2011 ರಂದು ನ್ಯಾಯಾಲಯದಲ್ಲಿ ತೆರವುಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಟೆಂಡರ್ ದಸ್ತಾವೇಜಿನಲ್ಲಿ ಏಕವ್ಯಕ್ತಿಗೆ ಅವಕಾಶ ಕಲ್ಪಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರಂತೆ Standard Tender Document ರೀತ್ಯಾ ಟೆಂಡರ್ ದಸ್ತಾವೇಜನ್ನು ತಯಾರಿಸಲಾಗಿದ್ದು, ಮಾರ್ಪಾಡು ಮಾಡಿದ ಟೆಂಡರ್ ದಸ್ತಾವೇಜನ್ನು ಕಾನೂನುಕೋಶದ ಮುಖ್ಯಸ್ಥರಿಗೆ ಸಲ್ಲಿಸಲಾಗಿರುತ್ತದೆ. ಟೆಂಡರ್ ದಸ್ತಾವೇಜನ್ನು ನಿಯಮಾನುಸಾರ ತಯಾರಿಸಿರುವುದರಿಂದ ಕಾನೂನು ಅಡಿಯಲ್ಲಿ ಮುಂದಿನ ಸೂಕ್ತ ಕ್ರಮತೆಗೆದುಕೊಳ್ಳಲು ಸದರಿರವರು ಸೂಚಿಸಿರುತ್ತಾರೆ. ಆದುದರಿಂದ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆಯಲು ಈ ಕೆಳಕಂಡಂತೆ ಕ್ರಮಕೈಗೊಳ್ಳಬೇಕಾಗಿರುತ್ತದೆ.

(1) ವಲಯದ ಅಧೀಕ್ಷಕ ಅಭಿಯಂತರವರ ಉಸ್ತುವಾರಿಯಲ್ಲಿ ಟೆಂಡರ್ ಆಹ್ವಾನಿಸುವುದು.

(2) ಪ್ರತಿಯೊಂದು ಉಪ ವಿಭಾಗದ ಎರಡು ಅಥವಾ ಮೂರು ವಾರ್ಡುಗಳಿಗೆ ಒಂದು ಪ್ಯಾಕೇಜಿನಂತೆ ಟೆಂಡರ್ ಅಹ್ವಾನಿಸುವುದು.

(3) 30 ದಿನ ನಿಗದಿಪಡಿಸಿ ಅಲ್ಪಾವಧಿ ಟೆಂಡರ್ ಅಹ್ವಾನಿಸುವುದು.

(4) ಎಲ್ಲಾ ವಲಯಗಳಲ್ಲಿ ಏಕಕಾಲಕ್ಕೆ ಟೆಂಡರ್ ಅಹ್ವಾನಿಸುವುದು.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

(5) ಮೆಕಾನಿಕಲ್ ಸ್ವೀಪಿಂಗ್ ಪ್ಯಾಕೇಜನ್ನು ವಲಯಕ್ಕೆ ಒಂದರಂತೆ ಟೆಂಡರ್ ಅಹ್ವಾನಿಸುವುದು.

ಈ ಹಿನ್ನಲೆಯಲ್ಲಿ ಸದರಿ ಮಾರ್ಪಾಡುಗಳನ್ನು ಅಳವಡಿಸಿಕೊಂಡು ಸರ್ಕಾರದ ಅನುಮೋದನೆ ನಿರೀಕ್ಷಿಸಿ ಅಲ್ಪಾವಧಿ ಟೆಂಡರ್ ಕರೆಯಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುವ ಟಿಪ್ಪಣಿ.

<u>ನಿರ್ಣಯ</u>:

ಸಮಿತಿಯು ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿ ಆಯುಕ್ತರ ದಿನಾಂಕ: 11-03-2011 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಟಿಪ್ಪಣಿಯನ್ನು ಒಪ್ಪಲಾಗಿದೆ.

**ಮಾರ್ಪಾಡುಗಳು**:

(1) ಗುತ್ತಿಗೆ ಪಡೆದವರು ಕಾರ್ಯನಿರ್ವಹಿಸಲು ನೇಮಿಸಿಕೊಳ್ಳುವ ನೌಕರರಲ್ಲಿ ಶೇಕಡ 50 ರ ಅನುಪಾತದಲ್ಲಿ ಮಹಿಳಾ ಮತ್ತು ಪುರುಷ ನೌಕರರೊಂದಿಗೆ ಕಾರ್ಯನಿರ್ವಹಿಸುವುದು.

(2) ವಾರ್ಡ್‌ನಲ್ಲಿ ಬರುವ ಕನಿಷ್ಠ 0.6 ಮೀಟರ್ ಅಗಲವಿರುವ ಎಲ್ಲಾ ಚರಂಡಿಗಳಲ್ಲಿ ಮತ್ತು ಮನೆಯ ಮುಂಭಾಗದಲ್ಲಿರುವ ಭಾಗಶಃ ಕಲ್ಲು ಚಪ್ಪಡಿಯ ಕೆಳಗೆ ನೀರು ಸರಾಗವಾಗಿ ಹರಿಯುವಂತೆ ಮಾಡಿ ಸ್ವಚ್ಛಗೊಳಿಸುವ ಕೆಲಸವನ್ನು ನಿರ್ವಹಿಸುವುದು.

B.S. [signature]

**(ಬಿ.ಎಸ್. ಮಂಜುನಾಥ ರೆಡ್ಡಿ)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 08-02-2011 ರಂದು ನಡೆದ ಸಭೆಯ ನಡವಳಿಗಳು.

| **ಹಾಜರಿದ್ದ ಸದಸ್ಯರು** | | **ಹಾಜರಿದ್ದ ಅಧಿಕಾರಿಗಳು** |
|---|---|---|
| **ಶ್ರೀಯುತರುಗಳಾದ:** | | |
| ಬಿ.ಎಸ್. ಮಂಜುನಾಥ ರೆಡ್ಡಿ | ಅಧ್ಯಕ್ಷರು | ಅಪರ ಆಯುಕ್ತರು (ಆರೋಗ್ಯ) |
| ಡಾ.ಎಂ.ಎಸ್. ಶಿವಪ್ರಸಾದ್ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಹೆಚ್.ಎನ್. ಗಂಗಾಧರ | ಸದಸ್ಯರು | ಆರೋಗ್ಯ ವೈಧ್ಯಾಧಿಕಾರಿ (ತಾಮಕುಕ) |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |
| ಕೆ. ರವೀಂದ್ರನ್ | ಸದಸ್ಯರು | |
| ಶ್ರೀಮತಿ.ಕೆ. ನಂದಿನಿ ಶ್ರೀನಿವಾಸ್ | ಸದಸ್ಯರು | |
| ಕೆ.ಎಲ್. ತಿಮ್ಮನಂಜಯ್ಯ | ಸದಸ್ಯರು | |
| ಸಿ.ಎಸ್. ರಾಧಕೃಷ್ಣ | ಸದಸ್ಯರು | |
| ಎಸ್. ನಟರಾಜ್ | ಸದಸ್ಯರು | |
| ಶ್ರೀಮತಿ ಇರ್ಷಾದ್ ಬೇಗಂ | ಸದಸ್ಯರು | |
| ಶ್ರೀಮತಿ.ಪಿ ಸೌಮ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1) **ವಿಷಯದ ಸಂಖ್ಯೆ: ಸಾಆಸ್ಥಾಸ/11/10-11:**

ವಾರ್ಡ್ ಸಂಖ್ಯೆ.154, ಎನ್.ಆರ್.ಕಾಲೋನಿಯಲ್ಲಿರುವ ಔಷಧಾಲಯ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಿ.ಟಿ.ಬೆಡ್ ಪ್ರದೇಶದಲ್ಲಿರುವ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸುವ ಕುರಿತು ಮಾನ್ಯ ಆಡಳಿತ ಪಕ್ಷದ ನಾಯಕರಾದ ಶ್ರೀ.ಬಿ.ಎಸ್.ಸತ್ಯನಾರಾಯಣ (ಕಟ್ಟೆ ಸತ್ಯ) ಇವರ ಪತ್ರದ ಸಂಖ್ಯೆ.ಅ.ಪ.ನಾ./ಪಿಆರ್/132/10-11, ದಿನಾಂಕ: 09-11-2010 ರಂದು ಲಿಖಿತ ಪತ್ರದಲ್ಲಿ ತಿಳಿಸಿರುವಂತೆ ಈ ಸ್ಥಳದಲ್ಲಿ **ಬೆಂಗಳೂರು-ಒನ್** ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು ಹಾಗೂ ಸ್ಥಳಾಂತರಿಸಲು ಬಗ್ಗೆ ಪತ್ರವನ್ನು ಸಲ್ಲಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ ಹಾಗೂ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ. ಸದರಿ ವಿಷಯವನ್ನು ಗಮನಕ್ಕೆ ತೆಗೆದುಕೊಂಡು

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲ್ಕಂಡ ಸ್ಥಳವನ್ನು ಸ್ಥಳಾಂತರಿಸುವ ಬಗ್ಗೆ ಮಾನ್ಯ ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ತಮ್ಮ ಒಪ್ಪಿಗೆ ಹಾಗೂ ಅಭಿಪ್ರಾಯವನ್ನು ನೀಡಲು ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ದಿನಾಂಕ: 10-01-2011 ರ ಟಿಪ್ಪಣಿಯನ್ನು ಒಪ್ಪಿದೆ.**

## 2) ವಿಷಯದ ಸಂಖ್ಯೆ: ಸಾಆಸ್ಥಾಸ/12/10-11:

ಆಯುಕ್ತರ ಟಿಪ್ಪಣಿ ಸಂಖ್ಯೆ.ಸಿಎಚ್ಒ/ಎಸಿಟಿ/ಪಿಆರ್/10/2010-11 ದಿನಾಂಕ: 18-01-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 6 ರೆಫರಲ್ ಆಸ್ಪತ್ರೆ ಮತ್ತು 17 ಹೆರಿಗೆ ಆಸ್ಪತ್ರೆಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆಗೊಳ್ಳಲು ಅವಶ್ಯವಿರುವ ಅನಾಸ್ಥೇಷಿಯಾ ಯಂತ್ರ ಮತ್ತು ಪೂರಕ ಉಪಕರಣಗಳ ಖರೀದಿಗೆ ಈ ಕಛೇರಿಯ ಅಧಿಸೂಚನಾ ಸಂಖ್ಯೆ.ಮು.ಆ.ಅ./ಎಸಿಟಿ/2/ಪಿಆರ್/10/2010-11, ದಿನಾಂಕ: 29-04-2010 ರ ರೀತ್ಯಾ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ 6 ಸಂಸ್ಥೆಗಳು ಭಾಗವಹಿಸಿದ್ದು, ಈ ಪೈಕಿ ಎರಡು ಸಂಸ್ಥೆಗಳ ಬಿಡ್‌ಗಳು ಮಾತ್ರ ಸ್ವೀಕೃತಗೊಂಡಿದ್ದು ಉಳಿದ ನಾಲ್ಕು ಮಂದಿ ಬಿಡ್ಡುದಾರರ ಬಿಡ್‌ಗಳು ತಿರಸ್ಕೃತಗೊಂಡಿರುತ್ತವೆ.

| Sl. No. | Bidder's Name | Bid Name | Bid Status |
|---|---|---|---|
| 1 | B.V. Sathish (Sava Meditech Systems Private Limited) | B42696 | Rejected |
| 2 | Bharatkumar Ostawal (Rahul Pharma) | B41240 | Accepted |
| 3 | Gautam Suwalal Chajed (Mediplus Surgicals) | B42610 | Rejected |
| 4 | J.R. Reuben (Hospitech) | B42580 | Rejected |
| 5 | M. Jayaram (Jayasons Infrastructure India Private Limited) | B41316 | Rejected |
| 6 | Vinod Kohli (Allied Medical Service Limited) | B42675 | Accepted |

ಸ್ವೀಕೃತಗೊಂಡಿರುವ ಬಿಡ್ಡುದಾರರಾದ ಮೆ:: ಅಲೈಡ್ ಮೆಡಿಕಲ್ ಲಿ. ನಂ.76-77, ಉದ್ಯೋಗ ವಿಹಾರ, 4ನೇ ಹಂತ, ಗುರ್‌ಗಾನ್, 122015, ಹರಿಯಾಣ ರವರು ಅನಾಸ್ಥೇಷಿಯಾ ಯಂತ್ರ ಮತ್ತು ಪೂರಕ ಉಪಕರಣಗಳಿಗೆ ಎಲ್ಲಾ ತೆರಿಗೆ ಸೇರಿ ರೂ.67,32,100/- (ಅರವತ್ತೇಳು ಲಕ್ಷದ ಮೂವತ್ತೇರಡು ಸಾವಿರದ ನೂರು ಮಾತ್ರ) ಮೊತ್ತ ನಮೂದಿಸಿದ್ದು L1 ಬಿಡ್ಡುದಾರರಾದ ಮೆ:: ಅಲೈಡ್ ಮೆಡಿಕಲ್ ಲಿ. ರವರಿಂದ ರೂ.67,32,100/- ಮೊತ್ತದಲ್ಲಿ ಅನಾಸ್ಥೇಷಿಯಾ ಯಂತ್ರ ಮತ್ತು ಪೂರಕ ಉಪಕರಣಗಳನ್ನು ಖರೀದಿಸಲು ತೀರ್ಮಾನ ತೆಗೆದುಕೊಂಡಿದ್ದ ಕಾರಣ

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮಾನ್ಯ ಆಯುಕ್ತರ ಆದೇಶದಂತೆ ಮೆ:: ಅಲೈಡ್ ಮೆಡಿಕಲ್ ಲಿ. ರವರಿಗೆ ಈ ಕಛೇರಿಯ ಸರಬರಾಜು ಆದೇಶ ಸಂಖ್ಯೆ: ಸಿಹೆಚ್‌ಒ/ಎಸಿಟಿ/ಪಿಆರ್/10/2010-11, ದಿನಾಂಕ: 11-10-2010 ರ ರೀತ್ಯಾ ಸರಬರಾಜು ಆದೇಶ ನೀಡಲಾಗಿತ್ತು.

ಆದರೆ ಮೆ:: ಅಲೈಡ್ ಮೆಡಿಕಲ್ ಲಿ. ರವರು ಟೆಂಡರ್ ನಿಯಮಾವಳಿ ರೀತ್ಯಾ ಸರಬರಾಜು ಆದೇಶ ನೀಡಿದ ದಿನಾಂಕದಿಂದ 7 ದಿವಸಗಳೊಳಗಾಗಿ ಭದ್ರತಾ ಠೇವಣಿ ಸಲ್ಲಿಸಿ ಕರಾರು ಒಪ್ಪಂದ ಮಾಡಿಕೊಂಡು, ನಂತರ 60 ದಿವಸಗಳಲ್ಲಿ ಅನಾಸ್ಥೇಷಿಯಾ ಯಂತ್ರ ಮತ್ತು ಪೂರಕ ಉಪಕರಣಗಳನ್ನು ಅಳವಡಿಸಬೇಕಾಗಿದ್ದು, ಟೆಂಡರ್ ನಿಯಮಾವಳಿ ರೀತ್ಯ ನಡೆದುಕೊಳ್ಳದೆ ನಿಯಮ ಉಲ್ಲಂಘಿಸಿರುತ್ತಾರೆ.

ಮೇಲಿನಂತೆ ಟೆಂಡರ್ ನಿಯಮ ಉಲ್ಲಂಘಿಸಿ ಅವಧಿ ಮುಕ್ತಾಯವಾದ ನಂತರ ಪುನಃ ಅನಾಸ್ಥೇಷಿಯಾ ಯಂತ್ರ ಮತ್ತು ಪೂರಕ ಉಪಕರಣಗಳನ್ನು ಸರಬರಾಜು ಮಾಡಲು ಅವಕಾಶ ಮಾಡಿಕೊಡಬೇಕೆಂದು ಮೆ:: ಅಲೈಡ್ ಮೆಡಿಕಲ್ ಲಿ. ರವರು ಕೋರಿಕೊಂಡಿರುವುದರಿಂದ ಸದರಿಯವರ ಕೋರಿಕೆಯಂತೆ ಮತ್ತು ಪಾಲಿಕೆಯ ರೋಗಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸದರಿಯವರಿಗೆ ಮತ್ತೊಂದು ಅವಕಾಶ ನೀಡಿ ಅನಾಸ್ಥೇಷಿಯಾ ಯಂತ್ರ ಮತ್ತು ಪೂರಕ ಉಪಕರಣಗಳನ್ನು ಅಳವಡಿಸುವ ಸಂಬಂಧ ಕರಾರು ಒಪ್ಪಂದ ಮಾಡಿಕೊಂಡು ಮುಂದಿನ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಅಥವಾ ಮರು ಟೆಂಡರ್ ಕರೆಯುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ದಿನಾಂಕ: 29-01-2011 ರ ಟಿಪ್ಪಣಿಯಲ್ಲಿರುವಂತೆ ಮೆ: ಅಲೈಡ್ ಮೆಡಿಕಲ್ ಲಿ. ರವರೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ಪಾಲಿಕೆಯ ವ್ಯಾಪ್ತಿಯ ರೋಗಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅನಾಸ್ಥೇಷಿಯಾ ಯಂತ್ರ ಮತ್ತು ಪೂರಕ ಉಪಕರಣಗಳನ್ನು ಅಳವಡಿಸುವ ಸಂಬಂಧ ಮೆ: ಅಲೈಡ್ ಮೆಡಿಕಲ್ ಲಿ. ರವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಪ್ರಕ್ರಿಯೆ ಕೈಗೊಳ್ಳಲು ಒಪ್ಪಿದೆ.**

3) **ವಿಷಯದ ಸಂಖ್ಯೆ: ಸಾಆಸ್ಥಾಸ/13/10-11:**

ಆಯುಕ್ತರ ಟಿಪ್ಪಣಿ ಸಂಖ್ಯೆ.MOH (MCH & FW)/PR/75/2010-11 ದಿನಾಂಕ: 14-01-2011 ರಲ್ಲಿ ವಿವರಿಸಿರುವಂತೆ, ಸರ್ಕಾರದ ಹಲವಾರು ಜನಪರ ಕಾರ್ಯಕ್ರಮಗಳ ಪೈಕಿ ಕಡುಬಡಜನರಿಗೆ ಆರೋಗ್ಯ ವಿಮಾ ಸೌಲಭ್ಯ ಒದಗಿಸುವುದು ಸಹ ಅತ್ಯಂತ ಮುಖ್ಯವಾದ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರಮದ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ವಾಸಿಸುವ ಎಲ್ಲಾ ಬಡವರು ಮತ್ತು ಅತ್ಯಂತ ಕಡುಬಡವರ ವರ್ಗದವರಾದ ಬಿಪಿಎಲ್ ಕಾರ್ಡು ಹೊಂದಿರುವವರಿಗೆ,

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರಿಗೆ, ಖಾಯಂ ಮತ್ತು ಗುತ್ತಿಗೆ ಪೌರಕಾರ್ಮಿಕರು, ಸಫಾಯಿಕರ್ಮಚಾರಿಗಳು, ಆಟೋರಿಕ್ಷಾ ಚಾಲಕರುಗಳಿಗೆ, ಆರೋಗ್ಯ ವಿಮಾ ಸೌಲಭ್ಯವನ್ನು ನೀಡುವ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದು ಈ ಕಾರ್ಯಕ್ರಮದ ಸದುದ್ದೇಶವಾಗಿರುತ್ತದೆ, ಈ ಕಾರ್ಯಕ್ರಮದ ಅನುಷ್ಠಾನದಿಂದ ಈಗಾಗಲೇ ಪ್ರಜ್ವಲಿತವಾಗಿರುವ ಶ್ರೀಮಂತರಿಗೊಸ್ಕರ ಮಾತ್ರ ಸುಸಜ್ಜಿತ ಖಾಸಗಿ ಆಸ್ಪತ್ರೆಯನ್ನುವ ಮನೋಭಾವವನ್ನು ತೊಡೆದುಹಾಕಿ, ಬಡವರು ಮತ್ತು ಅತ್ಯಂತ ಕಡುಬಡವರ ಅನಾರೋಗ್ಯದ ಪರಿಸ್ಥಿತಿಯಲ್ಲಿ ಈಗಾಗಲೇ ಸರ್ಕಾರದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಅಡಿಯಲ್ಲಿ ಒಡಂಬಡಿಕೆ ಮಾಡಿಕೊಂಡಿರುವ ಎಲ್ಲಾ ಸುಸಜ್ಜಿತ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಉತ್ತಮ ಗುಣಮಟ್ಟದ ಉಚಿತವಾದ ರೋಗ ತಪಾಸಣೆ ಮತ್ತು ಉಚಿತವಾಗಿ ಚಿಕಿತ್ಸೆಯನ್ನು ಪಡೆಯಬಹುದಾಗಿರುತ್ತದೆ.

ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಿಪಿಎಲ್ ಕಾರ್ಡುದಾರರಿಗೆ, ಸಫಾಯಿ ಕರ್ಮಚಾರಿಗಳು, ಖಾಯಂ ಮತ್ತು ಗುತ್ತಿಗೆ ಪೌರಕಾರ್ಮಿಕರು, ಕೊಳಚೆ ಪ್ರದೇಶಗಳ ನಿವಾಸಿಗಳು, ಆಟೋರಿಕ್ಷಾ ಚಾಲಕರುಗಳಿಗೆ ಹಾಗೂ ಇತರರಿಗೆ ಆರೋಗ್ಯ ವಿಮೆ ಸೌಲಭ್ಯವಾದ "ಸುವರ್ಣ ಆರೋಗ್ಯ ಸುರಕ್ಷಾ ವಿಮೆ" ವಿಮಾ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ 407/2009-10 ದಿನಾಂಕ:-16/11/2009 ರಲ್ಲಿ ಅನುಮೋದನೆಯನ್ನು ನೀಡಲಾದ ಮೇರೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ, ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಪೌರ ಕಾರ್ಮಿಕರಿಗೆ "ಸಫಾಯಿ ಕರ್ಮಚಾರಿ, ಬಿ.ಪಿ.ಎಲ್, ಕಾರ್ಡ್‌ದಾರರಿಗೆ ಕೊಳಚೆ ಪ್ರದೇಶಗಳ ನಿವಾಸಿಗಳು, ಆಟೋರಿಕ್ಷಾ ಚಾಲಕರುಗಳಿಗೆ ಯೋಜನೆಯನ್ನು ಹಮ್ಮಿಕೊಳ್ಳಲು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ನಅಇ/600/ಎಂಎನ್ ವೈ/2009(ಭಾ-1) ದಿನಾಂಕ: 12-10-2010 ರಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸರ್ಕಾರದ ಆದೇಶ ಸಂಖ್ಯೆ ಆ.ಕು.ಕ216 ಸಿಜಿಇ2008, ದಿನಾಂಕ: 20-02-2009 ರ ಆದೇಶದ ಮಾದರಿಯಲ್ಲಿ ಹಾಗೂ ಅದರಲ್ಲಿ ನಿರ್ದಿಷ್ಟ ಪಡಿಸಿರುವ ಮಾರಣಾಂತಿಕ ಖಾಯಿಲೆಗಳಿಗೆ ಸಂಬಂಧಿಸಿದಂತೆ ಸುವರ್ಣ ಆರೋಗ್ಯ ಸುರಕ್ಷಾ ಎಂಬ ಆರೋಗ್ಯ ವಿಮೆ ಯೋಜನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬ ವರ್ಗದವರಿಗೆ, ಸಫಾಯಿ ಕರ್ಮಚಾರಿಗಳಿಗೆ, ಪೌರ ಕಾರ್ಮಿಕರು, ಆಟೋ ಚಾಲಕರು ಹಾಗೂ ಕೊಳಚೆ ಪ್ರದೇಶದ ನಿವಾಸಿಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆಯೆಂದು ಸೂಚಿಸಿ ಕೆಳಕಂಡ ಷರತ್ತುಗಳನ್ನು ವಿಧಿಸಿರುತ್ತಾರೆ.

1. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವ ಮೇಲ್ಕಂಡ ವರ್ಗದವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸತಕ್ಕದ್ದು.
2. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಅನುಷ್ಠಾನಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸುವುದು.

B. S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

3. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಗೆ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಪನ್ಮೂಲದಿಂದಲೇ ಭರಿಸತಕ್ಕದ್ದು.
4. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸಂಖ್ಯೆ: ಆ.ಕು.ಕ216 ಸಿಜಿಇ2008, ದಿನಾಂಕ: 20-02-2009 ರ ಆದೇಶದಲ್ಲಿ ನಿರ್ದಿಷ್ಟ ಪಡಿಸಿರುವ ಮಾದರಿಯಲ್ಲಿಯೇ ಯೋಜನೆ ಸಿದ್ಧಪಡಿಸಿ ರೂಪುರೇಷೆ ರೂಪಿಸಿಕೊಂಡು ಜಾರಿಗೊಳಿಸಲು ಕ್ರಮ ವಹಿಸುವುದು.

ಮೇಲ್ಕಂಡ ಸರ್ಕಾರದ ಆದೇಶದಲ್ಲಿನ ಷರತ್ತುಗಳಂತೆ ಕಾರ್ಯಕ್ರಮವನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಿ, ವಲಯ ಹಂತದಲ್ಲಿ ಅನುಷ್ಠಾನ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಬಹುದಾಗಿದೆ.

ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಚಿಸಿರುವ ಟ್ರಸ್ಟ್‌ನಡಿ ಕಾರ್ಯನಿರ್ವಹಿಸಲು "ಕಾರ್ಯಕಾರಿ ಸಮಿತಿ" ಯನ್ನು ರಚಿಸಲಾಗಿದೆ. ಈ ಸಮಿತಿಗೆ **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** ರವರು ಮುಖ್ಯಸ್ಥರಾಗಿದ್ದು ಇತರೆ ಇಲಾಖೆಗಳ ಕಾರ್ಯದರ್ಶಿಗಳು ಸದಸ್ಯರಾಗಿರುತ್ತಾರೆ ಸದರಿ ಸಮಿತಿಗೆ ನಿಗಧಿಪಡಿಸಿರುವ ಎಲ್ಲಾ ಜವಾಬ್ಧಾರಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನುಷ್ಠಾನ ಮಾಡುವ ಸುವರ್ಣ ಆರೋಗ್ಯ ಸುರಕ್ಷ'' ಯೋಜನೆಯ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

ಸರ್ಕಾರದ ಮಟ್ಟದಲ್ಲಿ ಕಾರ್ಯಕಾರಿ ಸಮಿತಿ'' ಇರುವುದರಿಂದ ಈ ಯೋಜನೆಗೆ ತಗಲುವ ಪೂರ್ಣ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿಯೇ ಭರಿಸುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೇ ಅನುಷ್ಟಾನದ ನೇರ ಹೊಣೆ ಹೊಂದಿರುವುದರಿಂದ ಪಾಲಿಕೆಯಲ್ಲೂ ಈ ಕೆಳಕಂಡಂತೆ (Governing Council) ರಚಿಸಬಹುದಾಗಿರುತ್ತದೆ.

| | |
|---|---|
| ಪೂಜ್ಯ ಮಹಾಪೌರರು | ಗೌರವಾಧ್ಯಕ್ಷರು |
| ಮಾನ್ಯ ಆಯುಕ್ತರು | ಕಾರ್ಯಾಧ್ಯಕ್ಷರು |
| ವಿಶೇಷ/ಅಪರ ಆಯುಕ್ತರು (ಆಡಳಿತ) | ಸದಸ್ಯರು |
| ಜಂಟಿ/ಉಪ ಆಯುಕ್ತರು (ಆರೋಗ್ಯ) | ಸದಸ್ಯರು |
| ಪ್ರಧಾನ ಅಭಿಯಂತರರು | ಸದಸ್ಯರು |
| ಮುಖ್ಯ ಲೆಕ್ಕಾಧಿಕಾರಿಗಳು | ಸದಸ್ಯರು |
| ಜಂಟಿ /ಉಪ ಆಯುಕ್ತರು (ಕಲ್ಯಾಣ) | ಸದಸ್ಯರು |
| ಮುಖ್ಯ ಆರೋಗ್ಯಾಧಿಕಾರಿಗಳು | ಕಾರ್ಯದರ್ಶಿಗಳು |
| ಯೋಜನಾ ಸಮನ್ವಯಾಧಿಕಾರಿಗಳು | ಸಹಕಾರ್ಯದರ್ಶಿಗಳು |

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲ್ಕಂಡ ಸಮಿತಿಯ ಈ ಕೆಳಕಂಡಂತೆ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿದೆ.

1 ಸದರಿ ಯೋಜನೆಗೆ ತಗಲುವ ವೆಚ್ಚವನ್ನು ಪಾಲಿಕೆಯ ಆಯವ್ಯಯದಲ್ಲಿ ನಿಗಧಿಪಡಿಸಿರುವಂತೆ ಸುವರ್ಣ ಆರೋಗ್ಯ ಟ್ರಸ್ಟಗೆ ಬಿಡುಗಡೆ ಮಾಡಲು ಅಗತ್ಯ ಕ್ರಮಕೈಗೊಳ್ಳುವುದು.

2 ಈ ಯೋಜನೆಯ ಅನುಷ್ಠಾನದ ಎಲ್ಲಾ ಮೇಲ್ವಿಚಾರಣೆ ಕೈಗೊಳ್ಳುವುದು.

3 ಈ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಪರಿಶೀಲಿಸುವುದು ಹಾಗೂ ಕಾರ್ಯಕ್ರಮದ ಅನುಷ್ಠಾನವನ್ನು Monitoring ಮಾಡುವುದು.

4 ಈ ಯೋಜನೆಯ ಅನುಷ್ಠಾನ ಮಾಡುವ ಎಲ್ಲಾ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

5. ಈ ಯೋಜನೆಯ ಉತ್ತಮ ಅನುಷ್ಠಾನಕ್ಕಾಗಿ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡುವುದು ಅಲ್ಲದೆ ಯಾವುದೇ ಮಾರ್ಪಾಡುಗಳು ಮಾಡಬೇಕಾಗಿದೇಯೆಂದು ಸರ್ಕಾರದ ಆದೇಶ ಬಂದಲ್ಲಿ ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಸರ್ಕಾರ ನಗರಾಭಿವೃದ್ಧಿ ಇಲಾಖೆಯ ಆದೇಶದ ದಿನಾಂಕ: 12-01-2010 ರಲ್ಲಿ ತಿಳಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅರ್ಹ ಕುಟುಂಬಗಳಿಗೆ ಪ್ರತೀ ವರ್ಷ ಅಂದಾಜು ಸಂಖ್ಯೆ ಹಾಗೂ ಬೇಕಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ. ಸದರಿ ಮೊತ್ತವನ್ನು ಸುವರ್ಣ ಆರೋಗ್ಯ ಟ್ರಸ್ಟಿಗೆ ಬಿಡುಗಡೆ ಮಾಡಬೇಕಾಗುತ್ತದೆ. 2010-11ನೇ ಸಾಲಿನ ಆಯವ್ಯಯ ಲೆಕ್ಕ ಶಿರ್ಷಿಕೆಯಡಿಯಲ್ಲಿ ವೆಚ್ಚ ಭರಿಸಬೇಕಾಗುತ್ತದೆ.

| | | |
|---|---|---|
| 1. | ಕೊಳಚೆ ಪ್ರದೇಶದ ನಿವಾಸಿಗಳು | 136486 |
| 2. | ಸಫಾಯಿ ಕರ್ಮಚಾರಿಗಳು | 16069 |
| 3. | ಆಟೋ ಚಾಲಕರು | 99956 |
| 4. | ಪೌರ ಕಾರ್ಮಿಕರು | 7935 |
| 5. | ಗುತ್ತಿಗೆ ಪೌರ ಕಾರ್ಮಿಕರು | 12000 |
| 6. | ಬಿಪಿಎಲ್ ಕಾರ್ಡ್ ದಾರರು | 423600 |
| | **ಒಟ್ಟು ಮೊತ್ತ** | **6,96,046x300= 20,88,13,800-00** |

ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ನೋಡಿಕೊಳ್ಳಲು ಸರ್ಕಾರದ ಆರೋಗ್ಯ ಇಲಾಖೆಯ ಆದೇಶದಲ್ಲಿ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ ಸದರಿ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುವುದು ಅದೇ ರೀತಿ ಪಾಲಿಕೆಯಲ್ಲಿ ವಲಯ ಮಟ್ಟದಲ್ಲಿ ಅಪರ / ಜಂಟಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬಹುದಾಗಿದೆ. ಪಾಲಿಕೆಯಲ್ಲಿ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ಸಮಿತಿಯನ್ನು ಈಕೆಳಕಂಡಂತೆ ರಚಿಸಬಹುದಾಗಿದೆ.

B.S. [signature]

| | |
|---|---|
| ಅಪರ/ಜಂಟಿ ಆಯುಕ್ತರು | ಅಧ್ಯಕ್ಷರು |
| ಉಪ ಆಯುಕ್ತರು | ಸದಸ್ಯರು |
| ಮುಖ್ಯ ಅಭಿಯಂತರರು | ಸದಸ್ಯರು |
| ಕಲ್ಯಾಣಾಧಿಕಾರಿಗಳು | ಸದಸ್ಯರು |
| ಆರೋಗ್ಯಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

ಮೇಲ್ಕಂಡ ಉಸ್ತುವಾರಿ ಸಮಿತಿಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿದೆ.

1. ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ವಲಯ ವ್ಯಾಪ್ತಿಗೆ ಬರುವ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.
2. ಆಯ್ಕೆಯಾದ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ದೃಡೀಕರಣದೊಂದಿಗೆ ಸಲ್ಲಿಸತಕ್ಕದ್ದು.
3. ಈ ಯೋಜನೆಯಡಿಯಲ್ಲಿ ಪಾಲಿಕೆಯ ವ್ಯಾಪ್ತಿಗೆ ಬರುವ ಆಸ್ಪತ್ರೆ ಹಾಗೂ ವಿಮಾ ಸಂಸ್ಥೆಗಳ ಆಯ್ಕೆಯಾದ ಫಲಾನುಭವಿಗಳಿಗೆ ಉತ್ತಮ ಸೇವೆ ನೀಡುತ್ತಿರುವ ಬಗ್ಗೆ ಪರಿಶೀಲಿಸುವುದು.
4. ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಸಮಸ್ಯಗಳು ಬಂದಲ್ಲಿ ಸರ್ಕಾರದ ಕಾರ್ಯಕಾರಿ ಸಮಿತಿಗೆ ವರದಿ ಸಲ್ಲಿಸುವುದು.
5. ಆಯ್ಕೆಯಾದ ಫಲಾನುಭವಿಗಳಿಗೆ ಬಯೋ ಮೆಟ್ರಿಕ್ ಗುರತಿನ ಚೀಟಿ ನೀಡಲು ಕ್ರಮ ಕೈಗೊಳ್ಳತಕ್ಕದ್ದು.

**ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ವಲಯ ಅಪರ ಅಥವಾ ಜಂಟಿ ಆಯುಕ್ತರುಗಳಿಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಬಹುದಾಗಿದೆ. ಆಯ್ಕೆ ಮಾಡಿ ಆಯ್ಕೆ ಮಾಡುವಾಗ ಒಂದು ಕುಟುಂಬಕ್ಕೆ ವಿಮಾ ವಂತಿಕೆ ವರ್ಷಕ್ಕೆ ರೂ.೩೦೦/– ಗಳನ್ನು ಮಾತ್ರ ಪಾವತಿಸುವುದರಿಂದ ಕುಟುಂಬದ 5 ಸದಸ್ಯರನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಸದರಿ ವಿಮಾ ಮೊತ್ತವನ್ನು ಎರಡು ಕಂತುಗಳಲ್ಲಿ ರೂ.150/–ರಂತೆ ಸುವರ್ಣ ಆರೋಗ್ಯ ಟ್ರಸ್ಟಿಗೆ ಪಾವತಿ ಮಾಡಬೇಕಾಗತಕ್ಕದ್ದು.**

1. **ಖಾಯಂ ಪೌರ ಕಾರ್ಮಿಕರು**: ಪಟ್ಟಿಯ ವಲಯ ಕಛೇರಿಗಳಲ್ಲಿ ಲಭ್ಯವಿದ್ದು. ಈ ಬಗ್ಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಂದ ದೃಡೀಕರಣ ಪಡೆದು ಆಯ್ಕೆ ಮಾಡಬಹುದಾಗಿದೆ ಆಯ್ಕೆ ಮಾಡುವಾಗ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ನೌಕರರು ಇದ್ದಲ್ಲಿ ಸದರಿ ಕುಟುಂಬದಲ್ಲಿ ಒಬ್ಬರನ್ನು ಮಾತ್ರ ಕುಟುಂಬದವರೆಂದು ಪರಿಗಣಿಸತಕ್ಕದ್ದು. ಖಾಯಂ ಪೌರ ಕಾರ್ಮಿಕರಿಗೆ ಈಗಾಗಲೆ ಮ್ಯಾನೇಜ್ಡ್ ಹೇಲ್ತ್ ಕೇರ್ ಕಾರ್ಯಕ್ರಮವಿರುವುದರಿಂದ ಈ ಬಗ್ಗೆ ಪೌರ ಕಾರ್ಮಿಕರಿಂದ ಸಮ್ಮತಿ ಪಡೆದು ಯಾವ ಯೋಜನೆಗೆ ಸದರಿಯವರು ಸಮ್ಮತಿಸಿದರೆ ಸದರಿ ಯೋಜನೆಯಡಿಯಲ್ಲಿ ಮಾತ್ರ ಪರಿಗಣಿಸತಕ್ಕದ್ದು.

2. **ಗುತ್ತಿಗೆ ಪೌರ ಕಾರ್ಮಿಕರು**: ಸಂಬಂಧಪಟ್ಟಂತೆ ವಲಯ ಕಛೇರಿಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಬಟವಾಡೆ ಅಧಿಕಾರಿಗಳು ಗುತ್ತಿಗೆ ಪೌರ ಕಾರ್ಮಿಕರು ವಿವರಗಳನ್ನು ಹೊಂದಿದ್ದು ಸದರಿ ಗುತ್ತಿಗೆ ಪೌರ ಕಾರ್ಮಿಕರಿಗೆ ಪಿಎಫ್ / ಈ.ಎಸ್.ಐ ಖಾತೆ ಹೊಂದಿರುವವರು ಮಾತ್ರ ಯೋಜನೆಗೆ

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅರ್ಹರಾಗಿರುತ್ತಾರೆ ಸದರಿಯವರು ಕರ್ತವ್ಯದಿಂದ ಬಿಡುಗಡೆಗೊಂಡನಂತರ ಅವರ ಅರ್ಹತೆಯನ್ನು ರದ್ದುಪಡಿಸತಕ್ಕದ್ದು ಈ ಮಾಹಿತಿ ದೃಡೀಕರಿಸಿದ ಕುಟುಂಬದವರನ್ನು ಆಯ್ಕೆ ಮಾಡತಕ್ಕದ್ದು.

3. **ಸಫಾಯಿ ಕರ್ಮಚಾರಿಗಳು**: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಫಾಯಿ ಕರ್ಮಚಾರಿಗಳ ಸಮೀಕ್ಷೆ ಕೈಗೊಂಡಿದ್ದು ಅನುಮೊದನೆ ಪಟ್ಟಿ ಆಯಾಯಾ ವಲಯ ಕಛೇರಿಗಳಲ್ಲಿ ಲಭ್ಯವಿದ್ದು ಸದರಿ ಕುಟುಂಬದವರಿಗೆ ಮಾತ್ರ ಆಯ್ಕೆ ಮಾಡತಕ್ಕದ್ದು ಸದರಿ ಸಮೀಕ್ಷೆಯ ಕುಟುಂಬದ ವರದಿಯ ವಿವರಗಳನ್ನು ಕೇಂದ್ರ ಕಛೇರಿಯ ಕಲ್ಯಾಣ ವಿಭಾಗದಲ್ಲಿ ಸಹಿ ಪರಿಶೀಲಿಸಿ ಖಾತ್ರಿ ಮಾಡಕೊಳ್ಳತಕ್ಕದ್ದು.

4. **ಬಿಪಿಎಲ್ ಕುಟುಂಬದವರು**: ಸರ್ಕಾರ ಆಹಾರ ಮತ್ತು ನಾಗರೀಕ ಇಲಾಖೆಯ ಈಗಾಗಲೇ ಬಿಪಿಎಲ್ ಕುಟುಂಬದ ಸಮೀಕ್ಷೆ ಕೈಗೊಂಡು ಬಿಪಿಎಲ್ ಕಾರ್ಡ್ ವಿತರಿಸಲಾಗಿರುತ್ತದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಾಗರೀಕರ ಬಿಪಿಎಲ್ ಕಾರ್ಡ್ ಅನ್ನು ಕೂಲಂಕುಷವಾಗಿ ಪರಿಶೀಲಿಸಿ ಕಾರ್ಡ್‌ನ ಮೇಲೆ ಬಿಪಿಎಲ್ ಎಂದು ನಮೂದಿಸಿದ ಕುಟುಂಬದವರನ್ನು ಮಾತ್ರ ಆಯ್ಕೆ ಮಾಡತಕ್ಕದ್ದು ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ದೃಡೀಕರಣ ಪಡೆಯತಕ್ಕದ್ದು.

5. **ಆಟೋ ಚಾಲಕರು**: ಆಯಾ ವಲಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಾಸದ ದೃಢೀಕರಣದೊಂದಿಗೆ ಆರ್.ಟಿ.ಓ. ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಪೋಲೀಸ್ ಕಮಿಷನರ್ ಇವರಿಂದ ಪರವಾನಗಿ ಹೊಂದಿರುವ ಕುಟುಂಬದವರಾಗಿರಬೇಕು ಸದರಿಯವರು ಪರವಾನಗಿಯ ದೃಡೀಕೃತ ಫೋಟೊ ಪರವಾನಗಿಯನ್ನು ಸಲ್ಲಿಸಿದ ಆಟೋ ಚಾಲಕರನ್ನು ಆಯ್ಕೆ ಮಾಡಬಹುದಾಗಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ ಪಡೆಯತಕ್ಕದ್ದು

6. **ಕೊಳಚೆ ಪ್ರದೇಶದ ನಿವಾಸಿಗಳು**: ಬಿಪಿಎಲ್ ಕಾರ್ಡ್ ಹೊಂದಿದವರಾಗಿದ್ದರೆ ಈಗಾಗಲೇ ಕ್ರಮ ಸಂಖ್ಯೆ ತಿಳಿಸಿರುವಂತೆ ಆಯ್ಕೆ ಮಾಡಬಹುದಾಗಿದೆ. ಅಲ್ಲದೆ ಪಾಲಿಕೆಯಿಂದ ಕೊಳಚೆ ಪ್ರದೇಶಗಳ ಸಮೀಕ್ಷೆ ಕಾರ್ಯ ಕೈಗೊಂಡಿದ್ದು ಸಮೀಕ್ಷೆಯಲ್ಲಿ ಪರಿಗಣಿಸುವ ಕುಟುಂಬದವರನ್ನು ಆಯ್ಕೆ ಮಾಡತಕ್ಕದ್ದು ಕೊಳಚೆ ಪ್ರದೇಶ ನಿವಾಸಿಗಳಿಗೆ ಆದಾಯದ ಮಿತಿಯನ್ನು ಪಾಲಿಕೆಯು ಆಗಿಂದಾಗ್ಗೆ ನಿಗದಿಗೊಳಿಸಬಹುದಾಗಿದೆ.

7. ಮೇಲೆ ತಿಳಿಸಿದ ಫಲಾನುಭವಿಗಳು ಈಗಾಗಲೇ ಸರ್ಕಾರದ / ಸರ್ಕಾರೇತರ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆಯುತ್ತಿದ್ದಲ್ಲಿ, ಅಂತಹವರನ್ನು ಈ ಯೋಜನೆಯಡಿ ಪರಿಗಣಿಸತಕ್ಕದ್ದಲ್ಲ.

8. ಆಯ್ಕೆಯಾದ ಕುಟುಂಬದ ಸದಸ್ಯರುಗಳಿಗೆ **ಬಯೋ ಮೆಟ್ರಿಕ್ ಹೇಲ್ತ್ ಕಾರ್ಡ್** ಗುರುತಿನ ಚೀಟಿಯನ್ನು ನೀಡಲು ಅಗತ್ಯ ಕ್ರಮಕೈಗೊಳ್ಳತಕ್ಕದ್ದು.

9. ಕಾರ್ಯಕ್ರಮದ ಅನುಷ್ಠಾನದಲ್ಲಿ ಸರ್ಕಾರದ ಮಾರ್ಗಸೂಚಿಗಳು ಹಾಗೂ ಪಾಲಿಕೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಅನುಷ್ಠಾನ ಮಾಡುವ ವಲಯ ಅಪರ / ಜಂಟಿ ಆಯುಕ್ತರುಗಳೆ ನೇರ ಜವಾಬ್ದಾರರು.

10. ಈ ಕಾರ್ಯಕ್ರಮವನ್ನು **ಪಾಲಿಕೆಯ ಆದಾಯದ ಅನುಗುಣವಾಗಿ ಅನುಷ್ಠಾನ ಮಾಡಬಹುದಾಗಿದೆ** ಹಾಗೂ ಸರ್ಕಾರದ ಆದೇಶದಲ್ಲಿ ಈ ಕಾರ್ಯಕ್ರಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ವಿಸ್ತರಿಸಿದ್ದಲ್ಲಿ ಅದರೊಂದಿಗೆ ಪಾಲಿಕೆಗೆ ಕಾರ್ಯಕ್ರಮವು ಸಹ ವಿಲೀನವಾಗುವುದು.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಿಪಿಎಲ್ ಕುಟುಂಬದವರಿಗೆ ಹಾಗೂ ಇತರರಿಗೆ ಸುವರ್ಣ ಆರೋಗ್ಯ ಸುರಕ್ಷಾ ವಿಮಾ ಯೋಜನೆಯ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಮುಖಾಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಾರ್ಯಕ್ರಮ ಅನುಷ್ಠಾನ ಕೈಗೊಳ್ಳಲು ಅನುಮತಿ ನೀಡಲಾಗಿರುತ್ತದೆ ಎನ್ನುವ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರ ಟಿಪ್ಪಣಿ ದಿನಾಂಕ: 25-02-2010 ರಂದು ಒಪ್ಪಿರುತ್ತಾರೆ.

ಅದರಂತೆ ಆಯ್ಕೆಯಾದ ಕುಟುಂಬದ ಸದಸ್ಯರಿಗೆ ವಿವಿಧೊದ್ದೇಶ Biometric health card ಗುರುತಿನ ಚೀಟಿ ನೀಡುವ ಕಾರ್ಯಕ್ರಮವಿದ್ದು, ತತ್ಸಂಬಂಧಕ್ಕೆ ಆಯುಕ್ತರ ಆಪ್ತಕಾರ್ಯಲಯ ಸಂಖ್ಯೆ ಪಿ.ಎಸ್,ಆರ್(ಉ)1299/2010-11 ದಿನಾಂಕ: 10/06/2010 ಆಡಳಿತಾತ್ಮಕ ಅನುಮೋದನೆ, ಮುಖ್ಯ ಲೆಕ್ಕಾಧಿಕಾರಿಗಳ ಸಂಖ್ಯೆ 3435 ದಿನಾಂಕ: 17/06/2010 ಕಾಮಗಾರಿ ಸಂಕೇತ ಪಡೆದು E-Procurment, ಟೆಂಡರ್ ಕರೆಯಲಾಗಿರುತ್ತದೆ. ಪ್ರಾಥಮಿಕ ಹಂತದಲ್ಲಿ 2 ಲಕ್ಷದ ಸ್ಮಾರ್ಟ್‌ಕಾರ್ಡ್‌ನ್ನು ವಿತರಿಸುವ ಗುರಿಹೊಂದಿದ್ದು ಸದರಿ ಕೆಲಸವನ್ನು ನಿರ್ವಹಿಸಲು 4 ಸಂಸ್ಥೆಯವರು ಭಾಗವಹಿಸಿದ್ದು, ಇದರಲ್ಲಿ M/s.Radiant infosystems ರವರು ಅತಿ ಕಡಿಮೆ ದರ ನಮೂದಿಸಿರುತ್ತಾರೆ. ಆದರೆ ಸದರಿಯವರು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಗುತ್ತಿಗೆ ಪ್ರಸ್ತಾವನೆಯಂತೆ ದರಪಟ್ಟಿ ನೀಡದಿರುವುದರ ಮೇರೆಗೆ ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಪ್ರಸ್ತಾವನೆಯಲ್ಲಿ ಕೇಳಿರುವ ಎಲ್ಲಾ ಅಂಶಗಳು ಬಹು ಮುಖ್ಯ ಎಂದು ಟೆಂಡರ್ ತಾಂತ್ರಿಕ ಸಮಿತಿ ಮತ್ತು ಪರಿಣಿತ ತಾಂತ್ರಿಕ ಸಮಿತಿ ಅಭಿಪ್ರಾಯಪಟ್ಟಿರುವುದರ ಮೇರೆಗೆ ಸದರಿ ಸಂಸ್ಥೆಯವರ ಆರ್ಥಿಕ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿ ಅದರಂತೆ 2ನೇ ಅತಿ ಕಡಿಮೆ ದರ ನಮೂದಿಸಿರುವ ಸಂಸ್ಥೆಯಾದ HCL ರವರು ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವ ಅಂಶಗಳನ್ನು ಬೇಕಾದಲ್ಲಿ ನೀಡುವುದಾಗಿ ಹಾಗೂ ಅದರ ದರಗಳನ್ನು ಬೇರೆಯಾಗಿ ನಮೂದಿಸಿರುವುದರ ಮೇರೆಗೆ Conditional tender ನೀಡಿರುವುದರಿಂದ ಅವರ ದರ ಪಟ್ಟಿಯನ್ನು ತಿರಸ್ಕರಿಸಲಾಗಿ, 3ನೇ ಅತಿಕಡಿಮೆ ದರ ಪಟ್ಟಿ ನೀಡಿರುವ ಸಂಸ್ಥೆಯಾದ M/s.Effia Technologies ರವರ ಪ್ರಸ್ತಾವನೆಯನ್ನು ತಾಂತ್ರಿಕ ಸಮಿತಿ ಮತ್ತು ಪರಿಣಿತ ತಾಂತ್ರಿಕ ಸಮಿತಿಯು ಅಂಗೀಕರಿಸಿದ್ದು, ಸದರಿ ಸಂಸ್ಥೆಯವರು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಪರಿಗಣಿಸಿದ ಮೇರೆಗೆ ಅವರ ಆರ್ಥಿಕ ಪ್ರಸ್ತಾವನೆಯನ್ನು ಒಪ್ಪಬಹುದು ಎಂದು ತೀರ್ಮಾನಕ್ಕೆ ಬರಲಾಯಿತು ಹಾಗೂ ಅವರು ಸಲ್ಲಿಸಿರುವ ದರಪಟ್ಟಿ ಈ ಕೆಳಕಂಡಂತಿರುತ್ತದೆ.

B. S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

## ವಿವರಗಳು

| Sch. No. | Item Description | Make | Unit | Qty. | Price per unit (Rs.) Supply | Price per unit (Rs.) O & M per month | Total Cost (Rs.) Supply | Total Cost (Rs.) Annual O & M | Total price in Rs. ( Supply+ Annual O & M) |
|---|---|---|---|---|---|---|---|---|---|
| (a) | (b) | | (c) | (d) | (e) | (f) | (g=e*d) | (h=d*f*12) | (i=h+g) |
| 1 | **Data collection, survey of each Hospital/Health centers and report /work methodology submission .** | | LS | 1 | 275,750 | N.A. | 275,750 | N.A. | 275,750 |
| | | | | | | | | | |
| 2 | **Health Centre** | | Sets | 50 | 755,106 | 7,722 | 37,755,300 | 4,633,241 | 42,388,541 |
| | Computer | | Nos. | 50 | 39,000 | 406 | 1,950,000 | 243,750 | 2 ,193,750 |
| | UPS | | Nos. | 50 | 16,250 | 169 | 812,500 | 101,563 | 914,063 |
| | Back-up Device | | Nos. | 50 | 8,450 | 88 | 422,500 | 52,813 | 475,313 |
| | Biometric Scanner | | Nos. | 50 | 4,163 | 43 | 208,163 | 26,020 | 234,183 |
| | VGA Camera | | Nos. | 50 | 1,638 | 17 | 81,900 | 10,238 | 92,138 |
| | Smart Card Reader | | Nos. | 50 | 887 | 9 | 44,363 | 5,545 | 49,908 |
| | Smart Card Printer | | Nos. | 50 | 87,360 | 910 | 4,368,000 | 546,000 | 4,914,000 |
| | Handheld Smart Card Reader with fingerprint verification | | Nos. | 50 | 79,170 | 825 | 3,958,500 | 494,813 | 4,453,313 |
| | Installation charges | | Nos. | 50 | 13,788 | - | 689,375 | - | 689,375 |
| | Softwares and licences | | Nos. | 50 | 504,400 | 5,254 | 25,220,000 | 3,152,500 | 28,372,500 |
| | **Data Centre** | | Sets | 1 | 8,644,350 | 214,915 | 8,644,350 | 2,578,975 | 11,223,325 |
| | Servers (web, application, database, mirrors, back-up, SAN Controller, Switch, cluster, Load Balancer, Automated Tape Library) | 1.04 | Set | 1 | 6,175,000 | 64,323 | 6,175,000 | 771,875 | 6,946,875 |
| | Data Centre set-up costs (Laserjet Printers, UPS-8hrs, Furniture, Network Infrastructure, Desktops for staff) | | Set | 1 | 390,000 | 4,063 | 390,000 | 48,750 | 438,750 |
| | Server OS, Back up Software License Fees, Other softwares and applications | | Set | 1 | 1,391,000 | 89,167 | 1,391,000 | 1,070,000 | 2,461,000 |
| | Help Desk Services | | Set | 1 | 688,350 | 57,363 | 688,350 | 688,350 | 1,376,700 |
| | | | | | | | | | |
| | **Network** | | Sets | 1 | 1,657,500 | 344,688 | 1,657,500 | 4,136,250 | 5,793,750 |
| | Network charges as per SLAs | 256kps at health cetread 6-8mbps at data cetre | Sets | 1 | 1,657,500 | 344,688 | 1,657,500 | 4,136,250 | 5,793,750 |
| | **Services** | | | | 11,552,306 | 401,042 | 11,552,306 | 4,812,500 | 16,364,806 |

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | | | | | | | | | |
|---|---|---|---|---|---|---|---|---|---|
| | Datacentre Management and application development and reporting services | Specify Duration | Man-Months | | - | 401,042 | - | 4,812,500 | 4,812,500 |
| | Project Management charges | Specify Duration | Man-Months | | 6,092,456 | - | 6,092,456 | - | 6,092,456 |
| | Data entry services | Specify Duration | Man-Months | | 5,459,850 | - | 5,459,850 | - | 5,459,850 |
| | | | | | | | | | |
| | **Training and promotion charges** | | LS | 1 | 1,380,129 | - | 1,380,129 | - | 1,380,129 |
| | Training and promotion charges | | LS | 1 | 1,380,129 | - | 1,380,129 | - | 1,380,129 |
| 3 | **Smart Cards** | | Nos. | 1lakh | 37 | 0.38 | 3,658,200 | 457,275 | 4,115,475 |
| 4 | **Information Kiosk** | | Nos. | 50 | 195,000 | 2,031 | 9,750,000 | 1,218,750 | 10,968,750 |
| | | | | | | | | | |
| **TOTAL COST FOR IMPLEMENTATION OF SMART CARD HEALTH INSURANCE PROGRAM INCLUDING ALL THE TAXES AND DUTIES BUT EXCLUDING SERVICE TAX FOR PRICE SHEET** | | | | | | | | | **92,510,526** |

ಈ ದರಪಟ್ಟಿಯಲ್ಲಿ ಯೋಜನೆಗೆ ಸಂಭಂದಿಸಿದ ಎಲ್ಲಾ ಐಟಂಗಳನ್ನು ಗಣನೆಗೆ ತೆಗೆದುಕೊಂಡಿದ್ದು ಪಾಲಿಕೆಯು ತೆಗೆದುಕೊಳ್ಳುವ ಐಟಂಗಳಿಗೆ ಮಾತ್ರ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಪಾವತಿಸಬಹುದು. ಈ ಯೋಜನೆಯ ಅನುಷ್ಠಾನದ Biometric ಗುರುತಿನ ಚೀಟಿ ವಿತರಿಸುವುದರಿಂದ ಬಡವರಿಗೆ ಮತ್ತು ಅತಿ ಬಡವರಿಗೆ ಸರ್ಕಾರದ ಕಾರ್ಯಕ್ರಮಗಳನ್ನು ಈ ಗುರುತಿನ ಚೀಟಿಯಲ್ಲಿ ಅಳವಡಿಸಿಕೊಂಡು ಎಲ್ಲಾ ಬಡವರು ಮತ್ತು ಅತ್ಯಂತ ಕಡು ಬಡವರನ್ನು ಗುರುತಿಸಿ, ಎಲ್ಲಾ ಆರೋಗ್ಯ ಕಲ್ಯಾಣ ಕಾರ್ಯಕ್ರಮಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳನ್ನು ಎಲ್ಲಾ ಫಲಾನುಭವಿಗಳಿಗೆ ಸಮಾನಾಂತರವಾಗಿ ನೀಡುವ ಉದ್ದೇಶದಿಂದ ಈ ಯೋಜನೆಯನ್ನು ಸಿದ್ದಪಡಿಸಲಾಗಿರುತ್ತದೆ. ಸದರಿ ಯೋಜನೆಯಿಂದ ಈಗಾಗಲೇ ತಿಳಿಸಿರುವಂತೆ, ಫಲಾನುಭವಿಗಳಿಗೆ ಈಗಾಗಲೇ ಒಡಂಬಡಿಕೆ ಮಾಡಿಕೊಂಡಿರುವ ಸರ್ಕಾರಿ/ಖಾಸಗಿ ಆಸ್ಪತ್ರೆಗಳಿಗೆ ನೇರವಾಗಿ ಹೋಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿರುತ್ತದೆ, ಈ ಗುರುತಿನ ಚೀಟಿ ನೀಡುವುದರಿಂದ, ಬಡವರಲ್ಲಿ ಮತ್ತು ಅತ್ಯಂತ ಕಡುಬಡವರಲ್ಲಿ ಕಂಡುಬರುವ ಆರ್ಥಿಕ, ಸಾಮಾಜಿಕ ಉದ್ಯೋಗಿಗಳ ಪರಿಸ್ಥಿತಿಯನ್ನು ಕಲೆ ಹಾಕಿ ಪಾಲಿಕೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ನಿರ್ಧಾರ ತೆಗೆದು ಕೊಳ್ಳಬಹುದಾಗಿದೆ. ಈಗಾಗಲೇ ಕೇಂದ್ರ, ರಾಜ್ಯ ಸರ್ಕಾರದ ಮತ್ತು ಪಾಲಿಕೆ ಹಲವು ಆರೋಗ್ಯ ಕಾರ್ಯಕ್ರಮಗಳನ್ನು ಗುರುತಿನ ಚೀಟಿಯಲ್ಲಿ ಅಳವಡಿಸಿಕೊಂಡು ಯೋಜನೆಯನ್ನು ರೂಪಿಸಲು ಸಹಾಯವಾಗುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಯೋಜನೆಗೆ Biometric Smart Card ನ್ನು ವಿತರಿಸಲು M/s.Effia Technologies ರವರು ಆಯ್ಕೆಯಾಗಿದ್ದು ಈ ಯೋಜನೆಗೆ ಪ್ರಥಮ ಹಂತದಲ್ಲಿ 1ಲಕ್ಷ ಕಾರ್ಡ್ ವಿತರಿಸಲು Data collection & survey ಗೆ ರೂ.2,75,750=00 ಆರೋಗ್ಯ ಕೇಂದ್ರಕ್ಕೆ ಅಳವಡಿಸುವ ಗಣಕಯಂತ್ರ ಮತ್ತು ಇನ್ನಿತರೆ ಸಾಮಾಗ್ರಿಗಳಿಗೆ ರೂ.4,23,88,541=00 ಗಳಾಗಲಿದ್ದು, Data Centre set-up ಗೆ ರೂ.1,12,23,325=00, Network charges ಗೆ ರೂ.57,93,750=00, Data centre management & application development Services

B.S. [signature]
ಅಧ್ಯಕ್ಷರು

Rs. 1,63,64,806=00, Smart Cards ನೀಡಲು ರೂ.41,15,475=00, Information Kiosk ಗೆ ರೂ.1,09,68,750=00 ಹಾಗೂ ಪ್ರತಿ ವರ್ಷಕ್ಕೆ ಶೇ.7.5%ರಷ್ಟು compound basis ನಂತೆ ಒಟ್ಟು 5 ವರ್ಷಕ್ಕೆ ಕಡಿಮೆ ದರ ನಮೂದಿಸಿರುತ್ತಾರೆ. ಅದರಂತೆ ದ್ವಿತೀಯ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.1,91,74,766=00, ತೃತೀಯ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,06,12,872=00, ನಾಲ್ಕನೇ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,21,58,839=00 ಮತ್ತು ಐದನೇ ವರ್ಷ ವಾರ್ಷಿಕ ನಿರ್ವಹಣೆ ವೆಚ್ಚ ರೂ.2,38,20,751=00 ಖರ್ಚಾಗುತ್ತದೆ. ಅಲ್ಲದೇ ಇತರೇ ಖರ್ಚುಗಳ ವಿವರವನ್ನು ಸವಿಸ್ತಾರವಾಗಿ ನಮೂದಿಸಲಾಗಿರುತ್ತದೆ ಹಾಗೂ ಪ್ರಥಮ ಹಂತದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟಗೆ ಕುಟುಂಬಕ್ಕೆ ಸರಾಸರಿ ರೂ.300/- ರೂಗಳಂತೆ 2ಲಕ್ಷ ಕುಟುಂಬಗಳಿಗೆ ಒಟ್ಟು ರೂ.6,00,00,000=00 (ಆರುಕೋಟಿ) ರೂಗಳನ್ನು ಪಾವತಿಸಬೇಕಾಗಿರುತ್ತದೆ, ಮುಂದುವರಿದಂತೆ ರೂ.300/- ಪ್ರತಿ ಕುಟುಂಬಕ್ಕೆ 5 ಜನರಿಗೆ ಹೆಚ್ಚಿನ ಸ್ಮಾರ್ಟ್ ಕಾರ್ಡ್‌ನ್ನು ವಿತರಿಸಿದ್ದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಖರ್ಚನ್ನು ನಿಗಧಿಪಡಿಸಿರುವ 2010-11ರ ಆಯವ್ಯಯದಲ್ಲಿ ಭರಿಸಬಹುದಾಗಿದೆ ಎಂಬ ಬಗ್ಗೆ ಅನುಮೊದನೆ ಕೋರುವ ಪ್ರಸ್ತಾವನೆಯನ್ನು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ದಿನಾಂಕ: 02-02-2011 ರ ಟಿಪ್ಪಣಿಯನ್ನು ಒಪ್ಪಿದೆ.**

B.S.

**(ಬಿ.ಎಸ್. ಮಂಜುನಾಥ ರೆಡ್ಡಿ)**
**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ: 07-01-2001 ರಂದು ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ: | | |
| ಬಿ.ಎಸ್. ಮಂಜುನಾಥ ರೆಡ್ಡಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಡಾ.ಎಂ.ಎಸ್. ಶಿವಪ್ರಸಾದ್ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| ಕೆ. ರವೀಂದ್ರನ್ | ಸದಸ್ಯರು | ಆರೋಗ್ಯಾಧಿಕಾರಿ ತಾಮಕುಕ (ಪೂರ್ವ, ಪಶ್ಚಿಮ & ದಕ್ಷಿಣ) |
| ನಂದಿನಿ ಶ್ರೀನಿವಾಸ್ | ಸದಸ್ಯರು | ಮುಖ್ಯ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ)/ಅಧೀಕ್ಷಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ)/ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ-1 & 2) |
| ಕೆ.ಎಲ್.ತಿಮ್ಮ ನಂಜಯ್ಯ | ಸದಸ್ಯರು | |
| ಸಿ.ಎಸ್. ನಟರಾಜ್ | ಸದಸ್ಯರು | |
| ಇರ್ಷಾದ್ ಬೇಗಂ | ಸದಸ್ಯರು | |
| ಪಿ.ಸೌಮ್ಯ | ಸದಸ್ಯರು | |
| ಗೈರು ಹಾಜರಾದ ಸದಸ್ಯರು: | | |
| ಹೆಚ್.ಎನ್. ಗಂಗಾಧರ | ಸದಸ್ಯರು | |
| ಸಿ.ಆರ್. ಜಯಪ್ಪರೆಡ್ಡಿ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

1) **ವಿಷಯದ ಸಂಖ್ಯೆ : ಸಾಆಸ್ಥಾಸ/02/10-11:**

ಆಯುಕ್ತರ ಟಿಪ್ಪಣಿ ಸಂಖ್ಯೆ.ಅ.ಆ (ಕ/ಆ/ಆ)ಪಿಎಸಆರ್ (3)95/2010-11 ದಿನಾಂಕ: 11-10-2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಈಗಾಗಲೇ 06 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳು, 29 ಆರೋಗ್ಯ ಕೇಂದ್ರಗಳು, 16 ಔಷಧಾಲಯಗಳು, 19 ಕುಟುಂಬ ಕಲ್ಯಾಣ ಕೇಂದ್ರ ಮತ್ತು 03 ಸಂಚಾರಿ ಔಷಧಾಲಯಗಳನ್ನು ನಡೆಸಲಾಗುತ್ತಿದೆ. ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ರೀತಿಯ ಆರೋಗ್ಯ ಸೇವೆಯನ್ನು ವಿಸ್ತೃತಗೊಳಿಸುವ ಸಲುವಾಗಿ ಈ ಕೆಳಕಂಡ ಸ್ಥಳಗಳಲ್ಲಿ 05 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 08 ಔಷಧಾಲಯಗಳ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಇವುಗಳನ್ನು ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಪ್ರಾರಂಭಿಸಲು ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟದ ರೀತ್ಯಾ (ಐ.ಪಿ.ಹೆಚ್.ಎಸ್.) ಸಿಬ್ಬಂದಿ ಮತ್ತು ಸಲಕರಣೆಗಳ ಅವಶ್ಯಕತೆ ಇದ್ದು, ಈ ಸೌಲಭ್ಯವನ್ನು ಕಲ್ಪಿಸಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಅಗತ್ಯವಾಗಿದೆ. ಅದರಂತೆ ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿದೆ.

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**05 ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಳಾಸ:**

| | | | |
|---|---|---|---|
| 01. | ಮೂಡಲಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ ಭೈರವೇಶ್ವರ ನಗರ, ಮೂಡಲಪಾಳ್ಯ, ಬೆಂಗಳೂರು-72 | 03. | ಮಹಾಲಕ್ಷ್ಮೀ ಲೇಔಟ್ ಪ್ರಾಥಮಿಕ ಆರೋಗ್ಯ ಕೇಂದ್ರ, (ಗೆಳೆಯರ ಬಳಗ), 2ನೇ ಕ್ರಾಸ್, 3ನೇ ಮುಖ್ಯ ರಸ್ತೆ, ಚೇರ್‌ಮೆನ್ ಚಿನ್ನಪ್ಪ ಆಸ್ಪತ್ರೆ, ಗಣೇಶ ದೇವಸ್ಥಾನದ ಎದುರು, ಗೆಳೆಯರ ಬಳಗ, ಬೆಂಗಳೂರು-86. |
| 02. | ಮಂಜುನಾಥನಗರ ಪ್ರಾಥಮಿಕ ಆರೋಗ್ಯ ಕೇಂದ್ರ 1ನೇ ಮುಖ್ಯ ರಸ್ತೆ, ವಾರ್ಡ್-15, ಮಂಜುನಾಥನಗರ, ರಾಜಾಜಿನಗರ, ಬೆಂಗಳೂರು-10 | 04 | ಆಡುಗೋಡಿ ಪ್ರಾಥಮಿಕ ಆರೋಗ್ಯ ಕೇಂದ್ರ, ಆಡುಗೋಡಿ ಆರೋಗ್ಯ ಕೇಂದ್ರದ ಮೇಲೆ, ಕೋರಮಂಗಲ ಮುಖ್ಯ ರಸ್ತೆ, ಆಡುಗೋಡಿ ಕೋರ್ಟ್, ಬೆಂಗಳೂರು-30. |
| 05 | ತಾವರೇಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ, ತಾವರೇಕೆರೆ ಆರೋಗ್ಯ ಕೇಂದ್ರದ ಪಕ್ಕದಲ್ಲಿ, ತಾವರೇಕೆರೆ ಮುಖ್ಯ ರಸ್ತೆ, ಮುಖ್ಯ ಬಸ್ ನಿಲ್ದಾಣದ ಹಿಂಭಾಗ, ಬೆಂಗಳೂರು. | | |

**ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ವಹಣೆಗೆ ಈ ಕೆಳಕಂಡಂತೆ ಸಿಬ್ಬಂದಿ, ಔಷಧಿಗಳು ಮತ್ತು ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಅಗತ್ಯತೆ ಇರುತ್ತದೆ**

| ಕ್ರ.ಸಂ. | ಹುದ್ದೆಯ ಹೆಸರು | ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಹುದ್ದೆಗಳ ಸಂಖ್ಯೆ | ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) | 05 ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಒಟ್ಟು ಹುದ್ದೆಗಳ ಸಂಖ್ಯೆ | 05 ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) |
|---|---|---|---|---|---|
| 1 | 2 | 3 | 4 | 5 | 6 |
| 01 | ಸಹಾಯಕ ಶಸ್ತ್ರ ಚಿಕಿತ್ಸಕರು | 02 | 566952 | 10 | 2834760 |
| 02 | ಆಯುರ್ವೇದ ವೈದ್ಯರು | 01 | 283476 | 05 | 1417380 |
| 03 | ಅಕೌಂಟ್ ಮ್ಯಾನೇಜರ್ | 01 | 202800 | 05 | 1014000 |
| 04 | ಫಾರ್ಮಸಿಸ್ಟ್ | 02 | 253800 | 10 | 1269000 |
| 05 | ಸ್ಟಾಫ್ ನರ್ಸ್ | 05 | 816000 | 25 | 4080000 |
| 06 | ಆರೋಗ್ಯ ಕಾರ್ಯಕರ್ತರು (ಮಹಿಳೆ) | 01 | 128340 | 05 | 641700 |
| 07 | ಆರೋಗ್ಯ ಶಿಕ್ಷಕರು | 01 | 128340 | 05 | 641700 |
| 08 | ಆರೋಗ್ಯ ಸಹಾಯಕರು (ಒಬ್ಬ ಪುರುಷ, ಒಬ್ಬ ಮಹಿಳೆ) | 02 | 256680 | 10 | 1283400 |
| 09 | ಗುಮಾಸ್ತರು | 02 | 235872 | 10 | 1179360 |
| 10 | ಲ್ಯಾಬ್ ಟೆಕ್ನಿಷಿಯನ್ | 02 | 294648 | 10 | 1473240 |
| 11 | ಚಾಲಕರು (Optional) | 01 | 120936 | 05 | 604680 |
| 12 | ನಾಲ್ಕನೇ ದರ್ಜೆ ನೌಕರರು (Contractual) | 04 | 404064 | 20 | 2020320 |
| | **ಒಟ್ಟು ಮೊತ್ತ** | 24 | 3691908 | 120 | 18459540 |

B. S. [signature]

**ಅಧ್ಯಕ್ಷರು**
**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಬೆಂಗಳೂರು**

| | | | | | |
|---|---|---|---|---|---|
| 13 | ಔಷಧಿಗಳು | – | 300000 | – | 1500000 |
| 14 | ಯಂತ್ರೋಪಕರಣ ಮತ್ತು ಪೀಠೋಪಕರಣಗಳು | | 1341500 | | 6707500 |
| | **ನಿವ್ವಳ ಮೊತ್ತ** | | 5333408 | | 26667040 |

**08 ಔಷಧಾಲಯಗಳ ವಿಳಾಸ:**

| | | | |
|---|---|---|---|
| 01 | ಕಮಲ ನಗರ ಔಷಧಾಲಯ, ವಾರ್ಡ್ ಕಛೇರಿಯ ಹತ್ತಿರ, ಶಂಕರ್‌ನಾಗ್ ಬಸ್ ನಿಲ್ದಾಣ, ಬೆಂಗಳೂರು. | 05 | ಸಂಜಯನಗರ ಔಷಧಾಲಯ, ವಿಜಯ ಬ್ಯಾಂಕ್ ಎದುರು, ಸಂಜಯನಗರ ಬಸ್ ನಿಲ್ದಾಣ, ಆರ್. ಎಮ್. ವಿ. 2ನೇ ಹಂತ, ಬೆಂಗಳೂರು–94 |
| 02 | ಚೋಳೂರು ಪಾಳ್ಯ ಔಷಧಾಲಯ, ವಾರ್ಡ್ ಕಛೇರಿಯ ಹತ್ತಿರ, ಪೈಪ್ ಲೈನ್ ರಸ್ತೆ, ಚೋಳೂರುಪಾಳ್ಯ, ವಿಜಯನಗರ, ಬೆಂಗಳೂರು–40 | 06 | ಭಾಷ್ಯಂ ನಗರ ಔಷಧಾಲಯ, 9ನೇ ಮುಖ್ಯ ರಸ್ತೆ, ಶ್ರೀರಾಮ್‌ಪುರ ಪೋಲಿಸ್ ಠಾಣೆ ಹಿಂಭಾಗ, ಬೆಂಗಳೂರು–21. |
| 03 | ಪಂಚಶೀಲ ನಗರ ಔಷಧಾಲಯ, ಪ್ರಮೀಳಾ ಬಾಯಿ ಮನೆ ಆಸ್ಪತ್ರೆ, 1ನೇ ಮುಖ್ಯ ರಸ್ತೆ, ಪಂಚಶೀಲ ನಗರ, ಬೆಂಗಳೂರು. | 07 | ಆನಂದಪುರಂ ಔಷಧಾಲಯ, ಮೈಸೂರು ರಸ್ತೆ, ಆನಂದಪುರಂ, ಬೆಂಗಳೂರು. |
| 04 | ಪೀಣ್ಯಾ ಔಷಧಾಲಯ, ವಾರ್ಡ್ ಕಛೇರಿಯ ಹತ್ತಿರ, 1ನೇ ಹಂತ, ಪೀಣ್ಯಾ, ಬೆಂಗಳೂರು. | 08 | ವಸಂತನಗರ ಔಷಧಾಲಯ, 1ನೇ ಮುಖ್ಯ ರಸ್ತೆ, ವಸಂತನಗರ, ಬೆಂಗಳೂರು–52. |

**ಔಷಧಾಲಯದ ನಿರ್ವಹಣೆಗೆ ಈ ಕೆಳಕಂಡಂತೆ ಸಿಬ್ಬಂದಿ, ಔಷಧಿಗಳು ಮತ್ತು ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಅಗತ್ಯತೆ ಇರುತ್ತದೆ**

| ಕ್ರ.ಸಂ. | ಹುದ್ದೆಯ ಹೆಸರು | ಒಂದು ಔಷಧಾಲಯಕ್ಕೆ ಅಗತ್ಯವಿರುವ ಹುದ್ದೆಗಳ ಸಂಖ್ಯೆ | 08 ಔಷಧಾಲಯಗಳಿಗೆ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) | 08 ಔಷಧಾಲಯಗಳಿಗೆ ಅಗತ್ಯವಿರುವ ಒಟ್ಟು ಹುದ್ದೆಗಳ ಸಂಖ್ಯೆ | 08 ಔಷಧಾಲಯಗಳ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) |
|---|---|---|---|---|---|
| 1 | 2 | 3 | 4 | 5 | 6 |
| 01 | ಸಹಾಯಕ ಶಸ್ತ್ರ ಚಿಕಿತ್ಸಕರು | 01 | 283476 | 08 | 2267808 |
| 02 | ಎ.ಎನ್.ಎಮ್. | 02 | 253800 | 16 | 2030400 |
| 03 | ಪ್ರಥಮ ದರ್ಜೆ ಸಹಾಯಕರು | 01 | 147324 | 08 | 1178592 |
| 04 | ದ್ವಿತೀಯ ದರ್ಜೆ ಸಹಾಯಕರು | 01 | 117936 | 08 | 943488 |
| 05 | ಲ್ಯಾಬ್ ಟೆಕ್ನಿಷಿಯನ್ | 01 | 147324 | 08 | 1178592 |
| 06 | ಜವಾನರು (To carry out Tappal duties) | 02 | 196032 | 16 | 1568256 |
| 07 | ಆಯಾ (Contractual Service) | 02 | 196032 | 16 | 1568256 |
| | **ಒಟ್ಟು ಮೊತ್ತ** | 10 | 1341924 | 80 | 10735392 |
| | ಔಷಧಿಗಳು | – | 100000 | – | 800000 |

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| | | | | | |
|---|---|---|---|---|---|
| | ಯಂತ್ರೋಪಕರಣ ಮತ್ತು ಪೀಠೋಪಕರಣಗಳು | – | 585300 | – | 4682400 |
| | ಲಿನಿನ್ ಸಾಮಗ್ರಿಗಳು | | 66750 | – | 534000 |
| | **ನಿವ್ವಳ ಮೊತ್ತ** | | 2093974 | | 16751792 |

05 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳಿಗೆ ವಾರ್ಷಿಕ ರೂ.2,66,67,040/– ಅಂದಾಜು ವೆಚ್ಚ ಮತ್ತು 08 ಔಷಧಾಲಯಗಳ ನಿರ್ವಹಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳಿಗೆ ವಾರ್ಷಿಕ ರೂ.1,67,51,792/– ಅಂದಾಜು ವೆಚ್ಚದಂತೆ ಒಟ್ಟಾರೆ ರೂ.4,34,18,832/– ಅಂದಾಜು ವೆಚ್ಚವಾಗುತ್ತದೆ. ತತ್ಸಂಬಂಧ, ಮೇಲ್ಕಂಡ ಅಂಶಗಳನ್ನು ಪಾಲಿಕೆಯ ಸಭೆ ಆದ್ಯ ಗಮನಕ್ಕೆ ತರುತ್ತಾ, ಪ್ರಸ್ತಾವಿತ ಪ್ರಸ್ತಾವನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ಮತ್ತು ಅಗತ್ಯವಿರುವ ಅಂದಾಜು ಮೊತ್ತವಾದ ರೂ.4,34,18,832/– ವನ್ನು 2010–11 ನೇ ಸಾಲಿನ ಆಯವ್ಯಯದಲ್ಲಿ ಬಳಸಿಕೊಳ್ಳಲು ಅನುಮತಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಔಷಧಾಲಯಗಳನ್ನು ಪ್ರಾರಂಭಿಸಲು ಮತ್ತು ಪ್ರತಿ ವರ್ಷ ಇದಕ್ಕೆ ಅಗತ್ಯವಿರುವ ವೆಚ್ಚವನ್ನು ಆಯವ್ಯಯದಲ್ಲಿ ಕಾಯ್ದಿರಿಸಿಕೊಳ್ಳಲು ಪಾಲಿಕೆಯ ಸಭೆ ಮುಂದೆ ಮಂಡಿಸಲು ಕೋರಲಾಗಿದ್ದು, ಈ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿಯ ದಿನಾಂಕ: 26–10–2010 ರ ನಿರ್ಣಯದಲ್ಲಿ ಆಯುಕ್ತರ ಟಿಪ್ಪಣಿ ದಿನಾಂಕ: 11–10–2010 ರ ಟಿಪ್ಪಣಿಯನ್ನು ಒಪ್ಪಿ ನಿರ್ಣಯ ಕೈಗೊಂಡಿದ್ದು, ಈ ಬಗ್ಗೆ ತೀರ್ಮಾನಕ್ಕಾಗಿ ಮಂಡಿಸಿದ ಟಿಪ್ಪಣಿ.

**ನಿರ್ಣಯ:** **ಆಯುಕ್ತರ ದಿನಾಂಕ: 11–10–2010 ರ ಟಿಪ್ಪಣಿಯನ್ನು ಒಪ್ಪಿದೆ.**

2) **ವಿಷಯದ ಸಂಖ್ಯೆ: ಸಾಆಸ್ಥಾಸ/03/10–11:**

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳಲ್ಲೊಂದಾದ ಮಹಿಳೆಯರ ಸುಖಕರ ಪ್ರವಸನದ ನಂತರ ಎಲ್ಲಾ ತಾಯಂದರಿಗೆ "ಮಡಿಲು ಕಿಟ್" ನ್ನು ಉಚಿತವಾಗಿ ನೀಡುವ ಕಾರ್ಯಕ್ರಮದಂತೆ 2010–11 ನೇ ಸಾಲಿನಲ್ಲಿಯೂ ಸಹ 21,000 Post natal ಕಿಟ್‌ಗಳನ್ನು ಖರೀದಿಸಬೇಕೆಂದು ಕೋರಿ ಎಲ್ಲಾ ರೆಫರಲ್ ಆಸ್ಪತ್ರೆಗಳ ಅಧೀಕ್ಷಕರುಗಳು ಕೋರಿಕೆ ಪತ್ರ ಸಲ್ಲಿಸಿರುತ್ತಾರೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತರವರ ಬಳಿ ಮತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರ ಬಳಿ ಪೋಸ್ಟ್ ನ್ಯಾಟಲ್ ಕಿಟ್‌ಗಳು ಲಭ್ಯವಿದ್ದು, ಈ ಕೆಳಕಂಡ 12 ಪರಿಕರಗಳುಳ್ಳ ಪೋಸ್ಟ್ ನ್ಯಾಟಲ್ ಕಿಟ್‌ಗಳನ್ನು ಪ್ರತಿ ಕಿಟ್‌ಗೆ ರೂ.1110/– ದರದಲ್ಲಿ ಮುಂದಿನ 03 ತಿಂಗಳಿಗೆ ಅವಶ್ಯವಿರುವ 7800 Post natal ಕಿಟ್‌ಗಳನ್ನು ರೂ.86,58,000/– ಮೊತ್ತದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತರಿಂದಲೂ, 06 ಸಾಮಗ್ರಿಗಳುಳ್ಳ 7800 ಕಿಟ್‌ಗಳನ್ನು ಪ್ರತಿ ಕಿಟ್‌ಗೆ ರೂ.140/– ದರದಂತೆ ರೂ.10,92,000/– ಮೊತ್ತದಲ್ಲಿ ಮೆ: ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್‌ರವರಿಂದಲೂ ಖರೀದಿಸಬಹುದಾಗಿರುತ್ತದೆ.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಖರೀದಿಸಬೇಕಾದ ಸಾಮಗ್ರಿಗಳ ವಿವರ:**

| Sl.No. | Contents of each Kit | Specification/Size | Qty. in a Kit | Unit Price (Rs.) |
|---|---|---|---|---|
| 01 | Jamkhana | 48'x78" | 01 No. | 206.00 |
| 02 | Checks Bed Sheet | 48'x88" | 01 No. | 82.00 |
| 03 | Woolen Blanket | 60"x90" | 01 No. | 291.00 |
| 04 | Checks Towel | 25"x52" | 02 No. | 55.00 |
| 05 | Printed Bed Sheet for Baby | 24"x24" | 02 No. | 96.00 |
| 06 | Child Juba | -- | 03 No. | 55.00 |
| 07 | Cotton Diaper | -- | 06 No. | 41.00 |
| 08 | Flannel Bed Sheet for Baby | 20"x30" | 01 No. | 55.00 |
| 09 | Abdominal Belt for mother | -- | 01 No. | 55.00 |
| 10 | Rubber Sheet for Baby | 24"x24" | 01 No. | 55.00 |
| 11 | Sweater, Cap & Socks for Baby with Zip | (0-1 Year) | 01 No. | 69.00 |
| 12 | Plastic Bag with zip (ಸುಧಾರಿತ) | 15"x18"x6" | 01 No. | 50.00 |
| | **Total** | | ಒಟ್ಟು ರೂ. | **1110.00** |

ಮೇಲಿನ ಸಾಮಗ್ರಿಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಖರೀದಿಸಲು ಕೆ.ಟಿ.ಪಿ.ಪಿ. ಕಾಯ್ದೆ 1999 ಅಧ್ಯಾಯ 1 ಪ್ಯಾರ 4 (h) ರಿತ್ಯ ವಿನಾಯ್ತಿ ಇರುತ್ತದೆ. (ಪುಟ 11 ಮತ್ತು 12 ರಲ್ಲಿ ಪ್ರತಿ ಲಗತ್ತಿಸಿದೆ.)

ಈ ಕೆಳಕಂಡ 06 ಸಾಮಗ್ರಿಗಳುಳ್ಳ ಪ್ರತಿ ಕಿಟ್‌ಗೆ ರೂ.140/- ಮೊತ್ತದಂತೆ ಒಟ್ಟಾರೆ 7800 ಕಿಟ್‌ಗಳನ್ನು ಒಟ್ಟಾರೆ ರೂ.10,92,000/- ಮೊತ್ತದಲ್ಲಿ ಮೆ: ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಬಹುದಾಗಿರುತ್ತದೆ. ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಇಲಾಖೆ ಕರ್ನಾಟಕ ಸರ್ಕಾರ ರವರು ಆದೇಶ ಸಂಖ್ಯೆ: DD/MH/68/2009-10 ದಿನಾಂಕ: 28-07-2010 ರೀತ್ಯ 50,000 ಕಿಟ್‌ಗಳನ್ನು ಖರೀದಿಸಿರುವ ಆದೇಶದ ಪ್ರತಿ ಲಗತ್ತಿಸಿದೆ (ಪುಟ 62)

**ಮೆ: ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜೆಂಟ್ಸ್ ರವರಿಂದ ಖರೀದಿಸಬೇಕಾದ ವಿವರ:**

| Sl. No. | Contents of each Kit | Qty. in a Kit | Unit Price (Rs.) |
|---|---|---|---|
| 01 | Mysore wave Bathing Bar (100 grms.) | 02 | 21.00 |
| 02 | Mysore Detergent Cake (150 grms.) | 04 | 20.00 |
| 03 | Coconut oil (200 ml. with comb) | 01 | 36.00 |
| 04 | Mysore Sandal Baby Soap (75 grms.) | 02 | 40.00 |
| 05 | Mysore Sandal Baby Powder (50 grms.) | 01 | 13.00 |
| 06 | Tooth Paste with brush (50 grms.) | 01 | 10.00 |
| | **Total** | | **140.00** |

ಮೇಲ್ಕಂಡ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಮೆ: ಕರ್ನಾಟಕ ಕೈಮಗ್ಗ ನಿಯಮಿತ ರವರಿಂದ 12 ಪರಿಕರಗಳುಳ್ಳ 7800 ಕಿಟ್ ಗಳನ್ನು ರೂ.86,58,000/- (ರೂ.ಎಂಬತ್ತಾರು ಲಕ್ಷ ಐವತೆಂಟು ಸಾವಿರ ಮಾತ್ರ)

B.S.

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೊತ್ತದಲ್ಲಿಯೂ 06 ಸಾಮಗ್ರಿಗಳುಳ್ಳ 7800 ಕಿಟ್ ಗಳನ್ನು ಮೆ: ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ರವರಿಂದ ರೂ.10,92,000/– ಮೊತ್ತದಲ್ಲಿಯೂ, ಅಂದರೆ ಒಟ್ಟಾರೆ ರೂ.97,50,000/– ಮೊತ್ತದಲ್ಲಿ ಮೇಲಿನ 02 ಸಂಸ್ಥೆಗಳಿಂದ ಖರೀದಿಸಲಾದ ಸಾಮಗ್ರಿಗಳನ್ನು ಒಟ್ಟುಗೂಡಿಸಿ ಒಂದೇ ಕಿಟ್‌ನಲ್ಲಿ ಸೇರಿಸಿ, ಪ್ರವಸನದ ನಂತರ ಬಾಣಂತಿಯರಿಗೊಂದು ಕಿಟ್‌ನಂತೆ ನೀಡಲಾಗುತ್ತದೆ.

ಮೇಲಿನಂತೆ 7800 ಪೋಸ್ಟ್ ನ್ಯಾಟಲ್ ಕಿಟ್‌ಗಳನ್ನು ಒಟ್ಟಾರೆ ರೂ.97,50,000/– ಮೊತ್ತದಲ್ಲಿ ಪೋಸ್ಟ್ ನ್ಯಾಟಲ್ ಕಿಟ್‌ಗಳ ಖರೀದಿಗಾಗಿ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ ಖರೀದಿಸುವ ಬಗ್ಗೆ ಅನುಮೋದನೆಗಾಗಿ ಆರೋಗ್ಯ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಿದೆ.

<u>ನಿರ್ಣಯ:</u> **<u>ಆಯುಕ್ತರ ದಿನಾಂಕ: 15–11–2010 ರ ಟಿಪ್ಪಣಿಯನ್ನು ಒಪ್ಪಿದೆ.</u>**

## 3) <u>ವಿಷಯದ ಸಂಖ್ಯೆ: ಸಾಆಸ್ಥಾಸ/04/10–11:</u>

ಆಯುಕ್ತರವರ ಟಿಪ್ಪಣಿ ದಿನಾಂಕ: 27–08–2010 ರಲ್ಲಿ ವಿವರಿಸಿರುವಂತೆ, ಈಗಾಗಲೇ ಭಾರತದಲ್ಲಿ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ನಾನಾ ಸಮಸ್ಯೆಗಳನ್ನು ಎದುರಿಸಲು ಅನೇಕ ಪ್ರಾಂತ್ಯಗಳಲ್ಲಿ ಪ್ಲಾಸ್ಟಿಕ್ ನಿರ್ಮೂಲನ ಮಾಡಬೇಕೆಂದು ಸತತ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಪ್ರತಿ ಜನರ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆಯು ಕೈಬಿಡಲಾಗದಂತ ಸಮಸ್ಯೆಯಾಗಿದೆ, ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿದ್ದು, ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಸೂಕ್ತ ಪರಿಹಾರ ದೊರಕಿರುವುದಿಲ್ಲ. ಇದೆ ಒಂದು ದೊಡ್ಡ ಸಮಸ್ಯೆ ಎದುರಾಗಿದೆ?

ಈ ದಿಕ್ಕಿನಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲೇಬೇಕಾದ ಸಮಯ ಎದುರಾಗಿದೆ, ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಈಗಾಗಲೇ ಕೆಲವು ನಗರಗಳು ಮತ್ತು ಹಲವಾರು ಪ್ರಾಂತ್ಯದಲ್ಲಿ ಮತ್ತು ನಮ್ಮ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯು (20 ಮೈಕ್ರಾನ್ಸ್) ಸಹ ಪ್ಲಾಸ್ಟಿಕ್ ಬಳಕೆಯನ್ನು ಸೂಕ್ತ ಕಾನೂನಿನ ಮೂಲಕ ರದ್ದುಪಡಿಸಿದ್ದರೂ ಸಹ ಈ ಮಾರ್ಗದಲ್ಲಿ ಸಂಪೂರ್ಣ ಯಶಸ್ವಿಯನ್ನು ಕಂಡುಬಂದಿರುವುದಿಲ್ಲ.

ಈ ಹಿನ್ನಲೆಯಲ್ಲಿ ಈಗಾಗಲೇ ಭಾರತದಲ್ಲಿ ನಿರುಪಯುಕ್ತ ಪ್ಲಾಸ್ಟಿಕ್ ಮೂಲಕ ತೈಲ ಉತ್ಪಾದನೆಯನ್ನು ಪ್ರಾರಂಭಿಸಿ ಕೆಲವು ಮಹಾನಗರಗಳಲ್ಲಿ ಯಶಸ್ವಿಯಾಗಿರುತ್ತಾರೆ. ಹಾಗೂ ಆ ಮಹಾನಗರದ ರಾಜ್ಯ ಸರ್ಕಾರ, ನಗರ ಸಭೆ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಮಿನಿಸ್ಟ್ರಿ ಆಫ್ ನಾನಾ ಕನ್ವೆಂಸನಷನಲ್ ಎನರ್ಜಿ ಮತ್ತು ಮಿನಿಸ್ಟ್ರಿ ಆಫ್ ಪೆಟ್ರೋಲಿಯಂ ಅಂಡ್ ಪೆಟ್ರೋಕೆಮಿಕಲ್ಸ್ ಇಲಾಖೆಗಳು ಈ ಯೋಜನೆಗೆ ಅನುಮೋದನೆಯನ್ನು ನೀಡಿ ಸಾಕಷ್ಟು ನಗರಗಳಲ್ಲಿ ಈ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ. ಕರ್ನಾಟಕದಲ್ಲಿ ಈಗಾಗಲೇ ಮೈಸೂರಿನಲ್ಲಿ ಈ ಘಟಕವನ್ನು ಸ್ಥಾಪಿಸಲು ಟೆಂಡರ್‌ನ್ನು ಆಹ್ವಾನಿಸಿ ರಾಜ್ಯ ಸರ್ಕಾರ ಮಟ್ಟದಲ್ಲಿ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯು ರದ್ದುಗೊಳಿಸುವ ನಿರ್ಧಾರ ದೀರ್ಘ ಕಾಲದ ಯೋಜನೆಯಾಗಿದ್ದು, ಈ ಮಾರ್ಗದಲ್ಲಿ ಸಾಕಷ್ಟು ಜನರಲ್ಲಿ ಅರಿವು ಮೂಡಿಸಿ ಯಶಸಿಯನ್ನು ಕಾಣಬೇಕಾಗಿರುತ್ತದೆ ಹಾಗೂ ಇದಕ್ಕೆ ತಕ್ಕಂತೆ ಕಾನೂನು ಅನ್ನು ಜಾರಿಗೊಳಿಸಬೇಕಾಗಿರುತ್ತದೆ. ಆದರೆ, ಈಗಾಗಲೇ ಉಪಯೋಗದಲ್ಲಿರುವ ಪ್ಲಾಸ್ಟಿಕ್ ಬಳಕೆಯನ್ನು

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನಿಯಂತ್ರಿಸಲು ಮೇಲೆ ಸೂಚಿಸಿರುವ ಘಟಕವನ್ನು ಸ್ಥಾಪಿಸಿದ್ದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ಹಾನಿಯನ್ನು ತಡೆಗಟ್ಟಬಹುದಾಗಿರುತ್ತದೆ.

ಲಭ್ಯವಿರುವ ಮಾಹಿತಿಗಳ ಪ್ರಕಾರ 10 ಟನ್ ಪ್ಲಾಸ್ಟಿಕ್‌ನ್ನು ಕಚ್ಚಾ ತೈಲವಾಗಿ ಮಾರ್ಪಡಿಸುವ ಸಾಮರ್ಥ್ಯವಿರುವ ಘಟಕವನ್ನು ಅನೇಕ ನಗರಗಳಲ್ಲಿ 05 ಎಕರೆ ಜಮೀನನ್ನು ಲ್ಯಾಂಡ್‌ಫಿಲ್ ಸೈಟನಲ್ಲಿ 25 ವರ್ಷ ಕಾಲಕ್ಕೆ ಲೀಸ್ ಮೂಲಕ ನೀಡಿ, ಚೆನ್ನೈ ಮತ್ತು ಕೊಚ್ಚಿನ್ ಮಹಾನಗರದಲ್ಲಿ ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಈ ಷರತ್ತಿನಲ್ಲಿ ಕೇವಲ ಪಾಲಿಕೆ ಜಾಗವನ್ನು ನೀಡಿದಲ್ಲಿ ಬಿಡ್ಡುದಾರರು ಡಪ್ಪಿಂಗ್ ಫೀ ಪಡೆದುಕೊಳ್ಳದೆ ಪ್ಲಾಸ್ಟಿಕ್ ವಿಲೇವಾರಿಯನ್ನು ಮಾಡುತ್ತಿರುತ್ತಾರೆ. ಮತ್ತು ತೈಲ ಉತ್ಪಾದನೆಯಲ್ಲಿ ಬಿಡ್ಡುದಾರರು ಶೇ.2% ರಾಯಲ್ಟಿಯನ್ನು ಹಾಗೂ 20% ಸಿ.ಡಿ.ಎಂ. ಗ್ರಾಂಟ್ಸ್‌ಅನ್ನು ಅಲ್ಲಿನ ಪಾಲಿಕೆಗೆ ನೀಡಿರುತ್ತಾರೆ. ಇದರ ಮೂಲಕ ಚಿಂದಿ ಆಯುವ ಮಂದಿಗೆ ಉದ್ಯೋಗಾವಕಾಶ ದೊರಕಿರುತ್ತದೆ ಮತ್ತು ಆ ಮಂದಿಗಳಿಗೆ ಸಮವಸ್ತ್ರ (Uniform) ವನ್ನು ಸಹ ನೀಡಲಾಗಿರುತ್ತದೆ. ಈ ಘಟಕದಲ್ಲಿ 01 ಟನ್ ಪ್ಲಾಸ್ಟಿಕ್‌ನಿಂದ 1000 ಲೀ ತೈಲವನ್ನು ಉತ್ಪಾದಿಸಲಾಗುತ್ತಿದೆ. ಹಾಗೂ 800 ಲೀ ತೈಲವನ್ನು ತೈಲ ಸಂಸ್ಕರಿಸುವ ಘಟಕಗಳಿಗೆ ಬಿಡ್ಡುದಾರರು ಮಾರಾಟ ಮಾಡುತ್ತಾರೆ. ಈ ಘಟಕದಿಂದ ಪರಿಸರಕ್ಕೆ ಯಾವುದೇ ವಿಧವಾದ ಹಾನಿ ಉಂಟಾಗುವುದಿಲ್ಲ. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯು ಇರುವುದಿಲ್ಲ. ಹಾಗೂ ಇದಕ್ಕೆ ಯಾವುದೇ ವೆಚ್ಚವು ತಗಲದಿರುವ ಕಾರಣ, ಬಜೆಟ್‌ನಲ್ಲಿ ಅನುದಾನ ಕಲ್ಪಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಮೇಲೆ ತಿಳಿಸಿರುವ ವಿಷಯದ ಮೇಲೆ ಬಿಬಿಎಂಪಿ ಸಹ ಈ ಮಾರ್ಗದಲ್ಲಿ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲ ಉತ್ಪಾದನೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ಈ ಕೆಳಗಿನ ಅಂಶಗಳಿಗೆ ಅನುಮೋದನೆ ಪಡೆಯಲು ಮಂಡಿಸಲಾಗಿದೆ.

1) ಸರ್ವೆ ನಂ.155 ರ ಮಂಡೂರು ಪ್ರದೇಶದಲ್ಲಿ 05 ಎಕರೆ ಜಮೀನನ್ನು ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ.

2) ಈ ಘಟಕ ಸ್ಥಾಪಿಸಲು ಟೆಂಡರ್ ಆಹ್ವಾನಿಸಲು ಅನುಮೋದನೆ.

**ನಿರ್ಣಯ:** **ಆಯುಕ್ತರ ದಿನಾಂಕ: 17-08-2010 ರ ಟಿಪ್ಪಣಿಯನ್ನು ಒಪ್ಪಿದೆ.**

## 4) ವಿಷಯದ ಸಂಖ್ಯೆ: ಸಾಆಸ್ಥಾಸ/05/10-11:

ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದಂತೆ ರಚಿತವಾಗಿರುವ ಎಂ.ಎಸ್.ಡಬ್ಲ್ಯೂ 2000 ನಿಯಮಾವಳಿಯಂತೆ, ಘನತ್ಯಾಜ್ಯ ವಸ್ತುಗಳ ಸುರಕ್ಷಿತ ಮತ್ತು ವೈಜ್ಞಾನಿಕ ವಲೇವಾರಿಯು ಆಯಾ ನಗರ ಸಭೆಗಳ/ಪಾಲಿಕೆಗಳ ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಬಿಬಿಎಂಪಿಯು ಘನತ್ಯಾಜ್ಯಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಲು ಯೋಜನೆಗಳನ್ನು ಹಮ್ಮಿಕೊಂಡಿದೆ. ಇದರ ಅಂಗವಾಗಿ ತ್ಯಾಜ್ಯ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲವನ್ನು ತಯಾರಿಸುವ ಪ್ರಸ್ತಾವನೆಯನ್ನು ಪಾಲಿಕೆ ಸಭೆಯ ವಿಷಯ ಸಂ.84/2010-11, ದಿನಾಂಕ: 28-08-2010 ರಂದು ಅನುಮೋದನೆಗೊಂಡಿರುತ್ತದೆ.

ಸದರಿ ನಿರ್ಣಯದಲ್ಲಿ ತ್ಯಾಜ್ಯ ಪ್ಲಾಸ್ಟಿಕ್‌ನಿಂದ (ಪ್ಲಾಸ್ಟಿಕ್‌ನ್ನು ತ್ಯಾಜ್ಯದಿಂದ ಬೇರ್ಪಡಿಸಿ) ಕಚ್ಚಾ ತೈಲವನ್ನು ತಯಾರಿಸುವ ತಂತ್ರಜ್ಞಾನವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಒಂದು ಡಿ.ಪಿ.ಆರ್. ನ್ನು ಪಾಲಿಕೆ ಸಭೆಯ ಮುಂದೆ ಮಂಡಿಸಲು ಸೂಚಿಸಿದ್ದು, ಅದರಂತೆ Detailed Project Report ನ್ನು ಈ

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಟಿಪ್ಪಣಿಯೊಂದಿಗೆ ಲಗತ್ತಿಸಿ ಪಾಲಿಕೆ ಸಭೆಯ ಮುಂದೆ ಮಂಡಿಸಲು ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಗೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:** **ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಈ ಕಡತವನ್ನು ಕಳುಹಿಸುವಂತೆ ತೀರ್ಮಾನಿಸಲಾಯಿತು**

5) **ವಿಷಯದ ಸಂಖ್ಯೆ: ಸಾಆಸ್ಥಾಸ/06/10–11:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವ್ಯಾಪ್ತಿಯಲ್ಲಿ 06 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳು, 29 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರ, 17 ಔಷಧಾಲಯಗಳಿದ್ದು, ರೆಫರಲ್ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆಗಳಿಂದ ವಾರ್ಷಿಕವಾಗಿ 25,000 ಹೆರಿಗೆಗಳು, 12,000 ಸಂತಾನಹರಣ ಶಸ್ತ್ರ ಚಿಕಿತ್ಸೆಗಳು 25,000 ಹೊರ ರೋಗಿಗಳ ಚಿಕಿತ್ಸೆಗಳಲ್ಲದೆ, ಎಲ್ಲಾ ಆಸ್ಪತ್ರೆಗಳಿಂದ ವಾರ್ಷಿಕವಾಗಿ 25,000 ನಾಯಿಕಡಿತದ ರೇಬೀಸ್ ಪ್ರಕರಣಗಳಿಗೆ ಚಿಕಿತ್ಸೆ, ಔಷದೋಪಚಾರಗಳನ್ನು ಸರ್ಕಾರ ನಿಗದಿಪಡಿಸಿರುವ User Fee ಮೊತ್ತ ಪಡೆದು ಸೌಲಭ್ಯ ಒದಗಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಅವಶ್ಯವಿರುವ ಔಷಧಿ, ಉಪಕರಣ, ರಾಸಾಯನಿಕಗಳು, ಏಜೆಂಟ್ಸ್, ಪ್ರಯೋಗಾಲಯ ಉಪಕರಣಗಳು, ಲಿನೆನ್ ಸಾಮಗ್ರಿಗಳನ್ನು ಪ್ರತಿ ಆಸ್ಪತ್ರೆಗಳ ಬೇಡಿಕೆ ಪಟ್ಟಿ ಆಧರಿಸಿ ಕೆಲವನ್ನು ಟೆಂಡರ್ ಮುಂಖಾಂತರ ಮತ್ತು ಸರ್ಕಾರ ನಿಗದಿಪಡಿಸಿರುವ ದರಗಳಲ್ಲಿ ಮತ್ತು ಸಾರ್ವಜನಿಕ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ.

ಮೇಲಿನ ಎಲ್ಲಾ ಆಸ್ಪತ್ರೆಗಳಿಗೆ 2010–11ನೇ ಸಾಲಿನಲ್ಲಿ ಅವಶ್ಯವಿರುವ ಔಷಧಿಗಳ (Fluids) ಸರಬರಾಜಿಗಾಗಿ ಎಲ್ಲಾ 06 ರೆಫರಲ್ ಆಸ್ಪತ್ರೆಗಳ ಅಧೀಕ್ಷಕರುಗಳು ಬೇಡಿಕೆ ಪಟ್ಟಿ ಸಲ್ಲಿಸಿದ್ದು, ಬೇಡಿಕೆ ಪಟ್ಟಿಯನ್ನು ಕಡತದಲ್ಲಿ ಪುಟ–Flag 'A' ಯಲ್ಲಿ ಲಗತ್ತಿಸಿದೆ. ಸದರಿ ಬೇಡಿಕೆ ಪಟ್ಟಿಯನ್ವಯ ಔಷಧಿ ಮತ್ತು ಇತರ ಸಾಮಗ್ರಿಗಳ ವಿವರ ಈ ಕೆಳಕಂಡಂತಿರುತ್ತದೆ.

| SL. NO. | NAME OF MEDICINE | QTY. |
|---|---|---|
| 01 | Inj. Dextrose 5% 500ml (PP/FFS) | 41221 |
| 02 | Inj. Dextrose 5% with Normal Saline 0.9% 500ml (PP/FFS) | 49955 |
| 03 | Inj. Dextrose 10% 500ml (PP/FFS) | 11701 |
| 04 | Inj. I.V. Plasma Volume Substitute 3.5% w/v 500ml (G.B./P.P.) | 2377 |
| 05 | I.V. Metronidazole 500mg/100ml (PP/FFS) | 20986 |
| 06 | I.V. Normal Saline 0.9% 500ml (PP/FFS) | 28512 |
| 07 | I.V. Ringers lactate 500ml (P.P./FFS) | 61351 |
| 08 | I.V. Tinidazole with 5% Dextrose 200ml/400ml | 12556 |
| 09 | Inj. Ciprofloxacillin 200mg/100ml (PP/FFS) | 23630 |

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲಿನ ಔಷಧಿಗಳು ಪಾಲಿಕೆ ಆಸ್ಪತ್ರೆಗಳಲ್ಲಿ ಸಂಪೂರ್ಣವಾಗಿ ಮುಕ್ತಾಯವಾಗಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಇವುಗಳ ಖರೀದಿ ಜರೂರು ಅವಶ್ಯವಿರುವುದರಿಂದ ಅಲ್ಪಾವಧಿ e-procurment ಮುಖಾಂತರ ಖರೀದಿಸಬಹುದಾಗಿರುತ್ತದೆ. ಟೆಂಡರ್‌ನ ಪೂರ್ಣ ಪ್ರಕ್ರಿಯೆಯನ್ನು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ತಾಂತ್ರಿಕ ಸಮಿತಿ ಮುಖಾಂತರ ಕೈಗೊಳ್ಳಲಾಗುತ್ತದೆ.

| | | | |
|---|---|---|---|
| 1. | ಅಪರ ಆಯುಕ್ತರು (ಆರೋಗ್ಯ) | – | ಅಧ್ಯಕ್ಷರು |
| 2. | ಮುಖ್ಯ ಆರೋಗ್ಯಾಧಿಕಾರಿ | – | ಸದಸ್ಯರು |
| 3. | ಆರೋಗ್ಯಾಧಿಕಾರಿ ತಾಮಕುಕ (ಪೂರ್ವ) | – | ಸದಸ್ಯರು |
| 4. | ಆರೋಗ್ಯಾಧಿಕಾರಿ ತಾಮಕುಕ (ಪಶ್ಚಿಮ) | – | ಸದಸ್ಯರು |
| 5. | ಯೋಜನಾ ಸಮನ್ವಯಾಧಿಕಾರಿ (ಆರ್.ಸಿ.ಎಚ್.) | – | ಸದಸ್ಯರು |
| 6. | ಮುಖ್ಯ ಲೆಕ್ಕಾಧಿಕಾರಿ | – | ಸದಸ್ಯರು |

ಮೇಲ್ಕಂಡ ಔಷಧಿಗಳಿಗೆ ಅಂದಾಜು ರೂ.45,00,000/– ಮೊತ್ತ ಖರ್ಚಾಗಲಿದ್ದು, ಈ ಖರ್ಚನ್ನು ಲೆಕ್ಕಶೀರ್ಷಿಕೆ 14. ಆರೋಗ್ಯ–ವೈದ್ಯಕೀಯ ಸಾಮಾನ್ಯ ವೆಚ್ಚಗಳು, ಔಷಧಗಳ ಖರೀದಿಗಾಗಿ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ, e-procurement ಅಲ್ಪಾವಧಿ ಟೆಂಡರ್ ಮುಖಾಂತರ ಖರೀದಿಸಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿ ಮಂಡಿಸಿದೆ.

<u>ನಿರ್ಣಯ:</u> <u>ಆಯುಕ್ತರ ದಿನಾಂಕ: 15–12–2010 ರ ಟಿಪ್ಪಣಿಯನ್ನು ಒಪ್ಪಿದೆ.</u>

## 6) ವಿಷಯದ ಸಂಖ್ಯೆ: ಸಾಆಸ್ಥಾಸ/07/10–11:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ವ್ಯಾಪ್ತಿಯಲ್ಲಿ 06 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳು, 29 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರ, 17 ಔಷಧಾಲಯಗಳಿದ್ದು, ರೆಫರಲ್ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆಗಳಿಂದ ವಾರ್ಷಿಕವಾಗಿ 25,000 ಹೆರಿಗೆಗಳು, 12,000 ಸಂತಾನಹರಣ ಶಸ್ತ್ರ ಚಿಕಿತ್ಸೆಗಳು 25,000 ಹೊರ ರೋಗಿಗಳ ಚಿಕಿತ್ಸೆಗಳಲ್ಲದೆ, ಎಲ್ಲಾ ಆಸ್ಪತ್ರೆಗಳಿಂದ ವಾರ್ಷಿಕವಾಗಿ 25,000 ನಾಯಿಕಡಿತದ ರೇಬೀಸ್ ಪ್ರಕರಣಗಳಿಗೆ ಚಿಕಿತ್ಸೆ, ಔಷದೋಪಚಾರಗಳನ್ನು ಸರ್ಕಾರ ನಿಗದಿಪಡಿಸಿರುವ User Fee ಮೊತ್ತ ಪಡೆದು ಸೌಲಭ್ಯ ಒದಗಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಅವಶ್ಯವಿರುವ ಔಷಧಿ, ಉಪಕರಣ, ರಾಸಾಯನಿಕಗಳು, ರೀಏಜೆಂಟ್ಸ್, ಪ್ರಯೋಗಾಲಯ ಉಪಕರಣಗಳು, ಲಿನೆನ್ ಸಾಮಗ್ರಿಗಳನ್ನು ಪ್ರತಿ ಆಸ್ಪತ್ರೆಗಳ ಬೇಡಿಕೆ ಪಟ್ಟಿ ಆಧರಿಸಿ ಕೆಲವನ್ನು ಟೆಂಡರ್ ಮುಂಖಾಂತರ ಮತ್ತು ಸರ್ಕಾರ ನಿಗದಿಪಡಿಸಿರುವ ದರಗಳಲ್ಲಿ ಮತ್ತು ಸಾರ್ವಜನಿಕ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ.

ಮೇಲಿನ ಎಲ್ಲಾ ಆಸ್ಪತ್ರೆಗಳಿಗೆ 2010–11ನೇ ಸಾಲಿನಲ್ಲಿ ಅವಶ್ಯವಿರುವ ಔಷಧಿಗಳ (ಗುಳಿಗೆಗಳು) ಸರಬರಾಜಿಗಾಗಿ ಎಲ್ಲಾ 06 ರೆಫರಲ್ ಆಸ್ಪತ್ರೆಗಳ ಅಧೀಕ್ಷಕರುಗಳು ಬೇಡಿಕೆ ಪಟ್ಟಿ ಸಲ್ಲಿಸಿದ್ದು, ಬೇಡಿಕೆ ಪಟ್ಟಿಯನ್ನು ಕಡತದಲ್ಲಿ ಪುಟ–Flag 'A' ಯಲ್ಲಿ ಲಗತ್ತಿಸಿದೆ. ಸದರಿ ಬೇಡಿಕೆ ಪಟ್ಟಿಯನ್ವಯ ಔಷಧಿ ಮತ್ತು ಇತರ ಸಾಮಗ್ರಿಗಳ ವಿವರ ಈ ಕೆಳಕಂಡಂತಿರುತ್ತದೆ.

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

| Ten Sl. No. | Name of the drugs with Composition | Qty. Requirement |
|---|---|---|
| 01 | Tab Amoxycillin 125mg | 236181 |
| 02 | Tab. Antacid | 344774 |
| 03 | Tab. Aspirin 75mg | 78315 |
| 04 | Tab. Albendazole 400mg | 227992 |
| 05 | Tab. Atenolol 50mg | 18722 |
| 06 | Tab. Amoldepaine 5mg with Atenolol 50mg | 180972 |
| 07 | Tab. Alpha Methyl dopa 250mg | 58235 |
| 08 | Tab. Ibuprofen 400mg | 621438 |
| 09 | Tab. Vitamin B. Complex | 778612 |
| 10 | Tab. Bisacodyl 5mg | 59146 |
| 11 | Tab. Bromhexine 4mg | 102710 |
| 12 | Tab. Calcium 500mg with Vit D3 | 1490350 |
| 13 | Certrizine 10mg | 317038 |
| 14 | Tab. Ceflxime 200mg with orinidazole | 112070 |
| 15 | Tab. Theophylline 77mg with ethophylline 23mg | 133475 |
| 16 | Tab. Dicyclomine 10mg | 235321 |
| 17 | Tab. Diclofenac 50mg | 719744 |
| 18 | Tab. Diazepam 2mg | 19130 |
| 19 | Tab. Diazepam 5mg | 32930 |
| 20 | Tab. Diclofenac Suppository Adult 100mg | 49108 |
| 21 | Tab. Enalparil 5mg | 44940 |
| 22 | Tab. (IFA) Ferrous sulphate (big)-100mg elemental iron Foric Acid | 6984960 |
| 23 | Tab. Flucanazole 150mg | 56784 |
| 24 | Tab. Ferrous Sulphate (Small) 20mg elemental (IFA) iron | 761712 |
| 25 | Tab. Frusemide 20mg | 27475 |
| 26 | Tab. Gausses | 36447 |
| 27 | Tab. Gliclazide 80mg | 57600 |
| 28 | Tab. Glybenclamide 5mg | 133580 |
| 29 | Hysocine Butyl Bromide Suppository | 19073 |
| 30 | Tab. Halogen | 439317 |
| 31 | Tab. Isoxsuprime 10mg | 12780 |
| 32 | Tab. Isosorbid Dinitrate 5mg/10mg | 12895 |
| 33 | Tab. Metachlorpromide 10mg | 83695 |
| 34 | Tab. Misoprostol 200mcg | 14416 |
| 35 | Tab. Mebendazole 100mg | 203792 |
| 36 | Tab. Multivitamin | 453722 |
| 37 | Tab. Metformin 500mg | 207332 |
| 38 | Tab. Paracetamil 500mg | 1109770 |
| 39 | Tab. Ranitidine 150mg | 308094 |
| 40 | Tab. Salburamol 4mg | 130374 |
| 41 | Tab. Vitamin C 500mg | 154804 |
| 42 | Tab. Methylrgometrine 200mg | 150200 |

B. S. H

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಮೇಲಿನ ಔಷಧಿಗಳು ಪಾಲಿಕೆ ಆಸ್ಪತ್ರೆಗಳಲ್ಲಿ ಸಂಪೂರ್ಣವಾಗಿ ಮುಕ್ತಾಯವಾಗಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಇವುಗಳ ಖರೀದಿ ಜರೂರು ಅವಶ್ಯವಿರುವುದರಿಂದ ಅಲ್ಪಾವಧಿ e-procurement ಮುಖಾಂತರ ಖರೀದಿಸಬಹುದಾಗಿರುತ್ತದೆ.

ಟೆಂಡರ್‌ನ ಪೂರ್ಣ ಪ್ರಕ್ರಿಯೆಯನ್ನು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ತಾಂತ್ರಿಕ ಸಮಿತಿ ಮುಖಾಂತರ ಕೈಗೊಳ್ಳಲಾಗುತ್ತದೆ.

| | | | |
|---|---|---|---|
| 1) | ಅಪರ ಆಯುಕ್ತರು (ಆರೋಗ್ಯ) | – | ಅಧ್ಯಕ್ಷರು |
| 2) | ಮುಖ್ಯ ಆರೋಗ್ಯಾಧಿಕಾರಿ | – | ಸದಸ್ಯರು |
| 3) | ಆರೋಗ್ಯಾಧಿಕಾರಿ ತಾಮಕುಕ (ಪೂರ್ವ) | – | ಸದಸ್ಯರು |
| 4) | ಆರೋಗ್ಯಾಧಿಕಾರಿ ತಾಮಕುಕ (ಪಶ್ಚಿಮ) | – | ಸದಸ್ಯರು |
| 5) | ಯೋಜನಾ ಸಮನ್ವಯಾಧಿಕಾರಿ (ಆರ್.ಸಿ.ಎಚ್.) | – | ಸದಸ್ಯರು |
| 6) | ಮುಖ್ಯ ಲೆಕ್ಕಾಧಿಕಾರಿ | – | ಸದಸ್ಯರು |

ಮೇಲ್ಕಂಡ ಔಷಧಿಗಳಿಗೆ ಅಂದಾಜು ರೂ.45,00,000/- ಮೊತ್ತ ಖರ್ಚಾಗಲಿದ್ದು, ಈ ಖರ್ಚನ್ನು ಲೆಕ್ಕಶೀರ್ಷಿಕೆ 14. ಆರೋಗ್ಯ-ವೈದ್ಯಕೀಯ ಸಾಮಾನ್ಯ ವೆಚ್ಚಗಳು, ಔಷಧಗಳ ಖರೀದಿಗಾಗಿ ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ, e-procurement ಅಲ್ಪಾವಧಿ ಟೆಂಡರ್ ಮುಖಾಂತರ ಖರೀದಿಸಲು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿ ಮಂಡಿಸಿದೆ.

**ನಿರ್ಣಯ:** **ಆಯುಕ್ತರ ದಿನಾಂಕ: 15-12-2010 ರ ಟಿಪ್ಪಣಿಯನ್ನು ಒಪ್ಪಿದೆ.**

## 7) ವಿಷಯದ ಸಂಖ್ಯೆ: ಸಾಆಸ್ಥಾಸ/08/10-11:

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿ ಮಾರ್ಚ್ 2007 ರಲ್ಲಿ ಮೂರು ವರ್ಷಗಳ ಅವಧಿಗೆ ಕಸ ಸಂಗ್ರಹಿಸಿ ಸಾಗಣೆ ಮಾಡುವ ಸೇವಾ ಗುತ್ತಿಗೆಯನ್ನು 30 ಪ್ಯಾಕೇಜುಗಳಲ್ಲಿ ವಿವಿಧ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಈ ಅವಧಿಯು ದಿನಾಂಕ: 15-03-2010 ಕ್ಕೆ ಮುಕ್ತಾಯಗೊಂಡಿರುತ್ತದೆ.

ಪ್ರಸ್ತಾಪಿತ ವಿಷಯದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂಗಡವಾಗಿ ದಿನಾಂಕ: 30-09-2009 ರಂದು ದಿನಾಂಕ: 16-03-2010 ರಿಂದ ಹೊಸ ಗುತ್ತಿಗೆ ಕೆಲಸ ಪ್ರಾರಂಭಿಸುವ ಸಲುವಾಗಿ ಬೃಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 08 ಪ್ಯಾಕೇಜ್‌ಗಳಂತೆ ಎರಡು ಜಾಗತಿಕ ಟೆಂಡರ್‌ಗಳನ್ನು ಕರೆಯಲಾಗಿತ್ತು.

ಹಲವರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ.30417/09 ರಂತೆ ದಾವೆ ಹೂಡಿದ್ದರ ಮೇರೆಗೆ ನ್ಯಾಯಾಲಯವು ದಿನಾಂಕ: 20-10-2009 ರಂದು ಸದರಿ ಟೆಂಡರ್‌ಗಳಿಗೆ ತಡೆಯಾಜ್ಞೆ ಆದೇಶ ನೀಡಿತ್ತು.

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಜಾಗತಿಕ ಟೆಂಡರ್‌ಗಳಿಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದುದರಿಂದ ಹಾಗೂ ಹಾಲಿ 30 ಸೇವಾ ಪ್ಯಾಕೇಜ್‌ಗಳ ಗುತ್ತಿಗೆ ಅವಧಿ ದಿನಾಂಕ: 15-03-2010 ರಂದು ಮುಗಿಯಲಿರುವುದನ್ನು ಮನಗಂಡು ದಿನಾಂಕ: 06-03-2010 ರಂದು ಸರ್ಕಾರಕ್ಕೆ ಪತ್ರ ಬರೆದು ಹಾಲಿ ಸೇವಾಗುತ್ತಿಗೆಗಳನ್ನು 03 (ಮೂರು) ತಿಂಗಳ ಅವಧಿಗೆ ವಿಸ್ತರಿಸಲು ಕೋರಿದ ಮೇರೆಗೆ ಸರ್ಕಾರವು ಸಂಖ್ಯೆ:ನಅಇ 292 ಎಂಎನ್‌ವೈ 2006 ರಂತೆ ದಿನಾಂಕ: 09-04-2010 ರಂದು ಘನತ್ಯಾಜ್ಯ ವಸ್ತುಗಳ ವಿಲೇವಾರಿ ಸಂಬಂಧ ಈಗಿರುವ ಗುತ್ತಿಗೆದಾರರನ್ನೇ ಮತ್ತೆ ಮೂರು ತಿಂಗಳ ಅವಧಿಗೆ ಅಥವಾ ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:30417/2009 ಇತ್ಯರ್ಥವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಸರ್ಕಾರವು ತನ್ನ ಅನುಮೋದನೆಯನ್ನು ನೀಡಿತ್ತು.

ಸದರಿ ಪ್ರಸ್ತಾವನೆಗೆ ದಿನಾಂಕ: 06-03-2010 ರಲ್ಲಿ ವಿಷಯ ಸಂಖ್ಯೆ: 646/2009-10 ರಲ್ಲಿ ಮಾನ್ಯ ಆಡಳಿತಗಾರರಿಂದ ಅನುಮೋದನೆ ಪಡೆಯಲಾಗಿತ್ತು.

ಹಾಲಿ ಗುತ್ತಿಗೆದಾರರುಗಳಿಂದ ಸ್ವಚ್ಛತಾ ಸೇವೆಯನ್ನು ದಿನಾಂಕ: 20-03-2010 ರಿಂದ ಮುಂದಿನ 03 (ಮೂರು) ತಿಂಗಳ ಅವಧಿಗೆ ಅಥವಾ ಬದಲಿ ವ್ಯವಸ್ಥೆ / ಟೆಂಡರ್ ಪ್ರಕ್ರಿಯೆ ಆಗುವವರೆಗೆ ಮುಂದುವರಿಸಲು ಸೂಚಿಸಲಾಗಿತ್ತು.

ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆದ ನಂತರ ಹೊಸದಾಗಿ ಆಯ್ಕೆಯಾದ ಹಲವಾರು ಸದಸ್ಯರು ಹಾಲಿ ಕಸ ವಿಲೇವಾರಿ ಬಗ್ಗೆ ಕೆಲವೊಂದು ಬದಲಾವಣೆಗಳನ್ನು ಸೂಚಿಸಿದ್ದು, ಕಸ ವಿಲೇವಾರಿ ಸುಸೂತ್ರವಾಗಿ ನಡೆಯಬೇಕಾದರೆ ಕೂಡಲೇ ಟೆಂಡರ್ ಕರೆಯಲು ಇಂಗಿತ ವ್ಯಕ್ತಪಡಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ದಿನಾಂಕ: 16-06-2010 ರಂದು ಸದರಿ ಜಾಗತಿಕ ಟೆಂಡರ್‌ಗಳ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಉಚ್ಛ ನ್ಯಾಯಾಲಯಕ್ಕೆ ಮೆಮೊ ಸಲ್ಲಿಸಿದ ಮೇರೆಗೆ, ಘನ ಉಚ್ಛ ನ್ಯಾಯಾಲಯವು ದಿನಾಂಕ: 17-06-2010 ರಂದು ರಿಟ್ ಸಂಖ್ಯೆ: 30417/2009 ಅನ್ನು ವಿಲೇವಾರಿ ಮಾಡಿರುತ್ತದೆ.

ಹಾಲಿ 30 ಸೇವಾ ಪ್ಯಾಕೇಜ್‌ಗಳ ಗುತ್ತಿಗೆ ವಿಸ್ತರಣಾ ಅವಧಿಯು ದಿನಾಂಕ: 19-06-2010 ರಂದು ಮುಗಿಯಲಿರುವುದನ್ನು ಮನಗಂಡು ದಿನಾಂಕ: 20-06-2010 ರಿಂದ ಮತ್ತೆ ಮುಂದುವರೆಸುವ ಅಗತ್ಯವಿದ್ದುದರಿಂದ, ಪಾಲಿಕೆಯ ಸಭೆಯ ಅನುಮೋದನೆ ನಿರೀಕ್ಷಿಸಿ ಮತ್ತೆ 02 (ಎರಡು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹಾಲಿ ಗುತ್ತಿಗೆದಾರರ ಸೇವಾಗುತ್ತಿಗೆಗಳನ್ನು ಮುಂದುವರೆಸಲು ದಿನಾಂಕ: 17-06-2010 ರಂದು ಆದೇಶಿಸಲಾಗಿತ್ತು.

ದಿನಾಂಕ: 18-06-2010 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಹೊಸದಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಟೆಂಡರ್ ಕರೆಯಬೇಕಾಗಿರುವ ಹಾಗೂ ಟೆಂಡರ್ ರೂಪುರೇಷೆಗಳ ಬಗ್ಗೆ ಚರ್ಚಿಸಿ, ಅಂತಿಮವಾಗಿ ಟೆಂಡರ್ ಕರೆಯಲು ತೀರ್ಮಾನಿಸಿ ಅಗತ್ಯವಾದ ಟೆಂಡರ್ ದಾಖಲೆಗಳನ್ನು ಸಿದ್ದಪಡಿಸಿ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲು ಸೂಚಿಸಲಾಗಿತ್ತು.

ಸದರಿ 30 ಸೇವಾ ಪ್ಯಾಕೇಜ್ ಗುತ್ತಿಗೆಗಳನ್ನು ಮುಂದುವರೆಸಲು ದಿನಾಂಕ: 14-09-2010 ರಂದು ಆಯುಕ್ತರು ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಲು ದಿನಾಂಕ: 29-09-2010 ರ ಆಯುಕ್ತರ ಟಿಪ್ಪಣಿಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸಲಾಗಿ, ದಿನಾಂಕ: 29-10-2010 ರಂದು ನಡೆದ ಪಾಲಿಕೆಯ ಸಭೆಯಲ್ಲಿ ವಿಷಯ ಸಂಖ್ಯೆ: 6 (130)/2010-11 ರಲ್ಲಿ ಮತ್ತೆ 03 (ಮೂರು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಸದರಿ 30 ಸೇವಾ ಪ್ಯಾಕೇಜ್ ಗುತ್ತಿಗೆಗಳನ್ನು ಮುಂದುವರೆಸಲು ಅನುಮೋದನೆ ಪಡೆಯಲಾಗಿತ್ತು.

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ದಿನಾಂಕ: 16–09–2010 ರಂದು ಆಯುಕ್ತರು ಆದೇಶಿಸಿರುವಂತೆ ಸದರಿ ಸ್ವಚ್ಛತಾಸೇವೆಯನ್ನು ದಿನಾಂಕ: 29–10–2010 ರಿಂದ ಮುಂದಿನ 03 (ಮೂರು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಸೂಚಿಸಲಾದ ಅವಧಿ ದಿನಾಂಕ: 19–12–2010 ರಂದು ಮುಗಿಯಲಿರುವುದನ್ನು ಮನಗಂಡು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ ಟೆಂಡರ್ ಕರೆಯಲು ಸಿದ್ದಪಡಿಸಲಾಗುತ್ತಿರುವ ಟೆಂಡರ್ ದಸ್ತಾವೇಜು ರೂಪುರೇಷೆಗಳ ಪ್ರಸ್ತಾವನೆಯನ್ನು ದಿನಾಂಕ: 06–07–2010 ರ ಸರ್ಕಾರದ ಆದೇಶದಂತೆ ಸರ್ಕಾರದ ಮಟ್ಟದ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸಿ ಒಪ್ಪಿಗೆ ಪಡೆದು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಸುಮಾರು 1 ರಿಂದ 2 ತಿಂಗಳ ಕಾಲಾವಕಾಶ ಅಗತ್ಯವಿರುವುದರಿಂದ, ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಮತ್ತೆ 02 (ಎರಡು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹಾಲಿ ಗುತ್ತಿಗೆದಾರರ ಸೇವಾಗುತ್ತಿಗೆಗಳನ್ನು ಮುಂದುವರೆಸಲು ದಿನಾಂಕ: 14–12–2010 ರಂದು ಆದೇಶಿಸಲಾಗಿತ್ತು.

ಈ ಹಿನ್ನಲೆಯಲ್ಲಿ ಕೆಳಕಂಡ ಅಂಶಕ್ಕೆ ಪಾಲಿಕೆಯ ಅನುಮೋದನೆ ಕೋರಿ ಮಂಡಿಸಿದೆ.

ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಮತ್ತೆ 02 (ಎರಡು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿನ ಸದರಿ 30 ಸೇವಾ ಪ್ಯಾಕೇಜ್ ಗುತ್ತಿಗೆಗಳನ್ನು ಮುಂದುವರೆಸಲು ದಿನಾಂಕ: 14–12–2010 ರಂದು ಆಯುಕ್ತರು ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಲು.

ನಿರ್ಣಯ: ಸಮಿತಿಯು ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿ ಆಯುಕ್ತರ ದಿನಾಂಕ: 23–12–2010 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಟಿಪ್ಪಣಿಯನ್ನು ಒಪ್ಪಲಾಗಿದೆ.

ಮಾರ್ಪಾಡುಗಳು:

ಸ್ವಚ್ಛತಾ ಕೆಲಸದ ಬಗ್ಗೆ ವಿಷಯ ಸಂಖ್ಯೆ.9 (45)/2010–11 ದಿನಾಂಕ: 29–06–2010 ರಂದು ನಡೆದ ಪಾಲಿಕೆ ಸಭೆಯಲ್ಲಿ "ಆಯುಕ್ತರವರ ದಿನಾಂಕ: 21–06–2010 ರ ಟಿಪ್ಪಣಿಯನ್ನು ಮಾರ್ಪಡಿಸುತ್ತಾ, ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಎಂಟು ವಲಯಗಳಲ್ಲಿ ಘನತ್ಯಾಜ್ಯ ವಿಲೇವಾರಿ ಕೆಲಸವನ್ನು ಗುತ್ತಿಗೆಗೆ ನೀಡಿದ್ದು, ಈ ಗುತ್ತಿಗೆ ಅವಧಿ ಮುಗಿದಿರುವ ಕೆಲಸಗಳನ್ನು 3 ತಿಂಗಳವರೆವಿಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹಾಲಿ ಗುತ್ತಿಗೆದಾರರ ಮನವಿಯಂತೆ, ಪೆಟ್ರೋಲ್ ಮತ್ತು ಡೀಸೆಲ್ ದರಗಳು ಹೆಚ್ಚಳವಾಗಿರುವುದರಿಂದ ಹಾಲಿ ನೀಡಲಾಗುತ್ತಿರುವ ದರಗಳಿಗೆ ಶೇ.5 ರಷ್ಟು ಹೆಚ್ಚಿಸಿ, ಗುತ್ತಿಗೆಯನ್ನು ಮುಂದುವರೆಸುವುದೆಂದು ಹಾಗೂ ವಿಷಯ ಸಂಖ್ಯೆ.6 (130)/2010–11 ದಿನಾಂಕ: 29–10–2010 ರಂದು ನಡೆದ ಪಾಲಿಕೆ ಸಭೆಯಲ್ಲಿ "ಆಯುಕ್ತರವರ ದಿನಾಂಕ: 29–09–2010 ರ ಟಿಪ್ಪಣಿಯನ್ನು ಒಪ್ಪುತ್ತಾ, ನಿರ್ವಹಣಾ ವೆಚ್ಚವು ಗಣನೀಯವಾಗಿ ಏರಿಕೆಯಾಗಿರುವುದರಿಂದ ಈಗಾಗಲೇ ದಿನಾಂಕ: 29–06–2010 ರಂದು ಪಾಲಿಕೆ ಸಭೆಯಲ್ಲಿ ನಿರ್ಣಯಿಸಿರುವಂತೆ ನಿಗದಿತ ದರಗಳಿಗೆ ಶೇಕಡ 5 ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ಪಾವತಿಸುವುದೆಂದು ತೀರ್ಮಾನಿಸಿರುವಂತೆ ಹಾಗೂ ಉಪ ಆಯುಕ್ತರು (ಆರೋಗ್ಯ) ರವರ **DC (H)/PR/2/45/05-06** ದಿನಾಂಕ: **23-02-2006** ರಂತೆ ಹಾಗೂ ದಿನಾಂಕ: 28–01–2006 ರಂದು ನಡೆದ **Pre-bid** ನ ನಿರ್ಣಯದ **Responses to Bidder's Queries** ಕ್ರಮ ಸಂಖ್ಯೆ.32 ರಲ್ಲಿ ಟೆಂಡರ್ ಪ್ರಾರಂಭಿಸಿದ ಒಂದು ವರ್ಷದ ನಂತರ ಟೆಂಡರ್ ಮೊತ್ತಕ್ಕೆ ಶೇ.5 ರ ಹೆಚ್ಚುವರಿ ಮೊತ್ತವನ್ನು ಸೇರ್ಪಡಿಸಿ

B. S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಟೆಂಡರ್‌ದಾರರಿಗೆ ಪಾವತಿಸಲು ಕೈಗೊಂಡಿರುವ **Pre-bid** ನ ನಿರ್ಣಯದಂತೆ ಕ್ರಮ ವಹಿಸಲು ಹಾಗೂ ಟೆಂಡರ್‌ದಾರರಿಂದ ಸ್ವಚ್ಛತಾ ಕೆಲಸವನ್ನು ದಿನಾಂಕ: 31-03-2011 ರವರೆಗೆ ಅಥವಾ ಹೊಸದಾಗಿ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಮುಂದುವರೆಸಲು ಸಮಿತಿಯು ತೀರ್ಮಾನಿಸಲಾಯಿತು.

## 8) ವಿಷಯದ ಸಂಖ್ಯೆ: ಸಾಆಸ್ಥಾಸ/09/10-11:

ಬೆಂಗಳೂರಿನಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರನ್ನು ಒದಗಿಸುವ ಸಲುವಾಗಿ Water Health India Pvt. Ltd., ರವರು ಇಂತಹ ಸ್ಥಳಗಳನ್ನು ಗುರುತಿಸಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅತಿ ಕಡಿಮೆ ದರದಲ್ಲಿ ಅಂದರೆ 20 ಲೀಟರ್‌ಗೆ ರೂ.5/- ರ ದರದಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು "Community Water Systems in Urban Slums" ಎಂಬ ಯೋಜನೆಯ ಮೂಲಕ ಕಲುಷಿತ ನೀರನ್ನು ಸಂಸ್ಕರಿಸಿ ಶುದ್ಧ ನೀರನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸುವ ಉದ್ದೇಶ ಹೊಂದಿರುತ್ತಾರೆ. ಈಗಾಗಲೇ ಸದರಿರವರು ಈ ಘಟಕವನ್ನು ಆಂಧ್ರ ಪ್ರದೇಶದ 290 ಸ್ಥಳಗಳಲ್ಲಿ ಸ್ಥಾಪಿಸಿದ್ದು, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಸದರಿ ಯೋಜನೆಗೆ ಕನಿಷ್ಟ 10 ಸಾವಿರ ಮನೆಯುಳ್ಳ 10 ಕೊಳಚೆ ಪ್ರದೇಶಗಳನ್ನು ಗುರುತಿಸಿ, Water Health India Pvt. Ltd., ರವರು ಬಂಡವಾಳ ಹೂಡಿಕೆ ಮಾಡಿ ಸದರಿ ಯೋಜನೆಯನ್ನು BOOT (Build-Own-Operate-Transfer) ಆಧಾರದ ಮೇಲೆ ಅನುಷ್ಟಾನಗೊಳಿಸಿ, 15 ವರ್ಷಗಳ ಕಾಲ ಪಾಲಿಕೆಯಿಂದ ಯಾವುದೇ ನಿರ್ವಹಣೆ ಮೊತ್ತವಿಲ್ಲದೇ ಕೊಳಚೆ ಪ್ರದೇಶದ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಮೂಲಕ ನಿರ್ವಹಣೆಯ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಘಟಕವನ್ನು ನಿರ್ಮಿಸಲು ಪಾಲಿಕೆಯು ಕೊಳಚೆ ಪ್ರದೇಶದ ಮಧ್ಯಭಾಗದಲ್ಲಿ ಸುಮಾರು 30x40 ಅಡಿ ಜಾಗದಲ್ಲಿ ನಿರಂತರ ಮೂಲ ನೀರು ವ್ಯವಸ್ಥೆವುಳ್ಳ ಸ್ಥಳವನ್ನು ಮತ್ತು ಸದರಿ ಘಟಕಕ್ಕೆ ವಿದ್ಯುತ್ ಅನ್ನು ಒದಗಿಸಬೇಕಾಗಿರುತ್ತದೆ. ಸದರಿ ಯೋಜನೆಯು ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಪಯುಕ್ತವಾಗಿರುವುದರಿಂದ, ಸದರಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:** ಆಯುಕ್ತರ ದಿನಾಂಕ: 21-12-2010 ರ ಟಿಪ್ಪಣೆಯನ್ನು ಒಪ್ಪಿದೆ.

## 9) ವಿಷಯದ ಸಂಖ್ಯೆ: ಸಾಆಸ್ಥಾಸ/10/10-11:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆ ವಲಯಗಳ ಒಟ್ಟು 30 ಟೆಂಡರ್ ಪ್ಯಾಕೇಜ್‌ನ್ನು 2007, ಮಾರ್ಚ್ 15 ರಿಂದ 3 ವರ್ಷದ ಅವಧಿಗೆ ಗುತ್ತಿಗೆ ನೀಡಿದ್ದು, ಸದರಿ ಟೆಂಡರ್ ಗುತ್ತಿಗೆಯು ಮಾರ್ಚ್ 14, 2010 ರಂದು ಅಂತ್ಯಗೊಂಡಿದ್ದು, ಬದಲೀ ವ್ಯವಸ್ಥೆಗಾಗಿ ಜಾಗತಿಕ ಟೆಂಡರ್ ಕರೆದಿದ್ದು, ಇದಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು WP No.30417/2009 ರಲ್ಲಿ ತಡೆಯಾಜ್ಞೆ ನೀಡಿದ್ದರಿಂದ, ಸದರಿ ಗುತ್ತಿಗೆಯನ್ನು 03 ತಿಂಗಳ ಅವಧಿಗೆ ಮುಂದುವರೆಸಲಾಗಿತ್ತು, ಸದರಿ ಗುತ್ತಿಗೆ ಅವಧಿ 19-06-2010 ಕ್ಕೆ ಮುಗಿಯಲಿರುವುದನ್ನು ಮನಗಂಡು ಹಾಗೂ ಸದರಿ

B. S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ರಿಟ್ ಅರ್ಜಿಯ ವಿಲೇವಾರಿ ವಿಳಂಬಗೊಂಡಿದ್ದರಿಂದ, ಸದರಿ ಜಾಗತಿಕ ಟೆಂಡರ್ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆದು ಹೊಸದಾಗಿ ಟೆಂಡರ್ ಕರೆಯುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ ಮೇರೆಗೆ ದಿನಾಂಕ: 17-06-2010 ರಂದು ಘನ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇವಾರಿ ಮಾಡಿದೆ. ಈ ನಿಟ್ಟಿನಲ್ಲಿ ಸದರಿ ಗುತ್ತಿಗೆಯ ಅವಧಿಯನ್ನು ದಿನಾಂಕ: 20-06-2010 ರಿಂದ 03 ತಿಂಗಳ ಅವಧಿಗೆ ಮುಂದುವರೆಸಲು ಪಾಲಿಕೆ ಸಭೆಯ ಅನುಮೋದನೆ ಪಡೆಯಲಾಗಿದೆ. ಮತ್ತು ಪಾಲಿಕೆಯ ಸಭೆಯ ಅನುಮೋದನೆ ನಿರೀಕ್ಷಿಸಿ ದಿನಾಂಕ: 20-09-2010 ರಿಂದ 03 ತಿಂಗಳ ಅವಧಿಯವರೆಗೂ ಮುಂದುವರೆಸಲಾಗಿದೆ.

ಈ ಸಂದರ್ಭದಲ್ಲಿ ಹೊಸ ವಲಯಗಳಲ್ಲೂ ಕೂಡ ಹಾಲಿ ನಿರ್ವಹಿಸುತ್ತಿದ್ದ ಸ್ವಚ್ಚತಾ ಟೆಂಡರ್ ಅವಧಿಯು ಮುಗಿದಿರುವುದರಿಂದ **ಹೊಸದಾಗಿ ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಯಿತು.** ಹಾಗೂ ಪ್ರತಿ ವಲಯದಲ್ಲಿ ಅವಶ್ಯಕತೆಯಿರುವ ಪ್ರಮುಖ ರಸ್ತೆಗಳಿಗೆ ಮೆಕಾನಿಕಲ್ ಸ್ವೀಪಿಂಗ್ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ವಲಯವಾರು ಟೆಂಡರ್ ಕರೆಯಲು ನಿರ್ಧರಿಸಲಾಯಿತು.

ಸದರಿ ಮೂಲಭೂತ ಸೌಕರ್ಯಗಳನ್ನು ಅತ್ಯಗತ್ಯವಾಗಿ ತೆಗೆದುಕೊಳ್ಳಬೇಕಾಗಿದ್ದು, ಈ ನಿಟ್ಟಿನಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಟೆಂಡರ್ ದಸ್ತಾವೇಜನ್ನು ತಯಾರಿಸಲು ತಾಂತ್ರಿಕ ಸಮಿತಿಯನ್ನು ರಚಿಸಲಾಯಿತು.

ದಿನಾಂಕ: 15-09-2010 ರಂದು ಸದರಿ ತಾಂತ್ರಿಕ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ ಈ ಕೆಳಕಂಡ ಪ್ರಮುಖ ಅಂಶಗಳನ್ನು ಒಳಗೊಂಡ ಟೆಂಡರ್ ದಸ್ತಾವೇಜನ್ನು ತಯಾರಿಸಲಾಗಿದೆ.

- ಮನೆ ಮನೆಯಿಂದ ಉತ್ಪತ್ತಿಯಾಗುವ ಹಸಿ ಮತ್ತು ಒಣ ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕವಾಗಿ ಸಂಗ್ರಹಿಸಿ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ರಸ್ತೆ ಗುಡಿಸುವುದು, ಪಾದಚಾರಿ ರಸ್ತೆ ಸ್ವಚ್ಚತೆ, ಚರಂಡಿ ಸ್ವಚ್ಚತೆ ಹಾಗೂ ಕಟ್ಟಡ ಅವಶೇಷಗಳನ್ನು ಉತ್ಪತ್ತಿಯಾದ ಸ್ಥಳದಿಂದ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ದೊಡ್ಡ ಪ್ರಮಾಣದ ಉತ್ಪಾದಕರಿಂದ ಘನತ್ಯಾಜ್ಯವನ್ನು ಸಂಗ್ರಹಿಸಿ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ಇದಲ್ಲದೇ ಇನ್ನಿತರ ರೂಪುರೇಷೆಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಿಕೊಳ್ಳಲಾಗಿದೆ.

198 ವಾರ್ಡುಗಳಿಗೆ ಸ್ವಚ್ಚತಾ ಟೆಂಡರ್ ಮತ್ತು ವಲಯವಾರು ಮೆಕಾನಿಕಲ್ ಸ್ವೀಪಿಂಗ್ ಕಾರ್ಯಗಳಿಗೆ 2010-11ನೇ ಸಾಲಿನ ಆಯವ್ಯಯದಲ್ಲಿ ಸ್ವಚ್ಚತೆ ಮತ್ತು ಕಸ ಸಾಗಾಣಿಕೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನವಿರುತ್ತದೆ.

ಸದರಿ ಪ್ರಕ್ರಿಯೆಗಳಿಗೆ ಟೆಂಡರ್ ಕರೆಯಲು ಪಾಲಿಕೆ ಸಭೆಯ ವಿಷಯ ಸಂಖ್ಯೆ.4 (147)/10-11, ದಿನಾಂಕ: 27-11-2010 ರಲ್ಲಿ ಸರ್ಕಾರದ ಅನುಮೋದನೆ ನಿರೀಕಿಸಿ ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಟೆಂಡರ್ ಕರೆಯಲು ಪಾಲಿಕೆಯ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು.

1. ಮೆಕ್ಯಾನಿಕಲ್ ಸ್ವೀಪಿಂಗ್‌ಗಳನ್ನು ಹೊರತುಪಡಿಸುವುದು.

2. ಸಹಾಯಕ ಕಾರ್ಯಪಾಲಕ ಅಭಿಯಂತರರ ಉಪ ವಿಭಾಗದ ಮಟ್ಟದಲ್ಲಿ ಪ್ಯಾಕೇಜುಗಳನ್ನು ರಚಿಸುವುದು.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

3. ಉಪ ವಿಭಾಗದ ಮಟ್ಟದ ಪ್ಯಾಕೇಜುಗಳಲ್ಲಿ ಪ್ರತಿಯೊಂದು ವಾರ್ಡಿಗೂ ಪ್ರತ್ಯೇಕ ಸಂಖ್ಯೆಯ ಕಾರ್ಮಿಕರು, ಸಲಕರಣೆಗಳು ಮತ್ತು ವಾಹನಗಳನ್ನು ನಮೂದಿಸಿ ನಿರ್ವಹಿಸುವುದು.

4. ಪ್ರತಿಯೊಬ್ಬ ಬಿಡ್ಡುದಾರರು ಒಂದು ಉಪ ವಿಭಾಗದ ಪ್ಯಾಕೇಜ್‌ನಲ್ಲಿ ಮಾತ್ರ ಕೆಲಸ ನಿರ್ವಹಿಸುವುದು.

5. ಒಂದು ವಿಧಾನ ಸಭಾ ಕ್ಷೇತ್ರದಲ್ಲಿ 09 ವಾರ್ಡ್‌ಗಳು ಇರುವ ಕಡೆ ಮಾತ್ರ ಪ್ರತ್ಯೇಕವಾಗಿ 03 ವಾರ್ಡ್‌ಗಳಿಗೆ ಒಂದು ಪ್ಯಾಕೇಜಿನಂತೆ ಕಾರ್ಯನಿರ್ವಹಿಸುವುದು.

ಆದರೆ ದಿನಾಂಕ: 11–12–2010 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಟೆಂಡರ್ ದಸ್ತಾವೇಜಿನಲ್ಲಿ ಈ ಕೆಳಕಂಡಂತೆ ಮಾರ್ಪಾಡುಗಳ ಬಗ್ಗೆ ಕೆಲವು ಸಲಹೆ ಮೂಡಿಬಂದವು.

1. ಗುತ್ತಿಗೆ ಅವಧಿಯನ್ನು 03 ವರ್ಷದ ಬದಲು 02 ವರ್ಷದ ಅವಧಿಗೆ ನಿಗಧಿಪಡಿಸುವುದು ಹಾಗೂ ಉಪವಿಭಾಗದಲ್ಲಿ 02 ರಿಂದ 03 ವಾರ್ಡ್‌ಗಳಿಗೆ ಒಂದು ಪ್ಯಾಕೇಜಿನಂತೆ ನಿಗಧಿಪಡಿಸುವುದು.

2. ಗುತ್ತಿಗೆದಾರನು ಕಂಪನಿ ನಿಯಮ ಪ್ರಕಾರ ನೊಂದಾಯಿತರಾಗಿರಬೇಕು.

3. ಹೊಸದಾಗಿ ಕಂಪನಿ ನಿಯಮ ಪ್ರಕಾರ ನೊಂದಾಯಿತರಾದ ಗುತ್ತಿಗೆದಾರನಿಗೆ ಆರ್ಥಿಕ ಸಾಮರ್ಥ್ಯದಲ್ಲಿ ವಿನಾಯಿತಿ ನೀಡುವುದು.

4. ಟೆಂಡರ್ ದಸ್ತಾವೇಜಿನಲ್ಲಿ ದಂಡ ಜುಲ್ಮಾನೆಗಳ ನಿಬಂಧನೆಯಲ್ಲಿ ಕನಿಷ್ಠ 10% ರಿಂದ 25% ವರೆಗೂ ವಿಧಿಸುವುದು.

5. ಗುತ್ತಿಗೆದಾರನು ಪಾಲಿಕೆಯ ವಿರುದ್ಧ ನ್ಯಾಯಾಲಯಕ್ಕೆ ಹೋಗುವ ಸಂದರ್ಭದಲ್ಲಿ ಠೇವಣಿ ಮೊತ್ತವನ್ನು ಪಾಲಿಕೆಗೆ ಜಮಾ ಮಾಡುವುದು.

6. ಪಾಲಿಕೆ ಸದಸ್ಯರಿಂದ ಅನುಸರಣಾ ಪ್ರಮಾಣ ಪತ್ರ ಪಡೆಯುವ ನಿಬಂಧನೆಯನ್ನು ತೆಗೆದುಹಾಕುವುದು.

ಮೇಲೆ ತಿಳಿಸಿದ ಅಂಶಗಳನ್ನು ಟೆಂಡರ್‌ನಲ್ಲಿ ಮಾರ್ಪಾಡು ಮಾಡಲು ಹಾಗೂ ಈ ಬಗ್ಗೆ ಅಭಿಪ್ರಾಯವನ್ನು ನೀಡಲು ಮೆ:ಐಡೆಕ್ ಸಂಸ್ಥೆರವರನ್ನು ಕೋರಿದ್ದು, ಅದರಂತೆ ಮೆ:ಐಡೆಕ್ ಸಂಸ್ಥೆರವರು ಟೆಂಡರ್ ದಸ್ತಾವೇಜಿನಲ್ಲಿ ಮಾರ್ಪಾಡು ಮಾಡಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

1. ಟೆಂಡರ್ ದಸ್ತಾವೇಜಿನಲ್ಲಿ ಗುತ್ತಿಗೆ ಅವಧಿಯನ್ನು 03 ವರ್ಷದ ಬದಲು 02 ವರ್ಷದ ಅವಧಿಗೆ ಮಾರ್ಪಾಡು ಮಾಡಲಾಗಿರುತ್ತದೆ.

B. S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

2. ಗುತ್ತಿಗೆದಾರನು ಕಂಪನಿ ನಿಯಮ ಪ್ರಕಾರ ನೊಂದಾಯಿತರಾಗಿರಬೇಕು ಹಾಗೂ ಈ ನಿಬಂಧನೆಯಂತೆ ಏಕವ್ಯಕ್ತಿ, ಸಹಭಾಗಿತ್ವ ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಟೆಂಡರ್‌ನಲ್ಲಿ ಭಾಗವಹಿಸಲು ಸಾಧ್ಯವಿರುವುದಿಲ್ಲ.

3. ಕಂಪನಿ ನಿಯಮ ಪ್ರಕಾರ ನೊಂದಾಯಿತ ಗುತ್ತಿಗೆದಾರನಿಗೆ ತಾಂತ್ರಿಕ ಮತ್ತು ಹಣಕಾಸಿನ ಸಾಮರ್ಥ್ಯದಲ್ಲಿ ಯಾವುದೇ ವಿನಾಯಿತಿ ನೀಡಲು ಬರುವುದಿಲ್ಲ.

4. ಟೆಂಡರ್ ದಸ್ತಾವೇಜಿನಲ್ಲಿ ದಂಡ ಜುಲ್ಮಾನೆಗಳ ನಿಬಂಧನೆಯನ್ನು ಮಾರ್ಪಾಡು ಮಾಡಿದ್ದು ಮತ್ತು ಪಾಲಿಕೆ ಸದಸ್ಯರಿಂದ ಅನುಸರಣಾ ಪ್ರಮಾಣ ಪತ್ರ ಪಡೆಯುವ ನಿಬಂಧನೆಯನ್ನು ತೆಗೆದುಹಾಕಲಾಗಿರುತ್ತದೆ.

ಸದರಿ ವಿಷಯದ ಬಗ್ಗೆ ದಿನಾಂಕ: 21-12-2010 ರಂದು ಉಪ ಮಹಾಪೌರರ ಅಧ್ಯಕ್ಷತೆಯಲ್ಲಿ ನಡೆದ PMU ಸಭೆಯಲ್ಲಿ ಆಡಳಿತ ಪಕ್ಷದ ನಾಯಕರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರೊಂದಿಗೆ ಚರ್ಚಿಸಿದಂತೆ ಟೆಂಡರ್‌ನಲ್ಲಿ ಭಾಗವಹಿಸಲು ಕಂಪನಿ ನಿಯಮ ಪ್ರಕಾರ ನೊಂದಾಯಿತ ಗುತ್ತಿಗೆದಾರರೊಂದಿಗೆ ಸಹಭಾಗಿತ್ವ (Consortium) ಸಂಸ್ಥೆಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲು ನಿರ್ಧರಿಸಲಾಯಿತು ಹಾಗೂ ಈ ನಿಟ್ಟಿನಲ್ಲಿ ಮಾರ್ಪಾಡು ಮಾಡಿದ ಟೆಂಡರ್ ದಸ್ತಾವೇಜಿಗೆ ಪಾಲಿಕೆ ಸಭೆಯು ಅನುಮೋದನೆ ನಿರೀಕ್ಷಿಸಿ ಅಲ್ಪಾವಧಿ ಟೆಂಡರ್ ಕರೆಯಲು ಸೂಚಿಸಲಾಯಿತು.

1. ಈ ಹಿನ್ನಲೆಯಲ್ಲಿ ಸದರಿ ಮಾರ್ಪಾಡುಗಳನ್ನು ಅಳವಡಿಸಿಕೊಂಡು ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಅಲ್ಪಾವಧಿ ಟೆಂಡರ್ ಕರೆಯಲು ವಲಯಗಳಿಗೆ ಸೂಚಿಸಲು ಹಾಗೂ

2. ಪಾಲಿಕೆಯ ಸಭೆಯ ಅನುಮೋದನೆ ನೀಡಿದ ನಂತರ, ಟೆಂಡರ್ ದಸ್ತಾವೇಜನ್ನು ಸರ್ಕಾರದ ಮಟ್ಟದಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯ ಪರಿಶೀಲನೆಗೆ ಕಳುಹಿಸಲು ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:** **ಆಯುಕ್ತರ ದಿನಾಂಕ: 27-12-2010 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿದೆ.**

**ಮಾರ್ಪಾಡುಗಳು:**

(1) **ಬೆಂಗಳೂರು ನಗರವು ಐ.ಟಿ.ಬಿ.ಟಿ. ನಗರವಾಗಿರುವ ಹಿನ್ನಲೆಯಲ್ಲಿ ನಗರದ ಮುಖ್ಯ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ಮುಖ್ಯ ರಸ್ತೆಗಳಲ್ಲಿ ಪೌರ ಕಾರ್ಮಿಕರಿಂದ ಕಸ ಗುಡಿಸುವ ಕೆಲಸವು ನಿರ್ವಹಿಸಲು ಕಷ್ಟವಾಗುವುದರಿಂದ ಹಾಗೂ ನೌಕರರ ಪ್ರಾಣಾಪಾಯದ ದೃಷ್ಟಿಯಿಂದ ವಾಣಿಜ್ಯ ಪ್ರದೇಶಗಳನ್ನು ಒಳಗೊಂಡಂತೇ ಮೆಕ್ಯಾನಿಕಲ್ ಸ್ವೀಪಿಂಗ್ ವಾಹನದಿಂದ ಮುಖ್ಯ ರಸ್ತೆಯ ಸ್ವಚ್ಛತೆಯನ್ನು**

B.S. [signature]
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**<u>ನಿರ್ವಹಿಸುವ ಸಂಬಂಧ ವಲಯದ ರಸ್ತೆಯ ಉದ್ದಗಲವನ್ನು ಪರಿಗಣಿಸಿ ಅವಶ್ಯಕತೆಗೆ ತಕ್ಕಂತೆ 08 ವಲಯಗಳಿಗೆ ಮೆಕ್ಯಾನಿಕಲ್ ಸ್ವೀಪರ್ ಯಂತ್ರ ಅಳವಡಿಸಿಕೊಂದು ಪ್ರತ್ಯೇಕವಾದ ಟೆಂಡರ್ ಕರೆಯಲು ತೀರ್ಮಾನಿಸಲಾಯಿತು</u>.**

B.S.

**(ಬಿ.ಎಸ್. ಮಂಜುನಾಥ ರೆಡ್ಡಿ)**
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ 23-11-2010 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ : | | |
| ಶ್ರೀ.ಬಿ.ಎಸ್. ಮಂಜುನಾಥ ರೆಡ್ಡಿ, | ಅಧ್ಯಕ್ಷರು | ಮುಖ್ಯ ಅಭಿಯಂತರರು (ಘನತ್ಯಾಜ್ಯ ವಸ್ತು ವಿಲೇವಾರಿ) |
| ಡಾ.ಶಿವಪ್ರಸಾದ್, ಎಂ.ಎಸ್, | ಸದಸ್ಯರು | ಅಧೀಕ್ಷಕ ಅಭಿಯಂತರರು (ಪಶ್ಚಿಮ) |
| ಶ್ರೀ.ಜಯಪ್ಪರೆಡ್ಡಿ ಸಿ.ಆರ್, | ಸದಸ್ಯರು | ಕಾರ್ಯಪಾಲಕ ಅಭಿಯಂತರರು |
| ಶ್ರೀ.ರವೀಂದ್ರನ್ ಕೆ, | ಸದಸ್ಯರು | ಪರಿಸರ ಅಭಿಯಂತರರು |
| ಶ್ರೀಮತಿ.ನಂದಿನಿ ಶ್ರೀನಿವಾಸ್, | ಸದಸ್ಯರು | |
| ಶ್ರೀ.ಸಿ.ಎಸ್. ರಾಧಕೃಷ್ಣ, | ಸದಸ್ಯರು | |
| ಶ್ರೀ.ಎಸ್. ನಟರಾಜ್, | ಸದಸ್ಯರು | |
| ಶ್ರೀಮತಿ.ಇರ್ಷಾದ್ ಬೇಗಂ, | ಸದಸ್ಯರು | |
| ಶ್ರೀಮತಿ.ಪಿ. ಸೌಮ್ಯ, | ಸದಸ್ಯರು | |
| ಗೈರು ಹಾಜರಾದ ಸದಸ್ಯರುಗಳು | | |
| ಶ್ರೀ.ತಿಮ್ಮನಂಜಯ್ಯ ಕೆ. ಎಲ್, | ಸದಸ್ಯರು | |
| ಶ್ರೀ.ಹೆಚ್.ಎನ್. ಗಂಗಾಧರ, | ಸದಸ್ಯರು | |

### 01]. ವಿಷಯದ ಸಂಖ್ಯೆ :-ತೆಆಸ್ಥಾಸ/01/2010-11

ಆಯುಕ್ತರವರ ಟಿಪ್ಪಣಿ ದಿನಾಂಕ: 25-09-2010. ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆ ವಲಯಗಳ ಒಟ್ಟು 30 ಟೆಂಡರ್ ಪ್ಯಾಕೇಜ್‌ನ್ನು 2007, ಮಾರ್ಚ್ 15 ರಿಂದ 3 ವರ್ಷದ ಅವಧಿಗೆ ಗುತ್ತಿಗೆ ನೀಡಿದ್ದು, ಸದರಿ ಟೆಂಡರ್ ಗುತ್ತಿಗೆಯು ಮಾರ್ಚ್ 14, 2010 ರಂದು ಅಂತ್ಯಗೊಂಡಿದ್ದು, ಬದಲೀ ವ್ಯವಸ್ಥೆಗಾಗಿ ಜಾಗತಿಕ ಟೆಂಡರ್ ಕರೆದಿದ್ದು, ಇದಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು ಘಕ/30417/2009 ರಲ್ಲಿ ತಡೆಯಾಜ್ಞೆ ನೀಡಿದ್ದರಿಂದ, ಸದರಿ ಗುತ್ತಿಗೆಯನ್ನು 3 ತಿಂಗಳ ಅವಧಿಗೆ ಮುಂದುವರೆಸಲಾಗಿತ್ತು, ಸದರಿ ಗುತ್ತಿಗೆ ಅವಧಿ 19-06-2010ಕ್ಕೆ ಮುಗಿಯಲಿರುವುದನ್ನು ಮನಗಂಡು ಹಾಗೂ ಸದರಿ ರಿಟ್ ಅರ್ಜಿಯು ವಿಲೇವಾರಿ ವಿಳಂಬಗೊಂಡಿದ್ದರಿಂದ, ಸದರಿ ಜಾಗತಿಕ ಟೆಂಡರ್ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆದು ಹೊಸದಾಗಿ ಟೆಂಡರ್ ಕರೆಯುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ ಮೇರೆಗೆ ದಿನಾಂಕ 17-06-2010 ರಂದು ಘನನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇವಾರಿ ಮಾಡಿದೆ. ಈ ನಿಟ್ಟಿನಲ್ಲಿ ಸದರಿ ಗುತ್ತಿಗೆಯ ಅವಧಿಯನ್ನು 20-06-2010 ರಿಂದ 3 ತಿಂಗಳ ಅವಧಿಗೆ ಮುಂದುವರೆಸಲು ಪಾಲಿಕೆ ಸಭೆಯ ಅನುಮೋದನೆ ಪಡೆಯಲಾಗಿದೆ. ಮತ್ತು ಪಾಲಿಕೆಯ ಸಭೆಯ ಅನುಮೋದನೆ ನಿರೀಕ್ಷಿಸಿ ದಿನಾಂಕ: 20-09-2010 ರಿಂದ 3 ತಿಂಗಳ ಅವಧಿಯವರೆಗೂ ಮುಂದುವರೆಸಲಾಗಿದೆ.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಈ ಸಂದರ್ಭದಲ್ಲಿ ಹೊಸ ವಲಯಗಳಲ್ಲೂ ಕೂಡ ಹಾಲಿ ನಿರ್ವಹಿಸುತ್ತಿದ್ದ ಸ್ವಚ್ಚತಾ ಟೆಂಡರ್ ಅವಧಿಯು ಮುಗಿದಿರುವುದರಿಂದ **ಹೊಸದಾಗಿ ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಯಿತು**. ಹಾಗೂ ಪ್ರತಿ ವಲಯದಲ್ಲಿ ಅವಶ್ಯಕತೆ ಇರುವ ಪ್ರಮುಖ ರಸ್ತೆಗಳಿಗೆ ಮೆಕಾನಿಕಲ್ ಸ್ವೀಪಿಂಗ್ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ವಲಯವಾರು ಟೆಂಡರ್ ಕರೆಯಲು ನಿರ್ಧರಿಸಲಾಯಿತು.

ಸದರಿ ಮೂಲಭೂತಸೌಕರ್ಯಗಳನ್ನು ಅತ್ಯಗತ್ಯವಾಗಿ ತೆಗೆದುಕೊಳ್ಳಬೇಕಾಗಿದ್ದು, ಈ ನಿಟ್ಟಿನಲ್ಲಿ ದಿನಾಂಕ: 05–08–2010 ರಂದು ವಾರ್ಡುವಾರು ಟೆಂಡರಿನ ಬಗ್ಗೆ ಪ್ರಾತ್ಯಕ್ಷತೆಯನ್ನು ಪೂಜ್ಯ ಮಹಾಪೌರರು, ಹಲವು ಶಾಸಕರು ಮತ್ತು ಪಾಲಿಕೆಯ ಕೆಲವೊಂದು ಸದಸ್ಯರೊಂದಿಗೆ ಚರ್ಚಿಸಿ, ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಟೆಂಡರ್ ದಸ್ತಾವೇಜನ್ನು ತಯಾರಿಸಲು ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ರಚಿಸಲಾಯಿತು.

1. ಪ್ರಧಾನ ಅಭಿಯಂತರರು – ಉಪ ಅಧ್ಯಕ್ಷರು
2. ಜಂಟಿ ಆಯುಕ್ತರು (ಮಹದೇವಪುರ)– ಸದಸ್ಯರು
3. ಜಂಟಿ ಆಯುಕ್ತರು (ಬೊಮ್ಮನಹಳ್ಳಿ)– ಸದಸ್ಯರು
4. ಮುಖ್ಯ ಅಭಿಯಂತರರು (ಘ.ತ್ಯಾ.ವ.ನಿ) – ಸದಸ್ಯರು
5. ಮುಖ್ಯ ಅಭಿಯಂತರರು (ದಕ್ಷಿಣ) – ಸದಸ್ಯರು
6. ಅಧೀಕ್ಷಕ ಅಭಿಯಂತರರು (ಪಶ್ಚಿಮ)– ಸದಸ್ಯರು
7. ಸಹಾಯಕ ಕಾನೂನು ಅಧಿಕಾರಿ – ಸದಸ್ಯರು
8. ಕಾರ್ಯಪಾಲಕ ಅಭಿಯಂತರರು–1 (ಘ.ತ್ಯಾ.ನಿ) – ಸದಸ್ಯರು
9. ಕಾರ್ಯಪಾಲಕ ಅಭಿಯಂತರರು–2 (ಘ.ತ್ಯಾ.ನಿ) – ಸಂಚಾಲಕರು
10. ಶ್ರೀ.ಸಿ.ಬಸವಯ್ಯ, ಪರಿಸರ ಕೋಶದ ಸಲಹೆಗಾರರು – ಸದಸ್ಯರು
11. ಡಾ.ಹೆಚ್.ಎನ್.ಚಾಣುಕ್ಯ, ಹಿರಿಯ ವಿಜ್ಞಾನಿ (ಐ.ಐ.ಎಸ್.ಸಿ)– ಸದಸ್ಯರು

ದಿನಾಂಕ:15–09–2010 ರಂದು ಸದರಿ ತಾಂತ್ರಿಕ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ ಈ ಕೆಳಕಂಡ ಪ್ರಮುಖ ಅಂಶಗಳನ್ನು ಒಳಗೊಂಡ ಟೆಂಡರ್ ದಸ್ತಾವೇಜನ್ನು ತಯಾರಿಸಲಾಗಿದೆ.

- ಮನೆ ಮನೆಯಿಂದ ಉತ್ಪತ್ತಿಯಾಗುವ ಹಸಿ ಮತ್ತು ಒಣ ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕವಾಗಿ ಸಂಗ್ರಹಿಸಿ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ರಸ್ತೆ ಗುಡಿಸುವುದು, ಪಾದಚಾರಿ ರಸ್ತೆ ಸ್ವಚ್ಚತೆ, ಚರಂಡಿ ಸ್ವಚ್ಚತೆ ಹಗೂ ಕಟ್ಟಡ ಅವಶೇಷಗಳನ್ನು ಉತ್ಪತ್ತಿಯಾದ ಸ್ಥಳದಿಂದ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ದೊಡ್ಡ ಪ್ರಮಾಣದ ಉತ್ಪಾದಕರಿಂದ ಘನತ್ಯಾಜ್ಯವನ್ನು ಸಂಗ್ರಹಿಸಿ ನಿಗಧಿತ ಸ್ಥಳಕೆ ಸಾಗಿಸುವುದು.
- ಇದಲ್ಲದೇ ಇನ್ನಿತರ ರೂಪುರೇಷುಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಿಕೊಳ್ಳಲಾಗಿದೆ.

198 ವಾರ್ಡುಗಳಿಗೆ ಸ್ವಚ್ಚತಾ ಟೆಂಡರ್ ಮತ್ತು ವಲಯವಾರು ಮೆಕಾನಿಕಲ್ ಸ್ವೀಪಿಂಗ್ ಕಾರ್ಯಗಳಿಗೆ 2010–11ನೇ ಸಾಲಿನ ಆಯವ್ಯಯದಲ್ಲಿ ಸ್ವಚ್ಚತೆ ಮತ್ತು ಕಸ ಸಾಗಾಣಿಕೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನವಿರುತ್ತದೆ.

B.S. [signature]

ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಇದೇ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ/575/ಎಂಎಸ್‌ವೈ/2010, ದಿ:06-08-2010 ರಂತೆ, ರಾಜ್ಯದ ನಗರ ಪ್ರದೇಶಗಳಲ್ಲಿ ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಮಗ್ರವಾದ ಪರಿಹಾರ ನೀಡಲು ಅಧಿಕಾರಯುಕ್ತ ಸಮಿತಿಯನ್ನು ನಗರಾಭಿವೃದ್ಧೀ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಈ ನಿಟ್ಟಿನಲ್ಲಿ ಟೆಂಡರ್‌ಗೆ ಪಾಲಿಕೆ ಸಭೆಯು ಅನುಮೋದನೆ ನೀಡಿದ ನಂತರ, ಟೆಂಡರ್ ದಸ್ತಾವೇಜನ್ನು ಸದರಿ ಅಧಿಕಾರಯುಕ್ತ ಸಮಿತಿಯ ಪರಿಶೀಲನೆಗೆ ಕಳುಹಿಸುವ ಅವಶ್ಯಕತೆ ಇರುತ್ತದೆ.

ಸದರಿ ಪ್ರಕ್ರಿಯೆಗಳಿಗೆ ಟೆಂಡರ್ ಕರೆಯುವ ಬಗ್ಗೆ ಅನುಮೋದನೆಗಾಗಿ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಕೋರಲಾಗಿದೆ.

**ನಿರ್ಣಯ:-** **ಆಯುಕ್ತರ ದಿನಾಂಕ: 25-09-2010ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಒಪ್ಪಿದೆ.**

**ಮಾರ್ಪಾಡುಗಳು:-**

01. ಮೈಕ್ಯಾನಿಕಲ್ ಸ್ವೀಪಿಂಗನ್ನು ಹೊರತುಪಡಿಸುವುದು.
02. ಸಹಾಯಕ ಕಾರ್ಯಪಾಲಕ ಅಭಿಯಂತರರ ಉಪ ವಿಭಾಗದ ಮಟ್ಟದಲ್ಲಿ ಪ್ಯಾಕೇಜ್‌ಗಳನ್ನು ರಚಿಸುವುದು.
03. ಉಪ ವಿಭಾಗ ಮಟ್ಟದ ಪ್ಯಾಕೇಜ್‌ಗಳಲ್ಲಿ ಪ್ರತಿಯೊಂದು ವಾರ್ಡಿಗೂ ಪ್ರತ್ಯೇಕ ಸಂಖ್ಯೆಯ ಕಾರ್ಮಿಕರು, ಸಲಕರಣೆಗಳು ಮತ್ತು ವಾಹನಗಳನ್ನು ನಮೂಧಿಸಿ ನಿರ್ವಹಿಸುವುದು.
04. ಪ್ರತಿಯೊಬ್ಬ ಬಿಡ್‌ದಾರರು ಒಂದು ಉಪ ವಿಭಾಗದ ಪ್ಯಾಕೇಜನಲ್ಲಿ ಮಾತ್ರ ಕೆಲಸ ನಿರ್ವಹಿಸುವುದು.
05. ಒಂದು ವಿಧಾನ ಸಭಾ ಕ್ಷೇತ್ರದಲ್ಲಿ 9 ವಾರ್ಡುಗಳು ಇರುವ ಕಡೆ ಮಾತ್ರ ಪ್ರತ್ಯೇಕವಾಗಿ 3 ವಾರ್ಡುಗಳಿಗೆ ಒಂದು ಪ್ಯಾಕೇಜ್‌ನಂತೆ ಕಾರ್ಯ ನಿರ್ವಹಿಸುವುದು.

B. S. M

**(ಬಿ.ಎಸ್. ಮಂಜುನಾಥ ರೆಡ್ಡಿ)**
ಅಧ್ಯಕ್ಷರು
ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ